ನಮ್ಮ ಸಮಾಜವಾದಿಗಳು

ಕರ್ನಾಟಕದ ಸಮಾಜವಾದಿಗಳ ಪರಿಚಯ

ಸಂಪಾದಕರು: ಡಿ.ಎಸ್. ನಾಗಭೂಷಣ



ನಮ್ಮ ಸಮಾಜವಾದಿಗಳು

ಕರ್ನಾಟಕದ ಸಮಾಜವಾದಿಗಳ ಪರಿಚಯ

ಸಂಪಾದಕರು

ಡಿ.ಎಸ್. ನಾಗಭೂಷಣ

ಸಮತ ಪ್ರಕಾಶನ

ಚಾಮರಾಜನಗರ

NAMMA SAMJAVADIGALU

(A Compilation of profiles of some Karnataka socialists)

Edited by: D.S. Nagabhushana,

HIG-5 “Nudi” Kallalli Extntion, vinovanagara,

Shivamogga - 577204,

Ph: 08182-248574,

Mob: 9449242284,

Published by: Samatha Prakashana

No 20, 443, Siddartha Lay-out,

Chamarajanagar - 571313

Ph: 9060418845

First Impression 2015

Pages:205

Price: 150

Cover Page and Book Design: Mohan Kumar

Paper Used: 70 gsm Maplitho

Printed at Vishvas Prints, Bangalore

ನಮ್ಮ ಸಮಾಜವಾದಿಗಳು

(ಕರ್ನಾಟಕದ ಸಮಾಜವಾದಿಗಳ ಪರಿಚಯ)

ಸಂಪಾದಕರು: ಡಿ.ಎಸ್. ನಾಗಭೂಷಣ

ಹೆಚ್‌ಐಜಿ-೫, ನುಡಿ, ಕಲ್ಲಹಳ್ಳಿ ಬಡಾವಣೆ, ವಿನೋಬನಗರ, ಶಿವಮೊಗ್ಗ.

ಸಂಚಾರಿ ದೂ: ೯೪೪೯೨೪೨೨೮೪

ಪುಟ:೨೦೫

ಬೆಲೆ: ೧೫೦

ಮುದ್ರಣ: ವಿಶ್ವಾಸ್ ಪ್ರಿಂಟ್ಸ್, ಬೆಂಗಳೂರು-೫೬೦೦೧೮

ಪ್ರಕಾಶನ: ಸಮತ ಪ್ರಕಾಶನ,

ನಂ ೨೦, ೪೪೩, ಸಿದ್ದಾರ್ಥ ಬಡಾವಣೆ, ಚಾಮರಾಜನಗರ-೫೭೧೩೧೩

ಸಂಚಾರಿ ದೂ: ೯೦೬೦೪೧೮೮೪೫.


ಅರ್ಪಣೆ:

ಕಾಗೋಡು ಭೂ ಹೋರಾಟದ ರೂವಾರಿ



ದಿ. ಹೆಚ್. ಗಣಪತಿಯಪ್ಪನವರ

ಪ್ರೀತಿಪೂರ್ವಕ ನೆನಪಿಗೆ



ವ್ಯಕ್ತಿವಾದದ ವೈಭವದೊಂದಿಗೆ ಆರಂಭವಾದ ಪ್ರಸಕ್ತ ನಾಗರೀಕತೆ ತನ್ನ ಪೂರ್ಣ ಸುತ್ತನ್ನು ಪೂರ್ಣಗೊಳಿಸಿ, ಈ ಅವಧಿಯಲ್ಲಿ ಮನುಷ್ಯನನ್ನು ಸಮೂಹ ಯಂತ್ರ ವ್ಯವಸ್ಥೆಯ ಒಂದು ಬಿಡಿ ಭಾಗವಷ್ಟೇ ಎಂಬಂತೆ ಮಾಡಿಬಿಟ್ಟಿದೆ. ಇದಕ್ಕೆ ಕಾರಣ ಈ ಆಧುನಿಕ ನಾಗರೀಕತೆ ಎಷ್ಟುದು ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ಸಾಧನೆಯ ಭರದಲ್ಲಿ ಆಧ್ಯಾತ್ಮಿಕ ಸಮಾನತೆಯ ಸಾಧನೆ ಕಡೆ ಗಮನ ಹರಿಸುವುದನ್ನೇ ಮರೆತಿದ್ದಿರಬಹುದು. ಈ ಹಿಂದಿನ ನಾಗರೀಕತೆಗೆ ಸಾಮಾಜಿಕ ಅಸಮಾನತೆ ಮತ್ತು ಆಧ್ಯಾತ್ಮಿಕ ಸಮಾನತೆಗಳ ನಡುವಣ ಅಂತರದ ಭಾರದಿಂದ ಕುಸಿದಿದ್ದರೆ, ಆಧುನಿಕ ನಾಗರಿಕತೆ ಸಾಮಾಜಿಕ ಸಮಾನತೆ ಹಾಗೂ ಆಧ್ಯಾತ್ಮಿಕ ಸಮಾನತೆಗಳ ನಡುವಣ ಅಂತರದ ಭಾರದಿಂದ ಕುಸಿಯುತ್ತಿದೆ. ಏಕೆಂದರೆ, ಆಧುನಿಕ ಮನುಷ್ಯ ಕ್ರಾಂತಿಕಾರಿ ತಂತ್ರಜ್ಞಾನದ ಅಗಾಧ ಬೆಳವಣಿಗೆ ಮೂಲಕ ಎಂತಹ ಮನಸ್ಥಿತಿಯನ್ನು ಮುಟ್ಟಿದ್ದಾನೆಂದರೆ, ಆತ ತನ್ನ ಸಹಜೀವಿಗಳೊಂದಿಗೆ ನೇರ ಹಾಗೂ ಆಪ್ತ ಬಂಧುತ್ವವನ್ನೇ ಸಂವೇದಿಸಲಾರದವನಾಗಿದ್ದಾನೆ.

–ಡಾ.ರಾಮಮನೋಹರ ಲೋಹಿಯ

ಸಂಪಾದಕರ ಮಾತು

ಇದು 'ಹೊಸ ಮನುಷ್ಯ' ಪತ್ರಿಕೆಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ 'ನಮ್ಮ ಸಮಾಜವಾದಿಗಳು' ಅಂಕಣದಡಿಯಲ್ಲಿ ಪ್ರಕಟವಾಗುತ್ತಾ ಬಂದಿರುವ ಬರಹಗಳ ಆಯ್ದ ಸಂಕಲನ. ಈ ಅಂಕಣವನ್ನು ಪತ್ರಿಕೆಯ ಸಂಪಾದಕನಾಗಿ ಆರಂಭಿಸಿದಾಗ ನನ್ನ ಮನಸ್ಸಿನಲ್ಲಿ ಇದ್ದುದು ಇದು: ಇಂದು ಸಮಾಜವಾದ ಕಳೆ ಕಳೆದುಕೊಂಡಿರುವ ಒಂದು ಶಬ್ದವಾಗಿದ್ದರೆ, ಸಮಾಜವಾದಿಗಳು ಎಂಬುದು ಶೀಲ ಕಳೆದುಕೊಂಡ ಒಂದು ಶಬ್ದವಾಗಿದೆ. ಇದಕ್ಕೆ ಕಾರಣ, ಸಮಾಜವಾದ ಎಂಬುದು ಕಾಂಗ್ರೆಸ್ ಟೋಪಿಯಂತೆ ಹಾಕಿಕೊಂಡವರ ತಲೆಯ ಆಕಾರ ಪಡೆಯುವಂತೆ ಅದನ್ನು ನುಡಿದವರ ಆಚಾರ-ವಿಚಾರಗಳೆಂಬಂತೆ ಆಗಿಹೋಗಿ ಅದು ತನ್ನ ಅರ್ಥವನ್ನೇ ಸ್ಥೂಲಗೊಳಿಸಿಕೊಂಡಿತು. ಹಾಗಾಗಿ ಸಮಾಜವಾದ ಎಂಬ ಶಬ್ದ ನುಡಿದವರೆಲ್ಲ ಸಮಾಜವಾದಿಗಳೆಂದು ಗುರುತಿಸಲ್ಪಟ್ಟು, ಅವರೆಲ್ಲರ ರಾಜಕೀಯ ಅನಾಚಾರಗಳ ಹೊರೆಯನ್ನೂ ಸಮಾಜವಾದ ಮತ್ತು ಸಮಾಜವಾದಿ ಎಂಬ ಶಬ್ದಗಳು ಹೊರಬೇಕಾಯಿತು. ಆದರೆ ಸಮಾಜವಾದಕ್ಕೆ ಒಂದು ನಿರ್ದಿಷ್ಟ ರಾಜಕೀಯ ಆಕಾರವಿದೆ ಮತ್ತು ಆ ಆಕಾರದ ಆಕರ್ಷಣೆಗೆ ಸಿಕ್ಕಿ ತಮ್ಮ ರಾಜಕೀಯ ಬದುಕನ್ನು ಕಟ್ಟಿಕೊಂಡು ಸಮಾಜವಾದಿ ಎಂಬ ಅಭಿದಾನಕ್ಕೆ ಅರ್ಹರಾದ ಒಂದು ಪಡೆಯೇ ನಮ್ಮ ಇತಿಹಾಸದಲ್ಲಿ ಇದೆ. ಅವರನ್ನು ಗುರುತಿಸಿ ಪರಿಚಯ ಮಾಡಿಕೊಡುವ ಮೂಲಕ ಸಮಾಜವಾದದ ಬಗ್ಗೆ ಹೊಸ ತಲೆಮಾರಿನವರಲ್ಲಿ ಹೊಸ ಹುರುಪು, ಉತ್ಸಾಹ ಮತ್ತು ಆಸಕ್ತಿಗಳನ್ನು ಬೆಳೆಸುವ ಉದ್ದೇಶ ಈ ಅಂಕಣದ ಹಿಂದೆ ಇದ್ದಿತು.

ಮೊದಲ ಹಂತದಲ್ಲಿ ಇಲ್ಲಿ ಕರ್ನಾಟಕದ ಅಂತಹ ಸಮಾಜವಾದಿಗಳನ್ನು ಗುರುತಿಸಿ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ. ಆದರೆ ಅಂತಹ ಎಲ್ಲ ಸಮಾಜವಾದಿಗಳ ಪರಿಚಯ ಇಲ್ಲಿ ಆಗಿದೆ ಎಂದು ನಾನು ಹೇಳಲಾರೆ. ಕಾರಣ, ಸಮಾಜವಾದಿಗಳು, ವಿಶೇಷವಾಗಿ ಕರ್ನಾಟಕದ ಸಮಾಜವಾದಿಗಳು ಒಂದು ಪಕ್ಷವಾಗಿ, ಒಂದು ಸಂಘಟನೆಯಾಗಿ ತಮ್ಮ ಇತಿಹಾಸದ ದಾಖಲೆಗಳನ್ನು ಸಂರಕ್ಷಿಸಿಕೊಂಡು ಬಂದವರಲ್ಲ. ನಲವತ್ತರ ದಶಕದಲ್ಲಿ ಸಂಘಟನೆಯಾಗತೊಡಗಿ, ಅರವತ್ತು ಮತ್ತು ಎಪ್ಪತ್ತರ ದಶಕದಲ್ಲಿ ಸ್ವಲ್ಪ ಮಟ್ಟಿಗಿನ ತಮ್ಮ ರಾಜಕೀಯ ಉತ್ತುಂಗತೆಯನ್ನು ಕಂಡುಕೊಂಡ ಸಮಾಜವಾದಿಗಳ ಪೈಕಿ ಇಂದು ಅಳಿದುಳಿದಿರುವ ಸಮಾಜವಾದಿಗಳು ತಮ್ಮ ಇತಿಹಾಸದ ದಾಖಲೆಗಳ ಸಂರಕ್ಷಣೆಯನ್ನಿರಲಿ, ತಮ್ಮ ವೈಯುಕ್ತಿಕ ನೆನಪನ್ನೂ ವ್ಯವಸ್ಥಿತವಾಗಿ ಸಂರಕ್ಷಿಸಿಕೊಂಡು ಬರಲಾಗಿಲ್ಲ. ಇದಕ್ಕೆ ಅಧಿಕೃತ ಸಮಾಜವಾದಿ ಪಕ್ಷ ಆರಂಭದಿಂದಲೂ ಎದುರಿಸುತ್ತಾ ಬಂದ ಒಳಜಗಳ, ವಿಭಜನೆ, ಪುನರೈಕ್ಯತೆಗಳ ಸರಮಾಲೆಯೂ ಒಂದು ಕಾರಣವಾಗಿದ್ದರೆ, 1977ರಲ್ಲಿ ಅದು ಜನತಾ ಪಕ್ಷದಲ್ಲಿ ಲೀನವಾಗಿ ಎದುರಿಸಿದ ವಿಸರ್ಜನೆಯ ಪ್ರಕ್ರಿಯೆ ಇನ್ನೊಂದು ಕಾರಣ. ಅದಕ್ಕಿಂತ ದೊಡ್ಡ ಕಾರಣ-ವಿಶೇಷವಾಗಿ ಲೋಹಿಯಾವಾದಿ ಸಮಾಜವಾದಿಗಳಲ್ಲಿ-ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣದ ಯಜಮಾನಿಕೆಯ ಸ್ಥಾನದಲ್ಲಿದ್ದ ಕಾಂಗ್ರೆಸ್ಸಿನ ನೆಹರೂ ಪ್ರಣೀತ ಮತ್ತು ಆನಂತರದ ಇಂದಿರಾ ಪ್ರಣೀತ ಸಮಾಜವಾದದ ದೃಗ್ಗೋಚರ (ಕಾಂಗ್ರೆಸ್ ಟೊಪ್ಪಿಗೆಯ ತರಹದ)ಸ್ಥೂಲತೆಯ ಎದುರಿಗೆ ಇವರ ಕನಸಿನ ಸಮಾಜವಾದ ಒಂದು ವಿಶ್ವಾಸಾರ್ಹ ರಾಜಕೀಯ ಸಾಕಾರತೆಯನ್ನು

ಗಳಿಸಿಕೊಳ್ಳದೇ ಹೋದದ್ದು. ಈ ಕಾರಣದಿಂದಾಗಿಯೇ, ಕಾಂಗ್ರೆಸ್ಸಿನ ಪ್ರಧಾನ ಧಾರೆಯ ಸಮಾಜವಾದದ ಟೊಳ್ಳುತನ ಬಯಲಾಗಿ ಅದು ಜನರ ಮನಸ್ಸಿನಿಂದ ಕೊಚ್ಚಿ ಹೋದದ್ದರ ಜೊತೆಯಲ್ಲೇ ಈ ಕನಸಿನ ಸಮಾಜವಾದವೂ ಕೊಚ್ಚಿಕೊಂಡು ಹೋಯಿತು. ಅಷ್ಟರ ಮಟ್ಟಿಗೆ ಇದು ಅಧಿಕೃತ ಸಮಾಜವಾದಿಗಳ ವೈಫಲ್ಯ. ಈ ವೈಫಲ್ಯವನ್ನು-ಅದು ವೈಫಲ್ಯವೋ ಅಲ್ಲವೋ ಎಂಬ ಅನುಮಾನ ಹುಟ್ಟಿಸುವಷ್ಟು-ಸ್ವತಃ ಇಂತಹ ಕನಸಿನ ಸಮಾಜವಾದಿಯಾಗಿದ್ದ ಪಿ.ಲಂಕೇಶ್-ನಿರ್ದಿಷ್ಟವಾಗಿ ಇಂತಹ ಸಮಾಜವಾದಿಗಳ ಬೀಜಶಕ್ತಿಯಂತಿದ್ದ ಶಿವಮೊಗ್ಗೆಯ ಸಮಾಜವಾದಿಗಳನ್ನು ಗಮನದಲ್ಲಿಟ್ಟುಕೊಂಡಿದ್ದಾದರೂ-ವರ್ಣಿಸಿದಷ್ಟು ಅದ್ಭುತವಾಗಿ ಇನ್ನಾರೂ ವರ್ಣಿಸಲಾರರು:

'ಹೊರನೋಟಕ್ಕೆ ಎಲ್ಲವೂ ಸರಿಯಾಗಿದ್ದಂತೆ ಕಾಣುತ್ತಿದ್ದರೂ ಶಿವಮೊಗ್ಗೆಯ ಸೋಷಲಿಸ್ಟರು ಸಂಜೆಯಾಯಿತೆಂದರೆ ಬ್ಯಾಗ್‌ಗಟ್ಟಲೆ ವ್ಹಿಸ್ಕಿ ತಂದು ಪಾರ್ಟಿ ನಡೆಸಿ ಒಂದು ಬಗೆಯ ಆತ್ಮಹತ್ಯೆಯ ಕ್ರಿಯೆಯಲ್ಲಿ ನಿರತರಾಗಿರುತ್ತಿದ್ದರು. ಒಂದೊಂದು ಪೆಗ್ ಇಳಿದಂತೆಯೂ ಗೋಪಾಲ್, ಅಣ್ಣಯ್ಯ , ಧರ್ಮಪ್ಪ ಮುಂತಾದವರು ಚರ್ಚೆಯನ್ನು ಮಹಾನ್ ಸಂಗೀತದ ಮಟ್ಟಕ್ಕೆ ಏರಿಸುತ್ತಿದ್ದರು. ಅವರ ಅನುಭವ, ಪ್ರತಿಭೆ, ಹತಾಶೆಯೆಲ್ಲ ಪೂರ್ಣ ಅಭಿವ್ಯಕ್ತಿ ಪಡೆದು ಅಲ್ಲಿರುತ್ತಿದ್ದ ನನ್ನಂಥವರಿಗೆ ಬದುಕಿನ ಅನಿರೀಕ್ಷಿತ ಸ್ತರಗಳು ಗೋಚರಿಸುತ್ತಿದ್ದವು. ಜಾತಿ, ಭಾಷೆ, ಹಣ, ವೈಭವ ಎಲ್ಲವನ್ನೂ ಮೀರಿದ ಸುಖೀರಾಜ್ಯವೊಂದು ಸೃಷ್ಟಿಯಾಗುತ್ತಿತ್ತು. ಆಗ ನಮ್ಮ ಸಮಾಜವಾದಿ ಪಕ್ಷದಲ್ಲಿದ್ದ ಕಮ್ಮಾರರು, ಕ್ಷೌರಿಕರು, ಮೋಚಿಗಳು, ರೈತರು, ಕಾರ್ಮಿಕರು-ಎಲ್ಲರೂ ಒಂದಾಗಿ ಅದ್ಭುತ ಜಗತ್ತೊಂದು ಸೃಷ್ಟಿಯಾಗುತ್ತಿತ್ತು. ಜಾತಿಗಳನ್ನು ಮರೆತು ಜನರನ್ನು ತಿಳಿದುಕೊಳ್ಳುವ, ಪ್ರೀತಿಸುವ, ಒಟ್ಟಾಗಿ ಸೃಷ್ಟಿಸುವ ರೋಮಾಂಚನ ಆ ದಿನಗಳಿಂದ ನನ್ನಲ್ಲಿ ಆರಂಭವಾಗಿರಬೇಕೆಂದು ನನಗನ್ನಿಸುತ್ತದೆ...'

(ಪಿ.ಲಂಕೇಶ್, 'ಹುಳಿಮಾವಿನ ಮರ')

ಈ ವರ್ಣನೆಯಲ್ಲಿನ 'ಪಾರ್ಟಿ'ಯೇ ನಿಜವಾದ ಸಮಾಜವಾದಿ ಪಾರ್ಟಿಯಾಗಿ ಜೀವಂತವಾಗುತ್ತಿತ್ತೆಂಬುದನ್ನು ಕೇವಲ ವ್ಯಂಗ್ಯವಾಗಿ ನೋಡದೆ, ಈ ಇಡೀ ವರ್ಣನೆಯನ್ನು, ಯಾರನ್ನು ಇಂದು ಜನ ಸಮಾಜವಾದಿಗಳೆಂದು ಗುರುತಿಸಿ ಶಪಿಸುತ್ತಾರೋ ಆ ಸಮಾಜವಾದಿಗಳು ಅಂದು ಎದುರಿಸುತ್ತಿದ್ದ ಪ್ರತಿಕೂಲ ರಾಜಕೀಯ ಸಂದರ್ಭವನ್ನು ಕುರಿತ ಒಂದು ರೂಪಕವಾಗಿ ನೋಡುವುದಾದರೆ, ಈ ಸಮಾಜವಾದಿಗಳು ಶಾಪಕ್ಕೆ ಮಾತ್ರ ಅರ್ಹರು ಎಂದು ತಿಳಿದವರು ಎಂತಹ ಕೆಟ್ಟ ಹುಂಬರು ಎಂಬುದು ಅರ್ಥವಾದೀತು. ಕರ್ನಾಟಕದ ಮನಸ್ಸು ಇತ್ತೀಚಿನ ಕೆಟ್ಟ ಸಂಪತ್ತಿನ ಹಪಾಹಪಿಗೆ ಸಿಕ್ಕಿ ಒಂದು ರೀತಿಯ ರಾಜಕೀಯ ವಿಕ್ಷಿಪ್ತತೆಗೆ ಒಳಗಾಗುವರೆಗೂ ಅದು ಸಮಾಜವಾದಿ ಮನಸ್ಸೇ ಆಗಿದ್ದುದಕ್ಕೆ ಈ ಸಮಾಜವಾದಿಗಳೇ ಕಾರಣರಾಗಿದ್ದರು ಎಂಬುದನ್ನು ನಾವು ಮರೆಯಬಾರದು. ಹಾಗಾಗಿ ಸಮಾಜವಾದಿ ಚಳುವಳಿಗೆ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಒಂದು ಮಹತ್ವದ ಸ್ಥಾನ ಇದ್ದೇ ಇದೆ.

ನಿಜ, ಈ ಸಮಾಜವಾದಿಗಳಲ್ಲಿ ಹಲವರು-ಮುಖ್ಯವಾಗಿ ಎರಡನೇ ತಲೆಮಾರಿನವರು-ರಾಜಕೀಯ ಭ್ರಷ್ಟತೆಯ ಸುಳಿಗೆ ಸಿಕ್ಕರು. ಅದಕ್ಕೆ ಮತ್ತೆ ಅವರ ವೈಯಕ್ತಿಕ ದೌರ್ಬಲ್ಯಗಳಷ್ಟೇ ಸಮಾಜವಾದವನ್ನು ತಾತ್ವಿಕ ಸ್ಥೂಲತೆಯಿಂದ ಕಾಪಾಡಲಾಗದ ಅದರ ಮೊದಲ

ತಲೆಮಾರಿನವರ- ಮೇಲೆ ತಿಳಿಸಿದ ಕಾಂಗ್ರೆಸ್ ಯಜಮಾನಿಕೆಯ ರಾಜಕೀಯ ಪ್ರಧಾನ ಧಾರೆಯ ದಟ್ಟ ಪ್ರಭಾವದಿಂದಾಗಿಯೋ ಏನೋ- ರಾಜಕೀಯ ಅಸಹಾಯಕತೆಯೂ ಕಾರಣವಾಗಿರಬಹುದು. ಇದರಿಂದಾಗಿ ಸಮಾಜವಾದ ಮತ್ತು ಸಮಾಜವಾದಿ ಎಂಬ ಎರಡು ಶಬ್ದಗಳೂ ಜನತೆಯ ಮನಸ್ಸಿನಲ್ಲಿ ಅನುಮಾನಾಸ್ಪದ ಶಬ್ದಗಳಾದವು. ಆದ-ರೆ ಈ ಅನುಮಾನಾಸ್ಪದತೆಗೆ ಈ ಎರಡೂ ಶಬ್ದಗಳಲ್ಲಿ ಕಾರಣವಿಲ್ಲ ಎಂಬುದನ್ನು ಶೃತಪಡಿಸುವ ಒಂದು ಪ್ರಯತ್ನವಾಗಿ ಈ ಸಂಕಲನವನ್ನು ಸಂಪಾದಿಸಿ ನೀಡುವ ಪ್ರಯತ್ನ ಮಾಡಲಾಗಿದೆ. ಸಮಾಜವಾದ ಮತ್ತು ಸಮಾಜವಾದಿ ಎಂಬೀ ಶಬ್ದಗಳ ನಿಜವಾದ ಘನತೆ ಮತ್ತು ಗೌರವಗಳನ್ನು ಎತ್ತಿಹಿಡಿಯುವ, ಅಗತ್ಯವಿದ್ದೆಡೆ ಅವನ್ನು ವಿಮರ್ಶೆಗೆ ಈಡು ಮಾಡುವಂತಹ ಬರಹಗಳು ಇಲ್ಲಿವೆ. ತನ್ನದೇ ಸ್ವಯಂ ಅಪರಾಧದಿಂದಾಗಿಯೂ ಮತ್ತು ಅಂತಾರಾಷ್ಟ್ರೀಯ ರಾಜಕೀಯ ತಂತ್ರಗಾರಿಕೆಯ ಫಲವಾದ ಅವಿಮರ್ಶಾತ್ಮಕ ಮುಕ್ತ ಮಾರುಕಟ್ಟೆ ಆರ್ಥಿಕ ನೀತಿಯ ಆಕ್ರಮಣಕಾರಿ ಅನುಷ್ಠಾನ ರೀತಿಯಿಂದಾಗಿಯೂ ಉದ್ದೇಶಪೂರ್ವಕ ಅವಹೇಳನಕಾರಿ ಪ್ರಚಾರಕ್ಕೆ ಸಿಕ್ಕಿ ಇತ್ತೀಚಿನ ತಲೆಮಾರಿನವರಿಗೆ ನಿಷೇಧಾತ್ಮಕ ಅರ್ಥದಲ್ಲಿ ಮಾತ್ರ ಎದುರಾಗುವ ಸಮಾಜವಾದವನ್ನು ಅದರ ಶುದ್ಧ ಸ್ಫಟಿಕ ಸೊಬಗಿನ ಹಲವು ಚಿತ್ರಗಳ ಮೂಲಕ ಕಟ್ಟಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಮುಖ್ಯವಾಗಿ ಕರ್ನಾಟಕದ ಈ ಹೊಸ ಸಂದರ್ಭದಲ್ಲಿ ಸಮಾಜವಾದಿ ಪಕ್ಷವನ್ನಲ್ಲ ಅಥವಾ ಸಮಾಜವಾದಿ ಸಂಘಟನೆಯನ್ನಲ್ಲ; ಒಂದು ಸಮಾಜವಾದಿ ಮನಸ್ಸನ್ನು ಕಟ್ಟುವ ಒಂದು ಪ್ರಯತ್ನದ ಭಾಗವಾಗಿ ಈ ಪುಸ್ತಕವನ್ನು ಹೊರತರಲಾಗುತ್ತಿದೆ.

ಇಲ್ಲಿನ ವ್ಯಕ್ತಿ ಚಿತ್ರದ ಬರಹಗಳನ್ನು ಬರೆಸಲು ನಾನು ಪಟ್ಟ ಪಾಡನ್ನು ಇಲ್ಲಿ ವಿವರಿಸಲಾರೆ. ಪಾಳಿನಿಂದ ಚೂರುಪಾರನ್ನು ಆಯ್ದು ಇಲ್ಲಿ ಇತಿಹಾಸದ ಸಣ್ಣಪುಟ್ಟ ಸ್ಮಾರಕಗಳನ್ನು ನಿರ್ಮಿಸಲಾಗಿದೆ. ಹಾಗಾಗಿ ಕೆಲವೆಡೆ ಮಾಹಿತಿ ಅಪೂರ್ಣವೋ ಅಸ್ಪಷ್ಟವೋ ಅಥವಾ ಕೆಲವೆಡೆ ಚರಿತ್ರೆಯನ್ನು ದಾಖಲಿಸುವಾಗ ಹಲವಾರು ಬಾರಿ ಆಗುವಂತೆ- ಉತ್ಪ್ರೇಕ್ಷಿತವೂ ಆಗಿರಲೂ ಸಾಕು. ಅದಕ್ಕೆ ಕ್ಷಮೆ ಇರಲಿ. ಅಂತಹ ಸಂಗತಿಗಳನ್ನು ಗಮನಕ್ಕೆ ತಂದಲ್ಲಿ ಮುಂದಿನ ಮುದ್ರಣಗಳಲ್ಲಿ ಅದನ್ನು ಸರಿ ಪಡಿಸಲಾಗುವುದು. ಇನ್ನು ನನ್ನ ಗೆಳೆಯರು ನನ್ನ ಸ್ನೇಹಕ್ಕೋ, ದಾಕ್ಷಿಣ್ಯಕ್ಕೋ ಕಟ್ಟುಬಿದ್ದು ಅಥವಾ ಸಮಾಜವಾದವನ್ನು ಕುರಿತ ಪ್ರೀತಿಯಿಂದಾಗಿ ಅಥವಾ ಈ ಎರಡೂ ಕಾರಣಗಳಿಂದಾಗಿ ಇಲ್ಲಿನ ಲೇಖನಗಳನ್ನು ಬರೆದುಕೊಟ್ಟಿದ್ದಾರೆ. ಅವುಗಳಲ್ಲಿ ಕೆಲವಲ್ಲಾದರೂ ಈಗ ತಾನೇ ತಿಳಿಸಿದ ಈ ಪುಸ್ತಕದ ಉದ್ದೇಶಕ್ಕೆ ಪೂರಕವಾದಂತೆ ಈ ಸಂಪಾದಕನ ಹಸ್ತಕ್ಷೇಪವೂ ನಡೆದಿದೆ. ಅದನ್ನು ಈ ಗೆಳೆಯರು ಸಹಾನುಭೂತಿಯಿಂದ ಅರ್ಥ ಮಾಡಿಕೊಂಡು ಮನ್ನಿಸಿದ್ದಾರೆ. ಈ ಎಲ್ಲರಿಗೂ ನನ್ನ ಕೃತಜ್ಞತೆಗಳು. ವಿಶೇಷವಾಗಿ ತೀರ್ಥಹಳ್ಳಿ ಶಿವಮೊಗ್ಗ ವಲಯದ ಹಲವು ಸಮಾಜವಾದಿಗಳ ಬಗ್ಗೆ ಮಾಹಿತಿ ಹೆಕ್ಕಿ, ಸಂಗ್ರಹಿಸಿ ಲೇಖನಗಳನ್ನು ಬರೆದುಕೊಟ್ಟಿರುವ ಮಿತ್ರರಾದಂತಹ ಡಾ. ಜೆ.ಕೆ. ರಮೇಶ್ ಮತ್ತು ಎಂ.ಬಿ. ನಟರಾಜ್ ಅವರಿಗೆ.

ಈ ಪುಸ್ತಕವನ್ನು ನಾನು ಕರ್ನಾಟಕದ ಸುಪ್ರಸಿದ್ಧ ಭೂ ಹೋರಾಟಗಾರ ಎಚ್. ಗಣಪತಿಯಪ್ಪನವರಿಗೆ ಅರ್ಪಿಸುತ್ತಿರುವುದು ಕೆಲವರಿಗಾದರೂ ಸೋಜಿಗವನ್ನುಂಟು ಮಾಡಬಹುದು. ಕರ್ನಾಟಕದ ಸಮಾಜವಾದಿ ರಾಜಕಾರಣಕ್ಕೆ ಮಗ್ಗಲು ಮುಳ್ಳಾಗಿದ್ದ ಕಾಂಗ್ರೆಸ್ ರಾಜಕಾರಣದೊಂದಿಗೆ ತಮ್ಮ ರಾಜಕೀಯ ಹೋರಾಟದ ಬಹುಭಾಗವನ್ನು ಗುರುತಿಸಿಕೊಂಡಿದ್ದ ಗಣಪತಿಯಪ್ಪ ಕಾಂಗ್ರೆಸ್‌ನೊಳಗಿದ್ದೂ ಸಮಾಜವಾದಿಗಳ

ಪರವಾಗಿದ್ದವರು. ಗಣಪತಿಯಪ್ಪನವರ ಈ ದ್ವಂದ್ವಕ್ಕೆ ಅವರ ವ್ಯಕ್ತಿತ್ವದ ಕೆಲವು ಸಾಂಪ್ರದಾಯಿಕ ನಂಬಿಕೆಗಳು ಎಷ್ಟು ಕಾರಣವೋ, ಅಷ್ಟೇ ಸಮಾಜವಾದಿ ರಾಜಕಾರಣದ ಸಂಕೀರ್ಣತೆಗಳನ್ನು ಅರ್ಥ ಮಾಡಿಕೊಳ್ಳಲಾಗದ ಅವರ ರಾಜಕೀಯ ತಿಳುವಳಿಕೆಯ ಸೀಮಿತತೆಯೂ ಕಾರಣವಾಗಿದ್ದಿರಬಹುದು. ಶಾಂತವೇರಿ ಗೋಪಾಲಗೌಡರಂತಹ ಅಪೂರ್ವ ಸಮಾಜವಾದಿ ನಾಯಕ ಕರ್ನಾಟಕದ ಜನತೆಯ ಮುಂದೆ ಮೂಡಿ ನಿಲ್ಲಲು ಗಣಪತಿಯಪ್ಪ ಕಟ್ಟಿದ ಕಾಗೋಡಿನ ಗೇಣಿದಾರರ ಹೋರಾಟವೇ ವೇದಿಕೆಯಾಯಿತು ಎಂದು ಹೇಳಿದರೆ ಸಾಕೆಂದು ಕಾಣುತ್ತದೆ, ಗಣಪತಿಯಪ್ಪನವರಿಗೆ ಸಮಾಜವಾದಿ ಚಳುವಳಿ ಎಷ್ಟು ಋಣಿಯಾಗಿರಬೇಕು ಎಂದು ತಿಳಿಯಲು. ಗಣಪತಿಯಪ್ಪನವರು ಸಮಾಜವಾದಿ ಪಕ್ಷದಲ್ಲಿರಬೇಕೆಂದು ಬಯಸಿದ್ದ ಗೋಪಾಲಗೌಡರನ್ನು ಅವರ ಸಾಂಪ್ರದಾಯಿಕ ರಾಜಕೀಯ ನಂಬಿಕೆ ಎಷ್ಟು ಬಾಧಿಸಿತ್ತೆಂದರೆ, ಅವರು ಗಣಪತಿಯಪ್ಪನವರಿಗೆ ಒಮ್ಮೆ 'ನಿಮ್ಮನ್ನು ಗುಂಡಿಕ್ಕಿ ಕೊಲ್ಲಬೇಕೆನಿಸುತ್ತದೆ!' ಎಂದು ಅರ್ಥ ಸಲಿಗೆ-ಅರ್ಥ ಹತಾಶೆಯಲ್ಲಿ ಛೇಡಿಸಿದ್ದರಂತೆ! ಅದೇನೇ ಇರಲಿ, ಗಣಪತಿಯಪ್ಪ ತಮ್ಮ ಬದುಕಿನ ಕೊನೆಯ ಘಳಿಗೆಯವರೆಗೂ ಗೋಪಾಲಗೌಡರನ್ನು ತಮ್ಮ ರಾಜಕೀಯ ಸಾಕುಮಗ ಎಂದೇ ಕರೆಯುತ್ತಿದ್ದರು.

ಮೊದಲೇ ಹೇಳಿದಂತೆ ಇಲ್ಲಿ ದಾಖಲೆಗೆ ಅರ್ಹವಾದ ಎಲ್ಲ ಸಮಾಜವಾದಿಗಳ ಕುರಿತ ಬರಹಗಳನ್ನು ಅಳವಡಿಸಲು ಸಾಧ್ಯವಾಗಿಲ್ಲ. ಕಾರಣ ಅವರನ್ನು ಕುರಿತಂತೆ ಸಾಕಷ್ಟು ಮಾಹಿತಿ ಲಭ್ಯವಿಲ್ಲದಾಗಿರುವುದು ಅಥವಾ ಅವರ ಬಗ್ಗೆ ಬರೆಯಬಲ್ಲವರ ಸಂಪರ್ಕ ನನಗೆ ಸಾಧ್ಯವಾಗದಿರುವುದು. ಉದಾಹರಣೆಗೆ ಕುಪ್ಪಗದ್ದೆ ಮರಿಯಪ್ಪ, ಬಿ.ಎಸ್.ಚಂದ್ರಶೇಖರ್, ಮುಂತಾದವರ ಬಗ್ಗೆ ಬರೆಸುವ ನನ್ನ ಪ್ರಯತ್ನ ಈವರೆಗೆ ಫಲಗೂಡಿಲ್ಲ. ಆದರೆ ಪ್ರಯತ್ನ ನಿಂತಿಲ್ಲ. 'ಹೊಸ ಮನುಷ್ಯ' ಪತ್ರಿಕೆಯಲ್ಲಿ ಅದು ಮುಂದುವರೆಯುವುದು. ಇನ್ನು ಈ ಪುಸ್ತಕಕ್ಕೊಂದು ಅನುಬಂಧವಿದ್ದು, ಇದು 'ಹೊಸ ಮನುಷ್ಯ'ದ ಹೊರಗೆ ಪ್ರಕಟವಾದ ಕೆಲವು ಸಮಾಜವಾದಿಗಳ ಪರಿಚಯ ಲೇಖನಗಳನ್ನೂ ಮತ್ತು ತಮ್ಮ ಪ್ರೀತಿಯ ಸಮಾಜವಾದಿ ಪಕ್ಷ ಕಳೆದುಹೋದ ದುರಂತ-ದುಃಖಗಳನ್ನು ತಮ್ಮದೇ ವಿಶಿಷ್ಟ ರೀತಿಯಲ್ಲಿ ನಿರೂಪಿಸುವ ದೇವನೂರ ಮಹಾದೇವ ಅವರ ಒಂದು ಲೇಖನವನ್ನೂ ಮತ್ತು ಸಮಾಜವಾದಿಗಳ ಪರಂಪರೆ ಸಮಕಾಲೀನವಾಗಿ ತುಮಕೂರಿನ ಯುವಪಡೆಯೊಂದರ ರೂಪದಲ್ಲಿ ಮುಂದುವರೆದಿರುವ ಒಂದು ಮಾದರಿಯನ್ನು ಚಿತ್ರಿಸುವ ಮಲ್ಲಿಕಾ ಬಸವರಾಜು ಅವರ ಲೇಖನವೊಂದನ್ನೂ ಒಳಗೊಂಡಿದೆ. ಸದ್ಯಕ್ಕೆ ಈ ಪುಸ್ತಕ ಈ ರೂಪದಲ್ಲಿ ಬರಲು ಕಾರಣರಾದವರೂ ಸಹ ಇಂತಹ ಇನ್ನೊಂದು ಯುವಪಡೆಯ ಸದಸ್ಯರೂ ಮತ್ತು ನನ್ನ ಕಿರಿಯ ಗೆಳೆಯರೂ ಆದ ಚಾಮರಾಜನಗರದ ಅಪೂರ್ವ ಡಿ'ಸಿಲ್ವ ಹಲವು ತಿಂಗಳುಗಳ ಹಿಂದೆಯೇ ಈ ಪುಸ್ತಕ ಪ್ರಕಟಣೆಯ ಸಾಹಸಕ್ಕೆ ಮುಂದಾಗಿದ್ದ ಈ ಯುವ ಸಮಾಜವಾದಿ ಮಿತ್ರ ಈಗ ತನ್ನ ಸಮಾನ ಮನಸ್ಕ ಗೆಳೆಯರ ಸಹಕಾರದೊಂದಿಗೆ 'ಸಮತ ಪ್ರಕಾಶನ'ದ ಹೆಸರಿನಡಿಯಲ್ಲಿ ಈ ಪುಸ್ತಕ ಹೊರತರುತ್ತಿದಾರೆ. ಅಪೂರ್ವ ಮತ್ತವರ ಎಲ್ಲ ಗೆಳೆಯರಿಗೆ ನನ್ನ ಅಭಿನಂದನೆಗಳು.

10.3.2015

ಡಿ.ಎಸ್. ನಾಗಭೂಷಣ

ಶಿವಮೊಗ್ಗ

ಪ್ರಕಾಶಕರ ಮಾತು


ನಮ್ಮ ಸಮಾಜವಾದಿಗಳು, ಸಮಾಜವಾದಿ ನಂಬಿಕೆಯ ಬದ್ಧತೆಗಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟವರ ನಿಜ ಕಥನ. ಸ್ವಾತಂತ್ರ್ಯ ಚಳುವಳಿಯಿಂದ ಆರಂಭವಾಗಿ ಸೋಷಲಿಸ್ಟ್ ಪಕ್ಷದಿಂದ, ಸಮಾಜವಾದಿ ಯುವಜನ ಸಭಾ, ಜೆ.ಪಿಯವರ ಸಂಪೂರ್ಣ ಕ್ರಾಂತಿ ಚಳವಳಿಯವರೆಗೆ ಇಲ್ಲಿಯ ಲೇಖನಗಳ ವ್ಯಾಪ್ತಿ ಇದೆ. ಕಾಗೋಡು ಗೇಣಿ ಹೋರಾಟ ಮತ್ತು ಆ ಚಳವಳಿಗೆ ಡಾ. ಲೋಹಿಯಾ ಕರ್ನಾಟಕಕ್ಕೆ ಬಂದದ್ದರ ನೆನಪು ಈ ಲೇಖನಗಳಲ್ಲಿದೆ. ಈ ಲೇಖನಗಳಲ್ಲಿನ ಅನುಭವಗಳ ಕಡೆ ದೃಷ್ಠಿ ಹಾಯಿಸಿದಾಗ ಸಮತೆಯ ಬೆಳಕನ್ನು ತಮ್ಮ ಎದೆಯೊಳಗೆ ಹೊತ್ತಿಸಿಕೊಂಡು ಓಡಾಡಿದ ಮಹನೀಯರ ಪರಿಚಯ ನಮಗಾಗುತ್ತದೆ. ಹಾಗಾಗಿ ಸಮಾಜವಾದದ ಬೆಳಕು ಆರಿಲ್ಲ. ಅದು ಕಾಲ ಕಾಲಕ್ಕೆ ಪ್ರಜ್ವಲಿಸುತ್ತಲೇ ಇದೆ. ಕರ್ನಾಟಕದ ಸಮಾಜವಾದಿ ಇತಿಹಾಸದಿಂದ ಪಾಠ ಕಲಿತು, ಹೊಸ ಕಾಲಕ್ಕೆ ಸಮಾಜವಾದಿ ತತ್ವ ಮೀಮಾಂಸೆಯನ್ನು ಹೇಗೆ ವಿಸ್ತರಿಸಿ ಕೊಳ್ಳಬಹುದೆಂಬ ಒಂದು ಚಿತ್ರಣ ಓದುಗರಿಗೆ ಸಿಗಬಹುದು. ಹಾಗೆಯೇ ವಿಮರ್ಶಾತ್ಮಕವಾಗಿ ನೋಡಿ ಸಮಾಜವಾದಿ ಚಳವಳಿಯ ಮಿತಿಗಳನ್ನು ಗುರುತಿಸಬಹುದು.

ಸಮತ ಪ್ರಕಾಶನದ ಮೊದಲ ಪುಸ್ತಕವಾಗಿ "ನಮ್ಮ ಸಮಾಜವಾದಿಗಳು" ಹೊರಹೊಮ್ಮುತ್ತಿರುವುದು ಒಂದು ವಿಶೇಷ. ಬಹುಷ ಇದಕ್ಕೆ ಕಾರಣ ನಮ್ಮನ್ನಗಲಿದರೂ ನಮ್ಮೊಳಗೆ ಇಂತಹ ಸಾಹಸವನ್ನು ಕೈಗೊಳ್ಳಲು ಪ್ರೇರೇಪಿಸುತ್ತಿರುವ ಜಿ. ಶ್ರೀನಿವಾಸ್ ಕುಮಾರ್ ಎಂಬ ಸಮಾಜವಾದಿ ಗುರು ಮತ್ತು ಹೊಸ ಮನುಷ್ಯ ಎಂಬ ಸಮಾಜವಾದಿ ಮಾಸ ಪತ್ರಿಕೆಯ ಮೂಲಕ ನಮ್ಮಂತಹ ಯುವ ತಲೆಮಾರಿನಲ್ಲಿ ಹೊಸ ಭರವಸೆ ಮೂಡಿಸುತ್ತಿರುವ ಡಿ.ಎಸ್. ನಾಗಭೂಷಣರವರು. ಅವರು ತಮ್ಮ ಪತ್ರಿಕೆಯಲ್ಲಿ ಪ್ರಕಟವಾದ ಈ ಲೇಖನಗಳನ್ನು ನಮ್ಮ ಪ್ರಕಾಶನಕ್ಕೆ ಪ್ರಕಟಿಸಲು ಅನುಮತಿ ನೀಡಿ-ದ್ದಾರೆ ಅವರಿಗೆ ಮತ್ತು ಲೇಖನವನ್ನು ಬರೆದ ಎಲ್ಲಾ ಲೇಖಕರಿಗೂ ಪ್ರೀತಿಪೂರ್ವಕ ವಂದನೆಗಳು. ಹಾಗೆಯೇ ಕರ್ನಾಟಕದಲ್ಲಿ ಅಲ್ಲಲ್ಲಿ ಸಣ್ಣ ಗುಂಪುಗಳ ಮೂಲಕ ಸಮಾಜವಾದಿ ಚಟುವಟಿಕೆಯಲ್ಲಿ ತೊಡಗಿರುವ ಸಮಾಜವಾದಿ ಕುಟುಂಬವೂ ಈ ಪ್ರಕಾಶನದ ಹಿಂದಿದೆ. ಇವರೆಲ್ಲರ ಸಹಕಾರ ಹಾಗೂ ಪ್ರೀತಿಯಿಂದ ಈ ಪುಸ್ತಕ ನಿಮ್ಮ ಕೈಗಿಡುತ್ತಿದ್ದೇವೆ. ನಿಮ್ಮ ಅನಿಸಿಕೆ ಅಭಿಪ್ರಾಯಗಳಿಗೆ ಆದರದ ಸ್ವಾಗತ.

ಅಪೂರ್ವ ಡಿ' ಸಿಲ್ವ
ಸಮತ ಪ್ರಕಾಶನದ ಪರವಾಗಿ

ಪರಿವಿಡಿ

ಅನುಬಂಧ



ಬಹುಮುಖ ಪ್ರತಿಭೆಯ ಕಮಲಾದೇವಿ



ಭಾರತೀಯ ಸಮಾಜವಾದಿ ಆಂದೋಲನದ ಇತಿಹಾಸದಲ್ಲಿ ಎದ್ದು ಕಾಣುವ ಎರಡು ಧೀಮಂತ ಮಹಿಳೆಯರ ಚಿತ್ರಗಳೆಂದರೆ, ಒಂದು ಅರುಣಾ ಅಸೀಫ್ ಅಲಿಯವರದ್ದು, ಇನ್ನೊಂದು ಕಮಲಾದೇವಿ ಚಟ್ಟೋಪಾಧ್ಯಾಯರದ್ದು. ಇಬ್ಬರೂ ತಮ್ಮ ಬದುಕಿನ ವಿವಿಧ ಕಾಲಘಟ್ಟಗಳಲ್ಲಿ ಸಮಾಜವಾದಿ ಆಂದೋಲನದೊಂದಿಗೆ ಸಂಪರ್ಕ ಕಳೆದುಕೊಂಡರಾದರೂ, ನಂತರದ ಬದುಕಿನಲ್ಲೂ ಅವರು ಬೆಳಗಿದ್ದು ಸಮಾಜವಾದಿ ಮೌಲ್ಯಗಳನ್ನೇ ಎಂದು ಹೇಳಬಹುದು. ಅದೇನೇ ಇರಲಿ, ಈ ಇಬ್ಬರು ಮಹಿಳಾ ಸಮಾಜವಾದಿಗಳಲ್ಲಿ ನಮಗೆ ಹೆಚ್ಚು ಮುಖ್ಯವೆನಿಸುವವರು ಕಮಲಾದೇವಿಯವರು. ಏಕೆಂದರೆ, ಅವರು ಕನ್ನಡಿಗರು. ಅದಕ್ಕೂ ಮುಖ್ಯವಾಗಿ, ಭಾರತೀಯ ಸಮಾಜವಾದಿ ಆಂದೋಲನದ ಆರಂಭದ ದಿನಗಳಲ್ಲೇ ಜಯಪ್ರಕಾಶ್ ನಾರಾಯಣರ ಮಾರ್ಗದರ್ಶನದಲ್ಲಿ ಕರ್ನಾಟಕದಲ್ಲಿ ಸಮಾಜವಾದಿ ಆಂದೋಲನ ಮತ್ತು ಪಕ್ಷವನ್ನು ಕಟ್ಟಲು ಶ್ರಮಿಸಿದವರು. ಕನ್ನಡದ ಮೊದಲ ಸಮಾಜವಾದಿ ಪತ್ರಿಕೆ "ಜಾಗೃತಿ"ಯ ಅಡಿಗಲ್ಲು ಹಾಕಿದವರು.

ಮಂಗಳೂರಿನ ಪ್ರತಿಷ್ಠಿತ ಶ್ರೀಮಂತ ಸಾರಸ್ವತ ಕುಟುಂಬದಲ್ಲಿ ಜನಿಸಿದ(1903) ಕಮಲಾದೇವಿ, ಆ ಕಾಲಕ್ಕೇ ಆಧುನಿಕ ಮನೋಭಾವವನ್ನು ರೂಢಿಸಿಕೊಂಡಿದ್ದ ತಾಯಿ ಗಿರಿಜಾಬಾಯಿ ಮತ್ತು ವಿಧವೆಯಾಗಿದ್ದೂ ದಿಟ್ಟೆಯಾಗಿ ಸಾರ್ವಜನಿಕ ಜೀವನದಲ್ಲಿ ತುಂಬು ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದ ಅಜ್ಜಿಯ ಬದುಕಿನಿಂದ ಆಳವಾಗಿ ಪ್ರಭಾವಿತರಾಗಿದ್ದರು. ಆಗ ಮಂಗಳೂರಿಗೆ ಆಗಮಿಸಿದ್ದ ಅನಿಬೆಸೆಂಟ್, ಗಾಂಧೀಜಿಯವರ ಭೇಟಿಯಿಂದ ಸ್ವಾತಂತ್ರ್ಯದ ಬಯಕೆ, ರಾಜಕೀಯ ಚಿಂತನೆಗಳು ಗರಿಗೆದರಿದ್ದವು. ತನ್ನ ಕುಟುಂಬದಲ್ಲೇ ಆದ ಮಹಿಳೆಯರ ಮೇಲಿನ ದೌರ್ಜನ್ಯ, ಆರ್ಥಿಕ ಸಂಕಷ್ಟ, ಕೌಟುಂಬಿಕ ಸಮಸ್ಯೆಗಳಿಂದ ಮಹಿಳೆಯರ ಪರ ಹೋರಾಡುವ ಕೆಚ್ಚು ಮೂಡಿತು. ಹಾಗಾಗಿಯೇ ಅವರು ಬಾಲ್ಯ ವಿವಾಹಕ್ಕೆ ತುತ್ತಾಗಿ, ನಂತರ ಬಾಲ ವಿಧವೆಯಾಗಿ, ಅದರಿಂದ ವಿಚಲಿತರಾಗದೆ ಸ್ವಲ್ಪಕಾಲ ರಂಗನಟಿ ಮತ್ತು ಮೂಕಿ ಚಲನಚಿತ್ರ ನಟಿಯಾಗಿ ತಮ್ಮ ಬದುಕನ್ನು ಪುನರ್ಸಂಘಟಿಸಿಕೊಂಡು, ಆನಂತರ ಉನ್ನತ ವಿದ್ಯಾಭ್ಯಾಸಕ್ಕೆಂದು ಮದ್ರಾಸ್‌ಗೆ ತೆರಳಿ ಅಲ್ಲಿ ವಿಚಿತ್ರ ಪ್ರತಿಭೆಯ ಹರೀಂದ್ರನಾಥ ಚಟ್ಟೋಪಾಧ್ಯಾಯರನ್ನು ಪ್ರೀತಿಸಿ ಮದುವೆಯಾಗಿ, ಆ ವಿವಾಹದಲ್ಲೂ ನೆಮ್ಮದಿ ಕಾಣದೆ ಮುಂದೆ ಗಾಂಧಿ ಪ್ರಭಾವದಲ್ಲಿ ಹೊಸ ಬದುಕನ್ನು ಕಟ್ಟಿಕೊಳ್ಳುವವರೆಗಿನ ಜೀವನ ವೃತ್ತಾಂತದ ಹಲವು ಏಳುಬೀಳುಗಳನ್ನು ಸಹಿಸಿ ಯಶಸ್ವಿಯಾಗಲು ಸಾಧ್ಯವಾಯಿತು.

1924ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಯಂಸೇವಕರಾಗಿ ಭಾಗವಹಿಸಿದ್ದೇ ಕಮಲಾದೇವಿಯವರು ಗಾಂಧೀಜಿ ನಡೆಸಿದ್ದ ರಾಷ್ಟ್ರೀಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೇರೇಪಣೆಯಾಯಿತು. 1930 ಜನವರಿ 26 ಪೂರ್ಣ ಸ್ವರಾಜ್ಯ ದಿನದಂದು ಮುಂಬೈನ ಆಜಾದ್ ಮೈದಾನದಲ್ಲಿ ನಡೆದ ಗಲಭೆಯಲ್ಲಿ ಕೈಯಲ್ಲಿ ರಕ್ತ ಸುರಿಯುತ್ತಿದ್ದರೂ ಲೆಕ್ಕಿಸದೇ ತ್ರಿವರ್ಣ ಧ್ವಜದ ಗೌರವವನ್ನು ಕಾಪಾಡಿದರು. ಉಪ್ಪಿನ ಸತ್ಯಾಗ್ರಹದಲ್ಲಿ ಮಹಿಳೆಯರನ್ನು ದೂರವಿಟ್ಟ ಗಾಂಧೀಜಿಯವರೊಂದಿಗೆ ವಾದ ಮಾಡಿ ಮಹಿಳೆಯರೂ ಈ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಅನುವು ಮಾಡಿಕೊಟ್ಟರು. ರಾಷ್ಟ್ರೀಯ ಚಳುವಳಿಯಲ್ಲಿ ನಾಲ್ಕು ಬಾರಿ ಜೈಲು ಸೇರುವಂತಾದ ಕಮಲಾದೇವಿ, ಬ್ರಿಟಿಷ್ ಪ್ರಭುತ್ವದ ಮೊದಲ ಮಹಿಳಾ ರಾಜಕೀಯ ಕೈದಿ ಎನಿಸಿಕೊಂಡರು. ಹಾಗೇ ಜೈಲಿನಲ್ಲಿ ತೀವ್ರ ಅನಾರೋಗ್ಯಕ್ಕೂ ತುತ್ತಾದರು.

1934 ಸೆಪ್ಟೆಂಬರ್ ತಿಂಗಳಲ್ಲಿ ಕಮಲಾದೇವಿಯವರು ಬಂಧಮುಕ್ತರಾದರು. ಜಯಪ್ರಕಾಶ್ ನಾರಾಯಣ್‌ರವರ ನೇತೃತ್ವದಲ್ಲಿ ಕಾಂಗ್ರೆಸ್‌ನೊಳಗೇ ಸ್ಥಾಪಿತವಾದ ಸಮಾಜವಾದಿ ಕಾಂಗ್ರೆಸ್ ಪಕ್ಷ ಅವರನ್ನು ಆಕರ್ಷಿಸಿತು. ಇದು ಗಾಂಧೀಜಿಯೊಂದಿಗೆ ಮಹಿಳೆಯರು ಮತ್ತು ಇತರೆ ಶೋಷಿತ ವರ್ಗದವರ ಉನ್ನತಿಗೆ ಅವಶ್ಯಕವಾದ ವಿಶೇಷ ರಾಜಕೀಯ ಕಾರ್ಯಕ್ರಮ ಮತ್ತು ಮಾರ್ಗಗಳ ಬಗ್ಗೆ ತಾತ್ವಿಕವಾಗಿ ಜಗಳವಾಡಲು ಒಂದು ವೇದಿಕೆ ಸಿಕ್ಕಂತಾಯಿತು. ಕಮಲಾರ ಸ್ವತಂತ್ರ ನಡೆನುಡಿಗಳನ್ನು "ಅತಿ" ಎಂದು ಟೀಕಿಸುತ್ತಿದ್ದ ಗಾಂಧೀಜಿಗೆ ಸೂಕ್ತ ಉತ್ತರ ಕೊಡಲು ಜೆಪಿ, ಲೋಹಿಯಾ, ಪಟವರ್ಧನ್, ಮುಂತಾದ ಪ್ರಖರ ಯುವ ಚಿಂತಕರ ಪಡೆಯ ಬೆಂಬಲವೂ ಅವರಿಗೆ ಇಲ್ಲಿ ದೊರಕಿ ಅವರ ವ್ಯಕ್ತಿತ್ವ ಇನ್ನಷ್ಟು ಸಮೃದ್ಧವಾಗಲು ಸಹಾಯಕವಾಯಿತು. ಅವರು ಈ ಸಂಘಟನೆಯಲ್ಲಿ ತಮ್ಮ ವಿಚಾರಶೀಲತೆ, ದಿಟ್ಟತನ ಮತ್ತು ಪರಿಶ್ರಮಗಳಿಂದ ಎಷ್ಟು ಕ್ಷಿಪ್ರ ಗತಿಯಲ್ಲಿ ತಮ್ಮ ಛಾಪನ್ನು ಮೂಡಿಸಿದರೆಂದರೆ, ಅವರು 1936ರಲ್ಲಿ ಸಮಾಜವಾದಿಗಳ ಅಧಿವೇಶನದ ಅಧ್ಯಕ್ಷತೆ ವಹಿಸಲು ಅವರನ್ನು ಆರಿಸಲಾಯಿತು.

ಈ ಮಧ್ಯೆ ಮಗನ ಶಿಕ್ಷಣದ ಸಂಬಂಧವಾಗಿ ವಿದೇಶಕ್ಕೆ ತೆರಳಿದ್ದ ಕಮಲಾರವರು 1941ರಲ್ಲಿ ತಿರುಗಿ ಬಂದು ಮತ್ತೆ ಸ್ವಾತಂತ್ರ್ಯ ಆಂದೋಲನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. 1942ರ "ಭಾರತ ಬಿಟ್ಟು ತೊಲಗಿ"ಆಂದೋಲನದಲ್ಲಿ ಸಮಾಜವಾದಿಗಳು ನಡೆಸಿದ ರೋಚಕ ಭೂಗತ ಹೋರಾಟದಲ್ಲಿ ಕಮಲಾರವರ ಪಾತ್ರವೂ ಬಹು ದೊಡ್ಡದು. ನಂತರ ದೇಶದ ವಿವಿಧೆಡೆ ಸಮಾಜವಾದಿ ಆಂದೋಲನವನ್ನು ಸಂಘಟಿಸುವಲ್ಲಿ ತೊಡಗಿಕೊಂಡ ಅವರು ಕರ್ನಾಟಕದಲ್ಲಿ ಕೆ.ಕೆ.ಶೆಟ್ಟಿ, ಅಮ್ಮೆಂಬಳ ಬಾಳಪ್ಪ, ಆನಂದ, ಕೆ.ಎಸ್. ಕಾರಂತ, ಉಮಾಬಾಯಿ ಕುಂದಾಪುರ, ಸೋಗಾಲ ನಾಗಭೂಷಣ, ಭಾಸು ಕೃಷ್ಣಮೂರ್ತಿ, ಖಾದ್ರಿ ಶಾಮಣ್ಣ ಮುಂತಾದವರನ್ನೊಳಗೊಂಡ ಯುವಪಡೆಯೊಂದನ್ನು ನಿರ್ಮಿಸಿ, ಮಂಗಳೂರು, ಬೆಂಗಳೂರು ಮತ್ತು ಹುಬ್ಬಳ್ಳಿಗಳಲ್ಲಿ ಸಮಾಜವಾದಿ ಪಕ್ಷದ ಚಟುವಟಿಕೆಗಳು ಆರಂಭವಾಗಲು ಕಾರಣರಾದರು.


ನಂತರ ಸ್ವಾತಂತ್ರ್ಯೋದಯ- ರಾಷ್ಟ್ರವಿಭಜನೆಯ ಸಂದರ್ಭದಲ್ಲಿ ಭುಗಿಲೆದ್ದ ಕೋಮುಗಲಭೆಗಳು ದೇಶದ ಅನೇಕ ಕಡೆ ನಿರಾಶ್ರಿತರ ಬೃಹತ್ ಸಮಸ್ಯೆಯನ್ನು ಸೃಷ್ಟಿಸಿದಾಗ ಕಮಲಾದೇವಿಯವರು ದೆಹಲಿ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ನಡೆಸಿದ ಪರಿಹಾರ ಮತ್ತು ಪುನರ್ವಸತಿ ಕೆಲಸ ಗಾಂಧೀಜಿಯವರ ಗಮನ ಸೆಳೆಯಿತು. ಅವರ ಸಹಾಯ ಮತ್ತು ಪ್ರೋತ್ಸಾಹಗಳಿಂದ ಕಮಲಾದೇವಿಯವರು ತಾವು ಈಗಾಗಲೇ ಸಂದರ್ಶಿಸಿದ್ದ ನಾರ್ವೆ, ಸ್ವೀಡನ್, ಡೆನ್ಮಾರ್ಕ್ ಮತ್ತು ಚೀನಾಗಳಲ್ಲಿ ಸಹಕಾರೀ ತತ್ವದ ಮೇಲೆ ನಡೆಯುತ್ತಿದ್ದ ಒಕ್ಕಲುತನ, ಕೈಗಾರಿಕೋದ್ಯಮಗಳ ಮಾದರಿಗಳನ್ನು ಇಲ್ಲಿಯೂ ಅಳವಡಿಸುವ ಪ್ರಯತ್ನ ಮಾಡಿದರು. ಭಾರತೀಯ ಸಹಕಾರ ಸಂಘವು ಜನ್ಮತಾಳಿತು. ಇಂದಿನ ಫರೀದಾಬಾದ್ ನಗರ ಕಮಲಾರ ಇಂತಹ ಪರಿಶ್ರಮದ ಫಲವೇ ಆಗಿದೆ. ಆ ದಿನಗಳಲ್ಲಿ ಹೀಗೆ ರಾಜಕಾರಣಕ್ಕಿಂತ ಹೆಚ್ಚಾಗಿ ಸಾರ್ವಜನಿಕ ಸೇವೆಯಲ್ಲಿ ತೊಡಗಿಕೊಂಡು ಅದರಲ್ಲಿಯೇ ತೃಪ್ತಿ ಪಡೆಯಲಾರಂಭಿಸಿದ ಕಮಲಾರನ್ನು ಗಾಂಧೀಜಿಯ ಆಕಸ್ಮಿಕ ಸಾವು ಕಂಗೆಡಿಸಿತು. ರಾಜಕಾರಣದಲ್ಲಿ ಅವರ ಆಸಕ್ತಿ ಕಡಿಮೆಯಾಗತೊಡಗಿತು. ಕಾಂಗ್ರೆಸ್ ಕೂಡ ಅಧಿಕಾರ ರಾಜಕಾರಣದಲ್ಲಿ ಮುಳುಗಿ ಭ್ರಷ್ಟವಾಗತೊಡಗಿತ್ತು. ಸಮಾಜವಾದಿಗಳು ಕಾಂಗ್ರೆಸ್ಸಿನಿಂದ ಹೊರಬಂದ ಮೇಲೂ ಒಗ್ಗಟ್ಟಾಗಿರಲಾರದೆ ಕಲಹಗಳು ಆರಂಭವಾಗಿದ್ದವು. ಇದರಿಂದ ಬೇಸತ್ತ ಅವರು 50ರ ದಶಕದ ಕೊನೆಯ ಹೊತ್ತಿಗೆ ರಾಜಕಾರಣಕ್ಕೆ ಸಂಪೂರ್ಣ ವಿದಾಯ ಹೇಳಿದರು.

ಆನಂತರ ಅವರು ಆಸಕ್ತಿ ವಹಿಸಿದ್ದು ನಮ್ಮ ಪಾರಂಪರಿಕ ಮತ್ತು ಜನಪದ ಕಲೆ ಮತ್ತು ಕರಕೌಶಲ್ಯಗಳ ಅಧ್ಯಯನ ಮತ್ತು ಸಂರಕ್ಷಣೆಯ ಕಡೆಗೆ. ಎಪ್ಪತ್ತಾರರ ವಯಸ್ಸಿನಲ್ಲೂ ಅವರು ದೇಶದ ಮೂಲೆಮೂಲೆಗಳ ಹಳ್ಳಿಹಳ್ಳಿಗಳನ್ನು ತಿರುಗಿ ಅಳಿವಿನಂಚಿನಲ್ಲಿದ್ದ ಭಾರತೀಯ ಕರಕೌಶಲ್ಯಗಳ ಸಂರಕ್ಷಣೆಯ ಸಾಹಸ ಕೈಗೊಂಡರು. ಇದರ ಫಲವಾಗಿ ಭಾರತ ಸರ್ಕಾರದ ಆಶ್ರಯದಲ್ಲಿ ಭಾರತೀಯ ಕರಕುಶಲ ಅಭಿವೃದ್ಧಿ ಮಂಡಳಿ ಅಸ್ತಿತ್ವಕ್ಕೆ ಬಂದು ಅವರು ಅಧ್ಯಕ್ಷರಾದರು. ಮಹಾಬಲಿಪುರದ ಶಿಲ್ಪಕಲಾ ಕಾಲೇಜು ಸ್ಥಾಪನೆ ಇವರ ಒಂದು ದೊಡ್ಡ ಸಾಧನೆ. ಇದಲ್ಲದೆ ಇಂದು ಕಾಳಹಸ್ತಿಯ ಕಲಂಕಾರಿ ಕಲೆ, ನಂದ್ರಾ, ಪೂಚಂಪಲ್ಲಿ ಸೀರೆಗಳು, ಜೈಪುರದ ನೀಲಿ ಮಡಕೆಗಳು, ತೋಡಾ ಕಸೂತಿ ಕಲೆಗಳೆಲ್ಲ ನಮ್ಮ ಮಧ್ಯೆ ಜೀವಂತವಾಗಿದ್ದರೆ ಅದರ ಹಿಂದೆ ಇರುವುದು ಕಮಲಾದೇವಿಯವರ ಪರಿಶ್ರಮ. ಹಾಗೇ ದೆಹಲಿಯ ರಾಷ್ಟ್ರೀಯ ನಾಟಕಶಾಲೆಯ ಸ್ಥಾಪನೆಗೂ ಇವರೇ ಸ್ಫೂರ್ತಿ. ಆಧುನಿಕ ಭಾರತದ ಮಹಿಳಾ ಇತಿಹಾಸದಲ್ಲಿ ತಮ್ಮ ಬಹುಮುಖ ಪ್ರತಿಭೆ ಮತ್ತು ಸೇವೆಯ ಮೂಲಕ ಅನುಪಮ ಸಾಧಕಿ ಎನಿಸಿದ ಈ ಕನ್ನಡಿತಿ ತಮ್ಮ 85ನೇ ವಯಸ್ಸಿನಲ್ಲಿ (1988) ನಮ್ಮನ್ನಗಲಿ ಹೋದರು.

ಸಂಗ್ರಹ ಲೇಖನ: ಮಂಜುಳಾ ಎಂ. ರಾಜು

(ಮಾರ್ಚ್, 2015)

ಶಾಂತವೇರಿ : ಕೆಲವು ನೆನಪುಗಳು



ಶಾಂತವೇರಿ ಗೋಪಾಲ ಗೌಡರ ಬಗ್ಗೆ ನಾನು ಬಾಲ್ಯದಿಂದಲೇ ಹಲವಾರು ಕಥೆಗಳನ್ನು ಕೇಳಿದ್ದೆ. ಅವರು ನಮ್ಮೂರಿನ ಪಕ್ಕದ ಆರಗದಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದ್ದೂ, ನಂತರ ತೀರ್ಥಹಳ್ಳಿ ಸರ್ಕಾರಿ ಪ್ರೌಢ ಶಾಲೆಯಲ್ಲಿದ್ದಾಗಲೇ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಸೆರೆಮನೆ ಸೇರಿದ್ದೂ, ಬಿಡುಗಡೆಯ ನಂತರ ಆರಗದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದುಕೊಂಡು ಹರಿಜನರಿಗೆ ರಾತ್ರಿ ಶಾಲೆ ನಡೆಸಿದ್ದು, ಶಿವಮೊಗ್ಗದಲ್ಲಿ ಹರಿಜನರ ದೇವಾಲಯ ಪ್ರವೇಶಕ್ಕಾಗಿ ಹೋರಾಟ, ಸ್ವಾತಂತ್ರ್ಯಾನಂತರ ಸಹ್ಯಾದ್ರಿ ಕಾಲೇಜಿನಲ್ಲಿ ಇಂಟರ್‌ಮೀಡಿಯೇಟ್ ವ್ಯಾಸಂಗಕ್ಕಾಗಿ ಒಕ್ಕಲಿಗರ ವಿದ್ಯಾರ್ಥಿ ನಿಲಯವನ್ನು ಆಶ್ರಯಿಸಿ, ಅಲ್ಲಿಯ ವಾರ್ಡನ್ ಆಗಿ ಅದನ್ನು ಸಾರ್ವಜನಿಕ ವಿದ್ಯಾರ್ಥಿ ನಿಲಯವನ್ನಾಗಿ ಪರಿವರ್ತಿಸಲು ಯತ್ನಿಸಿದ ಕಾರಣದಿಂದಾಗಿ ಆಡಳಿತ ಮಂಡಳಿಯಿಂದ ಹೊರಹಾಕಲ್ಪಟ್ಟಿದ್ದು, ನಂತರ ಕಾಗೋಡು ಸತ್ಯಾಗ್ರಹ ರೂಪಿಸಿ ಭೂಮಾಲೀಕರ ವಿರುದ್ಧ ಧೀರೋದಾತ್ತ ಹೋರಾಟ ನಡೆಸಿದ್ದು– ಈ ಎಲ್ಲವೂ ಹಿರಿಯರ ಮೂಲಕ ನಮ್ಮ ಕಿವಿಗಳಿಗೆ ಬಿದ್ದು, ಭೂಮಾಲೀಕರ ಮನೆತನಕ್ಕೆ ಸೇರಿದ್ದ ನಮ್ಮಲ್ಲಿ ವಿಚಿತ್ರ ರೋಮಾಂಚನವನ್ನು ಹುಟ್ಟಿಸುತ್ತಿದ್ದವು.

ಗೋಪಾಲಗೌಡರನ್ನು ದೂರದಿಂದ ಹಲವು ಬಾರಿ ನೋಡಿದ್ದೆನಾದರೂ, ಅವರೊಂದಿಗೆ ಮೊದಲ ವೈಯುಕ್ತಿಕ ಸಾಮೀಪ್ಯ ದೊರೆತದ್ದು ಅವರು ಶಾಸಕರಾದ ಮೇಲೇ. ವಿದಾರ್ಥಿಯಾಗಿದ್ದ ನಾನು ರಜಾ ದಿನಗಳಲ್ಲಿ ಮೇಗರವಳ್ಳಿಯಿಂದ ಕಡಿದಾಳಿಗೆ ಹೋಗುವಾಗ ತೀರ್ಥಹಳ್ಳಿ ಪ್ರವಾಸಿ ಮಂದಿರದಲ್ಲಿ ಶಾಂತವೇರಿಯವರು ಉಳಿದುಕೊಂಡಿದ್ದಾರೆ ಎಂದು ತಿಳಿದಿತ್ತು. ಎಂ.ಎಲ್.ಎ. ಆಗಿದ್ದವರನ್ನು ನೋಡಲು ಭಯ, ಭಕ್ತಿಯಿಂದ ಮೆಟ್ಟಿಲುಗಳನ್ನು ಹತ್ತಿ ಅವರಿದ್ದ (ತುಂಗಾನದಿಗೆ ಎದುರಿಗಿದ್ದ ಕೊಠಡಿ ಮತ್ತು ಉದ್ದನೆಯ ಜಗಲಿ) ಕಡೆ ಹೋಗುವಾಗ ಗೋಪಾಲಗೌಡ್ರು ಏನೋ ಹಾಡು ಹೇಳಿಕೊಂಡು ತಿರುಗಾಡುತ್ತಿದ್ದರು. ಆಗ ಅವರು ಬೇಂದ್ರೆಯವರ "ನಾನು ಬಡವ ಆಕೆ ಬಡವಿ ಒಲವೆ ನಮ್ಮ ಬದುಕು" ಎಂಬ ಪದ್ಯವನ್ನು ಹೇಳಿಕೊಂಡು ಶತಪಥ ತಿರುಗಾಡುತ್ತಿದ್ದರು. ನಾನೊಂದು ಕಂಬದ ಮರೆಯಲ್ಲಿ ನಿಂತು ಕೇಳಿಸಿಕೊಳ್ಳುತ್ತಿದ್ದೆ. ಅಂದೇ ನನಗೆ ಅವರು ಸಂಗೀತ ಪ್ರಿಯರೆಂದು ತಿಳಿದದ್ದು. ನಾನವರಿಗೆ ಕಾಣಿಸಿಕೊಂಡಾಗ "ಏನೋ ಶಾಮಣ್ಣ ನಿನಗೂ ಸಂಗೀತ ಇಷ್ಟವೇನಯ್ಯ!" ಎನ್ನುತ್ತಾ ಹತ್ತಿರ ಬಂದು ಮಾತನಾಡಿಸಿದರು. ಅಲ್ಲೊಂದು "ಇಲ್ಲೊಂದು ಪದ ಬರುತ್ತೆ ಸಾರ್" ಎಂದೆ. ಹೇಳು, ಹೆದರಬಾರದು ಎಂದರು. ನನ್ನ ಹಿಂದಿ ಪಂಡಿತ್ ವೆಂಕಟಶಾಮ ರಾವ್ ಹೇಳಿಕೊಟ್ಟ ಬೇಂದ್ರೆಯವರ 'ಬೆಳಗು'

ಪದ್ಯವನ್ನು ಹೇಳಿದೆ. ಖುಷಿಪಟ್ಟರು. ನಂತರ "ಏನ್ ಬಂದಿದ್ದು" ಎಂದು ಕೇಳಿದಾಗ "ಮೇಗರವಳ್ಳಿಯಿಂದ ಊರಿಗೆ ಹೊರಟಿದ್ದೆ. ಇಲ್ಲಿ ನೀವಿರುವುದನ್ನು ಮೂಡುವಳ್ಳಿ ಅಣ್ಣಯ್ಯ ಹೆಗ್ಗಡೆಯವರು ನನಗೆ ಹೇಳಿದ್ದರು. ಹಾಗಾಗಿ ಬಂದೆ" ಎಂದು ಹೇಳಿ ಹೊರಟೆ.

"ತಡಿಯೋ ಕಾಫಿ, ತಿಂಡಿ ತರಲು ಕೃಷ್ಣಪ್ಪಯ್ಯನವರ ಹೋಟೆಲಿಗೆ ಗುತ್ಯಮ್ಮ ಹೋಗಿದ್ದಾರೆ, ತಿಂಡಿ ತಿಂದು ಹೋಗು ಎಂದರು. ಸ್ವಲ್ಪ ಹೊತ್ತಿಗೆ ತಾಯಿ-ಮಗ ಕೃಷ್ಣಪ್ಪಯ್ಯನವರ ಹೋಟೆಲ್ಲಿನ ದೋಸೆ, ಕಾಫಿ ತಂದಿದ್ದನ್ನು ನನಗೂ ಹಂಚುತ್ತಾ "ಇವರೆಲ್ಲ ಹರಿಜನರು ನಿನಗೇನಾದ್ರೂ ಮಡಿ, ಮೈಲಿಗೆ ಉಂಟಾ ಹ್ಯಾಂಗೆ" ಎಂದು ತಮಾಷೆ ಮಾಡಿದರು. ಇವರ ಮನೆಗೆ ಸುಮಾರು ಸಾರಿ ಹೋಗಿದೀನಿ. ಇವರ ಸಹೋದರರಾದ ರಾಮಣ್ಣ ಮತ್ತು ನಾರಾಯಣ, ನನ್ನ ತಮ್ಮ ಗೋಪಾಲನ ಕ್ಲಾಸ್‌ಮೇಟ್ಸ್ ಆಗಿದ್ದರು. ಜೊತೆಗೆ ರಾಮಣ್ಣ ತೀರ್ಥಹಳ್ಳಿ ತಾಲ್ಲೂಕು ಹರಿಜನಮುಖಂಡರು. ಆರಗದ ಮಿಣಕಮ್ಮ ನನಗೆ ತುಂಬಾ ಚೆನ್ನಾಗಿ ಗೊತ್ತು ಅವರ ಮನೆಗಳಿಗೆ ಹೋಗಿ ಊಟ ಮಾಡಿದ್ದೇನೆ. ಜೊತೆಗೆ ಇವರ ಮಕ್ಕಳಿಗೆ ನಾವು ಕೆಲವರು ಸೇರಿ ಮಂತ್ರ ಮಾಂಗಲ್ಯ ಮದುವೆ ಮಾಡಿಸಿದ್ದೇವೆ ಎಂದು ಹೇಳಿ ಅವರು ತರಿಸಿದ ತಿಂಡಿ ತಿಂದು, ನಮಸ್ಕಾರ ಹೇಳಿಹೊರಟೆ.

ಇನ್ನು ತೀರ್ಥಹಳ್ಳಿಯ ಕಾರು ಡ್ರೈವರ್ ನರಸಿಂಹಣ್ಣನವರನ್ನು ಈ ಸಮಯದಲ್ಲಿ ನೆನಪು ಮಾಡದೆ ಇರಲು ಸಾಧ್ಯವೇ ಇಲ್ಲ. ಚುನಾವಣೆ ಎಂದರೆ ಶಾಂತವೇರಿಯವರನ್ನು ಪ್ರಚಾರ ಸಭೆಗಳಿಗೆ ಕರೆದುಕೊಂಡು ಹೋಗುವ ಜವಾಬ್ದಾರಿ ಅವರದ್ದೇ. ಪೈಜಾಮ, ಶರ್ಟು, ಕೆಂಪು ಟೋಪಿ, ಕೆಂಪು ಟವೆಲ್ಲು ಹೆಗಲ ಮೇಲೆ ಇರಲೇಬೇಕಿತ್ತು. ಕರಪತ್ರದಂತೆ ಗೌಡರನ್ನು ಸಕಾಲಕ್ಕೆ ಸಭೆಗಳಿಗೆ ಕರೆದುಕೊಂಡು ಹೋಗಿ ಭಾಷಣ ಮಾಡಿಸುವುದು, ಅವರ ಬಿಳಿಯ ಜುಬ್ಬ, ಪಂಚೆ ಮಡಿಯಾಗಿ ದೋಬಿಯಿಂದ ಒಗೆಸಿ ಖಡಕ್ ಇಸ್ತ್ರಿ ಮಾಡಿಸಿ ಪ್ರತಿದಿನವೂ ಒದಗಿಸುವುದೂ ಡ್ರೈವರ್ ನರಸಿಂಹಣ್ಣನವರದೇ ಕೆಲ್ಸ. ಸಮಾಜವಾದಿ ಡ್ರೈವರ್ ನರಸಿಂಹಣ್ಣ ಎಂದೇ ಎಲ್ಲರೂ ಅವರನ್ನು ಕರೆಯುತ್ತಿದ್ದುದು. ಸೋಷಲಿಸ್ಟ್ ಪಾರ್ಟಿಯ ಚುನಾವಣಾ ಪ್ರಣಾಳಿಕೆಯನ್ನು ಅರ್ಥಮಾಡಿಕೊಂಡು ಸಭಿಕರಿಗೆ ಆಡುಮಾತಿನಲ್ಲಿ ಅರ್ಥ ಮಾಡಿಸುವ ಕೆಲ್ಸವನ್ನೂ ಮಾಡುತ್ತಿದ್ದ ನರಸಿಂಹಣ್ಣನವರನ್ನು ನಾವು ಯಾರೂ ಮರೆಯುವಂತಿಲ್ಲ, ಮರೆಯುವುದೂ ಇಲ್ಲ. ಒಂದು ಸಭೆಯಲ್ಲಿ ಶಾಂತವೇರಿಯವರು ತುಂಬಾ ಹೊತ್ತು ಭಾಷಣ ಮಾಡಿ ಎರಡು ಮಹಾಯುದ್ಧಗಳ ಪರಿಣಾಮಗಳನ್ನು ವಿವರಿಸಿ, ಸಾಕಷ್ಟು ತಡವಾಗಿ ಮುಂದಿನ ಊರಿಗೆ ಪ್ರಚಾರ ಭಾಷಣಕ್ಕೆ ಹೋಗುತ್ತಿರುವಾಗ ಈ ನರಸಿಂಹಣ್ಣ ನಿಧಾನಕ್ಕೆ "ಗೌಡ್ರೇ ನಾ ಮಾತಾಡಿದರೆ ಬೈತೀರಿ, ಹೇಳು ಅಂದ್ರೆ ಹೇಳ್ತೀನಿ" ಎಂದ್ರು. ಗೌಡ್ರು "ನರಸಿಂಹ ನೀನೇನು ಬುದ್ಧಿಯಲ್ಲಿ ಕಡಿಮೆಯಾ ಹೇಳು!" ಎಂದಾಗ, "ನಾವೀಗ ಬಂದದ್ದು ಓಟು ಕೇಳಲಿಕ್ಕೆ. ಅದು ಕೇಳದೆ, ಯಾವುದೋ ಮಹಾಯುದ್ಧದ ಪುರಾಣವನ್ನೆಲ್ಲಾ ಮುಂದಿನ ಸಭೆಗೆ ತಡವಾಗುತ್ತಿದ್ದರೂ ಇಲ್ಲಿ ಹೇಳುತ್ತಿದ್ದಿರಲ್ಲ, ಅದೆಲ್ಲ ಚುನಾವಣೆ ಕಾವಿನಲ್ಲಿ ಜನರ ತಲೆಗೆ ಹೋಗುತ್ತದಾ? ಅಷ್ಟೆ ನನ್ನ ತಕರಾರು"ಎಂದು

ಮೌನವಾದ.

ಅದಕ್ಕೆ ಗೌಡ್ರ ಉತ್ತರವೇನಿತ್ತೆಂದ್ರೆ, "ನೋಡು ನರಸಿಂಹ, ನಮ್ಮ ಹಳ್ಳಿಯವರಿಗೆ ಇವನ್ನೆಲ್ಲ ಯಾರು ಹೇಳ್ತಾರೆ? ಕೇವಲ ಓಟು ಕೇಳಿ ಮುಗಿಸುವುದಕ್ಕೆ ನನಗೆ ಸಾಧ್ಯವಾಗೋದಿಲ್ಲ. ನಮ್ಮ ಜನ ಸೇರಿದಾಗ ಅವರ ತಲೆಗೆ ಅನೇಕ ವಿಚಾರಗಳನ್ನು ಹೇಳಲೇಬೇಕೆಂದು ಅನ್ನಿಸ್ತದೆ. ವಿಚಾರ ತಿಳಿದುಕೊಳ್ಳದೆ, ಅವರು ಬುದ್ಧಿವಂತರಾಗೋದು ಯಾವಾಗ ಮಾರಾಯಾ?" ಶಾಂತವೇರಿಯವರು ಚುನಾವಣೆಯಲ್ಲಿ ಬಹುಮತದಿಂದ ಗೆದ್ದಾಗ ನರಸಿಂಹಣ್ಣನನ್ನು ಕೇಳುತ್ತಿದ್ದರು, "ಏನು ನರಸಿಂಹ, ನಾನು ಚುನಾವಣಾ ಭಾಷಣದಲ್ಲಿ ಹೇಳಿದ ವಿಚಾರಗಳೆಲ್ಲ ಅನವಶ್ಯಕವಾಯ್ತಾ?" ಎಂದು. ಡ್ರೈವರ್ ನರಸಿಂಹಣ್ಣ ಶಾಂತವೇರಿಯವರು ಗೆದ್ದ ಸಂತೋಷದಲ್ಲಿ ನಕ್ಕು ಸುಮ್ಮನಾಗುತ್ತಿದ್ದರು.

1970ರಿಂದ ಈಚೆಗೆ ಶಾಂತವೇರಿಯುವರ ಆರೋಗ್ಯ ಕೈಕೊಡಲು ಶುರುವಾಯ್ತು. ಆದರೂ ಹೋಗಲೇಬೇಕಾದ ಸಭೆ ಸಮಾರಂಭಗಳಿಗೆ ಹೋಗುತ್ತಿದ್ದರು. ಮನೆಯ ಎಲ್ಲಾ ಜವಾಬ್ದಾರಿಯನ್ನು ಶ್ರೀಮತಿ ಸೋನಕ್ಕನವರು ನೋಡಿಕೊಂಡು ಹೋಗುತ್ತಿದ್ದರು. ಅವರು ಶಾಲೆಯಲ್ಲಿ ಟೀಚರ್ ಆಗಿದ್ದರಿಂದ ಅದು ಅವರಿಗೆ ಹೆಚ್ಚಿನ ಜವಾಬ್ದಾರಿಯಾಗಿತ್ತು. ಒಂದು ಭಾನುವಾರದ ದಿನ ನಾನೊಬ್ಬನೇ ಬೆಂಗಳೂರಿಗೆ ನಮ್ಮ ನೃಪತುಂಗ ಪ್ರೆಸ್ಸಿನ ಕೆಲಸಕ್ಕೆಂದು ಹೋದವನು ಗೌಡ್ರನ್ನು ಕಂಡು ಬರೋಣವೆಂದು ಅವರ ಮನೆಗೆ ಹೋಗಿದ್ದೆ. ಹೋದಾಗ ಅವರ ಪುಟ್ಟ ಮಕ್ಕಳ ನೆನಪಾಗಿ ಚಾಕಲೇಟು ಬಿಸ್ಕತ್ತು ತೆಗೆದುಕೊಂಡು ಹೋಗಿದ್ದೆ. ಅವರ ಮನೆ ತಲುಪಿದವನೆ ಗೌಡ್ರ ಮಗಳು ಇಳಾಗೀತ ಮತ್ತು ಮಗ ರಾಮ್ ಮನೋಹರ ಇವರನ್ನು ಕರೆದು ಕೊಡಲು ಹೋದೆ. ದಿಂಬಿಗೆ ಒರಗಿಕೊಂಡು ಪೇಪರ್ ಓದುತ್ತಿದ್ದ ಗೌಡರು ತಕ್ಷಣ ನನ್ನನ್ನು ಕರೆದು ಏನದು ಎಂದು ಕೇಳಿದರು. ನಾನು ಮಕ್ಕಳಿಗೆಂದು ಏನೋ ತಿಂಡಿ ತಂದಿದ್ದೆ ಎಂದಾಗ, "ನೀನು ಯಾವಾಗಲೂ ಹೀಗೆ ಮಾಡ್ತೀಯಾ. ಇದು ಸರಿಯಲ್ಲ, ಯಾಕೆಂದ್ರೆ ಮನೆಗೆ ಯಾರು ಬಂದ್ರೂ ಈ ಮಕ್ಕಳು ಬಂದವರ ಕೈಬಾಯಿ ನೋಡೋ ಅಭ್ಯಾಸವಾಗುತ್ತದೆ. ದೊಡ್ಡವರಾದ ಮೇಲೂ, ನೌಕರಿ ಸಿಕ್ಕ ಮೇಲೂ ಈ ಅಭ್ಯಾಸ ಮುಂದುವರಿಯುತ್ತೆ. ನಾ ಹೇಳಿದ್ದು ಅರ್ಥ ಮಾಡಿಕೋ" ಎಂದು ಹೇಳುತ್ತಾ ನನಗೆ ಯಾರೂ ಹೇಳಿಕೊಡದ ಪಾಠವನ್ನು ಸೂಕ್ಷ್ಮವಾಗಿ ಹೇಳಿಕೊಟ್ಟಿದ್ದನ್ನು ನನ್ನ ಜೀವನದ ಉದ್ದಕ್ಕೂ ನೆನಪಿಸಿಕೊಳ್ಳುತ್ತೇನೆ.

ನಂತರ ಗೌಡ್ರು "ಏನು ಬಂದಿದ್ದಿ, ನಿಮ್ಮ ನೃಪತುಂಗ ಮುದ್ರಣಾಲಯ ಹೇಗಿದೆ? ತೇಜಸ್ವಿ "ಸಮಾಜವಾದಿ ಯುವಜನ ಸಭಾ"ದಲ್ಲಿದ್ದಾನಾ? ನಿನ್ನ ಸಂಗೀತಾಭ್ಯಾಸ ಹೇಗಿದೆ? ಅದು ಸರಿ, ಹಿಂದಿನ ಸಾರಿ ಬಂದಾಗ ಎಂ.ಎ. ಗೆ ಸೇರಿದ್ದು ಹೇಳಿದ್ದು ನೆನಪಿದೆ. ಅದೇನಾಯ್ತು?" ಎಲ್ಲ ಕೇಳಿದರು. ಕೋಣಂದೂರು ಲಿಂಗಪ್ಪ 'ಶಾಸನಸಭೆಯಲ್ಲಿ ಶಾಂತವೇರಿ" ಪುಸ್ತಕದ ಕೆಲಸ ಮಾಡುತ್ತಿರುವುದನ್ನೂ ಹೇಳಿದೆ. ಸೋನಕ್ಕನವರು ಕೊಟ್ಟ ಕಾಫಿ ಕುಡಿದು ಬರ್ತೀನೆಂದು ಎಲ್ಲರಿಗೂ ಹೇಳಿ ಹೊರಡುವಾಗ "ಬರ್ತಾ ಇರು, ತಿಂಡಿ ಪಟ್ನ ತರಬೇಡ"ಎಂದು ಶಾಂತವೇರಿಯವರು ಮುಗುಳ್ನಕ್ಕರು. ಇಳಾಗೀತ, ರಾಮ್‌ಮನೋಹರ್ ಹಾಗೇ ಸ್ಟೂಲ್ ಮೇಲಿದ್ದ

ಪ್ಯಾಕಿನಲ್ಲಿದ್ದ ಚಾಕಲೇಟ್, ಬಿಸ್ಕತ್ತು ಕಡೆಗೆ ಕಿರುಗಣ್ಣಿನಿಂದ ನೋಡುತ್ತಿದ್ದ ದೃಶ್ಯ ನಾನೆಂದೂ ಮರೆಯಲಾರೆ. ಮನುಷ್ಯ ಭ್ರಷ್ಟನಾಗೋದಕ್ಕೆ ಸಣ್ಣ ವಿಚಾರಗಳೇ ಸಾಕೆಂದು ಎಚ್ಚರಿಸಿದ ಆ ಘಟನೆ ಈಗಲೂ ನನ್ನ ನೆನಪಿನಲ್ಲಿದೆ.

ಹಾಗೆ ಅವರ ಆರೋಗ್ಯ ಸರಿಯಾಗಿ ಸುಧಾರಿಸಲೇ ಇಲ್ಲ. ತೀರ್ಥಹಳ್ಳಿಯ ಕಾಫಿ ವರ್ಕ್ಸ್ ಮಾಲೀಕರಾದ ರಾಘವರಾವ್ ಜವುಳಿಯವರು ಶಾಂತವೇರಿಯವರ ಆರೋಗ್ಯವನ್ನು ಹೇಗಾದರೂ ಉತ್ತಮಪಡಿಸಲು ತಮ್ಮ ಪಾರ್ಟ್ನರ್ ಶ್ರೀ ನಾಗೇಂದ್ರನಾಥ್‌ರವರಿಗೆ ಹೇಳಿ ಅವರ ಮನೆಯಲ್ಲಿ ಗೌಡರನ್ನು ಉಳಿಸಿಕೊಂಡು ಮಲೆಯಾಳಿ ಪಂಡಿತರಿಂದ ಔಷಧಿ ಬೆರೆಸಿದ ತೈಲದಿಂದ ಮೈ ಉಜ್ಜಿಸಿಕೊಳ್ಳುವ ಅಭ್ಯಂಜನ ಚಿಕಿತ್ಸೆ ಮಾಡಿಸಿದರು. ಆಗ ನಾನು ಬಹಳ ಸಾರಿ ಹೋಗಿ ಮಾತನಾಡಿಸಿಕೊಂಡು ಬರುತ್ತಿದ್ದೆ. ಈ ಚಿಕಿತ್ಸೆಯಿಂದ ಶಾಂತವೇರಿಯವರ ಆರೋಗ್ಯ ಸ್ವಲ್ಪ ಸುಧಾರಿಸಿತ್ತು. ಆ ಸಮಯದಲ್ಲಿ ಎಂದೂ ಕಡಿದಾಳಿನ ನಮ್ಮನೆಯಲ್ಲಿ ಶಾಂತವೇರಿಯವರು ಬಂದು ಊಟ ಮಾಡಿದ್ದಿಲ್ಲವೆಂಬುದು ನೆನಪಿಗೆ ಬಂದು ನಾನವರನ್ನು ನಮ್ಮನೆಗೆ ಊಟಕ್ಕೆ ಕರೆದೆ. ಗೌಡ್ರು "ನಿಮ್ಮ ಮನೆಗಳಿಗೆ ನಾನು ಬಂದೇ ಇಲ್ಲ ಅಲ್ವಾ? ಆಯ್ತು ನಡಿ. ಆದ್ರೆ ನಾನು ಪೂರ್ಣ ಸಸ್ಯಾಹಾರಿ" ಎಂದು ಹೇಳಿ ಬರಲು ಒಪ್ಪಿದರು. ನಾನು ನಮ್ಮ ತಂದೆಯವರ "ಮಾರಿಸ್-8" ಕಾರಿನಲ್ಲಿ ಕಡಿದಾಳಿಗೆ ಕರೆದೊಯ್ಯುತ್ತಿದ್ದಾಗ ಶಾಂತವೇರಿಯವರು "ಈ ಕಾರಿಗೆ ಎಷ್ಟು ಬೆಲೆ?" ಎಂದು ಕೇಳಿದರು. ಯಾಕೆ ಸಾರ್ ಎಂದು ಕೇಳಿದಾಗ ಅವರೆಂದರು, "ಪ್ರತಿ ಸಾರಿ ಯಾರದ್ದಾರೂ ವಾಹನ ಬೇಡ್ಡುವ ಬದಲು ನಮ್ಮದೇ ಒಂದು ಸಣ್ಣ ವಾಹನವಿದ್ದರೆ ಅನುಕೂಲವಿತ್ತು." ಅದರೆ ತಕ್ಷಣ ಏನೋ ಯೋಚಿಸಿ "ಇರುವ ಗೋಟಾಳಿಯೇ ಹೆಚ್ಚಾಗಿರುವಾಗ ಕಾರಿಂದು ಬೇರೆ. ಕಾರುಪಾರು ಏನೂ ಬೇಡ ಮಾರಾಯ. ಬೇಕೆಂದಾಗ ಕಾರಿರುವ ನೀವೆಲ್ಲ ಇದ್ದೀರಲ್ಲ...ಏನಂತೀಯ" ಎಂದು ಮುಗುಳುನಕ್ಕರು.

ಊಟ ಮುಗಿಸಿ ವಾಪಸ್ ಬರುವಾಗ "ಕಳೆದ ವರ್ಷ ಸಮಾಜವಾದಿ ಯುವಜನ ಸಭಾದಿಂದ ಸೊರಬದ ಸಭೆಯಲ್ಲಿ ಈ ದೇಶದಲ್ಲಿ ಒಬ್ಬನಿಗೆ ಒಂದೇ ಉದ್ಯೋಗದ ಹಕ್ಕಿರಬೇಕೆಂದು ನೀನು, ತೇಜಸ್ವಿ, ಲಿಂಗಪ್ಪ, ನಂಜುಂಡಸ್ವಾಮಿ ಮುಂತಾದವರೆಲ್ಲ ವಾದಿಸಿ ನಮ್ಮ ದೇಶದ ಸಂವಿಧಾನವನ್ನೂ ಈ ವಿಚಾರದಲ್ಲಿ ತಿದ್ದುಪಡಿ ಮಾಡಲೇಬೇಕೆಂದು ವಾದ ಮಾಡಿದ್ದಿರಲ್ಲ. ಇವತ್ತು ಊಟ ಮಾಡುವಾಗ ನಿಮ್ಮ ತಂದೆ ಕಡಿದಾಳು ರಾಮಪ್ಪ ಗೌಡರು ನಿನಗೆಂದು ಶಿವಮೊಗ್ಗದ ಹತ್ತಿರ ಸ್ವಲ್ಪ ನೀರಾವರಿ ಜಮೀನು ಖರೀದಿ ಮಾಡಿದ್ದೇವೆಂದು ಹೇಳಿದರು. ನೀನೀಗ ಜಮೀನು ಮಾಡುತ್ತೀಯೋ ಅಥವಾ ತೀರ್ಥಹಳ್ಳಿ ಕಾಲೇಜಿನಲ್ಲಿ ಸೋಷಿಯಾಲಜಿ ಲೆಕ್ಚರರ್ ಆಗಿ ಕೆಲಸ ಮಾಡುತ್ತೀಯೋ?" ಎಂದು ಮಾತಿಗಾರಂಭಿಸಿ, "ಈ ವಿಚಾರಗಳು ನಿನ್ನ ಗಮನದಲ್ಲಿರಲಿ ಎಂದು ಕೇಳಿದೆ. ಏಕೆಂದ್ರೆ ನಾವೇ ಹೇಳಿಕೊಂಡ ಆದರ್ಶಗಳು ನಾಳೆ ನಮಗೇ ತೊಡಕಾಗಬಾರದಲ್ಲವಾ? ಈಗ ನೀನು ತಾಲ್ಲೂಕು ಬೋರ್ಡ್ ಹೈಸ್ಕೂಲ್ ಟೀಚರ್ ಬೇರೆ ಆಗಿದ್ದೀಯ~" ಎಂದು ಮಾತು ಕೊನೆಗಾಣಿಸಿದರು.

ಗೌಡರು ತಮ್ಮನ್ನು ತೀರ್ಥಹಳ್ಳಿಯ ನಾಗೇಂದ್ರನಾಥ್ ಮನೆಗೆ ಬಿಡುವ

ಬದಲು ಪ್ರವಾಸಿ ಮಂದಿರಕ್ಕೆ ಬಿಡಲು ಹೇಳಿದರು. ಆ ಮೇಲೆ ನಾಗೇಂದ್ರನಾಥ್ ಮನೆಗೆ ಹೋಗುವುದಾಗಿ ಹೇಳಿದರು. ನಾನು ಹಾಗೇ ಮಾಡಿದೆ. ಅವರು ಹೇಳಿದ ಮಾತುಗಳನ್ನು ಮತ್ತೆ ಮತ್ತೆ ಮೆಲುಕು ಹಾಕುತ್ತಾ ಕಾರಿನಲ್ಲಿ ವಾಪಸ್ ನಾನು ಮನೆಗೆ ಬಂದೆ. ಗೌಡರು ಹೇಳಿದ ಮಾತುಗಳು ಮನದಲ್ಲಿ ಕೊರೆಯುತ್ತಿತ್ತು. ಸೊರಬದ ಸಮಾಜವಾದಿ ಯುವಜನ ಸಭೆಯಲ್ಲಿ ತೀರ್ಮಾನವಾದದ್ದೇ ಸರಿ ಎಂದು ವ್ಯವಸಾಯ ಒಂದನ್ನೇ ಮುಂದುವರಿಸಿದೆ. ಉಳಿದುದೆಲ್ಲವಕ್ಕೂ ರಾಜೀನಾಮೆ ಕೊಟ್ಟೆ. ಕೋಣಂದೂರು ಲಿಂಗಪ್ಪನವರ ಸಂಪಾದಕತ್ವದಲ್ಲಿ ಸಿದ್ಧವಾದ "ಶಾಸನ ಸಭೆಯಲ್ಲಿ ಶಾಂತವೇರಿ" ಕೃತಿಯನ್ನು ಸಮಾಜವಾದಿ ಯುವಜನ ಸಭಾದ ವತಿಯಿಂದ ತೀರ್ಥಹಳ್ಳಿಯಲ್ಲಿ ಬಿಡುಗಡೆ ಮಾಡಲು ನಾವು ಸಿದ್ಧತೆ ನಡೆಸಿದ್ದು, ಆ ಸಂದರ್ಭದಲ್ಲಿ ಶಾಂತವೇರಿಯವರು ಗೆಳೆಯರೊಂದಿಗೆ ತೀರ್ಥಹಳ್ಳಿಗೆ ಬಂದು ಪ್ರವಾಸಿ ಮಂದಿರದಲ್ಲಿ ಉಳಿದುಕೊಂಡಿದ್ದರು. ಅದೇ ಸಂದರ್ಭದಲ್ಲಿ ಅಲ್ಲಿ ಏರ್ಪಾಡಾಗಿದ್ದ ಅಧ್ಯಯನ ಶಿಬಿರದ ಸಭೆಯೊಂದರಲ್ಲಿ ಎಂ.ಡಿ.ನಂಜುಂಡಸ್ವಾಮಿಯವರು ಸಂಘಟನೆಗೆ ಸಿದ್ಧಾಂತವೆ ನಾಯಕನೇ ಹೊರತು ಯಾವ ವ್ಯಕ್ತಿಯೂ ಅಲ್ಲ ಎಂದದ್ದನ್ನು ಮೂಡುವಳ್ಳಿ ಮಹಾಬಲ ಹೆಗ್ಡೆಯವರು ಶಾಂತವೇರಿಯವರಿಗೆ ತಪ್ಪು ತಪ್ಪಾಗಿ ವರದಿ ಮಾಡಿದ್ದರಿಂದ ಅವರು ಸಿಟ್ಟಾಗಿ, ತಾನು ನಾನು ನಾಯಕನೂ ಅಲ್ಲ, ಸಭೆಗೆ ಬರುವುದೂ ಇಲ್ಲವೆಂದು ಘೋಷಿಸಿದರು. ಇದರಿಂದ ಗಾಬರಿಯಾದ ನಾವು ಅಪರಾತ್ರಿಯಲ್ಲಿ ತೇಜಸ್ವಿ ಜೀಪಿನಲ್ಲಿ ಹೋಗಿ ಅಂದಿನ ಸಭೆಯ ಅಧ್ಯಕ್ಷರಾಗಿದ್ದ ಸದಾಶಿವರಾವ್ ಅವರನ್ನು ಕರೆತಂದು ಅವರಿಂದ ಶಾಂತವೇರಿಯವರಿಗೆ ಸಮಾಧಾನ ಹೇಳಿಸಿ ಪುಸ್ತಕ ಬಿಡುಗಡೆ ಮಾಡಲು ಒಪ್ಪಿಸಿದ್ದಾಯ್ತು. ಅದೇ ಶಾಂತವೇರಿಯವರ ತೀರ್ಥಹಳಿಯ ಕಡೆಯ ಭೇಟಿ.

1971ರ ನವೆಂಬರ್ 24ರಂದು ಶಾಂತವೇರಿಯವರು ಅನಾರೋಗ್ಯದಿಂದ ವಿಕ್ಟೋರಿಯಾ ಆಸ್ಪತ್ರೆ ಸೇರಿದರು. ಬಂದಗದ್ದೆ ರಮೇಶ ಗೌಡರನ್ನು ಆಸ್ಪತ್ರೆಯಲ್ಲಿ ನೋಡಿಕೊಳ್ಳುತ್ತಿದ್ದಾಗ ಹೆಚ್.ಡಿ. ಸುರೇಂದ್ರ ಮತ್ತು ನಾನು ಅವರ ಆಸ್ಪತ್ರೆ ಖರ್ಚಿಗೆಂದು ಸ್ವಲ್ಪ ಹಣ ಕೊಟ್ಟಾಗ ಬಂದಗದ್ದೆ ರಮೇಶ "ಗೌಡ್ರು ತಲೆ ದಿಂಬಿನಡಿ ಇಡಿ. ಸೋನಕ್ಕನವರಿಗೆ ತಲುಪಿಸುವೆ" ಎಂದರು. ಶಾಂತವೇರಿಯವರು 1972 ಜೂನ್ 9ರಂದು ಇಹಲೋಕ ತ್ಯಜಿಸಿದರು. ಅವರೇ ತಿಳಿಸಿ ಹೋದಂತೆ ಯಾವ ಸಂಪ್ರದಾಯವನ್ನೂ, ಶಾಸ್ತ್ರಾಚಾರಗಳನ್ನೂ ಅಚರಿಸದೆ ಬೆಂಗಳೂರಿನಲ್ಲಿ ವಿದ್ಯುತ್ ಚಿತಾಗಾರದಲ್ಲಿ ಸಾವಿರಾರು ಜನ ಸಮಾಜವಾದಿಗಳ ಹಾಗೂ ಸ್ನೇಹಿತರ ಎದುರು ಅಂತ್ಯಕ್ರಿಯೆ ನೆರವೇರಿತು.

ಶ್ರೀ ಶಾಂತವೇರಿ ಗೋಪಾಲಗೌಡ ಮತ್ತು ಸಂಗಡಿಗ ಸೋಷಲಿಸ್ಟ್ ಪಾರ್ಟಿಯವರ "ಉಳುವವನೆ ಹೊಲದೊಡೆಯ" ಹೋರಾಟ ಎರಡು ವರ್ಷದ ನಂತರದಲ್ಲಿ ದೇವರಾಜ ಅರಸ್ ಮುಖ್ಯಮಂತ್ರಿಯಾದಾಗ ಶಾಸನವಾಗಿ ಜಾರಿಗೆ ಬಂತು. ಕರ್ನಾಟಕದ ಲಕ್ಷಾಂತರ ರೈತ ಗೇಣಿದಾರರೆಲ್ಲ ಖಾತೆದಾರರಾದರು. ಶಾಂತವೇರಿ ಗೌಡರ ಆತ್ಮಕ್ಕೆ ಈಗ ಚಿರ ಶಾಂತಿ ದೊರಕಿದಂತಾಯ್ತು.

–ಕಡಿದಾಳು ಶಾಮಣ್ಣ

(ಆಗಸ್ಟ್, 2012)

ಶಾಂತವೇರಿ ಗೋಪಾಲ ಗೌಡರು ಹೀಗಿದ್ದರು...

ಜೆ.ಎಚ್. ಪಟೇಲರು ಚುನಾವಣಾ ರಾಜಕಾರಣಕ್ಕೆ ಪಾದಾರ್ಪಣೆ ಮಾಡಿದ 1960ರ ತಾಲ್ಲೂಕು ಬೋರ್ಡ್ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾಗ ನಾನು-ಅವರ ಕಿರಿಯ ಸೋದರ-ಮುಂಬಯಿನಲ್ಲಿ ಸಂಶೋಧನಾ ಸಹಾಯಕನಾಗಿ ಕೇಂದ್ರ ಸರ್ಕಾರದ ಸಟ್ಟಾ ವ್ಯಾಪಾರವನ್ನು ನಿಯಂತ್ರಿಸುವ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೆ. ಈ ತಾಲ್ಲೂಕು ಬೋರ್ಡ್ ಚುನಾವಣೆ ನಡೆದದ್ದು, ಅಕ್ಟೋಬರ್ 1960ರಲ್ಲಿ. ನಾನು ಈ ಚುನಾವಣೆ ಬಗ್ಗೆ ಆಸಕ್ತಿಯಿಂದ ಒಂದು ವಾರ ರಜೆಯ ಮೇಲೆ ಮುಂಬಯಿನಿಂದ ಕಾರಿಗನೂರಿಗೆ ಬಂದೆ. ಅಲ್ಲಿ ನೋಡಿದರೆ, ಅಣ್ಣನವರಿಗೆ ಜ್ವರ ಬಂದು ದಾವಣಗೆರೆಯ ನಮ್ಮ ಅಕ್ಕನ ಮನೆಗೆ ಶುಶ್ರೂಷೆಗೆ ಹೋಗಿಬಿಟ್ಟಿದ್ದರು. ಹಾಗಾಗಿ ನಾನು ಅಲ್ಲಿಂದ ಸೀದಾ ಅಕ್ಕನ ಮನೆಗೆ ಹೋದೆ. ನಮ್ಮ ಭಾವ ಅಲ್ಲಿ ದೊಡ್ಡ ಮಂಡಿ ವರ್ತಕರಾಗಿದ್ದರು. ನನ್ನನ್ನು ನೋಡಿ ಅಣ್ಣನವರಿಗೆ ಖುಷಿಯಾಯಿತು. "ನೋಡು ಶಿವು, ನಾನು ಕೆಲವು ದಿನ ಎಲ್ಲಿಗೂ ಹೋಗಬಾರದೆಂದು ವೈದ್ಯರು ಸಲಹೆ ಮಾಡಿದ್ದಾರೆ. ನಾಳೆ ಬೆಳಿಗ್ಗೆ ನೀನು ಕಾರು ತೆಗೆದುಕೊಂಡು ಹೊಸನಗರ ತಾಲ್ಲೂಕಿಗೆ ಹೋಗು. ಅಲ್ಲಿ ಯಾವುದೋ ಊರಿನಲ್ಲಿ ಗೋಪಾಲಗೌಡರು ಕ್ಯಾಂಪ್ ಮಾಡಿ ಚುನಾವಣಾ ಕಾರ್ಯದಲ್ಲಿ ತೊಡಗಿದ್ದಾರೆ. ಅವರನ್ನು ಹುಡುಕಿ ಕರೆದುಕೊಂಡು ನಮ್ಮ ಬಸವಾಪಟ್ಟಣ ಕ್ಷೇತ್ರದಲ್ಲಿ ಸುತ್ತಾಡಿಸಿ, ಸಾಧ್ಯವಾದ ಕಡೆಗೆ ಭಾಷಣವನ್ನು ಏರ್ಪಡಿಸಿ, ಪುನಃ ಅವರನ್ನು ಬಿಟ್ಟು ಬಾ" ಎಂದು ಹೇಳಿದರು.

ನಾನು ಅದೇ ರೀತಿ ಮರುದಿನ ನಮ್ಮ ಕಾರನ್ನು ತೆಗೆದುಕೊಂಡು ಸೀದಾ ಆಯನೂರಿಗೆ ಹೋದೆನು. ಗೋಪಾಲಗೌಡರು ಅಲ್ಲೇ ಇರಬಹುದೆಂಬ ಊಹೆ ಸತ್ಯವಾಯಿತು. ನಾನು ಹೋದಾಗ ರಾತ್ರಿ ಸುಮಾರು 8.30 ಗಂಟೆಯಾಗಿತ್ತು. ಬೆಳಿಗ್ಗೆ ನಾನು ವಿಚಾರಿಸಿದಾಗ, ಗೋಪಾಲಗೌಡರು ಒಬ್ಬ ರೈತನ ಮನೆಯಲ್ಲಿ ತಂಗಿದ್ದರು ಎಂದು ಗೊತ್ತಾಯಿತು. ನಾನು ಆ ಮನೆಗೆ ಹೋದೆ. ಅವರು ತಾವು ಮಲಗಿದ್ದ ಹಾಸಿಗೆ, ಕಟ್ಟೆ ಮೇಲೆ ಸುತ್ತಿಟ್ಟು, ಬೆಳಗಿನ ನಿತ್ಯಕರ್ಮಗಳನ್ನು ತೀರಿಸಲು ಗದ್ದೆಯ ಕಡೆ ಹೋಗಿದ್ದರು. ಅಂದರೆ ಆ ಮನೆಯಲ್ಲಿ ಯಾವ ನಾಗರೀಕ ಸೌಲಭ್ಯಗಳೂ ಇರಲಿಲ್ಲ. ಅಂತಹ ಬಡ ರೈತನ ಮನೆಯಲ್ಲಿ ಗೋಪಾಲಗೌಡರು ಮಲಗಿದ್ದರು. ನಾನು ಅವರ ವಿಷಯವನ್ನು ಕೇಳಿದ್ದೆನೇ ವಿನಃ ಭೇಟಿ ಆಗಿರಲಿಲ್ಲ. 1955ರಿಂದ ಮುಂಬಯಿನಲ್ಲಿ ವಿದ್ಯಾರ್ಥಿಯಾಗಿ, ಎಂ.ಎ., ಎಲ್.ಎಲ್.ಬಿ. ಶಿಕ್ಷಣವನ್ನು ಪಡೆದು ಕೆಲಸಕ್ಕೆ ಸೇರಿದ್ದ ನಾನು ಎಷ್ಟು ಸಾಮಾನ್ಯರಂತೆ ನಡೆದುಕೊಳ್ಳುತ್ತಿದ್ದಾರೆ, ಗೋಪಾಲಗೌಡರು ಅಂದುಕೊಂಡೆ. ಈಗಿನ ನಾಯಕರುಗಳ ಚುನಾವಣಾ ವೈಖರಿ ಬಗ್ಗೆ ಹೇಳುವ ಅವಶ್ಯಕತೆ ಇಲ್ಲ.

ನಂತರ ಗೋಪಾಲಗೌಡರು ಬಂದರು. ನಾನು ನಮಸ್ಕಾರ ಮಾಡಿ, ನನ್ನ ಪರಿಚಯವನ್ನು ಮಾಡಿಕೊಂಡೆ. ಅವರು ಬಹಳ ಸಂತೋಷದಿಂದ "ಓಹೋ ಮುಂಬಯಿನ ಪಟೇಲರು ನೀವಾ" ಎಂದು ಹಾಸ್ಯ ಮಾಡಿದರು. "ನಾನು ತಮ್ಮನ್ನ


ಬಸವಾಪಟ್ಟಣ ಚುನಾವಣಾ ಪ್ರಚಾರಕ್ಕೆ ಕರೆದುಕೊಂಡು ಹೋಗಲು ಬಂದಿದ್ದೇನೆ. ಅಣ್ಣನವರು ಹುಷಾರಿರಲಿಲ್ಲದ್ದರಿಂದ ನನ್ನನ್ನು ಕಳುಹಿಸಿ ಕೊಟ್ಟಿದ್ದಾರೆ" ಎಂದು ಹೇಳಿದೆ. ಸ್ವಲ್ಪ ಹೊತ್ತು ಸುಮ್ಮನಿದ್ದು, ತಮ್ಮದೇ ಆದ ವಿಶಿಷ್ಟವಾದ ರೀತಿಯಲ್ಲಿ ಗೌಡರು "ನಿಮ್ಮ ಅಣ್ಣನವರಿಗೆ ತಿಳಿಸಿ, ನಾನು ಪಟೇಲರ ಚುನಾವಣೆಗೆ ಪ್ರಚಾರ ಮಾಡುವ ಅವಶ್ಯಕತೆ ಇಲ್ಲ, ಅವರು ಗೆದ್ದೇ ಗೆಲ್ಲುತ್ತಾರೆ. ಈ ಮಲೆನಾಡ ಪ್ರದೇಶದಲ್ಲಿ ಬಡವರು ನಮ್ಮ ಪಕ್ಷದಿಂದ ಅಭ್ಯರ್ಥಿಗಳಾಗಿದ್ದಾರೆ, ಅವರ ಪರವಾಗಿ ನಾನು ಪ್ರಚಾರ ಮಾಡಬೇಕು" ಎಂದು ಹೇಳಿದರು.

ಅವರು ಬರುವುದಿಲ್ಲವೆಂದು ಹೇಳುವ ರೀತಿಯಲ್ಲಿ ಪಟೇಲರ ಮೇಲೆ ಅಭಿಮಾನವೂ ಇತ್ತು. ಅದಕ್ಕಿಂತ ಹೆಚ್ಚಾಗಿ ಅವರಿಗಿಂತ ಬಡವರಾಗಿದ್ದವರ ಮೇಲೆ ಅಭಿಮಾನ ಹೆಚ್ಚಾಗಿ ಇತ್ತು. ಇದು ನಿಜವಾದ ಸಮಾಜವಾದಿ ನಾಯಕನ ಲಕ್ಷಣ. ಅವರು ಬರುವುದಿಲ್ಲ ಎಂದು ಹೇಳಿದರು. ಅಲ್ಲಿ ಅವರು ಸಾಮಾನ್ಯರಂತೆ ಇದ್ದರು. ನಾನು ವಿಚಾರಿಸಿದಾಗ ಅವರು ಓಡಾಡುತ್ತಿದ್ದ ವಾಹನ ಬಹುಪಾಲು ಗ್ರಾಮಾಂತರ ಬಸ್. ಅದು ಇಲ್ಲದಿದ್ದರೆ, ಯಾವುದಾದರೂ ಮೋಟಾರ್ ಸೈಕಲ್ ಆಗಿತ್ತು. ಕೆಲವೊಮ್ಮೆ ಎತ್ತಿನ ಬಂಡಿಯಲ್ಲೂ ಓಡಾಡುತ್ತಿದ್ದರು. ಅವರ ವರ್ತನೆಯನ್ನು ನಾನು ಎಂದೂ ಮರೆಯುವುದಕ್ಕೆ ಸಾಧ್ಯವಿಲ್ಲ. ನಾನು ಹಾಗೇ ವಾಪಸ್ಸು ಬಂದೆ. ಚುನಾವಣೆ ತನಕವೂ ಇರಲಿಲ್ಲ, ನಾನು ಮುಂಬಯಿಗೆ ವಾಪಸ್ಸು ಹೋದೆ. ಅಣ್ಣ ಪಟೇಲರು ಗೆದ್ದರೆಂಬ ಸುದ್ದಿ ಬಂತು. ಅದೇ ಅಣ್ಣನವರ ಚುನಾವಣಾ ರಾಜಕೀಯಕ್ಕೆ ನಾಂದಿಯಾಯಿತು. ಮುಂದೆ ಅವರು ಮುಖ್ಯಮಂತ್ರಿಯಾಗುವವರೆಗೂ ಅದು ಬೆಳೆಯಿತು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

–ಪ್ರೊ. ಎಸ್.ಎಚ್. ಪಟೇಲ್

(ಆಗಸ್ಟ್, 2013)

ಗೋಪಾಲಗೌಡರ ಗುಡುಗು... ಮಿಣುಕಮ್ಮನ ಮಿಡುಕು...



ಆಗ ಶಾಂತವೇರಿ ಗೋಪಾಲಗೌಡರು ತೀರ್ಥಹಳ್ಳಿ ಕ್ಷೇತ್ರದ ಶಾಸಕರು. ಸಮಾಜವಾದಿ ಪಕ್ಷದ ಕಛೇರಿ ಆರಗಕ್ಕೆ ತಿರುಗುವ ರಸ್ತೆಯಲ್ಲಿ ಕಟ್ಟಡವೊಂದರ ಮಹಡಿ ಮೇಲಿತ್ತು. ಸಾಮಾನ್ಯವಾಗಿ ಶಾಂತವೇರಿಯವರು ತೀರ್ಥಹಳ್ಳಿಯಲ್ಲಿದ್ದಾಗ ಹೆಚ್ಚು ಸಮಯವನ್ನು ಪಕ್ಷದ ಕಛೇರಿಯಲ್ಲಿ ಕಳೆಯುತ್ತಿದ್ದರು. ಅವರು ಪಕ್ಷದ ಕಛೇರಿಯಲ್ಲಿದ್ದಾರೆ ಎಂದರೆ ಗ್ರಾಮಸ್ಥರು ಮತ್ತು ಪಟ್ಟಣದವರೂ ಸಹ ಶಾಂತವೇರಿಯವರಲ್ಲಿ ತಮ್ಮ ಕುಂದು ಕೊರತೆಗಳನ್ನು ಹೇಳಿಕೊಳ್ಳಲು ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷದ ಕಛೇರಿಯಲ್ಲಿ ಬಂದು ಸೇರುತ್ತಿದ್ದರು. ಸಂತೆಯ ದಿನವಾದರಂತೂ ತುಂಬಾ ಜನ ಸೇರುವುದೊಂದು ವಿಶೇಷವಾಗಿತ್ತು.

ಹೀಗೇ, ತೀರ್ಥಹಳ್ಳಿಯ ಸಂತೆಯ ದಿನದಂದು ಕಛೇರಿಯಲ್ಲಿ ತುಂಬಾ ಜನ ಸೇರಿದ್ದರು. ಆಗ ಮಳೆಗಾಲವೆಂದು ಕಾಣುತ್ತದೆ. ತುಂಬಾ ಹೊತ್ತು ಪ್ರವಾಹ ಸಂತ್ರಸ್ತ ಜನರ ಸಮಸ್ಯೆಗಳನ್ನು ಶಾಂತವೇರಿಯವರು ಸಹನೆಯಿಂದ ಆಲಿಸುತ್ತಿದ್ದಂತೆ ಅವರಿಗೆ ಏಕೋ ಸಿಟ್ಟೇರಿತು. ಅವರ ಮುಖ ಕೆಂಪಗಾಯಿತು. ಅವರು ಇದ್ದಕ್ಕಿದ್ದಂತೆ 'ನೋಡ್ರಯ್ಯಾ, ನೀವೆಲ್ಲಾ ಅಹವಾಲು ಹೇಳುತ್ತಾ ಇಲ್ಲಿ ಪಕ್ಷದ ಕಛೇರಿಯಲ್ಲಿ ಕುಳಿತು ಜಮಖಾನ ಸವೆಸಿದರೆ ಕೆಲಸ ಆಗೋದಿಲ್ಲ. ನಿಮಗೆ ಕೆಲಸ ಆಗಿಲ್ಲವೆಂದು ಸಿಟ್ಟು ಬಂದಿದ್ದೇ ಹೌದಾದರೆ ನಮ್ಮ ಪಕ್ಷದ ಬಾವುಟ ಹಿಡಿದು ನಿಮ್ಮ ಬೇಡಿಕೆಗಳನ್ನು ಗಟ್ಟಿಯಾಗಿ ಕೂಗುತ್ತಾ ಸುತ್ತಮುತ್ತ ಇದ್ದವರನ್ನೂ ಸೇರಿಸಿಕೊಂಡು ದೊಡ್ಡ ಮೆರವಣಿಗೆಯಲ್ಲಿ ತಹಸೀಲ್ದಾರ್ ಕಛೇರಿಗೆ ಹೋಗಿ ಮನವಿ ಪತ್ರ ಕೊಟ್ಟು, ನಮ್ಮ ಕೆಲಸಗಳನ್ನು ಏಕೆ ಮಾಡಿಕೊಡಲಿಲ್ಲ? ಎಂದು ದಬಾಯಿಸೋಣ. ಮಿಜಿಮಿಜಿ ಎಂದು ಹರಟೆ ಹೊಡೆದುಕೊಂಡು ಕಾಲಹರಣ ಮಾಡಿ ಉಪಯೋಗವಿಲ್ಲ.' ಎನ್ನುತ್ತಾ "ನಿಮಗೆಲ್ಲ ಸ್ವಲ್ಪ ಸಿಟ್ಟು ಬರಬೇಕು. ಇಲ್ಲದಿದ್ರೆ ವ್ಯವಸ್ಥೆ ಸರಿ ಮಾಡಕ್ಕಾಗಲ್ಲ" ಎಂದು ಗುಡುಗಿದರು..

ಗೌಡರ ಮಾತು ಕೇಳಿದೊಡನೆ ಒಂದಷ್ಟು ಜನ ಗುಜು ಗುಜು ಮಾತಾಡಿಕೊಂಡು ತಹಸೀಲ್ದಾರ್ ಕಛೇರಿಗೆ ಹೋಗಿ ಅಧಿಕಾರಿಗಳಿದ್ದಾರೆಂದು ಖಚಿತ ಪಡಿಸಿಕೊಂಡು ಬಂದರು. ಸರಿ, ಮರುಕ್ಷಣವೇ ಗೋಪಾಲಗೌಡರು ಮತ್ತು ಪಕ್ಷದ ಕಾರ್ಯದರ್ಶಿಗಳಾಗಿದ್ದ ಕೋಣಂದೂರು ಲಿಂಗಪ್ಪನವರು ಜನರ ಜೊತೆ ಕೆಳಗಿಳಿದು ಬಂದರು. ಗುಂಪು ಮೆರವಣಿಗೆ ಹೊರಟಿತು. ಎಂದಿನಂತೆ ಮೂಡುವಳ್ಳಿ ಮಹಾಬಲ ಹೆಗಡೆ ಜನರನ್ನು ಕೂಡಿಸಿ ಕೆಂಪು ಟೋಪಿಯೊಡನೆ ಬಾವುಟ ಹಿಡಿದು ಜೈಕಾರ ಕೂಗುತ್ತಾ ಮೆರವಣಿಗೆ ಹೊರಟರು. ಅಕ್ಕ ಪಕ್ಕದ ಅಂಗಡಿಯವರೆಲ್ಲ ಏನಿದೆಂದು ರಸ್ತೆಗೆ ಬಂದು ಕುತೂಹಲದಿಂದ ನೋಡತೊಡಗಿದರು. ನಾವು ಸಾವಿರ ಜನರಿರುವ ಉತ್ಸಾಹದಲ್ಲಿ ಜೈಕಾರ ಕೂಗುತ್ತಾ ಹೊರಟೆವು.

ತಹಸೀಲ್ದಾರ್ ಕಛೇರಿಗೆ ಮೊದಲು ಭಗತರು ಎನ್ನುವವರ ಅಂಗಡಿಯಿತ್ತು. ತುಂಬಾ ಹಳೆ ದಿನಸಿ ಅಂಗಡಿ. ನಮ್ಮ ಕಡಿದಾಳು ಕುಟುಂಬದವರೂ ಅವರಲ್ಲೇ ವಹಿವಾಟು ನಡೆಸುತ್ತಿದ್ದೆವಾದ್ದರಿಂದ ಅವರು ಮೆರವಣಿಗೆಯಲ್ಲಿದ್ದ ನನ್ನನ್ನು ಗುರುತಿಸಿ ಕರೆದರು. ಮೆಲ್ಲಗೆ, ಬೇಸರದಿಂದ 'ಏನಿದು? ಶಾಂತವೇರಿಯವರ ಮುಂದಾಳತ್ವದಲ್ಲಿ ಹಿಡಿಯಷ್ಟು ಜನ ತಾಲ್ಲೂಕು ಆಫೀಸಿಗೆ ಮೆರವಣಿಗೆ ಹೋದರೆ, ಅದಕ್ಕೊಂದು ಮರ್ಯಾದೆ ಬೇಡವಾ ಮಾರಾಯ! ಯಾಕೆ ಹೀಗಾಯಿತು?' ಎಂದು ಕೇಳಿದರು.

ನಾವು ಆವರೆಗೆ ಮೆರವಣಿಗೆಯನ್ನು ಹಿಂದಕ್ಕೆ ತಿರುಗಿಯೇ ನೋಡಿರಲಿಲ್ಲ. ಮೆರವಣಿಗೆ ಪಕ್ಷದ ಕಛೇರಿಯಿಂದ ಮುಂದೆ ಸಾಗಿದಂತೆ ಜನ ಸಂತೆಯಲ್ಲಿನ ತಮ್ಮ ವ್ಯವಹಾರಗಳಿಗಾಗಿಯೋ ಅಥವಾ ತಂತಮ್ಮ ದೈನಂದಿನ ಕೆಲಸ-ಕಾರ್ಯಗಳಿಗಾಗಿಯೋ ಅಲ್ಲಲ್ಲೇ ಉದುರಿ ಹೋಗಿದ್ದರು. ನಾನು ಗಾಬರಿಯಾಗಿ ಮುಜುಗರದಿಂದ ಮೆಲ್ಲಗೆ ಗೌಡರ ಬಳಿ ಹೋಗಿ 'ಯಾಕೋ ಜನ ಬರ್ತಿಲ್ಲ ಸಾರ್. ಸಂತೆ ಬೇರೆ' ಎಂದೆ. ಗೌಡರು ಈಗ ಸಿಟ್ಟಾಗುವರೆಂದು ನಾನು ಕಾಯುತ್ತಿದ್ದರೆ,

ಅವರು ನನ್ನ ನಿರೀಕ್ಷೆಗೆ ವಿರುದ್ಧವಾಗಿ, ಚೂರೂ ಬೇಸರ ತೋರಿಸದೆ ನನ್ನನ್ನೇ ಸಮಾಧಾನಪಡಿಸುವವರಂತೆ ನಿರ್ಲಿಪ್ತವಾಗಿ 'ಜನ ಯಾವಾಗಲೂ ಹಾಗೇ. ಆದರೆ ಅಂಗಡಿ ಕಟ್ಟೆಯಲ್ಲಿ ಕೂತುಕೊಂಡು ಈ ಕಡೆ ಇಣುಕುತ್ತಿದ್ದಾರಲ್ಲ ಅವರೆಲ್ಲ ಯಾರೆಂದು ತಿಳಿದಿದ್ದೀಯಾ? ಎಲ್ಲ ನಮ್ಮವರೇ ಎಂದು ತಿಳಿದುಕೊಂಡು ನಾವು ಮುಂದೆ ಸಾಗಿ ತಹಸೀಲ್ದಾರ್‌ರಿಗೆ ನಮ್ಮ ಮನವಿ ಪತ್ರ ಕೊಟ್ಟು ಎಂಡಾರ್ಸ್‌ಮೆಂಟ್ ಪಡೆದರಾಯಿತು. ಪರಿಹಾರದ ಹಣ ಸರ್ಕಾರದಿಂದ ಬಂದ ನಂತರ ನೋಡು, ದಾರಿಯಲ್ಲಿ ಉದುರಿ ಹೋದ ಜನವೇ ಇಲ್ಲಿಗೆ ನಿಮಗಿಂತ ಮುಂಚೆ ಬಂದು ತಮ್ಮ ಪರಿಹಾರವನ್ನು ಪಡೆದಿರುತ್ತಾರೆ. ಅಂಗಡಿ ಮುಂಗಟ್ಟುಗಳ ಬಳಿ ನಿಂತು ಕಣ್ಣಗಲಿಸಿ ನಮ್ಮನ್ನು ಇಣುಕಿ ನೋಡುತ್ತಿದ್ದಾರಲ್ಲಾ, ಅವರೆಲ್ಲ ನಮ್ಮ ಮೆರವಣಿಗೆಯಲ್ಲಿ ಇದ್ದಾರೆಂದು ತಿಳಿದೇ ನಾವು ಮುಂದೆ ಸಾಗಬೇಕು. ಹಿಂದಿರುಗಿ ನೋಡಬಾರದು' ಎಂದರು. 'ಕಷ್ಟದಲ್ಲಿರುವವರಿಗೆ ಪರಿಹಾರ ಸಿಕ್ಕುವುದಷ್ಟೇ ಮುಖ್ಯ' ಎಂದು ಸೇರಿಸಿದರು. ಅವರು ಅಲ್ಲಿದ್ದ ಒಂದಿಪ್ಪತ್ತೈದು ಜನರೊಡನೆ ನಮ್ಮಿಂದ ಜೈಕಾರ ಹಾಕಿಸುತ್ತಾ ಯಾವ ಬೇಸರವೂ ಇಲ್ಲದೇ ಮೆರವಣಿಗೆಯಲ್ಲಿ ಮುಂದುವರೆದು ತಹಸೀಲ್ದಾರ್‌ರವರನ್ನು ಕಂಡು ಇಡೀ ತಾಲ್ಲೂಕಿನ ಪ್ರವಾಹ ಸಂತ್ರಸ್ತರಿಗೆ ಪರಿಹಾರ ಮಂಜೂರು ಮಾಡಿಸಿದರು.

ಆದರೆ ನನಗೆ ಈ ಸಂದರ್ಭ ನೆನಪಿರುವುದು ಈ ಎಲ್ಲ ವಿವರಗಳ ಕಾರಣದಿಂದಲ್ಲ. ಬದಲಿಗೆ, ಸಮಾಜವಾದಿ ಪಕ್ಷದ ಎಲ್ಲ ಮೆರವಣಿಗೆಗಳಲ್ಲೂ ಪಾಲ್ಗೊಳ್ಳುತ್ತಿದ್ದ ಮಿಣಕಮ್ಮ ಎಂಬ ಕೂಲಿಕಾರ ಹೆಣ್ಣುಮಗಳಿಂದಾಗಿ. ಕಾಗೋಡು ಸತ್ಯಾಗ್ರಹದಲ್ಲೂ ಭಾಗವಹಿಸಿ ಲೋಹಿಯಾ ಅವರ ಗಮನವನ್ನು ಸೆಳೆದಿದ್ದ ಈ ಹೆಣ್ಣು ಮಗಳು ಸದರಿ ಮೆರವಣಿಗೆಯಲ್ಲೂ ಭಾಗವಹಿಸಿದ್ದರು. ಆಕೆ ತಹಸೀಲ್ದಾರ್ ಕಛೇರಿಯ ಬಳಿ ಹಣೆ ಮೇಲೆ ಕೈ ಇಟ್ಟು ಮೆರವಣಿಗೆಯನ್ನು ನೋಡುತ್ತಾ ಅದರಲ್ಲಿ ಇಪ್ಪತ್ತೈದೇ ಜನರಿದ್ದುದನ್ನು ಕಂಡು ಸಂಕಟಪಟ್ಟು 'ಈ ಜನ ಮೆರವಣಿಗೆಯಲ್ಲಿ ಸೇರದೆ ಅಂಗಡಿ ಕಟ್ಟೆಯಲ್ಲಿ ನಿಂತುಕೊಂಡು ಬರೀ ಇಣುಕಿ ನೋಡುತ್ತಾ ಗೌಡರಿಗೆ ಮೋಸ, ಅವಮಾನ ಮಾಡವರಲ್ಲಾ! ಇವರಿಗೆ ಒಳ್ಳೆದಾಗದಿಲ್ಲ' ಎಂದು ಉದ್ಗರಿಸುತ್ತಿದ್ದಾಗ ನಾನು ನನ್ನ ಕ್ಯಾಮೆರಾ ಕ್ಲಿಕ್ಕಿಸಿದೆ. ಆ ಚಿತ್ರವೇ ಈ ಲೇಖನದ ಜೊತೆಗಿರುವುದು. ಈ ಚಿತ್ರಕ್ಕೆ ಶಿವಮೊಗ್ಗ ಭಗವಾನ್ ನಡೆಸುವ ಛಾಯಾಚಿತ್ರ ಸ್ಪರ್ಧೆಯಲ್ಲಿ ಬಹುಮಾನ ಕೂಡ ಬಂದಿತ್ತು.

–ಕಡಿದಾಳು ಶಾಮಣ್ಣ

(ಆಗಸ್ಟ್, 2013)

ಸಮಾಜವಾದಿಗಳು ಮರೆತ ಮಿಣುಕಮ್ಮ: ಒಂದು ಶ್ರದ್ಧಾಂಜಲಿ



ತೀರ್ಥಹಳ್ಳಿಯಲ್ಲಿ ಸಮಾಜವಾದಿ ಪಕ್ಷ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಸಂದರ್ಭದಲ್ಲಿ ಶಾಂತವೇರಿ ಗೋಪಾಲಗೌಡರ ಅಭಿಮಾನಿಗಳು, ಹಿಂಬಾಲಕರು ಆಗಿದ್ದ ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿದ್ದರು. ಬೆಳಕಿಗೆ ಬಂದವರು ಕಡಿಮೆ. ಕೆಲವರು ಅಜ್ಞಾತರಾಗಿದ್ದುಕೊಂಡು ಗೌಡರ ಸೇವೆಯ ಮೂಲಕ ತಮ್ಮ ಕೊಡುಗೆ ನೀಡಿದರು. ತೀರ್ಥಹಳ್ಳಿಯ ಪ್ರವಾಸೀ ಮಂದಿರದಲ್ಲಿ ಆಯಾ ಆಗಿದ್ದ ಗುತ್ತ್ಯಮ್ಮ ಅಂಥವರಲ್ಲೊಬ್ಬರು. ಗೌಡರು ಅಲ್ಲಿ ತಂಗಿದ್ದಾಗ ಅವರ ಊಟೋಪಚಾರ, ಯೋಗಕ್ಷೇಮ ನೋಡಿಕೊಳ್ಳುವಲ್ಲಿ ಈ ಮಹಿಳೆ ತನ್ಮಯತೆ ತೋರುತ್ತಿದ್ದರಂತೆ. ಬಸವಾನಿ ಸಾವಿತ್ರಮ್ಮ ಬಡ ಹೆಣ್ಣು ಮಕ್ಕಳಿಗಾಗಿ ಸುಶ್ರೂಷಾ ಕೇಂದ್ರವನ್ನು ಸ್ಥಾಪಿಸಿ ಅಲ್ಲಿ ಹೆರಿಗೆ ಮುಂತಾಗಿ ಹೆಣ್ಣು ಮಕ್ಕಳ ಸೇವೆ ಮಾಡಿ ಸಮಾಜವಾದವನ್ನು ಅನುಷ್ಠಾನಗೊಳಿಸಿದರು. ಇಂಥವರಿಗಿಂತ ಭಿನ್ನವಾಗಿ ಮಿಣುಕಮ್ಮ ಎಂಬ ದಲಿತ ಮಹಿಳೆಯೊಬ್ಬಳು ಗೌಡರ ಬೆಂಬಲಿಗಳಾಗಿ ಬಹಿರಂಗವಾಗಿಯೇ ಓಡಾಡಿ ನಾಯಕಿ ಎನಿಸಿಕೊಂಡದ್ದು ವಿಶೇಷ. ವೀರಾವೇಷದ ಮಾತುಗಳನ್ನಾಡುತ್ತ ಗೌಡರ ರಕ್ಷಣೆಗೆ ನಿಲ್ಲುತ್ತಿದ್ದ ಈಕೆ ವಿರೋಧ ಪಕ್ಷದವರಿಗೆ ದುಸ್ವಪ್ನವೇ ಆಗಿದ್ದಳು.

ಮಿಣುಕಮ್ಮ ಮೂಲತಃ ಮೂಡಬಿದರೆಯವರು. ಗಂಡ ಕಾರ್ಕಳದ ಬೀರಪ್ಪ. ಕೃಷಿ ಕಾರ್ಮಿಕರಾಗಿ ಘಟ್ಟದ ಮೇಲೆ ಬಂದು ಆರಗದ ಬಳಿ ನೆಲೆಸಿದರು. ಆರು ಮಕ್ಕಳಿದ್ದ ತುಂಬು ಕುಟುಂಬ. ಶಾಂತವೇರಿಗೆ ಸಮೀಪದಲ್ಲೇ ಇದ್ದಿದ್ದರಿಂದ ಗೌಡರ ವ್ಯಕ್ತಿತ್ವದ ಪರಿಚಯ ಪ್ರಭಾವ ಸಹಜವಾಗಿಯೇ ಇತ್ತು. ಒಮ್ಮೆ ಗೌಡರು ಇವರ ಬಿಡಾರದ ಹತ್ತಿರ ಬಂದರು. ನೀವೇನಾ ಮಿಣುಕಮ್ಮ ಅಂದರು. ನಾಳೆ ಆರಗದಲ್ಲಿ ಮೀಟಿಂಗ್ ಇದೆ ಬರಬೇಕಲ್ಲ ಅಂದರು. ಗರ್ಭಿಣಿ ಮಿಣುಕಮ್ಮ ತನ್ನ ಇನ್ನೊಂದು ಪುಟ್ಟ ಮಗುವಿನೊಂದಿಗೆ ಹೋದರು.

ಅದು ಕಾಗೋಡು ಹೋರಾಟ. ಸತ್ಯಾಗ್ರಹಿಯಾಗಿ ಬಂಧಿತರಾದ ಮಿಣುಕಮ್ಮ ಮೂರು ತಿಂಗಳು ಬಳ್ಳಾರಿ ಜೈಲಿನಲ್ಲಿ ವಾಸ. ಅಲ್ಲಿ ಆಕೆ ಒಬ್ಬಳೇ ಹೆಂಗಸು. ಇದನ್ನು ತಿಳಿದ ಲೋಹಿಯಾ ಮುಂದೊಮ್ಮೆ ಭಾರತೀಯ ಮಹಿಳೆಯರ ಶಕ್ತಿ–ಸಾಮರ್ಥ್ಯಗಳ ಬಗ್ಗೆ ಬರೆಯುವಾಗ ಮಿಣುಕಮ್ಮನನ್ನು ನೆನಪಿಸಿಕೊಂಡರು. ಈ ಅವಿದ್ಯಾವಂತ ದಲಿತ ಕೂಲಿ ಕಾರ್ಮಿಕಳಿಗೆ ಸಮಾಜವಾದ ತಿಳಿದಿರಲಿಕ್ಕಿಲ್ಲ. ಗೌಡರ ಬಗೆಗಿನ ಅಭಿಮಾನ, ಪಕ್ಷದ ಪರವಾದ ಹೋರಾಟವೇ ಅವರ ಸರ್ವಸ್ವವಾಗಿತ್ತು. ದೊಡ್ಡ ಗಂಟಲಿನ ಮಿಣುಕಮ್ಮ ಬಾಯಿಬಿಟ್ಟರೆಂದರೆ ಗೌಡರ ರಾಜಕೀಯ ವಿರೋಧಿಗಳ

ಜಂಘಾಬಲವೇ ಉಡುಗಿಹೋಗುತ್ತಿತ್ತಂತೆ!

ಗೋಪಾಲಗೌಡರು ಶಾಸಕರಾಗಿದ್ದ ಸಂದರ್ಭದಲ್ಲಿ ಒಮ್ಮೆ ಪ್ರವಾಹ ಪರಿಹಾರ ಕೇಳಿ ಹಕ್ಕೊತ್ತಾಯ ಮಾಡುವುದಕ್ಕಾಗಿ ತೀರ್ಥಹಳ್ಳಿಯಲ್ಲಿ ಪಕ್ಷದ ಕಛೇರಿಯಿಂದ ತಾಲ್ಲೂಕು ಕಛೇರಿವರೆಗೆ ಮೆರವಣಿಗೆ ತೆಗೆದರಂತೆ. ಆರಂಭದಲ್ಲಿ ಸಾಕಷ್ಟು ಜನ ನೆರೆದರು. ಮೆರವಣಿಗೆ ಮುಂದುವರಿದಂತೆ ಕರಗಿ ಹೋದರು. ತಾಲ್ಲೂಕು ಕಛೇರಿಗೆ ಏರುವ ಮೆಟ್ಟಿಲು ಹತ್ತಿ ತಿರುಗಿ ನೋಡಿದರೆ ಬೆರಳೆಣಿಕೆಯಷ್ಟೂ ಜನರಿರಲಿಲ್ಲ. ಮಿಣುಕಮ್ಮ ಅಲ್ಲೇ ಗಳಗಳನೆ ಅತ್ತುಬಿಟ್ಟರಂತೆ. ಆಗ ಗೋಪಾಲಗೌಡರೇ ಅವರನ್ನು ಸಮಾಧಾನ ಪಡಿಸಿದರಂತೆ.

ಸಮಾಜವಾದಿ ಹಿರಿಯ ನಾಯಕರಾದ ಸದಾಶಿವರಾಯರು, ಶಾಮೈತಾಳರು, ಕಡಿದಾಳು ಶಾಮಣ್ಣ, ಹುಗಳವಳ್ಳಿ ಸುರೇಂದ್ರ ಇವರೆಲ್ಲರ ಒಡನಾಟ ಮಿಣುಕಮ್ಮನವರಿಗಿತ್ತು. ಸದಾಶಿವರಾಯರು ಈಕೆಯನ್ನು ತಮಾಷೆ-ಪ್ರೀತಿಗಳಿಂದ ಮೇನಕಮ್ಮ ಎಂದು ಕರೆಯುತ್ತಿದ್ದರಂತೆ.


ಗೌಡರು ಕಾಲವಾದ ನಂತರದ ವರ್ಷಗಳಲ್ಲಿ ಕ್ರಮೇಣ ಸಮಾಜವಾದಿಗಳೆಲ್ಲ ತನ್ನನ್ನು ಮರೆತರೆಂಬ ಕೊರಗು ಮಿಣುಕಮ್ಮನವರನ್ನು ಕಾಡಿತು. ಇವರ ಸಹವಾಸವೇ ಬೇಡವೆಂದು ದೂರಾದರು. ಗೌಡರು ಕೊಡಿಸಿದ ನಾಲ್ಕೂವರೆ ಎಕರೆ ಜಮೀನು ಮಾಡಿಕೊಂಡು ಬದುಕುತ್ತಿದ್ದ ಇವರನ್ನು ಬಿ.ಜೆ.ಪಿ. ಧುರೀಣರು ಬುಟ್ಟಿಗೆ ಹಾಕಿಕೊಂಡರು. ಮಿಣುಕಮ್ಮನವರ ನಿಷ್ಠೆ ತಮಗೆ ವೈಯಕ್ತಿಕವಾಗಿ ಬಹುವಾಗಿ ನೆರವಾದ ಬಿಜೆಪಿ ನಾಯಕ ಆರಗ ಜ್ಞಾನೇಂದ್ರರ ಕಡೆಗೆ ತಿರುಗಿತು. ಪಕ್ಷ ಸೇರಿ ಬಿ.ಜೆ.ಪಿ.ಯಿಂದ ಎರಡು ಬಾರಿ ಪಂಚಾಯ್ತಿ ಸದಸ್ಯೆಯಾಗಿ ಆಯ್ಕೆಯಾದರು. ಈ "ಕೂಗುಮಾರಿ" ಮಹಿಳೆಯ ಕೂಗು ಒಡನಾಡಿ ಸಮಾಜವಾದಿಗಳ ವಿರುದ್ಧವೇ ಮೊಳಗತೊಡಗಿದ್ದು ಆಶ್ಚರ್ಯವೇನಲ್ಲ.

25 ಜನರ ಸಂಸಾರ ನಿರ್ವಹಿಸುತ್ತ, ಸಮಾಜವನ್ನು ಎಚ್ಚರಿಸುತ್ತ 98ರ ವೃದ್ಧಾಪ್ಯದಲ್ಲೂ ಕುಗ್ಗದ ಉತ್ಸಾಹದಿಂದ ಓಡಾಡುತ್ತಿದ್ದ ಮಿಣುಕಮ್ಮ 2014ರ ಅಕ್ಟೋಬರ್ 21ರಂದು ನಿಧನರಾದರು. ಶವ ಸಂಸ್ಕಾರದ ಸಂದರ್ಭದಲ್ಲಿ ಹಾಜರಿದ್ದು ನೆರವಾದವರು ಬಿ.ಜೆ.ಪಿ. ನಾಯಕರೇ ಎಂಬುದು ಹೊಟ್ಟೆ ತುಂಬಿದ ಸಮಾಜವಾದಿಗಳಿಗೆ ಮುಜುಗರವನ್ನೇನೂ ಉಂಟುಮಾಡಿಲ್ಲದಿರಬಹುದು.

–ಡಾ. ಜೆ.ಕೆ. ರಮೇಶ್

(ಮಾರ್ಚ್, 2015)

ನಾಯಕರ ನಾಯಕ ಜಿ. ಸದಾಶಿವರಾಯರು



ಹದಿನೈದು ವರ್ಷಗಳ ಹಿಂದೆ ತೀರ್ಥಹಳ್ಳಿಯ ರಸ್ತೆಗಳಲ್ಲಿ ಬಿಳಿಯ ಅಡ್ಡಪಂಚೆ, ಮಾಸಲು ಬಣ್ಣದ ಅಂಗಿ, ಬಗಲಲ್ಲೊಂದು ದೊಗಲೆ ಚೀಲ, ಕಾಲಲ್ಲಿ ತೆಳ್ಳನೆಯ ಚಪ್ಪಲಿ, ತಲೆಯಲ್ಲಿ ಬೆಳ್ಳನೆಯ ಗಿಡ್ಡ ಕೂದಲು ಬಿಳಿ ಹುಬ್ಬು, ಬಿಳಿ ಕುರಚಲು ಗಡ್ಡ, ಮಗುವಿನ ನಗೆಯ ಮುಗ್ಧ ಮುಖ, ಬಾಯಲ್ಲಿ ತಾಂಬೂಲ, ಕುಳ್ಳೂ ಅಲ್ಲದ ಎತ್ತರವೂ ಅಲ್ಲದ ಬಡಕಲು ವ್ಯಕ್ತಿಯೊಬ್ಬರು ಅಲ್ಲಲ್ಲಿ ನಿಂತು ಕಂಡವರೊಡನೆ ಮಾತನಾಡುತ್ತ ಸಾಗುತ್ತಿದ್ದರೆ ಅದು ಸದಾಶಿವರಾಯರೆಂಬುದು ಎಲ್ಲರಿಗೂ ಗೊತ್ತಿರುತ್ತಿತ್ತು. ಆದರೆ ಆ ಸಾಮಾನ್ಯರಲ್ಲಿ ಸಾಮಾನ್ಯ ಮನುಷ್ಯ ರೂಪದಲ್ಲಿ ಅಸಾಮಾನ್ಯ ಪುರುಷನೊಬ್ಬ ಅಡಗಿರುವುದನ್ನು ಗುರುತಿಸುವುದು ಅಷ್ಟು ಸುಲಭವಾಗಿರಲಿಲ್ಲ. ಒಮ್ಮೆ ಶಿವಮೊಗ್ಗ ಜಿಲ್ಲೆ ಸಮಾಜವಾದದ ನೆಲೆವೀಡೆನಿಸಿದ್ದರೆ, ಅದಕ್ಕೆ ಕಾರಣೀಭೂತರು ಇವರು. ಗೋಪಾಲಗೌಡರು ಕರ್ನಾಟಕದ ಸಮಾಜವಾದಿ ಚಳುವಳಿಯ ಅಗ್ರ ನಾಯಕರಾಗಿದ್ದರೆ, ಸದಾಶಿವರಾಯರು ಅವರ ರಾಜಕೀಯ ಗುರುಗಳಾಗಿದ್ದರು.

ಹೊಸನಗರ ತಾಲ್ಲೂಕಿನ ಗುಬ್ಬಿಗದ ಸಾಹುಕಾರ ಸುಬ್ಬರಾಯರ ಮಗನಾಗಿ 1911ರಲ್ಲಿ ಹುಟ್ಟಿದ ಜಿ. ಸದಾಶಿವರಾಯರು ಮಂಗಳೂರಿನ ಸೈಂಟ್ ಅಲೋಷಿಯಷ್ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ವ್ಯಾಸಂಗ ನಡೆಸುತ್ತಿರುವಾಗಲೇ ಸ್ವಾತಂತ್ರ್ಯ ಚಳವಳಿಯ ಕಾವಿಗೆ ಸಿಕ್ಕಿದರು. ಸ್ವತಃ ಗಾಂಧೀಜಿಯವರಿಂದಲೇ ಸ್ವಾತಂತ್ರ್ಯ ಹೋರಾಟದ ದೀಕ್ಷೆ ಪಡೆದು 1942ರ 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಆ ಹೊತ್ತಿಗೆ ತೀರ್ಥಹಳ್ಳಿಗೆ ಬಂದು ನೆಲೆಸಿದ್ದ ಸದಾಶಿವರಾಯರು ಅಲ್ಲಿಂದ ಸುಮಾರು ನಲವತ್ತು ಮಂದಿ ವಿದ್ಯಾರ್ಥಿಗಳನ್ನು ಸಂಘಟಿಸಿ ಮಂಗಳೂರಿಗೆ ಕರೆದೊಯ್ದಿದ್ದರಂತೆ. ಅವರಲ್ಲಿ ಗೋಪಾಲಗೌಡರೂ ಒಬ್ಬರಾಗಿದ್ದರು. ಸ್ವಾತಂತ್ರ್ಯಾನಂತರ ಕಾಂಗ್ರೆಸ್‌ನಿಂದ ಹೊರಬಂದು ಸಮಾಜವಾದಿ ಪಕ್ಷ ಕಟ್ಟಿದರು. ಅವರು ಅದರ ಸಂಸ್ಥಾಪಕ ಕಾರ್ಯದರ್ಶಿಯಾಗಿದ್ದರು. ಲೋಹಿಯಾ, ಜೆಪಿ, ರಬಿರಾಯ್, ಮಧುಲಿಮಯೆ, ಜಾರ್ಜ್ ಫರ್ನಾಂಡಿಸ್ ಮುಂತಾದವರ ನಿಕಟ ಸಂಪರ್ಕ, ಗೆಳೆತನ ರಾಯರಿಗಿತ್ತು.

ಶ್ರೀಮಂತರಾಗಿ ಹುಟ್ಟಿ, ಶ್ರೀಮಂತ ಕಾಸರವಳ್ಳಿ ಕುಟುಂಬದ ಅಳಿಯನಾಗಿಯೂ ಸಾಮಾನ್ಯರಲ್ಲಿ ಸಾಮಾನ್ಯರಂತೆ ಬದುಕಿದ ಸದಾಶಿವರಾಯರದ್ದು ಬಡತನದ ವ್ರತ. ತಮಗಿದ್ದ ಇದ್ದ 300 ಎಕರೆ ಜಮೀನನ್ನೂ ಭೂಸುಧಾರಣೆ ಕಾಯಿದೆ ಜಾರಿಯಾಗುವ ಬಹು ಮುನ್ನವೇ ಉಳುತ್ತಿದ್ದ ಗೇಣಿದಾರರಿಗೆ ಬರೆದುಕೊಟ್ಟು, ದಿನದ ಖರ್ಚಿಗೆ ಅವರಿವರು ಸಹಾಯ ಮಾಡಬೇಕಾದಂಥ ಬಡತನವನ್ನು

ಆವಾಹಿಸಿಕೊಂಡರು. ಸಾಮಾಜಿಕ ಅಸಮಾನತೆಯ ಮೂಲ ಕಾರಣವಾದ ಜಾತೀಯತೆಯನ್ನು ಸದಾಶಿವರಾಯರು ತೀವ್ರವಾಗಿ ವಿರೋಧಿಸಿದವರು. ಯಾವುದೇ ಬಗೆಯ ಅನ್ಯಾಯವನ್ನು ಕಂಡರೆ ಕಿಡಿಕಾರುವ, ಅದರ ವಿರುದ್ಧ ಜನರನ್ನು ಸಂಘಟಿಸಿ ದಂಗೆ ಏಳುವ ಜಾಯಮಾನ ಅವರದು. ತೀರ್ಥಹಳ್ಳಿಯ ಪೋಲಿಸ್ ಠಾಣೆಯ ಮೇಲೆ ದಾಳಿ ಮಾಡಿ ಅವರು ಹಲವು ನಿರಪರಾಧಿಗಳನ್ನು ಜೈಲಿನಿಂದ ಬಿಡುಗಡೆ ಮಾಡಿಸಿದ್ದೂ ಉಂಟು! ನ್ಯಾಯ ಸಿಗಲಿಲ್ಲವೆಂದು ಸ್ಟೇಷನ್ ಎದುರು ತಾವೇ ಚಪ್ಪಲಿಯಿಂದ ಹೊಡೆದುಕೊಂಡು ಆಕ್ರೋಶ ಪ್ರದರ್ಶಿಸಿದ ವಿಚಿತ್ರ ಘಟನೆಯೂ ನಡೆದದ್ದಿದೆ!

ಸದಾಶಿವರಾಯರ ಜೀವಿತದ ಬಹುಮುಖ್ಯವಾದ ಹೋರಾಟ ಕಾಗೋಡು ರೈತ ಚಳವಳಿ. ಉಳುವವನೇ ನೆಲದೊಡೆಯನಾಗಬೇಕೆಂಬ ಘೋಷವಾಕ್ಯವನಿಟ್ಟುಕೊಂಡು ಸತ್ಯಾಗ್ರಹ ನಡೆಸಿ ಅಲ್ಲಿ ಮೊದಲು ಬಂಧಿತರಾದವರು ಸದಾಶಿವರಾಯರು. ಇವರು ನೀಡಿದ ಸ್ಫೂರ್ತಿಯೇ ಹೆಚ್.ಗಣಪತಿಯಪ್ಪ, ಶಾಂತವೇರಿ ಗೋಪಾಲಗೌಡ ಮುಂತಾದವರನ್ನು ಹೋರಾಟದ ಮುಂಚೂಣಿಗೆ ತಂದಿತು. ಸುಮಾರು 60 ದಿನಗಳಷ್ಟು ದೀರ್ಘಕಾಲ ಸಾವಿರಾರು ರೈತರನ್ನು ಸಂಘಟಿಸಿ ಪ್ರಭಾವೀ ಭೂಮಾಲೀಕರ ವಿರುದ್ಧ ಸೆಣಸಿ ಯಶಗಳಿಸಿದ, ರಾಷ್ಟ್ರದ ಗಮನ ಸೆಳೆದ ಐತಿಹಾಸಿಕ ಕಾಗೋಡು ರೈತ ಚಳುವಳಿಯ ಬೌದ್ಧಿಕ ಶಕ್ತಿ, ತಂತ್ರಗಾರಿಕೆ ಮಾರ್ಗದರ್ಶನ ಎಲ್ಲವೂ ರಾಯರವೇ ಆಗಿದ್ದವು. ಇವೆಲ್ಲ ಅವರನ್ನು ನಾಯಕರ ನಾಯಕನನ್ನಾಗಿ ಬಿಂಬಿಸಿದವು. ಈ ಹೋರಾಟದ ಯಶಸ್ಸೇ ಸಮಾಜವಾದಿ ನಾಯಕರ ಚುನಾವಣಾ ರಾಜಕಾರಣ ಪ್ರವೇಶಕ್ಕೆ ನಾಂದಿಯೂ ಅಯಿತು.

ಬ್ರಾಹ್ಮಣರು ಕೆಳಜಾತಿಯವರನ್ನು ಪೋಷಿಸುವ ಗೊಬ್ಬರವಾಗಬೇಕೆಂಬ ಲೋಹಿಯಾ ಅವರ ಆಶಯವನ್ನು ರಾಯರು ಕಾರ್ಯರೂಪಕ್ಕೆ ತಂದರು. ಶೂದ್ರ ಸಮುದಾಯಗಳಿಂದ ತಾವು ಮೇಲೆತ್ತಿದ್ದ ಗೋಪಾಲಗೌಡ, ಪಟೇಲ್. ತಿಮ್ಮಪ್ಪ, ಬಂಗಾರಪ್ಪ, ಸ್ವಾಮಿರಾವ್ ಮುಂತಾದ ಶಿಷ್ಯರು ಶಾಸಕರಾದಾಗ ತಮ್ಮ ಅಪಾರ ಜ್ಞಾನ, ಕಾನೂನು ತಜ್ಞತೆಗಳಿಂದ ಅವರನ್ನು ಪರಿಣಾಮಕಾರಿ ಸಂಸದೀಯ ಪಟುಗಳನ್ನಾಗಿಸಿದರು. ಸ್ವತಃ ತಾವೂ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ವಿಧಾನಸಭೆಗೆ ಸ್ಪರ್ಧಿಸಿ ಸೋತರಾದರೂ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ನಿಂತು ತೀರ್ಥಹಳ್ಳಿ ತಾಲ್ಲೂಕು ಬೋರ್ಡ್ ಸದಸ್ಯರಾಗಿ ಚುನಾಯಿತರಾಗಿದ್ದರು(1968). ಆಲಗೇರಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದರು. ತೀರ್ಥಹಳ್ಳಿ ತಾಲ್ಲೂಕು ಭೂನ್ಯಾಯ ಮಂಡಳಿಯ ಸದಸ್ಯರಾಗಿದ್ದರು. ಈ ಎಲ್ಲ ಸಂದರ್ಭಗಳಲ್ಲೂ ಸದಾಶಿವರಾಯರು ಫಲಾನುಭವಿಗಳಿಗಾಗಿ ಪ್ರಾಮಾಣಿಕವಾಗಿ ದುಡಿದರು. ಅವರು ಭೂನ್ಯಾಯ ಮಂಡಳಿಯಲ್ಲಿದ್ದಾಗ ಮೃಗವಧೆಯ ಸಮೀಪದ ಮುದ್ದಣ್ಣ ಶೆಟ್ಟಿ ಎಂಬ ಗೇಣಿದಾರನೊಬ್ಬನ ಜಮೀನು ತಗಾದೆ ಉಚ್ಚ ನ್ಯಾಯಾಲಯದಲ್ಲೂ ತೀರ್ಮಾನವಾಗದೇ ಉಳಿದಿತ್ತು. ಬಡರೈತನ ಬಳಿ ಯಾವ ಲಿಖಿತ ದಾಖಲೆಗಳೂ ಇರಲಿಲ್ಲ. ರಾಯರ ಸಮಿತಿ ಅಲ್ಲಿಗೆ ಹೋಗಿ ಚಾಣಾಕ್ಷತೆಯಿಂದ ನ್ಯಾಯ ಪಂಚಾಯ್ತಿ ಮಾಡಿ, ದುಡಿಯದೇ ಉಣ್ಣುತ್ತಿದ್ದ

ಭೂಮಾಲಿಕ ಭಟ್ಟರೊಬ್ಬರಿಂದ ಜಮೀನು ಬಿಡಿಸಿಕೊಟ್ಟಿತು.

ಆದರೆ ಅವರಿಂದ ಉಪಕೃತರಾದ ಮಂದಿ ಅದರಲ್ಲೂ ರಾಜಕೀಯ ನಾಯಕರಾಗಿ ಬೆಳೆದು ಮಂತ್ರಿ ಮಹೋದಯರಾಗಿ ಮೆರೆದ ಅವರ ಶಿಷ್ಯರು, ಜೀವಿತದ ಉತ್ತರಾರ್ಧದಲ್ಲಿನ ಕಷ್ಟ ಕಾಲದಲ್ಲಿ ಗುರುವಿಗೆ ನೆರವಾಗಲಿಲ್ಲವೆಂಬುದು ರಾಯರ ಬದುಕಿನ ಇನ್ನೊಂದು ಕಥೆ, ವ್ಯಥೆ. ಕೊನೆಗೂ ಅವರಿಗೊಂದು ಮನೆಯಿರಲಿ, ನಿವೇಶನವೂ ಸಿಗಲಿಲ್ಲ. ತಮ್ಮ ಸೈದ್ಧಾಂತಿಕ ಬದ್ಧತೆ ಮತ್ತು ಪ್ರಾಮಾಣಿಕತೆಗಳಿಂದಾಗಿ ಮನೆ ಮಕ್ಕಳ ಪ್ರೀತಿ ಗೌರವಕ್ಕೂ ಅವರು ಎರವಾಗಿದ್ದರು. ತಮ್ಮ ಶಿಷ್ಯರದ್ದೇ ಸರ್ಕಾರವಿದ್ದಾಗಲೂ ಮಗನಿಗೊಂದು ನೌಕರಿಗಾಗಿ ಶಿಫಾರ್ಸು ಮಾಡಲು ಖಡಕ್ಕಾಗಿ ನಿರಾಕರಿಸಿದವರು ಅವರು!

ಸಹಧರ್ಮಿಣಿ ಅಂಬಮ್ಮ ತೀರಿಕೊಂಡ ನಂತರ ರಾಯರು ಏಕಾಂಗಿಯಾದರು. ತೀರ್ಥಹಳ್ಳಿಯ ಸರ್ಕಾರಿ ನೌಕರರ ಭವನದ ಒಂದು ಕೊಠಡಿಯಲ್ಲಿ ವಾಸ ಮಾಡತೊಡಗಿದರು. ಗೆಳೆಯರಾದ ಪ್ರಕಾಶ ಶೆಟ್ಟರು, ಎನ್ ಕಿಟ್ಟಪ್ಪಗೌಡ ಹಾಗೂ ಜನಕೇಗೌಡರು (ಈ ಲೇಖನ ಬರೆಯಲು ಕೆ. ಗಂಗಾಧರ್ ಅವರೊಂದಿಗೆ ಅಗತ್ಯ ಮಾಹಿತಿ ಒದಗಿಸಿದ ಮಹನೀಯರುಗಳೂ ಇವರೇ!) ಸದಾ ಅವರ ನೆರವಿಗೆ ನಿಲ್ಲುತ್ತಿದ್ದರು. ಜನರ ನಡೆನುಡಿ ಮತ್ತು ದೇಶದ ರಾಜಕಾರಣ ಸಮಾಜವಾದಿ ಆಶಯಗಳಿಗೆ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿರುವುದನ್ನು ಕಂಡು ಕುದಿಯುತ್ತಿದ್ದ; ಆದರೆ ಅಸಹಾಯಕರಾಗಿದ್ದ ರಾಯರ ದೇಹದ ದುರ್ಬಲತೆಯೊಂದಿಗೆ ಕ್ರಮೇಣ ಮಾನಸಿಕ ಸ್ಥಿತಿಯೂ ಕೆಟ್ಟು ವಿಕ್ಷಿಪ್ತತೆಯ ಕಡೆಗೆ ಸಾಗಿತು. ಮಿತ್ರರ ಒತ್ತಾಯದಿಂದಾಗಿ ಸ್ವಲ್ಪ ಕಾಲ ಬೆಂಗಳೂರಿನಲ್ಲಿ ಮಗಳ ಮನೆಯಲ್ಲಿದ್ದು ಚಿಕಿತ್ಸೆ ಪಡೆದರಾದರೂ, ಉಳಿಯಲಾರರೆಂದು ಖಚಿತವಾದಾಗ ಅವರನ್ನು ಆಲಗೇರಿಯ ಮನೆಗೆ ತರಲಾಯಿತು. ಅಲ್ಲಿ ನಾಲ್ಕೈದು ದಿನ ಇದ್ದು 1999 ರಲ್ಲಿ ತಮ್ಮ 88ನೇ ವಯಸ್ಸಿನಲ್ಲಿ ಸದಾಶಿವರಾಯರು ಕೊನೆಯುಸಿರೆಳೆದರು. ಕರ್ನಾಟಕದ ಸಮಾಜವಾದಿ ದೀಪ ಆರಿಹೋಯಿತು.

–ಡಾ. ಜೆ.ಕೆ. ರಮೇಶ್

(ಜೂನ್, 2012)

ಸಮಾಜವಾದಕ್ಕಾಗಿ ಜೀವ ತೆತ್ತ ಸೋಗಾಲ ನಾಗಭೂಷಣ



ಸೋಗಾಲ ನಾಗಭೂಷಣ ಕರ್ನಾಟಕದ ಸಮಾಜವಾದಿ ಚಳುವಳಿ ಮತ್ತು ಪಕ್ಷ ರಾಜಕಾರಣದ ಇತಿಹಾಸದಲ್ಲಿ ಕಾಣಬರುವ ಮೊದಲ ದುರಂತ ನಾಯಕನೆಂದು ಹೇಳಬಹುದು. ರಾಜ್ಯದಲ್ಲಿ ಪಕ್ಷಕ್ಕೂ ಅದರೊಂದಿಗೆ ಸಮಾಜವಾದಿ ಕಾರ್ಮಿಕ ಸಂಘಟನೆಗೂ ಮೂಲ ಬುನಾದಿ ಹಾಕಿದವರಲ್ಲಿ ಪ್ರಮುಖರಾದ ನಾಗಭೂಷಣ, ಚಳುವಳಿ ಮತ್ತು ಪಕ್ಷ ತಮ್ಮ ದೃಷ್ಟಿಯಿಂದ ಆರಂಭದಲ್ಲೇ ಹಿಡಿದ 'ಅಶಿಸ್ತಿ'ನ ಹಾದಿಯನ್ನು ಕಂಡು ಕನಲಿ ಬುದ್ಧಿಭ್ರಮಣೆಗೆ ಒಳಗಾದವರು. ಅಂದರೆ ಅಷ್ಟು ಪ್ರೀತಿ, ಶ್ರಮ ಮತ್ತು ಶ್ರದ್ಧೆಗಳಿಂದ ಚಳುವಳಿ, ಪಕ್ಷವನ್ನು ಕಟ್ಟಿದವರು ಅವರು. ಆದರೆ ತನ್ನ ಇತಿಹಾಸದ ಬಗೆಗಿನ ಅಪ್ರತಿಮ ಬೇಜವಾಬ್ದಾರಿತನಕ್ಕೆ ಹೆಸರಾದ ಕರ್ನಾಟಕದ ಸಮಾಜವಾದಿ ಆಂದೋಲನ ಯು.ಆರ್.ಅನಂತಮೂರ್ತಿ ಮತ್ತು ಇನ್ನೂ ಒಂದಿಬ್ಬರು ತಮ್ಮ ಬರಹಗಳಲ್ಲಿ ಮಾಡಿರುವ ಸಾಂದರ್ಭಿಕ ಮತ್ತು ಸಂಕ್ಷಿಪ್ತ ಪ್ರಸ್ತಾಪಗಳ ಹೊರತಾಗಿ ಇವರ ಬಗ್ಗೆ ಯಾವ ದಾಖಲೆಯನ್ನೂ, ಸಾಕ್ಷ್ಯವನ್ನೂ ಉಳಿಸಿ ಹೋಗಿಲ್ಲ. ಹಾಗಾಗಿ ನಮ್ಮ ಪತ್ರಿಕೆಯೇ ನೆಪವಾಗಿ ನಮ್ಮ ಸಂಪರ್ಕಕ್ಕೆ ಆಕಸ್ಮಿಕವಾಗಿ ಬಂದ ಸೋಗಾಲರ ಸೋದರ ಎಸ್. ಜಗನ್ನಾಥ್ ತಮ್ಮ ಅಣ್ಣನ ಮೇಲಿನ ಪ್ರೀತಿ-ಅಭಿಮಾನಗಳಿಂದಾಗಿ ಅವರ ಅಪರೂಪದ ಮತ್ತು ದುರ್ಲಭ ಚಿತ್ರ ಮತ್ತು ಮಾಹಿತಿಯನ್ನು ಶ್ರಮ ವಹಿಸಿ ಸಂಗ್ರಹಿಸಿ ಇಲ್ಲಿ ನೀಡಿದ್ದಾರೆ. ಜಗನ್ನಾಥರಿಗೆ ಪತ್ರಿಕೆ ಋಣಿಯಾಗಿದೆ.

-ಡಿಎಸ್ಸೆನ್

ನಾಗಭೂಷಣರು ಸೋಗಾಲದ ಸೀತಾರಾಮಯ್ಯ ಮತ್ತು ಶ್ರೀಮತಿ ಲಕ್ಷ್ಮಿನರಸಮ್ಮನವರ ನಾಲ್ಕನೆಯ ಸಂತಾನ, ಮೂರನೆಯ ಮಗ. ಹುಟ್ಟಿದ್ದು ಸುಮಾರು 1925ರಲ್ಲಿ. ನಾಗಭೂಷಣರ ಪ್ರೌಢ ಶಾಲೆಯ ವ್ಯಾಸಂಗ ಮೈಸೂರು ಮಹಾರಾಜರ ಪ್ರೌಢ ಶಾಲೆಯಲ್ಲಿ ಆಯಿತು. ಪ್ರೌಢ ಶಾಲೆಯ ಹಂತದಿಂದಲೇ ನಾಗಭೂಷಣರು ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಗಳಲ್ಲಿ ಆಗಿನ ಯೂತ್ ಕಾಂಗ್ರೆಸ್ ಪಕ್ಷದ ಮುಂದಾಳಾಗಿ ಸಕ್ರಿಯರಾಗಿದ್ದವರು.

ನಾಗಭೂಷಣರು ಸ್ವತಃ ಬಹು ಬುದ್ಧಿವಂತರು. ಶಾಲೆಯ ಪಠ್ಯ ಪುಸ್ತಕಗಳಿಗಿಂತ ಕನ್ನಡ, ಇಂಗ್ಲಿಷ್ ಸಾಹಿತ್ಯ ಮತ್ತು ರಾಜಕೀಯ ಸಂಬಂಧಿತ ಪುಸ್ತಕಗಳ ಓದುವಿಕೆಯೇ ಹೆಚ್ಚು. ಇವರ ಜೊತೆ, ಹಿಂದೆ ಮುಂದೆ ಯಾವಾಗಲೂ ಜಾತಿಭೇದಗಳ ಪರಿವೆಗಳಿಲ್ಲದ ಗೆಳೆಯರ ತಂಡವಿರುತ್ತಿತ್ತು. ಅವರು 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗಿಯಾದ ಪರಿಣಾಮವಾಗಿ ಸುಮಾರು ಎರಡು ವರುಷಗಳ ಕಾಲ ಮೈಸೂರು,

ಶ್ರೀರಂಗಪಟ್ಟಣ ಮತ್ತು ಬೆಂಗಳೂರು ಜೈಲುಗಳಲ್ಲಿರಬೇಕಾಯಿತು. ಇಂಡಿಯನ್ ಸ್ಟೂಡೆಂಟ್ ಕಾಂಗ್ರೆಸ್ಸಿನ ಕರ್ನಾಟಕ ಪ್ರದೇಶದ ಸೆಕ್ರೆಟರಿ, ಸೆಂಟ್ರಲ್ ಕಾಲೇಜಿನ ಸ್ಟೂಡೆಂಟ್ಸ್ ಯೂನಿಯನ್‌ನ ಸೆಕ್ರೆಟರಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸೋಷಿಲಿಸ್ಟ್ ಪಾರ್ಟಿಯ ಸೆಕ್ರೆಟರಿ, ನಂತರ ಕರ್ನಾಟಕ ಪ್ರದೇಶ ಪ್ರಜಾ ಸೋಷಿಲಿಸ್ಟ್ ಪಾರ್ಟಿಯ ಸೆಕ್ರೆಟರಿಯಾಗಿ ಕೆಲಸ ಮಾಡಿ ತಮ್ಮ ನಾಯಕತ್ವ ಗುಣಗಳನ್ನು ಸಾಬೀತು ಪಡಿಸಿದ ನಾಗಭೂಷಣರು ಸಹಜವಾಗಿಯೇ ಶಿವಮೊಗ್ಗೆಯಲ್ಲಿ ನಡೆದ ಪಾರ್ಟಿಯ ಅಧಿವೇಶನದಲ್ಲಿ ಮತ್ತೊಮ್ಮೆ ಪಾರ್ಟಿಯ ಸೆಕ್ರೆಟರಿ ಆಗಿ ಚುನಾಯಿತರಾದರು. ನಂತರ ಬೆಂಗಳೂರಿನಲ್ಲಿಯ ಜಯಪ್ರಕಾಶ್ ನಾರಾಯಣರನ್ನು ಕರೆಸಿ ಒಂದು ಬೃಹತ್ ಸಭೆ ಆಯೋಜಿಸಿದ ಕೀರ್ತಿ ಅವರದ್ದು.

ಸೋಗಾಲರು ಹೀಗೆ ಸಮಾಜವಾದಿ ಚಳುವಳಿ ಮತ್ತು ಪಕ್ಷಗಳನ್ನು ಕಟ್ಟಿ ಬೆಳೆಸಿದ್ದೇ ಅಲ್ಲದೆ, ರಾಜ್ಯದಲ್ಲಿ ಕಾರ್ಮಿಕ ಸಂಘಟನೆಯನ್ನು ಬೆಳೆಸುವಲ್ಲಿಯೂ ಸಕ್ರಿಯ ಪಾತ್ರ ವಹಿಸಿದರು. ಮುಂದೆ ಸಮಾಜವಾದಿ ಚಳುವಳಿಯ ಕಾರ್ಮಿಕ ಶಾಖೆಯಾಗಿ ಬೆಳೆದ ಹಿಂದ್ ಮಜ಼ದೂರ್ ಸಭಾದ ಸ್ಥಾಪನಾ ಅಧಿವೇಶನ ನಡೆದದ್ದು, ನಾಗಭೂಷಣರ ಮುಂದಾಳತ್ವದಲ್ಲಿಯೇ. ಇದರ ಉದ್ಘಾಟನೆ ಅಶೋಕ್ ಮೆಹತರಿಂದ ಆಯಿತು. ಬೊಂಬಾಯಿನ ಹಡಗುಕಟ್ಟೆ ಕಾರ್ಮಿಕರ ಧುರೀಣ ದ' ಮೆಲ್ಲೋ ಅತಿಥಿಯಾಗಿ ಈ ಸಭೆಗೆ ಆಗಮಿಸಿದ್ದರು. ನಂತರ ನಾಗಭೂಷಣರು ಅದರ ಜನರಲ್ ಸೆಕ್ರೆಟರಿಗಳಲ್ಲಿ ಒಬ್ಬರಾದರು. ಇದರ ಪರಿಣಾಮವಾಗಿ ಅಖಿಲ ಭಾರತ ಟ್ರೇಡ್ ಯೂನಿಯನ್‌ನ ಬೃಹತ್ ಸಮಾವೇಶ ಕರ್ನಾಟಕದ ಪ್ರಜಾ ಸೋಷಿಲಿಸ್ಟ್ ಪಾರ್ಟಿ ವತಿಯಿಂದ ನಂಜನಗೂಡಿನಲ್ಲಿ ನಡೆಯಿತು. ಈ ಸಮಾವೇಶವನ್ನು ಉದ್ದೇಶಿಸಿ ಅಶೋಕ ಮೆಹತ, ಅಚ್ಯುತ ಪಟವರ್ಧನ್ ಮುಂತಾದ್ದವರು ಮಾತನಾಡಿದರು.

ಆಗಿನ ಬೆಂಗಳೂರಿನಲ್ಲಿ ಹಾಗೂ ಕರ್ನಾಟಕದ ಇತರೆ ಪ್ರದೇಶಗಳಲ್ಲಿ ಸಾಕಷ್ಟು ಕೈಗಾರಿಕೋದ್ಯಮಗಳು ಇದ್ದವು. ಜೊತೆಗೆ ಹೋಟೆಲ್ ಉದ್ಯಮ, ವರ್ಕ್‌ಶಾಪುಗಳು ಮುಂತಾದ ಸಣಪುಟ್ಟ ಉದ್ದಿಮೆಗಳೂ ಇದ್ದುವು. ಇಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಿಗೆ ತಮ್ಮ ಕಾನೂನುಬದ್ಧವಾದ ಹಕ್ಕುಬಾಧ್ಯತೆಗಳ ಅರಿವು ಇರಲಿಲ್ಲ. ಅದನ್ನು ತಿಳಿಸುವ, ಬೆಳೆಸುವ ನಿಟ್ಟಿನಲ್ಲಿ ಯಾವ ಸಂಘಟನೆಗಳೂ ಇತ್ತಿಲ್ಲ. ಇದನ್ನು ಮನಗಂಡ ನಾಗಭೂಷಣರು, ಬೆಂಗಳೂರಿನ ಸುತ್ತಮುತ್ತಲ ಸುಮಾರು 20–25 ಸಂಘಗಳ ಮುಖಂಡರನ್ನು ಪ್ರತಿ ದಿನ ಸಂಜೆ ಬಳೇಪೇಟೆಯಲ್ಲಿದ್ದ ತಮ್ಮ ಪಾರ್ಟಿ ಸ್ಥಳದಲ್ಲಿ ಸೇರಿಸಿ ಅವರುಗಳಿಗೆ ಸಮಾಜವಾದದ ತತ್ವಗಳನ್ನೂ, ಹಾಗೆಯೇ ಕಾರ್ಮಿಕರ ಹಕ್ಕು ಬಾಧ್ಯತೆ, ಜವಾಬ್ದಾರಿಗಳ ಬಗ್ಗೆ ತಿಳುವಳಿಕೆ ನೀಡುತ್ತಾ, ಕ್ರಮೇಣ ಕರ್ನಾಟಕದಲ್ಲಿ ಕಾರ್ಮಿಕರ ಒಂದು ಬಹು ದೊಡ್ಡ ಸಂಘಟನೆಯನ್ನು ಕಟ್ಟಿದರು.

ಹೀಗೆ, ಬೆಂಗಳೂರಿನ ಬಹು ದೊಡ್ಡ ಬಟ್ಟೆ ಗಿರಣಿಯಾಗಿದ್ದ ಮಿನರ್ವ ಮಿಲ್ಲಿನ ಕಾರ್ಮಿಕರ ಸಂಘದ ಜನರಲ್ ಸೆಕ್ರೆಟರಿಯಾಗಿದ್ದಾಗ ಅಲ್ಲಿನ ಕಾರ್ಮಿಕರ ಹಕ್ಕು ಬಾಧ್ಯತೆಗಳನ್ನು ಕುರಿತು ಅದರ ಮಾಲೀಕರೊಂದಿಗೆ ನಡೆಸಿದ ಮಾತುಕೆಗಳು ಮುರಿದುಬಿದ್ದಾಗ, ಮುಷ್ಕರ ಹೂಡಿಸಿದರು. ಈ ಮುಷ್ಕರವು ಸುಮಾರು ಮೂರು ತಿಂಗಳು ನಡೆಯಿತು. ವಿವಾದ ಹೈಕೋರ್ಟಿನ ಮೆಟ್ಟಲೂ ಹತ್ತಿತು. ನಂತರ

ಹೈಕೋರ್ಟು ಕೂಡ ಕಾರ್ಮಿಕರ ವಾದವನ್ನೇ ಎತ್ತಿ ಹಿಡಿಯಿತು. ಇದು ಇತರೆ ಕಾರ್ಮಿಕ ಸಂಘಟನೆಗಳಿಗೂ ಹೋರಾಟದ ಒಂದು ಮಾದರಿಯಾಯಿತು.

ಪಾರ್ಟಿ ಮತ್ತು ಕಾರ್ಮಿಕ ಸಂಘಟನೆಯ ಹತ್ತು ಹದಿನಾರು ದೈನಂದಿನ ಚಟುವಟಿಕೆಗಳ ಮಧ್ಯವೂ ನಾಗಭೂಷಣರು ಭಿತ್ತಿಪತ್ರಗಳ, ಹಸ್ತಪತ್ರಗಳ, ಲೇಖನಗಳ ಮೂಲಕ ಸಮಾಜವಾದಿ ತತ್ವಗಳ ಪ್ರಚಾರದ ಜೊತೆಗೆ ಪಾರ್ಟಿಗೆ ಸದಸ್ಯತ್ವದ ನೋಂದಾವಣೆ, ಕಾರ್ಯಕರ್ತರ ತಯಾರಿಯಲ್ಲಿಯೂ ಬಹಳಷ್ಟು ಶ್ರಮಿಸಿದರು. ಬೆಂಗಳೂರಿನ ಬಳೆಪೇಟೆಯ ಉಡುಪಿ ಕೃಷ್ಣ ಭವನದ ಎದುರು 'ರಾಮಪ್ರಸಾದ್' ಎಂಬ ಹೆಸರಿನ ಕಟ್ಟಡದಲ್ಲಿ ಒಂದು ಸಣ್ಣ ಕೊಠಡಿಯನ್ನು ಬಾಡಿಗೆಗೆ ಹಿಡಿದು, ಅದನ್ನು ತಮ್ಮ ಚಟುವಟಿಕೆಗಳ ಕೇಂದ್ರವಾಗಿಸಿಕೊಂಡರು. ಹಾಗೇ ಅವರು ಮೈಸೂರು ಜವಾಬ್ದಾರಿ ಸರಕಾರದ ಪರ ಹೋರಾಟದಲ್ಲಿಯೂ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡರು.

ಇವರ ಪಕ್ಷ ಹಣವಂತರ ಪಕ್ಷವಾಗಿರಲಿಲ್ಲ. ಬಳೆಪೇಟೆ ಆಫೀಸಿನ ತಿಂಗಳ ಬಾಡಿಗೆ, ಪಾರ್ಟಿಯಪ್ರಚಾರ, ಸಮಾವೇಶಗಳು, ಅವಕ್ಕಾಗಿ ಬರುತ್ತಿದ್ದ ಅತಿಥಿಗಳ ವಸತಿ–ಊಟೋಪಚಾರಗಳು, ಪಾರ್ಟಿ ಕಾರ್ಯಕರ್ತರ ಮತ್ತು ತಮ್ಮ ಉದರ ಪೋಷಣೆ ಹೀಗೆ ಬಹುಮುಖ ಖರ್ಚಿನ ಬಾಬತ್ತುಗಳು ಇರುತ್ತಿದ್ದುವು. ಇದನ್ನೆಲ್ಲ ನಿರ್ವಹಿಸಲು ಬಹಳ ಕಷ್ಟವಾಗುತ್ತಿತ್ತು. ಆಗ ಕಮಲಾದೇವಿ ಚಟ್ಟೋಪಾಧ್ಯಾಯರು ಸಂಪಾದಿಸಿ ಧಾರವಾಡದಿಂದ ಕಳುಹಿಸುತ್ತಿದ್ದ 'ಜಾಗೃತಿ' ಪತ್ರಿಕೆಯ 50–100 ಪ್ರತಿಗಳ ಒಂದು ಕಟ್ಟು ಬರುತ್ತಿತ್ತು. ನಾಗಭೂಷಣ ಬಾಡಿಗೆ ಸೈಕಲ್ ಹತ್ತಿ ತತ್‌ಕ್ಷಣವೇ ಮಾರಿ ಬಂದು ಒಂದಿಷ್ಟು ಹಣ ಕೂಡಿಡುತ್ತಿದ್ದರು. ಇದರ ಜೊತೆಗೆ ಅಭಿಮಾನಿಗಳಿಂದ ಆಗಾಗ್ಯೆ ಅವರು ಕೊಟ್ಟಷ್ಟು ಚಂದಾ, ಬೀದಿಗಳಲ್ಲಿ ಗೋಲಕದ ಡಬ್ಬ ಹಿಡಿದು ಹಣ ಸಂಗ್ರಹ.ಇದರಲ್ಲಿ ಇತರೆ ಖರ್ಚುಗಳನ್ನು ನಿಭಾಯಿಸಿ, ಏನಾದರು ಹಣ ಉಳಿದರೆ ಇವರಿಗೆ ಮತ್ತು ಸಹವರ್ತಿಗಳಿಗೆ ಹೊಟ್ಟೆಗೆ ವ್ಯವಸ್ಥೆ. ಇಲ್ಲದಿದ್ದರೆ ಉಪವಾಸ.

ನಾಗಭೂಷಣರು ಬಡಬಗ್ಗರ ವಸತಿ ಪ್ರದೇಶವೆನಿಸಿದ್ದ ಈಗಿನ ಶ್ರೀರಾಂಪುರದ ನಾಗಪ್ಪ ಬ್ಲಾಕ್‌ನಲ್ಲಿ ತಮ್ಮ ಸ್ನೇಹಿತ ಎಚ್.ಎ. ರಾಮಸ್ವಾಮಿಯವರೊಡನೆ, ಒಂದು ರೂಮಿನಲ್ಲಿ ವಾಸವಾಗಿದ್ದರು. ಅವರ ಅಕ್ಕ ಕಮಲಮ್ಮನವರು ಸ್ವಲ್ಪ ಕಾಲ ನಾಗಪ್ಪ ಬ್ಲಾಕ್ ಪ್ರದೇಶದಲ್ಲಿ ವಾಸವಾಗಿದ್ದರು. ಅಷ್ಟು ಸಮಯ ನಾಗಭೂಷಣರ ಊಟ ತಿಂಡಿಯ ವ್ಯವಸ್ಥೆ ಸ್ವಲ್ಪ ಸಮಾಧಾನಕರವಾಗಿತ್ತು, ಎಷ್ಟೇ ಹೊತ್ತಾದರೂ.

1949ರಲ್ಲಿ ದಾವಣಗೆರೆಯಲ್ಲಿ ನಡೆದ ಪಾರ್ಟಿಯ ಅಧಿವೇಶನದ ಪೂರ್ವಭಾಗಿಯಾಗಿ ಬೆಂಗಳೂರು ವಾಸವಿ ಧರ್ಮಶಾಲೆಯಲ್ಲಿ ನಡೆದ 3 ದಿನಗಳ ಜನರಲ್ ಕೌನ್ಸಿಲ್ ಸಭೆ ಮತ್ತು 10 ದಿನಗಳ ಸ್ಟೇಟ್ ಎಕ್ಸಿಕ್ಯುಟಿವ್ ಸಭೆ. ಪಕ್ಷದ ಸಂವಿಧಾನದಲ್ಲಿ ಬದಲಾವಣೆಗಳನ್ನು ತರಲು ನಡೆಸಿದ ಈ ಸಭೆಗಳಲ್ಲಿ ಜಯಪ್ರಕಾಶ್ ನಾರಾಯಣ್, ಪೀಟರ್ ಅಲ್ವರೆಸ್, ಪುರುಷೋತ್ತಮ್‌ದಾಸ್, ತ್ರಿಕಂದಾಸ್ ಮುಂತಾದ ಪಕ್ಷದ ಹಿರಿಯ ಧುರೀಣರು ಉಪಸ್ಥಿತರಿದ್ದರು. ಈ ಅಧಿವೇಶನದ ಏರ್ಪಾಡು ಮತ್ತು ನಿರ್ವಹಣೆ ನಾಗಭೂಷಣರದ್ದಾಗಿತ್ತು. ಅವರು ರಾಷ್ಟ್ರ ಮಟ್ಟದ ಪಾರ್ಟಿಯ ಜನರಲ್ ಕೌನ್ಸಿಲ್‌ನ ಚುನಾಯಿತ ಸದಸ್ಯರೂ ಆಗಿದ್ದುದದರಿಂದ ಈ ಎಲ್ಲ

ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

1948-49ರ ಹೊತ್ತಿಗೆ ಪ್ರಜಾ ಸೋಷಿಲಿಸ್ಟ್ ಪಾರ್ಟಿಯು ಒಂದು ಶಕ್ತಿಯುತ ರಾಜಕೀಯ ಪಕ್ಷವಾಗಿ ಕರ್ನಾಟಕದಲ್ಲಿ ಬೆಳೆದಿತ್ತು. ನಾಗಭೂಷಣರೂ ಇಷ್ಟರ ಹೊತ್ತಿಗೆ ಸೋಷಿಲಿಸ್ಟ್ ಪಾರ್ಟಿಯ ರಾಷ್ಟ್ರ ನಾಯಕರ ಎತ್ತರಕ್ಕೆ ಬೆಳೆದಿದ್ದರು. ರಾಷ್ಟ್ರ ಮಟ್ಟದಲ್ಲಿ ಆಚಾರ್ಯರ್ ನರೇಂದ್ರ ದೇವ್, ಡಾ.ರಾಮ ಮನೋಹರ ಲೋಹಿಯಾ, ಅಚ್ಚುತ್ ಪಟವರ್ಧನ್, ಅಶೋಕ್ ಮೆಹತ, ಜಯಪ್ರಕಾಶ್ ನಾರಾಯಣ್ ಮುಂತಾದವರ ಸಖ್ಯವಿತ್ತು. ರಾಜ್ಯ ಮಟ್ಟದಲ್ಲಿ ಶಾಂತವೇರಿ ಗೋಪಾಲ ಗೌಡ, ಮುಲ್ಕಾ ಗೋವಿಂದ ರೆಡ್ಡಿ, ಸದಾಶಿವರಾವ್, ಖಾದ್ರಿ ಶಾಮಣ್ಣ ಭ.ಸು .ಕೃಷ್ಣಮೂರ್ತಿ. ಸೇರಿದಂತೆ ಆ ಕಾಲದ ಎಲ್ಲ ಸಮಾಜವಾದಿ ನಾಯಕರೂ ಅವರ ಗೆಳೆಯರೇ.


ನಾಗಭೂಷಣರ ವರ್ಷಗಟ್ಟಲೆಯ ಮುಂದಾಳತ್ವ, ಶ್ರಮ. ತ್ಯಾಗಗಳಿಂದ ರಾಜ್ಯದಲ್ಲಿ ಕರ್ಣಾಟಕ ಪ್ರದೇಶ ಸೋಷಿಲಿಸ್ಟ್ ಪಕ್ಷ ತನ್ನ ತತ್ವಗಳ, ಸಿದ್ಧಾಂತಗಳ ಬುನಾದಿಯಲ್ಲಿ ಒಂದು ಶಕ್ತಿಯುತ ಪಕ್ಷವಾಗಿ ಬೆಳೆದು ನಿಂತಿತ್ತು. ಆದರೆ ನಾಗಭೂಷಣರ ದೃಷ್ಟಿಯಲ್ಲಿ ಬಹುಬೇಗ. ಅದರ ಅವನತಿಯೂ ಆರಂಭವಾದಂತಿತ್ತು. 1948ರಲ್ಲಿ ಬೆಂಗಳೂರು ನಗರದಲ್ಲಿ ನಡೆದ ಸೋಷಿಲಿಸ್ಟ್ ಪಕ್ಷದ ಬೃಹತ್ ಅಧಿವೇಶನದಲ್ಲಿ ಜಯಪ್ರಕಾಶ್ ನಾರಾಯಣರ ನೇತೃತ್ವದಲ್ಲಿ ಪಕ್ಷ 'ಮಾಸ್ ಬೇಸ್ಡ್ ಪಕ್ಷವಾಗಬೇಕೆಂದು ತೀರ್ಮಾನವಾಯಿತು. ಇಲ್ಲಿಂದ ಆರಂಭವಾದಂತೆ, ನಂತರ ಯಾರೆಂದರೆ ಅವರು ಪಕ್ಷ ಸೇರುವಂತಾಗಿ ಸಮಾಜವಾದಿ ತತ್ವ ಸಿದ್ಧಾಂತಗಳು ಬಡವಾಗತೊಡಗಿದವು. ಇವುಗಳ ಬದಲಿಗೆ ಬಂದದ್ದು ಅಧಿಕಾರ ರಾಜಕಾರಣ ಹಾಗೂ ಅದರ ಕಾಮನೆಗಳು, ಅತಿರೇಕಕ್ಕೆ ಹತ್ತಿದ ಜಾತೀಯ ವೈಷಮ್ಯಗಳು. ಇವುಗಳಿಂದ, ತತ್ವನಿಷ್ಟರಾಗಿದ್ದ ನಾಗಭೂಷಣರಿಗೆ ತಾವು ತಮ್ಮ ನೇತೃತ್ವದಲ್ಲಿ ಸ್ಥಾಪಿಸಿ ಬೆಳೆಸಿದ ಪಾರ್ಟಿಯ ಅವನತಿ ಶುರುವಾದ್ದನ್ನು ಕಂಡು ಮಾನಸಿಕವಾಗಿ ತೀವ್ರ ಆಘಾತವಾಗಿರಬೇಕು.

ಪಾರ್ಟಿಯ ಬಳೇಪೇಟೆ ಕಚೇರಿಯ ತಿಂಗಳ ಬಾಡಿಗೆ ಕಟ್ಟಲು ಬೀದಿ ಬೀದಿಗಳಲ್ಲಿ ಚಂದಾ ಎತ್ತಬೇಕಾಗಿದ್ದ ಸಂಕಷ್ಟದಲ್ಲಿ ಇನ್ನೂ ಇದ್ದ ಪಾರ್ಟಿಯ ಸ್ಥಿತಿಯಲ್ಲಿ, ಈ ಹೊಸ ಕಷ್ಟಗಳನ್ನೂ ನಿವಾರಿಸಿಕೊಳ್ಳಲು ಬೇಕಾದ ಸಾಹಸಕ್ಕೆ ನಾಗಭೂಷಣರ ಮನಸ್ಸು ಒಪ್ಪದಿಲ್ಲದಿರಬಹುದು. ಈ ಸ್ಥಿತಿಯಲ್ಲಿ, 1949ರಲ್ಲಿ ದಾವಣಗೆರೆಯಲ್ಲಿ ನಡೆದ ಪಾರ್ಟಿಯ ಸಮಾವೇಶದಲ್ಲಿ ಜನರಲ್ ಸೆಕ್ರೆಟರಿಯ ಸ್ಥಾನಕ್ಕೆ ಚುನಾವಣೆಗೆ ನಿಲ್ಲದೆ 23-24 ಹರೆಯದ ನಾಗಭೂಷಣರು ಪಾರ್ಟಿಯನ್ನು ತ್ಯಜಿಸಿದರು. ಆದರೆ ಅವರು ನಿರ್ದಿಷ್ಟವಾಗಿ ಏಕೆ ಪಕ್ಷ ತೊರೆದರು? ಮತ್ತು ಏಕೆ ಅವರ ಮಾನಸಿಕ ಸ್ಥಿತಿಯಲ್ಲಿ ವ್ಯತ್ಯಾಸವಾಯಿತು? ಅವರ ಬುದ್ಧಿ ಭ್ರಮಣೆಗೆ ಕಾರಣವೇನು? ಎನ್ನುವುದು ಈಗಲೂ ನಿಗೂಢವಾಗಿಯೇ ಇದೆ. ನಾಗಭೂಷಣರ ದೇಹಾಂತ್ಯ 1965ರ ಸರಿಸುಮಾರಿನಲ್ಲಿ ಆಯಿತೆಂದು ಜ್ಞಾಪಕ.
ಸೋಗಾಲ ನಾಗಭೂಷಣರ ಆತ್ಮಕ್ಕೆ ಶಾಂತಿಯಿರಲಿ.

-ಎಸ್. ಜಗನ್ನಾಥ್

(ಜನವರಿ, 2014)

ಕರ್ನಾಟಕದ ಆದಿ ಸಮಾಜವಾದಿ ಸದಾಶಿವ ಕಾರಂತ



ಕರ್ನಾಟಕದಲ್ಲಿ ಸಮಾಜವಾದದ ಬೇರುಗಳನ್ನು ಹುಡುಕುತ್ತಾ ಹೋದರೆ ಗೋಪಾಲಗೌಡ, ಲೋಹಿಯಾ ಇತ್ಯಾದಿ ಹೆಸರುಗಳು ಜನಮನದ ನಡುವೆ ಪ್ರಚಲಿತಕ್ಕೆ ಬರುವ ಮುನ್ನವೇ ಅವು ಈ ಮಣ್ಣಿನಲ್ಲಿ ನೆಲೆ ಕಾಣುವ ಪ್ರಯತ್ನಗಳು ನಡೆದಿರುವುದು ಗೊತ್ತಾಗುತ್ತದೆ. ಕಳೆದ ಶತಮಾನದ ಮುವ್ವತ್ತು ಮತ್ತು ನಲವತ್ತರ ದಶಕಗಳಲ್ಲೇ ಕಮಲಾದೇವಿ ಚಟ್ಟೋಪಧ್ಯಾಯ, ಶ್ರೀನಿವಾಸ ಮಲ್ಯ, ನೀಲಗಂಗಯ್ಯ ಪೂಜಾರ, ಕೋಣಿ ಸದಾಶಿವ ಕಾರಂತ, ಅಮ್ಮೆಂಬಳ ಬಾಳಪ್ಪ, ಆನಂದ-ಹೀಗೆ ಹಲವರು ಮಂಗಳೂರು-ಧಾರವಾಡ-ಹುಬ್ಬಳ್ಳಿ ಸುತ್ತಮುತ್ತ ಸಮಾಜವಾದದ ಸಂದೇಶ ಸಾರುವ ಕೆಲಸ ಮಾಡಿದ್ದರು. 1934ರಲ್ಲಿ ಕಾಂಗ್ರೆಸ್‌ನೊಳಗೇ ರಚಿತವಾಗಿದ್ದ ಕಾಂಗ್ರೆಸ್ ಸಮಾಜವಾದಿ ಪಕ್ಷ ಸಂಘಟನೆಯಲ್ಲಿ ತೊಡಗಿದ್ದರು. ಇವರಲ್ಲಿ ಸದಾಶಿವ ಕಾರಂತರು ಮುಂದೆ ಲೋಹಿಯಾರ ಆಪ್ತರಲ್ಲಿ ಒಬ್ಬರಾಗಿ ಅವರ ಸಮಾಜವಾದಿ ತತ್ವಗಳ ಪ್ರತಿಪಾದಕ ಮತ್ತು ವಿಶ್ಲೇಷಕರಾಗಿ ಮೂಡಿದ್ದು ಒಂದು ಸಾಹಸದ ಕಥೆಯೇ ಹೌದು.

ಸದಾಶಿವ ಕಾರಂತರು ಹುಟ್ಟಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಕೋಣಿ ಎಂಬ ಹಳ್ಳಿಯ ಬಡ ಬ್ರಾಹ್ಮಣ ಕೃಷಿ ಕುಟುಂಬದಲ್ಲಿ. ಹೈಸ್ಕೂಲ್ ವಿದ್ಯಾಭ್ಯಾಸ ಕುಂದಾಪುರದಲ್ಲಿ. ಗಾಢವಾದ ಗಾಂಧಿಯ ಪ್ರಭಾವ; ಹೈಸ್ಕೂಲ್ ಹುಡುಗ ಕಾರಂತ ಗಾಂಧೀಜಿಗೆ 'ಸ್ವಾತಂತ್ರ್ಯ ಚಳುವಳಿಯಲ್ಲಿ ವಿದ್ಯಾರ್ಥಿಗಳ ಪಾತ್ರ' ಕುರಿತು ಪತ್ರ ಬರೆದದ್ದೂ ಆಯಿತು. ಆ ದಿನಗಳಲ್ಲಿಯೇ ಮಾರ್ಕ್ಸ್‌ವಾದ ಓದಿದ ಹುಡುಗ ಎನಿಸಿಕೊಂಡರು. ಕ್ವಿಟ್ ಇಂಡಿಯಾ ಚಳುವಳಿಯ ಕಾವು ಕಾರಂತರನ್ನೂ ಬಿಡಲಿಲ್ಲ. ಆರು ತಿಂಗಳು ಬಳ್ಳಾರಿ ಜೈಲು ವಾಸ. ಕಾಲೇಜಿನ ಓದು ತುಂಡಾಗಿ ಬಿಟ್ಟಿತು. ಆದರೆ ಸಮಾಜವಾದ ಕುರಿತ ಓದು ನಿಲ್ಲಲಿಲ್ಲ. ಬಿಂದು ಮಾಧವ ಬುರ್ಲಿಯವರ 'ಸಮಾಜವಾದ' ಕೃತಿ ಓದಿದಾಗ ಕಾಂಗ್ರೆಸ್‌ಗಿಂತ ಭಿನ್ನ ಗುಣ ಇಲ್ಲಿದೆ ಎನಿಸತೊಡಗಿತು. ಹಾಗೆಯೇ ಜೆ.ಪಿ.ಯವರ 'ಸಮಾಜವಾದ ಏಕೆ?' ಕೃತಿ ಓದಿದಾಗ ಮತ್ತಷ್ಟು ಸಮಾಜವಾದಿ ಚಿಂತನೆಗಳು ಆಕರ್ಷಿಸಿದವು. 1944ರಲ್ಲಿ ಭೂಗತರಾಗಿ ಜೆ.ಪಿ.ಯವರ ರಹಸ್ಯ ಚಟುವಟಿಕೆಗಳನ್ನು ಮುಂದುವರೆಸಲು ತೊಢಗಿದರು. ಓದು ನಿಂತಿದ್ದರ ಬಗ್ಗೆಯೂ ಅಸಮಾಧಾನವಿತ್ತು. ಜೈಲಿನಲ್ಲಿ ಪರಿಚಯವಾದ ಶೇಷಣ್ಣ ಬುರ್ಲಿ ಧಾರವಾಡಕ್ಕೆ ಹೋಗು ಎಂದು ಸಲಹೆ ನೀಡಿದ್ದರು. ಧಾರವಾಡದಲ್ಲಿ ಕಾಲೇಜು ಸೇರಿದ್ದೂ ಆಯಿತು. ಹುಬ್ಬಳ್ಳಿ ಧಾರವಾಡದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ (ಸಿ.ಎಸ್.ಪಿ) ಚಟುವಟಿಕೆಗಳು ಗರಿಗೆದರಿದ್ದವು.

ದಕ್ಷಿಣ ಕನ್ನಡದಲ್ಲಿ ಸಮಾಜವಾದಿ ಚಟುವಟಿಕೆಗಳನ್ನು ನಡೆಸುತ್ತಿದ್ದ ಶ್ರೀನಿವಾಸ

ಮಲ್ಯರು ಕಮಲಾದೇವಿಯವರನ್ನು(ಆಗಿನ್ನೂ ಅವರು ಚಟ್ಟೋಪಧ್ಯಾಯ ಆಗಿರಲಿಲ್ಲ) ಅಲ್ಲಿಗೆ ಕಳಿಸಿದ್ದರು. ಗದಗದಲ್ಲಿ ಅವರು ಎಡಪಂಥೀಯ ಸಮ್ಮೇಳನ ಆಯೋಜಿಸಿದ್ದರು. ಈ ಸಮ್ಮೇಳನವೇ ಕರ್ನಾಟಕದಲ್ಲಿ ಸಮಾಜವಾದಿ ಚಟುವಟಿಕೆಯ ಆರಂಭಕ್ಕೆ ಚಿಮ್ಮು ಹಲಗೆಯಾಯಿತು. ನೀಲ ಗಂಗಯ್ಯ ಪೂಜಾರರು ಮೊದಲೇ ಅಲ್ಲಿದ್ದರು. ಅಮ್ಮೆಂಬಳ ಆನಂದರು ಅಲ್ಲಿಗೆ ಬಂದು ಸೇರಿದ್ದರು. ಪೂಜಾರರು "ನನಗೆ ಸಮಾಜವಾದ, ಮಾರ್ಕ್ಸ್‌ವಾದ ಕಲಿಸಿದವರೇ ಕಾರಂತರು" ಎಂದು ನೆನಪಿಸಿಕೊಳ್ಳುವಷ್ಟು ಕಾರಂತರು ಅಲ್ಲಿ ಅಧ್ಯಯನ ಶಿಸ್ತನ್ನು ರೂಢಿಸಿಕೊಂಡಿದ್ದರು. ಆನಂದರೂ ಕೂಡ "ನಾನು ಸೋಷಲಿಸ್ಟ್ ಆಗಲು ಓದಲು ಹಚ್ಚಿದವರೇ ಕಾರಂತರು" ಎಂದು ನೆನಪಿಸಿಕೊಳ್ಳುತ್ತಾರೆ.

ರಷ್ಯನ್ ಕ್ರಾಂತಿ, ಕಮ್ಯೂನಿಸಂ ಬಗ್ಗೆಯೂ ಕಾರಂತರು ಆಳವಾಗಿ ಓದಿಕೊಂಡಿದ್ದರು. ಕಮಲಾದೇವಿಯವರಿಗೆ ಈ ಸುಳಿವು ಸಿಕ್ಕಿತ್ತು. ಮುಂದೆ ದಿನಕರ ದೇಸಾಯಿ ದಕ್ಷಿಣ ಕನ್ನಡ ವಿದ್ಯಾರ್ಥಿ ಸಮ್ಮೇಳನ ಸಂಘಟಿಸಿ ಕಾರಂತರಿಂದ ಇಡೀ ದಿನ ಸಮಾಜವಾದಿ ಚಿಂತನೆಗೆ ಅನುವು ಮಾಡಿಕೊಟ್ಟಿದ್ದರು. ಸಿ.ಎಸ್.ಪಿ. ಕಛೇರಿಯಲ್ಲಿ ಕಾರಂತರು ಕಾರ್ಯದರ್ಶಿ. ಅಮ್ಮೆಂಬಳ ಆನಂದರವರು ಸಹಾಯಕರಾಗಿ ಬಂದರು. ಇವರಿಬ್ಬರೂ ಆಗ ಸೋಷಲಿಸ್ಟ್ ಕಾರಂತ, ಸೋಷಲಿಸ್ಟ್ ಆನಂದ ಎಂದೇ ಪ್ರಸಿದ್ಧರು. ಇಬ್ಬರಿಗೂ ಕಮಲಾದೇವಿ ಒಂದಿಷ್ಟು ಸಂಬಳ ಸಿಗುವ ವ್ಯವಸ್ಥೆ ಮಾಡಿದ್ದರು. ಜಯಪ್ರಕಾಶ್ ನಾರಾಯಣ್ ಮಂಗಳೂರಿಗೆ ಬಂದಾಗ ವಿಭಾಗೀಯ ಸಮ್ಮೇಳನದಲ್ಲಿ ಕಾರಂತರು ಕೆಲಸ ಮಾಡಿದ್ದರು. ಅವರ ಭಾಷಣಗಳನ್ನು ಬರೆದುಕೊಂಡು ಮುದ್ರಿಸಿ ಸದಸ್ಯರಿಗೆ ಹಂಚುತ್ತಿದ್ದರು. ಗರಗದಲ್ಲಿ ಕೃಷಿಕಾರ್ಮಿಕರ ಸಂಘಟನೆ ಹಾಗೂ ಸಮ್ಮೇಳನ ನಡೆಸುವಲ್ಲಿ ಕಾರಂತರ ಕೆಲಸ ದೊಡ್ಡದು. ಕಮಲಾದೇವಿಯವರನ್ನು ಮಂಗಳೂರಿನಿಂದ ಬರಮಾಡಿಕೊಂಡು ಸಮ್ಮೇಳನವನ್ನು ಯಶಸ್ವಿಯಾಗಿ ನಿರ್ವಹಿಸಿದರು.

ಜೆಪಿ.ಯವರ ಕರ್ನಾಟಕದ ಪ್ರವಾಸ ಸಮಯದಲ್ಲಿ ಶ್ರೀನಿವಾಸ ಮಲ್ಯರು ಜನರಿಂದ ದೇಣಿಗೆ ಸಂಗ್ರಹಿಸಿ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಮಂಗಳೂರಿನಲ್ಲಿ ಅವರಿಗೆ ನಿಧಿ ಅರ್ಪಿಸಿದರು. ಜೆ.ಪಿ.ಯವರು ಅದನ್ನು ಸಮಾಜವಾದಿ ಚಟುವಟಿಕೆಗಳಿಗಾಗಿ ಕಮಲಾದೇವಿಯವರಿಗೆ ನೀಡಿದರು. ಅವರು ಅದನ್ನು ಕಾರಂತರ ಸುಪರ್ದಿಗೆ ಕೊಟ್ಟು ಸಮಾಜವಾದಿ ಪತ್ರಿಕೆ 'ಜಾಗೃತಿ'ಯನ್ನು ಬೆಳೆಸಲು ಹೇಳಿದರು. ಆರೋಗ್ಯ ಕೆಟ್ಟು ಕಾರಂತರು ಕೆಲದಿನ ಊರಿಗೆ ಹೋಗಿ ವಾಪಸ್ ಬರುವ ಹೊತ್ತಿಗೆ ಪತ್ರಿಕೆಯ ಸಂಪಾದಕರಾಗಿ ಅದರ ಜವಾಬ್ದಾರಿ ಹೊತ್ತಿದ್ದ ಖಾದ್ರಿ ಶಾಮಣ್ಣ, ಭಾ.ಸು. ಕೃಷ್ಣಮೂರ್ತಿ ಮುಂತಾದವರು ಎಲ್ಲ ಹಣ ಖರ್ಚಾಗಿ ಹೋಯಿತೆಂದರು! ಇದರಿಂದ ಆಘಾತಕ್ಕೊಳಗಾದ ಕಾರಂತರು ಪತ್ರಿಕೆಯ ಆಡಳಿತದಿಂದ ಮುಕ್ತರಾಗ ಬಯಸಿದಾಗ ಆನಂದರು ತಡೆದರಾದರೂ ಅವರು ಹುಬ್ಬಳಿ, ಧಾರವಾಡಗಳಲ್ಲಿ ದೀರ್ಘಕಾಲ ನಿಂತು ಓಡು ಮುಂದುವರೆಸಲು ಆಗಲಿಲ್ಲ. ಕಛೇರಿಯಲ್ಲಿ ಬೇರೆಯವರ ಪ್ರವೇಶ, ಹಣಕಾಸಿನ ದುರುಪಯೋಗ, ಕೆಲ ಸಮಾಜವಾದಿಗಳ ಐಷಾರಾಮಿ ಹವ್ಯಾಸಗಳು ಮುಂತಾದ ಕಾರಣಗಳಿಂದ

ಹುಬ್ಬಳ್ಳಿ ಕಛೇರಿ ಮಂಕಾಗ ತೊಡಗಿ ಕೊನೆಗೆ ಮುಚ್ಚಲ್ಪಟ್ಟಿತು. ಹೊಸಪೇಟೆಯಲ್ಲಿ ನಡೆದ ಸಮಾಜವಾದಿ ಸಮಾವೇಶದ ನಂತರ ಕರ್ನಾಟಕಕ್ಕೆ ವಿದಾಯ ಹೇಳಿದ ಕಾರಂತರು 1949ರಲ್ಲಿ ಮುಂಬೈಗೆ ಹೊರಟು ಹೋದರು.

ಮುಂಬೈನಲ್ಲಿ ಸದಾಶಿವ ಕಾರಂತರು ಕಾಲೇಜು ಸೇರಿ ತಮ್ಮ ಪಾಡಿಗೆ ತಾವು ಶಿಸ್ತಿನ ಜೀವನ ನಡೆಸುತ್ತಾ ಅರ್ಥಶಾಸ್ತ್ರದಲ್ಲಿ ಎಂ.ಎ. ಮುಗಿಸಿದ್ದಲ್ಲದೆ ಖ್ಯಾತ ಸಮಾಜವಾದಿ ಚಿಂತಕ ದಾಂತಾವಾಲರ ಶಿಷ್ಯರಾಗಿ ಡಾಕ್ಟರೇಟ್ ಪದವಿಗಳಿಸಿದರು. ಅಲ್ಲಿಯೇ ಗುಜರಾತಿ ಮೂಲದ ಸಮಾಜವಾದಿ ಒಲವಿನ ನಿರ್ಮಲಾರನ್ನು ಪ್ರೇಮಿಸಿ 1958ರಲ್ಲಿ ಮದುವೆಯಾದರು. ಪತ್ನಿಗೆ ಬ್ಯಾಂಕ್ ಉದ್ಯೋಗವಿತ್ತು. ಈ ಮಧ್ಯೆ, ಕಾರಂತರ ವ್ಯಕ್ತಿತ್ವದ ಅವಿಭಾಜ್ಯ ಅಂಗವಾಗಿದ್ದ ಸಮಾಜವಾದಿ ಗುಣಕ್ಕೆ ಅವಕಾಶ ಒದಗಿಬಂದಿದ್ದು 1964ರಲ್ಲಿ. ಆಗಿನ ಸಮಾಜವಾದಿ ಸಮಾವೇಶಗಳು ಪಕ್ಕಾ ವಿಶ್ವವಿದ್ಯಾನಿಲಯಗಳ ಅಧ್ಯಯನ ಕೇಂದ್ರಗಳಂತೆ ಕೆಲಸ ಮಾಡುತ್ತಿದ್ದವು. ಕಾನ್ಪುರ, ಫೈಜ್‌ಪುರ, ಮೀರತ್, ಇಂತಹ ಕಡೆ ಜರುಗಿದ ಸಮ್ಮೇಳನಗಳಲ್ಲಿ ಕಾರಂತರು ಭಾಗವಹಿಸುತ್ತಿದ್ದರು. ಅಲ್ಲಿ ನಡೆಯುತ್ತಿದ್ದ ಚರ್ಚೆಗಳು, ಅನುಮೋದಿತವಾಗುತ್ತಿದ್ದ ನಿರ್ಣಯಗಳು ಮುಂದೆ ಪಕ್ಷದ ಪ್ರಣಾಳಿಕೆಗಳಾಗಿ ರೂಪುಗೊಳ್ಳುತ್ತಿದ್ದವು. 1964ರಲ್ಲಿ ಕಾನ್ಪುರದಲ್ಲಿ ಇಂತಹ ಸಮ್ಮೇಳನ ನಡೆದಾಗ ಕಾರಂತರು ಲೋಹಿಯಾರ ಜನಪರವಾದ ಪ್ರಖರ ಸಮಾಜವಾದಿ ಚಿಂತನೆಗಳಿಗೆ ಮಾರು ಹೋಗಿ ಅವರ ತೀವ್ರ ಅಭಿಮಾನಿಗಳಲ್ಲೊಬ್ಬರಾಗಿ ಮಾರ್ಪಾಟಾದರು. ಅವರೊಂದಿಗೆ ನಿರಂತರ ಸಂಪರ್ಕವಿರಿಸಿಕೊಂಡು ಸಮಾಜವಾದಿ ತತ್ವಗಳ ಬಗ್ಗೆ ಚಿಂತನೆ ಮತ್ತು ಸಮಾಲೋಚನೆಗಳಲ್ಲಿ ನಿರತರಾದರು.

ಲೋಹಿಯಾ 1964ರಲ್ಲಿ ಸಂಸತ್ ಸದಸ್ಯರಾಗಿ ಆಯ್ಕೆಯಾದಾಗ ಅವರು ತಮಗೆ ಸಹಾಯಕರಾಗಿ ಕೆಲಸ ಮಾಡಲು ಕಾರಂತರನ್ನು ದೆಹಲಿಗೆ ಕರೆಸಿಕೊಂಡರು. ಹಾಗಾಗಿ 1964ರಿಂದ ಲೋಹಿಯಾ 1967ರಲ್ಲಿ ನಿಧನರಾಗುವವರೆಗೂ ಕಾರಂತರು ಅವರ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಲೋಹಿಯಾರಿಗೆ ಬಂದ ಪತ್ರಗಳಿಗೆ ಉತ್ತರಿಸುವುದು, ದೂರು, ಸಲಹೆ, ಕಾರ್ಯಕ್ರಮ ಬದಲಾವಣೆ ಇತ್ಯಾದಿ ಕಡತಗಳನ್ನು ನೋಡಿಕೊಳ್ಳುವುದು ಇವರ ಕೆಲಸವಾಗಿತ್ತು. ಜೊತೆಗೆ ಲೋಹಿಯಾರೊಂದಿಗೆ ತಾತ್ವಿಕ ಚರ್ಚೆಗಳನ್ನೂ ನಡೆಸುತ್ತಿದ್ದರು. ಲೋಹಿಯಾರೊಂದಿಗೆ ಚರ್ಚಿಸುತ್ತಾ ಕಮ್ಯುನಿಸಂ ಮತ್ತು ಪ್ರಜಾಪ್ರಭುತ್ವಗಳ ಗುಣದೋಷಗಳನ್ನು ಚರ್ಚಿಸುವಾಗ ಇವರ ವೈಚಾರಿಕ ಪ್ರಬುದ್ಧತೆ ಗಮನಿಸಿದ ಲೋಹಿಯಾ ಲೇಖನಗಳನ್ನು ಬರೆಯಲು ಸೂಚಿಸಿದರು. ಅಲ್ಲಿಂದ ಅವರು ಪತ್ರಿಕೆಗಳಿಗೆ ರಾಜಕೀಯ ಬೆಳವಣಿಗೆಗಳ ವ್ಯಾಖ್ಯಾನ–ವಿಮರ್ಶೆಗಳನ್ನು ಬರೆಯಲಾರಂಭಿಸಿದರು. ಸಮಾಜವಾದಿ ಚಿಂತನೆಯ ಮೂರು ಕೃತಿಗಳನ್ನು ರಚಿಸಿರುವ ಇವರು ಮುಂಬೈನ ಸಿಂಧು ಪ್ರಕಾಶನಕ್ಕಾಗಿ ಲೋಹಿಯಾ ನೆನಪಿನ ಮಾಲೆಯ ಪುಸ್ತಕಗಳನ್ನೂ ಸಂಪಾದಿಸಿ ನೀಡಿದ್ದಾರೆ..

ಲೋಹಿಯಾರ ನಿಧನದ ನಂತರ ಮುಂಬೈಗೆ ವಾಪಸಾದ ಕಾರಂತರು ಜೀವನ ನಿರ್ವಹಣೆಗಾಗಿ ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ ಅರ್ಥಶಾಸ್ತ್ರಜ್ಞರಾಗಿ ಕೆಲಸಕ್ಕೆ ಸೇರಿಕೊಂಡರು. ನಂತರ ಅನಾರೋಗ್ಯದಿಂದಾಗಿ ಸ್ವಯಂ ನಿವೃತ್ತಿ

ಪಡೆದರು. ಮೂವತ್ತೆರಡು ವಯಸ್ಸಿನ ಏಕೈಕ ತರುಣ ಮಗನ ಅಕಾಲಿಕ ಸಾವಿನಿಂದ ಜರ್ಝರಿತರಾದ ದಂಪತಿಗಳು, ವಿಚಲಿತರಾಗದೆ ಮುಂಬೈನ ಅಪಾರ್ಟ್‌ಮೆಂಟ್ ಒಂದರಲ್ಲಿ ಮೌನವಾಗಿ ಶಾಂತಿಯಿಂದ ದಿನ ದೂಡುತ್ತಿದ್ದಾರೆ. ಕರ್ನಾಟಕ ಅವರಿಗೆ ಕೇವಲ ನೆನಪು. ಕರ್ನಾಟಕದ ಸಮಾಜವಾದಿಗಳಿಗೆ ಅವರೂ ಒಂದು ನೆನಪು!

ದೇವರ ಬಗ್ಗೆ ಕೇಳಿದರೆ–ಹೇಳುವುದು ಕಷ್ಟ ಎನ್ನುವ ಅವರು ಇಂದ್ರಿಯ ಗ್ರಹಿಕೆಯ ಆಚೆ, ನಮ್ಮ ಲೌಕಿಕ ಅಸ್ತಿತ್ವದ ಆಚೆ ನಿಗೂಢವಾದದ್ದೊಂದಿದೆ. ಅದು ಲೋಕ ನಿಯಂತ್ರಿಸುವ ಶಕ್ತಿ. ನಾವು ನಮ್ಮಿಂದಲೇ ಆದವರಲ್ಲ– ಹೀಗೆ ಲೋಹಿಯಾರ ಅಪ್ಪಟ ಭಾರತೀಯ ಸಮಾಜವಾದೀ ಚಿಂತನೆಗಳನ್ನು ಮೈಗೂಡಿಸಿಕೊಂಡು, ಬಾಳಿ, ಯೋಚಿಸಿ, ಹಾಗೇ ಮದುವೆ ಆಗಿ, ಕನ್ನಡ ನಾಡಿನಾಚೆ, ಆರು ದಶಕಗಳನ್ನು ಮೀರಿ ಬದುಕುತ್ತಿರುವ ಈ ಕನ್ನಡಿಗನನ್ನು ಕರ್ನಾಟಕದ ಸಮಾಜವಾದಿಗಳು ನೆನಪಿಸಿಕೊಂಡು ಸೂಕ್ತ ರೀತಿಯಲ್ಲಿ ಕೃತಜ್ಞತೆಗಳನ್ನು ಸಲ್ಲಿಸಬೇಕಾಗಿದೆ.

ಸಂಗ್ರಹ ಲೇಖನ: ಪ್ರೊ. ಎಂ. ಚಂದ್ರಶೇಖರಯ್ಯ

(ಡಿಸೆಂಬರ್, 2014)



ಹೋರಾಟದ ಬದುಕಿನ ಅಮ್ಮೆಂಬಳ ಬಾಳಪ್ಪ



ಕೋಮುವಾದ ಮತ್ತು ಬಂಡವಾಳ ಕೇಂದ್ರಿತ ಅಭಿವೃದ್ಧಿ ಪ್ರಕ್ರಿಯೆಗೆ ಒಳಗಾಗುತ್ತಿರುವ ದಕ್ಷಿಣ ಕನ್ನಡ ಜಿಲ್ಲೆ ಒಂದು ಕಾಲಕ್ಕೆ ಸಮಾಜವಾದಿ ಹೋರಾಟಗಳಿಗೆ ಹೆಸರುವಾಸಿಯಾಗಿತ್ತು. ಹಲವಾರು ಮಂದಿ ಮಾರ್ಕ್ಸ್‌ವಾದಿ ಮತ್ತು ಸಮಾಜವಾದಿ ಹೋರಾಟಗಾರರು ಈ ಜಿಲ್ಲೆಯಲ್ಲಿ ಆಗಿ ಹೋಗಿದ್ದಾರೆ. ಇತ್ತೀಚೆಗೆ ಅಗಲಿದ ಡಾ. ಅಮ್ಮೆಂಬಳ ಬಾಳಪ್ಪ ಇಂಥ ಬದ್ಧತೆಯುಳ್ಳ ಪ್ರಮುಖ ಸಮಾಜವಾದಿ ಹೋರಾಟಗಾರರಲ್ಲಿ ಒಬ್ಬರಾಗಿದ್ದಾರೆ.

ರಾಷ್ಟ್ರೀಯ ಹೋರಾಟದ ಜೊತೆಗೆ ಬೆಳೆದುಬಂದ ಮಾರ್ಕ್ಸ್‌ವಾದ ಮತ್ತು ಸಮಾಜವಾದಿ ಹೋರಾಟ ಮತ್ತು ಚಿಂತನೆಗಳು ಭಾರತವನ್ನು ದುರ್ಬಲರ ಪರವಾಗಿ ನಿರೂಪಿಸಲು ಪ್ರಯತ್ನಪಟ್ಟವು. ಈ ಹೋರಾಟಗಳಿಗೆ ಭಾರತದ ಸ್ವಾತಂತ್ರ್ಯಕ್ಕಿಂತಲೂ, ಜನರು ಸ್ವತಂತ್ರರಾಗುವುದು, ಸ್ವಾವಲಂಬಿಗಳಾವುದು, ಏಳ್ಗೆಯ ದಾರಿ ಹಿಡಿಯುವುದು ಮುಖ್ಯವಾಗಿತ್ತು. ಲೋಹಿಯಾ, ಜೆ.ಪಿ., ಮುಂತಾದ ಮಹಾನ್ ನಾಯಕರು ಭಾರತವನ್ನು ಸಮಾಜವಾದಿ ಭೂಮಿಕೆಯಲ್ಲಿ ರೂಪಿಸಲು ಪ್ರಯತ್ನಪಟ್ಟರು. ಸ್ವಾತಂತ್ರ್ಯ, ಸಮಾನತೆ, ಸಮಪಾಲು, ಸಮಬಾಳು ಇವರ ಆದರ್ಶಗಳಾಗಿದ್ದವು. ಜಾತಿ, ಬಡತನ, ಜನರ ನೋವು ಸಂಕಟಗಳು ಇವರ ಹೋರಾಟದ ಮುಖ್ಯ ವಿಷಯಗಳಾಗಿದ್ದವು. ಈ ಬಗೆಯ ಮಹಾನ್ ನಾಯಕರಿಂದ ಆಕರ್ಷಿತರಾಗಿ ಆಸಕ್ತರ ಬದುಕನ್ನು ಸುಧಾರಿಸಲು ದುಡಿದ ಅಮ್ಮೆಂಬಳ ಬಾಳಪ್ಪ ಸ್ಮರಣೀಯ ವ್ಯಕ್ತಿಯಾಗಿದ್ದಾರೆ.

ಡಾ. ಅಮ್ಮೆಂಬಳ ಬಾಳಪ್ಪ 1922 ಫೆಬ್ರವರಿ 23ರಂದು ತನಿಯ ಮೂಲ್ಯ ಹಾಗೂ ಅಬ್ಬಕ್ಕು ಅವರ ಮಗನಾಗಿ ದ.ಕ. ಜಿಲ್ಲೆಯ ಬಂಟ್ವಾಳ ತಾಲೂಕಿನ ಕುರ್ನಾಡು ಗ್ರಾಮದ ದೇವಸ್ಯ (ಅಮ್ಮೆಂಬಳ) ಎಂಬಲ್ಲಿ ಹಿಂದುಳಿದ ಕುಲಾಲ(ಕುಂಬಾರ) ಜಾತಿಯಲ್ಲಿ ಹುಟ್ಟಿದರು. ಇವರದು ಬಡ ಕುಟುಂಬ. ಜಮೀನ್ದಾರಿ ಪದ್ಧತಿ ಪ್ರಬಲವಾಗಿದ್ದ ಕಾಲ ಅದು. ಶೂದ್ರರ ಶಿಕ್ಷಣಕ್ಕೆ ಮಾನ್ಯತೆ ಇರಲಿಲ್ಲ. ಹಾಗಾಗಿ ಬಾಳಪ್ಪ ಓದಲು ಅವಕಾಶ ಸಿಗಲಿಲ್ಲ. ಮಾತ್ರವಲ್ಲದೇ ಇವರದ್ದು ಒಂದು ಅವಿಭಕ್ತ ಕುಟುಂಬವಾಗಿದ್ದು ಜಮೀನು ಎಲ್ಲ ದೊಡ್ಡಪ್ಪನ ಕೈಯಲ್ಲಿ ಇತ್ತು. ಬಾಳಪ್ಪರ ತಂದೆಗೆ ಮಗ ಓದಬೇಕೆಂಬ ಆಸೆ ಇದ್ದರೂ ಓದಿಸಲು ಸಾಧ್ಯವಾಗಲಿಲ್ಲ. ಹಾಗಾಗಿ ಬಾಳಪ್ಪ ಅವರಿಗೆ ಊರಲ್ಲಿ ಒಂದು ವರ್ಷ ಮಾತ್ರ ಶಾಲೆಗೆ ಹೋಗಲು ಸಾಧ್ಯವಾಯಿತು. ನಂತರ ಬಾಳಪ್ಪ ತನ್ನ ಎಂಟನೇ ವಯಸ್ಸಿಗೆ ಮಂಗಳೂರಿಗೆ ಬರುತ್ತಾರೆ. ಅಲ್ಲಿ ಬಂಧುಗಳ ಮನೆಯಲ್ಲಿದ್ದುಕೊಂಡು ಹೋಟೆಲಿನಲ್ಲಿ ದುಡಿಯುತ್ತಾರೆ. ಮಂಗಳೂರಿನ ವಾತಾವರಣದಲ್ಲಿ ಶಿಕ್ಷಣದ ಮಹತ್ವ ಅರಿವಿಗೆ ಬಂದು ಪುನ: ಶಾಲೆ ಕಲಿಯಲು

ಆರಂಭಿಸುತ್ತಾರೆ. ಬಾಳಪ್ಪ ಕಲಿತದ್ದು ನಾಲ್ಕನೇ ತರಗತಿಯವರೆಗೆ ಮಾತ್ರ.

ಮಂಗಳೂರಿನ ಡೊಂಗರಕೇರಿಯಲ್ಲಿದ್ದ ಮಂಗಳೂರು ಮುನ್ಸಿಪಲ್ ಹೆಲ್ತ್ ಆಫೀಸರ್ ಒಬ್ಬರಿಗೆ ತನ್ನ ಅನಾರೋಗ್ಯ ಪೀಡಿತ ವೃದ್ಧ ತಂದೆಯವರನ್ನು ನೋಡಿಕೊಳ್ಳಲು ಒಬ್ಬ ಹುಡುಗನ ಅವಶ್ಯಕತೆ ಇದ್ದುದರಿಂದ, ಬಾಳಪ್ಪ ಆ ಕೆಲಸಕ್ಕೆ ಸೇರಿಕೊಳ್ಳುತ್ತಾರೆ. ವೃದ್ಧನ ಸ್ನಾನ, ಉಪಚಾರ ಮುಂತಾದ ಕೆಲಸಗಳ ಜೊತೆಗೆ, ಪತ್ರಿಕೆ ಓದಿ ಹೇಳುವ ಕೆಲಸವನ್ನು ಅವರು ಮಾಡಬೇಕಾಯಿತು. ಹೀಗೆ ಪತ್ರಿಕೆಗಳಿಂದ ಹಲವಾರು ವಿಚಾರಗಳು ಬಾಳಪ್ಪರಿಗೆ ತಿಳಿದು ಬಂತು. ವೃದ್ಧರ ನಿಧನಾನಂತರ ಬಾಳಪ್ಪರ ಕೆಲಸದ ನಿಯತ್ತು ಗಮನಿಸಿದ್ದ ಹೆಲ್ತ್ ಆಫೀಸರ್ ಅವರಿಗೆ ಮುನ್ಸಿಪಲ್‌ನಲ್ಲಿ ಮೇಸ್ತ್ರಿ ಕೆಲಸ ಕೊಡಿಸಿದರು.

ಆಗ ಮಂಗಳೂರಿನಲ್ಲಿ ಸ್ವಾತಂತ್ರ್ಯ ಹೋರಾಟ ಪ್ರಭಾವ ಜಾಸ್ತಿಯಾಗಿತ್ತು. ಹಲವಾರು ಮಂದಿ ಹೋರಾಟದಲ್ಲಿ ತೊಡಗಿಸಿಕೊಂಡಿದ್ದರು. ಮಾರ್ಕ್ಸ್‌ವಾದಿ, ಸಮಾಜವಾದಿ ಸಿದ್ಧಾಂತಗಳ ಹೋರಾಟಗಾರರ ಪ್ರಭಾವದಿಂದ ಬಾಳಪ್ಪ ಕೂಡಾ ಸ್ವಾತಂತ್ರ್ಯ ಸಿಗಬೇಕು, ಜಾತಿ ಭೇದ ದೂರವಾಗಬೇಕು, ಬಡವರು ಏಳ್ಗೆ ಹೊಂದಬೇಕೆನ್ನುವ ವಿಚಾರಗಳನ್ನು ಬೆಳೆಸಿಕೊಂಡರು.

ಬ್ರಿಟಿಷರ ಇಚ್ಛೆಯಂತೆ 2ನೇ ಜಾಗತಿಕ ಯುದ್ಧಕ್ಕೆ ಭಾರತ ಸಹಾಯ ನೀಡಬಾರದೆನ್ನುವುದು ಗಾಂಧಿಯ ನಿಲುವಾಗಿತ್ತು. ಯುದ್ಧಕ್ಕೆ ಸಹಾಯ ನೀಡದಿರುವುದು ಅಪರಾಧ ಎಂಬ ಬ್ರಿಟಿಷರ ಕಾನೂನನ್ನು ಮುರಿಯಲು ಗಾಂಧಿ ಸತ್ಯಾಗ್ರಹ ಮತ್ತು ಚಳುವಳಿಯ ದಾರಿ ಹಿಡಿದಿದ್ದರು. ನಿರೀಕ್ಷೆಯಂತೆ ಗಾಂಧಿಯ ಬಂಧನವಾಯಿತು. ಇದರಿಂದ ದೇಶದಾದ್ಯಂತ ಜನರಲ್ಲಿ ಸ್ವಾತಂತ್ರ್ಯ ಹೋರಾಟದ ಪ್ರಜ್ಞೆ ಬೆಳೆಯಿತು. ಹೀಗೆ 1942ರ 'ಕ್ವಿಟ್ ಇಂಡಿಯಾ' ಚಳುವಳಿಗೆ ಅಪಾರ ಜನ ಬೆಂಬಲ ಸಿಕ್ಕಿತು. ಮದ್ರಾಸ್ ಸ್ಥಳೀಯ ಸರಕಾರದಲ್ಲಿ ಸಚಿವರಾಗಿದ್ದ ಮಂಗಳೂರಿನ ಕೆ.ಆರ್. ಕಾರಂತರ (ಶಿವರಾಮ ಕಾರಂತರ ಅಣ್ಣ) ಬಂಧನವಾಯಿತು. ಆದರೂ ಕಾಂಗ್ರೆಸ್ ಸಭೆಯ ತೀರ್ಮಾನದಂತೆ ಆಜಾದ್ ಮೈದಾನದಲ್ಲಿ ಆಗಸ್ಟ್ 9ರ ಬೆಳಿಗ್ಗೆ ಶ್ರೀಮತಿ ಅರುಣಾ ಅಸೀಫಲಿ, ಅಚ್ಯುತ್ ಪಟವರ್ಧನ್ ಧ್ವಜಾರೋಹಣ ಮಾಡುವಲ್ಲಿ ಸಫಲರಾದರು. ಇದರಿಂದ ಉತ್ಸಾಹಗೊಂಡ ದ.ಕ. ಜಿಲ್ಲೆಯಲ್ಲಿ ಚಳವಳಿ ತೀವ್ರಗೊಂಡಿತು. ಅದೇ ದಿನ ಕಾರ್ಕಳ ತಾಲ್ಲೂಕಿನ ಮುದ್ರಾಡಿಯವರಾದ ಎಂ.ಡಿ.ಅಧಿಕಾರಿ ಅವರ ನೇತೃತ್ವದಲ್ಲಿ ಮಂಗಳೂರಿನಲ್ಲಿ ಕೋರ್ಟ್ ಪಿಕೆಟಿಂಗ್ ಮಾಡಲಾಯಿತು. ತನ್ನ 20ನೇ ವಯಸ್ಸಿನಲ್ಲಿ ಬಾಳಪ್ಪ ತನ್ನ ಸ್ನೇಹಿತರೊಂದಿಗೆ ಸೇರಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಜಿಲ್ಲೆಯಲ್ಲಿ ವಿಧಿಸಲಾಗಿದ್ದ 144ನೇ ಕಲಂ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಸಾವಿರಾರು ಕಾರ್ಯಕರ್ತರು ಮೆರವಣಿಗೆಯಲ್ಲಿ ಸೆಂಟ್ರಲ್ ಮೈದಾನಕ್ಕೆ ಬಂದು ಸಾರ್ವಜನಿಕ ಸಭೆ ನಡೆಸಿದರು. ಎಂ.ಡಿ. ಅಧಿಕಾರಿಯವರು ಭಾಷಣ ಮಾಡುವಾಗ ಪೋಲೀಸರು ಲಾಠಿ ಪ್ರಹಾರ ಮಾಡಿದರು. ತಲೆಗೆ ತೀವ್ರ ಹೊಡೆತ ಬಿದ್ದು ಅಧಿಕಾರಿಯವರು ಪ್ರಜ್ಞೆ ತಪ್ಪಿ ಬಿದ್ದರು. ಬಾಳಪ್ಪರ ಮಿತ್ರ ಲೋಕಯ್ಯ ಶೆಟ್ಟಿ ಅಧಿಕಾರಿಯವರನ್ನು ಎತ್ತಿಕೊಂಡು ಆಸ್ಪತ್ರೆಗೆ ಧಾವಿಸಿದರು. ಈ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದ ಬಾಳಪ್ಪನವರ

ಬಂಧನವಾಯಿತು. ಒಂದು ತಿಂಗಳ ಶಿಕ್ಷೆಯ ನಂತರ ಬಿಡುಗಡೆಗೊಂಡರು. ಜೈಲಿನಿಂದ ಹೊರಬಂದಾಗ ಬಾಳಪ್ಪ ಕೆಲಸ ಕಳೆದುಕೊಂಡಿದ್ದರು.

ನಂತರ ಜೀವನೋಪಾಯಕ್ಕಾಗಿ ಅವರು ಹಂಪನಕಟ್ಟಾದಲ್ಲಿದ್ದ ಕೆನರಾ ಮೆಡಿಕಲ್ಸ್‌ನಲ್ಲಿ ಸೇಲ್ಸ್‌ಮ್ಯಾನ್ ಆಗಿ ಕೆಲಸಕ್ಕೆ ಸೇರಿದರು. ಈ ಕೆಲಸದ ಜೊತೆಗೆ ಹೋರಾಟದ ಕೆಲಸಗಳು ಮುಂದುವರಿದವು. ಅನೇಕ ವರ್ಷಗಳ ಕಾಲ ಔಷಧಾಲಯ, ಫಾರ್ಮಸಿಯಲ್ಲಿ ದುಡಿದ ಬಾಳಪ್ಪ ಅವರಿಗೆ ಅನುಭವದ ಆಧಾರದಲ್ಲಿ ಆ ಕಾಲದಲ್ಲಿ ವೈದ್ಯ ವೃತ್ತಿ ನಿರ್ವಹಿಸಲು ನೀಡುತ್ತಿದ್ದ ಆರ್.ಎಂ.ಪಿ ಲೈಸನ್ಸನ್ನು 1968ರಲ್ಲಿ ಪಡೆದು ಡಾಕ್ಟರ್ ಅಮ್ಮೆಂಬಳ ಬಾಳಪ್ಪ ಆದರು.

'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಭಾಗವಹಿಸಿದ ಬಾಳಪ್ಪ ತನ್ನ ಸ್ನೇಹಿತರೊಂದಿಗೆ ಸೇರಿ ಹಲವು ವಿಧ್ವಂಸಕ ಚಟುವಟಿಕೆಗಳನ್ನು ನಡೆಸಿದರು. ಬೋಳೂರಿನ ವ್ಯಾಯಾಮ ಶಾಲೆಯ ಮುಖ್ಯಸ್ಥರಾಗಿದ್ದ ಪೈಲ್ವಾನ್ ಬಿ.ಎಲ್. ಪುತ್ರನ್, ಎಂ. ಲೋಕಯ್ಯ ಶೆಟ್ಟಿ ಮುಂತಾದವರೊಂದಿಗೆ ಸೇರಿ ಉಳ್ಳಾಲದ ರೈಲ್ವೆ ಸೇತುವೆ ಸ್ಫೋಟಿಸುವ ಸಂಚನ್ನು ರೂಪಿಸಿದರು. ರಾತ್ರಿ ಸೇತುವೆಯ ಕಂಬಕ್ಕೆ ಡೈನಮೈಟ್ ಇಡಲು ತೂತು ಕೊರೆಯುವ ಕೆಲಸ ಮಾಡಿ ಮರುದಿನ ಸೇತುವೆ ಸ್ಫೋಟಿಸಲು ಬಂದಾಗ ಪೋಲೀಸರು ಕಾವಲು ಕಾಯುತ್ತಿದ್ದುದರಿಂದ ಈ ಯೋಜನೆ ವಿಫಲವಾಯಿತು. ನಂತರ ಕೈಡೇಲು ತಿಮ್ಮಪ್ಪ ಶೆಟ್ಟಿ, ಎಂ. ಲೋಕಯ್ಯ ಶೆಟ್ಟಿ ಮುಂತಾದವರೊಂದಿಗೆ ಸೇರಿ ಬಾಳಪ್ಪನವರು 1942 ಡಿಸೆಂಬರ್ 4 ರಂದು ಮಧ್ಯರಾತ್ರಿ ಜಿಲ್ಲಾ ನ್ಯಾಯಾಲಯದ ಪಕ್ಕಾಸಿಗೆ ಬೆಂಕಿ ಕೊಟ್ಟು ಓಡಿದರು. ಈ ಘಟನೆಯಲ್ಲಿ ಬಾಳಪ್ಪನವರನ್ನು ಬಂಧಿಸಲಾಯಿತು. ಪೋಲೀಸರು ಕ್ರೂರ ಹಿಂಸೆ ನೀಡಿದರು. ವಿಚಾರಣೆ ನಂತರ 1943 ಜನವರಿ 23ರಂದು ಮದರಾಸಿನ ವೆಲ್ಲೂರು ಜೈಲಿಗೆ ಹಾಕಿದರು. ಜೈಲಿನಲ್ಲಿರುವಾಗ ಹಿಂದಿ, ಇಂಗ್ಲೀಷ್ ಭಾಷೆಗಳನ್ನು ಕಲಿಯುವುದರೊಂದಿಗೆ ಸಮಾಜವಾದಿ ಚಿಂತನೆಗಳನ್ನು ತಿಳಿದುಕೊಂಡರು. 1944 ಫೆಬ್ರವರಿಯಲ್ಲಿ ಅವರ ಬಿಡುಗಡೆಯಾಯಿತು.

ಈ ಹೊತ್ತಲ್ಲಿ ಗಾಂಧಿಯವರು ಕಾಂಗ್ರೆಸ್ ಕಾರ್ಯಕರ್ತರು ಹಳ್ಳಿಗಳಲ್ಲಿ ಜನರ ಕೆಲಸ ಮಾಡುವಂತೆ ಕರೆಕೊಟ್ಟಿದ್ದರು. ಈ ಸಂದರ್ಭದಲ್ಲಿ ಗಾಂಧಿಯವರ ಪತ್ನಿ ಕಸ್ತೂರ್ಬಾ ನಿಧನರಾಗಿದ್ದರಿಂದ ಅವರ ಸ್ಮರಣಾರ್ಥ ಕಾರ್ಕಳ ತಾಲೂಕಿನ ಅತ್ಯಂತ ಕುಗ್ರಾಮವಾಗಿದ್ದ ಮುದ್ರಾಡಿಯಲ್ಲಿ ಎಂ.ಡಿ. ಅಧಿಕಾರಿಯವರು ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದರು. ಬಾಳಪ್ಪ ಜೈಲುವಾಸದ ಸಂದರ್ಭದಲ್ಲಿ ಹಿಂದಿ ಭಾಷೆ ಕಲಿತಿದ್ದರಿಂದ, ಅವರನ್ನು ಶಾಲೆಯಲ್ಲಿ ಹಿಂದಿ ಶಿಕ್ಷಕರಾಗಿ ನೇಮಿಸಲಾಯಿತು. 1946ರವರೆಗೆ ಅಲ್ಲಿ ಶಿಕ್ಷಕರಾಗಿ ದುಡಿದು ನಂತರ ಮಲೇರಿಯಾ ಕಾಯಿಲೆಯಿಂದ ಮಂಗಳೂರಿಗೆ ಮರಳಿ ಬಂದರು. ನಂತರ ಕಾರ್ಮಿಕ, ರೈತ, ವಿದ್ಯಾರ್ಥಿ, ಯುವಕ ಸಂಘಟನೆಗಳಲ್ಲಿ ತೊಡಗಿಸಿಕೊಂಡರು. ಆಗ ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿಯ ನೇತಾರರಾಗಿದ್ದ ಕಮಲಾದೇವಿ ಚಟ್ಟೋಪಾಧ್ಯಾಯರ ಮೆಚ್ಚುಗೆಗೆ ಪಾತ್ರರಾದರು.

ಬಾಳಪ್ಪ ಗಾಂಧಿಯವರಿಂದ ಬಹಳ ಪ್ರಭಾವಿತರಾಗಿದ್ದರು. ಅವರ ಸರಳತೆ, ಸತ್ಯ, ಅಹಿಂಸೆ, ಹೋರಾಟದ ಆದರ್ಶಗಳನ್ನು ಅಳವಡಿಸಿಕೊಂಡಿದ್ದರು.

ಯಾವಾಗಲೂ ಖಾದಿ ಬಟ್ಟೆಗಳನ್ನೇ ಧರಿಸುತ್ತಿದ್ದರು. ನಂತರದ ದಿನಗಳಲ್ಲಿ ಬಾಳಪ್ಪ ಹೆಚ್ಚು ಸಮಾಜವಾದಿ ಚಿಂತನೆಗಳ ಕಡೆಗೆ ಒಲಿದರು. ಪ್ರಜಾ ಸೋಶಿಯಲಿಸ್ಟ್ ಪಕ್ಷದ ಜಿಲ್ಲಾ ನಾಯಕರಾದರು. ಅವರು ಸಮಾಜವಾದಿಯಾಗಿ ಜಿಲ್ಲೆ ರಾಜ್ಯ ಮಾತ್ರವಲ್ಲದೇ ರಾಜ್ಯದ ಹೊರಗೂ ಹೋಗಿ ಹೋರಾಟಗಳನ್ನು ನಡೆಸಿದ್ದಾರೆ. ಗೋವಾ ವಿಮೋಚನೆಯ ಹೋರಾಟಕ್ಕೆ ತಂಡ ಕಟ್ಟಿಕೊಂಡು ಹೋಗಿ ಪೋಲೀಸರ ಹೊಡೆತಗಳನ್ನು ಎದುರಿಸಿದ್ದಾರೆ.

ಕಾರ್ಮಿಕ ನಾಯಕರಾದ ಜಾರ್ಜ್ ಫರ್ನಾಂಡಿಸ್ ಅವರ ಗುರು ಡಾ. ಅಮ್ಮೆಂಬಳ ಬಾಳಪ್ಪ. ಮಂಗಳೂರಿನ ಬಿಜೈನವರಾದ ಜಾರ್ಜ್ ಫರ್ನಾಂಡಿಸ್ ಮೈಸೂರಿನಲ್ಲಿ ಥಿಯಾಲಜಿ ಕಲಿಯಲು ಸೇರಿ, ಅಲ್ಲಿ ವೈಚಾರಿಕ ಭಿನ್ನಾಭಿಪ್ರಾಯದೊಂದಿಗೆ ಹಿಂತಿರುಗಿ ಬಂದು ಮನೆಯಿಂದಲೂ ಹೊರಹಾಕಲ್ಪಟ್ಟು ಅಲೆದಾಡುತ್ತಿದ್ದ ಕಾಲದಲ್ಲಿ ಅವರಿಗೆ ಬಾಳಪ್ಪನವರ ಪರಿಚಯವಾಯಿತು. ನಂತರ ಮಂಗಳೂರಿನ ಫೆಲಿಕ್ಸ್ ಪೈ ಬಜಾರದಲ್ಲಿದ್ದ ಸಮಾಜವಾದಿ ಪಕ್ಷದ ಕಾರ್ಯಾಲಯ ಇವರ ಮನೆಯಾಗಿತ್ತು. ಬಾಳಪ್ಪನವರ ಸಹಚಾರಿಯಾಗಿದ್ದ ಜಾರ್ಜ್ ಕೂಡಾ ಕಾರ್ಮಿಕ ಸಂಘಟನೆಗಳಲ್ಲಿ ತೊಡಗಿಸಿಕೊಂಡರು. ಮಂಗಳೂರಿನ ಹೋಟೆಲ್ ಕಾರ್ಮಿಕರು, ಸಾರಿಗೆ ಕಾರ್ಮಿಕರು ಮುಂತಾದ ಕಾರ್ಮಿಕ ಸಂಘಟನೆಗಳಲ್ಲಿ ಬಾಳಪ್ಪ ಅವರ ಪಾತ್ರ ದೊಡ್ಡದಾಗಿತ್ತು. ಖಾಸಗಿ ಕಂಪೆನಿಗಳ ಒಡೆತನದಲ್ಲಿರುವ ಸಾರಿಗೆಯ ಚಾಲಕ, ನಿರ್ವಾಹಕರ ಹಕ್ಕು ಸವಲತ್ತುಗಳಿಗಾಗಿ ಒಮ್ಮೆ ಜಿಲ್ಲೆಯಲ್ಲಿ ಬೃಹತ್ ಮಟ್ಟದ ಮುಷ್ಕರ ನಡೆಸಿದರು. ಈ ಮುಷ್ಕರ ಇಡೀ ಜಿಲ್ಲೆಯನ್ನು ಸ್ತಬ್ಧಗೊಳಿಸುವಷ್ಟು ಪರಿಣಾಮಕಾರಿಯಾಗಿತ್ತು. ಈ ಮುಷ್ಕರಕ್ಕೆ ನಾಯಕತ್ವ ನೀಡಿದ ಮಂಗಳೂರಿನವರೇ ಆದ ಮುಂಬೈನ ಕಾರ್ಮಿಕ ಮುಖಂಡ ವಿ. ಡಿಮೆಲ್ಲೋ ಅವರು ಜಾರ್ಜ್ ಫರ್ನಾಂಡಿಸ್ ಅವರನ್ನು ಮುಂದೆ ಮುಂಬೈಗೆ ಕರೆದುಕೊಂಡು ಹೋದರು. ಬಾಳಪ್ಪ ಅವರು ತನಗೆ ನೀಡಿದ ಆಸರೆ-ಬೆಂಬಲಗಳನ್ನು ಕೇಂದ್ರ ಸಚಿವರಾಗಿ ಮಂಗಳೂರಿಗೆ ಬಂದಾಗಲೆಲ್ಲ ಜಾರ್ಜ್ ಫರ್ನಾಂಡಿಸ್ ಸಾರ್ವಜನಿಕ ಸಭೆಗಳಲ್ಲಿ ನೆನಪಿಸಿಕೊಳ್ಳುತ್ತಿದ್ದರು.

ಸಮಾಜವಾದಿ ಪಕ್ಷ ಜೆಪಿಯವರ ಸಂಪೂರ್ಣ ಕ್ರಾಂತಿ ಆಂದೋಲನದ ಪರಿಣಾಮವಾಗಿ 1977ರಲ್ಲಿ ಉದಯವಾದ ಜನತಾ ಪಕ್ಷದಲ್ಲಿ ಲೀನವಾದ ನಂತರ ಜನತಾ ಪಕ್ಷದಲ್ಲಿ ತನ್ನನ್ನು ತೊಡಗಿಸಿಕೊಂಡ ಬಾಳಪ್ಪ ಅವರು ಜನತಾಪಕ್ಷ ಜನತಾದಳವಾದಾಗ ಆ ಪಕ್ಷದಲ್ಲಿದ್ದರು. ಲೋಹಿಯಾ ಅವರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಬಾಳಪ್ಪ ಭೂ ಸುಧಾರಣೆಯ ಕಾನೂನಿನ ಲಾಭವನ್ನು ಜನರಿಗೆ ದೊರಕಿಸಿಕೊಡಲು ಅವಿರತವಾಗಿ ಪ್ರಯತ್ನಪಟ್ಟರು. ವಿಶೇಷವಾಗಿ ಹಿಂದುಳಿದ ಜಾತಿಗಳ ಸಂಘಟನೆಗಳನ್ನು ನಡೆಸಲು ತೊಡಗಿದರು. ರೈತರ ಸಂಘಟನೆಗಾಗಿ ಕೋಟ ರಾಮಕೃಷ್ಣ ಕಾರಂತ, ವಿ. ಶ್ರೀನಿವಾಸ ಶೆಟ್ಟಿ, ಬೈಕಾಡಿ ಶೀನಪ್ಪ ಶೆಟ್ಟಿ ಮುಂತಾದವರ ಜೊತೆಗೆ ಜಿಲ್ಲೆಯಾದ್ಯಂತ ಸುತ್ತಾಡಿದರು. ಅವರ ಬದ್ಧತೆಯುಳ್ಳ ಹೋರಾಟ ಮತ್ತು ಜನಪರ ಕೆಲಸಗಳಿಂದ ಬಿ.ಎಸ್. ಕಕ್ಕಿಲಾಯ, ಸೂರ್ಯನಾರಾಯಣ ಅಡಿಗ ಮುಂತಾದವರಿಗೆ ತುಂಬಾ ಅಚ್ಚುಮೆಚ್ಚಿನವರಾದರು. ದ.ಕ. ಜಿಲ್ಲೆಯ ಅಸ್ಪೃಶ್ಯರು, ಮೊಯಿಲಿ, ಬಿಲ್ಲವ, ಸಫಳಿಗ, ನೇಕಾರ, ಕುಂಬಾರ ಮುಂತಾದ ಶೋಷಿತ ಸಮುದಾಯಗಳು ಸಂಘಟಿತಗೊಂಡು ತಮ್ಮನ್ನು ತಾವು

ಉದ್ಧಾರ ಮಾಡಿಕೊಳ್ಳಬೇಕೆಂಬ ಇಂಗಿತವನ್ನು ಅವರು ವ್ಯಕ್ತಪಡಿಸಿದರು. ಜಿಲ್ಲೆಯ ಹಿಂದುಳಿದ ವರ್ಗಗಳ ಒಕ್ಕೂಟ ರಚನೆಗೂ ಪ್ರಯತ್ನಪಟ್ಟರು. 1975ರಿಂದ 88ರವೆರೆಗೆ ಈ ಮೂರು ಅವಧಿಗಳಲ್ಲಿ ಅವರು ಭೂನ್ಯಾಯ ಮಂಡಳಿಯಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿದರು. ಈ ಕೆಲಸಗಳಿಂದ ಮಂಗಳೂರಿನ ಬಂಟ್ವಾಳ ತಾಲೂಕಿನ ಗೇಣಿದಾರರ ಪಾಲಿಗೆ ಸ್ಮರಣೀಯರಾದರು.

ರೈತರ, ಗೇಣಿದಾರರ ಸಮಸ್ಯೆಗಳ ತಳಮಟ್ಟದ ತಿಳುವಳಿಕೆ ಅವರಿಗೆ ಇತ್ತು. ಭೂಮಿಯನ್ನು ಅಳತೆ ಮಾಡುವ ಕೆಲಸದಲ್ಲಿ ಅಪಾರ ಅನುಭವ ಪಡೆದಿದ್ದರು. ಭ್ರಷ್ಟರಾಗದೇ ದುಡಿದ ಬಾಳಪ್ಪ ಭೂಮಾಲಿಕರಿಗೆ ಸಿಂಹಸ್ವಪ್ನರಾಗಿದ್ದರು. ಅರ್ಜಿಕೊಡಲು ಭಯ ಪಡುತ್ತಿದ್ದ ಅಸ್ಪೃಶ್ಯರಿಗೆ ಧೈರ್ಯ ತುಂಬಿದರು. ಅವರನ್ನು ಮನೆಯ ಒಳಗೆ ಕರೆದು ಅರ್ಜಿ ಬರೆದು ಕೊಡುತ್ತಿದ್ದರು.

ಭೂ ಮಸೂದೆ ಜಾರಿಯಾದ ಸಂದರ್ಭದಲ್ಲಿ ಜಿಲ್ಲೆಯಾದ್ಯಂತ ಒಕ್ಕಲುದಾರರು ಭೂಮಾಲಿಕರ ನಡುವೆ ಘರ್ಷಣೆಗಳು ಆಗಾಗ ನಡೆದವು. ಕಮ್ಯುನಿಸ್ಟರು, ಸಮಾಜವಾದಿ ಹೋರಾಟಗಾರರು ಗೇಣಿದಾರರ ಪರವಾಗಿ ಅವಿರತವಾಗಿ ಹೋರಾಟ ನಡೆಸಿದರು. ಗೇಣಿದಾರರನ್ನು ಹತ್ತಿಕ್ಕಲು ಧಣಿಗಳು ಗೂಂಡಾಗಳನ್ನು ಇಟ್ಟು ಕೊಂಡಿದ್ದರು. ಮಂಗಳೂರಿನ ಹತ್ತಿರದ ನೀರುಮಾರ್ಗ ಎಂಬಲ್ಲಿ ಇಂತಹ ಘರ್ಷಣೆ ನಡೆದಾಗ ಅಲ್ಲಿಯ ರೈತರನ್ನು ಸಂಘಟಿತಗೊಳಿಸಲು ಬಾಳಪ್ಪ ಪ್ರಯತ್ನಪಟ್ಟರು. ಅಲ್ಲಿನ ಒಂದು ರೈತ ಗೇಣಿದಾರರ ಸಭೆಗೆ ಭಾಷಣಕಾರರಾಗಿ ಹೋಗಿ ಹಿಂತಿರುಗುತ್ತಿದ್ದಾಗ ಗೂಂಡಾಗಳು ಬಾಳಪ್ಪರ ತಲೆಗೆ ಹೊಡೆದರು. ತಲೆಗೆ ಏಟು ಬಿದ್ದ ಬಾಳಪ್ಪರನ್ನು ಗೆಳೆಯ ಐತಪ್ಪ ಸಾಲ್ಯಾನ್ ರಕ್ಷಣೆ ಮಾಡಿದರು. ತನ್ನ ಹಿಂದುಳಿದ ಜಾತಿಗಳ ಸಂಘಟನೆಯ ಕೆಲಸಗಳಿಗಾಗಿ ಅವರು 1950ರ ದಶಕದಲ್ಲಿ 'ಮಿತ್ರ' ಎಂಬ ಕನ್ನಡ ವಾರಪತ್ರಿಕೆ, 1970ರ ದಶಕದಲ್ಲಿ 'ತುಳುಸಿರಿ' ಎಂಬ ತುಳು ಮಾಸಿಕವನ್ನು ಆರಂಭಿಸಿದ್ದರು.

1983-86ರಲ್ಲಿ ಕರ್ನಾಟಕ ಸರಕಾರ ವೆಂಕಟಸ್ವಾಮಿಯವರ ನೇತೃತ್ವದಲ್ಲಿ 2ನೇ ಹಿಂದುಳಿದ ಆಯೋಗ ರಚಿಸಿದಾಗ ಬಾಳಪ್ಪ ಅದರ ಸದಸ್ಯರಾಗಿ ನೇಮಿಸಲ್ಪಟ್ಟರು. ಈ ದಿಸೆಯಲ್ಲಿ ಅವರು ಕರ್ನಾಟಕದಾದ್ಯಂತ ಓಡಾಟ ನಡೆಸಿ ದುರ್ಬಲ ಸಮುದಾಯಗಳ ಅಧ್ಯಯನ ನಡೆಸಿ, ವರದಿ ತಯಾರಿಸಲು ಶ್ರಮ ವಹಿಸಿದರು. ಸ್ನೇಹಿತರೊಂದಿಗೆ ಸೇರಿ ತನ್ನ ಸಮುದಾಯದ ಕುಲಾಲ ಸಂಘವನ್ನು ಸ್ಥಾಪಿಸಿದರು. 1980ರಲ್ಲಿ ಗೆಳೆಯರ ಸಹಕಾರದಿಂದ ಬಂಟ್ವಾಳದಲ್ಲಿ ಕುಲಾಲರ ಸಹಕಾರಿ ಬ್ಯಾಂಕ್ ಪ್ರಾರಂಭಿಸಿದರು. ಬಾಳಪ್ಪರ ಬ್ಯಾಂಕ್ ಎಂದೇ ಕರೆಯಲ್ಪಡುವ ಇದು ಇಂದು ಹಲವಾರು ಶಾಖೆಗಳನ್ನು ಹೊಂದಿದೆ. ಜಾರ್ಜ್ ಫರ್ನಾಂಡಿಸ್ ಕೇಂದ್ರ ರಕ್ಷಣಾ ಮಂತ್ರಿಯಾಗಿದ್ದಾಗ ಅವರು ಬಾಳಪ್ಪನವರನ್ನು ಆಗ ತಾವಿದ್ದ ಸಮತಾ ಪಕ್ಷಕ್ಕೆ ಆಹ್ವಾನಿಸಿ ಉನ್ನತ ಹುದ್ದೆಯ ಆಶ್ವಾಸನೆ ನೀಡಿದರಾದರೂ, ಬಾಳಪ್ಪ ಕೋಮುವಾದಿ ಪಕ್ಷದ ಸಹವಾಸವನ್ನು ಧಿಕ್ಕರಿಸಿ ಆಹ್ವಾನವನ್ನು ತಿರಸ್ಕರಿಸಿದರು.

ಮಂಗಳೂರು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿ, ಬಂಟ್ವಾಳ ತಾಲೂಕು ಕಾನೂನು ನೆರವು ಸಮಿತಿ ಸದಸ್ಯರಾಗಿ, ಮಂಗಳೂರು ನಗರ ಯೋಜನಾ ಪ್ರಾಧಿಕಾರದ ಸದಸ್ಯರಾಗಿ, ದ.ಕ. ಜಿಲ್ಲಾ ಕೃಷಿ ಅಭಿವೃದ್ಧಿ ಸಹಕಾರ ಸಂಘದ ಆಡಳಿತ ಮಂಡಳಿ ಸದಸ್ಯರಾಗಿ, ಬಂಟ್ವಾಳ ತಾಲೂಕು ಭೂ ಅಭಿವೃದ್ಧಿ ಬ್ಯಾಂಕ್‌ನ ಆಡಳಿತ ಮಂಡಳಿ


ಸದಸ್ಯರಾಗಿ ದುಡಿದಿದ್ದಾರೆ.

ಬ್ರಹ್ಮಚಾರಿಯಾಗಿದ್ದ ಬಾಳಪ್ಪ ಜೀವನಪೂರ್ತಿ ಸಮಾಜಕ್ಕಾಗಿ ಅರ್ಪಿಸಿಕೊಂಡು ಜನರ ಏಳಿಗೆಗೆ ಶ್ರಮಿಸಿದರು. ವಿಶೇಷ ಆರ್ಥಿಕ ವಲಯಗಳ ಮೂಲಕ ವೇಗವಾಗಿ ಕೈಗಾರಿಕೀಕರಣಕ್ಕೆ ಒಳಗಾಗುತ್ತಿರುವ ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿಯ ಸ್ವರೂಪವನ್ನು ವಿವಿಧ ಸಮುದಾಯಗಳ ಅಳಿವು-ಉಳಿವುಗಳ ದೃಷ್ಟಿಯಿಂದ ನೋಡುವ ಅಗತ್ಯ ಇರುವ ಇಂದಿನ ದಿನಗಳಲ್ಲಿ, ಬಾಳಪ್ಪನಂಥ ವ್ಯಕ್ತಿತ್ವ, ಮತ್ತು ಚಿಂತನೆಗಳು ಹೆಚ್ಚು ಪ್ರಸ್ತುತವಾಗಿದೆ.

(ಲೇಖನ ತಯಾರಿಸಲು ಮಾಹಿತಿ ನೀಡಿ ಸಹಕರಿಸಿದ ಡಿ.ಎಂ. ಕುಲಾಲ್ ಬಂಟ್ವಾಳ ಅವರಿಗೆ ಕೃತಜ್ಞತೆಗಳು)

–ಡಾ. ವಾಸುದೇವ ಬೆಳ್ಳೆ

(ಆಗಸ್ಟ್, 2014)



ಜನಪರ ಪತ್ರಕರ್ತ ಅಮ್ಮೆಂಬಳ ಆನಂದ



ಅಮ್ಮೆಂಬಳ ಆನಂದ ಅವರ ಬಗ್ಗೆ 'ಪ್ರಪಂಚ' ಸಾಪ್ತಾಹಿಕದಲ್ಲಿ ನಾಡೋಜ ಪಾಟೀಲ ಪುಟ್ಟಪ್ಪ ಹೀಗೆ ಬರೆಯುತ್ತಾರೆ: "ನಿತ್ಯವೂ ಕಣ್ಣೀರಿನಲ್ಲಿ ಕೈತೊಳೆಯುತ್ತಾ ಗೋಳಿನ ಜೀವನವನ್ನು ಬದುಕುತ್ತಿದ್ದ ಯುವ ವಿಧವೆಯನ್ನು ಅಮ್ಮೆಂಬಳ ಆ ಕಾಲದಲ್ಲಿ ಮದುವೆಯಾಗಿ (1954) ಬದುಕುಕೊಟ್ಟವರು. ಅದು ರೆಜಿಸ್ಟರ್ ಮದುವೆ. ಡಾ॥ ಕೆ. ನಾಗಪ್ಪ ಆಳ್ವ, ಡಾ॥ ಅಮ್ಮೆಂಬಳ ಬಾಳಪ್ಪಮತ್ತು ಕೆ. ರಾಧಾ ಎಲ್.ರಾವ್ – ಆ ಕಾಲದ ಈ ಕ್ರಾಂತಿಕಾರಿ ಸರಳ ಮದುವೆಗೆ ಸಾಕ್ಷಿಯಾದವರು." ಆ ಸಂದರ್ಭದಲ್ಲಿ ಇವರ ಪತ್ನಿ ಗಂಗಮ್ಮ ತನ್ನ ಪೂರ್ವ ಪತಿಯಿಂದ ಒಬ್ಬ ಹೆಣ್ಣುಮಗಳನ್ನೂ ಪಡೆದಿದ್ದಳು. ಅಂದೇ ಆನಂದರು ಅವಳನ್ನು ಮಗಳನ್ನಾಗಿಯೂ ಸ್ವೀಕರಿಸಿದರು.

ಆನಂದರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಅಮ್ಮೆಂಬಳ ಎಂಬ ಹಳ್ಳಿಯವರು. ಹುಟ್ಟಿದ್ದು 1927ರ ಸೆಪ್ಟೆಂಬರ್ 17ರಂದು. ಮಂಗಳೂರಿನಲ್ಲಿ ಪ್ರಾಥಮಿಕ ಮತ್ತು ಹೈಸ್ಕೂಲು ಶಿಕ್ಷಣ, ಮೆಟ್ರಿಕ್ ಮುಗಿದ ಕೂಡಲೇ ಕರ್ನಾಟಕದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸಂಘಟನೆಯ ಜವಾಬ್ದಾರಿ ಹೊತ್ತಿದ್ದ ದ.ಕ.ದವರೇ ಆದ ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಕರೆಗೆ ಓಗೊಟ್ಟು ಹುಬ್ಬಳ್ಳಿಗೆ ಪ್ರಯಾಣ, ಅಲ್ಲಿ ಕರ್ನಾಟಕ ಪ್ರಾಂತ ಸಮಾಜವಾದಿ ಪಕ್ಷದ ಪ್ರಾಂತೀಯ ಕಚೇರಿಯ ಕಾರ್ಯದರ್ಶಿ. ಅದರ ಜೊತೆಗೇ ರೈಲ್ವೆ ಕೆಲಸಗಾರರ ಸಂಘದ ವಿಭಾಗೀಯ ಸಂಘಟನಾ ಕಾರ್ಯದರ್ಶಿ. ಜಯಪ್ರಕಾಶ ನಾರಾಯಣ, ರಾಮಮನೋಹರ ಲೋಹಿಯಾ, ಕಮಲಾದೇವಿ ಮತ್ತು ಉಮಾಬಾಯಿ ಕುಂದಾಪುರ ಅವರ ಸಮಾಜವಾದಿ ಚಿಂತನೆಯಿಂದ ಪ್ರಭಾವಿತರಾಗುತ್ತ ಅವರು ವಹಿಸಿಕೊಟ್ಟ ಎಲ್ಲ ಸಂಘಟನೆಗಳಲ್ಲಿ ಮನಸಾ ಅರ್ಪಿಸಿಕೊಂಡವರು ಅಮ್ಮೆಂಬಳ ಆನಂದ. ಉಪಜೀವನಕ್ಕಾಗಿ 'ನವಯುಗ' ದಿನಪತ್ರಿಕೆಯಲ್ಲಿ ಸಹ ಸಂಪಾದಕರಾಗಿ ಸೇರಿಕೊಂಡಿದ್ದರು, ಆದರೆ ಇವರ ಸಮಾಜವಾದಿ ಚಟುವಟಿಕೆಗಳನ್ನು ಆಕ್ಷೇಪಿಸಿ ಪತ್ರಿಕೆಯ ಆಡಳಿತ ಮಂಡಳಿ ಇವರನ್ನು ಆ ಕೆಲಸದಿಂದ ಉಚ್ಚಾಟಿಸಿತು. ಮುಂದೆ ಹುಬ್ಬಳ್ಳಿಯ ಡೆಕ್ಕನ್ ಫರ್ಟಿಲೈಸರ್ಸ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿದರಾದರೂ ಕೆಲ ಕಾಲಾನಂತರ ಇದೇ ಕಾರಣದ ಮೇಲೆ ಅಲ್ಲೂ ಕೆಲಸದಿಂದ ತೆಗೆದುಹಾಕಲ್ಪಟ್ಟರು. ಮುಂದೆ ಅನಿವಾರ್ಯವಾಗಿ ಮುಂಬೈಗೆ ಪ್ರಯಾಣ. ಅಲ್ಲಿದ್ದ ಹೋಟೆಲ್ ಕೆಲಸಗಾರರ ಸಂಘದ ಧುರೀಣರಾದ ವಡ್ಡರ್ಸೆ ರಘುರಾಮ ಶೆಟ್ಟಿ ಮತ್ತು ಎಮ್. ಸಂಜೀವ ಶೆಟ್ಟಿ ಇವರ ರಾತ್ರಿ ವಸತಿಗೆ ಅನುಕೂಲ ಮಾಡಿಕೊಟ್ಟರು. ಅಲ್ಲಿ ಆನಂದರಿಗೆ ಹೋಟೆಲ್ ಕಾರ್ಮಿಕರಿಗೆ ರಾತ್ರಿ ಶಾಲೆಯಲ್ಲಿ ಪಾಠ ಹೇಳುವ ಕೆಲಸ.

ನಂತರದ ವರ್ಷಗಳಲ್ಲಿ ಆನಂದರು ಮಂಗಳೂರಿಗೆ ಹಿಂತಿರುಗಿ ಕೆಲಕಾಲ ಅಲ್ಲಿನ ಬೆಸೆಂಟ್ ನ್ಯಾಷನಲ್ ಗರ್ಲ್ಸ್ ಹೈಸ್ಕೂಲ್‌ನಲ್ಲಿ ಕೆಲಸ ಮಾಡಿ 'ನವ ಭಾರತ' ಪತ್ರಿಕೆಯ ಉಪಸಂಪಾದಕರಾದರು. ಆ ವೇಳೆಗೆ ದೇಸಾಯಿ ಉತ್ತರ ಕನ್ನಡ ಜಿಲ್ಲೆಯಲ್ಲಿ ರೈತ ಜನಾಂದೋಲನದ ಮೂಲಕ ಮತ್ತು ಮುಂಬೈ ಬಂದರು ಕೆಲಸಗಾರರ ಯೂನಿಯನ್ನಿನ ಸಂಘಟನೆಯ ಮೂಲಕ ಬಡಜನತೆಯ ಬಹುದೊಡ್ಡ ನಾಯಕನಾಗಿ ಕಾಣಿಸಿಕೊಂಡಿದ್ದರು. ಇತ್ತ ಅಂಕೋಲೆಯಲ್ಲಿ ರೈತ ಜನಾಂದೋಲನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಗಿರಿಪಿಕಳೆಯವರನ್ನು (ಪಿಕಳೆ

ಮಾಸ್ತರ) ಭೂಮಾಲಿಕ ವರ್ಗದ ಆಡಳಿತ ಮಂಡಳಿ ಉಚ್ಚಾಟಿಸಿದ ಕಾರಣ ಕೆರಳಿದ ರೈತರು ಹುಟ್ಟುಹಾಕಿದ ಕೆನರಾ ಎಗ್ರಿಕಲ್ಚರ್ ಸ್ಕೂಲಿನ ಆಡಳಿತ ಮಂಡಳಿಯಾಗಿ ಕೆನರಾ ವೆಲ್‌ಫೆರ್ ಟ್ರಸ್ಟು ಅಸ್ತಿತ್ವಕ್ಕೆ ಬಂದಿತ್ತು. ದಿನಕರ ದೇಸಾಯಿ ಅದರ ಸಂಸ್ಥಾಪಕ ಅಧ್ಯಕ್ಷರಾಗಿದ್ದರು. ಮುಂದೆ ದೇಸಾಯರು ಜಿಲ್ಲೆಯ ಕುಗ್ರಾಮಗಳಲ್ಲಿ ಹೈಸ್ಕೂಲುಗಳನ್ನು ತೆರೆಯತೊಡಗಿದರು. ಪ್ರಜಾಪ್ರಭುತ್ವ ವ್ಯವಸ್ಥೆಯೊಳಗಡೆ ಬಲಿಷ್ಠವಾದ ವಿರೋಧಿ ಪಕ್ಷ ಇರಬೇಕೆಂಬ ಉದ್ದೇಶದಿಂದ ಲೋಕ ಶಿಕ್ಷಣಕ್ಕಾಗಿ ವಾರ ಪತ್ರಿಕೆಯೊಂದನ್ನು ಪ್ರಾರಂಭಿಸಲು ಮುಂದಾದರು. ಅವರು ಆ ಸಂದರ್ಭದಲ್ಲಿ ಬಡವರ ಬಗ್ಗೆ, ದೀನದಲಿತರ ಬಗ್ಗೆ, ರೈತಕಾರ್ಮಿಕರ ಬಗ್ಗೆ ವಿಶೇಷ ಕಳಕಳಿಯಿರುವ ಒಬ್ಬ ಸಂಪಾದಕರ ಹುಡುಕಾಟದಲ್ಲಿದ್ದರು.

ಒಮ್ಮೆ ಮಂಗಳೂರಿಗೆ ಅಲ್ಲಿನ ಸಮಾಜವಾದಿಗಳ ಆಹ್ವಾನದ ಮೇರೆಗೆ ಭೇಟಿ ನೀಡಿದ್ದ ದೇಸಾಯರು ಸಭೆಯ ನಂತರ ಈ ಪ್ರಸ್ತಾಪವನ್ನು ಮಾಡಿದಾಗ, ಆ ಭಾಗದ ಸಮಾಜವಾದಿ ಚಿಂತಕರೆಲ್ಲ – ಅಲ್ಲೇ ಇದ್ದ ಅಮ್ಮೆಂಬಳ ಆನಂದರ ಹೆಸರನ್ನು ಸೂಚಿಸುತ್ತಾರೆ. ಕೂಡಲೇ ಆನಂದ ಅವರನ್ನಲ್ಲದೆ, ಪ್ರಸೂತಿ ಕಾರ್ಯದಲ್ಲಿ ತರಬೇತಿ ಪಡೆದಿದ್ದ ಅವರ ಪತ್ನಿ ಗಂಗಮ್ಮ ಅವರ ಸೇವೆಯನ್ನು ಬಳಸಿಕೊಳ್ಳುವ ಉದ್ದೇಶದಿಂದ ಈ ದಂಪತಿಗಳನ್ನು ಅಂಕೋಲೆಗೆ ಕರೆಯಿಸಿಕೊಂಡು (1955) ತಾವು ಪ್ರಾರಂಭಿಸಿದ 'ಜನಸೇವಕ' ಪತ್ರಿಕೆಯ ಸಂಪಾದಕರಾಗಿ ಆನಂದರನ್ನೂ, ಆಸ್ಪತ್ರೆಗಳೇ ಇಲ್ಲದ ಅಂಕೋಲೆಯ ಹಳ್ಳಿಗಳ ಮಹಿಳೆಯರ ಪ್ರಸೂತಿ ಕೆಲಸಕ್ಕಾಗಿ ಅವರ ಪತ್ನಿ 'ಗಂಗಮ್ಮನವರನ್ನೂ ನೇಮಕಮಾಡಿಕೊಂಡಿದ್ದಲ್ಲದೆ ತಮ್ಮ ಟ್ರಸ್ಟಿನ ಲೈಫ್‌ವರ್ಕರ್ಸ್‌ರನ್ನಾಗಿಯೂ ಸೇರಿಸಿಕೊಂಡರು.

ಅಮ್ಮೆಂಬಳ ಆನಂದರು 'ಜನಸೇವಕ' ಪತ್ರಿಕೆಯಲ್ಲಿ–ಅದು ಪ್ರಾರಂಭವಾದ 1955ರಿಂದ ಆರ್ಥಿಕ ಕಾರಣಕ್ಕಾಗಿ ಅದು ನಿಂತ 1972ರ ವರೆಗೆ (ಸುಮಾರು 18 ವರ್ಷ) ಒಂದೇ ಒಂದು ವಾರ ಬಿಡುವಿಲ್ಲದೇ ನಡೆಯುವಂತೆ ನೋಡಿಕೊಂಡರು. ಅದರ ಮುಖಪುಟ ಲೇಖನ 'ಜನಸೇವಕ' ಎಂಬ ಹೆಸರಿನಲ್ಲಿ ದಿನಕರ ದೇಸಾಯಿಯವರೇ ಬರೆಯುತ್ತಿದ್ದರು. ಸಂಪಾದಕೀಯ ಪುಟವನ್ನು ಕೂಡ ಹೆಚ್ಚಾಗಿ ದೇಸಾಯಿಯವರೇ ಬರೆಯುತ್ತಿದ್ದರು. ದೇಸಾಯಿಯವರಿಗೆ ಸಮಯದ ಸಮಸ್ಯೆ ಇದ್ದಾಗಲೆಲ್ಲ ಈ ಎರಡೂ ಪುಟಗಳನ್ನು ಅಮ್ಮೆಂಬಳ ಆನಂದರೇ ಬರೆಯುತ್ತಿದ್ದರು. ಸುಮಾರು 15 ಇಂಚು ಉದ್ದದ 8 ಪುಟಗಳ ಈ ಪತ್ರಿಕೆಯಲ್ಲಿ 'ನೇಗಿಲಯೋಗಿ' ಎಂಬ ಹೆಸರನ್ನಿಟ್ಟುಕೊಂಡು 100ಕ್ಕಿಂತ ಹೆಚ್ಚು ಲೇಖನಗಳನ್ನು ಅಮ್ಮೆಂಬಳ ಬರೆದಿದ್ದಾರೆ. ಅವೆಲ್ಲ ಪ್ರತ್ಯೇಕ ಗ್ರಂಥವಾಗಿ ಬರಬೇಕಾದ ಅಗತ್ಯವಿದೆ.

ಅಮ್ಮೆಂಬಳ ಆನಂದ 'ಜನಸೇವಕ'ದ ಜೊತೆಗೆ 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್', 'ಸಂಯುಕ್ತ ಕರ್ನಾಟಕ' ಮುಂತಾದ ನಾಲ್ಕಾರು ಪತ್ರಿಕೆಗಳಿಗೆ ಅಧಿಕೃತ ವರದಿಗಾರರಾಗಿದ್ದರು. ಇವರಂಥ ನ್ಯಾಯನಿಷ್ಠುರ ಪತ್ರಕರ್ತರನ್ನು ನಾನು ಇದುವರೆಗೆ ಬೇರೆಲ್ಲೂ ಕಂಡಿಲ್ಲ. ಸತ್ಯವನ್ನು ಮುಚ್ಚುಮರೆಯಿಲ್ಲದೆ ಬರೆಯುವಾಗಲೂ ಅದರ ಜೊತೆಜೊತೆಗೆ ನಾಡಿನ ನೆಮ್ಮದಿಯ ಬಗ್ಗೆ ಚಿಂತಿಸುತ್ತಿದ್ದರು.

50 ವರ್ಷಗಳ ಅಂಕೋಲೆಯ ನಂಟು ಸಣ್ಣದೇನೂ ಆಗಿರಲಿಲ್ಲ. ಈ ನೆಲದಲ್ಲಿ ಆನಂದರಂತಹ ಸಮಾಜವಾದಿ ಕಾರ್ಯಕರ್ತ ಇನ್ನೊಬ್ಬನಿರಲಿಲ್ಲ. ಅವರ ಪತ್ರಿಕಾಲಯ ಸಮಾಜವಾದಿ ಪಕ್ಷದ ಕಾರ್ಯಾಲಯವೂ ಆಗಿತ್ತು. ಈ ಲೇಖಕನನ್ನೊಳಗೊಂಡು ಅಂದಿನ ಅನೇಕ ಯುವಕರನ್ನು ಈ ದಿಶೆಯಲ್ಲಿ ತಿದ್ದಿ ತೀಡಿದ ನೂರಕ್ಕೆ ನೂರು ಶ್ರೇಯಸ್ಸು ಅವರದು. ರೈತ–ಕಾರ್ಮಿಕರ ಮನೆ ಮನೆಗೆ ಹೋಗಿ ತಳಮಟ್ಟದ ಸಂಘಟನೆ ಮಾಡಿ ಪ್ರತಿ ಹಳ್ಳಿಯಿಂದ ಅಂಕೋಲೆಯ ಮಹಾಸಭೆಗೆ ಜನರು ಸಮುದ್ರದಂತೆ ಹರಿದು ಬಂದುದಕ್ಕೆ (1955ರ ನಂತರ)

ಆನಂದರ ಶ್ರಮವೇ ಮುಖ್ಯ. 60 ರ ದಶಕದಲ್ಲಿ ಇಡೀ ಜಿಲ್ಲೆಯೊಳಗೆ ಅಂಕೋಲಾ ತಾಲೂಕಾ ಬೋರ್ಡು ಮೊಟ್ಟ ಮೊದಲು ಸಮಾಜವಾದಿಗಳ ಆಡಳಿತಕ್ಕೆ ಒಳಪಡುವಂತೆ ಯೋಜನೆಗಳನ್ನು ರೂಪಿಸಿದ ಬೆರಳೆಣಿಕೆಯ ನಾಯಕರಲ್ಲಿ ಅಮ್ಮೆಂಬಳ ಆನಂದರ ಪಾತ್ರ ಬಹುಮುಖ್ಯವಾದದ್ದು. ಆ ವೇಳೆಗಾಗಲೇ ಸಮಾಜವಾದಿ ಚಳುವಳಿಗೆ ನೇರವಾಗಿ ಧುಮುಕಿದ ನಾನು, 'ಜನಸೇವಕ' ಪತ್ರಿಕಾಲಯದ ಮುಂದೆ ರೈತಕಾರ್ಮಿಕರು 'ಜನಸೇವಕ' ವಾರ ಪತ್ರಿಕೆಯಲ್ಲಿ ಏನು ಬರೆದಿದೆ ಎಂದು ನೋಡುವ ಕುತೂಹಲದಿಂದ ಹಣ ಕೊಟ್ಟು ಪತ್ರಿಕೆ ಕೊಳ್ಳಲು ಫರ್ಲಾಂಗುದ್ದ 'ಕ್ಯೂ' ನಿಂತ ದೃಶ್ಯ ಇನ್ನೂ ನನ್ನ ಕಣ್ಮುಂದಿದೆ. 1967 ರಲ್ಲಿ ನಡೆದ ದೇಶದ ಮಹಾಚುನಾವಣೆಯೊಳಗೆ ಉತ್ತರ ಕನ್ನಡ ಜಿಲ್ಲೆಯಿಂದ ಲೋಕಸಭೆಗೆ ದಿನಕರ ದೇಸಾಯಿ ಮತ್ತು 6 ವಿಧಾನಸಭೆ ಸ್ಥಾನಗಳಲ್ಲಿ 5ನ್ನು ಸಮಾಜವಾದಿ ಪಕ್ಷವೇ ಗೆದ್ದು ದಾಖಲೆ ನಿರ್ಮಿಸಿದ್ದಕ್ಕೂ ದಿನಕರ ದೇಸಾಯಿ, ಅಮ್ಮೆಂಬಳ, ನಾಡಕರ್ಣಿ, ಶಂಕರ ಕೇಣಿ, ಟಿ.ಕೆ.ಮೆಹಮೂದ ಇವರುಗಳ ಕಾರ್ಯತಂತ್ರವೇ ಮುಖ್ಯ ಕಾರಣವಾಗಿತ್ತು.

90ರ ದಶಕಾರಂಭದಲ್ಲಿ ಅಂದಿನ ಕೇಂದ್ರ ಸಚಿವರಾದ ಜಾರ್ಜ್ ಫರ್ನಾಂಡೀಸ್ ಕಾರವಾರದಲ್ಲಿ ಆರಂಭವಾಗಲಿದ್ದ ನೌಕಾನೆಲೆಯ ಕಾಮಗಾರಿಗೆ ಅಡಿಗಲ್ಲನ್ನಿಡಲು ಆಗಮಿಸಿದ್ದರು. ಎಲ್ಲೆಲ್ಲೂ ಪೊಲೀಸರ ಕಣ್ಗಾವಲು! ಜಾರ್ಜ್ ಫರ್ನಾಂಡೀಸ್ ಅಮ್ಮೆಂಬಳರನ್ನು ಅಲ್ಲಿ ಕಂಡಾಕ್ಷಣವೇ 'ಓ ಆನಂದ್ ನೀವಿಲ್ಲಿ, ತುಂಬಾ ಖುಷಿಯಾಯಿತು' ಎಂದು ಅಪ್ಪಿಕೊಂಡರು. ರಕ್ಷಣಾ ಬಲದವರೆಲ್ಲ ತಬ್ಬಿಬ್ಬು! ಅಮ್ಮೆಂಬಳ ಆನಂದ ಇದೇ ಜಾರ್ಜ್ ಫರ್ನಾಂಡೀಸರ ಜೊತೆಗೇ ಕುಳಿತು ಮಂಗಳೂರಿನಲ್ಲಿ ಓದಿದವರು. ಮುಂದೆ ಅನೇಕ ಸ್ಥಳೀಯ ಜನಪರ ಹೋರಾಟಗಳಲ್ಲಿ ಕೂಡಿ ಕೆಲಸ ಮಾಡಿದವರು. ಜಾರ್ಜ್ ಫರ್ನಾಂಡೀಸರಿಗೆ ಊಟಕ್ಕೂ ಕಷ್ಟವಿದ್ದ ದಿನಗಳಲ್ಲಿ ಆನಂದರ ಚಿಕ್ಕಪ್ಪ ಅಮ್ಮೆಂಬಳ ಬಾಳಪ್ಪನವರೇ ಒಂದಷ್ಟು ದುಡ್ಡುಕೊಟ್ಟು ಮುಂಬೈಗೆ ಕಳಿಸಿದ್ದರು.


ಅಮ್ಮೆಂಬಳರು ಜಯಪ್ರಕಾಶ ನಾರಾಯಣ, ಲೋಹಿಯಾ, ಖಾದ್ರಿ, ಶಾಮಣ್ಣ, ಎಚ್. ಕೆ.ರಂಗನಾಥ, ಕಮಲಾದೇವಿ ಚಟ್ಟೋಪಾಧ್ಯಾಯ, ಉಮಾದೇವಿ, ಕೆ.ಎಸ್. ಕಾರಂತ (ಲೇಖಕ ಶಿವರಾಮ ಕಾರಂತರಲ್ಲ) ಮುಂತಾದ ಮಹಾನ್ ಸಮಾಜವಾದಿಗಳ ಸಂಪರ್ಕ ಪ್ರಭಾವದಿಂದ ಇನ್ನಷ್ಟು ಮತ್ತಷ್ಟು ಎಂಬಂತೆ ಮಾಗಿದವರು. ಸಮಾಜವಾದಿ ಬದ್ಧತೆಯ ಮೂಲಕ ಬಹಳಷ್ಟನ್ನು ಕಳೆದುಕೊಂಡವರು ಅಮ್ಮೆಂಬಳ ಆನಂದ. ತಮ್ಮ 87ನೇ ವಯಸ್ಸಿನಲ್ಲೂ ಅದೇ ಕ್ರಿಯಾಶೀಲತೆ, ಅದೇ ಸಿದ್ಧಾಂತ, ಅದೇ ಹೋರಾಟದ ಕೆಚ್ಚು. ಹೊಸ ತಲೆಮಾರಿನ ನಮ್ಮ ಪತ್ರಕರ್ತರು ಆ ಕ್ಷೇತ್ರಕ್ಕೆ ಬಂದು ಐದೇ ವರ್ಷಗಳಲ್ಲಿ ಹೊಸ ಮನೆ ಕೊಂಡಿದ್ದಿದೆ. ಆದರೆ ಆನಂದರು 50 ವರ್ಷಗಳ ದುಡಿಮೆಯ ನಂತರವೂ ಬಡವರಾಗಿಯೇ ಉಳಿದು, – ಅಲ್ಲಿ ಇಲ್ಲಿ ಹಣಿಕಿ ಸಣ್ಣವರಾಗದೇ – ಬ್ಯಾಂಕಿನಲ್ಲೇ ಸಾಲ ಮಾಡಿ ವೃತ್ತಿ ಘನತೆಗಿಂತ ದೊಡ್ಡ ಸಂಪತ್ತು ಬೇರಿಲ್ಲ ಎಂದು ತೋರಿಸಿಕೊಟ್ಟವರು. ಸುಮಾರು 5 ಲಕ್ಷ ರೂಪಾಯಿ ಸಾಲ ತೀರಿಸುವುದಕ್ಕಾಗಿ ಇದ್ದ ತಮ್ಮ ಸ್ವಂತ ಮನೆಯನ್ನೇ ಆನಂದರು ಮಾರಿಬಿಟ್ಟರು. ಈಗ ಮಣಿಪಾಲದ ದಶರಥನಗರದಲ್ಲಿರುವ ಮಗಳ ಮನೆಯಲ್ಲೇ ವಾಸವಾಗಿದ್ದಾರೆ.

ಅಮ್ಮೆಂಬಳ ಆನಂದರ ಪತ್ರಿಕಾ ಕ್ಷೇತ್ರದ ಸಾಧನೆಗಾಗಿ ಕರ್ನಾಟಕ ಪತ್ರಿಕಾ ಅಕಾಡೆಮಿ ಪ್ರಶಸ್ತಿ (1987), ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ (1996) ಮತ್ತು ಜಿ. ಆರ್. ಪಾಂಡೇಶ್ವರ ಪತ್ರಿಕೋದ್ಯಮ ಪ್ರಶಸ್ತಿ (2004)ಗಳನ್ನಲ್ಲದೆ ಅವರ ಸಮಾಜವಾದಿ ಕೆಲಸ ಕಾರ್ಯಗಳಿಗಾಗಿ ಲೋಕನಾಯಕ ಜೆ.ಪಿ. ಪ್ರಶಸ್ತಿ (2010) ನೀಡಿ ಗೌರವಿಸಲಾಗಿದೆ.

–ವಿಷ್ಣು ನಾಯ್ಕ

(ಅಕ್ಟೋಬರ್, 2014)

ಧೀರ ಹೋರಾಟಗಾರ ಜಾರ್ಜ್ ಫರ್ನಾಂಡೀಸ್



ಜಾರ್ಜ್ ಫರ್ನಾಂಡೀಸ್ ಎಂಬುದು ಸ್ವಾತಂತ್ರ್ಯೋತ್ತರ ಭಾರತದ ಕಾರ್ಮಿಕ ಚಳುವಳಿ ಮತ್ತು ರಾಜಕೀಯ ಕ್ಷೇತ್ರಗಳ ಬಹುದೊಡ್ಡ ಹೆಸರು. 1974ರ ಅಖಿಲ ಭಾರತ ರೈಲ್ವೇ ನೌಕರರ ಚಳುವಳಿ ಮತ್ತು 1977ರ ತುರ್ತು ಪರಿಸ್ಥಿತಿ ವಿರೋಧದ ಬರೋಡಾ ಡೈನಾಮೈಟ್ ಪ್ರಕರಣ ಜಾರ್ಜ್ ಫರ್ನಾಂಡೀಸರ ಹೆಸರನ್ನು ಭಾರತಾದ್ಯಂತ ಮನೆ ಮಾತಾಗಿಸಿತು. 1977ರಲ್ಲಿ ಜನತಾ ಪಕ್ಷ ಕಾಂಗ್ರೆಸ್ಸನ್ನು ಸೋಲಿಸಿ ಅಧಿಕಾರಕ್ಕೆ ಬಂದು, ಡೈನಾಮೈಟ್ ಪ್ರಕರಣದಿಂದಾಗಿ ಸೆರೆಮನೆಯಲ್ಲಿದ್ದ ಫರ್ನಾಂಡೀಸ್ ಬಿಡುಗಡೆಯಾದಾಗ ಅವರು ಇಡೀ ಭಾರತದ ಸ್ವಾತಂತ್ರ್ಯ ಪ್ರಿಯರ, ನಿರ್ದಿಷ್ಟವಾಗಿ ಯುವಜನರ ಕಣ್ಮಣಿಯಾಗಿದ್ದರು. ಅದು 'ಭಾರತಬಿಟ್ಟು ತೊಲಗಿ ಚಳುವಳಿ'ಯಲ್ಲಿ ಭೂಗತರಾಗಿ ಬ್ರಿಟಿಷ್ ಪ್ರಭುತ್ವದ ವಿರುದ್ಧ ಹೋರಾಡಿದ ಜೆಪಿ ಮತ್ತು ಲೋಹಿಯಾ ಭಾರತದ ಸ್ವಾತಂತ್ರ್ಯ ಘೋಷಣೆಯ ಸಂಬಂಧದ ಮಾತುಕತೆಗೆ ಮುನ್ನ ಲಾಹೋರ್ ಸೆರೆಮನೆಯಿಂದ ಬಿಡುಗಡೆಯಾದ ಸಂದರ್ಭಕ್ಕೆ, ಆ ಸಂದರ್ಭದ ಜನರ ಸಂಭ್ರಮಕ್ಕೆ ಹೋಲಿಸಬಹುದಾದ ಐತಿಹಾಸಿಕ ಕ್ಷಣವಾಗಿತ್ತು.

ಜಾರ್ಜ್ ಕನ್ನಡಿಗರು. ಅವರು ಮಂಗಳೂರಿನ ರೋಮನ್ ಕ್ಯಾಥೋಲಿಕ್ ಕುಟುಂಬವೊಂದರಲ್ಲಿ 1930ರ ಜೂನ್ 3ರಂದು ಜನಿಸಿದರು. ಮನೆ ಮಾತು ಕೊಂಕಣಿಯಾದರೂ, ಕನ್ನಡ ಅವರ ಸಾರ್ವಜನಿಕ ಬಳಕೆಯ ಮತ್ತು ಶಿಕ್ಷಣ ಪಡೆದ ಭಾಷೆ. ಆನಂತರ ಅವರು ಈ ಎರಡು ಭಾಷೆಗಳ ಜೊತೆಗೆ ಲ್ಯಾಟಿನ್ ಸೇರಿ ಇತರ ಏಳು ಭಾಷೆಗಳಲ್ಲಿ ಪರಿಣಿತರಾದರು. ಅವರು ಬಹುಕಾಲ ಕರ್ನಾಟಕದಲ್ಲಿ ಇರಲಿಲ್ಲವಾದರೂ, ಅವರು ತಮ್ಮ ಕಾರ್ಮಿಕ ಸಂಘಟನೆಯ ಕೆಲಸ ಆರಂಭಿಸಿದ್ದು ಕರ್ನಾಟಕದಲ್ಲಿಯೇ. ಧಾರ್ಮಿಕ ಶ್ರದ್ಧೆಯ ಕುಟುಂಬವಾಗಿದ್ದ ಅವರ ಕುಟುಂಬ ಜಾರ್ಜರನ್ನು ಅವರ 16ನೇ ವಯಸ್ಸಿನಲ್ಲಿ ಬೆಂಗಳೂರಿನ ಸೇಂಟ್ ಪೀಟರ್ ಧಾರ್ಮಿಕ ಶಿಕ್ಷಣ ಶಾಲೆಗೆ ಸೇರಿಸಿದರು. ಅವರು ಅಲ್ಲಿ ರೋಮನ್ ಕ್ಯಾಥೋಲಿಕ್ ಪೌರೋಹಿತ್ಯದ ಸಂಬಂಧವಾಗಿ ಮೂರು ವರ್ಷಗಳ ಶಿಕ್ಷಣವನ್ನು ಪೂರೈಸಿದರಾದರೂ, ಅಲ್ಲಿನ ವ್ಯವಸ್ಥೆಯಲ್ಲಿನ ವಿವಿಧ ಶ್ರೇಣಿಗಳು ಮತ್ತು ತಾರತಮ್ಯಗಳನ್ನು ಕಂಡು ವಿಚಲಿತರಾಗಿದ್ದರು. ಹಾಗಾಗಿ ಧಾರ್ಮಿಕ ಶ್ರದ್ಧೆ ಕಳೆದುಕೊಂಡ ಅವರು ಮಂಗಳೂರಿಗೆ ಹಿಂದಿರುಗಿ ಶೋಷಿತರ, ದುರ್ಬಲರ ಸಂಘಟನೆಗೆ ತೊಡಗಿದರು. ವಿಶೇಷವಾಗಿ ಸಾರಿಗೆ ಮತ್ತು ಹೋಟೆಲ್ ಕಾರ್ಮಿಕರನ್ನು ಅವರು ಸಂಘಟಿಸಿದರು. ಆಗ ಮನೆಯಿಂದ ದೂರ ಸರಿದಿದ್ದ ಜಾರ್ಜ್‌ರನ್ನು ಗುರುತಿಸಿ, ಆಶ್ರಯ ನೀಡಿ ಪ್ರೋತ್ಸಾಹಿಸಿದವರು ಸಮಾಜವಾದಿಯಾಗಿದ್ದ ಅಮ್ಮೆಂಬಳ

ಬಾಳಪ್ಪ ಅವರು. ಇವರ ಸಲಹೆಯಂತೆಯೇ ಜಾರ್ಜ್ ಜೀವನೋಪಾಯ ಅರಸಿ 1949ರಲ್ಲಿ ಮುಂಬೈಗೆ ಹೊರಟದ್ದು ಕೂಡ.

ಮುಂಬೈನಲ್ಲಿ ಉದ್ಯೋಗಕ್ಕಾಗಿ ಅಲೆಯುತ್ತಾ, ಸಮುದ್ರದ ಮರಳಿನ ಮೇಲೆಯೇ ರಾತ್ರಿಗಳನ್ನು ಕಳೆಯುತ್ತಿದ್ದ ಜಾರ್ಜ್‌ರಿಗೆ ಆಗ ಪ್ರಸಿದ್ಧ ಕಾರ್ಮಿಕ ನಾಯಕರಾಗಿದ್ದ ಪ್ಲಾಸಿಡ್ ಡಿ'ಮೆಲ್ಲೋರ ಪರಿಚಯವಾಯಿತು. ಹುಡುಗನ ಸಾಮಾಜಿಕ ಕಳಕಳಿ, ಉತ್ಸಾಹ ಮತ್ತು ಶ್ರದ್ಧೆಗಳನ್ನು ಗುರುತಿಸಿದ ಡಿ'ಮೆಲ್ಲೋ ಜಾರ್ಜ್‌ರನ್ನು ಕಾರ್ಮಿಕ ಸಂಘಟನೆಗೆ ತೊಡಗಿಸಿದರು. ಆರಂಭದಲ್ಲಿ ಹೋಟೆಲ್ ಕಾರ್ಮಿಕರು ಮತ್ತು ಟ್ಯಾಕ್ಸಿ ಚಾಲಕರ ಸಂಘಟನೆಯಲ್ಲಿ ತೊಡಗಿ ಆ ಬೃಹತ್ ನಗರದ ಈ ಕಾರ್ಮಿಕ ಶಕ್ತಿಯ ದೊಡ್ಡ ಜಾಲವನ್ನೇ ನಿರ್ಮಿಸಿದ ಫರ್ನಾಂಡೀಸ್, ಅದರ ಹಿತಾಸಕ್ತಿ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗಾಗಿ ದೊಡ್ಡ ಹೋರಾಟಗಳನ್ನೇ ಅರಂಭಿಸಿ, ಮುಷ್ಕರಗಳನ್ನು ಸಂಘಟಿಸಿ ಯಶಸ್ವಿಯೂ ಆದರು. ಅನೇಕ ಬಾರಿ ವಿವಿಧ ಅವಧಿಗಳ ಸೆರೆಮನೆವಾಸಗಳಿಗೂ ಅವರು ತುತ್ತಾದರು. ಇದರಿಂದ ಇತರ ಕಾರ್ಮಿಕ ವಲಯಗಳಲ್ಲೂ ಅವರ ಜನಪ್ರಿಯತೆ ಹೆಚ್ಚಿತು. ಅವರು ಹಡಗುಕಟ್ಟೆ ಮತ್ತು ರೈಲ್ವೇ ಇಲಾಖೆಗಳ ಕಾರ್ಮಿಕರ ಜನಪ್ರಿಯ ನಾಯಕರಾಗಿಯೂ ಮೂಡಿದರು.

ಸಮಾಜವಾದಿ ಪಕ್ಷದ ಕಾರ್ಮಿಕ ವಿಭಾಗವಾಗಿದ್ದ ಹಿಂದ್ ಮಜದೂರ್ ಸಭಾದ ನಾಯಕರಾಗಿದ್ದ ಡಿಮೆಲ್ಲೋ ಜಾರ್ಜರನ್ನು ಸಮಾಜವಾದಿ ಪಕ್ಷದ ನಾಯಕರಾಗಿದ್ದ ರಾಮಮನೋಹರ ಲೋಹಿಯಾರಿಗೆ ಪರಿಚಯಿಸಿದರು. ಲೋಹಿಯಾರ ವ್ಯಕ್ತಿತ್ವ ಮತ್ತು ವಿಚಾರಗಳಿಂದ ಪ್ರಭಾವಿತರಾದ ಜಾರ್ಜ್ ಸಮಾಜವಾದಿ ಪಕ್ಷದ ಸದಸ್ಯತ್ವ ಪಡೆದುಕೊಂಡು ರಾಜಕಾರಣದಲ್ಲೂ ಸಕ್ರಿಯವಾಗಿ ತೊಡಗಿಕೊಂಡರು. ಇದರ ಪರಿಣಾಮವಾಗಿ 1961ರಲ್ಲಿ ಮುಂಬೈ ನಗರಪಾಲಿಕೆಯ ಚುನಾವಣೆಗಳಿಗೆ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದರು. ನಂತರದ ಎರಡು ಅವಧಿಗಳಲ್ಲಿಯೂ ನಗರಪಾಲಿಕೆಯ ಸದಸ್ಯರಾಗಿ ಗೆದ್ದ ಫರ್ನಾಂಡೀಸ್ ಆ ಬೃಹತ್ ನಗರದ ಕಾರ್ಮಿಕ ಸಮುದಾಯದ ಸಮಸ್ಯೆಗಳ ಪರಿಹಾರಗಳ ವಿಷಯವಾಗಿ ದೊಡ್ಡ ಹೋರಾಟಗಳನ್ನೇ ನಡೆಸಿದರು. ಇದರ ಫಲ ಕಂಡದ್ದು ಲೋಹಿಯಾ ಅವರು ಕಾಂಗ್ರೆಸ್ಸೇತರವಾದ ಪ್ರತಿಪಾದಿಸಿದ 1967ರ ಲೋಕಸಭಾ ಚುನಾವಣೆಗಳಲ್ಲಿ. ಮುಂಬೈ ದಕ್ಷಿಣ ಕ್ಷೇತ್ರದಿಂದ ಸಂಯುಕ್ತ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಕಾಂಗ್ರೆಸ್‌ನ ಹಿರಿಯ ನಾಯಕ ಮತ್ತು ಮುಂಬೈನ ಸುಪ್ರಸಿದ್ಧ ರಾಜಕಾರಣಿ ಎಸ್. ಕೆ. ಪಾಟೀಲ್ ವಿರುದ್ಧ ಸ್ಪರ್ಧಿಸಿದ ಜಾರ್ಜ್ ಎಲ್ಲರ ನಿರೀಕ್ಷೆಯನ್ನೂ ಹುಸಿಗೊಳಿಸಿ ಭಾರಿ ಅಂತರದಿಂದ ಗೆದ್ದೇಬಿಟ್ಟರು. ಇದರಿಂದಾಗಿ 'ಸೈಂಧವ ಹಂತಕ' (Gaint killer) ಎಂದೇ ಹೆಸರಾದ ಜಾರ್ಜ್ ಅಂದಿನಿಂದ ಅಖಿಲಭಾರತ ನಾಯಕರೂ ಆಗಿ ಮೂಡಿದರು.

ಲೋಕಸಭಾ ಸದಸ್ಯರಾದ ನಂತರ ಕಾರ್ಮಿಕ ಚಳುವಳಿಯ ನಾಯಕತ್ವವನ್ನು ತನ್ನ ಕಿರಿಯ ಸಹವರ್ತಿಗಳಿಗೆ ವಹಿಸಿದ ಫರ್ನಾಂಡೀಸ್ ಸಮಾಜವಾದಿ ರಾಜಕಾರಣದಲ್ಲಿ ತಮ್ಮನ್ನು ಹೆಚ್ಚೆಚ್ಚು ತೊಡಗಿಸಿಕೊಳ್ಳಲಾರಂಭಿಸಿದರು. ಲೋಹಿಯಾ ನಿಧನಾನಂತರ 1969ರಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡ ಅವರು 1973ರ

ಹೊತ್ತಿಗೆ ಪಕ್ಷದಲ್ಲಿ ಎಷ್ಟು ವರ್ಚಸ್ವೀ ನಾಯಕರಾಗಿ ಬೆಳೆದಿದ್ದರೆಂದರೆ, ಒಡೆದು ದೂರವಾಗಿದ್ದ ಸಮಾಜವಾದಿ ಪಕ್ಷಗಳ ಎರಡು ಗುಂಪುಗಳು ಒಂದಾಗಿ ಮತ್ತೆ ಉದಯವಾದ ಏಕೀಕೃತ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾದರು. ಎಪ್ಪತ್ತರ ಆ ದಶಕ ಎಂದರೆ ದೇಶ ಬಾಂಗ್ಲ ಯುದ್ಧದ ನಂತರ ಅನೇಕ ಸಂಕಷ್ಟಗಳಿಗೆ ಸಿಲುಕಿ ತಳಮಳಗಳಿಗೆ ಸಿಕ್ಕಿದ್ದ ದಶಕ. ಇಂದಿರಾ ಗಾಂಧಿಯವರ 'ಗರೀಬಿ ಹಟಾವೋ' ಘೋಷಣೆ ಪೊಳ್ಳಾಗಿ ಹೋಗಿ, ಹಣದುಬ್ಬರ, ನಿರುದ್ಯೋಗ, ಭ್ರಷ್ಟಾಚಾರ ಮುಗಿಲು ಮುಟ್ಟಿ ಪ್ರಧಾನಿ ಇಂದಿರಾ ಗಾಂಧಿಯವರ ಜನಪ್ರಿಯತೆ ಕುಸಿಯುತ್ತಿದ್ದ ಕಾಲವದು. ಸರ್ಕಾರದ ವಿರುದ್ಧ ಯುವಜನರು, ವಿದ್ಯಾರ್ಥಿಗಳು, ಕಾರ್ಮಿಕರು ಸಂಘಟಿತರಾಗಿಸಿ ಸಿಡಿದೇಳತೊಡಗಿದ್ದರು.

ಜಾರ್ಜ್ ತಮ್ಮ ನಾಯಕ ಲೋಹಿಯಾರ ಕಾಂಗ್ರೆಸ್ ವಿರೋಧಿ ರಾಜಕೀಯ ಪರಂಪರೆಗೆ ಅನುಗುಣವಾಗಿ ಇಂದಿರಾ ಸರ್ಕಾರದ ದುರಾಡಳಿತ ಮತ್ತು ಭ್ರಷ್ಟತೆಯ ವಿರುದ್ಧ ಜನಾಭಿಪ್ರಾಯ ಮೂಡಿಸಲು ಸಂಸತ್ತು ಮತ್ತು ಅದರ ಹೊರಗೆ ಶ್ರಮಿಸಿದರು. ಆ ಹೊತ್ತಿಗೆ ರೈಲ್ವೇ ಇಲಾಖೆಯ ನೌಕರರೂ, ಈಡೇರದ ತಮ್ಮ ಬಹುದಿನಗಳ ವೇತನ ಪರಿಷ್ಕರಣೆ ಮತ್ತು ಇತರೆ ಕ್ಷೇಮಾಭ್ಯುದಯ ಬೇಡಿಕೆಗಳನ್ನು ಒತ್ತಾಯಿಸಿ 1974ರ ಮೇ 8ರಂದು ಮುಷ್ಕರ ಆರಂಭಿಸಿದರು. ಸಹಜವಾಗಿಯೇ ಈ ಕಾರ್ಯಚರಣೆಯ ನೇತೃತ್ವ ವಹಿಸಿದ ಜಾರ್ಜ್ ಫರ್ನಾಂಡೀಸ್ ತಮ್ಮ ಚತುರ ಸಂಘಟನಾ ಶಕ್ತಿಯಿಂದ ಇಡೀ ರೈಲ್ವೇ ಇಲಾಖೆಯ ವಿವಿಧ ಘಟಕಗಳಲ್ಲದೆ, ಇತರೆ ಹಲವು ವಲಯಗಳ ಕಾರ್ಮಿಕರ ಸಂಘಗಳ ಬೆಂಬಲ ಸಂಘಟಿಸಿ ಇಡೀ ದೇಶದ ಆರ್ಥಿಕ ಚಕ್ರ ಹೆಚ್ಚೂ ಕಡಿಮೆ ಸ್ಥಗಿತಗೊಳ್ಳುವಂತೆ ಮಾಡಿದರು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಡೆದ ಅತಿ ದೀರ್ಘ ಮತ್ತು ಸಂಕಷ್ಟಮಯವೆನಿಸಿದ ಮುಷ್ಕರ 30 ಸಾವಿರ ಜನ ಕಾರ್ಮಿಕರ ಬಂಧನಕ್ಕೆ, ನಂತರ ಹಲವು ಸಾವಿರ ರೈಲ್ವೇ ಇಲಾಖೆಯ ನೌಕರರ ಅಮಾನತ್ತು ಮತ್ತು ವಜಾದಂತಹ ಸರ್ಕಾರದ ದಮನಕಾರಿ ಕ್ರಮಗಳಿಗೆ ಕಾರಣವಾಗಿ ಮೇ 27ರಂದು ಏಕಪಕ್ಷೀಯವಾಗಿ ಕಾರ್ಮಿಕ ಸಂಘಗಳ ಕ್ರಿಯಾಸಮಿತಿಯಿಂದಲೇ ಹಿಂತೆಗೆಯಲ್ಪಟ್ಟಿತು. ಆಗ ಕಾರ್ಮಿಕರಿಗೆ ಮುಷ್ಕರದಿಂದ ಯಾವ ಪ್ರತಿಫಲವೂ ಸಿಗದಿದ್ದರೂ, ಇಂತಹ ಅಶಾಂತಮಯ ವಾತಾವರಣ ಜೆಪಿ ಚಳುವಳಿಯ ಮೂಲಕ ತಾರಕಕ್ಕೇರಿ ತುರ್ತು ಪರಿಸ್ಥಿತಿ ಘೋಷಣೆಯಾಗಿ, ಅದರ ರಾಜಕೀಯ ಪರಿಣಾಮವಾಗಿ 1977ರಲ್ಲಿ ಅಧಿಕಾರಕ್ಕೆ ಬಂದ ಜನತಾ ಪಕ್ಷದ ಸರ್ಕಾರದಲ್ಲಿ ಮತ್ತೋರ್ವ ಸಮಾಜವಾದಿ ನಾಯಕ ಮಧು ದಂಡವತೆಯವರು ರೈಲ್ವೇ ಮಂತ್ರಿಯಾದಾಗ ರೈಲ್ವೇ ಕಾರ್ಮಿಕರ ಮೂಲ ಬೇಡಿಕೆಗಳಲ್ಲಿ ಬಹುಪಾಲು ಈಡೇರಲ್ಪಟ್ಟವು. ಅಮಾನತ್ತು ಮತ್ತು ವಜಾಗಳಿಗೆ ಒಳಗಾಗಿದ್ದ ಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸಲಾಯಿತು.

ತುರ್ತು ಪರಿಸ್ಥಿತಿ ವೇಳೆ ಬಂಧನದಿಂದ ತಪ್ಪಿಸಿಕೊಳ್ಳಲು ಭೂಗತರಾದ ಜಾರ್ಜ್ ಫರ್ನಾಂಡೀಸ್, ರಾಷ್ಟ್ರಾದ್ಯಂತ ಮಾರುವೇಷದಲ್ಲಿ ಸಂಚರಿಸುತ್ತಾ ಇಂದಿರಾ ಸರ್ಕಾರದ ಸರ್ವಾಧಿಕಾರದ ವಿರುದ್ಧ ಹೋರಾಟಗಳನ್ನು ರೂಪಿಸಿದರು. ಇದರ ಫಲವಾಗಿ ಅವರ ಸೋದರರು–ನಿರ್ದಿಷ್ಟವಾಗಿ ಮೈಕೇಲ್ ಫರ್ನಾಂಡೀಸ್–ಮತ್ತು

ಗೆಳೆಯರು–ನಿರ್ದಿಷ್ಟವಾಗಿ ಸ್ನೇಹಲತಾ ರೆಡ್ಡಿ ಸರ್ಕಾರದ ದಮನ, ಚಿತ್ರಹಿಂಸೆಗೆ ಒಳಗಾಗಬೇಕಾಯಿತು; ಸ್ನೇಹಲತಾ ತಮ್ಮ ಪ್ರಾಣವನ್ನೇ ಕಳೆದುಕೊಂಡರು. ಸರ್ಕಾರವನ್ನು ಬೆದರಿಸಿ ಶರಣಾಗುವಂತೆ ಮಾಡಲು ಜಾರ್ಜ್ ಬರೋಡಾದ ಕೆಲ ಸಮಾನಮನಸ್ಕರೊಂದಿಗೆ ಗುಟ್ಟಾಗಿ ಸಮಾಲೋಚಿಸಿ ಸರ್ಕಾರಿ ಕಛೇರಿಗಳನ್ನು ರಾತ್ರಿವೇಳೆ ಡೈನಾಮೈಟ್ ಮೂಲಕ ಸ್ಫೋಟಿಸುವ ಯೋಜನೆಯೊಂದನ್ನು ರೂಪಿಸಿದರು. ಅದು ಪೂರ್ಣ ಪ್ರಮಾಣದಲ್ಲಿ ಕಾರ್ಯಗತಗೊಳ್ಳುವ ಮುನ್ನವೇ ಅವರು ಕಲ್ಕತ್ತಾದಲ್ಲಿ ಬಂಧಿತರಾಗಿ, ಹಿಂಸೆ ಮತ್ತು ಸರ್ಕಾರದ ವಿರುದ್ಧ ಪಿತೂರಿಯ ಆಪಾದನೆಗಳನ್ನು ಎದುರಿಸುತ್ತಾ ಕೈಕಾಲುಗಳಿಗೆ ಸರಪಳಿ ಬಿಗಿದ ಸೆರೆಯಾಳಾಗಿ ಸುಮಾರು ಹತ್ತು ತಿಂಗಳುಗಳ ಕಾಲ ದೆಹಲಿಯ ತಿಹಾರ್ ಜೈಲಿನಲ್ಲಿರಬೇಕಾಯಿತು. ಕೊನೆಗೆ ಅಂತಾರಾಷ್ಟ್ರೀಯ ಒತ್ತಡಗಳಿಂದಾಗಿ ಇಂದಿರಾ 1977ರ ಮಾರ್ಚ್‌ನಲ್ಲಿ ತುರ್ತು ಪರಿಸ್ಥಿತಿಯನ್ನು ಹಿಂತೆಗೆದುಕೊಂಡು ಚುನಾವಣೆಗಳನ್ನು ನಡೆಸಿ, ಅದರಲ್ಲಿ ಸೋತಾಗ, ಫರ್ನಾಂಡೀಸ್‌ರಿಗೆ ಸೆರೆಮನೆಯಿಂದ ಬಿಡುಗಡೆ ಮತ್ತು ತಮ್ಮ ವಿರುದ್ಧದ ಎಲ್ಲ ಮೊಕದ್ದಮೆಗಳಿಂದ ಮುಕ್ತವಾಗುವ ಭಾಗ್ಯ ದೊರಕಿತು. ಸೆರೆಮನೆಯಿಂದಲೇ ಬಿಹಾರದ ಮುಝಫರಪುರದಿಂದ ಜೆಪಿ ರೂಪಿಸಿದ ಜನತಾ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಜಾರ್ಜ್ 3 ಲಕ್ಷ ಮತಗಳ ಭಾರಿ ಅಂತರದಿಂದ ಗೆದ್ದಿದ್ದರು.

ನಂತರ ಜನತಾ ಪಕ್ಷದ ಸರ್ಕಾರದಲ್ಲಿ ಕೈಗಾರಿಕಾ ಮಂತ್ರಿಯಾದ ಫರ್ನಾಂಡೀಸ್ ಭಾರತದ ಕಂಪನಿ ಕಾನೂನುಗಳನ್ನು ಪಾಲಿಸಲು ನಿರಾಕರಿಸುತ್ತಿವೆ ಎಂಬ ಕಾರಣದ ಮೇಲೆ ಕೋಕಾ ಕೋಲಾ ಮತ್ತು ಐ.ಬಿ.ಎಂ ಕಂಪನಿಗಳ ಭಾರತದಲ್ಲಿ ಶಾಖೆಗಳನ್ನು ಮುಚ್ಚಿಸುವ ಧೈರ್ಯ ತೋರಿ ದೊಡ್ಡ ಸುದ್ದಿ ಮಾಡಿದರು. ಅಷ್ಟೇ, ಅಲ್ಲಿಗೆ ಅವರ ಹೋರಾಟದ ಬದುಕು ಮುಗಿಯಿತೆಂದು ಹೇಳಬೇಕು. ಮುಂದಿನದೆಲ್ಲ ಇತ್ತೀಚಿನ ಇತಿಹಾಸ. ಜನತಾ ಪಕ್ಷ ಎರಡೇ ವರ್ಷಗಳಲ್ಲಿ ಒಡೆದು, ಸರ್ಕಾರ ಬಿದ್ದು ಹೋದಾಗ ಜನತಾ ಪಕ್ಷದ ನಿರ್ಮಾಣದಲ್ಲಿ ಪಕ್ಷವನ್ನು ಕಳೆದುಕೊಂಡಿದ್ದ ಎಲ್ಲ ಸಮಾಜವಾದಿಗಳಂತೆ ಕೆಲ ಕಾಲ ಇವರೂ ಜನತಾ ಪಕ್ಷದ ಚೂರುಪಾರುಗಳ ಚಿಲ್ಲರೆ ರಾಜಕಾರಣದಲ್ಲಿ ಬಸವಳಿದು, ಕೊನೆಗೆ ವಿ.ಪಿ. ಸಿಂಗ್‌ರ ನೇತೃತ್ವದ ಜನತಾ ದಳದ ಸರ್ಕಾರದಲ್ಲಿ ರೈಲ್ವೇ ಮಂತ್ರಿಯಾಗಿ ಕೊಂಕಣ ರೈಲ್ವೇ ಎಂಬ ಬೃಹತ್ ರೈಲ್ವೇ ಯೋಜನೆಯ ಯಶಸ್ಸಿನ ಹೆಗ್ಗಳಿಕೆ ಪಾತ್ರರಾದರು. ಆದರೆ ನಂತರದ ಅವರ ರಾಜಕರಣ ಸಂಪೂರ್ಣ ಗೊಂದಲಮಯವೇ ಆದದ್ದು ಸಮಾಜವಾದಿ ರಾಜಕಾರಣದ ದುರಂತಗಳಲ್ಲೊಂದು. ಅವರು ತಮ್ಮ ಕೆಲ ಸಮಾಜವಾದಿ ಗೆಳೆಯರೊಂದಿಗೆ ಸೇರಿ ಸಮತಾ ಪಕ್ಷ ಕಟ್ಟಿದರು. ನಂತರ ಒಳಜಗಳಗಳಿಗೆ ಸಿಕ್ಕಿ ಅದನ್ನು ಬೆಳೆಸಲಾಗದೆ ಜನತಾ ಬಳಗದ ಐಕ್ಯತೆಯ ಹೆಸರಿನಲ್ಲಿ ಜೆಡಿ(ಯು)ನಲ್ಲಿ ವಿಲೀನಗೊಳಿಸಿದರು. ಕೊನೆಗೆ ಅವರ ತಾತ್ವಿಕ ರಾಜಕಾರಣದ ವಿಪರ್ಯಾಸವೆಂಬಂತೆ, ಯಾವ ಕೋಮುವಾದಿ ರಾಜಕಾರಣದ ಕಾರಣದ ಮೇಲೆ ಜನತಾ ಪಕ್ಷದ ಒಡಕನ್ನು ಅವರು ಬೆಂಬಲಿಸಿದ್ದರೋ ಆ ಕೋಮುವಾದಿ ರಾಜಕರಣದ ಪ್ರತೀಕವಾಗಿ ಬೆಳೆದಿದ್ದ ಭಾರತೀಯ ಜನತಾ ಪಕ್ಷದ ನೇತೃತ್ವದ ಮೈತ್ರಿಕೂಟದಲ್ಲಿ ತಮ್ಮ ಜೆಡಿ(ಯು) ಪಕ್ಷವನ್ನು ಭಾಗಿಯಾಗಿಸಿ ಕೇಂದ್ರ ರಕ್ಷಣಾ

ಮಂತ್ರಿಯಾದರು. ಇದರ ಪರಿಣಾಮವಾಗಿ ಜೆಡಿ(ಯು) ಒಡೆದು ಜೆಡಿ(ಎಸ್) ಎಂಬ ಪಕ್ಷದ ಉದಯಕ್ಕೂ ಅವರು ಮತ್ತು ಅವರ ಗೆಳೆಯರು ಕಾರಣರಾದರು. ಈ ಮಧ್ಯೆ ಅವರ ಕೌಟುಂಬಿಕ ಬದುಕೂ ಅಸ್ತವ್ಯಸ್ತವಾಗಿ ಅವರ ಪತ್ನಿ ಲೈಲಾ ಕಬೀರ್ ಮತ್ತು ಮಗ ಸಿಯಾನ್ ಅವರಿಂದ ದೂರಾದರು. ಜಯಾ ಜೈಟ್ಲಿ ಎಂಬ ವಿವಾಹ ವಿಚ್ಛೇದಿತ ಮಹಿಳೆ ಜಾರ್ಜ್‌ರ ಜೊತೆಗಾರ್ತಿಯಾದರು.


ಜಾರ್ಜ್ ರಕ್ಷಣಾ ಸಚಿವರಾಗಿದ್ದಾಗಲೇ-1998ರಲ್ಲಿ- ಭಾರತ ಪೋಖ್ರಾನ್‌ನಲ್ಲಿ ಅಣುಸ್ಫೋಟನ ನಡೆಸಿದ್ದು ಎಂಬುದು ಸಮಾಜವಾದಿ ತಾತ್ವಿಕತೆಗೆ ಅವರು ನೀಡಿದ ಇನ್ನೊಂದು ವಿಪರ್ಯಾಸಕರ ಆಘಾತ ಎನ್ನಬಹುದು. ನಿಜ, ಅವರು ಜಗತ್ತಿನ ಅತಿ ಎತ್ತರದ ಮತ್ತು ದುರ್ಗಮ ಯುದ್ಧಭೂಮಿ ಎನಿಸಿದ ಸಯಾಚಿನ್ ಪ್ರದೇಶಕ್ಕೆ ಅತಿ ಹೆಚ್ಚು ಬಾರಿ-18 ಬಾರಿ-ಭೇಟಿಕೊಟ್ಟ ಸಚಿವರೆನಿಸಿದರು ಮತ್ತು ಪಾಕಿಸ್ತಾನದೊಡನೆಯ 1999ರ ಕಾರ್ಗಿಲ್ ಯುದ್ಧದಲ್ಲಿ ಭಾರತಕ್ಕೆ ಜಯ ದೊರಕಿಸಿಕೊಟ್ಟರು. ಆದರೆ ಅದೇ ವೇಳೆಗೆ, ಸೈನಿಕರ ಶವಪೆಟ್ಟಿಗೆಗಳ ಮತ್ತು ಬರಾಕ್ ಕ್ಷಿಪಣಿಗಳ ಖರೀದಿ ಹಗರಣಗಳು ಅವರನ್ನು ಸುತ್ತಿಕೊಂಡವು. ಇದಕ್ಕೆ ಪೂರಕವಾಗಿ ಅವರ ಸಂಗಾತಿ ಜಯಾ ಜೈಟ್ಲಿ ತೆಹಲ್ಕಾ ಕುಟುಕು ಕಾರ್ಯಚರಣೆಯಲ್ಲಿ ಲಂಚ ಸ್ವೀಕಾರ ಆರೋಪಕ್ಕೆ ಸಿಕ್ಕಿ ಹಾಕಿಕೊಂಡರು. ಇದೆಲ್ಲದರಿಂದ ತತ್ತರಿಸಿದ ಫರ್ನಾಂಡೀಸ್ ಕ್ರಮೇಣ ತಮ್ಮ ಆರೋಗ್ಯವನ್ನು ಕಳೆದುಕೊಳ್ಳಲಾರಂಭಿಸಿದರು. ಈ ಎಲ್ಲ ಹಗರಣಗಳಿಂದ ಈಗ ಅವರು ಮುಕ್ತರಾಗಿದ್ದಾರಾದರೂ, ವೃದ್ಧಾಪ್ಯದ ಮೈಮರೆವಿನ ಕಾಯಿಲೆಗೆ ತುತ್ತಾಗಿರುವ ಅವರನ್ನು ಅವರ ಜೆಡಿ(ಯು) ಪಕ್ಷ ರಾಜ್ಯ ಸಭೆಯ ಸದಸ್ಯರನ್ನಾಗಿ ಮಾಡಿ ಗೌರವಿಸಿದೆ. ಆದರೆ ಒಂದು ಕಾಲದಲ್ಲಿ ಅವರ ವ್ಯಕ್ತಿತ್ವಕ್ಕಿದ್ದ ಪ್ರಖರತೆ, ಪ್ರಭಾವಳಿ ಇತಿಹಾಸದಲ್ಲಿ ಮರೆಯಾಗಿದೆ.

ಸಮಾಜವಾದಿ ರಾಜಕಾರಣದ ಧೀರತೆ, ಏಳು ಬೀಳು ಮತ್ತು ದುರಂತಮಯತೆಯ ಪ್ರತೀಕದಂತೆ, 85 ವರ್ಷ ವಯಸ್ಸಿನ ಈ ಜಾರ್ಜ್ ಫರ್ನಾಡೀಸ್ ಮತ್ತೆ ತಮ್ಮ ಮೊದಲ ಪತ್ನಿಯ ಆರೈಕೆಯಲ್ಲಿ (ಮತ್ತೆ ಅದೊಂದು ವಿವಾದಾಸ್ಪದವೆನಿಸಿದ ಬೆಳವಣಿಗೆ) ವಿರಮಿಸಿದ್ದಾರೆ.

-ಡಿ.ಎಸ್. ನಾಗಭೂಷಣ

(ಮೇ, 2015)

ಸುಸಂಸ್ಕೃತ ಹೋರಾಟಗಾರ ಗಂಗಾಧರ ಪದಕಿ



ಗಂಗಾಧರತ್ರ್ಯಂಬಕ ಪದಕಿ ಧಾರವಾಡದ ಪ್ರಾಂತಕ್ಕೆ ಸಮಾಜವಾದದ ಪರಿಪೂರ್ಣ ಕಲ್ಪನೆಯನ್ನು ಪರಿಚಯಿಸಿದವರು, ಸಮತಾ ಸಮಾಜದ ಕನಸುಗಳೊಂದಿಗೆ ಸಮಾಜವಾದದ ತತ್ವ, ಸಿದ್ಧಾಂತಗಳ ಬೇರುಗಳನ್ನು ಹುರಿಗೊಳಿಸಿದವರು. ಸಮಾಜವಾದದ ಆದರ್ಶಗಳನ್ನು ಮೈಗೂಡಿಸಿಕೊಂಡು ಅದರಂತೆ ಬಾಳಿದವರು ಬಡವರ, ನಿರ್ಗತಿಕರ, ಕೃಷಿ ಕೂಲಿಕಾರರ, ಕಾರ್ಮಿಕರ, ರೈತರ ನೋವುಗಳಿಗೆ ತೀವ್ರ ಪ್ರತಿಕ್ರಿಯಿಸುತ್ತಾ ಅವುಗಳನ್ನು ತೊಡೆದುಹಾಕಲು ನಿರಂತರ ಹೋರಾಟ ನಡೆಸಿದವರು.

'ಪದಕಿ ವಕೀಲರು' ಎಂದೇ ಅಖಂಡ ಧಾರವಾಡ ಜಿಲ್ಲೆಯಾದ್ಯಂತ ಪರಿಚಿತರಾಗಿ ಅಜಾತಶತ್ರು ಎನಿಸಿಕೊಂಡ ಅವರು ಬದಲಾವಣೆ ಬಯಸುವ, ಸಮಾನತೆಗೆ ತುಡಿಯುವ, ಶೋಷಣೆ ಅಳಿಸಿ ಹಾಕಲು ಮಿಡಿಯುವ ಸಮಾನಮನಸ್ಕರೊಂದಿಗೆ ಸಂಘಟನೆಗಳನ್ನು ಹುಟ್ಟು ಹಾಕಿದ ರೂವಾರಿ. ಶಾಲಾ ದಿನಗಳಲ್ಲಿಯೇ ಸ್ವಾತಂತ್ರ್ಯ ಆಂದೋಲನಕ್ಕೆ ಧುಮುಕಿದವರು. ಗಾಂಧೀಜಿ ತತ್ವ, ಸಿದ್ಧಾಂತಗಳಿಗೆ ಮಾರು ಹೋದರೂ, ನೇತಾಜಿ ವೀರಾವೇಷಕ್ಕೆ ತಲೆದೂಗಿದವರು. ಗಳಗನಾಥರ "ಮಾಧವ ಕರುಣ ವಿಲಾಸ" ಮುಂತಾದ ಕಾದಂಬರಿಗಳಿಂದ ಪ್ರೇರೇಪಿತರಾದವರು. ವಿವೇಕಾನಂದರ ವಾಗ್ಝರಿಗೆ ಮನಸೋತವರು ಪದಕಿಯವರು.

ಧಾರವಾಡ ತಾಲೂಕಿನ ಉಪ್ಪಿನ ಬೆಟಗೇರಿಯ ಕುಟುಂಬದಲ್ಲಿ 1926ರ ಜೂನ್ 28ರಂದು ಜನಿಸಿದ ಪದಕಿಯವರು ಉಪ್ಪಿನ ಬೆಟಗೇರಿಯಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿ ಪ್ರೌಢ ಶಿಕ್ಷಣಕ್ಕೆಂದು ಬಂಡಾಯದೂರು ನರಗುಂದ ಸೇರಿದಾಗ ನೇರವಾಗಿ ಚಳುವಳಿಗೀಳಿದರು. ವಿದ್ಯಾರ್ಥಿಗಳ ನಡುವೆ 'ಬಾಲ ನಾಯಕ'ನ ಗುಣ ಬೆಳೆಸಿಕೊಂಡರು.

ವಿನೋಬಾ ನೇತೃತ್ವದಲ್ಲಿ ಗಾಂಧೀಜಿ ವೈಯಕ್ತಿಕ ಸತ್ಯಾಗ್ರಹ ಆಂದೋಲನ ಸಾರಿದ್ದು, ಗೃಹಬಂಧನದಿಂದ ತಪ್ಪಿಸಿಕೊಂಡು ನೇತಾಜಿ ಬಲೂಚಿಸ್ತಾನದ ಮೂಲಕ ಜರ್ಮನಿಗೆ ಹೋದ ರೋಮಾಂಚಕ ಘಟನೆ, ಕ್ರಿಪ್ಸ್ ನಿಯೋಗದ ಪ್ರಯತ್ನದ ವಿಫಲತೆ, ಎರಡನೇ ಮಹಾಯುದ್ಧದ ಪತ್ರಿಕಾ ವರದಿಗಳು ಪದಕಿ ಚಲೇ ಜಾವ್ ಚಳುವಳಿಗೆ ಮುಂದಾಗಲು ಸಹಜವಾಗಿ ಕಾರಣವಾದವು. 1942ರ ಅಗಷ್ಟ್ 14, 15ರಂದು ನರಗುಂದದಲ್ಲಿ ಮೆರವಣಿಗೆ ನಡೆಸಲು ಮುಂದಾದರು. ಮೆರವಣಿಗೆಗೆ ಬೆಂಬಲ ನೀಡಿದ್ದ 3–4 ವ್ಯಾಪಾರಸ್ಥರನ್ನು ಬಂಧಿಸಿದ ಪೋಲೀಸ್‌ರು ಸಣ್ಣ ಮಕ್ಕಳೆಂಬ ಕಾರಣಕ್ಕೆ ಪದಕಿ ಮತ್ತು ಗೆಳೆಯರನ್ನು ಬಿಟ್ಟರು.

ಹೋರಾಟದ ತೀವ್ರತೆಯಿಂದ ಸೊಲ್ಲಾಪುರದ ಕ್ರಾಂತಿಕಾರಿಗಳಿಂದ

ಎರಡು ನಾಡುಬಾಂಬ್ ದೊರಕಿಸಿಕೊಂಡ ಪದಕಿ ಹಾಗೂ ಮಿತ್ರರು ಒಂದನ್ನು ಸ್ಫೋಟಗೊಳಿಸಿದರು. ಇನ್ನೊಂದು ಬಾಂಬ್ ಚಿಕ್ಕನರಗುಂದದ ಶಂಕರಗೌಡ ಮನೆಯಲ್ಲಿ ಸಿಕ್ಕು ಪೊಲೀಸ್‌ರು ಆತನನ್ನು ಬಂಧಿಸಿದರು. ಆಗ ಪದಕಿ ನರಗುಂದದಿಂದ ಪಲಾಯನ ಮಾಡಿ ಸ್ವಂತ ಊರು ಉಪ್ಪಿನ ಬೆಟಗೇರಿಗೆ ಬಂದರು. ಧಾರವಾಡ ತಾಲೂಕಿನ ಗರಗದಲ್ಲಿ ಶಂಕರ ಕುರ್ತಕೋಟಿ, ಗರುಡ ಶರ್ಮಾ ನೇತೃತ್ವದಲ್ಲಿ, ಪರಕಾಳಿ ಶಿವರುದ್ರಪ್ಪ, ಸಂಕೋಜಿ ಯಲ್ಲಪ್ಪ, ಸವದತ್ತಿ ತಾಲೂಕಿನ ಕರಿಕಟ್ಟಿ, ಹೂಲಿ ಗ್ರಾಮಗಳಲ್ಲಿ ಶ್ರೀರಂಗ ಕಾಮತ, ವಾಲಿ ಚನ್ನಪ್ಪ, ಅಣ್ಣೂ ಗುರೂಜಿ, ಹೂಲಿ ವೆಂಕರೆಡ್ಡಿ ಹಿರಿತನದಲ್ಲಿ ಆಂದೋಲನ ತೀವ್ರವಾಗಿ ನಡೆದಿದ್ದು ಪದಕಿ ಅವರನ್ನು ಆಕರ್ಷಿಸಿತು.

ಆಗ ಪದಕಿಯವರು ಉಪ್ಪಿನ ಬೆಟಗೇರಿಯಲ್ಲಿ 15–20 ಹುಡುಗರ 'ಮ್ಯಾಳ' ಕಟ್ಟಿಕೊಂಡು ರಾತ್ರಿ ಹೊತ್ತಿನಲ್ಲಿ ಚಾವಡಿಗೆ ಬೆಂಕಿ ಹಚ್ಚುವದು, ಟಪಾಲು ಕಸಿದುಕೊಂಡು ಓಡಿ ಹೋಗುವದು, ಪೊಲೀಸ್ ಔಟ್‌ಪೋಸ್ಟ್ ನಾಶ ಮಾಡುವದು, ಕಂದಾಯದ ದಫ್ತರ್ ಸುಡುವದು. ಹಗಲು ಹೊತ್ತಿನಲ್ಲಿ ದೂರ ದೂರದ ಹೊಲ, ಗುಡ್ಡಗಳಲ್ಲಿ ಅಡಗಿ ಕೂಡುವದು ನಿತ್ಯದ ಕೆಲಸವಾಯಿತು. ದೊಡ್ಡ ದೊಡ್ಡ ಟಾರ್ಚ್ ಬ್ಯಾಟರಿಗಳಲ್ಲಿ ಕಂತ್ರಿ ಪಿಸ್ತೂಲ್‌ಗಳನ್ನು ಮುಚ್ಚಿಡುವ ಸಾಹಸಗಳಿಗೆ ಪದಕಿ ಮಂಡಳಿ ಕೈಹಾಕಿತು. ಹೊಲಗಳಲ್ಲಿ ರೈತರು ಇವರಿಗೆ ಊಟ ಕೊಡುತ್ತಿದ್ದರು. ಇವರ ಗುಪ್ತ ಚಲನವಲನಗಳಿಗೆ ಬೆಂಬಲ ನೀಡುತ್ತಿದ್ದರು.

ಅಗಷ್ಟ 15ರಂದು ನರಗುಂದದಲ್ಲಿ ಎರಡು ಬಾರಿ, ಅಣ್ಣಿಗೇರಿ ರೇಲ್ವೆ ಸ್ಟೇಷನ್‌ದಲ್ಲಿ ಒಂದು ಬಾರಿ ಒಟ್ಟು ಮೂರು ಸಲ ಪೊಲೀಸ್‌ರು ಪದಕಿ ಅವರನ್ನು ಹಿಡಿದರಾದರೂ ಚಿಕ್ಕವರೆಂದು ಬಿಟ್ಟುಬಿಟ್ಟರು. 1943 ಜೂನ್ 6ರಂದು ಧಾರವಾಡ ಪೊಲೀಸ್‌ರು ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದ ಆಪಾದನೆಯ ಮೇಲೆ ಪದಕಿ ಅವರನ್ನು ಬಂಧಿಸಿದರು. ಒಂದು ವರ್ಷ ವಿಚಾರಣಾಧೀನ ಕೈದಿಯಾಗಿ ಶಿವಮೊಗ್ಗ ಜೈಲಿನಲ್ಲಿ ಬಂಧಿಸಿಟ್ಟರು. 1944 ಜೂನ್ 21ರಂದು ಬಿಡುಗಡೆ ಮಾಡಿದರು. ಜೈಲುವಾಸದ ಕಟು ಅನುಭವ, ಸಂಕಷ್ಟಗಳು ಪದಕಿಯವರ ದೇಶಪ್ರೇಮವನ್ನು ಇಮ್ಮಡಿಗೊಳಿಸಿದವೇ ಹೊರತು ಕಡಿಮೆ ಮಾಡಲಿಲ್ಲ. ಗಾಂಧೀಜಿ, ಜಯಪ್ರಕಾಶ ನಾರಾಯಣ, ಲೋಹಿಯಾ ಅವರ ವಿಚಾರಧಾರೆಗಳು ಹೋರಾಟದ ಹಸಿವನ್ನು ಪ್ರಬಲಗೊಳಿಸಿದವು. ಮಾನಸಿಕ ಸಿದ್ಧತೆ, ಸೈದ್ಧಾಂತಿಕ ಬದ್ಧತೆಗಳು ಚುರುಕುಗೊಂಡು ಚಳುವಳಿಗೆ ಅವರ ಮನಸ್ಸು ಗಟ್ಟಿಯಾಯಿತು.

ಬಿಡುಗಡೆಯ ನಂತರ ಬೆಳಗಾವಿಯ ಆರ್‌ಪಿಡಿ ಕಾಲೇಜ್‌ದಿಂದ ಬಿ. ಎ, (ಅರ್ಥಶಾಸ್ತ್ರ, ತತ್ವಶಾಸ್ತ್ರ) ಹಾಗೂ ಬೆಳಗಾವಿಯ ಆರ್‌ಎಲ್ ಲಾ ಕಾಲೇಜ್‌ನಿಂದ 1954ರಲ್ಲಿ ಕಾನೂನು ಪದವಿ ಪಡೆದರು. 1956ರಿಂದ ಧಾರವಾಡದಲ್ಲಿ ವಕೀಲಿ ವೃತ್ತಿ ಆರಂಭಿಸಿದರು. ವೃತ್ತಿಯಿಂದ ನ್ಯಾಯವಾದಿಯಾಗಿದ್ದರೂ, ಸಮಾಜವಾದಿ ಪಕ್ಷಗಳ ಸಕ್ರಿಯ ಸದಸ್ಯರಾಗಿದ್ದರು. ಮಹಾತ್ಮರಿಂದಾಗಿ ಕಾಂಗ್ರೆಸ್‌ನೊಂದಿಗೆ ಸಂಪರ್ಕ ಹೊಂದಿದ್ದರೂ ಸ್ಥಳೀಯ ಕಾಂಗ್ರೆಸ್ಸಿಗರೊಂದಿಗೆ ಅವರದು ಭಿನ್ನತೆ. ಡಾ. ರಾಮಮನೋಹರ ಲೋಹಿಯಾ, ಜಯಪ್ರಕಾಶ ನಾರಾಯಣ, ಎಮ್.

ಎನ್. ರಾಯ್, ಕಿಶನ್ ಪಟ್ನಾಯಕರ ಚಿಂತನೆಗಳ ತಳಹದಿ ಒಂದೆಡೆ. ರಾಜ್ಯದ ನಾಯಕರಾದ ಶಾಂತವೇರಿ ಗೋಪಾಲಗೌಡ, ಕಡಿದಾಳ ಮಂಜಪ್ಪ, ಕಮಲಾದೇವಿ ಚಟ್ಟೋಪಾಧ್ಯಯ, ಸದಾಶಿವ ಕಾರಂತ, ಅಮ್ಮೆಂಬಳ ಬಾಳಪ್ಪ, ರಾಮಕೃಷ್ಣ ಹೆಗಡೆ, ಜೆ.ಎಚ್.ಪಟೇಲ ಮುಂತಾದವರ ಒಡನಾಟ, ನೀಲಗಂಗಯ್ಯ ಪೂಜಾರ, ಅಬ್ಬಿಗೇರಿ ವಿರೂಪಾಕ್ಷಪ್ಪ ಅವರ ಸಾಥ್ ಪದಕಿಯವರ ಹೋರಾಟದ ಜೀವನವನ್ನು ಆವರಿಸಿಕೊಂಡಿದ್ದವು.

ಕಾಗೋಡು ಸತ್ಯಾಗ್ರಹದ ತೀವ್ರ ಪ್ರಭಾವಕ್ಕೆ ಒಳಗಾಗಿದ್ದ ಪದಕಿ ಅವರು ತಮ್ಮ ಸಮಾಜವಾದಿ ಗೆಳೆಯ ನೀಲಗಂಗಯ್ಯ ಪೂಜಾರರೊಂದಿಗೆ ಧಾರವಾಡ ತಾಲೂಕಿನ ಹೆಬ್ಬಳ್ಳಿ ಜಾಗೀರದಾರರ ಗೇಣಿದಾರರಿಗೆ ಭೂಮಿ ಕೊಡಿಸುವ ಹೋರಾಟ ಆರಂಭಿಸಿದರು. ಸತತ 2-3 ವರ್ಷ ನಡೆದ ಈ ಕುರಿತ ಮೆರವಣಿಗೆ, ಧರಣಿ, ಉಪವಾಸ, ಪಿಕೆಟಿಂಗ್‌ಗಳ ನೇತೃತ್ವ ವಹಿಸಿದರು. ಕೊನೆಗೂ ಹೆಬ್ಬಳ್ಳಿ, ಕಿತ್ತೂರು, ಯರಗಟ್ಟಿ, ಶಲವಡಿ, ಗಜೇಂದ್ರಗಡ ಮುಂತಾದ ಭೂಮಾಲೀಕರಿಂದ ಉಳುವವರಿಗೆ 11,000 ಎಕರೆ ಭೂಮಿ ಹಂಚಿಸುವಲ್ಲಿ ಯಶಸ್ವಿಯಾದರು. ಪದಕಿ ಅವರು ಗೇಣಿದಾರರ ಪರ ಹೋರಾಟವಲ್ಲದೇ ಪೌರಕಾಮಿಕರ, ಬೀಡಿ ಕಾರ್ಮಿಕರ, ಸಾರಿಗೆ ನೌಕರರ, ಸರಕಾರಿ ನೌಕರರ ಸಂಘಟನೆ ಕಟ್ಟಿ ಅವರಿಗಾಗಿ ಹೋರಾಡಿದರು. ಆಸಕ್ತಿದಾಯಕ ಸಂಗತಿ ಎಂದರೆ ಹುಟ್ಟಿನಿಂದ ಬ್ರಾಹ್ಮಣರಾದ ಪದಕಿಯವರು, ಇನ್ನೋರ್ವ ಸಮಾಜವಾದಿ ರಾಚಪ್ಪ ಹಡಪದರ ಮಧ್ಯಸ್ಥಿಕೆಯಲ್ಲಿ ಹುಬ್ಬಳ್ಳಿ-ಧಾರವಾಡ ಸವಿತಾ ಸಮಾಜದ ಅಧ್ಯಕ್ಷರಾಗಿದ್ದರು!

ಧಾರವಾಡದಲ್ಲಿ ಪೌರಕಾರ್ಮಿಕರ ಪರವಾಗಿ ಬಂದ್‌ಗೆ ಕರೆ ನೀಡಿದಾಗ ಇಡೀ ನಗರ ಕಸ, ಕೊಳೆ, ಕಕ್ಕಸು ತುಂಬಿ ಗಬ್ಬು ನಾರಲಾರಂಭಿಸಿತು. ಎಂದಿನಂತೆ ಕಾಂಗ್ರೆಸ್ಸಿಗರ ತೀವ್ರ ಟೀಕೆಗೆ ಗುರಿಯಾದ ಪದಕಿ ವಕೀಲರು ಕಾರ್ಯಕರ್ತರನ್ನು ಕೂಡಿಸಿಕೊಂಡು ಧಾರವಾಡ ಶಹರದ ಸ್ವಚ್ಛತೆಗೆ ಸ್ವತಃ ತಾವೇ ಕಚ್ಚೆ ಕಟ್ಟಿ ನಿಂತಿದ್ದರೆಂದು ಅಂದಿನ ಹಿರಿಯರು ಆಗಾಗ ನೆನೆಯುತ್ತಿರುತ್ತಾರೆ. ಗ್ರಾಮೋದ್ಯೋಗ, ಸ್ವದೇಶಿ, ಖಾದಿಯ ಬಗ್ಗೆ ಸ್ಪಷ್ಟ ನಿಲುವು ಹೊಂದಿದ್ದ ಅವರಿಗೆ ಖಾದಿ ಪ್ರಚಾರ ಬೀಜಮಂತ್ರವಾಗಿತ್ತು. ಕಟ್ಟಾ ಖಾದಿಧಾರಿಯಾದ ಅವರು ಉಪ್ಪಿನ ಬೆಟಗೇರಿ, ಗರಗ, ಹೆಬ್ಬಳ್ಳಿಗಳ ಖಾದಿ ಕೇಂದ್ರಗಳನ್ನು ವಿಖ್ಯಾತಗೊಳಿಸಿದರು. ಪದಕಿ ಅಧ್ಯಕ್ಷರಾಗಿದ್ದಾಗಲೇ ಗರಗ ಖಾದಿ ಸಂಘ ರಾಷ್ಟ್ರಧ್ವಜ ತಯಾರಿಸುವದನ್ನು ಆರಂಭಿಸಿ ದೇಶಾದ್ಯಂತ ಹೆಸರು ಮಾಡಿದೆ.

ವಿವಿಧ ಶೈಕ್ಷಣಿಕ, ಗ್ರಾಹಕ, ನಾಗರಿಕ ಸಂಘಟನೆಗಳ ರೂವಾರಿಯಾದ ಪದಕಿಯವರು 1983ರಲ್ಲಿ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ದಾಗ ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ(ಹುಡಾ)ದ ಅಧ್ಯಕ್ಷತೆಗೆ ನೇಮಕಗೊಂಡರು.. ಅಂತೆಯೇ ಹುಬ್ಬಳ್ಳಿಯಲ್ಲಿ ಜಯಪ್ರಕಾಶ ನಗರ, ಆರ್. ಎಮ್. ಲೋಹಿಯಾ ನಗರ ಅವರಿಂದ, ಅವರ ಶಿಷ್ಯರಿಂದ ತಲೆ ಎತ್ತಿವೆ. 'ಪದಕಿ ಅಂಥ ಅಧ್ಯಕ್ಷರು 'ಹುಡಾ'ಕ್ಕೆ ಹಿಂದೆಯೂ ಸಿಕ್ಕಿದ್ದಿಲ್ಲ. ಮುಂದೆಯೂ ಸಿಗುವದಿಲ್ಲ ಎಂದು ಅವರ ವಿರೋಧಿ ಕಾಂಗ್ರೆಸ್ಸಿಗರೇ ಹೇಳುತ್ತಿದ್ದರು. ಧಾರವಾಡದಲ್ಲಿ ಮನೆ ಹೊಂದಿದ್ದ ಪದಕಿ ಅವರು ಹುಬ್ಬಳ್ಳಿಯಲ್ಲಿಯ 'ಹುಡಾ' ಕಚೇರಿಗೆ ದಿನಾಲು ಬಸ್‌ನಲ್ಲಿ ಹೋಗಿ ಬರುತ್ತಿದ್ದರು,

ಕಚೇರಿಯ ಕೆಲಸಕ್ಕೆ ಮಾತ್ರ ಕಾರ್ ಬಳಸುತ್ತಿದ್ದರು. ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿ, ಸಾರಿಗೆ ಸೌಲಭ್ಯಗಳಿಗೆ ಕೈಒಡ್ಡದ ಅವರು ಆಪ್ತರು ಈ ಬಗ್ಗೆ ಮಾಡಿದ ಒತ್ತಾಯಕ್ಕೆ ಮಣಿದಿರಲಿಲ್ಲ. ಧಾರವಾಡ ಶಹರ ಕ್ಷೇತ್ರದಿಂದ ಸ್ಪರ್ಧಿಸಲು 1983, 85ರಲ್ಲಿ ಜನತಾ ಪಕ್ಷದಿಂದ ಎರಡು ಬಾರಿ ಟಿಕೇಟ್ ದೊರೆತು ಸ್ಪರ್ಧಿಸಿದ್ದರಾದರೂ, ಕೆಲವೇ ನೂರು ಮತಗಳ ಅಂತರದಿಂದ ಸೋತಿದ್ದ ಪದಕಿ ಅವರಿಗೆ ಸೋಲುಗಳು ಎಂದೂ ನೋವು ತರುತ್ತಿರಲಿಲ್ಲ. "ಇದು ಪಧಕಿ ಸೋಲಲ್ಲ. ಮತದಾರರ ಸೋಲು" ಎಂದು ಕೋರ್ಟಿನಲ್ಲಿ ಸಹೋದ್ಯೋಗಿ, ಆಪ್ತಮಿತ್ರರೂ, ರಾಜಕೀಯದಲ್ಲಿ ಕಟ್ಟಾ ವಿರೋಧಿಯಾಗಿದ್ದ ಆಗೀನ ಲೋಕಸಭೆ ಕಾಂಗ್ರೆಸ್ ಸದಸ್ಯ ಡಿ. ಕೆ. ನಾಯ್ಕರರೇ ಪದಕಿ ಚುನಾವಣೆ ಫಲಿತಾಂಶವನ್ನು ವಿಶ್ಲೇಷಿಸಿದ್ದು ಮಾರ್ಮಿಕವಾಗಿತ್ತು.

ಸ್ವಾತಂತ್ರ್ಯಾನಂತರದ ರಾಜಕೀಯ ಬೆಳವಣಿಗೆಗಳಿಂದ ಮನನೊಂದ ಪದಕಿಯವರು, ಭ್ರಷ್ಟಾಚಾರ, ಹಣಕ್ಕಾಗಿ ರಾಜಕಾರಣಿಗಳ ಹಪಾಹಪಿ, ಜಾತೀಯತೆ, ಮತೀಯವಾದ, ಕೋಮುವಾದವನ್ನು ಪ್ರಚೋದಿಸಿ ರಾಜಕೀಯ ಲಾಭ ಬಯಸುವವರ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸುತ್ತಿದ್ದರು. ಆದರೂ ತಮ್ಮ ಅಚಲ ನಿಲುವು, ದಿಟ್ಟ ನೇರ ನುಡಿಗಳಿಂದ ಎಲ್ಲ ವಾಮ ಮಾರ್ಗಗಳನ್ನು ಬಲವಾಗಿ ಖಂಡಿಸುತ್ತಿದ್ದರು. ಯಾರದೇ ಭಿಡೆಗೆ ಬೀಳದ ಸ್ವಭಾವ ಅವರದು. ಸಾಹಿತ್ಯಾಸಕ್ತರೂ, ಲೇಖಕರು ಅಗಿದ್ದ ಅವರ ಬದುಕು ಧಾರವಾಡದ ಸಾರಸ್ವತ ಲೋಕದಲ್ಲಿ ಚಿರಂತನ: ಅಲ್ಪಕಾಲದ ಅನಾರೋಗ್ಯದಿಂದ ಬಳಲಿದ ಅವರು 2006 ಸೆಪ್ಟೆಂಬರ್ 29ರಂದು ನಿಧನ ಹೊಂದಿದರು. ಕರ್ನಾಟಕ ವಿದ್ಯಾವರ್ಧಕ ಸಂಘವು ಗುರುತಿಸಿರುವ "ಪ್ರಾತಃಸ್ಮರಣೀಯ ಧಾರವಾಡಿಗರು" ಪಟ್ಟಿಯಲ್ಲಿ ಪದಕಿಯವರ ಹೆಸರು ಅಗ್ರಪಂಕ್ತಿಯಲ್ಲಿದೆ

–ಗಣೇಶ ಜೋಶಿ

(ಏಪ್ರಿಲ್, 2015)

ಅಬ್ಬಿಗೇರಿ ವಿರೂಪಾಕ್ಷಪ್ಪ: ಒಂದು ನೆನಪಿನ ಚಿತ್ರ



ಅಬ್ಬಿಗೇರಿ ವಿರೂಪಾಕ್ಷಪ್ಪ ಅವರ ಹೆಸರನ್ನು ನಾನು ಮೊದಲು ಕೇಳಿದ್ದು, 1980ರಲ್ಲಿ. 'ಸಂಕ್ರಮಣ' ಪತ್ರಿಕೆಯ ಸಂಪಾದಕರಾದ ಚಂದ್ರಶೇಖರ ಪಾಟೀಲರು ಆ ವರ್ಷ 'ಸಂಕ್ರಮಣ'ದ ಲೋಹಿಯಾ ವಿಶೇಷ ಸಂಚಿಕೆಯನ್ನು ಸಂಪಾದಿಸಿ ಕೊಡಲು ದೆಹಲಿಯಲ್ಲಿದ್ದ ನನ್ನನ್ನು ಕೇಳಿದ್ದರು. ಈ ಸಂಬಂಧ ನಾನು ಕರ್ನಾಟಕದ ಹಲವಾರು ಸಮಾಜವಾದಿ ಗೆಳೆಯರಿಗೆ ಮತ್ತು ಸಮಾಜವಾದಿ ಹಿನ್ನೆಲೆಯ ಲೇಖಕರಿಗೆ ಪತ್ರ ಬರೆದು ಲೋಹಿಯಾ ಕುರಿತಂತೆ ಲೇಖನಗಳನ್ನು ಆಹ್ವಾನಿಸಿದ್ದೆ. ಆಗ ಗೆಳೆಯ ಕಾಳೇಗೌಡ ನಾಗವಾರ ಅವರು ಉತ್ತರ ಕರ್ನಾಟಕದ ಸ್ಥಳೀಯ ಪತ್ರಿಕೆಯೊಂದರಲ್ಲಿ ಲೋಹಿಯಾ ಬಗ್ಗೆ ಪ್ರಕಟವಾಗಿದ್ದ ಲೇಖನವೊಂದನ್ನು ಕಳಿಸಿ ಅದನ್ನು ಸಂಚಿಕೆಗಾಗಿ ಬಳಸಿಕೊಳ್ಳಲು ಸಾಧ್ಯವೇ ನೋಡಿ ಎಂದಿದ್ದರು. ಆ ಲೇಖನ ಓದಿ ನಾನು ದಂಗಾದೆ. ಅದೊಂದು, ಆಳದಲ್ಲಿ ನಿಜವಾದ ಸಮಾಜವಾದಿಯಾಗಿದ್ದವನೊಬ್ಬ ಮಾತ್ರ ಬರೆಯಬಲ್ಲ ಲೇಖನವಾಗಿತ್ತು. ಭಾಷೆ, ಶೈಲಿ ಮತ್ತು ವಿವರಗಳಲ್ಲಿ ಸರಳತೆಯನ್ನೇ ಸೌಂದರ್ಯವನ್ನಾಗಿ ಒಡಮೂಡಿಸಿದ್ದ ಸಂವೇದನಾಶೀಲ ಕುಶಲ ಲೇಖನವಾಗಿತ್ತದು. ಅದನ್ನು ಬರೆದಿದ್ದವರು ಅಬ್ಬಿಗೇರಿ ವಿರೂಪಾಕ್ಷಪ್ಪ. (ಈ ಲೇಖನ ಈಗ ಪರಿಷ್ಕೃತ ಆವೃತ್ತಿಯಾಗಿ ಬಳ್ಳಾರಿಯ ಲೋಹಿಯಾ ಪ್ರಕಾಶನದಿಂದ ಹೊರ ಬಂದಿರುವ 'ಲೋಹಿಯಾ: ವ್ಯಕ್ತಿ–ವಿಚಾರ–ವಿಮರ್ಶೆ' ಪುಸ್ತಕದಲ್ಲಿ 'ಲೋಹಿಯಾ: ಒಂದು ನೆನಪು' ಎಂಬ ಶೀರ್ಷಿಕೆಯಡಿ ಮೊದಲ ಲೇಖನವಾಗಿ ಪ್ರಕಟವಾಗಿದೆ.)

ಲೋಹಿಯಾ ಮತ್ತು ಅವರ ಸಮಾಜವಾದ ಕುರಿತು ಅಪಾರ ಅಭಿಮಾನದಿಂದಲೂ ಮತ್ತು ಆಳವಾದ ವಿದ್ವತ್ತಿನಿಂದಲೂ ಬರೆದ ಹಲವು ಲೇಖನಗಳನ್ನು ನಾನು ಓದಿದ್ದೆ, ಮೆಚ್ಚಿದ್ದೆ. ಆ ಮೂಲಕ ಲೋಹಿಯಾ ಬಗ್ಗೆ ಪ್ರೀತಿ–ಶ್ರದ್ಧೆಗಳನ್ನು ಬೆಳೆಸಿಕೊಂಡಿದ್ದೆ. ಆ ಪ್ರೀತಿ–ಶ್ರದ್ಧೆಗಳಲ್ಲಿ ಲೋಹಿಯಾ ಚಿತ್ರ, ನಾನು ಅವರನ್ನು ಕಣ್ಣಾರೆ ಕಾಣದಿದ್ದ, ಅವರೊಂದಿಗೆ ಒಡನಾಡದಿದ್ದ ವಿಷಾದದೊಂದಿಗೆ ಹಿನ್ನೆಲೆಯಲ್ಲಷ್ಟೇ ಇರುತ್ತಿತ್ತು. ಆದರೆ ಅಬ್ಬಿಗೇರಿಯವರ ಈ ಲೇಖನ ಲೋಹಿಯಾ ಅವರನ್ನು ನೇರ ನನ್ನ ಕಣ್ಮುಂದೆಯೇ ಜೀವಂತವಾಗಿ ತಂದು ನಿಲ್ಲಿಸಿತು. ನನ್ನ ಕಣ್ಣುಗಳನ್ನು ಒದ್ದೆಯಾಗಿಸಿತು.

ಈಗ ಗದಗ ಜಿಲ್ಲೆಗೆ ಸೇರಿರುವ ರೋಣ ತಾಲ್ಲೂಕಿನ ಸೂಡಿ ಗ್ರಾಮದ ರೈತರಾಗಿದ್ದ ಅಬ್ಬಿಗೇರಿಯವರು, ತಾವು ರೋಣ ತಾಲ್ಲೂಕಿನ ಸಮಾಜವಾದಿ ಪಕ್ಷದ(ಬಹುಶಃ ಅದರ ರೈತ ಶಾಖೆಯಾಗಿದ್ದ ಕಿಸಾನ್ ಸಭಾದ) ಕಾರ್ಯಕರ್ತರಾಗಿ, ಕಳೆದ ಶತಮಾನದ ಅರವತ್ತರ ದಶಕದಲ್ಲಿ ತಮ್ಮೂರಿಗೆ ಲೋಹಿಯಾ ಬಂದಾಗ ಅನುಭವಿಸಿದ ಸಂತೋಷ–ಸಂಭ್ರಮಗಳ್ನು ಈ ಲೇಖನದಲ್ಲಿ ವರ್ಣಿಸಿದ್ದಾರೆ. ಹಾಗೇ,

ಅದರ ಭಾಗವಾಗಿ ಲೋಹಿಯಾ ಅವರ ಸಂಕ್ಷಿಪ್ತ, ಆದರೆ ಜೀವಂತವಾದ ವ್ಯಕ್ತಿ ಚಿತ್ರವನ್ನು; ಆ ಭೇಟಿಯ ವಿವರಗಳನ್ನು ಸ್ಥಳೀಯ ಬಣ್ಣ-ಬೆಡಗುಗಳಿಂದೊಡಗೂಡಿದ ಭಾಷೆಯಲ್ಲಿ ಕಟ್ಟಿಕೊಡುವ ಮೂಲಕ ಸಮಾಜವಾದದ ನಿಜವಾದ ಸ್ಪರ್ಶ ಪಡೆದ ಅಭಿವ್ಯಕ್ತಿಯ ಕ್ರಮ ಹೇಗಿರುವುದೆಂಬುದನ್ನೂ ಪರಿಚಯಿಸಿದ್ದಾರೆ. ಆ ಲೇಖನದಲ್ಲಿ ತಾವು ಕಂಡ ಲೋಹಿಯಾ ವ್ಯಕ್ತಿ ಚಿತ್ರವನ್ನು ಅವರು ಬಿಡಿಸಿರುವುದು ಹೀಗೆ:

'ಹಾಳತ ಮೈಕಟ್ಟಿನ, ಕುಳ್ಳ ನಿಲುವಿನ, ಚುರುಕು ಸ್ವಭಾವದ ಆ ವ್ಯಕ್ತಿ, ಹಿತವಾದ ಕಪ್ಪು ಬಣ್ಣ, ಗುಂಡು ಮುಖ, ದೊಣ್ಣೆ ಮೂಗು, ದಪ್ಪನೆಯ ಕನ್ನಡಕ, ಅದರ ಹಿಂದೆ ಹೊಳೆಯುವ ಪಿಳಿ ಪಿಳಿ ಕಣ್ಣುಗಳು, ಮುಖದ ಮೇಲೆ ಒಮ್ಮೊಮ್ಮೆ ಅಶಾಂತ ಜೀವನ ವಿದ್ರೋಹದ ಭಾವ ಮುದ್ರೆ, ಒಮ್ಮೊಮ್ಮೆ ಹಸುಳೆಯಾಗಿ ಹೂನಗೆ, ಮತ್ತೊಮ್ಮೆ ಎಳೆ ಹುಡುಗನ ತುಂಟ ನಗೆ...'

ತಾನು ಕೆಲ ನಿಮಷಗಳ ಕಾಲ ಮಾತ್ರ ಕಂಡ ವ್ಯಕ್ತಿಯೊಂದಿಗೆ ತಾದಾತ್ಮ್ಯ ಸಾಧಿಸಿಕೊಂಡ ಒಂದು ಸ್ಪಂದನಶೀಲ ಮನಸ್ಸು ಮಾತ್ರ ಇಂತಹ ಒಂದು ಶಬ್ದ ಚಿತ್ರವನ್ನು ಕಡೆಯಬಲ್ಲುದು. ಸಮಾಜವಾದ ಮಾತ್ರ ಅಷ್ಟೇನೂ ನುರಿತ ಬರಹಗಾರನಲ್ಲದ ಹಳ್ಳಿಯ ಸಾಮಾನ್ಯ ರೈತನೊಬ್ಬನಿಂದ ಇಂತಹ ಸಾಲುಗಳನ್ನು ಬರೆಸಬಲ್ಲುದೋ ಏನೋ! ಲೋಹಿಯಾರ ಈ ವ್ಯಕ್ತಿ ಚಿತ್ರವನ್ನು ಅದರೆಲ್ಲ ಚಲನಶೀಲತೆಯೊಂದಿಗೆ ಗ್ರಹಿಸಲು ನಮ್ಮನ್ನು ತಯಾರು ಮಾಡುವ ಆ ಲೇಖನದ ಈ ಕುತೂಹಲಕಾರಿ ಆರಂಭವನ್ನು ಗಮನಿಸಿ:

'ಸರಿಯಾಗಿ ಮುವ್ವತ್ತು ವರ್ಷಗಳ ಹಿಂದೆ. ಸೊಗಸಾದ ಮುಂಜಾವು. ಹನ್ನೊಂದು ಘಂಟೆ. ಸಮಾಜವಾದಿ ಸಾಥಿಯೊಬ್ಬನ ಪುಟ್ಟ ಮನೆ. ಅದರ ಪಕ್ಕದಲ್ಲೊಂದು ಹಜಾರ. ತೆಂಗಿನ ಗರಿಗಳನ್ನೋ, ತಾಳೇಗರಿಗಳನ್ನೋ ಹೊದಿಸಿದ ಚಪ್ಪರ. ಅದರ ಉದ್ದಕ್ಕೂ ಅಗಲಕ್ಕೆ ಸಮಾಂತರವಾಗಿ ಬಿಗಿದ ಬಿದಿರುಗಳು. ಅಲ್ಲಿಯ ಚೌಕುಚೌಕಾದ ಕಿಂಡಿಗಳಿಂದ ತಂತಾನೆ ರಚಿತವಾದ ಜಾಳಾಂಧ್ರಗಳು. ಅವುಗಳಿಂದ ಇಳಿದು ಬರುವ ನೆಳಲು ಬೆಳಕಿನ ಸುಸಿಲಾಟ. ಹಜಾರದ ನೆಲಕ್ಕೆ ನೇಸರಿನ ಕಿರಣಗಳು ನಕ್ಷೆ ಬರೆದು ಚುಂಬಿಸುತ್ತಿವೆ. ಇದೇ ಹಜಾರದ ಒಂದು ಕಡೆಗೆ ಹಲವರು ಕೂತುಕೊಂಡಿದ್ದಾರೆ. ಹೆಚ್ಚಿನ ಯಾವ ಠೀವಿಯೂ ಇಲ್ಲ. ಹತ್ತಾರು ಗೆಳೆಯರು ಬಳಗವಾಗಿ ಸೇರಿ ಆತ್ಮೀಯವಾಗಿ ಸರಸ-ಸಲ್ಲಾಪವಾಡುತ್ತಿರುವಂತೆ ತೋರುತ್ತಿದೆ ಆ ದೃಶ್ಯ...'

ತಮ್ಮ ಹಳ್ಳಿಗೆ ಲೋಹಿಯಾರ ಆಗಮನವನ್ನು ನಿರೀಕ್ಷಿಸುತ್ತಾ ಕೂತ ಗೆಳೆಯರ ಗುಂಪಿನ ದೃಶ್ಯದ ಇಂತಹ ಸೃಜನಶೀಲ ವಿವರಗಳನ್ನೊಳಗೊಂಡ ವರ್ಣನೆಯೊಂದಿಗೆ ಆರಂಭವಾಗುವ ಈ ಲೇಖನದ ಮುಂದಿನ ವಿವರಗಳ ಪ್ರಕಾರ ಲೋಹಿಯಾ, ಅಬ್ಬಿಗೇರಿಯವರನ್ನು ಅವರ ಮುಖದ ಮೇಲಿನ ಕಾತರವನ್ನು ಓದಿಕೊಂಡವರೆಂಬಂತೆ ತಾವೇ ಮಾತನಾಡಿಸಿ, ಅವರ ಮನೆಗೆ ಹೋಗಿ ಸ್ವಲ್ಪ ಕಾಲ ತಂಗುತ್ತಾರೆ. ಆಗ ಈ ಸಮಾಜವಾದಿ ಕಾರ್ಯಕರ್ತನ ಮನೆಯ ಗೋಡೆಯ ಮೇಲೆ ನಗುತ್ತಿರುವ ತಮ್ಮ ರಾಜಕೀಯ ವಿರೋಧಿ ನೆಹರೂ ಚಿತ್ರ ನೋಡಿ ದಂಗಾಗುತ್ತಾರೆ! ಆದರೆ ಇದೆಲ್ಲ ಸಹಜವೆಂಬಂತೆ, ವಿಚಲಿತರಾಗದೆ; ಅವರ ಮನೆಯಲ್ಲೇ ಎರಡು

ಚಪಾತಿ ತಿಂದು ಒಂದು ಬಟ್ಟಲು ಮಜ್ಜಿಗೆ ಕುಡಿದು ನೆಹರೂ ನೇತೃತ್ವದ ಸರ್ಕಾರದ ವಿರುದ್ಧ ದಾಳಿ ಮಾಡಲು ಸಾರ್ವಜನಿಕ ಸಭೆಗೆ ತೆರಳುತ್ತಾರೆ. ದಾರಿಯಲ್ಲಿ ಆ ಹಳ್ಳಿಯ ದೇಗುಲವೊಂದರ ಸೌಂದರ್ಯಕ್ಕೆ ಮನಸೋತು ಅದನ್ನು ಸವಿಯುತ್ತಾ, ಮೆಚ್ಚುತ್ತಾ ನಿಲ್ಲುತ್ತಾರೆ. ಇಲ್ಲಿ ಅವರ ವ್ಯಕ್ತಿತ್ವದ ಇನ್ನೊಂದು ಆಯಾಮದ ಪರಿಚಯವಾಗುತ್ತದೆ. ನಂತರ ಲೋಹಿಯಾ ರೋಣದ ವೀರಭದ್ರಗುಡಿಯ ಹಜಾರದಲ್ಲಿ ನಿಂತು ಅಬ್ಬಿಗೇರಿಯವರ ಶಬ್ದವನ್ನೇ ಬಳಸಿ ಹೇಳುವುದಾರೆ, ರೈತ ಜನಸಮ್ಮರ್ದವನ್ನುದ್ದೇಶಿಸಿ ಸುತ್ತಮುತ್ತಲ ಜನ ಆವರೆಗೆ ಕಂಡು ಕೇಳರಿಯದಂತಹ ವಿಚಾರಗಳ ಪ್ರಚಂಡ ಭಾಷಣ ಮಾಡುತ್ತಾರೆ.

ಭಾಷಣ ಮುಗಿಸಿ ಹೊರಡುವ ಮುನ್ನ ಲೋಹಿಯಾ ಅಬ್ಬಿಗೇರಿಯವರ ಭುಜದ ಮೇಲೆ ಕೈಯಿಟ್ಟು, ವಿರೂಪಾಕ್ಷಪ್ಪ ತುಂ ಧೀರ್ ಹೋ, ತೇಜಸ್ವಿ ಹೋ! ಅಪನಿ ಮಂಜಿಲ್ ಕೆ ಓರ್ ಬಢತೆ ರಹೋ! ಎಂದು ಆಶೀರ್ವದಿಸುತ್ತಾರೆ. ಅಬ್ಬಿಗೇರಿಯವರು ಸಹಜವಾಗಿಯೇ ರೋಮಾಂಚನಗೊಳ್ಳುತ್ತಾರೆ. ಆದರೆ ಆ ರೋಮಾಂಚನವನ್ನು ಅಬ್ಬಿಗೇರಿಯವರು ಸಮಾಜವಾದಿಯಾಗಿ ತಮಗಷ್ಟೇ ಇರಿಸಿಕೊಳ್ಳದೆ, ತಮ್ಮ ಆಗಿನ ಗೆಳೆಯರಿಗಷ್ಟೇ ಅಲ್ಲ, ನಮ್ಮಂತಹ ಮುಂದಿನ ತಲೆಮಾರಿನವರಿಗೂ ಹಂಚಲೋ ಎಂಬಂತೆ, ತಮ್ಮ ಲೇಖನವನ್ನು ಮುಗಿಸುವುದು ಇಡೀ ಸಮಾಜವಾದಿ ಚಳುವಳಿ ಬಗ್ಗೆ ಇಂದಿಗೂ ಅರ್ಥಪೂರ್ಣವೆನಿಸುವ ಒಂದು ಹಿನ್ನೋಟ ಒದಗಿಸಬಲ್ಲ ಮತ್ತು ಈಗಲೂ ನಮ್ಮನ್ನು ಆಳವಾಗಿ ಕಲಕಬಲ್ಲ ಈ ಭಾವಪೂರ್ಣ ವಿದಾಯದ ಸಾಲುಗಳೊಂದಿಗೆ:

"ಆ ಚಿತ್ರ, ಆ ದೃಶ್ಯ, ಆ ವಾಣಿ, ಆ ರಸ ನಿಮಿಷಗಳು...

ವರುಷಗಳ ನಂತರ ನಾನೀಗ ಅದನ್ನೆಲ್ಲ ನೆನೆದುಕೊಳ್ಳುತ್ತಿದ್ದೇನೆ. ಮುಚ್ಚಂಜೆಯ ಮುಸುಕಿನಂತೆ ಒಂದು ಬಗೆಯ ಮಬ್ಬು ಮನಸ್ಸಿಗೆ ಕವಿದಂತಾಗಿ ನಾನು ಚಿತ್ರಸ್ಥನಾಗಿ ಕೂಡುತ್ತೇನೆ. ಲೋಹಿಯಾ ನೆನಪಿನ ಅಲೆಗಳು ಹೊನ್ನಿನ ಹುಳುಗಳಂತೆ ಮಿಂಚುತ್ತಾ ಚಿತ್ರದಲ್ಲಿ ತೂರಿಕೊಂಡು ಬರುತ್ತಿವೆ. ಆ ವಾಣಿ ಈಗಲೂ ಅಂತರಂಗದಲ್ಲಿ ಅನುರುಣಿತವಾಗುತ್ತಿದೆ ಮತ್ತು ಒಡಲೊಳಗಿಂದ ಯಾರೋ ಒಡನುಡಿದಂತಾಗುತ್ತದೆ.. ಪಥಿಕನಿನ್ನೂ ದಣಿದಿಲ್ಲ. ದಾರಿಯಲ್ಲಿ ನಿಂತೂ ಇಲ್ಲ. ಅವನು ಎಚ್ಚರದಿಂದ ಮುನ್ನಡೆಯುತ್ತಲೇ ಇದ್ದಾನೆ. ಆದರೆ ದಾರಿ ತೋರಿಸುವವನೇ ದೂರವಾದ, ಗಂತವ್ಯವೂ ದೂರ, ದೂರ, ದೂರ, ಬಲು ದೂರ..."

ಸಮಾಜವಾದಿ ಚರಿತ್ರೆಯ ಹಿನ್ನೋಟವೆಂದರೆ ಇಂತಹ ಹಲವಾರು ಆರ್ದ್ರ ಚಿತ್ರಗಳು ಒದಗಿಸುವ ಹಿನ್ನೋಟಗಳ ಸರಮಾಲೆಯೇ ಆಗಿದೆ. ಆದರೆ ಅವೆಲ್ಲ, ಲೋಹಿಯಾರ ವ್ಯಕ್ತಿತ್ವದ ಒಂದು ಪಾರ್ಶ್ವ ಅಥವಾ ಹೊರ ಕವಚ ಮಾತ್ರವಾಗಿದ್ದ ಗದ್ದಲಕೋರತನದ ಪ್ರತಿಬಿಂಬ ಮಾತ್ರಗಳಂತಿರುವ ನಮ್ಮ ಕಾಲದ ಹಲವು ಗಲಭೆಕೋರ ಸಮಾಜವಾದಿಗಳ ರೋಚಕ ಚಿತ್ರಗಳ ಮಧ್ಯೆ ಹಿನ್ನೆಲೆಗೆ ಸರಿದು ಹೋಗಿವೆ. ಸಮಾಜವಾದಿ ಆಂದೋಲನದ ದಟ್ಟ ಪ್ರಭಾವವಿದ್ದ ಗಂಗಾ ಬಯಲಿನ ರಾಜ್ಯಗಳಲ್ಲಿ ನಾನು ಇಂತಹ ಎರಡೂ ಬದಿಯ-ಆರ್ದ್ರ ಮತ್ತು ಗಲಭೆಕೋರತನದ-ಚಿತ್ರಗಳನ್ನು ನೋಡಿದ್ದೇನೆ. ಆದರೆ ಕರ್ನಾಟಕದಲ್ಲಿ ನಾನು

ಕಂಡದ್ದು ಬಹುಪಾಲು ಒಂದೇ ರೀತಿಯ–ಗಲಭೆಕೋರತನದ–ಚಿತ್ರಗಳನ್ನಷ್ಟೇ. ಅಥವಾ ನಾನು ಕರ್ನಾಟಕದಲ್ಲಿನ ಸಮಾಜವಾದಿ ಚಳುವಳಿಯನ್ನು ಕಂಡ ಘಟ್ಟವೇ ಅಥವಾ ನನ್ನ ಸಹವಾಸವೇ ಹಾಗೇ ಇತ್ತೋ ಏನೋ ತಿಳಿಯದು! ಇದರ ಮಧ್ಯೆಯೇ ಆಗಾಗ್ಗೆ ಆಶ್ಚರ್ಯವೆಂಬಂತೆ ರಾಚಪ್ಪ ಬೆಟ್ಸೂರು, ವೀರಣ್ಣ ತಿಮ್ಮಾಜಿಯಂತಹವರನ್ನೂ ಕಂಡಿದ್ದೂ ನಿಜ. ಆದರೆ ಏಕೋ ಏನೋ ಈ ಗುಂಪಿನ ಮಧ್ಯೆ ಕೊರಳೆತ್ತಿ ನೋಡಿದರೂ ಅಬ್ಬಿಗೇರಿ ವಿರೂಪಾಕ್ಷಪ್ಪನವರು ಕಾಣಿಸಿಯೇ ಇರಲಿಲ್ಲ...

ಎಪ್ಪತ್ತರ ದಶಕದ ಅಂತ್ಯದ ಹೊತ್ತಿಗೆ ಸಮಾಜವಾದಿ ಚಳುವಳಿ ಜನತಾ ಪಕ್ಷದಲ್ಲಿ ಲೀನವಾಗಿ ಆನಂತರ ಜನತಾ ಪಕ್ಷದೊಂದಿಗೇ ಕಾಣೆಯಾದ ಬಳಿಕ ನಾವೆಲ್ಲ ಸಮಾಜವಾದಿ ಯುವಜನ ಸಭಾದ ಪುನರುಜ್ಜೀವನ, ಲೋಹಿಯಾ ವಿಚಾರ ಮಂಚ, ಸಮತಾ ಸಮ್ಮೇಳನ–ಸಂಘಟನೆ, :ಲಂಕೇಶ್ ಪತ್ರಿಕೆ", ದಲಿತ ಚಳುವಳಿ, ರೈತ ಚಳುವಳಿ, "ಮಾನವ", "ಪಂಚಮ", ಗೋಕಾಕ್ ಚಳುವಳಿ ಎಂದೆಲ್ಲ ಆಸೆಗಣ್ಣುಗಳಿಂದ ನಮ್ಮ ನಮ್ಮ ಮಿತಿಗಳಲ್ಲೇ ಭಾಗವಹಿಸುತ್ತಿದ್ದ ಆಂದೋಲನಗಳು ಒಂದಾದಮೇಲೊಂದರಂತೆ ತಮ್ಮದೇ ಆಂತರಿಕ ವಿರೋಧಾಸಗಳಿಂದ ತಮ್ಮ ಮೂಲ ಉದ್ದೇಶಗಳನ್ನೇ ಕಳೆದುಕೊಂಡು ದಿಕ್ಕಾಪಾಲಾಗತೊಡಗಿದಾಗ, ಇದ್ದಕ್ಕಿದ್ದಂತೆ ನನ್ನ ಬದುಕಿನ ಲಂಗರುಗಳೇ ಕಳಚಿ ಹೋದ ಅನುಭವವಾಯಿತು. ಆಗ ನಾನು ನನ್ನ ಬಧುಕಿನ ತಾತ್ವಿಕ ಮತ್ತು ತಾರ್ಕಿಕ ಅಂತ್ಯಕ್ಕೆ ಬಂದ ಗಾಬರಿಗೆ ಸಿಕ್ಕಿ(ಆ ಹೊತ್ತಿಗೆ ನಾನು ಒಂದು ಪ್ರಾಣಾಂತಿಕ ದೈಹಿಕ ಅಸ್ವಸ್ಥೆಗೂ ಈಡಾಗಿದ್ದೆ) ತತ್ತರಿಸಿದೆ. ಅದರಿಂದ ಪಾರಾಗಲೋ ಎಂಬಂತೆ(ಈಗ ಹಿಂದಿರುಗಿ ನೋಡಿದಾಗ ಹೀಗನ್ನಿಸುತ್ತಿದೆಯೋ ಏನೋ ತಿಳಿಯದು!) 2002ರಲ್ಲಿ ಶಿವಮೊಗ್ಗದಲ್ಲಿ ರಾಜ್ಯ ಮಟ್ಟದ ಮೂರು ದಿನಗಳ ಸಮಾಜವಾದಿ ಶಿಬಿರವೊಂದನ್ನು ಸಂಘಟಿಸುವ ಪ್ರಯತ್ನ ಮಾಡಿದೆ.

ಇದಕ್ಕೆ ಮೈಸೂರಿನಲ್ಲಿ ಆರಂಭವಾಗಿದ್ದ ಲೋಹಿಯಾ ಟ್ರಸ್ಟಿನ ಮತ್ತು ಕುವೆಂಪು ವಿಶ್ವವಿದ್ಯಾಲಯದ ರಾಜಕೀಯ ಶಾಸ್ತ್ರ ವಿಭಾಗದ ಆರ್ಥಿಕ ನೆರವೂ ಸಿಕ್ಕಿದುದರಿಂದ ಪಕ್ಷಾತೀತರೂ ಮತ್ತು ಅಧಿಕಾರೇತರರೂ ಆದ ಎಲ್ಲ ಸಮಾಜವಾದಿಗಳನ್ನೂ ಒಂದೆಡೆ ಸೇರಿಸುವ ಸಾಹಸ ಕೈಗೊಂಡೆ. ಆ ಹೊತ್ತಿಗೆ ಅಕಸ್ಮಾತ್ ಒಂದು ಜಿದ್ದಿಗೆ ಬಿದ್ದು, ಕರ್ನಾಟಕದ ಇಂತಹ ಎಲ್ಲ ಸಮಾಜವಾದಿಗಳ ಗುರುಗಳಾಗಿದ್ದ ಕಿಷನ್ ಪಟ್ನಾಯಕ್ ಅವರಿಗೆ ಒಂದು ಲಕ್ಷ ರೂಪಾಯಿಗಳ ನಿಧಿ ಅರ್ಪಿಸುವ ಕಾರ್ಯಕ್ರಮವನ್ನೂ ಹಮ್ಮಿಕೊಂಡಿದ್ದೆ. ಆ ವೇಳೆಗೆ ರಾಚಪ್ಪ ಬೆಟ್ಸೂರ್ ಮತ್ತು ವೀರಣ್ಣ ತಿಮ್ಮಾಜಿ ಅಸು ನೀಗಿದ್ದರು. ಹಿರಿಯರಾಗಿ, ಅವರ ಸರೀಕರಾದ ಧಾರವಾಡದ ನೀಲಗಂಗಯ್ಯ ಪೂಜಾರ ಮತ್ತು ಅಬ್ಬಿಗೇರಿ ವಿರೂಪಾಕ್ಷಪ್ಪ ಅವರನ್ನು ಈ ಶಿಬಿರಕ್ಕೆ ಆಹ್ವಾನಿಸಿದೆ. ಅಬ್ಬಿಗೇರಿಯವರು ದೂರದ ಪ್ರಯಾಣ ಕಷ್ಟವೆಂದು ಹಿಂಜರಿದರಾದರೂ, ಶಿಬಿರದ ಎರಡನೇ ದಿನದ ಮಧ್ಯಾಹ್ನ ಬಂದೇ ಬಂದರು.

ಅವರು ದೂರದ ರೋಣದಿಂದ ಬಸ್ ಹತ್ತಿ ಇಳಿದು ಶಿವಮೊಗ್ಗದ ಬಸ್ ನಿಲ್ದಾಣದಿಂದ ಯಾರನ್ನೋ ಕೇಳಿಕೊಂಡು ಶಿಬಿರ ನಡೆಯುತ್ತಿದ್ದ ಊರಾಚೆಯ

ಸಹ್ಯಾದ್ರಿ ಕಾಲೇಜಿನ ಆವರಣಕ್ಕೆ ನಡೆದೇ ಬಂದಿದ್ದರು. ಅವರ ದೇಹದಿಂದ ಬೆವರು ಬಸಿಯುತ್ತಿತ್ತು. ಮುಖ ದಣಿವಿಂದ ಸೋತಂತಿತ್ತು. "ನೀವೇಕೆ ಆಟೋದಲ್ಲಿ ಬರಲಿಲ್ಲ?"ಎಂದು ಕೇಳಿದರೆ (ಅವರಿಗೆ ಹೋಗಿ ಬರುವ ಪೂರ್ಣ ಪ್ರಯಾಣದ ಖರ್ಚು ಮತ್ತು ಗೌರವ ಸಂಭಾವನೆ ಕೊಡುವುದಾಗಿ ಮೊದಲೇ ತಿಳಿಸಿದ್ದೆ) ಮುಗ್ಧ ಹಳ್ಳಿಗನಂತೆ, "ಅದೆಲ್ಲ ರೂಢಿಯಿಲ್ರೀ... ಇಷ್ಟು ನಡೆಯೂದು ನಮಗೆ ಕಷ್ಟ ಅಲ್ರಿ..." ಎಂದು ಮುಖ ಕೈಕಾಲು ತೊಳೆದು, "ನೀವು ಕೂರ್ರಿ.. ನಾವು ತಂದು ಕೊಡುವೆವು" ಎಂದು ಹೇಳಿದರೂ ಕೇಳದೆ ಸಂಘಟಕರು ಏರ್ಪಡಿಸಿದ್ದ ಸರಳ ಊಟಕ್ಕೆ ಸರತಿ ಸಾಲಿನಲ್ಲಿ ನಿಂತು ಬಿಟ್ಟರು. (ಆ ಹೊತ್ತಿಗಾಗಲೇ ನಮ್ಮ ಗಲಭೆಕೋರ ಸಮಾಜವಾದಿ ಮಿತ್ರರನೇಕರು ಚರ್ಚೆಯಲ್ಲಿ ಭಾಗವಹಿಸಿದ್ದರಿಂದಾಗಿ ಆಯಾಸಗೊಂಡು, ಪುಷ್ಕಳ ಊಟ ಹುಡುಕಿಕೊಂಡು ತಮ್ಮ ಸ್ಥಳೀಯ ಗೆಳೆಯರ ಮನೆಗಳೆಡೆಗೆ ಧಾವಿಸಿದ್ದರು.) ನನಗೆ ತಕ್ಷಣ ಅಬ್ಬಿಗೇರಿ ಅವರ ಆ ಲೇಖನ ನೆನಪಿಗೆ ಬಂತು.

ಇಪ್ಪತ್ತು ವರ್ಷಗಳ ಹಿಂದೆ ಅವರ ಲೇಖನವನ್ನೋದಿ ವಿರೂಪಾಕ್ಷಪ್ಪನವರು ಹೇಗಿರುವರೆಂದು ನಾನು ಭಾವಿಸಿದ್ದೆನೋ ಹಾಗೇ ಇದ್ದರು ಅವರು. ಸ್ವಲ್ಪ ಎತ್ತರವೆನ್ನಬಹುದಾದ ನಿಲುವು, ಕೋಲು ಮುಖ, ಎಣ್ಣೆಗೆಂಪು ಬಣ್ಣ, ಕರುಣಾ ಪೂರಿತವೆನ್ನಬಹುದಾದ ದೃಷ್ಟಿಯುಳ್ಳ ಕಣ್ಣುಗಳು, ಉತ್ತರ ಕರ್ನಾಟಕದ ರೈತಾಪಿ ಉಡುಪೆನ್ನಬಹುದಾದ ಕಚ್ಚೆ ಜುಬ್ಬಾ. ನಾನೆಣಿಸಿದುದಕ್ಕಿಂತ ಸ್ವಲ್ಪ ಹೆಚ್ಚೇ ವಯಸ್ಸಾದಂತೆ ನನಗೆ ಆಗ ಕಂಡಿದ್ದಲ್ಲಿ, ಅದಕ್ಕೆ ಕಾರಣ; ಅಂದಿನ ಆ ದಣಿವಿಗಿಂತ, ಒಟ್ಟಾರೆ ಬದುಕಿನ ದಣಿವು ಅವರ ಮುಖವನ್ನು ಆವರಿಸಿದ್ದುದೇ ಕಾರಣವಿರಬಹುದು ಎಂದು ಅವರ ಬಗ್ಗೆ ಈಗ ಹೆಚ್ಚು ತಿಳಿದಿರುವ ನನಗೆ ಅನ್ನಿಸುತ್ತಿದೆ. ಅಬ್ಬಿಗೇರಿಯವರ ಓರಿಗೆಯ ಸಮಾಜವಾದಿಗಳಿಗೆ ಬದುಕಿನ ಕಷ್ಟದ ದಿನಗಳೇ ಹೆಚ್ಚು. ಅದರಿಂದ ಅವರು ಪಾರಾದಂತಿರಲಿಲ್ಲ. ಸುಖದ ದಿನಗಳನ್ನು ಕಂಡ ಸಮಾಜವಾದಿಗಳಾರೂ ಅವರ ನೆರವಿಗೆ ಬಂದಂತಿರಲಿಲ್ಲ. ಬಹುಶಃ ಎಷ್ಟೋ ವರ್ಷಗಳ ನಂತರ ಅವರು ಸಮಾಜವಾದಿಗಳ ಸಭೆಯೊಂದಕ್ಕೆ ಬಂದಂತಿತ್ತು. ಸ್ವಲ್ಪ ಕಾಲ ಅವರು ಕಾಂಗ್ರೆಸ್ ರಾಜಕಾರಣದಲ್ಲೂ ಇದ್ದು ವಿಷಣ್ಣಗೊಂಡಿದ್ದರು ಎಂದು ಕೇಳಿದ್ದೆ. ವಿಷಾದ ಯೋಗ ಅವರನ್ನು ಆವರಿಸಿದಂತಿತ್ತು. ಹಾಗಾಗಿ ಏಕೋ ಏನೋ ಪೂರ್ಣ ಅನ್ಯ ಮನಸ್ಕರಾದಂತಿದ್ದ ಅವರನ್ನು ಕಂಡು ನೀಲಗಂಗಯ್ಯ ಅವರು, 'ನಮ್ಮ ಅಬ್ಬಿಗೇರಿ ಒಳ್ಳೆ ವಾಗ್ಮಿ... ಈ ತಲೆಮಾರಿನ ಜನ ಅವರ ಮಾತನ್ನು ಕೇಳಲಿ. ಮೊದಲು ಅವರೇ ಮಾತಾಡಲಿ' ಎಂದು ಹುರಿದುಂಬಿಸಿದರು.

ವಿರೂಪಾಕ್ಷಪ್ಪನವರೇನೋ ಮಾತಾಡಿದರು. ಹಳೆಯ ನೆನಪುಗಳನ್ನು ಕೆದಕಿಕೊಳ್ಳುತ್ತಾ, ಉತ್ಸಾಹವನ್ನು ಆವಾಹಿಸಿಕೊಳ್ಳಲು ಹೆಣಗುತ್ತಾ ಮಾತನಾಡಲು ಪ್ರಯತ್ನಿಸಿದರಾದರೂ, ದೀರ್ಘ ರಾಜಕೀಯ ಆಯಾಸ ಅವರನ್ನು ಬಾಧಿಸುತ್ತಿದ್ದಂತಿತ್ತು. ಸಮಾಜವಾದವನ್ನು ಪ್ರಾಣ ಪದಕ ಮಾಡಿಕೊಂಡಿದ್ದ ಯಾರಿಗಾದರೂ ಆಯಾಸವಾಗಬಹುದಾದ ಸಂದರ್ಭವದು. ಸಮಾಜವಾದವು ಅರ್ಧ ಸಮಾಜವಾದಿಗಳ ರಾಜಕೀಯ ವರ್ತನೆಯಿಂದ ಇನ್ನರ್ಧ ಇತರರ ಅಪನಿರೂಪಣೆಗಳಿಂದ ಒಂದು ವಿಫಲ. ಮತ್ತು ಕೆಲಮಟ್ಟಿಗೆ ಹಾಸ್ಯಾಸ್ಪದ

ವಿದ್ಯಮಾನವೆನ್ನಿಸಿಕೊಳ್ಳುತ್ತಿದ್ದ ಜಾಗತೀಕರಣದ ಏರು ದಿನಗಳವು. ಅವರು ಸಮಾಜವಾದವನ್ನು ಹೊಸ ಹುಡುಗರಿಗೆ ಯಾವ ಪರಿಭಾಷೆಯಲ್ಲಿ ಹೇಳುವುದು, ತಮ್ಮ ಭಾಷೆಯಲ್ಲಿ ಹೇಳಿದರೆ ಅದು ಇನ್ನಷ್ಟು ಹಾಸ್ಯಾಸ್ಪದವಾಗುವುದೋ ಹೇಗೆ ಎಂಬ ಸಂದಿಗ್ಧದಲ್ಲಿದ್ದಂತಿತ್ತು. ತಮ್ಮ ಭಾಷಣದ ನಂತರ ಅವರು ನನ್ನೊಂದಿಗೆ ವೈಯುಕ್ತಿಕವಾಗಿ ಮಾತನಾಡುತ್ತಾ, ನನ್ನ ಪ್ರಯತ್ನವನ್ನು ಮೆಚ್ಚಿದರಾದರೂ, ಆ ಶಿಬಿರವನ್ನು ಉದ್ಘಾಟಿಸಿದ್ದ ದೇವನೂರ ಮಹಾದೇವ ಹೇಳಿದ್ದ ಮಾತುಗಳನ್ನೇ ಅವರೂ ಹೇಳಿದಾಗ ನನಗೆ ಆಶ್ಚರ್ಯವಾಯಿತು. ಏಕೆಂದರೆ ಶಿಬಿರದ ಉದ್ಘಾಟನೆಯ ದಿನ ಅವರು ಇರಲಿಲ್ಲ. ಅವರು ಮಹಾದೇವ ಅವರು ಆಡಿದ್ದ ಮಾತುಗಳನ್ನೇ ಪುನರುಚ್ಛರಿಸಿದ್ದು ಹೀಗೆ: "ಈ ದಿನಗಳಲ್ಲಿ ಸಮಾಜವಾದಿಗಳನ್ನು ಒಂದುಗೂಡಿಸುವುದು ಕಷ್ಟ. ಅಂದ ಮಾತ್ರಕ್ಕೆ ಈ ಒಂದುಗೂಡಿಸುವ ಕೆಲಸವನ್ನು ಮಾಡಬಾರದೆಂದೇನಲ್ಲ. ನಾಗಭೂಷಣ ಕರೆದಿದ್ದಾರೆಂದು ಬಂದಿದ್ದೇನಷ್ಟೆ." ನನ್ನ ಕಣ್ಣಲ್ಲಿ ನೀರಾಡಿತು. ಅವರ ಕಣ್ಣುಗಳಲ್ಲೂ...

ಅಂದಿನ ಆ ಸಂದರ್ಭದ ನನ್ನ ಒಂದೇ ವಿಷಾದವೆಂದರೆ ಈ ಇಬ್ಬರೂ–ಅಬ್ಬಿಗೇರಿ ಮತ್ತು ಮಹಾದೇವ–ಕೊನೆಯ ದಿನ ಕಿಷನ್ ಪಟ್ನಾಯಕರ ಮಾತುಗಳನ್ನು ಕೇಳಲು ಇರಲಿಲ್ಲವಲ್ಲ ಎಂಬುದು. ಕಿಷನ್ ಅಂದು ನಾನು ಗೋಷ್ಠಿಯ ಪೀಠಿಕೆಯಾಗಿ ಬೇಕೆಂದೇ–ವಿಚಾರ ಪ್ರಚೋದನೆಗೆಂದೇ–ಆಡಿದ "ಸಮಾಜವಾದ ಎಂದೂ ಆಚರಣೆಗೆ ಸಾಧ್ಯವಾಗದ ಒಂದು ರೊಮ್ಯಾಂಟಿಕ್ ಕಲ್ಪನೆ ಮಾತ್ರವೇನೋ!" ಎಂಬ ಮಾತನ್ನೇ ನೆಪವಾಗಿರಿಸಿಕೊಂಡು ನಾನು ಅವರಿಂದ ಆವರೆಗೆ ಕೇಳಿರದಂತಹ ಅದ್ಭುತ ಭಾಷಣ ಮಾಡಿದರು. ಅಂದು ನನ್ನ ಕಣ್ಣಿಗೆ ಅವರು ಬುದ್ಧ ಮಹಾಗುರುವಿನಂತೆ ಕಂಗೊಳಿಸುತ್ತಾ ಆಡಿದ್ದು ಈ ಮಾತುಗಳನ್ನು: "ರೊಮ್ಯಾಂಟಿಕ್ ಕಲ್ಪನೆಗಳೇ ಪ್ರಪಂಚದ ಇತಿಹಾಸವನ್ನು ನಿರ್ಮಿಸಿರುವುದು ಮತ್ತು ಮನುಷ್ಯರ ಬದುಕನ್ನು ಬದಲಿಸಿರುವುದು. ಆಧುನಿಕ ಕಾಲದ ಮಹಾ ರೊಮ್ಯಾಂಟಿಕ್ ಕಲ್ಪನೆಯಾದ ಸಮಾಜವಾದದ ಕಾಲ ಈಗ ಬಹಳ ಜನ ಹೇಳುತ್ತಿರುವಂತೆ ಮತ್ತು ಬಹಳ ಜನ ನಂಬುತ್ತಿರುವಂತೆ ನಿಜವಾಗಿ ಮುಗಿದಿಲ್ಲ; ಅದು ಅರ್ಧ ದಾರಿ ಮಾತ್ರ ಕ್ರಮಿಸಿ ವಿಶ್ರಮಿಸುತ್ತಿದೆ;ಇದು ಅದಕ್ಕೆ ಧ್ಯಾನದ, ಆತ್ಮಾವಲೋಕನದ ಕಾಲ;ತನ್ನ ಅಧ್ಯಾತ್ಮಿಕತೆಯನ್ನು ಪುನಾರವಿಷ್ಕರಿಸಿಕೊಳ್ಳುವ ಕಾಲ; ತನ್ನ ಆಧುನಿಕ ಬೌದ್ಧಿಕ ಪರಿಕರಗಳ ಈವರೆಗಿನ ಕಾರ್ಯಸಾಧ್ಯತೆ–ಸಾಮರ್ಥ್ಯಗಳನ್ನು ಪುರ್ನಪರಿಶೀಲಿಸಿಕೊಳ್ಳುವ ಕಾಲ. ಬುದ್ಧ, ಪರಮಹಂಸ, ಮದರ್ ಥೆರೇಸಾರಿಂದ ಪಾಠ ಕಲಿಯುವ ಕಾಲ; ತನ್ನ ಸೈದ್ಧಾಂತಿಕ ಒಡಲೊಳಕ್ಕೆ ಬುದ್ಧ ಹೇಳಿದ 'ಕರುಣಾ'ವನ್ನು ಒಂದು ಕಾರ್ಯಕ್ರಮವಾಗಿ ಅಳವಡಿಸಿಕೊಳ್ಳಬೇಕಾದ ಕಾಲ...' ಲೋಹಿಯಾ ಪ್ರತಿಪಾದಿಸಿದ ಸಮಾಜವಾದ ಈಚಿನ ವರ್ಷಗಳಲ್ಲಿ ತನ್ನ ಗದ್ದಲಕೋರತನದಿಂದಾಗಿ ಹಿನ್ನೆಲೆಗೆ ಸರಿಸಿಕೊಂಡಿದ್ದುಬಿಟ್ಟಿದ್ದ ಆಯಾಮವೊಂದನ್ನು ಕಿಷನ್ ಅಂದು ಮುನ್ನೆಲೆಗೆ ತಂದಿದ್ದರು...


ಅಬ್ಬಿಗೇರಿಯವರು ಈ ಭಾಷಣ ಕೇಳಲಿಲ್ಲ. ಕೇಳಬೇಕಿತ್ತು. ಅವರ ಆಳದ ಬೇಸರ ಸ್ವಲ್ಪವಾದರೂ ನೀಗುತ್ತಿತ್ತು;ಅವರ ಬದುಕಿನಲ್ಲಿ ಸಮಾಜವಾದ ಹೊಸ ರೂಪ ತಾಳಿ,

ಜನರ ಮಧ್ಯೆ ಅವರಿಂದ ಇನ್ನಷ್ಟು ಮೌಲಿಕ ಕೆಲಸ ಮಾಡಿಸುತ್ತಿತ್ತು;ಇರುವಷ್ಟು ದಿನ ಅವರ ಬದುಕನ್ನು ಇನ್ನಷ್ಟು ಸಹ್ಯ ಮಾಡುತ್ತಿತ್ತು ಎಂದು ಈಗ ನನಗನ್ನಿಸುತ್ತಿದೆ... ಅದೇನೇ ಇರಲಿ, ಬಂದ ಆ ದಿನದ ಸಂಜೆಯೇ ಅವರು ಏನೋ ಅವಸರದಲ್ಲಿದ್ದಂತೆ ಹೊರಟು ನಿಂತರು. ಅವರಿಗೆ ಪ್ರಯಾಣ ಭತ್ಯೆ ಮತ್ತು ಗೌರವ ಧನಗಳನ್ನು ಕೊಡಿಸಿ, ಯಾರದೋ ವಾಹನ ವ್ಯವಸ್ಥೆ ಮಾಡಿಸಿ ಬಸ್ ನಿಲ್ದಾಣಕ್ಕೆ ಕಳಿಸಿಕೊಟ್ಟೆ.


ಅವರನ್ನು ಮತ್ತೆ ನೋಡಲಿಲ್ಲ. ಅವರಂತಹವರನ್ನೂ...

–ಡಿ.ಎಸ್.ನಾಗಭೂಷಣ

(ಸೆಪ್ಟಂಬರ್, 2011)



ಧೀಮಂತ ಚಿಂತಕ ಎಸ್. ವೆಂಕಟರಾಮ್



ಕರ್ನಾಟಕದ ಸಮಾಜವಾದಿ ಪಕ್ಷದ ಗೌಡ-ಪಟೇಲ-ಶಾನುಭೋಗ ಎಂದೇ ಪ್ರಸಿದ್ಧವಾಗಿದ್ದ ತ್ರಿವಳಿಯಲ್ಲಿ ಕೊನೆಯವರು ಎಸ್ ವೆಂಕಟರಾಮ್. ಕಾರಣ, ಪಕ್ಷದ ಲೆಕ್ಕ ಪತ್ರಗಳ ಉಸ್ತುವಾರಿ ಅವರದು. ಸಮಾಜವಾದಿ ಚಳುವಳಿಯ ಬೌದ್ಧಿಕ ನಾಯಕರೂ ಆಗಿದ್ದ ವೆಂಕಟರಾಂ ಇಂದು ಬದುಕಿದ್ದರೆ ಈ ತಿಂಗಳು ತಮ್ಮ 89ನೇ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳಬೇಕಿತ್ತು. ಆದರೆ ಹುಟ್ಟು ಹಬ್ಬಗಳ ಆಚರಣೆಯ ಸಂಸ್ಕೃತಿಗೆ ಸೇರದ ವೆಂಕಟರಾಮ್ ರಾಜ್ಯದಲ್ಲಿ ಕಾರ್ಮಿಕ ಹೋರಾಟಗಳಿಗೆ ಒಂದು ಬೌದ್ಧಿಕ ಘನತೆ, ಸಾಂಸ್ಕೃತಿಕ ಬೆಡಗನ್ನು ಒದಗಿಸಿದ ಓರ್ವ ಅಪೂರ್ವ ಕಾರ್ಮಿಕ ನಾಯಕ. ಗೋಪಾಲಗೌಡರ ನಂತರ ಪಕ್ಷದ ತಾತ್ವಿಕ ಅಡಿಪಾಯವನ್ನು ತಮ್ಮ ಚರ್ಚೆ ಮತ್ತು ಬರಹಗಳ ಮೂಲಕ ಸಂರಕ್ಷಿಸಿಕೊಂಡು ಬರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಇವರು ಕರ್ನಾಟಕದ ಹಲವು ಲೇಖಕ, ಚಿಂತಕ-ಬುದ್ಧಿಜೀವಿಗಳ ಒಡನಾಡಿಯೂ ಆಗಿದ್ದರು. ಯು. ಆರ್ ಅನಂತಮೂರ್ತಿಯವರು ವೆಂಕಟರಾಂ ಅವರ ಬರಹಗಳ ಸಂಗ್ರಹ 'ಪರಿಶ್ರಮ'ಕ್ಕೆ ಬರೆದ ಮುನ್ನುಡಿಯಲ್ಲಿ ತಮ್ಮ ಈ ಆಪ್ತ ಗೆಳೆಯನ ಚಿತ್ರವನ್ನು ಕಟ್ಟಿಕೊಟ್ಟಿರುವುದು ಹೀಗೆ:

–ಡಿಎಸ್ಸೆನ್

ನಮ್ಮ ವೆಂಕಟರಾಮ್ ರಾಜಕಾರಣಿಗಳಿಗಿಂತ ಹೆಚ್ಚು ಕನ್ನಡ ಲೇಖಕರ ಲೋಕಕ್ಕೆ ಹತ್ತಿರದ ಪ್ರಜ್ಞಾವಂತ. ನನ್ನ ಪಾಲಿಗೆ ನನ್ನನ್ನು ಬೆಳೆಸಿದ ಏಕವಚನದ ಸ್ನೇಹಿತ ಮತ್ತು ಗುರು. ಮರೆಯಲಾರದ ಕೆಲವು ಘಟನೆಗಳನ್ನು ಮೊದಲು ನೆನೆದುಕೊಳ್ಳುವೆ:

66ನೆಯ ಇಸವಿಯ ಕೊನೆ. ಕನ್ನಡದ ಪ್ರೀತಿ ಕ್ರಿಯಾಶೀಲವಾಗಿದ್ದ ಕಾಲ ಅದು. ಲೋಹಿಯಾರ ಚಿಂತನೆಗೆ ಬದ್ಧರಾದ ನಾವು ಮೈಸೂರಿನಲ್ಲಿ ಒಂದು ಚಳವಳಿ ಮಾಡಿದೆವು. ಅದರ ಘೋಷಣೆ 'ಇಂಗ್ಲಿಷ್ ಇಳಿಸಿ; ಕನ್ನಡ ಬೆಳೆಸಿ'. ನನಗೆ ಸಂಜೆ ಪುರಭವನದಲ್ಲಿ ನಡೆದೊಂದು ಘಟನೆ ನಿಚ್ಚಳವಾಗಿ ನೆನಪಿದೆ. ವೇದಿಕೆಯ ಮೇಲೆ ಹಿರಿಯರಾದ ಪು.ತಿ.ನ. ಮತ್ತು ತಿ.ತಾ.ಶರ್ಮರು ಕೂತಿದ್ದರು. ಪುಂಡರ ಗುಂಪೊಂದು ಸಭೆಯನ್ನು ಒಡೆಯಲು ಸಿದ್ಧವಾಗಿ ಬಂದಿತ್ತು. ಪು.ತಿ.ನ ಮಾತನಾಡಲು ಎದ್ದರು. ಅವರ ಧ್ವನಿ ಕ್ಷೀಣ, ಮೃದು. ತಮಗೇ ಮಾತನಾಡಿಕೊಳ್ಳುವಂತೆ ಸಭೆಗೆ ಅವರು ಮಾತನಾಡುವುದು. ಪುಂಡರು ಬಂದು ಅವರೆದುರಿಗೆ ನಿಂತು ಕೂಗಾಡಿ ಕಂಗಾಲಾಗುವಂತೆ ಮಾಡಿದರು. ಆ ಸಭೆಯ ಮೂಲೆಯಲ್ಲಿದ್ದ ನನಗೆ ತಡೆದುಕೊಳ್ಳಲು ಆಗಲಿಲ್ಲ. ಪುಂಡನೊಬ್ಬ ಪು.ತಿ.ನ.ರಿಂದ ಮೈಕನ್ನು ಕಿತ್ತುಕೊಂಡು ಯದ್ವಾ ತದ್ವಾ ತಾನೇ ಮಾತಾಡಲು ಪ್ರಾರಂಭಿಸಿದ್ದ.

ನಾನು ಅವನ ಕೈಯಿಂದ ಮೈಕನ್ನು ಕಿತ್ತುಕೊಂಡು ನನಗೆ ಸಾಧ್ಯವಿದ್ದ ರೋಷದಲ್ಲಿ ಮಾತನಾಡಿ ಇಡೀ ಪುಂಡರ ಗುಂಪು ಗಪ್ ಚಿಪ್ ಎಂದು ಕೂರುವಂತೆ ಮಾಡಿದೆ. ಪು.ತಿ.ನ.ರಿಗೆ ನನ್ನ ಮೇಲಿನ ಅಭಿಮಾನ ಬೆಳೆದದ್ದು ಈ ಘಳಿಗೆಯಿಂದ.

ಆದರೆ ಎಲ್ಲ ಕಾಲದಲ್ಲೂ ಸದುದ್ದೇಶದ ಚಳವಳಿಗಳನ್ನೂ ಬಳಸುವ ಪರವಿರೋಧ ಬಣಗಳು ಇರುತ್ತವೆ. ವೆಂಕಟರಾಮ್ ಪ್ರಕಾರ ನಾವು ಸದ್ಯದ ಹಿತಕ್ಕೆ ಬದ್ಧವಾದ ಶಕ್ತಿಗಳನ್ನೂ ಬಳಸಬಲ್ಲವರು ಆಗಿರಬೇಕು. ಕಾರ್ಮಿಕ ಚಳವಳಿಗಳ ನೇತಾರರಾದ ವೆಂಕಟರಾಮ್‌ರಂಥವರು ಈ ವಿಷಯದಲ್ಲಿ ನೈತಿಕವಾಗಿ ಯೋಚಿಸುತ್ತಿರಲಿಲ್ಲ. ಅದೊಂದು ಜಗಳ ನಮ್ಮ ನಡುವೆ ಇತ್ತು. ಕಾರ್ಮಿಕ ಚಳವಳಿ ತನ್ನ ತಾತ್ವಿಕ ನೆಲಗಟ್ಟನ್ನು ಕಳೆದುಕೊಂಡು ಕೇವಲ ಸಂಬಳ ಸಾರಿಗೆಯ ಎಕನಾಮಿಸಂ ಆಗಿದೆ ಎಂಬ ಅರಿವೂ ವೆಂಕಟರಾಮ್‌ಗೆ ಇತ್ತು ಎಂದು ಹೇಳದಿದ್ದರೆ ತಪ್ಪಾಗುತ್ತದೆ.)

ಈ ಪುಂಡರ ಗುಂಪು ಸುಮ್ಮನಿರಲಿಲ್ಲ. ನನ್ನನ್ನು ಮಾನಸಗಂಗೋತ್ರಿಯ ಒಳಗೆ ನಿಲ್ಲಿಸಿ ಹೊಡೆಯುತ್ತೇವೆಂದು ಬೆದರಿಕೆ ಹಾಕಿದರು.

ಇದು ನನ್ನ ಗೆಳೆಯ ಬೆಂಗಳೂರಿನಲ್ಲಿದ್ದ ವೆಂಕಟರಾಮ್‌ಗೆ ಗೊತ್ತಾಯಿತು. ಸೀದಾ ಮೈಸೂರಿನ ಸರಸ್ವತಿಪುರಂನಲ್ಲಿದ್ದ ನಮ್ಮ ಮನೆಗೆ ಬಂದ. ಅವನು ಯಾವಾಗಲೂ ಕೈಯಲ್ಲೊಂದು ಪುಸ್ತಕವನ್ನು ಇಟ್ಟುಕೊಂಡು, ದಪ್ಪ ಕನ್ನಡಕ ತೊಟ್ಟು, ಕೆದರಿದ ಕೂದಲಕೆಳಗೆ ಹಸನ್ಮುಖಿಯಾಗಿ ಏಕಾಗ್ರನಾಗಿ ನಡೆದಾಡುವುದು. ಟ್ಯಾಕ್ಸಿ ಹತ್ತಿದರೆ ಡ್ರೈವರ್ ಪಕ್ಕದಲ್ಲೇ ಕೂರುವುದು. ನನಗಿನ್ನೂ ನೆನಪಿದೆ. ಅದು ಟ್ರಾಟ್ಸ್ಕಿ ಬಗ್ಗೆ ಆ ಕಾಲದಲ್ಲಿ ಪ್ರಕಟವಾಗಿದ್ದ ಹೊಸ ಪುಸ್ತಕ. ನನಗೆ ವೆಂಕಟರಾಮ್ ಒಂದು ಕಿವಿ ಮಾತು ಹೇಳಿದರು. ಅವರ ಸ್ವಧರ್ಮಕ್ಕೆ ಹತ್ತಿರವಾದ ಮಾತದು. 'ಈ ಬಗೆಯ ಪುಂಡರು ಸಾಮಾನ್ಯವಾಗಿ ನಿರುದ್ಯೋಗಿಗಳು lumpen ಜನ. ಇವರ ಸದ್ದಡಗಿಸಲು ನಮಗಿರುವ ಮಾರ್ಗ ಒಂದೇ. ಈ ಅಸಂಘಟಿತರಾದ ಪುಂಡರ ಕೈ ಮೇಲಾಗದಿರಲು ನಾವು ಸಂಘಟಿತರಾದ ಕಾರ್ಮಿಕರ ಜೊತೆ ಕೈ ಜೋಡಿಸಿ ಕೆಲಸ ಮಾಡಬೇಕು. ಮೈಸೂರಲ್ಲಿರುವ ಜಾವಾ ಮೋಟರ್ ಸೈಕಲ್ ಕಾರ್ಮಿಕರ ಸಂಘ ನನ್ನ ಜೊತೆಗಿದೆ. ಅವರ ಒಂದು ಸಭೆಯನ್ನು ಈ ಸಂಜೆ ಕರೆಯುತ್ತೇನೆ. ಅವರಿಗೆ ನೀನು ನಮ್ಮ ದೇಶಕ್ಕೆ ಅಗತ್ಯವಾದ ಭಾಷಾ ನೀತಿಯ ಬಗೆಗೆ ಮಾತನಾಡಬೇಕು. ನಿನ್ನ ಜೊತೆಯವರು ಅವರು ಎಂದು ತಿಳಿದು ಮಾತನಾಡಬೇಕು'.

ಸಂಜೆ ನಾನು ಜಾವಾ ಕಾರ್ಮಿಕರನ್ನು ಉದ್ದೇಶಿಸಿ ನಮ್ಮ ಭಾಷಾ ನೀತಿ ಯಾವುದಿರಬೇಕೆಂಬುದನ್ನು ಕುರಿತು ಮಾತನಾಡಿದೆ–ಅವರನ್ನು ಒಳಪಡಿಸಬಲ್ಲ ರೀತಿಯಲ್ಲಿ. ವೆಂಕಟರಾಮ್ ಮತ್ತು ಗೋಪಾಲಗೌಡರಿಂದ ನಾನು ಕಲಿತದ್ದು ಅದು. ಆ ಸಂಘದ ಕಾರ್ಯದರ್ಶಿಯೋ ಅಧ್ಯಕ್ಷನೋ ಆಗಿದ್ದ ಒಬ್ಬನು ಮೊದಲೇ ವೆಂಕಟರಾಮ್ ಅವರಿಗೆ ಹೇಳಿದಂತೆ ಒಂದು ನಿರ್ಣಯವನ್ನು ಸಭೆಯಲ್ಲಿ ಮಂಡಿಸಿದ. ಅದರ ಪ್ರಕಾರ ಮಾರನೆಯ ದಿನ ಜಾವಾ ಕಾರ್ಮಿಕರು ಸಾಲಾಗಿ ನಮ್ಮ ಜೊತೆ ಮಾನಸ ಗಂಗೋತ್ರಿಯ ವಿದ್ವದ್ ಜನರ ಲೋಕದೊಳಗೆ ಎಲ್ಲರಿಗೂ ಅಶ್ಚರ್ಯವಾಗುವಂತೆ ಸ್ಲೋಗನ್‌ಗಳನ್ನು ಕೂಗಿಕೊಂಡು ಮಾರ್ಚ್ ಮಾಡಬೇಕು. ಕಾರ್ಮಿಕರು ಎಲ್ಲರಿಗೂ ಮನದಟ್ಟಾಗುವಂತೆ ಹೇಳಿದ ಮಾತು ಹೀಗಿತ್ತು: 'ಕನ್ನಡ

ಲೇಖಕರು ಮತ್ತು ನಾವು ಬಾಂಧವರು. ನಾವಿಬ್ಬರೂ ಕಾರ್ಮಿಕರೇ. ಲೇಖಕರನ್ನು ನೀವೇನಾದರೂ ಹಿಂಸೆಗೆ ಒಳಮಾಡಿದರೆ ನಿಮ್ಮನ್ನು ನಾವು ಸುಮ್ಮನೆ ಬಿಡುವುದಿಲ್ಲ'. ಇದು ಅದ್ಭುತವಾಗಿ ನಮ್ಮ ಚಳವಳಿಗೆ ಸಹಾಯಕವಾಯಿತು. ಇದಾದ ನಂತರ ನನ್ನನ್ನು ಸಾಹಿತ್ಯದ ವಿದ್ಯಾರ್ಥಿಯಾಗಿ ಬೆಳೆಸಿದ. ನಾನು ಗೌರವಿಸುತ್ತಿದ್ದ ಪ್ರೊ. ಸಿ.ಡಿ. ನರಸಿಂಹಯ್ಯನವರೇ ನನ್ನನ್ನು ಇಂಗ್ಲಿಷ್ ಅಧ್ಯಯನಕ್ಕೆ ವಿರೋಧಿಯೆಂದು ಗಣಿಸಿ ಸುಮಾರು ನಾಲ್ಕು ವರ್ಷಗಳ ಕಾಲ ಮಾನಸ ಗಂಗೋತ್ರಿಯ ಇಲಾಖೆಗೆ ಬರದಂತೆ ನೋಡಿಕೊಂಡರು.

ವೆಂಕಟರಾಮ್ ನನಗೆ ಇಂಥಾ ಸಂದರ್ಭಗಳನ್ನು ಎದುರಿಸಲು ಗುರುವಿನ ಹಾಗಿದ್ದರು. ಟ್ರಾಟ್ಸ್ಕಿ ಸಿದ್ಧಾಂತದಿಂದಲೂ, ಲೋಹಿಯಾ ಸಿದ್ಧಾಂತದಿಂದಲೂ ಪ್ರೇರಿತರಾದ ಅವರು ನಮ್ಮ ನಾಡಿನ ಧೀಮಂತರು. ಲೇಖಕರು ತಮ್ಮ ಪಾಡಿಗೆ ತಾವಿರದೆ ರೈತರ ಜೊತೆಯೂ ಕಾರ್ಮಿಕರ ಜೊತೆಯೂ ಬೆರೆಯಬೇಕೆಂದು ತಿಳಿದವರಾಗಿದ್ದರು. ಹೀಗೆ ಮಾಡುವುದರಲ್ಲಿ ಇಬ್ಬರಿಗೂ ಲಾಭವಿದೆ ಮಾತ್ರವಲ್ಲ; ಧೀಮಂತನಾದವನು ಸಮುದಾಯದ ಧೀಮಂತನಾಗುತ್ತಾನೆ, ಪುಸ್ತಕದ ವಾಸನೆಯಿಂದ ಮುಕ್ತನಾಗುತ್ತಾನೆ ಎಂಬುದು ಅವರ ದೋರಣೆಯಾಗಿತ್ತು.

ನನಗಿನ್ನೂ ಒಂದು ಚರ್ಚೆ ನೆನಪಿದೆ. (ಲೋಹಿಯಾ ಮುಖೇನ ನಾವು ಇದನ್ನು ಚರ್ಚಿಸಿದ್ದು, ಕಾಫಿ ಹೋಟೆಲ್ ಒಂದರಲ್ಲಿ ಕೂತು. ಕೈಯಲ್ಲಿ ಯಾರ ಬಳಿಯಾದರೂ ಸ್ವಂತದ ರೊಕ್ಕವಿದ್ದರೆ ಯಾವುದೋ ಮಹಡಿ ಮೇಲಿನ ಬಾರ್‌ನಲ್ಲಿ ಕೂತು. ಕೋಸಂಬರಿ, ಚಕ್ಕುಲಿ, ಪುಳಿಯೊಗರೆ, ಚಿತ್ರಾನ್ನ ಇತ್ಯಾದಿ ಮನೆ ತಿಂಡಿಯ ಜೊತೆ ಜೊತೆ ನಾವು ಬಿಯರ್ ಕುಡಿದು ಮಾತಾಡುವುದಿತ್ತು. ರಾಗಿ ದೋಸೆಯೆಂದರೆ ಅವನಿಗೆ ತುಂಬಾ ಇಷ್ಟ. ಅವನ ನಿಜ ಸಹಧರ್ಮಿಣಿಯಾದ ಸರೋಜಮ್ಮ ಬಿಸಿಬಿಸಿ ದೋಸೆಯನ್ನು ಬಡಿಸಿ ನಮ್ಮ ಹೊಟ್ಟೆ ತುಂಬಿಸುತ್ತ ಇದ್ದರು. ಬಿಯರ್ ಅಪರೂಪ. ಯಾಕಂದರೆ ಸಿಕ್ಕ ರೊಕ್ಕ ಪಕ್ಷದ ಕಛೇರಿ ಸಾಲ ತೀರಿಸಲು ಸಾಕಾಗುತ್ತಿರಲಿಲ್ಲ. ಆದರೆ ವೆಂಕಟರಾಮ್‌ಗೆ ನನ್ನ ತರಹ ಸಂಬಳ ಬರುವ ಗೆಳೆಯರೂ ಇದ್ದರಲ್ಲವೆ?) ಅವನು ಟ್ರಾಟ್ಸ್ಕಿಯನ್ನು ಮೆಚ್ಚಿದಂತೆಯೇ ಲೆನಿನ್‌ನನ್ನೂ ಮೆಚ್ಚುತ್ತಿದ್ದ. ಆದ್ದರಿಂದ ಲೆನಿನ್ನನ ವ್ಯಾಖ್ಯಾನವನ್ನೂ ಈ ರಷ್ಯನ್ ಕ್ರಾಂತಿಗೆ ಅವನು ಬೆಸೆಯುತ್ತಿದ್ದ. ಮಾರ್ಕ್ಸ್ ಪ್ರಕಾರ ಬಂಡವಾಳಶಾಹಿ ವ್ಯವಸ್ಥೆ ಅದು ಗರಿಷ್ಠ ಬೆಳೆದಲ್ಲಿ ಮುರಿದುಕೊಳ್ಳುತ್ತದೆಯಾದರೆ, ಟ್ರಾಟ್ಸ್ಕಿ ಪ್ರಕಾರ ಅದು ಕ್ಷೀಣವಾದ ಕೊಂಡಿಯಲ್ಲಿ ಕಳಚಿಕೊಳ್ಳುತ್ತದೆಯಾದರೆ, ಲೆನಿನ್ ಪ್ರಕಾರ ಎಲ್ಲಿ ಕ್ರಾಂತಿಯನ್ನು ಮಾಡಬಲ್ಲ ಕ್ರಾಂತಿಕಾರಕ ಪಕ್ಷದ ನೆಲೆ, ಸಿದ್ಧಾಂತ, ಕಾರ್ಯವಿಧಾನ ಮತ್ತು ವರ್ಚಸ್ಸು ಬಲವಾಗಿರುತ್ತದೋ ಅಲ್ಲಿ ಕ್ರಾಂತಿಯಾಗುತ್ತದೆ. (ಅಂದರೆ ಲೆನಿನ್ ತನ್ನ ಬೆನ್ನನ್ನು ತಾನೇ ತಟ್ಟಿಕೊಂಡಿದ್ದ.) ಇಂಗ್ಲೆಂಡ್‌ನಲ್ಲಾಗಲೀ, ಜರ್ಮನಿಯಲ್ಲಾಗಲೀ ಅದು ಆಗದಿದ್ದರೆ ಕಾರಣ ಆ ದೇಶಗಳಲ್ಲಿ ಕಮ್ಯೂನಿಸ್ಟ್ ಪಕ್ಷ ಸರಿಯಾದ ನಿಟ್ಟಿನಲ್ಲಿ ಬೆಳೆದಿರಲಿಲ್ಲ. ಅಂದರೆ ಎರಡು ಸೂತ್ರಗಳ ಮೇಲೆ ಈ ದೇಶಗಳು ತಮ್ಮ ಪಕ್ಷಗಳನ್ನು ಕಟ್ಟಿರಲಿಲ್ಲ. ಈ ಸೂತ್ರಗಳು ಇವು:

1.The Party should act as the Vanguard of the proletariat

2. The Party should follow the principles of Democratic centralism

ಮೇಲಿನ ಎರಡು ಸೂತ್ರಗಳು ಮಹಾ ಮೋಸದವು ಆಗಬಹುದು ಎಂಬುದು ವೆಂಕಟರಾಮ್ ಜೊತೆಗೆ ನನ್ನ ವಾದವಾಗಿತ್ತು. ಕಾರ್ಮಿಕರೇ ಅಧಿಕಾರಕ್ಕೆ ಬರುವುದಿಲ್ಲ. ಆದರೆ ಅವರ ಮುಂಚೂಣಿಯಲ್ಲಿರುವವರು ಅಧಿಕಾರಕ್ಕೆ ಬರುತ್ತಾರೆ ಎನ್ನುವುದಾದರೆ ರಷ್ಯಾದಲ್ಲಿ ಮುಂಚೂಣಿಯಲ್ಲಿ ಇರಲು ಅಗತ್ಯವಾದ ಎಲ್ಲ ಕೃತ್ರಿಮಗಳನ್ನು ತಿಳಿದಿದ್ದ ಸ್ಟಾಲಿನ್ ತಾನೇ ಮುಂಚೂಣಿ ಎಂದುಕೊಂಡ; ತತ್ಪರಿಣಾಮವಾಗಿ ತನ್ನ ಅಧಿಕಾರವನ್ನು ಪ್ರಶ್ನಿಸುವ ಎಲ್ಲ ಜೊತೆಗಾರರನ್ನೂ ಕೊಂದ. ಚೀನಾದಲ್ಲಿ ಆದದ್ದೂ ಇದೇ. ಮುಂಚೂಣಿಯವರು ಈಗ ಅಮೆರಿಕಕ್ಕೆ ಸದೃಶ್ಯವಾದ ಬಂಡವಾಳಶಾಹಿ ವ್ಯವಸ್ಥೆಯನ್ನೇ ಕಟ್ಟುತ್ತಿದ್ದಾರೆ. ಡೆಮೊಕ್ರಟಿಕ್ ಸೆಂಟ್ರಲಿಸಂ ಅಂತೂ ಅದನ್ನು ನಂಬಿದವರು ಬಾಯಿಬಿಟ್ಟು ಮಾತಾಡುವಂತೆ ಮಾಡಿ, ಆಮೇಲೆ ಅವರನ್ನು ಕೊಲ್ಲುವ ಅಥವಾ ಲೇಬರ್ ಕ್ಯಾಂಪುಗಳಲ್ಲಿ ಗುಲಾಮರಂತೆ ದುಡಿಸುವ ಉಪಾಯವಾಗಿತ್ತು. ಅರಳಿದ ಹೂವುಗಳನ್ನೆಲ್ಲ ಕೊಯ್ಯಲೆಂದೇ ಮಾವೋ Let hundred flowers bloom ಎಂದದ್ದು.

ಲೋಹಿಯಾ ಅವರು ಇದಕ್ಕೆ ವಿರುದ್ಧವಾದ ಪ್ರಜಾತಾಂತ್ರಿಕ ದಿಕ್ಕಿನಲ್ಲಿ ರಾಜಕೀಯ ವ್ಯವಸ್ಥೆಯನ್ನು ಕಟ್ಟಲು ಹೋರಾಡಿದರು. ಈಗ ವೆಂಕಟರಾಮ್ ಬದುಕಿದ್ದರೆ ನಾನು ಹೇಳುತ್ತಿದ್ದೆ: 'ಲೋಹಿಯಾ ಮುಂಚೂಣಿಗೆ ತಂದವರು ವೆಂಕಟರಾಮ್ ತರಹದವರಲ್ಲ. ಭ್ರಷ್ಟರಾದ ಲಾಲೂ ಪ್ರಸಾದ್ ಯಾದವ್ ಮತ್ತು ಮುಲಾಯಂ ಸಿಂಗ್ ಯಾದವ್ ತರಹದವರು' ಎಂದು. ಆದರೆ ಇವರು ಪ್ರಾಯಶಃ ಸ್ಟಾಲಿನ್ ಬಗೆಯ ರಾಕ್ಷಸರು ಖಂಡಿತ ಅಲ್ಲ. ಅವರನ್ನ ಟೀಕಿಸುತ್ತಲೇ, ನಮ್ಮ ದುರ್ವ್ಯವಸ್ಥೆಯ ಅನಿವಾರ್ಯ ನಾಯಕರು ಇವರು ಎಂದು ನಾನು ತಿಳಿಯುತ್ತೇನೆ. ಇಲ್ಲೂ ಕೂಡ ಬಿಜೆಪಿಯ ನಮ್ಮ ಕರ್ನಾಟಕದ ಬಳ್ಳಾರಿಯ ರೆಡ್ಡಿ ನಾಯಕರಿಗಿಂತ ನಮ್ಮ ಲಾಲೂ ಪ್ರಸಾದ್ ಯಾದವ್ ದೊಡ್ಡವನು. ಕೊನೆಯ ಪಕ್ಷ ಅಲ್ಲಿನ ಬಡವರಿಗೆ ಸ್ವಮರ್ಯಾದೆಯನ್ನು ತಂದವನು ಬಾಯಿಬಡುಕನಾದರೂ ಕಾರ್ಯಶೀಲನಾದ ಈ ಲಾಲೂ ಪ್ರಸಾದ್ ಯಾದವ್ ಎಂದು ತಿಳಿಯುತ್ತೇನೆ. ಇವೆಲ್ಲಾ ಗತಿಸಿದ ವೆಂಕಟರಾಮ್ ಜೊತೆಗೆ ಮಾತ್ರ ನಾನು ಮಾಡಬಲ್ಲ ಸಂವಾದಗಳು. ನಾನು ಕೇಳಬಹುದಿತ್ತು 'ವೆಂಕಟರಾಮ್, ಹೀಗೆ ಮಾತನಾಡುವುದು ಸೋಲಿನ ಸಮಾಧಾನವಲ್ಲವೇ? ನಾವು ತಪ್ಪಿಲ್ಲವೇ?'.

ವೆಂಕಟರಾಮ್ ಕರ್ನಾಟಕದ ಸಮಾಜವಾದಿ ಪಕ್ಷದ ಆಧಾರಸ್ತಂಭಗಳಲ್ಲಿ ಒಬ್ಬ. ಬೆಂಗಳೂರಿನ ಆಫೀಸಿನ ಟೆಲಿಫೋನ್ ಖರ್ಚನ್ನು ಕೊಡಲು, ಬಾಡಿಗೆ ಕಟ್ಟಲು ಅವನು ಎಲ್ಲೆಲ್ಲೋ ಓಡಾಡಿ ಹಣವನ್ನು ತಂದು ನಿರ್ವಹಿಸುತ್ತಿದ್ದ. ಆದರೆ ನಮ್ಮ ಸಮಾಜವಾದಿಗಳು ಅನಾರ್ಕಿಸ್ಟರು. ಆಮೇಲಿನ ದಿನಗಳಲ್ಲಿ ತುಂಬಾ ಮುಖ್ಯವಾದ ಚಳವಳಿಯನ್ನು ಸಂಘಟಿಸಿದ ರೈತ ಜನಾಂಗಕ್ಕೆ ಒಂದು ದೊಡ್ಡ ದನಿಯಾದ ನಂಜುಂಡಸ್ವಾಮಿಯಂಥವರೇ ವೆಂಕಟರಾಮ್‌ನನ್ನ ಒಬ್ಬ ಶಾನುಭೋಗ ಎಂದು ನಿಂದಿಸಿದ್ದನ್ನು ಕೇಳಿ ನಾನು ನೊಂದಿದ್ದೇನೆ. (ಇದರಲ್ಲಿ ಜಾತಿ/ವರ್ಗದ ವಾಸನೆಯೂ

ಇತ್ತು.) ಇಲ್ಲೇ ಇನ್ನೊಂದು ಮಾತು ಹೇಳಿಬಿಡಬೇಕು. ಲಂಕೇಶರು ವೆಂಕಟರಾಮ್‌ರ ವಿದ್ವತ್ತನ್ನೂ ಮಾರ್ಮಿಕವಾದ ದೃಷ್ಟಿಕೋನವನ್ನೂ ತುಂಬ ಮೆಚ್ಚಿದವರಾಗಿದ್ದರು. ಅಲ್ಲದೆ ಆ ದಿನಗಳಲ್ಲಿ ಪಕ್ಷವನ್ನು ಕಟ್ಟುತ್ತಿದ್ದ ಶಾಂತವೇರಿ ಗೋಪಾಲಗೌಡರಾಗಲೀ ಜೆ.ಎಚ್.ಪಟೇಲರಾಗಲೀ ವೆಂಕಟರಾಮ್‌ನನ್ನು ಎಂದೂ ಕೈ ಬಿಟ್ಟವರಲ್ಲ.

ವೆಂಕಟರಾಮ್ ಈ ನಿಂದನೆಯನ್ನೂ ವೈಯಕ್ತಿಕವಾಗಿ ಬೆಳೆಸಿದವರಲ್ಲ. ಅವರು ಅರ್ಧ ತಮಾಷೆಯಲ್ಲಿ ಹೇಳಿದ ಒಂದು ಘನವಾದ ಮಾತು ನೆನಪಾಗುತ್ತದೆ. 'ನಮ್ಮ ದುರದೃಷ್ಟವೆಂದರೆ ಇಂಡಿಯಾದಲ್ಲಿ ಒಂದು ದೊಡ್ಡ ಅನಾರ್ಕಿಸ್ಟ್ ಚಳವಳಿಯಾಗಬಹುದಿತ್ತು. ಆದರೆ ನಮ್ಮ ಅನಾರ್ಕಿಸ್ಟರು ತಮ್ಮನ್ನು ಸೋಷಲಿಸ್ಟ್ ಎಂದು ಕರೆದುಕೊಂಡರು. ಹಾಗೆಯೇ ನಮ್ಮಲ್ಲಿ ಒಂದು ಸೋಷಿಯಲ್ ಡೆಮೋಕ್ರಾಟ್ ಪಕ್ಷ ಬೆಳೆಯಬಹುದಿತ್ತು. ಆದರೆ ಅವರು ತಮ್ಮನ್ನು ಕಮ್ಯುನಿಸ್ಟರೆಂದು ಭ್ರಮಿಸಿಕೊಂಡರು.'

ಈಗಿನ ರಾಜಕೀಯದಲ್ಲಿ ಇನ್ನೊಬ್ಬ ವೆಂಕಟರಾಮ್ ಅವರನ್ನು ನಾನು ಕಾಣುತ್ತಿಲ್ಲ. ಈಗ ರಾಜಕೀಯ ಮಾತನಾಡುವ ಈ ಮನುಷ್ಯ ಇನ್ನೊಂದು ಕ್ಷಣದಲ್ಲಿ ದಾಸ್ತೋವ್ಸ್ಕಿ ಮತ್ತು ಭಗವದ್ಗೀತೆಗಳ ನಡುವಿನ ಸಂಬಂಧದ ಬಗ್ಗೆಯೂ ಮಾತನಾಡಬಲ್ಲವನಾಗಿದ್ದ. ವೆಂಕಟರಾಮ್ ಜಾರ್ಜ್ ಫರ್ನಾಂಡಿಸರಿಗೂ ಹತ್ತಿರದವನಾಗಿದ್ದ. ಈಗ ಜಾರ್ಜ್‌ರಲ್ಲೂ ಆಗಿರುವ ಬದಲಾವಣೆಗೆ ವೆಂಕಟರಾಮ್ ಇಷ್ಟಪಡುತ್ತಿದ್ದ ಲೋಹಿಯಾರ ರಾಜಕಾರಣವೂ–ತತ್ವವಲ್ಲ ರಾಜಕಾರಣವೂ–ಹೇಗೆ, ಯಾಕೆ, ಎಷ್ಟು ಕಾರಣವಾಗಿರಬಹುದೆಂದು ವೆಂಕಟರಾಮ್‌ನನ್ನು ನೆನೆಯುತ್ತಾ ನಾನು ಧ್ಯಾನಿಸುತ್ತಿದ್ದೇನೆ.

ವೆಂಕಟರಾಮ್ ಕನ್ನಡದ ಧೀಮಂತ ಚಿಂತಕರಲ್ಲಿ ಒಬ್ಬ ಎಂಬುದನ್ನು ಅವರು ಎಲ್ಲೋ ಬಿಡುವಿನಲ್ಲಿ ಬರೆದ ಈ ಸಂಗ್ರಹದ ಲೇಖನಗಳು ನಮಗೆ ಮನದಟ್ಟು ಮಾಡುತ್ತವೆ. ಈ ಪುಸ್ತಕ ಬರುವುದು ಸಾಧ್ಯವಾದದ್ದು ಶ್ರೀಮತಿ ಸರೋಜಮ್ಮ ವೆಂಕಟರಾಮ್ ನೆನಪಿನಲ್ಲಿ ಅವರ ಮಗ ಮತ್ತು ಸೊಸೆ ತೋರಿಸಿದ ಆಸಕ್ತಿಯಲ್ಲಿ. ಇದನ್ನು ಪ್ರಕಟಿಸುತ್ತ ಇರುವ ಗೆಳೆಯ ರವಿಕುಮಾರರ ಪರಿಶುದ್ಧವಾದ ಪುಸ್ತಕ ಪ್ರೀತಿಯಲ್ಲಿ.

–ಡಾ. ಯು. ಆರ್. ಅನಂತಮೂರ್ತಿ

(ಆಗಸ್ಟ್, 2013)

ಸಮನ್ವಯ ಸಮಾಜವಾದಿ ಖಾದ್ರಿ ಶಾಮಣ್ಣ



ಕರ್ನಾಟಕದಲ್ಲಿ ಚಳವಳಿ ಮತ್ತು ಪತ್ರಿಕೋದ್ಯಮವನ್ನು ಜೊತೆ ಜೊತೆಯಾಗಿ ಹೊಂದಿಸಿಕೊಂಡು ಈ ಎರಡೂ ಕ್ಷೇತ್ರಗಳಿಗೆ ವಿಶಿಷ್ಟ ಕೊಡುಗೆ ನೀಡಿದ ಕೆಲವೇ ಪ್ರತಿಭೆಗಳಲ್ಲಿ ಖಾದ್ರಿ ಶಾಮಣ್ಣ ಎದ್ದು ಕಾಣುವ ವ್ಯಕ್ತಿತ್ವ. ನಾಡಿನಲ್ಲಿ ಸಮಾಜವಾದಿ ಚಳವಳಿ ಹುಟ್ಟು ಹಾಕಿದ ಗೆಳೆಯರ ಗುಂಪಿನ ಗಟ್ಟಿ ಕುಳ ಇವರು.

ಮೇಲುಕೋಟೆಯ ಸಾಂಪ್ರದಾಯಿಕ ಪರಿಸರದಿಂದ ಬಂಡೆದ್ದು ಬಂದ ಖಾದ್ರಿ ಶಾಮಣ್ಣ ಅವರಿಗೆ ಮನೆಯ ಪರಿಸರದಲ್ಲೇ ಸ್ವಾತಂತ್ರ್ಯ ಸಂಗ್ರಾಮದ ಪರಿಚಯ. ಮಾಡಿಸಿದವರು ಅವರ ಚಿಕ್ಕಪ್ಪ.. ಬಾಲ್ಯದಲ್ಲಿ ಮದ್ರಾಸಿನ ಮೆರಿನಾ ಕಡಲ ತೀರದಲ್ಲಿ ರಾಷ್ಟ್ರ ನಾಯಕರ ಭಾಷಣಗಳಿಗೆ ಎಳೆಯ ಶಾಮಣ್ಣ ಅವರನ್ನು ಅವರು ಕರೆದುಕೊಂಡು ಹೋಗುತ್ತಿದ್ದರು. ನಂತರ ಪ್ರೌಢಶಾಲೆಗೆ ಬರುವ ವೇಳೆಗೆ ಆ ಕಾಲದ ಎಲ್ಲ ಭಾರತೀಯ ಯುವಜನರಲ್ಲಿ ಹೊಂಗನಸನ್ನು ಚಿಗುರಿಸಿದ್ದ ವಿವೇಕಾನಂದರಿಂದ ಗಾಂಧೀಜಿಯವರೆಗಿನ ನವೋದಯದ ದೊಡ್ಡ ಬೀಸಿನ ಪ್ರಭಾವಕ್ಕೆ ಸಿಕ್ಕಿದರು. ಹೊಸ ಭಾರತವನ್ನು ಕಾಣುವ ತವಕ. ಯಾವ ಪರಿವೆಯೂ ಇಲ್ಲ ಯಾರ ಅಂಜಿಕೆಯೂ ಇಲ್ಲ. ಸ್ವಾತಂತ್ರ್ಯ ಆಂದೋಲನದೊಂದಿಗೆ ಸಹಜವಾಗಿ ಮೂಡಿಬಂದದ್ದು ಅಧ್ಯಯನ ಶೀಲತೆ. ಶಾಲೆ, ಕಾಲೇಜುಗಳಲ್ಲಿ ಓದಿನಲ್ಲಿ ಮುಂದು. ಅದರೊಟ್ಟಿಗೆ ಶಾಲೆಯ ಹೊರಗೆ ಕಲಿತದ್ದು ಅಪಾರ. ಪತ್ರಿಕೆಗಳು, ಪುಸ್ತಕಗಳು ಎಡಬಿಡದ ಸಂಗಾತಿಗಳು.

ಆಗ ಗಾಂಧೀಜಿ ನಂತರ ಯುವ ಜನರಿಗೆ ಮುಖ್ಯ ಆಕರ್ಷಣೆ ನೆಹರು ಮತ್ತು ಜಯಪ್ರಕಾಶ್‌ನಾರಾಯಣ್. ಸಹಜವಾಗಿಯೇ ಯುವಕರಲ್ಲಿ ಎರಡು ಕವಲು. ಆದರೆ ಅದು ವೈಚಾರಿಕ ನೆಲೆಗಟ್ಟಿನದು. ಹಜಾರಿಬಾಗ್ ಸೆರೆಮನೆಯ ಗೋಡೆಗಳನ್ನು ಹಾರಿ ಹೊರಬಂದು ಭೂಗತರಾಗಿ ವಿದ್ಯಾರ್ಥಿ ಚಳವಳಿಯನ್ನು ದಿಗ್ದರ್ಶಿಸಿದ ಜೆಪಿ ಕಡೆ ಖಾದ್ರಿಯಂತಹ ಬಂಡಾಯದ ವ್ಯಕ್ತಿತ್ವಕ್ಕೆ ಸಹಜವಾಗಿಯೇ ಒಲವು. ಖಾದ್ರಿ ಮೈಸೂರಿನಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ಸಂಘಟಿಸುವುದರಲ್ಲಿ ತೊಡಗಿಸಿಕೊಂಡರು. " ಇಗೋ ಹೊರಟೆವು ಬಿಡುಗಡೆಗಾಗಿ ಬಹರಾರು ನಮಗಿದಿರಾಗಿ..." –ವರಕವಿ ಬೇಂದ್ರೆ ಅವರ ಸಾಲುಗಳು ಖಾದ್ರಿಯಂತಹ ಯುವಕರ ನಾಲಿಗೆಯ ಮೇಲೆ ನಲಿದಾಡಿದವು.

ಮನೆಯಲ್ಲಿ ಅಜ್ಜನ ಬಲವಂತಕ್ಕೆ ಮೈಸೂರಿನ ಲಕ್ಷ್ಮೀಪುರದ ಸಾಹುಕಾರರ ಮನೆಯ ಮುಂದೆ ಒಂದು ರೂಪಾಯಿ ಸ್ಕಾಲರ್‌ಶಿಪ್‌ಗಾಗಿ ಜುಟ್ಟು ಬಿಟ್ಟುಕೊಂಡು ನಾಮ ಹಾಕಿಕೊಂಡು ನಿಲ್ಲಬೇಕಾಗುತ್ತಿತ್ತು. ಭಿಕ್ಷೆಯಂತೆ ಆ ಮನೆಯವರು ನೀಡುತ್ತಿದ್ದ ಒಂದು ರೂಪಾಯಿ ಖಾದ್ರಿ ಶಾಮಣ್ಣ ಜಾತಿ ವಿರುದ್ಧ ಸಿಡಿದೇಳಲು ಮೂಲವಾಯಿತು. ಅಲ್ಲೇ ಸಮತೆಗಾಗಿ ತುಡಿತ ಅವರ ಮನದಾಳದಲ್ಲಿ ಪುಟಿಯಿತು.

ಅವರಿಗೆ ಮನೆಯವರು ಸೇರಿ ಜನಿವಾರ ಹಾಕಿದಾಗ, ಉಪನಯನದ ಸ್ಥಳದಿಂದ ಹೊರಬಂದ ಕೂಡಲೇ ಅದನ್ನು ಕಿತ್ತೆಸೆದರು. ಎಂಜಲಿನಿಂದ ಹಣೆಯ ಮೇಲಿನ ನಾಮವನ್ನು ಅಳಿಸಿಕೊಂಡವರು ಮತ್ತೆಂದೂ ಅವುಗಳ ಗೋಜಿಗೆ ಹೋಗಲಿಲ್ಲ. ಪ್ರಬಂಧ ಸ್ಪರ್ಧೆಯಲ್ಲಿ ಬಂದ ಐದು ರೂಪಾಯಿ ಬಹುಮಾನ ಗಾಂಧಿಜೀಯವರ 'ಯಂಗ್ ಇಂಡಿಯಾ' ಸಂಪುಟ ಕೊಳ್ಳಲು ಬಳಕೆಯಾಯಿತು. ಖಾದ್ರಿಯವರೇ ತಮ್ಮ ಆ ದಿನಗಳನ್ನು ನೆನಪಿಸಿಕೊಳ್ಳುತ್ತಾ ಗಣಿತದ ತರಗತಿಯಲ್ಲಿ ಕುಳಿತು ಕಾರ್ಲ್ ಮಾರ್ಕ್ಸ್‌ನ 'ದಾಸ್ ಕ್ಯಾಪಿಟಲ್' ಓದುತ್ತಿದ್ದುದ್ದಾಗಿ ಒಂದು ಕಡೆ ಹೇಳಿರುವುದು ಆ ಕಾಲದಲ್ಲಿ ಸಾಮ್ಯವಾದದ ಪ್ರಭಾವ ವಿದ್ಯಾರ್ಥಿ ಸಮುದಾಯದ ಮೇಲೆ ಎಷ್ಟು ದಟ್ಟವಾಗಿತ್ತು ಎಂಬುದನ್ನು ಸೂಚಿಸುತ್ತದೆ. ಹಾಗೇ, ಗಾಂಧೀಜೀಯ ಆತ್ಮಕಥೆ ಹಾಗೂ 'ಹಿಂದ್‌ಸ್ವರಾಜ್' ಪುಸ್ತಕಗಳು ನಮ್ಮ ಹತ್ತಿರದ ಗೆಳೆಯರೆಲ್ಲರನ್ನೂ ಹೇಗೊ ಮೋಡಿ ಮಾಡಿತ್ತು ಎಂಬುದನ್ನೂ ಅವರು ಇನ್ನೊಂದು ಕಡೆ ಬರೆದಿದ್ದಾರೆ.

ಮೈಸೂರಿನಲ್ಲಿ ವಿದ್ಯಾರ್ಥಿ ಚಳುವಳಿ ನಂತರ ಸಹಜವಾಗಿ ಸೋಷಲಿಸ್ಟ್ ಆಂದೋಲನಕ್ಕೆ ಹೊರಳಿತು. ಇಂಟರ್‌ಮಿಡೀಯಟ್ ಓದಿಗಾಗಿ ಯುವರಾಜ ಕಾಲೇಜ್ ವಿದ್ಯಾರ್ಥಿಯಾಗಿದ್ದಾಗ ಕಾಲೇಜಿನ ಗ್ರಂಥ ಭಂಡಾರದಲ್ಲಿ ಖಾದ್ರಿ ಮತ್ತು ಅವರ ಗೆಳೆಯರ ಗುಂಪು ನಾಡ ಬಾಂಬ್ ಒಂದನ್ನು ಸ್ಫೋಟಿಸಿತು. ಖಾದ್ರಿ ಸೆರೆಮನೆ ಸೇರಿದರು. ಅಲ್ಲಿಗೆ ವಿದ್ಯಾಭ್ಯಾಸಕ್ಕೆ ವಿದಾಯ. ಲೋಕ ಜೀವನ ಶಿಕ್ಷಣಕ್ಕೆ ಪದಾರ್ಪಣೆ. ಜೈಲಿನಿಂದ ಬಂದಮೇಲೆ 1944ರ ಮಧ್ಯ ಭಾಗದಲ್ಲಿ 'ಜನವಾಣಿ' ಪತ್ರಿಕೆ ಉಪಸಂಪಾದಕ. ಅದೇ ವರ್ಷ ನವಂಬರ್‌ನಲ್ಲಿ ಗಾಂಧಿಜೀಯವರ ಸೇವಾ ಗ್ರಾಮಕ್ಕೆ. ಬಾಪುಗೆ ಬರುತ್ತಿದ್ದ ನೂರಾರು ಪತ್ರಿಕೆಗಳು, ಮುಖ್ಯ ಇಂಗ್ಲೀಷ್ ಪತ್ರಿಕೆಗಳನ್ನು ಓದಿ ಗಾಂಧಿಜೀ ಅವಗಾಹನೆಗಾಗಿ ಕತ್ತರಿಸಿಡುವ ಕೆಲಸ ಖಾದ್ರಿಯವರ ಪಾಲಿಗೆ.

ಸೇವಾಗ್ರಾಮದಿಂದ ಮರಳಿ ಬಂದ ಮೇಲೆ ಗೆಳೆಯರ ಜತೆಗೂಡಿ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ ಸಂಘಟಿಸುವ ತೀರ್ಮಾನ. ಅದಕ್ಕೆ ಚೈತನ್ಯ ತುಂಬುವ ಕೆಲಸವನ್ನು ಕಮಲಾದೇವಿ ಚಟ್ಟೋಪಾಧ್ಯಾಯ ಕೈಗೊಂಡಿದ್ದರು. ಇದರ ಅಂಗವಾಗಿ ಜೆಪಿ ಕರ್ನಾಟಕವನ್ನು ಸಂಚರಿಸಿದಾಗ ಅವರ ನಿಕಟ ಸಂಪರ್ಕಕ್ಕೆ ಬಂದರು. ಮಂಗಳೂರಿನಲ್ಲಿ ಕರ್ನಾಟಕದ ಸಮಾಜವಾದಿಗಳ ಸಮ್ಮೇಳನದಲ್ಲಿ ಪಾಲ್ಗೊಂಡು ನಂತರ ಕಮಲಾದೇವಿಯವರ ಅಣತಿಯಂತೆ ಮುಂಬೈಯಿಂದ 'ಜಾಗೃತಿ' ವಾರಪತ್ರಿಕೆ ಆರಂಭಿಸಲು ಅಲ್ಲಿಗೆ ನಡೆದರು. ಬೆಂಗಳೂರಿಗೆ 2000 ಪ್ರತಿಗಳು ಬರುತ್ತಿದ್ದವು. ಬಂದ ಕೆಲವೇ ತಾಸುಗಳಲ್ಲಿ ಎಲ್ಲ ಖರ್ಚಾಗಿ ಹೋಗುತ್ತಿತ್ತು. ಮೆಜೆಸ್ಟಿಕ್ ಚೌಕದಿಂದ ಬಳೆಪೇಟೆ ಚೌಕದವರೆಗೆ ಸೋಷಲಿಸ್ಟ್ ಸಂಗಾತಿಗಳೆಲ್ಲಾ ಘೋಷಣೆ ಕೂಗುತ್ತಾ 'ಜಾಗೃತಿ' ಪತ್ರಿಕೆ ಮಾರುತ್ತಿದ್ದರು. ಪತ್ರಿಕೆಯ ಮೂಲಕ ಪಾರ್ಟಿ ಕಟ್ಟಿದರು. ರಾಜ್ಯಾದ್ಯಂತ ವೈ.ಆರ್. ಪರಮೇಶ್ವರಪ್ಪ (ಅಣ್ಣಯ್ಯ), ಗೋಪಾಲಗೌಡ, ಜಿ. ಸದಾಶಿವರಾವ್, ಧಾರವಾಡದ ನರಿಬೋಳ ಮುಂತಾದ ಪ್ರತಿಭಾಶಾಲಿ ದಿಟ್ಟ ಹುಡುಗರ ಕೂಟವೇ ಎದ್ದು ನಿಂತಿತು.

1948ರಲ್ಲಿ 'ಜಾಗೃತಿ' ಪತ್ರಿಕೆ ಬೆಂಗಳೂರಿಗೆ ಬಂತು. ಆಗ ಜವಾಬ್ದಾರಿ

ಸರ್ಕಾರಕ್ಕಾಗಿ ರಾಜ್ಯದಲ್ಲಿ ನಡೆದಿದ್ದ 'ಮೈಸೂರು ಚಲೋ' ಹೋರಾಟದಲ್ಲಿ ಸೋಷಲಿಸ್ಟರು ಭಾಗಿಗಳಾಗಿದ್ದರು. ಖಾದ್ರಿಯವರೇ ಪತ್ರಿಕೆಯ ಸಂಪಾದಕ, ಪ್ರಕಾಶಕ ಹಾಗೂ ಮುದ್ರಕ. ಆಗತಾನೇ ಅಧಿಕಾರಕ್ಕೆ ಬಂದ ಕೆ.ಸಿ. ರೆಡ್ಡಿಯವರ ಸರ್ಕಾರ ಪತ್ರಿಕೆಯಿಂದ ಕೇಳಿದ 5000 ರೂಪಾಯಿ ಠೇವಣಿ ಕೊಡಲಾಗದೆ ಪತ್ರಿಕೆ ಮುಚ್ಚಿಹೋಯಿತು. ಅದೇ ವರ್ಷ ನಾಸಿಕ್‌ನಲ್ಲಿ ಸಮಾಜವಾದಿ ಸಮ್ಮೇಳನ. ಖಾದ್ರಿ ಭಾಗವಹಿಸಿದ್ದರು. ಸೋಷಲಿಸ್ಟರು ಕಾಂಗ್ರೆಸ್ ಪಕ್ಷ ತೊರೆಯಲು ನಿರ್ಧರಿಸಿದರು. ಆಗ ಸಿಜಿಕೆ ರೆಡ್ಡಿಯವರ ಜತೆ ಕೂಡಿಕೊಂಡು 'ಪ್ರಜಾವಾಣಿ' ಪತ್ರಿಕೆ ಹುಟ್ಟಿನೊಡನೆ ನಂಟು. ಅದರ ಸುದ್ದಿ ಸಂಪಾದಕ ಹಾಗೂ ಜಂಟಿ ಸಂಪಾದಕರೂ ಆದರು. ಆದರೆ ಹೋರಾಟದ ಮನೋಭಾವ ಬಿಡದ ಖಾದ್ರಿ ಸಿಜಿಕೆ ಜತೆಗೂಡಿ ಹಿಂದುಸ್ಥಾನ್ ವಿಮಾನಕಾರ್ಖಾನೆ ಕಾರ್ಮಿಕ ಮುಷ್ಕರ ಸಂಘಟನೆ ಮಾಡಿದ್ದರಿಂದಾಗಿ 'ಪ್ರಜಾವಾಣಿ'ಗೆ ರಾಜೀನಾಮೆ ನೀಡಿದರು. ಮತ್ತೆ 1952ರ ಮೊದಲ ಚುನಾವಣೆಯವರೆಗೂ ಸೋಷಲಿಸ್ಟ್ ಪಾರ್ಟಿ ಸಂಘಟನೆಯಲ್ಲಿ ತೊಡಗಿಕೊಂಡು ಕಾಗೋಡು ಸತ್ಯಾಗ್ರಹದಲ್ಲಿ ಭಾಗಿಯಾದರು. ಶಿವಮೊಗ್ಗದಲ್ಲಿ ನೆಲೆಯೂರಿ ಶಾಂತವೇರಿಯವರ ಜತೆಗೂಡಿ ಸಮಾಜವಾದಿ ಚಳವಳಿಗೆ ಅಡಿಪಾಯ ಹಾಕುವುದರಲ್ಲಿ ಖಾದ್ರಿ ಶಾಮಣ್ಣ, ಗರುಡಶರ್ಮಾ ಹಾಗೂ ಬಾಸು ಕೃಷ್ಣಮೂರ್ತಿ ಈ ತ್ರಿಮೂರ್ತಿಗಳ ಪರಿಶ್ರಮ ನಂತರದ ಪೀಳಿಗೆಯ ಸಮಾಜವಾದಿಗಳಿಗೆ ಅಪರಿಚಿತವಾದ ಆಯಾಮ. ' ನೀವು ಸೋಷಲಿಸ್ಟ್ ಪಾರ್ಟಿ ಸೇರಬೇಕು ಎಂದು ಶಾಮಣ್ಣ ನಿನ್ನೆ ತಾನೇ ಬಂದು ನನ್ನನ್ನು ರಾಜಕೀಯಕ್ಕೆ ಎಳೆದು ತಂದನೇನೋ ಎನ್ನುವಷ್ಟು ಆ ನೆನಪು ಹಸಿರಾಗಿದೆ' ಎಂದು ಜೆ.ಹೆಚ್. ಪಟೇಲರು ಖಾದ್ರಿ ಶಾಮಣ್ಣ 1990ರ ಮೇನಲ್ಲಿ ತೀರಿಕೊಂಡ ನಂತರ ಅವರನ್ನು ಈ ಲೇಖಕ ಭೇಟಿಯಾದಾಗ ಹೇಳಿದ ಮಾತು ಈ ವಿದ್ಯಮಾನಕ್ಕೆ ಜ್ವಲಂತ ಉದಾಹರಣೆ.

52ರ ಚುನಾವಣೆಯಲ್ಲಿ ಖಾದ್ರಿಯವರು ತುಮಕೂರು ಲೋಕಸಭಾ ಸ್ಥಾನಕ್ಕೆ ಸ್ಪರ್ಧಿಸಿದರು. ಖರ್ಚು ಮಾಡಿದ ಹಣ ಕೇವಲ 350 ರೂಪಾಯಿ. ಟಾಂಗಾ ಗಾಡಿಯಲ್ಲಿ ಪ್ರಚಾರ. ಸೋತರೂ ಠೇವಣಿ ಉಳಿಯಿತು. ಚುನಾವಣೆ ನಂತರ ಸೋಷಲಿಸ್ಟ್ ಪಕ್ಷ ಪ್ರಜಾ ಸೋಷಲಿಸ್ಟ್ ಪಕ್ಷವಾಗಿ;ಆನಂತರ ಆ ಪಕ್ಷ ಹಲವು ಗೊಂದಲಗಳಿಗೆ ಸಿಕ್ಕಿದ ಮೇಲೆ ಜೆಪಿ ಸರ್ವೋದಯದ ಕಡೆ ವಾಲಿದಾಗ ಇವರೂ ಅವರನ್ನು ಹಿಂಬಾಲಿಸಿದರು.


ನಂತರ 'ಪತ್ರಿಕೋದ್ಯಮವೇ ನಿನ್ನ ಸ್ವಧರ್ಮ' ಎಂದು ಅವರ ಗುರು ಸಮಾನರಾದ ಸಿದ್ದವನಹಳ್ಳಿ ಕೃಷ್ಣಶರ್ಮರ ಹಿತನುಡಿಯಿಂದಾಗಿ ಖಾದ್ರಿ ಶಾಮಣ್ಣ ಪತ್ರಿಕೋದ್ಯಮದತ್ತ ನಡೆದರು. ಆದರೂ ಸೋಷಲಿಸ್ಟ್ ನಂಟು ಮುಂದುವರಿದೇ ಇತ್ತು. ಡಾ. ಲೋಹಿಯಾ, ಮಧುಲಿಮೆಯೆ, ಸುರೇಂದ್ರಮೋಹನ್, ಮಧು ದಂಡವತೆ, ರಾಜ್‌ನಾರಾಯಣ್, ರಬಿರಾಯ್ ಅವರೊಡನೆ ಕೊನೆಯ ತನಕ ನಿಕಟ ನಂಟು ಹೊಂದಿದ್ದರು. ಪತ್ರಿಕೋದ್ಯಮ ಖಾದ್ರಿ ಅವರಿಗೆ ಸಮಾಜವಾದಿ ವಿಚಾರಧಾರೆ ಪ್ರಚುರ ಪಡಿಸಲು ಸಾಧನವಾಗಿತ್ತು. ಜೆಪಿ ಹಾಗೂ ಲೋಹಿಯಾ ಅವರನ್ನು ತಮ್ಮ ಲೇಖನಗಳಲ್ಲಿ ಸಮನ್ವಯಗೊಳಿಸಿ ಬರೆಯುತ್ತಿದ್ದ ಅವರ ಶೈಲಿ

ಖಾದ್ರಿ ಅವರು ಬೆಳೆದು ಬಂದ ಸಮನ್ವಯದ ಬದುಕಿಗೆ ಅನುರೂಪವಾಗಿತ್ತು.


ಖಾದ್ರಿಯವರ ನಿಧನಾನಂತರ ಮಧುಲಿಮೆಯೆ ಅವರನ್ನು ನಾನು ಭೇಟಿಯಾದಾಗ ಅವರು ಕರ್ನಾಟಕದ ಸೋಷಲಿಸ್ಟರನ್ನು ಪ್ರತಿಭಾವಂತರೆಂದು ಮೆಚ್ಚಿಕೊಂಡರಾದರೂ ಅವರಲ್ಲಿ ಕೆಲವರು ತಮ್ಮ ಆರೋಗ್ಯ ಹಾಳು ಮಾಡಿಕೊಂಡ ಪರಿಯ ಬಗ್ಗೆ ವ್ಯಥೆ ವ್ಯಕ್ತ ಪಡಿಸಿದರು. ಹಾಗೆಯೇ ಮುಂಬೈನಲ್ಲಿ ಜಾರ್ಜ್ ಅವರನ್ನು ಭೇಟಿಯಾದಾಗ, 'ಖಾದ್ರಿ ಶಾಮಣ್ಣ ನಾ ಕಂಡ ಪರಮ ಮಾನವತಾವಾದಿ' ಎಂದು ಭಾವುಕರಾದರು. ಸಮೀಪಕ್ಕೆ ಬಂದವರಿಗೆ ಸುಲಭ ಸ್ನೇಹಿಯಾದ ಖಾದ್ರಿ ಹತ್ತಿರವಾಗದವರಿಗೆ ಅರ್ಥವಾಗುವುದು ದುಸ್ತರ.

–ಖಾದ್ರಿ ಎಸ್. ಅಚ್ಯುತನ್

(ಡಿಸೆಂಬರ್, 2013)



ದುರಂತವನ್ನಪ್ಪಿದ ಹರ್ಷೋಲ್ಲಾಸಗಳ ಸರದಾರ ಬಾಸು ಕೃಷ್ಣಮೂರ್ತಿ



ಕರ್ನಾಟಕದಲ್ಲಿ ಸಮಾಜವಾದಿ ಚಳುವಳಿ, ಆನಂತರ ಭೂದಾನ ಚಳುವಳಿ ಅರ್ಥಾತ್ ಸರ್ವೋದಯ ಆಂದೋಲನ ಆರಂಭವಾಗಿ ಸಾಗಿದ ಚಿತ್ರ ಬಿಡಿಸುವಾಗ ಮುವ್ವರ ಹೆಸರುಗಳು ಒಟ್ಟಿಗೇ ನೆನಪಿಗೆ ಬರುತ್ತದೆ. ಅವರೇ ದಿವಂಗತರಾದ ಖಾದ್ರಿ ಶಾಮಣ್ಣ, ಗರುಡ ಶರ್ಮ ಮತ್ತು ಬಾಸು ಕೃಷ್ಣಮೂರ್ತಿ. ಮೂರೂ ಜನ ಒಟ್ಟಿಗೇ ಹಳ್ಳಿ ಸುತ್ತಿದರು;ಸಮತೆ-ಸರ್ವೋದಯಗಳ ಸಂದೇಶ ಸಾರಿದರು. ಇವರಲ್ಲಿ ಗರುಡಶರ್ಮಾ ಜೀವನದಾನಿಯಾಗಿ ಸರ್ವೋದಯಕ್ಕೆ ತಮ್ಮ ಬದುಕನ್ನು ಅರ್ಪಿಸಿಕೊಂಡರು. ಇನ್ನು ಖಾದ್ರಿ ಶಾಮಣ್ಣ ಕನ್ನಡ ಪತ್ರಿಕೋದ್ಯಮದಲ್ಲಿ ದೊಡ್ಡ ಹೆಸರಾದರೆ, ಬಾಸು ಕೃಷ್ಣಮೂರ್ತಿ ಕೊನೆವರೆಗೂ ಹೊಸ ಸಮಾಜ ನಿರ್ಮಾಣದ ಕನಸು ಹೊತ್ತು ಕಾಲಿಗೆ ಚಕ್ರ ಕಟ್ಟಿಕೊಂಡಂತೆ ಅಲೆದು ಭಾಷಣಗಳನ್ನು ಮಾಡಿದರು, ಬರೆದರು. ಕೊನೆಗೆ ನಿರಂತರ ಅಶಾಂತ ಜೀವಿಯಾಗಿ ಲೋಕ ವ್ಯಾಪಾರ ಮುಗಿಸಿದರು. ಆದರೆ ಕಡು ತಾಪತ್ರಯಗಳ ನಡುವೆಯೂ ಬಾಸು ತಮ್ಮ ಹಾಸ್ಯ, ಭರಪೂರ ನಗೆಯನ್ನು ಬಿಟ್ಟುಕೊಡಲಿಲ್ಲ. ಅವರಿದ್ದೆಡೆ ಜೀವನೋತ್ಸಾಹ ಪುಟಿದೇಳುತ್ತಿತ್ತು.

ಅದು ಸ್ವಾತಂತ್ರ್ಯ ಹೋರಾಟದ ಆರಂಭದ ಕಾಲ. ಬೆಂಗಳೂರು, ಮೈಸೂರುಗಳು ವಿದ್ಯಾರ್ಥಿ ಕಾಂಗ್ರೆಸ್ ಸಂಘಟನೆಯ ಮುಖ್ಯ ತಾಣಗಳು. ಬೆಂಗಳೂರಿನ ಗಾಂಧಿ ಬಜಾರ್‌ನ ಪಶ್ಚಿಮ ಆಂಜನೇಯ ಗುಡಿ ಬೀದಿಯ ಕೆಳ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ಬಾಸು ಕೃಷ್ಣ ಮೂರ್ತಿ ಜನಿಸಿದರು. ತಂದೆ ಬಡ ಶಾಲಾ ಶಿಕ್ಷಕರು. ಹೀಗಾಗಿ ಎಳೆತನದಿಂದಲೇ ಬಾಸು ಕಡುಬಡತನವನ್ನು ಕಂಡುಂಡವರು. ಸೆಂಟ್ರಲ್ ಕಾಲೇಜಿನ ಬಿಎಸ್ಸಿ ಪದವೀಧರರಾಗಿದ್ದ ಬಾಸು ಅವರ ಸಹಪಾಠಿಗಳೆಂದರೆ, ಕರ್ನಾಟಕದಲ್ಲಿ ಸಮಾಜವಾದಿ ಪಕ್ಷ ಕಟ್ಟಿದ ಸೋಗಾಲ ನಾಗಭೂಷಣ ಮತ್ತು ಮುಂದೆ ಕಾಂಗ್ರೆಸ್ ಮುಖಂಡರಾದ ವಿ.ಎಸ್. ಕೃಷ್ಣ ಐಯ್ಯರ್. ಇವರೆಲ್ಲರೂ ಆ ಕಾಲದ ಎಲ್ಲ ಯುವಜನರಂತೆಯೇ, ರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರಿಂದ ಪ್ರಭಾವಿತರಾಗಿದ್ದ ಬಾಸು ತಮ್ಮ ಕಂಚಿನ ಕಂಠ ಮತ್ತು ಆಕರ್ಷಕ ವಾಗ್ವೈಖರಿಯ ಮೂಲಕ ಆ ಕಾಲದ ಹೆಸರಾಂತ ಯುವ ಭಾಷಣಕಾರರೆನಿಸಿಕೊಂಡರು. ಕನ್ನಡ ಕವಿತೆಗಳ ಸಾಲುಗಳಿಂದ ಪ್ರಫುಲ್ಲಿತವಾಗಿರುತ್ತಿದ್ದ ಅವರ ಭಾಷಣಗಳು ವಿದ್ಯಾರ್ಥಿ ಕಾಂಗ್ರೆಸ್ ಸಭೆ-ಸಮ್ಮೇಳನಗಳಲ್ಲಿ ಯುವಜನರನ್ನು ಸ್ವಾತಂತ್ರ್ಯ ಹೋರಾಟದೆಡೆಗೆ ಆಕರ್ಷಿಸುತ್ತಿದ್ದವು.

ಎರಡನೇ ವಿಶ್ವಯುದ್ಧ ಮುಗಿದು, ಕಾಂಗ್ರೆಸ್ ಆಂದೋಲನ ಬೆಳೆಯುತ್ತಿದ್ದ

ಕಾಲವದು. ಆಗ ತಾನೇ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷ ಸ್ಥಾಪಿತವಾಗಿ ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ಕೆ.ಸದಾಶಿವ ಕಾರಂತರು ಕರ್ನಾಟಕದಲ್ಲಿ ಅದರ ಸಂಘಟನೆಯಲ್ಲಿ ತೊಡಗಿದ್ದರು. ಅವರು ಕರೆದಿದ್ದ ಮಂಗಳೂರು ಸೋಶಲಿಸ್ಟ್ ಸಮ್ಮೇಳನದಲ್ಲಿ ಭಾಗವಹಿಸಿದ ಬಾಸು, ನಂತರ ಜಯಪ್ರಕಾಶ್ ನಾರಾಯಣರು ಬೆಂಗಳೂರಿಗೆ ಬಂದು ಚಿಕ್ಕ ಲಾಲ್‌ಬಾಗ್‌ನಲ್ಲಿ ಭಾಷಣ ಮಾಡಿದಾಗ ಅವರ ಭಾಷಣವನ್ನು ಕನ್ನಡಕ್ಕೆ ಅನುವಾದಿಸಿದವರು ಯುವಕ ಬಾಸು ಕೃಷ್ಣಮೂರ್ತಿ. ಬಾಸು ಅವರ ಅನುವಾದ ಸಭಿಕರಲ್ಲಿ ಹುಟ್ಟಿಸುತ್ತಿದ್ದ ಸಂಭ್ರಮವನ್ನು ಕಂಡ ಜೆಪಿ, ಸಂಘಟಕರನ್ನು ಈ ಹುಡುಗ ಯಾರು ಎಂದು ಕೇಳಿದರು. ಬಾಸುವನ್ನು ಸಂಘಟಕರು ಈತ ಸಮಾಜವಾದಿ ಪಕ್ಷದ ಆಧಾರ ಸ್ತಂಭ ಎಂದು ಪರಿಚಯಿಸಿದರು. ಆಗ ಜೆಪಿ ಬಾಸುವನ್ನು ಸಮಾಜವಾದಕ್ಕೆ ದೊಡ್ಡ ಆಸ್ತಿ ಎಂದು ಶ್ಲಾಘಿಸಿದರೆಂದು ಕಾರ್ಮಿಕ ನಾಯಕ ದಿ. ಜಿ.ವಿ. ರಮೇಶ್ ಒಮ್ಮೆ ನೆನಪಿಸಿಕೊಂಡು ಹೇಳಿದ್ದರು. ಮುಂದೆ ಜೆಪಿ ಅಥವಾ ಲೋಹಿಯಾ ಕರ್ನಾಟಕಕ್ಕೆ ಬಂದಾಗಲೆಲ್ಲ ಅವರ ಭಾಷಣಗಳ ಅನುವಾದ ಖಾದ್ರಿ ಶಾಮಣ್ಣನವರನ್ನು ಬಿಟ್ಟರೆ ಬಾಸುದೇ.

ಕಮಲಾದೇವಿಯವರು ಹೊರತರುತ್ತಿದ್ದ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದ ಮುಖವಾಣಿಯಾಗಿದ್ದ 'ಜಾಗೃತಿ' ಪತ್ರಿಕೆ ಧಾರವಾಡದಿಂದ ಬೆಂಗಳೂರಿಗೆ ಬರುತ್ತಿತ್ತು. ಪತ್ರಿಕೆಯ ಪ್ರತಿಗಳನ್ನು ಬಾಸು ಮತ್ತು ಅವರ ಗೆಳೆಯರು ಮೆಜೆಸ್ಟಿಕ್ ಚೌಕದಿಂದ ಬಳೇಪೇಟೆ ಚೌಕದವರೆಗೆ ಘೋಷಣೆಗಳನ್ನು ಕೂಗುತ್ತಾ ಮಾರುತ್ತಿದ್ದರು. ಹೊಸ ಹೊಸ ಘೋಷಣೆಗಳನ್ನು ಕಟ್ಟಬಲ್ಲ ಭಾಷಾ ಚತುರರಾಗಿದ್ದ ಬಾಸು ಪತ್ರಿಕೆಯನ್ನು ಮಾರುವುದರಲ್ಲೂ ನಿಸ್ಸೀಮರು. ಆ ಹೊತ್ತಿಗೆ ರಾಜ್ಯದಲ್ಲಿ ಒಂದು ದೊಡ್ಡ ಸೋಶಲಿಸ್ಟ್ ಯುವಪಡೆಯೇ ಸಿದ್ಧವಾಗಿತ್ತು. ಬಾಸು ಮತ್ತು ಅವರ ಗೆಳೆಯರಲ್ಲದೆ, ವೈ. ಆರ್. ಪರಮೇಶ್ವರಪ್ಪ,, ಶಾಂತವೇರಿ ಗೋಪಾಲಗೌಡ, ಜಿ. ಸದಾಶಿವರಾವ್, ನೀಲಗಂಗಯ್ಯ ಪೂಜಾರ, ನರಿಬೋಳ ಮುಂತಾದವರು ಪ್ರಮುಖರು

1952ರ ಮೊದಲ ಚುನಾವಣೆಗಳಿಗೆ ಮುನ್ನ ಗೋಪಾಲಗೌಡರ ನೇತೃತ್ವದಲ್ಲಿ ಕಾಗೋಡು ಸತ್ಯಾಗ್ರಹ ಕರ್ನಾಟಕದ ಸಮಾಜವಾದಿಗಳು ನಡೆಸಿದ ಮೊದಲ ಸಾಮೂಹಿಕ ಭೂಸತ್ಯಾಗ್ರಹ. ಇದರಲ್ಲಿ ಬಾಸು ಕೃಷ್ಣಮೂರ್ತಿಯವರ ಪಾತ್ರ ವರ್ಣರಂಜಿತವಾದದ್ದು. ಅವರ ಹೋರಾಟದ ಉತ್ಸಾಹ ಅವರ ಮಾತಿನ ಲಹರಿಯಲ್ಲಿ ಮಾತ್ರವಲ್ಲದೆ ಅವರ ಸಾಹಸಗಳಲ್ಲೂ ವ್ಯಕ್ತವಾಯಿತು. ಅದೇ ರೀತಿ ಬೆಂಗಳೂರಿನ ವಿಮಾನ ಕಾರ್ಖಾನೆ ನೌಕರರ ಮುಷ್ಕರದಲ್ಲೂ ಅವರು ಸಕ್ರಿಯವಾಗಿ ಪಾಲ್ಗೊಂಡು ಸೆರೆಮನೆ ವಾಸ ಅನುಭವಿಸಿದರು. 1952ರ ಮೊದಲ ಚುನಾವಣೆಗಳಲ್ಲಿ ಸೋಶಲಿಸ್ಟ್ ಪಕ್ಷದ ಪ್ರಚಾರ ಭಾಷಣಗಳಲ್ಲಿ ಬಾಸು ಅವರದ್ದೇ ಅಟ್ಟಹಾಸ. ಅವರು ತಾವು ಸ್ಪರ್ಧಿಸಿದ್ದ ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರದಲ್ಲಲ್ಲದೆ ರಾಜ್ಯಾದ್ಯಂತ ಪಕ್ಷದ ಪರವಾಗಿ ಚುನಾವಣಾ ಭಾಷಣಗಳನ್ನು ಮಾಡಿದರು. ಬಾಸು ಭಾಷಣಗಳೆಂದರೆ ಜನ ಕಿಕ್ಕಿರಿದು ಸೇರುತ್ತಿದ್ದರು. ಅತಿ ಚುರುಕಾದ;ಆದರೆ ಸರಳ ಮತ್ತು ತಿಳಿಗನ್ನಡದಲ್ಲಿ ಅವರ ಭಾಷಣ. ಆದರೆ ತೀವ್ರ ವಿನೋದ ಪ್ರಜ್ಞೆಯ ಅವರ ಮಾತುಗಳಲ್ಲಿ ವ್ಯಂಗ್ಯ, ಟೀಕೆಗಳಿರುತ್ತಿರಲಿಲ್ಲವೆಂದಲ್ಲ. ಸಾಗರದ ಬಳಿ ಹವ್ಯಕ ಬ್ರಾಹ್ಮಣರೇ

ಹೆಚ್ಚಿದ್ದ ಹಳ್ಳಿಯೊಂದರಲ್ಲಿ ಇವರು ಮತ್ತು ಗರುಡ ಶರ್ಮ ಬ್ರಾಹ್ಮಣರನ್ನು ಕುರಿತು 'ನೀವು ಹೊಳೆದಂಡೆ-ತಾಮ್ರದ ಚೊಂಬಿಗೇ ಸರಿ!' ಎಂದು ಛೇಡಿಸಿ ಪಕ್ಷಕ್ಕೆ ಮುಜುಗರವನ್ನೇ ಉಂಟುಮಾಡಿ ಬ್ರಾಹ್ಮಣ ಸಮುದಾಯ ಗೋಪಾಲ ಗೌಡರನ್ನು 'ಆ ರಾಕ್ಷಸರನ್ನು ಇತ್ತ ಸುಳಿಯಗೊಡಬೇಡಿ' ಎಂದು ಕೋರುವಂತೆ ಮಾಡಿದ್ದೂ ಉಂಟು! ಇವರ ಭಾಷಣದ ಬಗ್ಗೆ ಇದ್ದ ಒಂದು ಜನಪ್ರಿಯ ಮಾತೆಂದರೆ, 'ಜನ ಬಾಸು ಭಾಷಣ ಕೇಳಲು ಬರುತ್ತಾರೆ, ನಂತರ ಕಾಂಗ್ರೆಸ್ಸಿಗೆ ಓಟು ಹಾಕುತ್ತಾರೆ!' ಎಂಬುದು.

ಸಮಾಜವಾದಿ ಪಕ್ಷದಲ್ಲಿ ಒಡಕುಂಟಾದ ಮೇಲೆ ಬಾಸು ಜೆಪಿ ಹಿಂದೆ ಭೂದಾನ ಮತ್ತು ಸರ್ವೋದಯ ಚಳುವಳಿಗಳಿಗೆ ಹೋದರು. ಬಿಹಾರದಲ್ಲಿ ಸ್ವಲ್ಪ ಕಾಲ ಆಶ್ರಮವಾಸಿಯಾಗಿ ಸರ್ವೋದಯದ ಕೆಲಸಗಳಲ್ಲಿ ತರಬೇತು ಪಡೆದರು. ಭೂದಾನ ಚಳುವಳಿಯ ಭಾಗವಾಗಿ ದೇಶ ಸುತ್ತಿದರು. ಅಲ್ಲಿಯೂ ಅವರು ಚಳುವಳಿಯ ಪ್ರಧಾನ ಭಾಷಣಕಾರರು. ಆದರೆ ಈಗ ಅವರದ್ದು ಶಿಷ್ಟ ಭಾಷೆಯ ಸಾತ್ವಿಕ ಭಾಷಣ. ಆದರೆ ತಮ್ಮ ಒಳಗಿನ ಕ್ರಾಂತಿಕಾರಿ ಕಿಡಿಯನ್ನು ಬೆಳಗಿಸಲು ಅವರು ವೇದಿಕೆಯನ್ನಾಗಿ ಮಾಡಿಕೊಂಡದ್ದು ಶೇಷಪ್ಪನವರ 'ಕಿಡಿ' ಪತ್ರಿಕೆಯನ್ನು.1950ರಿಂದ 1962ರವರೆಗೆ ಅಲ್ಲಿ ಸತತವಾಗಿ ಬರೆದ ಬಾಸು ಜೀವನೋಪಾಯಕ್ಕಾಗಿ'ಜನವಾಣಿ', 'ಸಂಯುಕ್ತ ಕರ್ನಾಟಕ', 'ಗೋಕುಲ', 'ಜ್ವಾಲಾಮುಖಿ'ಗಳಲ್ಲಿಯೂ ಬರೆದರು. ಬಾಸು ಅವರಿಗೆ ಇಬ್ಬರು ಸೋದರಿಯರಿದ್ದರು. ಇಬ್ಬರೂ ವಿದ್ಯಾವಂತೆಯರಾದರೂ ನಿರುದ್ಯೋಗಿಗಳು. ಅವರು ವಿನೋಬಾರ ಪೌನಾರ್ ಆಶ್ರಮ ಸೇರಿದರು. ಆದರೆ ಅಲ್ಲಿ ಇಬ್ಬರೂ ಅಕಾಲ ಮರಣಕ್ಕೆ ತುತ್ತಾದರು. ಬಾಸು 1965ರಲ್ಲಿ ತಡವಾಗಿ ಮದುವೆಯಾದರು. ಸಮಾಜವಾದಿ ಕ್ರಾಂತಿಯ ದೀಕ್ಷೆ ತೊಟ್ಟು ಪಕ್ಷ ಕಟ್ಟಿದ, ದೇಶ ಸುತ್ತಿ ಭಾಷಣಗಳನ್ನು ಮಾಡಿದ ಈ ವ್ಯಕ್ತಿ ಕನಿಷ್ಠ ನೆಮ್ಮದಿಯ ಬದುಕಿಗೂ ತತ್ವಾರವಾದಾಗ ನಿಧಾನವಾಗಿ ಹತಾಶೆಗೆ ದೂಡಲ್ಪಟ್ಟರು. ನಂತರ ಸಾರ್ವಜನಿಕ ಜೀವನದಿಂದ ಕ್ರಮೇಣ ದೂರವಾದರು. ಹೀಗೆ ಒಂಟಿಯಾದ ಅವರು 1989ರ ಜುಲೈ 28ರಂದು ನಿಧನರಾದ ಸುದ್ದಿ ಅವರ ಆಪ್ತ ಗೆಳೆಯರಿಗೂ ತಿಳಿದದ್ದು ತಡವಾಗಿ.

ಸಮಾಜವಾದಿ ಚಳುವಳಿಯಲ್ಲೇ ಇರಲಿ, ಸರ್ವೋದಯದಲ್ಲೇ ಇರಲಿ; ಜೀವನಪೂರ್ತಿ ತನ್ನ ಚುರುಕಾದ ಮಾತು ಮತ್ತು ಹಾಸ್ಯ ಪ್ರವೃತ್ತಿಗಳಿಂದ ಎಲ್ಲರಲ್ಲೂ ಉತ್ಸಾಹ ಸಂಭ್ರಮಗಳನ್ನು ತುಂಬಿ ತನ್ನ ಸುತ್ತಲಿನ ಜಗತ್ತನ್ನು ಜೀವಂತವಾಗಿಡುತ್ತಿದ್ದ ಬಾಸು ಕೃಷ್ಣಮೂರ್ತಿ ಜಗತ್ತನ್ನು ಬಿಟ್ಟು ಹೋಗುವಾಗ ಒಂಟಿಯಾಗಿದ್ದರೆಂಬುದು ಈ ಚಳುವಳಿಗಳ ದುರಂತಗುಣವನ್ನೂ ಸೂಚಿಸುತ್ತಿರಬಹುದು...

-ಖಾದ್ರಿ ಎಸ್. ಅಚ್ಯುತನ್

(ಜುಲೈ, 2014)

ಪಕ್ಷದ ಆಶ್ರಯದಾತ ಕೆ.ಜಿ. ಮಹೇಶ್ವರಪ್ಪ



ಡಾ. ರಾಮಮನೋಹರ ಲೋಹಿಯಾ ಹಾಗೂ ಮಲೆನಾಡ ಗರ್ಭದಲ್ಲಿ ಗೇಣಿದಾರರ ಪರವಾಗಿ ಹೊರಾಟದ ನಾಯಕತ್ವ ವಹಿಸಿದ್ದ ಶಾಂತವೇರಿ ಗೋಪಾಲ ಗೌಡರ ಸಿದ್ಧಾಂತಗಳಿಗೆ ಮತ್ತು ಅವರುಗಳ ವ್ಯಕ್ತಿತ್ವಗಳ ಸೆಳೆತಕ್ಕೆ ಒಳಗಾಗಿ ಕಾಗೋಡು ಸತ್ಯಾಗ್ರಹದಲ್ಲಿ ಧುಮುಕಿದ ಕಾರಿಗನೂರು ಗೌಡರ ಮನೆತನದ ಜೆ.ಹೆಚ್. ಪಟೇಲ್ ಹಾಗೂ ಕುರ್ಕಿ ಗೌಡರ ಮನೆತನದ ಕೆ.ಜಿ. ಮಹೇಶ್ವರಪ್ಪ ಅವರುಗಳು ಕರ್ನಾಟಕ ಕಂಡ ಬಯಲುಸೀಮೆಯ ಅಪರೂಪದ ಸಮಾಜವಾದಿ ರಾಜಕಾರಣಿಗಳು. ಬೆಚ್ಚನೆಯ ಮನೆ, ವೆಚ್ಚಕ್ಕೆ ಧನ ಧಾನ್ಯಗಳೆಲ್ಲವೂ ಇದ್ದು, ನೂರಾರು ಎಕರೆಗಳ ಜಮೀನ್ದಾರರಾಗಿದ್ದು; ಕಾರ್ಮಿಕರ ಗೇಣಿದಾರರ ಪರವಾದ ಹೋರಾಟ ಹಾಗೂ ಸಂಘಟನೆಗೆ ಇಳಿದದ್ದು ಅವರುಗಳಲ್ಲಿ ಸೆಲೆಯೊಡೆದ ಸಮಾಜವಾದಿ ಸಿದ್ಧಾಂತದಿಂದಾಗಿ. ಪಟೇಲ್ ಕೆ.ಜಿ.ಎಂ, ಇಬ್ಬರೂ ಲವ-ಕುಶರಂತೆ ಜೊತೆ ಜೊತೆಯಾಗಿ ಹೆಜ್ಜೆ ಹಾಕಿದವರು.

ಕೆ.ಜಿ. ಮಹೇಶ್ವರಪ್ಪ ಅವರು ತಮ್ಮ ವಿದ್ಯಾರ್ಥಿ ದೆಸೆಯಲ್ಲೇ ಭಾರತ ಸ್ವಾತಂತ್ರ್ಯ ಪರವಾದ ಹಾಗೂ ಪ್ರಗತಿಪರ ನಿಲುವುಗಳನ್ನು ಮೈಗೂಡಿಸಿಕೊಂಡು ಬಂದವರು. ಗಾಂಧೀಜಿಯವರ ಕರೆಯಂತೆ ಊರಲ್ಲಿ ಹರಿಜನರೊಡನೆ ಬಹಿರಂಗ ಸಹ ಭೋಜನದಲ್ಲಿ ಭಾಗಿಯಾದವರು. ಅವರ ತಂದೆ ಮಹದೇವಪ್ಪ ಗೌಡರು ಕಾಂಗ್ರೆಸ್ ಪಕ್ಷದ ಅನುಯಾಯಿಯಾಗಿದ್ದವರು.

ನಲವತ್ತರ ದಶಕದಲ್ಲಿ ಕೆ.ಜಿ.ಎಂ. ವಿದ್ಯಾರ್ಥಿಯಾಗಿದ್ದಾಗ, ಸ್ವಾತ್ರಂತ್ಯ ಚಳುವಳಿ ಜೋರಾಗಿತ್ತು. ಬ್ರಿಟಿಷರ ದಬ್ಬಾಳಿಕೆ ವಿರುದ್ಧ ಸೆಟೆದು ನಿಂತಿದ್ದ ಮಹೇಶ್ವರಪ್ಪ ತನ್ನ ಸಹೋದರ ಮುರಿಗೇಂದ್ರಪ್ಪ ಅವರ ಜೊತೆಗೂಡಿ ಕುರ್ಕಿ ಗ್ರಾಮದ ಪಕ್ಕದಲ್ಲಿ ಹಾದು ಹೋಗುವ ರೈಲ್ವೆ ಹಳಿಯ ಪಕ್ಕದ ಟೆಲಿಫೋನ್ ತಂತಿಗಳನ್ನು ಕತ್ತರಿಸಿ, ಹಳಿಗಳ ಮೇಲೆ ಕಲ್ಲುಗಳನ್ನಿಡುವ ಸರ್ಕಾರ ವಿರೋಧಿ ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದರು. ಆಗ ಇವರ ತಂದೆಯವರು ಇವರನ್ನು ಕೊಟ್ಟಿಗೆಯಲ್ಲಿ ಕೂಡಿ ಹಾಕಿ ಬಾಗಿಲಿಗೆ ಅಪಶಕುನದ ಪರಗಿ ಮುಳ್ಳು ಎಳೆದು ತಮ್ಮ ಮಕ್ಕಳನ್ನು ಪೋಲೀಸರಿಂದ ರಕ್ಷಿಸುತ್ತಿದ್ದರು. ನಂತರ ಕೆ.ಜಿ.ಎಂ. ತನ್ನ ಸ್ನೇಹಿತರನ್ನು ಸೇರಿಸಿಕೊಂಡು ಕುರ್ಕಿ-ಕೊಗ್ಗನೂರು ಸುತ್ತ ಮುತ್ತಣವಿದ್ದ ಈಚಲ ಮರಗಳನ್ನು ಕಡಿದಿದ್ದಲ್ಲದೇ, ಸೇಂದಿ ಕಟ್ಟುವ ಚರ್ಮದ ಚೀಲಗಳನ್ನು ಕತ್ತರಿಸಿ ಹಾಕುವ ಮೂಲಕ ಸರ್ಕಾರದ ಆದಾಯ ಮೂಲಕ್ಕೆ ನಷ್ಟ ಮಾಡತೊಡಗಿದರು.

ಇದೆಲ್ಲದರ ಮಧ್ಯೆಯೇ ದಾವಣಗೆರೆಯಲ್ಲಿ ಇಂಟರ್‌ಮೀಡಿಯೆಟ್ ಮುಗಿಸಿದ ಮಹೇಶ್ವರಪ್ಪ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪದವಿ ಪಡೆದು, ತಮ್ಮ ಮದುವೆಯ ನಂತರ ಬೆಳಗಾವಿಯಲ್ಲಿ ಕಾನೂನು ಪದವಿ ಪಡೆದರು. ಅನತಿ

ಕಾಲದಲ್ಲೇ ಅವರು ಐವತ್ತರ ದಶಕದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಶಾಂತವೇರಿ ಗೋಪಾಲ ಗೌಡರ ನೇತೃತ್ವದಲ್ಲಿ ನಡೆದ ಕಾಗೋಡು ಸತ್ಯಾಗ್ರಹದಲ್ಲಿ ಗೆಳೆಯ ಜೆ.ಹೆಚ್. ಪಟೇಲರ ಜೊತೆಗೂಡಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಸಮಾಜವಾದಿ ಚಳುವಳಿಯನ್ನು ಪ್ರವೇಶಿಸಿದರು. ಡಾ. ಲೋಹಿಯಾ ಮತ್ತು ಗೋಪಾಲ ಗೌಡರ ಅಚ್ಚುಮೆಚ್ಚಿನ ಶಿಷ್ಯರಾದರು. ಆ ಮೂಲಕ ಕುರ್ಕಿ ಗೌಡರ ಕುಟುಂಬ ತೋರುತ್ತಿದ್ದ ಕಾಂಗ್ರೆಸ್ ನಿಷ್ಠೆಯನ್ನು ಧಿಕ್ಕರಿಸಿದರು.

ಈ ಮಧ್ಯೆ ಬೆಂಗಳೂರು ಸೇರಿ ವಕೀಲಿಕೆ ಶುರುಮಾಡಿದ್ದ ಮಹೇಶ್ವರಪ್ಪನವರು ತಮ್ಮ ಶ್ರದ್ಧೆ ಹಾಗೂ ಬುದ್ಧಿವಂತಿಕೆಗಳಿಂದ ಬಹು ಬೇಗನೆ ಬೆಂಗಳೂರು ನಗರದಲ್ಲಿ ಪ್ರಮುಖ ಅಡ್ವೊಕೇಟ್ ಆಗಿ ಹೊರಹೊಮ್ಮಿದರು. ಈ ಸಂದರ್ಭದಲ್ಲಿ ಕರ್ನಾಟಕದ ಸಮಾಜವಾದಿ ಪಕ್ಷಕ್ಕೆ ಇವರು ಒಂದರ್ಥದಲ್ಲಿ ಆಶ್ರಯದಾತರಾಗಿದ್ದರು. ಅವರು ತಮ್ಮ ವಕೀಲ ವೃತ್ತಿಯಿಂದ ಬರುವ ಬಹುಪಾಲು ದುಡಿಮೆಯನ್ನು ಪಕ್ಷದ ಸಂಘಟನೆಗೇ ವ್ಯಯ ಮಾಡುತ್ತಿದ್ದರು. ಕರ್ನಾಟಕಕ್ಕೆ ಡಾ. ಲೋಹಿಯಾ ಬರಲಿ, ಮಧುಲಿಮಯೆ, ಜಾರ್ಜ್ ಪರ್ನಾಂಡೀಸ್, ರಬಿರಾಯ್... ಹೀಗೆ ಯಾರೇ ಬರಲಿ ಅವರ ಆತಿಥ್ಯವನ್ನು ಬಹುಪಾಲು ಕೆ.ಜಿ.ಎಂ. ಅವರೇ ನೋಡಿಕೊಳ್ಳುತ್ತಿದ್ದರು. ಆ ಅವಧಿಯಲ್ಲಿ ಕೊಂಡಿದ್ದ ಇವರ ಮಾರಿಷ್ ಕಾರು ಬಹುತೇಕ ಪಕ್ಷದ ಕೆಲಸಕ್ಕೆಂದೇ ಮೀಸಲಾಗಿರುತ್ತಿತ್ತು.

ಕೆ.ಜಿ.ಎಂ. 1967ರಲ್ಲಿ ರಾಜ್ಯ ಸಮಾಜವಾದಿ ಪಕ್ಷದ ಅಧ್ಯಕ್ಷರಾದಾಗ ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ಜೆ.ಹೆಚ್. ಪಟೇಲ್ ಸ್ಪರ್ಧಿಸಿ ಜಯಗಳಿಸಿದರು. ಅಷ್ಟೇ ಅಲ್ಲ, ತೀರ್ಥಹಳ್ಳಿಯಿಂದ ಗೋಪಾಲ ಗೌಡರಲ್ಲದೆ ಚನ್ನಗಿರಿಯಿಂದ ಎನ್.ಜಿ. ಹಾಲಪ್ಪ, ಭದ್ರಾವತಿಯಿಂದ ಅನ್ವರ್‌ಖುದ್ದೂಸ್, ಸೊರಬದಿಂದ ಬಂಗಾರಪ್ಪ, ರಾಯಚೂರಿನಿಂದ ನಾಗಪ್ಪ ಮುಂತಾಗಿ ರಾಜ್ಯ ವಿಧಾನ ಸಭೆಗೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜವಾದಿಗಳು ಗೆದ್ದು ಬಂದರು. ಇವರ ಅಧ್ಯಕ್ಷತೆಯ ಅವಧಿಯ ಪಕ್ಷದ ಇನ್ನೊಂದು ಸಾಧನೆ ಎಂದರೆ 1973ರಲ್ಲಿ 46 ದಿನಗಳ ಕಾಲ ನಡೆದ ಸಂಡೂರು ಭೂ ಸತ್ಯಾಗ್ರಹ ಸಂಡೂರು ರಾಜಮನತನದ ಅಕ್ರಮ ವಶದಲ್ಲಿದ್ದ 8029 ಎಕರೆ ಸರ್ಕಾರಿ ಭೂಮಿಯನ್ನು ರೈತರಿಗೆ ಕೊಡಿಸುವಲ್ಲಿ ಯಶಸ್ವಿಯಾದ ಈ ಸತ್ಯಾಗ್ರಹದಲ್ಲಿ ಮಹೇಶ್ವರಪ್ಪನವರೊಂದಿಗೆ ವಿವಿಧ ರಾಜ್ಯಗಳಿಂದ ಬಂದಿದ್ದ ಸಮಾಜವಾದಿ ಪಕ್ಷದ ಕಾರ್ಯಕರ್ತರೂ ಸೇರಿದಂತೆ ಜೆ.ಎಚ್. ಪಟೇಲ್, ಎಸ್. ವೆಂಕಟರಾಂ, ಎಸ್.ಎಸ್. ಕುಮುಟಾ, ಕಾಗೋಡು ತಿಮ್ಮಪ್ಪ ಮುಂತಾದವರು ಭಾಗವಹಿಸಿ ಸೆರೆಮನೆವಾಸವನ್ನೂ ಅನುಭವಿಸಿದರು. ಈ ಸತ್ಯಾಗ್ರಹದ ಹುಮ್ಮಸ್ಸಿನಲ್ಲಿ, ಆವರೆಗೆ ಮಾರ್ಕ್ಸ್‌ವಾದಿಯಾಗಿದ್ದ ಎಂ.ಪಿ. ಪ್ರಕಾಶ್ ಸಮಾಜವಾದಿ ಪಕ್ಷ ಸೇರಿಕೊಂಡರು.

ಕೆ.ಜಿ.ಎಂ., ಅಧ್ಯಕ್ಷ ಪದವಿಯವರೆಗೆ ಸಾಗಿ ಪಕ್ಷದಲ್ಲಿ ಅನೇಕರ ಚುನಾವಣಾ ಯಶಸ್ಸಿಗೆ ದುಡಿದರಾದರೂ ಸ್ವತಃ ಅವರು ಚುನಾವಣೆಗಳಲ್ಲಿ ಯಶಸ್ಸು ಕಂಡದ್ದು ಕಡಿಮೆಯೆಂದೇ ಹೇಳಬೇಕು. ಬೆಂಗಳೂರು ನಗರ ಪಾಲಿಕೆಗೆ ನಾಲ್ಕು ಬಾರಿ ಸ್ಪರ್ಧಿಸಿ ಸೋತಿದ್ದಲ್ಲದೆ ತಮ್ಮ ರಾಜಕಾರಣದ ಗುರಿ ಕಂಡುಕೊಳ್ಳಲು ತಮ್ಮ ಕಾರ್ಯಕ್ಷೇತ್ರವನ್ನು

ತವರು ದಾವಣಗೆರೆಗೆ ಸ್ಥಳಾಂತರಿಸಿದ ಮೇಲೂ ಅವರು ವಿಧಾನ ಸಭೆ ಮತ್ತು ಲೋಕಸಭಾ ಚುನಾವಣೆಗಳಲ್ಲಿ ಸೋಲಿನ ಸರಮಾಲೆಯನ್ನು ಎದುರಿಸಬೇಕಾಯಿತು. ಕಾಂಗ್ರೆಸ್ ಇಬ್ಭಾಗವಾಗಿ ಗಾಂಜಿ ವೀರಪ್ಪ –ಸಿದ್ದವೀರಪ್ಪನವರಂತಹ ಘಟಾನುಘಟಿಗಳು ದಾವಣಗೆರೆ ಹರಿಹರ ರಾಜಕಾರಣವನ್ನು ಆಳುತ್ತಿದ್ದ ಕಾಲವದು. ಇದರ ಮಧ್ಯೆ ಗೋಪಾಲಗೌಡರು ಅಕಾಲಿಕವಾಗಿ ನಿಧನರಾಗಿ ಎನ್.ಜಿ. ಹಾಲಪ್ಪ, ಬಂಗಾರಪ್ಪ ಮುಂತಾದ ಗೆಳೆಯರು ಕಾಂಗ್ರೆಸ್ ಸೇರಿ ಪಕ್ಷ ಸಂಕಟಕ್ಕೀಡಾದಾಗ ಅವರು ಎದೆಗುಂದದೆ ಜೆ.ಹೆಚ್. ಪಟೇಲರೊಂದಿಗೆ ಸಮಾಜವಾದಿ ಪಕ್ಷವನ್ನು ಮುನ್ನಡೆಸಿದರು.

ಅವರು ಬರಿ ಚುನಾವಣೆ ರಾಜಕಾರಣದಲ್ಲಿ ಮಾತ್ರ ಸಕ್ರಿಯರಾಗಿರದೆ, ಅಂದಿನ ಕಬ್ಬು ಬೆಳೆಗಾರರ ಸಮಸ್ಯೆಗೆ ಸ್ಪಂದಿಸಿ, ಬೆಳೆಗಾರರನ್ನು ಒಂದುಗೂಡಿಸಿ ಹೋರಾಟಕ್ಕಿಳಿದರು. ಅಂದಿನ ಸರ್ಕಾರ ಅಕ್ಕಿ ಗಿರಿಣಿ ಮಾಲೀಕರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಭತ್ತದ ಲೆವಿಯನ್ನು ರೈತರ ಮೇಲೆ ಹೇರಿತು.. ಮತ್ತೆ ಅವರು ಭತ್ತ ಬೆಳೆಯುವ ರೈತರನ್ನು, ಅದರಲ್ಲೂ ಯುವ ರೈತರನ್ನು ಸಂಘಟಿಸಿ ಹೋರಾಟಕ್ಕಿಳಿದರು. ಆಗ ವಿದ್ಯಾರ್ಥಿ ಆಗಿದ್ದ ನಾನು, ನನ್ನಂತಹ ಅನೇಕ ಯುವಕರು ಅವರು ಆರಂಭಿಸಿದೆ ಕೊಟ್ಟ 'ಜೈಲು ಭರೋ' ಚಳುವಳಿಗೆ ಧುಮುಕಿ ಪೊಲೀಸರ ಲಾಠಿ ರುಚಿ ಕಾಣಬೇಕಾಯಿತು..

ತವರು ದಾವಣಗೆರೆಯೂ ಕೆ.ಜಿ.ಎಂ. ಅವರ ಹೋರಾಟಕ್ಕೆ ತಕ್ಕ ಫಲ ನೀಡಲಿಲ್ಲ ಎಂದೇ ಹೇಳಬೇಕು. 1971ರಲ್ಲಿ ದಾವಣಗೆರೆ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಕಾಂಗ್ರೆಸ್ ಅಭ್ಯರ್ಥಿಯ ವಿರುದ್ಧ ಸೋತರು. ನಂತರದಲ್ಲಿ ಹೊಸದಾಗಿ ಮಾಯಕೊಂಡ ಕ್ಷೇತ್ರ ರಚನೆಯಾಗುತ್ತದೆ. ಆ ವೇಳೆಗಾಗಲೇ ಜೆ.ಪಿ.ಯವರ 'ಸಂಪೂರ್ಣ ಕ್ರಾಂತಿ' ಹೋರಾಟ ಆರಂಭವಾಗಿ ಅದರ ಮುಂಚೂಣಿಯಲ್ಲಿದ್ದ ಕೆ.ಜಿ.ಎಂ., ನಂತರ ಜನತಾ ಪಕ್ಷದ ನೇತಾರರಾಗಿರುತ್ತಾರೆ. 1977 ರಲ್ಲಿ ನಡೆದ ಲೋಕಸಭಾ ಚುನಾವಣೆಗೆ ದಾವಣಗೆರೆಯಿಂದ ಸ್ಪರ್ಧಿಸಿ ಕಾಂಗ್ರೆಸ್‌ನ ಎದುರು ಪುನಃ ಸೋಲುತ್ತಾರೆ. ಅವರ ಹುಟ್ಟೂರು ಕುರ್ಕಿ ಒಳಗೊಂಡಂತೆ ಹೊಸದಾಗಿ ರಚನೆಯಾದ ಮಾಯಕೊಂಡ ಕ್ಷೇತ್ರದಲ್ಲಿ ಜನತಾ ಪಕ್ಷದ ಅಭ್ಯರ್ಥಿಯಾಗಿ ಕಾಂಗ್ರೆಸ್ ಎದುರು ಮತ್ತೆ ಸೋಲುತ್ತಾರೆ.

ಸಾಲು ಸಾಲು ಸೋಲುಗಳಿಂದ ಮಹೇಶ್ವರಪ್ಪ ನಿರಾಶರಾಗಲಿಲ್ಲ. ಆ ಮಧ್ಯೆ ರಾಜಕೀಯದ ಕ್ಷಿಪ್ರ ಬೆಳವಣಿಗೆಯಲ್ಲಿ ದೇವರಾಜ್ ಅರಸ್ ಇಂದಿರಾಗಾಂಧಿಯವರಿಂದ ದೂರ ಸರಿದು ಸ್ಥಾಪಿಸಿದ 'ಕ್ರಾಂತಿರಂಗ' ಪಕ್ಷದಲ್ಲಿ ತಮ್ಮ ಮೂಲ ಸಮಾಜವಾದಿ ಆಶಯಗಳನ್ನು ಕಂಡುಕೊಂಡ ಅವರು ತಮ್ಮ ಸಮಾಜವಾದಿ ಗೆಳೆಯ ಜೆ.ಹೆಚ್. ಪಟೇಲ್‌ರೊಂದಿಗೆ ಆ ಪಕ್ಷವನ್ನು ಸೇರಿ ತಮ್ಮ ಮೊದಲ ಚುನಾವಣಾ ವಿಜಯವನ್ನು ಮಾಯಕೊಂಡ ಕ್ಷೇತ್ರದಲ್ಲಿ ಸಾಧಿಸುತ್ತಾರೆ. ಆದರೆ ಸರ್ಕಾರದ ಮುಖ್ಯ ಸಚೇತಕರಾಗಿ ಕೆಲಸ ಮಾಡುತ್ತಿರುವಾಗಲೇ 1984ರ ಲೋಕಸಭೆ ಚುನಾವಣೆಗೆ, ದಾವಣಗೆರೆ ಕ್ಷೇತ್ರದ ಅಭ್ಯರ್ಥಿಯಾಗುವ ಒತ್ತಡಕ್ಕೆ ಸಿಕ್ಕಿ, ಆ ಚುನಾವಣೆಯಲ್ಲಿ ಸೋಲನುಭವಿಸುತ್ತಾರೆ.ಇದರಿಂದ ಹತಾಶರಾದ 1985ರ

ವಿಧಾನಸಭಾ ಚುನಾವಣೆಗಳಲ್ಲಿ ಗೆಲುವಿನ ಸಾಧ್ಯತೆ ಇದ್ದರೂ ಚುನಾವಣೆಗೆ ನಿಲ್ಲಬಯಸಲಿಲ್ಲ.


ಅಷ್ಟೇ ಅಲ್ಲ, ಮಹೇಶ್ವರಪ್ಪ ಮುಂದೆ ಎಂದೂ ನೇರ ಚುನಾವಣೆಗೆ ನಿಲ್ಲಲಿಲ್ಲ. ನಿಜ, ಸಮಾಜವಾದಿಯಾಗಿ ಜನನಾಯಕನೊಬ್ಬ ನೇರ ಚುನಾವಣೆಗಳ ಮೂಲಕವೇ ಶಾಸನ ಸಭೆಯನ್ನು ಪ್ರವೇಶಿಸಬೇಕು ಎಂದು ಹೇಳುತ್ತಿದ್ದ ಮಹೇಶ್ವರಪ್ಪ ಅವರನ್ನು ಅವರ ಹಳೆಯ ಸಮಾಜವಾದಿ ಮತ್ತು ಹೊಸ ಜನತಾ ಪಕ್ಷದ ಗೆಳೆಯರೂ ಸೇರಿ ಸಾರ್ವಜನಿಕ ಜೀವನದಲ್ಲಿನ ಅವರ ನಿಸ್ವಾರ್ಥ ಸೇವೆಯನ್ನು ಗೌರವಿಸುವವರಂತೆ 1986–87ರಲ್ಲಿ ವಿಧಾನಸಭೆಯಿಂದ ರಾಜ್ಯಸಭೆಗೆ ಆರಿಸಿ ಕಳಿಸಿದರು. ಕೆ.ಜಿ.ಎಂ. ಸಂಸತ್ ಸದಸ್ಯರಾಗಿದ್ದ 6 ವರ್ಷಗಳ ಕಾಲ ಉತ್ತಮ ಸಂಸದೀಯ ಪಟು ಎಂಬ ಹೆಸರು ಪಡೆದರು. ಪ್ರಶ್ನೋತ್ತರ ಕಲಾಪಗಳಲ್ಲಿ ಜನತೆಯ ಸಮಸ್ಯೆಗಳಗಳನ್ನೆತ್ತಿ ಪರಿಹಾರದ ಪ್ರಯತ್ನ ಮಾಡುತ್ತಿದ್ದರು.

ತೊಂಭತ್ತರ ದಶಕದಿಂದ ಹೆಚ್ಚುಕಮ್ಮಿ ರಾಜಕಾರಣದ ಬಗ್ಗೆ ಸಕ್ರಿಯ ಆಸಕ್ತಿಯನ್ನು ಕಳೆದುಕೊಂಡ ಮಹೇಶ್ವರಪ್ಪ ಅವರು ಒಮ್ಮೆ ಕಾಂಗ್ರೆಸ್, ಮತ್ತೊಮ್ಮೆ ಜನತಾ ಎಂದು ತಮ್ಮ ಒಲವುಗಳನ್ನು ಬದಲಾಯಿಸುತ್ತಾ ತಮ್ಮ ಸಮಾಜವಾದಿ ಸಿದ್ಧಾಂತದ ಮೆರುಗಿಗೆ ಚ್ಯುತಿ ತಂದುಕೊಂಡರೆಂದೇ ಹೇಳಬೇಕು. ಚಿತ್ರದುರ್ಗ–ದಾವಣಗೆರೆ ಬಯಲುಸೀಮೆ ನಾಡಿನಲ್ಲಿ ಸಮಾಜವಾದಿ ಚಳುವಳಿಗೆ ಜೀವ ತುಂಬಿ ಅನೇಕ ಯುವಕರ ಪಾಲಿಗೆ ಸ್ಫೂರ್ತಿಯ ಸೆಲೆಯಾಗಿದ್ದ ಕೆ.ಜಿ. ಮಹೇಶ್ವರಪ್ಪ ತಮ್ಮ ಕೊನೆಯ ದಿನಗಳಲ್ಲಿ ವಯೋಸಹಜವಾದ ಮರೆಗುಳಿತನಕ್ಕೆ ಒಳಗಾಗಿದ್ದರು. ಹೀಗಾಗಿ ಅವರ ಹೋರಾಟ ಕುರಿತ ಪುಸ್ತಕ ಹೊರತರಬೇಕೆಂಬ ಅವರ ಗೆಳೆಯರ ಪ್ರಯತ್ನಕ್ಕೆ ಹಾಗೂ ಸ್ವತಃ ಅವರೇ ತಮ್ಮ ಆತ್ಮ ಚರಿತ್ರೆ ಬರೆದಿಡಬೇಕೆಂಬ ಬಯಕೆ ಕೊನೆಗೂ ಈಡೇರಲೇ ಇಲ್ಲ.

–ಬಾ.ಮ. ಬಸವರಾಜಯ್ಯ

(ಏಪ್ರಿಲ್, 2014)

ರಸಿಕ ಹೋರಾಟಗಾರ ಜೆ.ಹೆಚ್. ಪಟೇಲ್



ಕರ್ನಾಟಕದ ಸಮಾಜವಾದಿಗಳಲ್ಲಿ ಅತ್ಯಂತ ವರ್ಣರಂಜಿತ ವ್ಯಕ್ತಿತ್ವವೆಂದರೆ ಜೆ.ಹೆಚ್. ಪಟೇಲರು. ಆಗರ್ಭ ಶ್ರೀಮಂತ ಕುಟುಂಬದಲ್ಲಿ ಹುಟ್ಟಿಯೂ ಯೌವ್ವನದ ಹುಮ್ಮಸ್ಸಿನಲ್ಲಿ ಸಮಾಜವಾದವನ್ನು ಅಪ್ಪಿಕೊಂಡವರು. ಬಡವರ ಪಕ್ಷವಾಗಿದ್ದ ಸಮಾಜವಾದಿ ಪಕ್ಷದ ಉನ್ನತಿಗಾಗಿ ತಮ್ಮ ಆಸ್ತಿಪಾಸ್ತಿಯನ್ನು ಸ್ವಲ್ಪಮಟ್ಟಿಗಾದರೂ ಧಾರೆಯೆರೆದ ಪಟೇಲರು ರಾಜ್ಯದಲ್ಲಿ ಸಮಾಜವಾದಿ ಚಳುವಳಿಗೆ ಗೋಪಾಲಗೌಡರ ಜೊತೆ ತಮ್ಮ ಬುದ್ಧಿವಂತಿಕೆ ಮತ್ತು ಅಧ್ಯಯನಶೀಲತೆಯಿಂದ ಒಂದು ಘನತೆ ಒದಗಿಸಿದವರು. ಅವರು ತಮ್ಮ ರಾಜಕೀಯ ಜೀವನದಲ್ಲಿ ಹಲವು ಅವಸ್ಥಾಂತರ ಹಾಗೂ ಏಳು ಬೀಳುಗಳನ್ನು ಕಂಡು ರಾಜ್ಯದ ಮುಖ್ಯಮಂತ್ರಿಯೂ ಆದರು. ಆದರೆ ಆ ಹೊತ್ತಿಗೆ ಅವರು ಸಮಾಜವಾದಿಯಾಗಿ ಉಳಿದಿದ್ದರೇ ಎಂಬ ಪ್ರಶ್ನೆಗೆ ಯು.ಆರ್ ಅನಂತಮೂರ್ತಿಯರ ಹೊರತಾಗಿ ಇನ್ನಾರೂ ಖಚಿತ ಉತ್ತರ ಹೇಳಲಾರರೇನೋ! ತಮ್ಮ ಅಧಿಕಾರದ ಅವಧಿಯಲ್ಲಿ ಆಸ್ತಿ, ಮದ್ಯ, ಮಾನಿನಿಯರ ಬಗ್ಗೆ ಸಾಮಾಜಿಕ ಮರ್ಯಾದೆ ಮೀರಿ ಮಾತಾಡುತ್ತಾ ಸಮಾಜವಾದಿಗಳ ಮುಜುಗರಕ್ಕೂ ಜನರ ಜಿಗುಪ್ಸೆಗೂ ಕಾರಣರಾಗಿದ್ದ ಅವರು, ಕೊನೆಗೆ ಜನಪ್ರೀತಿ ಕಳೆದುಕೊಂಡು ನಂತರದ ಚುನಾವಣೆಯಲ್ಲಿ ಆಘಾತಕಾರಿ ಸೋಲನ್ನು ಅನುಭವಿಸಿ ಈ ಲೋಕದಿಂದಲೇ ನಿರ್ಗಮಿಸಬೇಕಾಯಿತು. ಅಂದ ಮಾತ್ರಕ್ಕೆ ರಾಜ್ಯದ ಸಮಾಜವಾದಿ ಚಳುವಳಿಗೆ ಅವರ ಕೊಡುಗೆಯನ್ನು ನಾವು ಮರೆಯುವಂತಿಲ್ಲ

–ಡಿಎಸ್ಸೆನ್

ಜೆ. ಹೆಚ್. ಪಟೇಲರು ನನ್ನ ಅಣ್ಣನಾಗಿದ್ದು, ನನ್ನ ಈ ಬರಹ ಸ್ವಲ್ಪ ಮಟ್ಟಿಗೆ ವ್ಯಕ್ತಿಗತವಾಗಿದ್ದರೆ ದಯವಿಟ್ಟು ಕ್ಷಮಿಸಬೇಕು. ನಾನೂ ಸಮಾಜವಾದಿ ಪಕ್ಷದ ಕಾರ್ಯಕರ್ತನಾಗಿ, ಅವರ ಒಡನಾಡಿಯೂ ಆಗಿದ್ದೆ. ಪಟೇಲರು ತಮ್ಮ ಪ್ರೌಢಶಾಲೆಯ ದಿನಗಳಲ್ಲಿಯೇ ಸಮಾಜವಾದದ ಪ್ರಭಾವಕ್ಕೆ ಒಳಗಾಗಿದ್ದರು. ಅವರು 1947ರಲ್ಲಿ ಸೆಪ್ಟೆಂಬರ್ ತಿಂಗಳ 1ನೇ ತಾರೀಖು ಮೈಸೂರು ಮಹಾರಾಜರ ವಿರುದ್ಧ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕರೆ ಕೊಟ್ಟಿದ್ದ 'ಮೈಸೂರು ಚಲೋ' ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

ನಮ್ಮ ಊರಾದ ಕಾರಿಗನೂರು ಅಂದಿನ ಚಳುವಳಿಗೆ ಒಂದು ಕೇಂದ್ರವಾಗಿತ್ತು. ನಮ್ಮ ಈ ಊರಿದ್ದ ಚನ್ನಗಿರಿ ತಾಲ್ಲೂಕು ಆ ಚಳುವಳಿಯಲ್ಲಿ ತುಂಬಾ ಉತ್ಸಾಹದಿಂದ ಪಾಲ್ಗೊಂಡಿತ್ತು. ಸೆಪ್ಟೆಂಬರ್ 3ರಂದು ಚನ್ನಗಿರಿ ನಗರದಲ್ಲಿ ಈ ಸತ್ಯಾಗ್ರಹ ಕಾಂಗ್ರೆಸ್ ಬಾವುಟದ ಮೆರವಣಿಗೆಯೊಂದಿಗೆ ಪ್ರಾರಂಭವಾಯಿತು. ನಾನು ಬಾವುಟವನ್ನು ಹಿಡಿದುಕೊಂಡಿದ್ದೆ. ಪೋಲೀಸ್‌ನವರು ನಮ್ಮ ಮೇಲೆ ದಾಳಿ ಮಾಡಿ ಸಭೆಯನ್ನು ಚೆಲ್ಲಾಪಿಲ್ಲಿಯಾಗುವಂತೆ ಹೊಡೆದರು. ನಾಯಕತ್ವ ವಹಿಸಿದ್ದ ಜೆ.ಹೆಚ್. ಪಟೇಲ್

ತಾಲ್ಲೂಕು ಕಛೇರಿಯ ಮೇಲೆ ಬಾವುಟವನ್ನು ಹಾರಿಸಲು ಪ್ರಯತ್ನ ಮಾಡಿದರು. ಆಗ ಅವರನ್ನ ಸೆರೆ ಹಿಡಿದು ಕೈಗೆ ಕೋಳ ತೊಡಿಸಿ, ಇನ್ನೂ ಹಲವರನ್ನು ಕೂಡಿಸಿಕೊಂಡು ಶಿವಮೊಗ್ಗದ ಕಡೆಗೆ ಹೋದರು. ಶಿವಮೊಗ್ಗದಲ್ಲಿ ಅವರನ್ನು ಎರಡು ದಿನ ಜಿಲ್ಲಾ ಕಾರಾಗೃಹದಲ್ಲಿ ಇಟ್ಟು, ಮುಂದೆ ಮಂಡಗದ್ದೆ ಕಾರಾಗೃಹಕ್ಕೆ ರವಾನಿಸಿದರು. ಅವರಿಗೆ ಮೂರು ತಿಂಗಳು ಸೆರೆಮನೆ ವಾಸವನ್ನು ಕೋರ್ಟ್ ವಿಧಿಸಿತ್ತು. ಅವರ ರಾಜಕೀಯ ಜೀವನ ಸ್ವಾತಂತ್ರ್ಯ ಹೋರಾಟ(ಮೈಸೂರು ಅರಸರ ವಿರುದ್ಧ) ಕಾರಾಗೃಹವಾಸದಿಂದ ಪ್ರಾರಂಭವಾಯಿತು. ಆಗ ಅವರಿಗೆ 18 ವರ್ಷ ತುಂಬಿರಲಿಲ್ಲ.

ಅವರು ಹುಟ್ಟಿದ್ದು, 1 ಅಕ್ಟೋಬರ್ 1930ರಲ್ಲಿ. ಅವರ ವಿದ್ಯಾಭ್ಯಾಸ ಇಂಟರ್‌ಮೀಡಿಯೆಟ್‌ವರೆಗೆ; ಅಂದರೆ 1950ರವರೆಗೆ, ದಾವಣಗೆರೆಯಲ್ಲಿಯೇ ನಡೆಯಿತು. ಇಂಟರ್‌ಮೀಡಿಯೆಟ್‌ನಲ್ಲಿ ವಿಜ್ಞಾನದ ವಿದ್ಯಾರ್ಥಿಯಾಗಿದ್ದ ಅವರು, ರಾಜಕೀಯ ಜೀವನವನ್ನು ಆಯ್ಕೆ ಮಾಡಿದ್ದರಿಂದ ಬಿ.ಎ. ತರಗತಿ ಓದುವುದು ಹೆಚ್ಚು ಸೂಕ್ತವೆಂದು ಮೈಸೂರು ಮಹಾರಾಜ ಕಾಲೇಜಿನಲ್ಲಿ ಪ್ರವೇಶವನ್ನು ಪಡೆದರು. ಅವರ ಮಹಾರಾಜ ಕಾಲೇಜಿನ ವ್ಯಾಸಂಗ ಬಹುಮಟ್ಟಿಗೆ ಅವರ ವ್ಯಕ್ತಿತ್ವವನ್ನು ರೂಪಿಸಿತು ಎಂದು ನನ್ನ ಗ್ರಹಿಕೆ.

ಮೊದಲನೆಯ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಜಯಪ್ರಕಾಶ್ ನಾರಾಯಣ್‌ರವರು ಸಮಾಜವಾದಿ ಪಕ್ಷದ ನಾಯಕರಾಗಿ, ಚುನಾವಣಾ ಪ್ರಚಾರಕ್ಕೆ ಮೈಸೂರಿಗೆ ಆಗಮಿಸಿದ್ದರು. ಅದು 1951ನೇ ಇಸವಿ. ಜೆ. ಹೆಚ್. ಪಟೇಲರ ಜೀವನದಲ್ಲಿ ಹೊಸ ತಿರುವು ನೀಡಿದ ಒಂದು ಕಾಲಘಟ್ಟವದು. ತದನಂತರದಲ್ಲೇ ಕಾಗೋಡು ಸತ್ಯಾಗ್ರಹ ಆರಂಭವಾಗಿ ಡಾ. ಲೋಹಿಯಾ ಅವರು ಕರ್ನಾಟಕಕ್ಕೆ ಬಂದು ಆ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದು, ಸಮಾಜವಾದಿ ತತ್ವದಲ್ಲಿ ವಿಶ್ವಾಸವಿಟ್ಟಿದ್ದ ಎಲ್ಲರಿಗೂ ಒಂದು ಹೊಸ ಹುರುಪನ್ನು ನೀಡಿತು. ಈ ಸಮಾಜವಾದದ ಗುಂಗಿನಲ್ಲಿಯೇ ಪಟೇಲರು 1954ರವರೆಗೆ ಬೆಳಗಾವಿಯಲ್ಲಿ ಅಭ್ಯಾಸ ಮಾಡಿ ಎಲ್.ಎಲ್.ಬಿ. ಪದವಿ ಪಡೆದರು. 1954ರ ಮೇನಲ್ಲಿ ಸರ್ವಮಂಗಳ ಅವರ ಜೊತೆಗೆ ವಿವಾಹವಾಯಿತು. ಅದೇ ವರ್ಷ ಪ್ರಸಿದ್ಧ ವಕೀಲರಾಗಿದ್ದ ಎಸ್. ವಿ. ಕೃಷ್ಣಮೂರ್ತಿರಾಯರ ಕಛೇರಿಯಲ್ಲಿ ವಕೀಲಿ ವೃತ್ತಿ ಅನುಭವ ಪಡೆದರು. ಕೃಷ್ಣಮೂರ್ತಿ ಅವರು ಕೊನೆಯ ತನಕ ಜೆ. ಹೆಚ್. ಪಟೇಲರ ಬಗ್ಗೆ ಅತ್ಯಂತ ಅಭಿಮಾನ ಉಳ್ಳವರಾಗಿದ್ದರು.

1952ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸಿಡಿದು ಹೊರಗಡೆ ಬಂದು ಚನ್ನಗಿರಿ ತಾಲ್ಲೂಕಿನಿಂದ-ಕಾಂಗ್ರೆಸ್ ಸೋಲಿಸಿ, ಶಾಸಕರಾಗಿ ಚುನಾಯಿತರಾಗಿದ್ದ ಎಲ್. ಸಿದ್ದಪ್ಪನವರ ಆಯ್ಕೆಗೆ ನಮ್ಮ ತಂದೆಯವರ ಬೆಂಬಲ ಅತ್ಯಂತ ನಿರ್ಣಾಯಕವಾಗಿತ್ತು. ಅಂದಿನಿಂದ ವಿರೋಧ ಪಕ್ಷಗಳ ಜೊತೆಗೆ ಗುರುತಿಸಿಕೊಂಡ ಪಟೇಲರು ಕಾಂಗ್ರೆಸ್‌ಗೆ ಸದಾ ವಿರೋಧವನ್ನು ವ್ಯಕ್ತಮಾಡುತ್ತಲೇ ಬಂದರು. 1955ರಲ್ಲಿ ಶಿವಮೊಗ್ಗದಲ್ಲಿ ತನ್ನ ಸಹಪಾಠಿ ಮಿತ್ರ ಶಂಕರನಾರಾಯಣ ಭಟ್ಟರ ಜೊತೆಗೆ ವಕೀಲಿ ವೃತ್ತಿಯನ್ನು ಆರಂಭಿಸಿದರು. ಅವರ ವಕೀಲಿ ವೃತ್ತಿ ಅವರ ಜೀವನದಲ್ಲಿ ಪ್ರಮುಖವಾಗದೇ ರಾಜಕಾರಣಕ್ಕೆ ಪೂರಕವಾಗಿಯೇ ಇತ್ತು. 1957ರಲ್ಲಿ ಅವರು ಚನ್ನಗಿರಿ ತಾಲ್ಲೂಕಿನ ಮುಂದಾಳುಗಳಾಗಿದ್ದ ಪಾಪಣ್ಣನವರನ್ನು ವಿಧಾನಸಭೆಗೆ ಸ್ಪರ್ಧಿಸಲು ಬೆಂಬಲಿಸಿದರು.

ವಿಧಿವಶಾತ್ ಚುನಾವಣಾ ದಿನ ಬರುವುದಕ್ಕೆ ಮುಂಚೆ ಪಾಪಣ್ಣನವರು ತೀರಿಕೊಂಡರು.

1957ರ ನಂತರ ಸಮಾಜವಾದಿ ಪಕ್ಷದ ಹೋರಾಟದಲ್ಲಿ ಶಾಂತವೇರಿ ಗೋಪಾಲಗೌಡರ ಜೊತೆಗೂಡಿದರು. ಶಾಂತವೇರಿ ಗೋಪಾಲ ಗೌಡರು ರಾಜ್ಯದ ಎರಡನೇ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾಗಿ ಕರ್ನಾಟಕ ರಾಜ್ಯಾದ್ಯಂತ ಪ್ರಮುಖ ಜನ ನಾಯಕರೆಂದು ಗುರುತಿಸಲ್ಪಟ್ಟಿದ್ದರು. 1960ರ ತಾಲ್ಲೂಕು ಬೋರ್ಡ್ ಚುನಾವಣೆ ಜೆ.ಹೆಚ್. ಪಟೇಲರನ್ನು ಚುನಾವಣಾ ರಾಜಕೀಯಕ್ಕೆ ಧುಮುಕಿಸಿತು. ಆಗ ಬಸವಾಪಟ್ಟಣ ಕ್ಷೇತ್ರದಿಂದ ಚನ್ನಗಿರಿ ತಾಲ್ಲೂಕು ಬೋರ್ಡ್‌ಗೆ ಚುನಾಯಿತರಾದರು. ಈ ಮಧ್ಯೆ ಕಾಗೋಡು ಸತ್ಯಾಗ್ರಹ ಒಂದು ರಾಷ್ಟ್ರೀಯ ಸುದ್ದಿಯಾಗಿ, ಭಾರತದ ಎಲ್ಲಾ ಕಡೆಗೂ ಲೋಹಿಯಾ ಅವರು 'ಉಳುವವನಿಗೆ ಭೂಮಿ' ಚಳುವಳಿಯನ್ನು ಪ್ರಾರಂಭಿಸಿದ್ದರು. ಆಗ ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿ ಪಕ್ಷದ ಬೆಳವಣಿಗೆ ತುಂಬಾ ಪರಿಣಾಮಕಾರಿಯಾಗಿತ್ತು. ರಾಜ್ಯದಲ್ಲಿ ಸಮಾಜವಾದಿ ಪಕ್ಷ ನಡೆಸಿದ ಭೂ ಚಳುವಳಿಗಳಲ್ಲಿ ಜೆ.ಹೆಚ್. ಪಟೇಲರು 58ರಲ್ಲಿ ಎರಡು ಸಾರಿ ಸೆರೆಮನೆ ವಾಸ, ಒಮ್ಮೆ ಬಳ್ಳಾರಿಯಲ್ಲಿ ಮತ್ತೊಮ್ಮೆ ಶಿವಮೊಗ್ಗದಲ್ಲಿ ಅನುಭವಿಸಿದ್ದರು.

1962ರ ಸಾರ್ವತ್ರಿಕ ಚುನಾವಣೆಯಲ್ಲಿ ಜೆ. ಹೆಚ್. ಪಟೇಲರು ಅತ್ಯಧಿಕ ಬಹುಮತದಿಂದ ಶಿವಮೊಗ್ಗ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದರು. ಅವರು ಲೋಕಸಭೆಯಲ್ಲಿ ಪ್ರಥಮ ಬಾರಿಗೆ ಕನ್ನಡದಲ್ಲಿ ಮಾತನಾಡಿದ್ದು, ನಂತರ ಗೃಹಮಂತ್ರಿಗಳಾಗಿದ್ದ ವೈ. ವಿ. ಚವ್ಹಾಣರೊಡನೆ ಮಹಾಜನ ಆಯೋಗದ ಸಂಬಂಧವಾಗಿ ಕರ್ನಾಟಕದ ಪರವಾಗಿ ವಾಗ್ಯುದ್ಧ ನಡೆಸಿದ್ದು, ಕರ್ನಾಟಕದಲ್ಲಿ ಎಲ್ಲರ ಮನೆಮಾತಾಗಿತ್ತು. ಅವರು ಬಹು ಜನಪ್ರಿಯ ಲೋಕಸಭಾ ಸದಸ್ಯರಾಗಿದ್ದರು. ಡಾ. ಲೋಹಿಯರವರ ಅಚ್ಚುಮೆಚ್ಚಿನ ಸಂಗಾತಿಯಾಗಿದ್ದರು. ಡಾ. ಲೋಹಿಯವರು ಲೋಕಸಭೆಗೆ ಒಂದು ಪಕ್ಕದಲ್ಲಿ ಜಾರ್ಜ್ ಫರ್ನಾಂಡೀಸ್‌ರು, ಇನ್ನೊಂದು ಪಕ್ಕದಲ್ಲಿ ಜೆ. ಹೆಚ್. ಪಟೇಲರು, ಇವರಿಬ್ಬರ ಹೆಗಲ ಮೇಲೆ ಕೈ ಹಾಕಿಕೊಂಡೇ ಲೋಕಸಭೆ ಪ್ರವೇಶಿಸುತ್ತಿದ್ದರಂತೆ.

ಜೆ. ಹೆಚ್. ಪಟೇಲರ ಮುಂದಿನ ರಾಜಕೀಯ ಇತಿಹಾಸ ಎಲ್ಲರಿಗೂ ಗೊತ್ತಿರುವುದು. ಆದರೆ ಅವರ ಬಗ್ಗೆ ಕೆಲವು ಮಾತುಗಳನ್ನು ಆಡದಿದ್ದರೆ, ಇದು ಸಂಪೂರ್ಣವಾಗುವುದಿಲ್ಲ. ಅವರು ಕೆಲವು ವಿಶಿಷ್ಟ ಗುಣಗಳನ್ನು ಹೊಂದಿದ್ದರು. ತಂದೆ-ತಾಯಿ, ಸೋದರ, ಸೋದರಿಯರು, ನಮ್ಮ ಊರು ಇವುಗಳ ಬಗ್ಗೆ ಅತೀವವಾದ ಪ್ರೀತಿಯಿತ್ತು. ಅವರು ತಮ್ಮ ಧರ್ಮಪತ್ನಿ ಸರ್ವಮಂಗಳಾ ದೇವಿಯನ್ನು ಅತ್ಯಂತ ಗಾಢವಾಗಿ ಪ್ರೀತಿಸುತ್ತಿದ್ದರು. ನನ್ನ ಅತ್ತಿಗೆಯವರು ಮಾನಸ ಸರೋವರ ನೋಡಲು ಹೋಗಿ ತೀವ್ರವಾದ ದೈಹಿಕ ಯಾತನೆಗೆ ಒಳಗಾಗಿ ಉಳಿದು ಬಂದಿದ್ದೇ ಹೆಚ್ಚಾಗಿತ್ತು. ಆಗ ಅವರ ಮುಖ್ಯಮಂತ್ರಿ ಪದವಿ ಕೊನೆಗೊಂಡಿತ್ತು. ತನ್ನ ಹೆಂಡತಿಗಾದ ನೋವನ್ನು ಅವರು ಎಷ್ಟು ತೀವ್ರವಾಗಿ ಅನುಭವಿಸಿದರು ಎಂಬುದು ಕುಟುಂಬದವರಿಗೆ ಮಾತ್ರ ಗೊತ್ತಿತ್ತು. ಆದರೆ ಪಟೇಲರು ಮಹಾ ರಸಿಕರೆಂಬ, ಸ್ತ್ರೀ ಲಂಪಟರೆಂಬ ಟೀಕೆಗಳಿವೆ. ನಿಜ, ಅವರು ಶ್ರೀರಾಮನ ಭಕ್ತನಾಗಿರದೆ, ಶ್ರೀಕೃಷ್ಣನ ಭಕ್ತರಾಗಿದ್ದರು. ಅವರನ್ನು ಅರ್ಥ ಮಾಡಿಕೊಂಡವರಿಗೆ ಗೊತ್ತು, ಅವರಲ್ಲಿ ರಸಿಕತೆಯಿತ್ತು; ಆದರೆ ಅವರು ವಿಷಯ ಲಂಪಟ ಅಥವಾ ವ್ಯಭಿಚಾರಿಯಾಗಿದ್ದರೆನ್ನುವುದು ತಪ್ಪಾಗುತ್ತದೆ. ಮದ್ಯವನ್ನು

ಆನಂದಿಸುತ್ತಿದ್ದರು. ಆದರೆ ಅದಕ್ಕೆ ಬಲಿಯಾಗಿರಲಿಲ್ಲ.


ಪಟೇಲರ ತುರ್ತು ಪರಿಸ್ಥಿತಿಯ ವಿಧ್ವಂಸಕ ಚಟುವಟಿಕೆ ಬಗ್ಗೆ ಎರಡು ಮಾತನ್ನು ನಾನು ಹೇಳಲೇಬೇಕು. ಒಂದು ಅವರು ಯಾವ ಗಂಡಾಂತರಕ್ಕೂ ಹೆದರುವ ಜಾಯಮಾನದವರಾಗಿರಲಿಲ್ಲ. ಆ ತುರ್ತು ಪರಿಸ್ಥಿತಿಯ ಪೂರ್ಣಾವಧಿಯಲ್ಲಿ ಒಂದಲ್ಲ ಒಂದು ಜೈಲಿನಲ್ಲಿ ಸೆರೆಮನೆವಾಸ ಮಾಡುತ್ತಿದ್ದರು. ಒಮ್ಮೆ ಶಿವಮೊಗ್ಗ ಜೈಲಿನಿಂದ ಬಿಡುಗಡೆ ಹೊಂದಿ ಹೊರಗಡೆ ಬಂದಿದ್ದರು. ಪುನಃ ಅವರನ್ನು ದಸ್ತಗಿರಿ ಮಾಡುತ್ತಾರೆ;ಮುನ್ನೆಚ್ಚರಿಕೆ ಕಾಯ್ದೆ (Preventive detention) ಪ್ರಕಾರ ಪುನಃ ಜೈಲಿಗೆ ಕಳುಹಿಸುತ್ತಾರೆ ಎಂದು ಎಲ್ಲರಿಗೂ ಗೊತ್ತಿತ್ತು. ಆದರೂ ಅವರು ಆ ಬಿಡುವಿನಲ್ಲಿ ದಾವಣಗೆರೆಗೆ ಬಂದಿದ್ದರು. ನಾನು ಆಗಲೇ ಕಾನೂನು ಮಹಾವಿದ್ಯಾಲಯದ ಪ್ರಾಚಾರ್ಯನಾಗಿದ್ದೆ. ಅವರು ಒಂದು ರಾತ್ರಿ ನನ್ನ ಮನೆಯಲ್ಲಿ ಉಳಿದಿದ್ದರು. ಆಗ ನನಗೆ ಗೊತ್ತಾಯಿತು, ಅಣ್ಣನವರು ಮೊದಲೇ ಆಯೋಜಿಸಿದಂತೆ ಬೀರೂರು ಸಮೀಪ ರೈಲ್ವೆ ಹಳಿಗೆ ಸಿಡಿಮದ್ದನ್ನು ಇಟ್ಟು ಸ್ಫೋಟಿಸುವವರಿದ್ದಾರೆ ಎಂದು. ಬೆಳಿಗ್ಗೆ ನಮ್ಮದೇ ಕಾರು ಹೊರಟು ನಿಂತಿತ್ತು. ಅದರಲ್ಲಿ ಎಲ್ಲಾ ಸಲಕರಣೆಯನ್ನು ಇಟ್ಟುಕೊಂಡಿದ್ದರು. ನಾನು ತಡೆಯಲಾರದೇ ಅವರಿಗೆ ಒಂದು ಚಿಕ್ಕ ಪತ್ರವನ್ನು ಬರೆದೆ. ಅದರಲ್ಲಿ ಬಹಳ ಸಂಕ್ಷಿಪ್ತವಾಗಿ "ನಾವು ಸ್ವಾತಂತ್ರ್ಯವನ್ನು ಪಡೆದದ್ದು ಅಹಿಂಸಾ ಮಾರ್ಗದಿಂದ, ಅದು ಗಾಂಧಿ ಮಾರ್ಗ. ಇಂದು ಏಕೆ ಹಿಂಸಾ ಮಾರ್ಗದಲ್ಲಿ ತೊಡಗಿದ್ದೀರಿ? ಇದು ಸರಿಯಲ್ಲ" ಎಂದು ಬರೆದಿದ್ದೆ. ಅವರು ಕಾರಿನಲ್ಲಿ ಕೂತಾಗ ಈ ಪತ್ರವನ್ನು ಕೊಟ್ಟೆ. ಅವರು ಓದಿಕೊಂಡು ಒಂದು ತರಹ ನಗೆಯಿಂದ ನನ್ನನ್ನು ಉದ್ದೇಶಿಸಿ, "ರೀ, ನಿಮ್ಮ ಈ ಬೋಧನೆಯನ್ನ ನಿಮ್ಮ ತರಗತಿಗಳಲ್ಲಿ ಬಳಸಿ, ನನ್ನ ಮೇಲೆ ಬೇಡ' ಎಂದು ಹೇಳಿ ಅವರ ಕಾರ್ಯಕ್ಕೆ ಹೊರಟುಹೋದರು. ನಾನು ಈ ಪ್ರಸಂಗವನ್ನು ಬೇಕಂತಲೇ ನೀಡುತಿದ್ದೇನೆ.

ಪಟೇಲರು ಅವರ ಅಧಿಕಾರವನ್ನು ಮಂತ್ರಿಯಾಗಿದ್ದಾಗ ಆಗಲೀ, ಮುಖ್ಯಮಂತ್ರಿಗಳಾಗಿದ್ದಾಗಲೇ ಆಗಲೀ, ಕುಟುಂಬಕ್ಕಾಗಿ ಅಧಿಕಾರ ದುರುಪಯೋಗ ಮಾಡಲಿಲ್ಲ. ಯಾವ ಮಕ್ಕಳನ್ನೂ ಚುನಾವಣೆಗೆ ನಿಲ್ಲಿಸಲು ಒಪ್ಪಲಿಲ್ಲ. ಆದರೆ ನನಗೆ ಎರಡು ಬಾರಿ ಲೋಕಸಭೆಗೆ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟಿದ್ದರು. ಆದರೆ ನನ್ನ ಪ್ರಯತ್ನ ಸಫಲವಾಗಲಿಲ್ಲ. ಅದು ಅವರಿಗೆ ನೋವನ್ನು ಉಂಟುಮಾಡಿತ್ತು. ಅವರು ಸದಾ ಸ್ನೇಹಿತರೊಡನೆ ಮತ್ತು ಕುಟುಂಬದೊಡನೆ ಅತ್ಯಂತ ಮನಃಪೂರ್ವಕವಾಗಿ ಸಂತೋಷ ಕೂಟಗಳಲ್ಲಿ ಭಾಗವಹಿಸುತ್ತಿದ್ದರು. ಮಕ್ಕಳ ಮೇಲಿನ ಪ್ರೀತಿಗಿಂತ ಮೊಮ್ಮಕ್ಕಳ ಮೇಲಿನ ಪ್ರೀತಿ ಅಗಾಧವಾಗಿತ್ತು. ಅವರು ಯಾರನ್ನೂ ಶಾಶ್ವತವಾಗಿ ದ್ವೇಷಿಸುತ್ತಿರಲಿಲ್ಲ. ಎಂತಹ ವಿರೋಧಿಗಳನ್ನೂ ವಿಶ್ವಾಸದಿಂದ ಕಾಣುತ್ತಿದ್ದರು. ಅವರು ಒಟ್ಟು ಜೀವನ ಪ್ರೇಮಿಯಾಗಿದ್ದರು.

–ಪ್ರೊ. ಎಸ್.ಎಚ್. ಪಟೇಲ್

(ಅಕ್ಟೋಬರ್, 2013)

ಹುಟ್ಟು ಹೋರಾಟಗಾರ ಎಂ. ನಾಗಪ್ಪ



ಕರ್ನಾಟಕವು ಸಮಾಜವಾದಿ ಚಟುವಟಿಕೆಗಳಿಂದ ತುಂಬಿಹೋಗಿದ್ದ ಕಾಲ. ಸಮಾಜವಾದಿ ನಾಯಕರು ಕರ್ನಾಟಕದ ರಾಜಕಾರಣದಲ್ಲಿ ಸಕ್ರಿಯರಾಗಿದ್ದ ಕಾಲವದು. ತೀರ್ಥಹಳ್ಳಿಯಿಂದ ಶಾಂತವೇರಿ ಗೋಪಾಲಗೌಡರು, ಸೊರಬದಿಂದ ಬಂಗಾರಪ್ಪ, ಮೈಸೂರಿನಿಂದ ಅಜೀಜ್ ಸೇಠ್, ಹೊನ್ನಾಳಿಯಿಂದ ಹಾಲಪ್ಪ, ಶಿಕಾರಿಪುರದಿಂದ ಬಸವಣ್ಣೆಪ್ಪ ಮತ್ತು ರಾಯಚೂರಿನಿಂದ ಎಂ. ನಾಗಪ್ಪನವರು ಇವರೆಲ್ಲ ಕಾಂಗ್ರೆಸ್ ಅಲೆಯ ನಡುವೆ ವಿಧಾನ ಸಭೆಗೆ ಶಾಸಕರಾಗಿ ಆರಿಸಿಬಂದರು. ಇವರಲ್ಲಿ ಎಂ. ನಾಗಪ್ಪನವರು ರಾಯಚೂರು ಮಾತ್ರವೇ ಅಲ್ಲ, ಹೈದ್ರಾಬಾದ್ ಕರ್ನಾಟಕವನ್ನು ಪ್ರತಿನಿಧಿಸಿದ ಖ್ಯಾತ ಸಮಾಜವಾದಿ ನಾಯಕರು.

1927ರಲ್ಲಿ ರಾಯಚೂರು ತಾಲೂಕಿನ ಮಟಮಾರಿ ಗ್ರಾಮದ ರೈತ ಕುಟುಂಬವೊಂದರಲ್ಲಿ ಹುಟ್ಟಿ ಬೆಳೆದ ನಾಗಪ್ಪನವರಿಗೆ ಬಾಲ್ಯದಲ್ಲಿ ಓದಿನ ತೀವ್ರತೆ ಎಷ್ಟಿತ್ತೆಂದರೆ, ಅದಕ್ಕಾಗಿ ಅವರು ಮನೆಯವರ ಮಾತನ್ನು ಮೀರಿ ಚಿಕ್ಕ ವಯಸ್ಸಿನಲ್ಲಿ ಪಾಟಿ ಚೀಲ ಹೆಗಲಿಗೇರಿಸಿ ಸ್ವಗ್ರಾಮ ತೊರೆದು ರಾಯಚೂರು ಸೇರಿದರು. ಶಾಲೆಯಲ್ಲಿ ಓದುತ್ತಾ ವ್ಯಾಸಂಗದ ಹಸಿವನ್ನು ಹಿಂಗಿಸಿಕೊಳ್ಳುತ್ತಿರುವಾಗಲೇ 'ಆರ್ಯ ಸಮಾಜ'ದ ಭಾಷಣಗಳಿಂದ ಆಕರ್ಷಿತರಾದರು. ಅದೇ ವೇಳೆಗೆ ಹೈದ್ರಾಬಾದ್ ನಿಜಾಮನ ಕಪಿಮುಷ್ಠಿಯಿಂದ ಬಿಡುಗಡೆಗೆ ಹಂಬಲಿಸುತ್ತಿದ್ದ ಹೈದ್ರಾಬಾದ್ ಪ್ರಾಂತ ವಿಮೋಚನಾ ಚಳುವಳಿಗೆ ಧುಮುಕಿದರು. ತಮ್ಮ ಕಾಲೇಜು ವಿದ್ಯಾರ್ಥಿ ಜೀವನವನ್ನು ಕಡೆಗಣಿಸಿ ನಿಂತರು. ನಿಜಾಮ ಸರಕಾರವನ್ನು ದುಃಸ್ವಪ್ನವಾಗಿ ಕಾಡಿದರು. ಭೂಗತರಾಗಿ ಉಳಿದು ವಿಧ್ವಂಸಕ ಕೃತ್ಯಗಳ ಮೂಲಕ ನಿಜಾಮ ಸತ್ತೆಗೆ ತಲೆನೋವಾದರು. 1947 ಆಗಸ್ಟ್ 14ರ ಮಧ್ಯರಾತ್ರಿ ರಾಯಚೂರಿನ ಸಾಥ್ ಕಛೇರಿಯ ಮೇಲೆ ಹಾರಾಡುತ್ತಿದ್ದ ನಿಜಾಮನ ಧ್ವಜವನ್ನು ಕಿತ್ತುಹಾಕಿ ಸ್ವತಂತ್ರ ಭಾರತದ ತ್ರಿವರ್ಣ ಧ್ವಜವನ್ನು ಹಾರಿಸಿದರು. ಈ ಸಾಹಸದಲ್ಲಿ ಸ್ವಲ್ಪವೇ ಎಡವಟ್ಟಾಗಿದ್ದರೂ ನಾಗಪ್ಪನವರು ಜೀವ ಸಹಿತ ಉಳಿಯುವುದು ಕಷ್ಟವಿತ್ತು.

ಮುಂದೆ ನಿಜಾಮ ಸೋಲೊಪ್ಪಿ ಹೈದ್ರಾಬಾದ್ ಪ್ರಾಂತವು ಸ್ವತಂತ್ರ ಭಾರತದಲ್ಲಿ ಸೇರಿಹೋದ ಮೇಲೆ ಉಸ್ಮಾನಿಯ ವಿಶ್ವವಿದ್ಯಾಲಯದಿಂದ ಬಿ.ಎ. ಮತ್ತು ಕಾನೂನು ಪದವಿ ಪೂರ್ಣಗೊಳಿಸಿ ರಾಯಚೂರಿನಲ್ಲಿ ವಕೀಲರಾಗಿ ನಿಂತ ನಾಗಪ್ಪನವರು, ಸ್ವಾತಂತ್ರ್ಯ ಹೋರಾಟದಿಂದ ಸಮಾಜವಾದಿ ಹೋರಾಟಕ್ಕೆ ತಮ್ಮ ಹೋರಾಟದ ಬದುಕನ್ನು ಬದಲಿಸಿಕೊಂಡರು. ಡಾ. ರಾಮಮನೋಹರ ಲೋಹಿಯಾ ಅವರ 'ಮ್ಯಾನ್‌ಕೈಂಡ್' ಪತ್ರಿಕೆಯನ್ನು ಓದುತ್ತ ಬೆಳೆದ ನಾಗಪ್ಪನವರು ತಮ್ಮೊಳಗೆ ಸಮಾಜವಾದದ ಬೇರುಗಳನ್ನು ಗಟ್ಟಿಗೊಳಿಸುತ್ತಲೇ ಬಂದರು.

ಶ್ರಮಜೀವಿಗಳ ನ್ಯಾಯಕ್ಕಾಗಿ ಅಹೋರಾತ್ರಿ ಹೋರಾಡುತ್ತಾ ಬಂದುದು ನಾಗಪ್ಪನವರ ಜೀವನದ ವಿಶೇಷತೆ. 1948 ರಿಂದ 1968ರ ವರೆಗೆ ರಾಯಚೂರು ಪುರಸಭೆ ನೌಕರರ ಸಂಘದ ಅಧ್ಯಕ್ಷರಾಗಿ ದುಡಿದ ಅವರು, ರೈಲ್ವೇ ಮತ್ತು ರಸ್ತೆ ಸಾರಿಗೆ ನೌಕರರ ಸಂಘದ ಅಧ್ಯಕ್ಷರಾಗಿಯೂ ಶ್ರಮಿಕ ಬಂಧುಗಳ ಹಿತಕ್ಕೆ ಹೋರಾಡಿದರು. ರಾಯಚೂರು ಜಿಲ್ಲಾ ಗುಮಾಸ್ತರ ಸಂಘದ ಸ್ಥಾಪಕ ಅಧ್ಯಕ್ಷರಾದ ಅವರು ಗಂಜ್ ಹಮಾಲರ ಸಂಘದ ನೇತಾರರಾಗಿಯೂ ದುಡಿಯುವ ವರ್ಗದ ನ್ಯಾಯಕ್ಕಾಗಿ ಹೋರಾಟವನ್ನು ಮಾಡಿದರು.

1951ರಲ್ಲಿ ಕಾನೂನು ವ್ಯಾಸಂಗವನ್ನು ಮಾಡುತ್ತಲೇ ರಾಯಚೂರು ಪುರಸಭೆಗೆ ಸ್ಪರ್ಧಿಸಿ ಆರಿಸಿಬರುವ ಮೂಲಕ ತಮ್ಮ ರಾಜಕೀಯ ಜೀವನವನ್ನು ತುಳಿತಕ್ಕೆ ಒಳಗಾದವರ ಪರವಾಗಿ ಆರಂಭಿಸಿದ ನಾಗಪ್ಪನವರು, ಡಾ. ಲೋಹಿಯಾ ಅವರ 'ಸಂಯುಕ್ತ ಸಮಾಜವಾದಿ ಪಕ್ಷ'ದಿಂದ ಚುನಾವಣೆಗೆ ನಿಂತು ರಾಯಚೂರಿನಿಂದ ವಿಧಾನ ಸಭೆಗೆ ಆರಿಸಿಬಂದರು. ಅವರು ಶಾಸಕರಾಗಿದ್ದ ಅವಧಿ(1967–71) ಕರ್ನಾಟಕದ ರಾಜಕೀಯ ಇತಿಹಾಸದಲ್ಲಿಯೇ ಮಹತ್ವದ್ದು. ಇಂದು ನಿಧಾನಸಭೆಯೆಂದು ಛೇಡಿಸಿಕೊಳ್ಳುತ್ತಿರುವ ವಿಧಾನ ಸಭೆಯ ಕಲಾಪಗಳಿಗೆ ಮಿಂಚಿನ ಸಂಚಾರವನ್ನು ತಂದವರು ನಾಗಪ್ಪನವರು. ಶಾಂತವೇರಿ ಗೋಪಾಲಗೌಡರ ಶಿಷ್ಯರಾಗಿ ಅವರ ಅನುಪಸ್ಥಿತಿಯಲ್ಲಿ ಅವರ ಸ್ಥಾನವನ್ನು ಸಮರ್ಥವಾಗಿ ತುಂಬಿಕೊಟ್ಟ ಹೆಗ್ಗಳಿಕೆ ಅವರದು. ತಮ್ಮ ಅದ್ವಿತೀಯ ಕಾನೂನು ಪಾಂಡಿತ್ಯದಿಂದ, ಸಂವಿಧಾನ ಕಲಮುಗಳ ಹಾಗೂ ವಿಧಾನಮಂಡಲದ ಶಿಸ್ತು-ಸಂಹಿತೆಗಳ ತಲಸ್ಪರ್ಶಿ ಅಧ್ಯಯನದಿಂದ, ನಿರರ್ಗಳ ವಾಗ್ಝರಿಯಿಂದ ವಿಧಾನ ಸಭೆಯ ಘಟಾನುಘಟಿಗಳನ್ನು ನಡುಗಿಸಿಬಿಟ್ಟಿದ್ದರು. ವಿಧಾನ ಸಭೆಯಲ್ಲಿ ನಾಗಪ್ಪನವರು ಎದ್ದುನಿಂತರೆ ಸಭಾಧ್ಯಕ್ಷರ ಕಣ್ಣು-ಕಿವಿಯೆಲ್ಲಾ ಇವರ ಕಡೆಗೇ ಇರುತ್ತಿತ್ತು. ಕೇಳಿದವರನ್ನು ಪರವಶಗೊಳಿಸುವ ಭಾಷಾಶಕ್ತಿ, ತಿದ್ದುವ-ತಿವಿಯುವ ವೈಖರಿ ಇವರ ಮಾತಿಗಿತ್ತು. ಪಟ್ಟುಹಿಡಿದು ಮಾತನಾಡುವುದು, ಆಡಿದ್ದನ್ನು ಸಮರ್ಥಿಸಿಕೊಳ್ಳುವುದು ನಾಗಪ್ಪನವರ ಶೈಲಿ. 1967ರಿಂದ 1971ರ ಅವಧಿಯ ರಾಜ್ಯದ ಪ್ರಮುಖ ದಿನಪತ್ರಿಕೆಗಳನ್ನು ತಿರುವಿ ಹಾಕಿದರೆ ಸಾಕು, ಅವುಗಳ ತುಂಬೆಲ್ಲಾ ನಾಗಪ್ಪ ಅವರ ಗುಣಗಾನವೇ ತುಂಬಿಕೊಂಡಿದೆ.

ಕೃಷ್ಣಾ ಮೇಲ್ದಂಡೆಗೆ ಸರಕಾರವು ಸಕರಾತ್ಮಕವಾಗಿ ಸ್ಪಂದಿಸದೇ ಇದ್ದಾಗ, ಆಂಧ್ರದ ಗುಂಡಾಲ ಯೋಜನೆಯನ್ನು ಪ್ರತಿಭಟಿಸುವಾಗ, ಸರಕಾರದ ನೇಮಕಾತಿಯಲ್ಲಿ ಹೈದ್ರಾಬಾದ್ ಕರ್ನಾಟಕದಿಂದ ಸರಿಯಾದ ಪ್ರಾತಿನಿಧ್ಯ ಇಲ್ಲದಿದ್ದಾಗ, ಸರಕಾರ ಶಾಲೆ ಕಟ್ಟಿಸದೇ ಐ.ಬಿ. ಕಟ್ಟಿಸಲು ಮುಂದಾದಾಗ, ರೈತರಿಗೆ ಆಪತ್ಕಾಲದಲ್ಲಿ ಸರಕಾರ ನೆರವಾಗದೇ ಹೋದಾಗ, ರಾಷ್ಟ್ರದ ಸಮಗ್ರತೆಗೆ ಧಕ್ಕೆ ಬಂದಾಗ-ಹೀಗೆ ಹಲವು ಹತ್ತು ಕಾರಣಗಳಿಗೆ ಶ್ರೀ ನಾಗಪ್ಪನವರು ಸಕಾಲಿಕವಾಗಿ, ಸಮರ್ಥವಾಗಿ ದನಿ ಎತ್ತಿದ್ದಾರೆ, ಲೋಪಗಳಿಗೆ ಗುಡುಗಿದ್ದಾರೆ, ಆಳುವ ಸರಕಾರವನ್ನು ಪೇಚಿಗೆ ಸಿಲುಕಿಸಿದ್ದಾರೆ.

1969ರಲ್ಲಿ ಕಾಂಗ್ರೆಸ್ ಪಕ್ಷ ಇಬ್ಭಾಗವಾಗಿ ವೀರೇಂದ್ರ ಪಾಟೀಲರ ಸರ್ಕಾರ


ಅಲ್ಪಮತಕ್ಕೆ ಇಳಿದಾಗ ಗೋಪಾಲಗೌಡರ ನೇತೃತ್ವದ ಸಮ್ಮಿಶ್ರ ಸರ್ಕಾರವೊಂದರ ಪ್ರಯತ್ನವೊಂದನ್ನು ಅವರ ಅಭಿಮಾನಿಗಳು ನಡೆಸಿದರು. ಇದನ್ನು ಸ್ವತಃ ಗೋಪಾಲಗೌಡರೇ ತಮ್ಮ ತೀವ್ರ ಅನಾರೋಗ್ಯದ ಕಾರಣದಿಂದಾಗಿ ಒಪ್ಪದಿದ್ದಾಗ ಸೋಷಲಿಸ್ಟರೊಬ್ಬರನ್ನು ಉಪಮುಖ್ಯಮಂತ್ರಿಯಾಗಿ ಮಾಡುವ ಪ್ರಸ್ತಾಪ ಬಂದು ಆ ಸ್ಥಾನಕ್ಕೆ ಎಂ. ನಾಗಪ್ಪನವರ ಹೆಸರು ಪ್ರಸ್ತಾಪಕ್ಕೆ ಬಂತು. ಆಗ ಸರ್ಕಾರ ರಚನೆಯ ಮಾತುಕತೆ ನಡೆಸುತ್ತಿದ್ದ ಹಿರಿಯ ಕಾಂಗ್ರೆಸ್ ರಾಜಕಾರಣಿಯೊಬ್ಬರು ನಾಗಪ್ಪನವರು ಲಿಂಗಾಯತರಾಗಿರುವುದರಿಂದ ರಾಜಕೀಯ ಸಮೀಕರಣ ಸರಿಯಾಗಲಾರದು ಎಂದಾಗ ಗೋಪಾಲಗೌಡರು ನಾಗಪ್ಪನವರನ್ನು ಲಿಂಗಾಯತರೆಂದು ಗುರುತಿಸುವುದನ್ನು ತೀವ್ರವಾಗಿ ಪ್ರತಿಭಟಿಸಿದರು. ನಾಗಪ್ಪನವರ ಹಣೆಯ ಮೇಲಿನ ವಿಭೂತಿ ಲಾಂಛನ ಎಂದೂ ಜಾತೀಯ ಲಾಂಛನವಾಗಲಿಲ್ಲ ಎಂಬುದು ಅವರೊಂದಿಗೆ ಒಡನಾಡಿದ ಸರ್ವಧರ್ಮ ಮತ್ತು ಜಾತಿಗಳಿಗೆ ಸೇರಿದ ವಿಶಾಲ ಬಳಗಕ್ಕೆಲ್ಲ ಚೆನ್ನಾಗಿ ಗೊತ್ತು.

ವೃತ್ತಿಯಿಂದ ವಕೀಲರಾಗಿದ್ದ ನಾಗಪ್ಪನವರು ರಾಯಚೂರಿನ ತಾರಾನಾಥ ಶಿಕ್ಷಣ ಸಂಸ್ಥೆಗೆ ನಾಲ್ಕು ದಶಕಗಳ ಕಾಲ ಕಾರ್ಯದರ್ಶಿಗಳಾಗಿ ಸ್ಮರಣೀಯ ಸೇವೆ ಸಲ್ಲಿಸಿದರು. ಇವರ ಸೇವಾ ಬದುಕಿನ ಅನನ್ಯತೆಗೆ ಗುಲಬರ್ಗಾ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿತು. 'ಪ್ರತಿಭಾವಂತ ಸಂಸದೀಯ ಪಟು' ಎಂದು ಕರ್ನಾಟಕ ಸರಕಾರವು ಗೌರವಿಸಿತು. 1977ರಲ್ಲಿ ತುರ್ತುಪರಿಸ್ಥಿತಿಯಿಂದಾಗಿ ಜನತಾ ಪಕ್ಷ ಅಧಿಕಾರಕ್ಕೆ ಬಂದಿತು. ಈ ಹೊಸ ಪಕ್ಷದಲ್ಲಿ ಸಮಾಜವಾದಿ ನಾಯಕರು ತಮ್ಮ ನೆಲೆಯನ್ನು ಕಂಡುಕೊಂಡರು. ಕೆಲವರು ಪಕ್ಷಾಂತರಕ್ಕೂ ಮನಸ್ಸು ಮಾಡಿದರು. ಆದರೆ ಅಧಿಕಾರದ ಬೆನ್ನುಹತ್ತದ ನಾಗಪ್ಪನವರು ಜೀವನಪೂರ್ತಿ ಸಮಾಜವಾದಿ ಸಿದ್ಧಾಂತಕ್ಕೆ ಅಂಟಿಕೊಂಡು ಬಾಳಿ 2011 ರಲ್ಲಿ ತಮ್ಮ ಇಹಯಾತ್ರೆಯನ್ನು ಮುಗಿಸಿದರು.

–ಡಾ. ಬಸವಲಿಂಗ ಸೊಪ್ಪಿನಮಠ

(ನವೆಂಬರ್, 2014)

ತೆರೆಮರೆಯ ಸಮಾಜವಾದಿ ಕೆ. ಕೃಷ್ಣಗೋಪಾಲ್



ಕೆ. ಕೃಷ್ಣಗೋಪಾಲ್ ಬಗ್ಗೆ ನಾನು ಮೊದಲು ಕೇಳಿದ್ದು, ಅವರನ್ನು ತಮ್ಮ ಶಾಲಾದಿನಗಳಲ್ಲಿ ತಮ್ಮೂರು ರಾಮನಗರದ ಸುತ್ತಮುತ್ತ ಕಂಡಿದ್ದ ಗೆಳೆಯ ಶಿವರಾಮು ಕಾಡನಕುಪ್ಪೆ ಅವರಿಂದ, ಒಂದು ವರ್ಷದ ಹಿಂದೆ. ಆ ನೆನಪಿನಲ್ಲಿದ್ದಾಗ ಕಾಳೇಗೌಡ ನಾಗವಾರ ಅವರು ಸಂಪಾದಿಸಿರುವ ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟದಲ್ಲಿ ಕೃಷ್ಣಗೋಪಾಲರ ಲೇಖನವೊಂದನ್ನು ಓದಿದಾಗ ಈ ಮನುಷ್ಯನ ಬಗ್ಗೆ ನನ್ನ ಆಸಕ್ತಿ ಹೆಚ್ಚಿತು. ಕಾರಣ, ಆಳದ ಸಮಾಜವಾದಿಯಂತೆ ಅವರು ಗೋಪಾಲಗೌಡರನ್ನು ಕುರಿತ ತಮ್ಮ ನೆನಪನ್ನು ಎಷ್ಟು ಸ್ಪಂದನಶೀಲವಾಗಿ ತಿಳಿಗನ್ನಡದಲ್ಲಿ ಬರೆದಿದ್ದರೆಂದರೆ, ಅವರು ಒಳ್ಳೆಯ ಕಥೆಗಾರರೂ ಆಗಿ ರಾಮನಗರ ಸೀಮೆಯಲ್ಲಿ ಹೆಸರು ಮಾಡಿದ್ದರು ಎಂಬ ಕಾಡನಕುಪ್ಪೆ ಅವರ ಮಾತು ಥಟ್ಟನೆ ನೆನಪಾಯಿತು. ಕೃಷ್ಣಗೋಪಾಲರ ಬಗ್ಗೆ 'ನಮ್ಮ ಸಮಾಜವಾದಿಗಳು' ಮಾಲೆಗಾಗಿ ಬರೆದುಕೊಡುವಂತೆ ಶಿವರಾಮು ಅವರಿಗೆ ದುಂಬಾಲು ಬಿದ್ದೆ. ತಮ್ಮ ತೀವ್ರ ಅಸ್ವಸ್ಥತೆಯ ನಡುವೆಯೂ ಅವರು ಪ್ರಯತ್ನಪಟ್ಟರಾದರೂ, ಕೃಷ್ಣಗೋಪಾಲರ ಯಾವ ಬಂಧು ಮಿತ್ರರೂ ಪತ್ತೆಯಾಗದೆ, ಅವರ ಪೂರ್ವಾಪರಗಳ ಮಾಹಿತಿ ಸಿಗಲಿಲ್ಲ. ಕೊನೆಗೆ ನಾನು ಡಾ. ವಿಷ್ಣುಮೂರ್ತಿ ಅವರು ಸಂಪಾದಿಸಿ ಪ್ರಕಟಿಸಿರುವ ಗೋಪಾಲಗೌಡರ ಡೈರಿಯಲ್ಲೇನಾದರೂ ಅವರ ಉಲ್ಲೇಖ-ಪ್ರಸ್ತಾಪ-ವಿವರಗಳು ಸಿಕ್ಕಿಯಾವೇನೋ ಎಂದು ಹುಡುಕಿದೆ.

ಹೌದು, ಡೈರಿಯ ಹಲವೆಡೆ ಕೃಷ್ಣಗೋಪಾಲರ ಪ್ರಸ್ತಾಪವಿದೆ. ಈ ಪ್ರಸ್ತಾಪಗಳನ್ನು ಮೇಲೆ ಉಲ್ಲೇಖಿಸಿದ ಕೃಷ್ಣಗೋಪಾಲರ ಲೇಖನದ ಜೊತೆಯಾಗಿ ಓದಿದಾಗ ಅವರದೊಂದು ಸಂಕ್ಷಿಪ್ತ ವ್ಯಕ್ತಿಚಿತ್ರ ಸಿಗುತ್ತದೆ. ಅವರು ಕಾಗೋಡು ಸತ್ಯಾಗ್ರಹದ ಕಾಲದಿಂದಲೂ ಗೋಪಾಲಗೌಡರ ಅತಿ ನಂಬಿಕಸ್ಥ ಶಿಷ್ಯರಲ್ಲಿ ಒಬ್ಬರಾಗಿದ್ದರು. ಹಾಗಾಗಿಯೇ ಗೌಡರು ಈ ಶಿಷ್ಯ ಬರೆದು ಕಳಿಸಿದ ಯಾವ ಶಿಫಾರ್ಸು ಪತ್ರವನ್ನೂ ಕಡೆಗಣಿಸದೆ ತಕ್ಷಣ ಆ ಬಗ್ಗೆ ಕಾರ್ಯಪ್ರವೃತ್ತರಾಗುತ್ತಿದ್ದರು. ಸಮಾಜವಾದಿ ಪಕ್ಷ ಹಮ್ಮಿಕೊಳ್ಳುತ್ತಿದ್ದ ಸರ್ಕಾರಿ ಕಛೇರಿಗಳ ಮುತ್ತಿಗೆ, ಜೈಲ್ ಭರೋ, ಲಾಟರಿ ವಿರೋಧಿ ಚಳುವಳಿ, ಕನ್ನಡ ಆಡಳಿತ ಭಾಷಾ ಚಳುವಳಿ, ಕೃಷಿಕೂಲಿಕಾರರ ಪರವಾದ ಭೂ ಹೋರಾಟ ಇತ್ಯಾದಿಗಳನ್ನು ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ-ರಾಮನಗರ ಸುತ್ತಮುತ್ತಲ ಪ್ರದೇಶಗಳಲ್ಲಿ ಸಂಘಟಿಸುತ್ತಿದ್ದರು. ಉರಗನಹಳ್ಳಿ ಇನಾಂ ಜಮೀನು ಹೋರಾಟ ಇವುಗಳಲ್ಲಿ ಪ್ರಮುಖವಾದದ್ದು. ಇದರ ಫಲವಾಗಿ ಸುತ್ತಮುತ್ತಲ ಹಳ್ಳಿಗಳ ಐದುನೂರು ಗೇಣಿ ರೈತ ಕುಟುಂಬಗಳು ಸುಮಾರು ಮೂರು ಸಾವಿರ ಎಕರೆ ಜಮೀನಿನ ಹಕ್ಕು ಪಡೆದವು.

ಇದನ್ನೆಲ್ಲ ಸಂಗ್ರಹಿಸುವ ಹೊತ್ತಿಗೆ ಆಕಸ್ಮಿಕವಾಗಿ ಮಾತಿಗೆ ಸಿಕ್ಕ ಕೋಣಂದೂರು

ಲಿಂಗಪ್ಪನವರ ಬಳಿ ಕೃಷ್ಣಗೋಪಾಲರ ಬಗ್ಗೆ ಪ್ರಸ್ತಾಪಿಸಿದೆ. ಅವರು ಗೋಪಾಲ ತಮಗೆ ಚೆನ್ನಾಗಿ ಗೊತ್ತೆಂದೂ, ಅವರ ಬಗ್ಗೆ ತಮಗೆ ನೆನಪಿರುವುದನ್ನಾದರೂ ಬರೆದುಕೊಡುವುದಾಗಿಯೂ ಹೇಳಿ ನನ್ನಲ್ಲಿ ಆಸೆ ಹುಟ್ಟಿಸಿದರು. ಇದನ್ನು ಕಾಡನಕುಪ್ಪೆಯವರಿಗೂ ತಿಳಿಸಿದೆ. ಅವರಿಗೂ ಸಂತೋಷವಾಯಿತು. ಆದರೆ ಅವರಿಗೆ ಬಿಡುವಿಲ್ಲದ ಕೆಲಸ. ಮೂರು ಬಾರಿ ನೆನಪಿಸಿದರೂ ತಮ್ಮ ಗತಿಸಿದ ಕಾಮ್ರೇಡ್ ಬಗ್ಗೆ ಬರೆಯಲು ಪ್ರೇರಣೆ ಒದಗಲಿಲ್ಲ. ಬೇಸರವೆನಿಸಿ, ಕಾಡನಕುಪ್ಪೆಯವರಿಗೆ ಫೋನಾಯಿಸಿದೆ. ಅವರಿಗೆ ಏನನಿಸಿತೋ ಏನೋ, ಒಂದೇ ಪಟ್ಟಿಗೆ ಕೂತು ತಮ್ಮ ನೆನಪನ್ನು ಬರೆದುಕೊಟ್ಟಿದ್ದಾರೆ. ಅದನ್ನು ಓದುವ ಮುನ್ನ ಗೋಪಾಲಗೌಡರ ಬಗ್ಗೆ ಕೃಷ್ಣಗೋಪಾಲ ಬರೆದ ಲೇಖನದ ಕೊನೆಯಲ್ಲಿ ಗೌಡರ ಅಂತ್ಯ ಸಂಸ್ಕಾರದ ಕೊನೆಯ ಕ್ಷಣಗಳನ್ನು ಅವರು ಹಿಡಿದಿಟ್ಟಿರುವ ರೀತಿಯನ್ನೂ ಗಮನಿಸಿ:

... ವಿದ್ಯುತ್ ಚಿತಾಗಾರಕ್ಕೆ ಮಾನವತಾವಾದಿಯ ಪವಿತ್ರ ದೇಹ ಹೋಯಿತು. ಗೌಡರ ದೇಹ ಬೂದಿಯಾಯಿತು. ಭಾಷಣ ಮಾಡಿದವರು, ಅಭಿಮಾನಿಗಳು ಚದುರಿ ಹೋದರು. ನಮ್ಮಿಬ್ಬರನ್ನು ಬಿಟ್ಟರೆ ಒಂದು ನರಪಿಳ್ಳೆಯೂ ಅಲ್ಲಿರಲಿಲ್ಲ. ಶಾಂತವೇರಿಯವರ ಅಣ್ಣನವರು ಬೂದಿ ತುಂಬಿದ ಮಡಕೆಯನ್ನು ಕಾರಿನಲ್ಲಿಟ್ಟುಕೊಂಡರು. ನಮ್ಮನ್ನೂ ಕಾರಿನಲ್ಲಿ ಕುಳ್ಳಿರಿಸಿಕೊಂಡರು. ಕೊನೆಗೆ ಅವರು ನಮ್ಮನ್ನು ಮೆಜೆಸ್ಟಿಕ್‌ನಲ್ಲಿ ಇಳಿಸಿ ಹೊರಟುಹೋದರು.

ನಾನು ಬಹಳ ಹೊತ್ತು ಅಲ್ಲಿಯೇ ಇದ್ದು ಕಾರು ಹೋದ ದಿಕ್ಕನ್ನೇ ನೋಡುತ್ತಾ ನಿಂತೆ. ಬಡವರು, ರೈತರು, ಶ್ರಮಿಕರು, ದಲಿತರ, ತಬ್ಬಲಿ ಜಾತಿಗಳ ಕೈಹಿಡಿದಿದ್ದ ಅಪ್ರತಿಮ ಹೋರಾಟಗಾರ–ಮಾನವತೆಯ ಮಹಾಮೂರ್ತಿ ಶಾಂತವೇರಿ ಗೋಪಾಲಗೌಡರು ಇನ್ನಿಲ್ಲವಾಗಿದ್ದರು. ಲೋಹಿಯಾ– ಗೋಪಾಲಗೌಡರಿದ್ದ ಸಮಾಜವಾದಿ ಪಕ್ಷ ಕಾಲಗರ್ಭದಲ್ಲಿ ಮರೆಯಾಯಿತು..

–ಡಿಎಸ್ಸೆನ್

ಕೃಷ್ಣಗೋಪಾಲ್ : ನನ್ನ ನೆನಪಿನ ಚಿತ್ರ

ಅರವತ್ತರ ದಶಕ. ನಾನಾಗ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದೆ. ಒಮ್ಮೆ ರಾಮನಗರದ ಪುರಸಭೆಯ ಚುನಾವಣೆ ಬಂತು. ಕಾಂಗ್ರೆಸ್ಸಿನದೇ ದರಬಾರು. ಅದಕ್ಕೆ ಪ್ರತಿಯಾಗಿ ಸೆಡ್ಡು ಹೊಡೆದು ನಿಲ್ಲುವ ವಿರೋಧ ಪಕ್ಷಗಳೇ ಇರಲಿಲ್ಲ. ಪಕ್ಷೇತರರೆಂದು ಕೆಲವರು ಚುನಾವಣೆಗೆ ನಿಲ್ಲುತ್ತಿದ್ದರಷ್ಟೆ. ಆಗ ಆಲದಮರದ ಗುರುತಿನ ಮೇಲೆ ಚುನಾವಣೆಗೆ ಸ್ಪರ್ಧಿಸಿದ್ದ ಕೆ. ಕೃಷ್ಣಗೋಪಾಲನೆಂಬ ಮೂವತ್ತೈದು– ನಲವತ್ತರ ತರುಣನೊಬ್ಬ ನಮ್ಮಂಥ ಹುಡುಗರಿಗೆ ಆಕರ್ಷಣೀಯ ವ್ಯಕ್ತಿಯಾಗಿದ್ದ. ರಾಮನಗರದ ಚೌಕಗಳಲ್ಲಿ ಆತನು ಮಾಡುತ್ತಿದ್ದ ಭಾಷಣಗಳು ಇತರರಿಗಿಂತ ಭಿನ್ನವಾಗಿದ್ದವು. ಆತ ಬಡವರ ಬಗ್ಗೆ, ಅಸ್ಪೃಶ್ಯರ ಬಗ್ಗೆ, ವರ್ತಕ ಸಮುದಾಯದ ಬಗ್ಗೆ, ರಾಜಕಾರಣಿಗಳ ಗೋಸುಂಬೆತನದ ಬಗ್ಗೆ ಮಾತನಾಡುತ್ತಿದ್ದ.

ಬೇರೆ ರಾಜಕಾರಣಿಗಳ ಬಾಯಿಂದ ಗಾಂಧಿ ಮತ್ತು ನೆಹರೂ ಗುಣಗಾನವನ್ನೇ ಕೇಳುತ್ತಿದ್ದ ನಮಗೆ ಕೃಷ್ಣಗೋಪಾಲರ ಮಾತುಗಳು ವಿಭಿನ್ನ ಧ್ವನಿಯಾಗಿ ಗೋಚರಿಸುತ್ತಿದ್ದವು. ಆದರೆ ಅವರು ಚುನಾವಣೆಯಲ್ಲಿ ಸೋಲುತ್ತಿದ್ದರು. ಅವರು ಯಾವ ಚುನಾವಣೆಯಲ್ಲೂ ಗೆಲ್ಲಲಾಗಲಿಲ್ಲವೆಂಬುದು ಸ್ವತಂತ್ರ ಭಾರತದ ಮತದಾರನ ವಿವೇಕವನ್ನು ಅನುಮಾನದಿಂದ ನೋಡುವ ಸಂಕೇತವಾಗಿತ್ತು.

ಚುನಾವಣೆಯಲ್ಲಿ ಸೋತರೂ ಕೃಷ್ಣಗೋಪಾಲ ಸುಮ್ಮನೆ ಮನೆಯಲ್ಲಿ ಕೂರುವ ವ್ಯಕ್ತಿಯಾಗಿರಲಿಲ್ಲ. ಜನಸಾಮಾನ್ಯರ ದುಃಖದುಮ್ಮಾನಗಳನ್ನು ಬಿಂಬಿಸುವ, ಅವರ ಸ್ಥಿತಿಯ ಅರಿವು ಮೂಡಿ ಜಾಗೃತರಾಗಬೇಕೆಂಬ ಅನೇಕ ಕರಪತ್ರಗಳನ್ನೂ ಕಿರುಹೊತ್ತಿಗೆಗಳನ್ನೂ ಬರೆದು ಪ್ರಕಟಿಸುತ್ತಿದ್ದರು. ನಾಲ್ಕಾರು ಮಂದಿ ತಮ್ಮ ಹಿಂಬಾಲಕರ ಜೊತೆ ಸೇರಿ ಯಾವುದೇ ಹಮ್ಮುಬಿಮ್ಮು ಇಲ್ಲದೆ ರಸ್ತೆಗಳಲ್ಲಿ ಅವುಗಳನ್ನು ಹಂಚುತ್ತಿದ್ದರು. ರಾಮನಗರದ ಸುತ್ತಮುತ್ತ ನಡೆಯುವ ಜಾತ್ರೆಗಳಲ್ಲಿ ಅವರ ಜನಜಾಗೃತಿಯ ಕಾರ್ಯಕ್ರಮವಿರುತ್ತಿತ್ತು. ಅಲ್ಲಿ ಅವರ ಭಾಷಣ, ಕರಪತ್ರಗಳ ಪ್ರಚಾರವಿರುತ್ತಿತ್ತು.

ಅವರಲ್ಲೊಬ್ಬರು ಕಲಾವಿದನಿದ್ದ; ಬರಹಗಾರನಿದ್ದ. ರಾಮನಗರದ ಸುತ್ತಲ ಗ್ರಾಮಗಳಲ್ಲಿ ನಡೆಯುತ್ತಿದ್ದ ಅಸ್ಪೃಶ್ಯತೆಯ ಕ್ರೂರತೆಯ ಬಗ್ಗೆ, ವಿಜಾತಿಗಳ ಪ್ರೇಮ ದುರಂತಗಳ ಬಗ್ಗೆ, ಹಸಿವಿನ ಯಾತನೆಯ ಬಗ್ಗೆ ಕತೆಗಳನ್ನು ಬರೆದು ಕಿರುಪುಸ್ತಕಗಳ ರೂಪದಲ್ಲಿ ಪ್ರಕಟಿಸಿ ಜನರಿಗೆ ಹಂಚುತ್ತಿದ್ದರು. ಸುಮಾರು ಅರ್ಧ ಶತಮಾನಗಳ ಹಿಂದೆ ನಾನು ಓದಿದ ಅವರ 'ಮೊಟ್ಟೆದೊಡ್ಡಿಯಲ್ಲಿ ಮೂರು ಮಕ್ಕಳ ಸಾವು' ಎಂಬ ಕತೆ ಇನ್ನೂ ನನ್ನ ಮನದಲ್ಲಿದೆ. ಅದರಲ್ಲಿ ಗ್ರಾಮ ಕ್ರೌರ್ಯಕ್ಕೆ ಒಳಗಾದ ತಾಯಿಯೊಬ್ಬಳು ತನ್ನ ಮಕ್ಕಳ ಸಮೇತ ಆತ್ಮಹತ್ಯೆಗೆ ಶರಣಾಗುವ ಹೃದಯ ಕಲಕುವ ಚಿತ್ರಣವಿದೆ. "ಈ ಸಾವಿಗೆ ಕಾರಣರಾರು? ಓದುಗರೇ, ಚಿಂತಿಸಿ, ಜಾಗೃತರಾಗಿ, ಎದ್ದೇಳಿ" ಎಂಬ ಆ ಕತೆಯ ಕೊನೆಯ ಸಾಲು ಇನ್ನೂ ನೆನಪಿದೆ.

ರಾಮನಗರ ಮುಸ್ಲಿಮರೇ ಅಧಿಕ ಸಂಖ್ಯೆಯಲ್ಲಿರುವ ಪಟ್ಟಣವಾಗಿತ್ತು. ಬೇಸಾಯದ ಜೊತೆಗೆ ವ್ಯಾಪಾರ ವಹಿವಾಟು ಹೆಚ್ಚೂ ಕಡಿಮೆ ಅವರ ಹಿಡಿತದಲ್ಲಿತ್ತು. ಬಡತನದ ಬೇಗುದಿ ಮುಸ್ಲಿಮರಲ್ಲಿ ತಾಂಡವವಾಡುತ್ತಿದ್ದರೂ ಅವರಲ್ಲಿ ಕೆಲವರು ಶ್ರೀಮಂತರಾಗಿದ್ದರು. ವಸ್ತುತಃ ಈ ಹತ್ತಾರು ಮಂದಿ ರಾಮನಗರವನ್ನು ಎಲ್ಲ ಬಗೆಯಲ್ಲೂ ಆಳುತ್ತಿದ್ದರು. ಇದು ಹಿಂದೂಗಳ ಅಸೂಯೆಗೂ ಕಾರಣವಾಗಿತ್ತು. ಇದರಿಂದಾಗಿ ರಾಮನಗರದಲ್ಲಿ ಆಗಿಂದಾಗ್ಗೆ ಕೋಮು ಸಂಘರ್ಷವೇರ್ಪಡುತ್ತಿತ್ತು. ಆ ಸಂದರ್ಭದಲ್ಲಿ ಹೊಡೆದಾಡುತ್ತಿದ್ದವರು ಬಡ ಮುಸ್ಲಿಮರು ಮತ್ತು ಹಿಂದೂಗಳೇ ಆಗಿರುತ್ತಿದ್ದರು. ಆ ಕೋಮು ಜಗಳದಲ್ಲಿ ಬಡ ಮುಸಲ್ಮಾನರ ಮತ್ತು ದಲಿತರ ಕೇರಿಗಳು ಬೆಂಕಿಗೆ ಆಹುತಿಯಾಗುತ್ತಿದ್ದವು. ನಾಲ್ಕಾರು ಹೆಣಗಳು ಬೀಳುತ್ತಿದ್ದವು. ಅಂಥ ಗಲಭೆ ಪೀಡಿತ ಪ್ರದೇಶಗಳಲ್ಲಿ ಕೃಷ್ಣಗೋಪಾಲರು ಏಕಾಂಗಿಯಾಗಿ ಹೋಗಿ, "ಶ್ರೀಮಂತರ ಕೈಗೊಂಬೆಗಳಾಗಿ ವಿವೇಕವಿಲ್ಲದೆ ನೀವು ನೀವು ಹೊಡೆದಾಡಿ ಸಾಯಬೇಡಿ. ನೀವು ಬಡವರು. ನೀವೆಲ್ಲರೂ ಒಂದು. ಈಗ ನಿಮ್ಮ ನೋವಿಗೆ ಆಸರೆ ಯಾರು" ಎಂದು ಧೈರ್ಯವಾಗಿ ಮಾತನಾಡುತ್ತಿದ್ದರು. ಅವರ ಈ ಬೀದಿ

ಭಾಷಣಗಳನ್ನು ಹಿರಿಯರ ಕಣ್ತಪ್ಪಿಸಿ ನಾನು ಕೇಳಿದ್ದೇನೆ.

ನಾನು ನೋಡಿದ ಅಂದಿನ ಕೃಷ್ಣಗೋಪಾಲ ಮಟ್ಟಸವಾದ ಆಳು. ದಪ್ಪ ಕಟ್ಟಿನ ಕನ್ನಡಕವನ್ನು ಯಾವಾಗಲೂ ಧರಿಸುತ್ತಿದ್ದರು. ಕಪ್ಪು ಮಿಶ್ರಿತ ಕಂದು ವರ್ಣದ ಮೈಬಣ್ಣ. ರಾಜಸ್ತಾನ ಮೂಲದವರು. ಟಿಪ್ಪುವಿನ ಕಾಲದಲ್ಲಿ ಸೈನ್ಯದಲ್ಲಿ ಕೆಲಸ ಮಾಡಲು ಬಂದ ಸೈನಿಕ ಕುಟುಂಬದ ಮುಂದುವರಿದ ತಲೆಮಾರಿನವರು. ಮನೆಮಾತು ಹಿಂದಿಯಾದರೂ ಕನ್ನಡ ಸಾಹಿತ್ಯ ಸಂಸ್ಕೃತಿಗಳ ಬಗ್ಗೆ ಅಪಾರ ಪ್ರೀತಿ, ಆಸಕ್ತಿ. ನಾನಿನ್ನೂ ವಯಸ್ಸಿನಲ್ಲಿ ಚಿಕ್ಕವನಾದುದರಿಂದ ಅವರ ಹತ್ತಿರಕ್ಕೆ ಸುಳಿಯುವ ಬೌದ್ಧಿಕಾಸಕ್ತಿಯಾಗಲೀ ಸನ್ನಿವೇಶಗಳಾಗಲೀ ಬರಲಿಲ್ಲ. ಆದರೆ ಅವರು ತಮ್ಮ ಭಾಷಣಗಳಲ್ಲಿ, ಬರಹಗಳಲ್ಲಿ ಹೇಳುತ್ತಿದ್ದ ಹಸಿವು, ಅಸ್ಪೃಶ್ಯತೆ, ಸಾಮಾಜಿಕ ಅಸಮಾನತೆಯ ಕ್ರೌರ್ಯದ ಮಾತುಗಳು ನನ್ನ ಮನಸ್ಸಿನಲ್ಲಿ ನಾಟಿದ್ದವು.

ಆಗ ನನಗೆ ಸಮಾಜವಾದವೆಂದರೇನು ಎಂಬುದು ತಿಳಿದಿರಲಿಲ್ಲ. ಲೋಹಿಯಾ ಹೆಸರನ್ನು ಕೇಳಿರಲಿಲ್ಲ. ನಮ್ಮ ಮೇಷ್ಟ್ರುಗಳು ಗಾಂಧೀಜಿ ನೆಹರೂ ಬಗ್ಗೆ ಮಾತ್ರ ಹೇಳುತ್ತಿದ್ದರು. ಕುವೆಂಪು ಕಾರಂತರ ಬಗ್ಗೆ ಕೂಡ ಅಂಥ ತಿಳಿವಳಿಕೆ ಇರಲಿಲ್ಲ. ಆದರೆ ಕಾಲೇಜಿಗೆ ಬಂದ ಮೇಲೆ ಪ್ರಪಂಚ ವಿಸ್ತಾರವಾಗಿ ಓದುವಿಕೆಯ ಮೂಲಕ ತೆರೆದುಕೊಂಡಿತು. ಎಪ್ಪತ್ತರ ದಶಕದ ಮೈಸೂರಿನ ಸಮಾಜವಾದಿ ಗೆಳೆಯರ ಒಡನಾಟ ಮತ್ತು ಹೋರಾಟಗಳು ಗಾಂಧಿ- ಲೋಹಿಯಾರನ್ನು ಅಧ್ಯಯನ ಮಾಡಲು ಸಹಕಾರಿಯಾದವು. ಎಪ್ಪತ್ತರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಮತ್ತು ಅನಂತರದ ದಿನಗಳಲ್ಲಿ ಕೃಷ್ಣಗೋಪಾಲ ತೆರೆಮರೆಯಲ್ಲಿಯೇ ಉಳಿದುಕೊಂಡುಬಿಟ್ಟರು. ಅವರು ಯಾವ ಹೋರಾಟವನ್ನೂ ಸಂಘಟಿಸಲಿಲ್ಲ. ಏಕೆಂಬುದು ನನ್ನಲ್ಲಿ ಕುತೂಹಲವನ್ನುಂಟು ಮಾಡಿತು. ಆ ಕುತೂಹಲ ಹಾಗೆಯೇ ಉಳಿದುಕೊಂಡಿತು.

ರಾಮನಗರದ ಯಾವುದೋ ಸಾಹಿತ್ಯ ಕಾರ್ಯಕ್ರಮಕ್ಕೆ ಹೋಗಿದ್ದೆ. ಕಾರ್ಯಕ್ರಮ ಮುಗಿದಾಗ ಸಂಜೆ ಕತ್ತಲಾಗತೊಡಗಿತು. ಸಾಹಿತ್ಯ ಗೋಷ್ಠಿಯ ಕಾರ್ಯಕರ್ತನೊಬ್ಬ, "ನಿಮ್ಮನ್ನು ಕಾಣಲು ಯಾರೋ ವಯಸ್ಕರು ಬಂದಿದ್ದಾರೆ, ಬನ್ನಿ?" ಎಂದು ಹೊರಗೆ ಕರೆತಂದನು. ಅಲ್ಲಿ ವೃದ್ಧರೊಬ್ಬರು ನಿಂತಿದ್ದರು. ತಕ್ಷಣ ಗುರುತು ಹತ್ತಲಿಲ್ಲ. ಅವರು ನನ್ನತ್ತ ತಿರುಗಿ ನೋಡಿ "ಕೃಷ್ಣಗೋಪಾಲ"ಎಂದರು. ತಕ್ಷಣ ಇಪ್ಪತ್ತು ವರ್ಷಗಳ ಹಿಂದಿನ ಬಾಲ್ಯದ ದಿನಗಳು ಧುತ್ತನೆ ಮನಸ್ಸಿಗೆ ಬಂದವು. ಕೃಷ್ಣಗೋಪಾಲರನ್ನು ನೋಡಿದೆ. ಅವರಲ್ಲಿ ಆಯಾಸ ಎದ್ದು ಕಾಣುತ್ತಿತ್ತು. ಸುಸ್ತಾದವರಂತೆ ಮಾತನಾಡುತ್ತಿದ್ದರು. "ಎಲ್ಲಾದರೂ ಕುಳಿತು ಮಾತನಾಡೋಣ. ಬಾರ್‌ಗೆ ಹೋಗೋಣವೇ" ಎಂದರು. "ನಾನು ಕುಡಿಯುವುದಿಲ್ಲ. ನೀವು ಬೇಕಾದರೆ ತೆಗೆದುಕೊಳ್ಳಿ, ಜೊತೆಯಲ್ಲಿರುತ್ತೇನೆ" ಎಂದೆ. "ಒಬ್ಬನೇ ತೆಗೆದುಕೊಳ್ಳೋದು ನನಗೆ ಇಷ್ಟವಿಲ್ಲ. ಬರೀ ಟೀ ಕುಡಿಯೋಣ" ಎಂದರು.

ಹೋಟೆಲೊಂದರ ಮೂಲೆಯಲ್ಲಿ ಟೀ ಕುಡಿಯುತ್ತಾ ಅವರ ಹತಾಶೆಗಳ ಬಗ್ಗೆ, ರಾಜಕಾರಣ ಸಾಗುತ್ತಿರುವ ದಿಕ್ಕಿನ ಬಗ್ಗೆ ಮಾತನಾಡಿದರು. ಬಂಗಾರಪ್ಪ, ಪಟೇಲರ ಅವಕಾಶವಾದಿ ರಾಜಕಾರಣದ ಬಗ್ಗೆ ವ್ಯಗ್ರರಾದರು. ಸಿಗರೇಟಿನ ಮೇಲೆ

ಸಿಗರೇಟು ಸೇದಿದರು. "ಬಂಡಾಯ ಗಿಂಡಾಯ ಅಂತ ನೀವು ಓಡಾಡ್ತ ಇದ್ದೀರ. ಒಳ್ಳೆಯದು. ನಿಮ್ಮ ಕೆಲವು ಬರಹಗಳನ್ನು ಓದಿದ್ದೇನೆ. ಇನ್ನೂ ಗಟ್ಟಿಯಾಗಬೇಕು. ಇನ್ನೂ ಗಾಂಧೀ–ಲೋಹಿಯಾರ ಚಿಂತನೆಯನ್ನು ಜೀರ್ಣಿಸಿಕೊಳ್ಳಬೇಕಿದೆ. ಆ ನಿಟ್ಟಿನಲ್ಲಿ ಚಿಂತಿಸಿರಿ" ಎಂದರು. ಕತ್ತಲಾಗಿತ್ತು. "ಮತ್ತೆ ಭೇಟಿಯಾಗುತ್ತೇನೆ" ಎಂದು ಅವರ ಕೈ ಕುಲುಕಿದೆ. ಅವರು ಮುಗುಳ್ನಕ್ಕರು.

ಆದರೆ ಮತ್ತೆ ಅವರನ್ನು ಭೇಟಿಯಾಗಲೇ ಇಲ್ಲ. ಅವರ ಮನೆ–ಮಕ್ಕಳು ಆರ್ಥಿಕ ಸ್ಥಿತಿ, ಯಾವುದನ್ನೂ ತಿಳಿದುಕೊಳ್ಳಲಾಗಲಿಲ್ಲ. ಕೆಲವು ವರ್ಷಗಳೇ ಕಳೆದವು. ರಾಮನಗರದ ಗೆಳೆಯರೊಬ್ಬ ಮೈಸೂರಿಗೆ ಬಂದಾಗ ಹೇಳಿದ– "ನಿನ್ನ ಸೋಷಿಯಲಿಸ್ಟ್ ಗುರು ಕೃಷ್ಣಗೋಪಾಲ ತೀರಿಕೊಂಡರು". ಮನಸ್ಸಿಗೆ ನೋವಾಯಿತು. ಒಂದು ಬಗೆಯ ಅಪರಾಧೀ ಭಾವನೆ ಕಾಡಿತು. ಈ ನಡುವೆ ಸಮಾಜವಾದಿ ಮಿತ್ರ ಡಾ.ಎಚ್.ಸಿ. ವಿಷ್ಣುಮೂರ್ತಿ ಅವರು "ಶಾಂತವೇರಿ ಗೋಪಾಲಗೌಡ ದಿನಚರಿ" ಪ್ರಕಟಿಸಿದ್ದರು. ಅದರಲ್ಲಿ ಗೋಪಾಲಗೌಡರ ಅಂತಿಮ ದಿನಗಳಲ್ಲಿ ಆಸ್ಪತ್ರೆಯಲ್ಲಿ ಕೃಷ್ಣಗೋಪಾಲ್ ಬಂದು ನೋಡಿಕೊಳ್ಳುತ್ತಿದ್ದುದರ ಬಗ್ಗೆ ಬರೆಯುತ್ತಾರೆ. ಇದನ್ನು ಗಮನಿಸಿದ ನಾನು ವಿಷ್ಣುಮೂರ್ತಿಯವರನ್ನು ಕೃಷ್ಣಗೋಪಾಲರ ಬಗ್ಗೆ ಕೇಳಿದೆ. "ಆತನೊಬ್ಬ ಅಂತರ್ಮುಖಿ. ಓದಿಕೊಂಡಿದ್ದ. ಗೌಡರ ಅಭಿಮಾನಿ. ಗೌಡರು ಎಲ್ಲೇ ಹೋದರೂ ಅವರ ಜೊತೆಯಲ್ಲಿರುತ್ತಿದ್ದ. ಕಾಗೋಡು ಸತ್ಯಾಗ್ರಹದಲ್ಲಿ ಭಾಗಿಯಾಗಿದ್ದ. ಗೌಡರ ಅಂತಿಮ ದಿನದಲ್ಲಿ ಅವರನ್ನು ಅವರ ಮನೆಯವರಿಗಿಂತ ಚೆನ್ನಾಗಿ ಶುಶ್ರೂಶೆ ಮಾಡಿದ" ಎಂದು ವಿವರಿಸಿದರು.

"ಹೊಸಮನುಷ್ಯ"ದ ಸಂಪಾದಕರು ಕಷ್ಣಗೋಪಾಲರ ಬಗ್ಗೆ ವ್ಯಕ್ತಿಚಿತ್ರ ಬರೆದು ಕಳಿಸಿರಿ ಎಂದು ನನಗೆ ಹೇಳಿ ಆರು ತಿಂಗಳ ಮೇಲಾಯಿತು. ಅಂದಿನಿಂದ ಕೃಷ್ಣಗೋಪಾಲರ ಬಗ್ಗೆ ಮಾಹಿತಿ ಸಂಗ್ರಹಿಸಲು ವಿಫಲನಾಗಿದ್ದೇನೆ. ರಾಮನಗರದಲ್ಲಿ ಅವರ ವಾರಿಗೆಯವರು (ಈಗ ಅವರು ಬದುಕಿದ್ದರೆ ಎಂಬತ್ತರ ಮೇಲಿನ ವಯಸ್ಸಾಗುತ್ತಿತ್ತು) ಬಹುಪಾಲು ಯಾರೂ ಇಲ್ಲ. ನನ್ನ ವಾರಿಗೆಯವರಿಗೆ ಅವರ ಬಗ್ಗೆ ಏನೂ ತಿಳಿದಿಲ್ಲ. ಇರಲಿ, ರಾಮನಗರದಲ್ಲಿ ಈಗ ಅವರ ಬಂಧುಗಳು ಯಾರೂ ಇಲ್ಲವೆಂದು ಗೆಳೆಯರು ಹೇಳುತ್ತಾರೆ. ಎಲ್ಲರೂ ಬೆಂಗಳೂರು ಸೇರಿದ್ದಾರಂತೆ. ಅವರ ಮಗ ನರೇಂದ್ರಬಾಬು ಚಿತ್ರ ನಿರ್ದೇಶನದ ಕೆಲಸ ಮಾಡುತ್ತಿದ್ದಾನೆಂದು ತಿಳಿದುಬಂತು. ಅವನ ಮೊಬೈಲ್ ನಂಬರಿಗೆ ವಾರಕ್ಕೊಮ್ಮೆಯಾದರೂ ಕರೆ ಮಾಡಿದ್ದೇನೆ. ಪ್ರತಿಕ್ರಿಯೆ ಶೂನ್ಯ. ಕೃಷ್ಣಗೋಪಾಲ ಅವರ ಹತ್ತಿರಕ್ಕೆ ನಾನು ಹೋಗಬಹುದಿತ್ತು. ಅವರ ಸಾಂಗತ್ಯದಲ್ಲಿ ಬೆರೆಯಬಹುದಿತ್ತು. ನನ್ನದೇ ತಪ್ಪಿದೆ. ಅರಿಯುವ ಕಾಲದಲ್ಲಿ ನಾನಾ ಕಾರಣದಿಂದ ವಿಮುಖನಾಗಿ ಈಗ ಪರಿತಪಿಸುವ ಸ್ಥಿತಿ ನನ್ನದಾಗಿದೆ?

ಕೃಷ್ಣಗೋಪಾಲ್ ಸೆಲೆಬ್ರಿಟಿ ರಾಜಕಾರಣಿಯಲ್ಲ. ಆತ ಒಬ್ಬ ನಿಷ್ಠಾವಂತ ಸಮಾಜವಾದಿ ಕಾರ್ಯಕರ್ತನಾಗೇ ತೆರೆಮರೆಯಲ್ಲೇ ಉಳಿದುಹೋದರು. ತಾವು ನಂಬಿದ್ದ ಸಿದ್ಧಾಂತಕ್ಕೆ ಬದ್ಧರಾಗೇ ಉಸಿರಾಡಿ, ತಮ್ಮ ಶಕ್ತಿಯ ಮಿತಿಯಲ್ಲಿ ಸಮಾಜವಾದವನ್ನು ಎಚ್ಚರಗೊಳಿಸುವ ಕೆಲಸ ಮಾಡಿದರು. ಲೋಹಿಯಾ–


ಗೋಪಾಲಗೌಡರ ಜೊತೆಯಲ್ಲಿ ತತ್ವನಿಷ್ಠರಾಗಿ ಕೆಲಸ ಮಾಡಿದ ಸಾವಿರಾರು ಅನಾಮಿಕ ಕಾರ್ಯಕರ್ತರೂ ಕೃಷ್ಣಗೋಪಾಲರೂ ಇತಿಹಾಸದ ಪುಟಗಳಿಗೆ ಸೇರಿಹೋಗಿದ್ದಾರೆ. ಅಧಿಕಾರ ಪಡೆದ ಸಮಾಜವಾದಿಗಳ ಮತ್ತು ಅವರ ಗೆಳೆಯರ ಆಧಿಕಾರ ಮತ್ತು ಸಂಪತ್ತುಗಳ ಮದದ ಅಲೆಗಳಿಗೆ ಸಿಕ್ಕಿ ಇಂತಹವರ ನೆನಪು ಸಮಾಜವಾದಿ ಇತಿಹಾಸದ ಪುಟಗಳಿಂದಲೂ ಕೊಚ್ಚಿಹೋಗಿದೆ.

–ಪ್ರೊ. ಶಿವರಾಮು ಕಾಡನಕುಪ್ಪೆ

(ಜನವರಿ, 2014)



ಅಪರೂಪದ ಕಾರ್ಮಿಕ ನಾಯಕ ಸಾಲೋಮನ್ ದಾಸನ್



ಲೋಹಿಯಾ ಪ್ರಣೀತ ಸಮಾಜವಾದದಲ್ಲಿ ಅಚಲ ನಂಬಿಕೆ ಇಟ್ಟು, ಗಾಂಧಿ ಮಾರ್ಗದಲ್ಲಿ ನಡೆದು, ಸೈದ್ಧಾಂತಿಕ ಹೋರಾಟಗಳನ್ನು ಸಂಘಟಿಸಿದ ಕರ್ನಾಟಕದ ಬಹುದೊಡ್ಡ ಕಾರ್ಮಿಕ ನಾಯಕ ದಾಸನ್ ಸಾಲೊಮನ್. ದಾಸನ್ ಅವರ ಪೂರ್ಣ ಹೆಸರು ಆಂಥೊನಿ ಕ್ಲೆಮೆಂಟ್ ಜೇಸುದಾಸನ್ ಸಾಲೊಮನ್. ಪ್ರತಿಭಾವಂತ ವಿಧ್ಯಾರ್ಥಿಯಾಗಿದ್ದ ದಾಸನ್ ಬಳ್ಳಾರಿಯ ವಾರ್ಡ್ಲಾ ಹೈಸ್ಕೂಲ್, ಅನಂತಪುರದ ಆರ್ಟ್ಸ್ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿರುವಾಗಲೇ ಸ್ವಾತಂತ್ರ್ಯ ಚಳುವಳಿಯ ಪ್ರಭಾವಕ್ಕೆ ಒಳಗಾಗಿ ಹೋರಾಟದಲ್ಲಿ ಧುಮುಕಿದರು. 1942ರ 'ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ ದಾಸನ್ ಪೊಲೀಸರ ಹೊಡೆತದಿಂದ ತೀವ್ರವಾಗಿ ಗಾಯಗೊಂಡ ಬಗ್ಗೆ ಹಿರಿಯ ಸ್ವಾತಂತ್ರ್ಯಹೋರಾಟಗಾರ ಯಜಮಾನ್ ಶಾಂತರುದ್ರಪ್ಪ ತಮ್ಮ ನೆನಪುಗಳಲ್ಲಿ ದಾಖಲಿಸಿದ್ದಾರೆ. ಒಂದಕ್ಕಿಂತ ಹೆಚ್ಚು ಸಲ ಬ್ರಿಟೀಷರಿಂದ ಬಂಧಿಸಲ್ಪಟ್ಟು ಜೈಲುವಾಸ ಅನುಭವಿಸಿದ ದಾಸನ್, ನೀಲಂ ಸಂಜೀವರೆಡ್ಡಿಯವರೊಂದಿಗೆ ಬಳ್ಳಾರಿ ಜೈಲಿನಲ್ಲಿ ಜೊತೆಗಿದ್ದರು.

ಆ ಸಂದರ್ಭದಲ್ಲಿ ಬಳ್ಳಾರಿಯಲ್ಲಿ ಗಾಂಧೀವಾದಿಗಳ ದೊಡ್ಡ ಪಡೆಯೇ ಇತ್ತು. ವೈ.ಮಹಾಬಳೇಶ್ವರಪ್ಪ, ರಂಜಾನ್ ಸಾಬ್ ಮಳೆಬೆನ್ನೂರ್, ಯಜಮಾನ್ ಶಾಂತರುದ್ರಪ್ಪ ಮೊದಲಾದವರು ಪ್ರಮುಖರು. ದಾಸನ್‌ರನ್ನು ಬಳ್ಳಾರಿಯ ಗಾಂಧಿಯಂದೇ ಜನ ಕರೆಯುತ್ತಿದ್ದರಂತೆ. ಗಾಂಧಿಯಂತೆಯೇ ಸರಳ ಜೀವಿಯಾಗಿದ್ದು, ಗಾಂಧಿ ಕೃತಿಗಳನ್ನು ಓದಿ, ಗಾಂಧಿ ತತ್ತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ಹೋರಾಟಗಳನ್ನು ರೂಪಿಸುವಾಗ ಗಾಂಧೀಜಿಯವರ ಅಸಹಕಾರ ಚಳುವಳಿಯ ತಾತ್ತ್ವಿಕತೆಯನ್ನು ಪಾಲಿಸುತ್ತಿದ್ದರಂತೆ. ಬಳ್ಳಾರಿಗೆ ಗಾಂಧಿ ಬಂದಾಗ ಅವರೊಡನೆ ಒಡನಾಡಿದ್ದರಂತೆ.

ಲೋಹಿಯಾ ಸಿದ್ಧಾಂತದಲ್ಲಿಯೂ ನಂಬಿಕೆ ಇಟ್ಟಿದ್ದ ದಾಸನ್, ಸಮಾಜವಾದಿ ಸಿದ್ಧಾಂತದ ನಿಜವಾದ ಜೀವಂತಿಕೆ ಇರುವುದು ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಲು ನಡೆಸುವ ಹೋರಾಟಗಳಲ್ಲಿ ಎಂದು ಬಲವಾಗಿ ನಂಬಿದ್ದರು. ಹಾಗಾಗಿ ಬಳ್ಳಾರಿಯಲ್ಲಿ 10ಕ್ಕೂ ಹೆಚ್ಚು ಕಾರ್ಮಿಕ ಸಂಘಟನೆಗಳನ್ನು ಕಟ್ಟಿದ್ದರು. ಅವುಗಳಲ್ಲಿ ಮುಖ್ಯವಾಗಿ ಹಮಾಲಿಗಳ ಸಂಘ, ಸಕ್ಕರೆ ಕಾರ್ಖಾನೆ ಕಾರ್ಮಿಕ ಸಂಘ, ಗಣಿ ಕಾರ್ಮಿಕರ ಸಂಘ, ಪುರಸಭೆ ಕಾರ್ಮಿಕರ ಸಂಘ, ಬೀಡಿ ಕಾರ್ಮಿಕರ ಸಂಘ, ಆಟೋಮೊಬೈಲ್ ಹಾಗೂ ವಿದ್ಯುತ್ ಇಲಾಖೆ ನೌಕರರ ಸಂಘ ಇವೇ

ಮುಂತಾದವುಗಳು. ಕಾರ್ಮಿಕರಲ್ಲಿ ಸಂಘಟಿತ ಮನೋಭಾವವನ್ನು ಬೆಳೆಸುವಲ್ಲಿ ಬಳ್ಳಾರಿ ಭಾಗದಲ್ಲಿ ದಾಸನ್ ಅವರು ವಹಿಸಿದ ಪಾತ್ರ ದೊಡ್ಡದು. ಮಾಸಲು ಜುಬ್ಬಾ, ಪೈಜಾಮಾ, ಸಣಕಲು ದೇಹದ ದಾಸನ್ ಹಿಂದ್ ಮಜ್ದೂರ್ ಸಂಘದ ಧ್ವಜವನ್ನು ಹಿಡಿದು ಜಾಥಾ ಹೊರಟಾಗ, ವಿದ್ಯಾರ್ಥಿಯಾಗಿದ್ದ ಈ ಲೇಖಕನು ಜಯಕಾರ ಹಾಕಿಕೊಂಡು ಹಿಂಬಾಲಿಸಿದ್ದನ್ನು ಜ್ಞಾಪಿಸಿಕೊಂಡು ಈಗಲೂ ರೋಮಾಂಚಿತನಾಗುತ್ತಾನೆ. ದಾಸನ್ ಸಕ್ಕರೆ ಕಾರ್ಮಿಕರ ಪರವಾದ ಹೋರಾಟ ರೂಪಿಸುವಲ್ಲಿ ಹೆಚ್ಚು ಕ್ರಿಯಶೀಲರಾಗಿದ್ದರು. ಅಖಿಲ ಭಾರತ ಸಕ್ಕರೆ ಕಾರ್ಮಿಕರ ಫೆಡೆರೇಷನ್‌ನ ಉಪಾಧ್ಯಕ್ಷ, ಕರ್ನಾಟಕ ಸಕ್ಕರೆ ಕಾರ್ಖಾನೆ ಸಂಘಗಳ ಕಾರ್ಮಿಕ ಒಕ್ಕೂಟದ ರಾಜ್ಯಾಧ್ಯಕ್ಷ, ಹಿಂದ್ ಮಜ್ದೂರ್ ಪಂಚಾಯತ್‌ಗೆ ಅಧ್ಯಕ್ಷರಾಗಿದ್ದರು.

ದಾಸನ್‌ರ ಕಾರ್ಮಿಕ ಹೋರಾಟ ಕಾನೂನು ರೀತ್ಯವಾಗಿರುತ್ತಿತ್ತು. ಹಾಗಾಗಿ ಈ ಭಾಗದ ಕಾರ್ಖಾನೆಗಳ ಮಾಲೀಕರು ದಾಸನ್‌ರನ್ನು ತುಂಬಾ ಪ್ರೀತಿ–ಗೌರವದಿಂದ ಕಾಣುತ್ತಿದ್ದರು. ಯಾವುದೇ ಸಂಗತಿ ಇದ್ದರು ಮಾಲೀಕರಿಗೆ ಮೊದಲು ನೋಟಿಸ್ ಕಳುಹಿಸುತ್ತಿದ್ದರು. ಆ ನೋಟಿಸ್ ನೋಡಿದ ತಕ್ಷಣ ಮಾಲೀಕರು ಸಾಲೊಮನ್ ಹತ್ತಿರ ಬಂದು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಇಚ್ಚೈಸುತ್ತಿದ್ದರು. ಸಾಲೊಮನ್ ಕಾರ್ಮಿಕರ ಬಹಿರಂಗ ಸಭೆಗಳಲ್ಲಿ ಆಗಲೀ ಅಥವಾ ಪಕ್ಷದ ಸಭೆಗಳಲ್ಲಿ ಆಗಲೀ ತುಂಬಾ ಮೆದುವಾಗಿ ಮಾತನಾಡುತ್ತಿದ್ದರು. ತಾತ್ತ್ವಿಕವಾಗಿ ಗಟ್ಟಿಯಾಗಿದ್ದ ದಾಸನ್ ಅಧಿಕಾರ ರಾಜಕಾರಣದಲ್ಲಿ ಹಿಂದೆ ಉಳಿದರು. ಹೆಚ್ಚು ಮಾತನಾಡುತ್ತಿದ್ದ ಎಂ.ಪಿ.ಪ್ರಕಾಶ್ ಮುಂತಾದವರು ಅಧಿಕಾರ ರಾಜಕಾರಣದಲ್ಲಿ ಲಾಭ ಪಡೆಯುತ್ತ ರಾಜಿಯಾಗುತ್ತಾ ಹೋದರು. ದಾಸನ್‌ರವರು ಎಂ.ಪಿ.ಪ್ರಕಾಶ್‌ರವರ ನಡೆ ಮತ್ತು ರಾಜಕೀಯ ನಿಲುವುಗಳನ್ನು ಇಷ್ಟಪಡದೇ ಕೆಲವೊಮ್ಮೆ ಕಟುವಾಗಿ ವಿರೋಧಿಸುತ್ತಿದ್ದರು. ಹೀಗಾಗಿ ಪ್ರಕಾಶ್ ಸಮಾಜವಾದಿ ಪಕ್ಷದ ಕಛೇರಿಗೆ ಬರುವುದನ್ನೇ ಕಡಿಮೆ ಮಾಡಿದರೆಂದು ದಾಸನ್‌ರವರ ಸಾಕು ಮಗಳಂತಿದ್ದ ಆಪ್ತ ಸಹಾಯಕಿ ಶಾಂತಮ್ಮನವರ ಅಭಿಪ್ರಾಯ.

1934ರ ನಂತರ ಸಮಾಜವಾದಿ ಪಕ್ಷ ರೂಪಿಸುತ್ತಿದ್ದ ರೈತ ಹೋರಾಟಗಳು ಸಹಜವಾಗಿ ಸಮಾಜವಾದಿ ಆಶಯಗಳಿರುವ ಗೆಳೆಯರನ್ನು ತನ್ನತ್ತ ಸೆಳೆಯುತ್ತಿದ್ದವು. ಹಾಗಾಗೀ ದಾಸನ್ ಕಾಗೋಡು ರೈತ ಹೋರಾಟದಲ್ಲಿ ಗೋಪಾಲಗೌಡರೊಂದಿಗೆ ಸಕ್ರಿಯವಾಗಿ ಭಾಗವಹಿಸಿದ್ದು ತಿಳಿದುಬರುತ್ತದೆ. 1973ರಲ್ಲಿ ಸಂಡೂರಿನ ಮಾಜಿ ರಾಜ ಎಂ.ವೈ.ಘೋರ್ಪಡೆ ರೈತರ ಜಮೀನನ್ನು ತನ್ನ ವಶದಲ್ಲೇ ಇಟ್ಟುಕೊಂಡಿರುವುದನ್ನು ಪ್ರತಿಭಟಿಸಿ ಆ ಜಮೀನಿನ ವಿಮೋಚನೆಗಾಗಿ ಹೋರಾಟವನ್ನು ಸಂಘಟಿಸಿದವರಲ್ಲಿ ಯಜಮಾನ್ ಶಾಂತರುದ್ರಪ್ಪ, ಎಲಿಗಾರ ತಿಮ್ಮಪ್ಪನವರೊಂದಿಗೆ ದಾಸನ್ ಕೂಡಾ ಒಬ್ಬರು. ಕಾನೂನಿನ ವಿಷಯದಲ್ಲಿ ದಾಸನ್ ಆಳವಾದ ಜ್ಞಾನವನ್ನು ಹೊಂದಿದ್ದ ಕಾರಣ, ಹೋರಾಟಕ್ಕೆ ಬೇಕಾದ ಕಾನೂನಿನ ಚೌಕಟ್ಟನ್ನು ತುಂಬಾ ಜಾಣ್ಮೆಯಿಂದ ನಿರ್ವಹಿಸಿದರು. ಜಾರ್ಜ್ ಫರ್ನಾಂಡಿಸ್ ಅವರೊಂದಿಗೆ ಆತ್ಮಿಯ ಸಂಬಂಧ ಹೊಂದಿದ್ದರಿಂದಾಗಿ ಹೋರಾಟದ ರೂಪು ರೇಷೆಗಳ ಬಗ್ಗೆ ಅವರೊಂದಿಗೆ ಚರ್ಚಿಸುತ್ತಿದ್ದರು. ಸಂಡೂರು ಭೂ ಹೋರಾಟದ ಯಶಸ್ಸಿನಲ್ಲಿ ಇವರ ಪಾತ್ರವನ್ನು

ಅಷ್ಟಾಗಿ ಮೇಲ್ಸ್ತರಕ್ಕೆ ತರದೆ ಗೌಣಗೊಳಿಸಲಾಯಿತು.


ದಾಸನ್ ಅವರು ನಿಜಾರ್ಥದಲ್ಲಿ ಕರ್ನಾಟಕದ ಬಹುದೊಡ್ಡ ಕಾರ್ಮಿಕ ನಾಯಕರು. ಎಪ್ಪತ್ತರ ದಶಕದಲ್ಲಿ ಕರ್ನಾಟಕ ಸಮಾಜವಾದಿ ಪಕ್ಷದ ರಾಜ್ಯಾಧ್ಯಕ್ಷರಾಗಿದ್ದ ಕೆ.ಜಿ.ಮಹೇಶ್ವರಪ್ಪನವರು ದಾಸನ್ ಬಗ್ಗೆ ಹೀಗೆ ಹೇಳುತ್ತಾರೆ. 'ಒಳ್ಳೆ ಲೇಬರ್ ಲೀಡರ್ ಅವ್ರು ಅಂಡ್ ಕಮ್ಯೂನಿಟಿ ಡಿಸ್ ಅಡ್ವಾಂಟೇಜ್ ಇರ್ತದೆ. ಬಿಕಾಸ್ ಹಿ ವಾಸ್ ಎ ಕ್ರಿಶ್ಚಿಯನ್. ಬಳ್ಳಾರಿಯಲ್ಲಿ ಬಾಳಾ ಹೋರಾಟ ಮಾಡ್ಯಾರ ಅವ್ರು. ನಮ್ ಸ್ಟೇಟ್‌ನ ಟಾಪ್ ಮೋಸ್ಟ್ ಟ್ರೇಡ್ ಯೂನಿಯನ್ ಲೀಡರ್ ಅವರು.' ಎನ್ನುತ್ತಾರೆ. ಈ ಮಾತು ದಾಸನ್‌ರವರ ವ್ಯಕ್ತಿತ್ವ ಮತ್ತು ಹೋರಾಟದ ಬದುಕಿಗೆ ಕನ್ನಡಿ ಹಿಡಿಯುತ್ತದೆ. ಈಗಲೂ ಬಳ್ಳಾರಿಯ ಹಿರಿಯ ಕಾರ್ಮಿಕರನ್ನು ಭೇಟಿಯಾದರೆ, ಅವರು ಕಾರ್ಮಿಕರ ದೇವರು ಎನ್ನುತ್ತಾ ತಮ್ಮೊಳಗೆ ಮಿಂಚಿನ ಸಂಚಾರವಾದಂತೆ ಭಾವುಕರಾಗುತ್ತಾರೆ.

ಗಾಂಧಿ ತತ್ತ್ವವನ್ನು ಬದುಕಿದ ದಾಸನ್ ತಮ್ಮ 81ನೇ ವಯಸ್ಸಿನಲ್ಲಿ ಗಾಂಧಿ ಹುಟ್ಟಿದ ದಿನವೇ ಅಕ್ಟೋಬರ್ 2, 1995ರಂದು ತಮ್ಮ ಹೋರಾಟ ಯಾತ್ರೆಯನ್ನು ಮುಗಿಸಿದರು.

–ಸಿ.ಚನ್ನಬಸವಣ್ಣ

(ಮೇ, 2014)

ಸರಳ ಜೀವನದ ಅಪ್ಪಟ ಹೋರಾಟಗಾರ ಬೇಲೂರೆ



'ಎನಗಿಂತ ಕಿರಿಯರಿಲ್ಲ...' ಎಂಬ ಬಸವಣ್ಣನವರ ನುಡಿಯಂತೆ ಮಹಾ ನಾಯಕತ್ವದ ಗುಣ ಹೊಂದಿದ್ದರೂ ಸರಳವಾಗಿ ಬದುಕಿದವರು, ಜನಸಾಮಾನ್ಯರಲ್ಲಿಯೆ ಬೆರೆತು ಶ್ರೀ ಸಾಮಾನ್ಯರ ಬದುಕ ಕಟ್ಟಿದವರು ಕಾಶಿನಾಥ ಬೇಲೂರೆ ಅವರು 'ಉದಾತ್ತ ವಿಚಾರ, ಸರಳ ಜೀವನ', ಎಂಬುದಕ್ಕೆ ವ್ಯಾಖ್ಯಾನ ಬರೆದು ಬದುಕಿರುವ ಇವರು ದೀನದಲಿತರ, ಬಡವರ ಏಳಿಗೆಯಲ್ಲಿ ರಾಷ್ಟ್ರದ ಏಳಿಗೆ ಅಡಗಿದೆ ಎಂದು ನಂಬಿದವರು. ಇಸ್ತ್ರಿ ಹಾಕದ ಬಿಳಿ ಬಟ್ಟೆ, ತಗಡಿನ ಮನೆ, ನಾಳೆಗಾಗಿ ಖಾಲಿ ಇರುವ ಅಡುಗೆ ಮನೆಯ ಪಾತ್ರೆಗಳು, ಸಮಾಜ ಸೇವೆಗಾಗಿ ಅಖಂಡ ಬ್ರಹ್ಮಚರ್ಯ ಇವು ಇವರ ಸಮಾಜವಾದ ನಿಲುವಿನ ಆಸ್ತಿಗಳು. ಅಧುನಿಕತೆಯ ರಾಜಕೀಯ ಸೋಗಲಾಡಿತನಗಳ ಮಧ್ಯ ಅಪರೂಪದ ಪ್ರಾಮಾಣಿಕ ರಾಜಕಾರಣಿ ಇವರು.

ಮೂಲತಃ ಬೀದರ ಜಿಲ್ಲೆಯ ಔರಾದ ತಾಲೂಕಿನ ಮದನೂರ ಗ್ರಾಮದವರು. ಆರ್ಥಿಕವಾಗಿ ಬಡವರಾದರೂ ಹೃದಯ ಶ್ರೀಮಂತಿಕೆ ಹೊಂದಿರುವ ಬೇಲೂರೆ ಮನೆತನದ ಸಂಗಮ್ಮ ಗುರಪ್ಪ ದಂಪತಿಗಳಿಗೆ 1932ರಲ್ಲಿ ಜನಿಸಿದ ಇವರ ಬಾಲ್ಯದ ಶಿಕ್ಷಣ ಸಮೀಪದ ಉದ್ಗೀರನಲ್ಲಾದರೆ, ಕಾಲೇಜು ಶಿಕ್ಷಣ ಹೈದ್ರಾಬಾದಿನ ಚಾದರಘಾಟ ಕಾಲೇಜಿನಲ್ಲಿ ನೆರವೇರಿತು.

ವಿದ್ಯಾರ್ಥಿ ಜೀವನದಲ್ಲೆ ಬಂಡಾಯ ಮನೋಭಾವ ಹೊಂದಿದ್ದ ಬೇಲೂರೆ ಉದ್ಗೀರದ ಆರ್ಯ ಸಮಾಜದಿಂದ ಪ್ರಭಾವಿತರಾಗಿ ಓದು ಮುಗಿದೊಡನೆ ದೇಶ ಕಟ್ಟಲು ನಿಂತವರು. ಮನೆಗೆದ್ದು ಮಾರು ಗೆಲ್ಲು ಎಂಬಂತೆ ತಮ್ಮ ಗ್ರಾಮದ ಮೂಲಕವೇ ಸಾಮಾಜಿಕ ಶುದ್ಧೀಕರಣಕ್ಕೆ ನಿಂತವರು. ಅಸ್ಪೃಶ್ಯತೆ ವಿರೋಧಿ ಅಂದೋಲನ ನಡೆಸಿ, ಸ್ವಗ್ರಾಮಸ್ಥರಿಂದಲೆ ಪೆಟ್ಟುತಿಂದು ಸಾಮಾಜಿಕ ಬಹಿಷ್ಕಾರಕ್ಕೂ ಒಳಗಾದರು. ಆದರೆ ಧೃತಿಗೆಡದೆ, ಹರಿಜನರಿಗೆ ಬೆಂಬಲ ಕೊಟ್ಟರು. ಮೇಲ್ವರ್ಗದವರು ದಲಿತರನ್ನು ಕರೆಯದೇ ಇದ್ದಾಗ 'ಫೈಬರ್ ಸೊಸಾಯಿಟಿ'ಯನ್ನು ಆರಂಭಿಸಿದರು. ಅದರ ಫಲವಾಗಿ ಅಂಥ ಸಣ್ಣ ಹಳ್ಳಿಯಲ್ಲಿ ನೂರಾರು ಕುಟುಂಬಗಳು ಸ್ವಾವಲಂಬಿಗಳಾಗಿ ಜೀವನ ಸಾಗಿಸುತ್ತಿದ್ದಾರೆ. ಆಶ್ಚರ್ಯವೆಂದರೆ, ಜಾಗತೀಕರಣದ ಕಬಂಧ ಬಾಹುಗಳ ಮಧ್ಯೆ, ಈ ಚಿಕ್ಕ ಹಳ್ಳಿಯಲ್ಲಿ ಉತ್ಪನ್ನವಾದ ವಸ್ತುಗಳು, ಹುಬ್ಬಳಿ, ಲಾತೂರ ಮತ್ತು ಉದ್ಗೀರ ಸೇರಿದಂತೆ ಅನೇಕ ಕಡೆ ರಫ್ತಾಗುತ್ತ ಜಾಗತಿಕ ಮಾರುಕಟ್ಟೆಗೆ ಎದುರಾಗಿ ನಿಂತಿರುವದು ನೆಲನಿಷ್ಠವಾದ ದೇಶಿಯತೆ ಹಾಗೂ ಶ್ರಮ ಸಂಸ್ಕೃತಿಯ ಜೀವಂತಿಕೆಯ ಹಿಂದೆ ಬೇಲೂರೆಯವರ ಕಕ್ಕುಲತೆಯಿದೆ.

ಸಮಾಜ ಸೇವೆಗೆ ತೊಡಗಿಸಿಕೊಂಡ ಕಾಶಿನಾಥ ಬೇಲೂರೆ ಅವರಿಗೆ,

ಜನಸಾಮಾನ್ಯರ ಮಧ್ಯ ಬೆರೆತಾಗ, ತಳಮಟ್ಟದ ಜನರ ಸಮಸ್ಯೆಗಳು ಅರಿವಿಗೆ ಬಂದವು, ಆಗ ಗುಲಬರ್ಗಾದಿಂದ ಎಲ್.ಎಲ್.ಬಿ. ಪದವಿ ಪಡೆದು ವಕೀಲರಾದರು. ಆದರೆ ವಕೀಲಿ ವೃತ್ತಿ ಹಣಗಳಿಸಿ ವ್ಯಾಪಾರೀಕರಣ ಮಾಡಲು ಅಲ್ಲ. ಬದಲಾಗಿ, ಸಂಕಟದಲ್ಲಿರುವ ದೀನ ದಲಿತರ, ಬಡವರ ನೆರವಿಗೆ ನಿಂತು ಸಂಬಂಧಗಳನ್ನು ಮಾನವೀಕರಣಗೊಳಿಸಲು, ಜನಸಾಮಾನ್ಯರಿಗೆ ನೇರವಾಗುವುದೇ ಬದುಕಿನ ಪರಮ ಸತ್ಯವೆಂದು ನಂಬಿ ನಡೆಯಲ್ಲಿ ನುಡಿಯ ಪೂರೈಸಿದವರು.

ಬೀದರ ತೀರ ಹಿಂದುಳಿದ ಪ್ರದೇಶವಾಗಿದ್ದು, ಶೈಕ್ಷಣಿಕ ಅಭಿವೃದ್ಧಿಯಿಂದ ಮಾತ್ರ ಜನಸಾಮಾನ್ಯರ ಏಳಿಗೆ ಎಂದರಿತು, 'ರಾಷ್ಟ್ರೀಯ ರಚನಾತ್ಮಕ ಸೂಸಾಯಿಟಿ' ಎಂಬ ಹೆಸರಲ್ಲಿ ಶಿಕ್ಷಣ ಸಂಸ್ಥೆಯೊಂದನ್ನು ಸ್ಥಾಪಿಸಿ ಬೀದರ ಸೇರಿದಂತೆ ಜಿಲ್ಲೆಯಲ್ಲಿ ಅನೇಕ ಕಡೆ ಶಾಲಾ ಕಾಲೇಜುಗಳನ್ನು ತೆರೆದರು.

ಮೂಲತಃ ರೈತ ಕುಟುಂಬದಿಂದ ಬಂದ ಇವರು ರೈತರ, ಕಾರ್ಮಿಕರ ಬಗ್ಗೆ ಅಪಾರ ಕಾಳಜಿ ಹೊಂದಿದವರು. ಕಬ್ಬಿನ ಬೆಲೆ ಕಡಿಮೆಯಾದಾಗ ಆ ಕಾಲಕ್ಕೆ ಬೆಂಬಲ ಬೆಲೆಗಾಗಿ ಹೋರಾಡಿ, ಬೃಹತ್ ರೈತರ‍್ಯಾಲಿ ನಡೆಸಿ ಯಶ ಕಂಡರು, ಬೀದರ ಬಸ್‌ಡಿಪೋ ಸ್ಥಾಪನೆ ಹಿಂದೆಯೂ ಇವರ ಪರಿಶ್ರಮವಿದೆ. ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಯಾಗಿದ್ದಾಗ 'ಬೀದರ ಸಮಗ್ರ ಅಭಿವೃದ್ಧಿ'ಗಾಗಿ ಈಶ್ವರಪ್ಪ ಚಾಕೋತೆ ಮೊದಲಾದವರನ್ನು ಕರೆದುಕೊಂಡು ಬೀದರದಿಂದ ಬೆಂಗಳೂರುವರೆಗೆ ಪಾದಯಾತ್ರೆ ಕೈಗೊಂಡರು. ಹೀಗೆ ಯಾವುದೇ ಜನಪರ ಕಾಳಜಿ, ಕೆಲಸಗಳಿದ್ದಾಗ ಕಾಶೀನಾಥ ಬೇಲೂರೆಯವರ ಹೋರಾಟ ಇದ್ದೆ ಇರುತ್ತಿತ್ತು, 'ಶೋಷಣೆ ರಹಿತ ಸಮಾಜ, ಭ್ರಷ್ಟಾಚಾರ ಮುಕ್ತದೇಶ' ರಚನೆಯಾಗಬೇಕೆಂಬ ಸದಾಶಯದಿಂದ ಹೋರಾಟ ನಡೆಸಿದವರು.

ಧರ್ಮಸಮ್ಮತ ರಾಜಕೀಯ ಇರಬೇಕು ಎಂಬ ಗಾಂಧೀಜಿ ನಿಲುವು ಸಮರ್ಥಿಸುವ ಬೇಲೂರೆಯವರು, ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ಲೋಹಿಯಾ ಅವರಿಂದ ಪ್ರಭಾವಿತರಾಗಿದ್ದು, ಬಿ.ಎಂ. ಬಿಜಾಪುರೆ ಅವರ ಪ್ರೀತಿಯ ಒತ್ತಾಯದಿಂದ ರಾಜಕೀಯ ಪ್ರವೇಶಮಾಡಿ, ಕಲುಷಿತ ರಾಜಕಾರಣ ತಿಳಿಗೊಳಿಸಬೇಕೆಂದು ಯೋಚಿಸಿದವರು. 1975ರಲ್ಲಿ ಸರ್ಕಾರದ ತುರ್ತು ಪರಿಸ್ಥಿತಿ ಘೋಷಿಸಿ, ಜಯಪ್ರಕಾಶರನ್ನು ಬಂಧಿಸಿದಾಗ, ಅದರ ವಿರುದ್ಧ ಪ್ರತಿಭಟಿಸಿ 19 ತಿಂಗಳ ಕಾಲ ಬೆಂಗಳೂರು 'ಜೈಲುವಾಸ' ಅನುಭವಿಸಿದರು. ಆ ಜೈಲಿನಲ್ಲಿಯೆ ದೇಶದ ಪ್ರಮುಖ ನಾಯಕರಾದ ಎಲ್.ಕೆ. ಅಡ್ವಾಣಿ, ಶಾಂತಿಭೂಷಣ, ಮಧು ದಂಡವತೆ, ಜೆ.ಎಚ್. ಪಟೇಲ್ ಮೋದಲಾದವರ ಸಂಪರ್ಕದಿಂದ ಅವರಲ್ಲಿನ ಜನಪರ ಕಾಳಜಿ ಮತ್ತಷ್ಟೂ ಹರಳುಗಟ್ಟಿತ್ತು.

ಬಹುಭಾಷೆ ಪ್ರವೀಣರಾದ ಅವರದ್ದು ಮಾತೃ ಭಾಷೆ ಕನ್ನಡವಾಗಿದ್ದು ಉರ್ದು, ಮರಾಠಿ, ಹಿಂದಿ, ಇಂಗ್ಲೀಷ್, ಭಾಷೆಗಳಲ್ಲಿ ಸರಾಗವಾಗಿ ಮಾತಾಡುತ್ತಾರೆ. ಸೃಜನಶೀಲ ಮನಸ್ಸಿನ ಬೇಲೂರೆ ಅವರು ಜೈಲಿನಲ್ಲಿದ್ದಾಗ, 'ರಾಜಕೀಯ ವಿಪ್ಲವತಾ' ಎಂಬ ಕೃತಿ ಬರೆದರು, ವಿದ್ಯಾರ್ಥಿ ದೆಸೆಯಲ್ಲಿಯೇ ಮಾರ್ಕ್ಸ್ ಲೋಹಿಯಾ, ಗಾಂಧಿ, ಟಾಲ್‌ಸ್ಟಾಯ್, ರಸ್ಕಿನ್, ಲೆನಿನ್, ಮೊದಲಾದ ಸಮಾಜವಾದಿ ಬರಹಗಾರರ

ಕೃತಿಗಳನ್ನು ಅಧ್ಯಯನ ಮಾಡಿದ್ದರಿಂದ ಅವರೊಳಗೊಬ್ಬ ಸಮಾಜವಾದಿ ಬೆಳೆದ.

ರಾಜಕಾರಣಿಗಳಲ್ಲಿ ಸದಭಿರುಚಿ ಮೂಡಬೇಕು, ಅಧಿಕಾರ ಕೇಂದ್ರಿತ ರಾಜಕೀಯದಿಂದ ದೇಶಕ್ಕೆ ಯಾವತ್ತು ಒಳಿತಾಗದು. ಆದ್ದರಿಂದ ಈಗಿರುವ ಚುನಾವಣೆ ಕ್ರಮ ಕೂಡ ಬದಲಾಗಬೇಕೆಂದು ವಾದಿಸುವ ಅವರು 'ಲೋಕ ಸೇವಾ ಸಂಘ'ದಿಂದ ರಾಜಕೀಯ ಪ್ರವೇಶಮಾಡಿ 1978ರಲ್ಲಿ ಜನತಾ ಪಕ್ಷದ ಪ್ರತಿನಿಧಿಯಾಗಿ ವಿಧಾನಸಭೆಗೆ ಸ್ಪರ್ಧಿಸಿ ಸೋತರು. "ಅವರ ಈ ಸೋಲು ಜನತೆಯ ಸೋಲು, ಜನಪರ ಕಾಳಜಿಯ ಒಬ್ಬ ನಿಷ್ಠಾವಂತ ಸಮಾಜವಾದಿಯನ್ನು ಗೆಲ್ಲಿಸಲು ನಮ್ಮ ಜನ ಅಸಮರ್ಥರಾದದ್ದು – ನಮ್ಮ ಸಾಂಸ್ಕೃತಿಕ ದುರಂತ"ವೆಂದು ಹಿರಿಯ ಸಾಹಿತಿ ಪಂಚಾಕ್ಷರಿ ಪುಣ್ಯಶೆಟ್ಟಿ ವಿಷಾದದಿಂದ ನುಡಿಯುತ್ತಾರೆ.


ಬೇಲೂರೆಯವರಿಗೆ ಪ್ರಜಾಪ್ರಭುತ್ವದಲ್ಲಿ ಬಲವಾದ ನಂಬಿಕೆ ಇದ್ದರೂ, ಅಧಿಕಾರ ವಿಕೇಂದ್ರೀಕರಣ ತಳಮಟ್ಟದಲ್ಲಿ ಇನ್ನೂ ಪ್ರಬಲವಾಗಬೇಕು. ದೇಶದ ಆಯ–ವ್ಯಯದ ಮೇಲೆ ವಿಶೇಷವಾಗಿ ಒಟ್ಟು ಖರ್ಚು ವೆಚ್ಚ–ಸರಕಾರದ ಹಿಡಿತದಲ್ಲಿರಬೇಕು. ಅದೇ ನಿಜವಾದ ಕಲ್ಯಾಣ ರಾಜ್ಯವೆಂದು ಸಾರುವ ಮೂಲಕ ಜಾಗತೀಕರಣದ ಹಾಗೆ ಚಳವಳಿಗಳೂ ಕೂಡ ನಿರಂತರವಾಗಿರಬೇಕು, ಅದರಿಂದ ಜನಜಾಗೃತಿ ಉಂಟಾಗಿ ರಾಷ್ಟ್ರದ ಪ್ರಗತಿಗೆ ಪೂರಕವಾಗುತ್ತದೆ. ಜಾತ್ಯತೀತ ನಿಲುವು ಸಂವಿಧಾನದಲ್ಲಿದ್ದರೆ ಸಾಲದು, ಜನಮಾನಸದ ಮೂಲ ಕಾಳಜಿಯ ಕೇಂದ್ರವಾಗಬೇಕೆಂಬ ಹಂಬಲ ಹೊಂದಿರುವ ಕಾಶಿನಾಥ ಬೇಲೂರೆ ಅವರದ್ದು, ಬುದ್ಧ–ಬಸವ–ಗಾಂಧಿ ಪ್ರೇರಿತ ಸಮತಾ ತತ್ವದ ತಳಹದಿಯ ಮೇಲೆ ಜನ ನಡೆಯಬೇಕೆಂಬ ಆಶಯ ಹೊಂದಿರುವರು.

ದಟ್ಟ ಜೀವನಾನುಭವ ಹೊಂದಿರುವ ಅವರು ದೈಹಿಕವಾಗಿ ಬಳಲಿದ್ದಾರೆ, ಅಶಕ್ತರಾದುದರಿಂದ ಆರ್.ಆರ್.ಕೆ. ಸಂಸ್ಥೆಯವರ ಆರೈಕೆಯಲ್ಲಿ ಬದುಕು ನೂಕುತ್ತಿದ್ದಾರೆ. ಸಂಗಮೇಶ್ವರ ಪಾಟೀಲ್ ಎಂಬ ವಿದ್ಯಾರ್ಥಿ, ಉಮಾಕಾಂತ ಸ್ವಾಮಿ ಎಂಬ ನೌಕರರು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಾರೆ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ದುಡಿದ ವ್ಯಕ್ತಿಯ ಸುತ್ತಲಿನ ಸಮಾಜ ಯಾವತ್ತೂ ಕುರುಡು ಎಂಬುದು ಅವರ ಮಾತಿನಲ್ಲೂ ಸತ್ಯವಾಗಿದೆ. ಆದರೂ ಔರಾದ ತಾಲೂಕು ಆಡಳಿತದಿಂದ ಅವರಿಗೆ 'ಅಮರವಾಡಿ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಹೀಗೆ ಸತ್ಯಶುದ್ಧ ಹಾಗೂ ಸಾತ್ವಿಕ ಜೀವನ ನಡೆಸಿರುವ ಅವರು ಇರುವಷ್ಟು ಕಾಲ ಆಯುರಾರೋಗ್ಯದಿಂದ ಜೀವಿಸಲಿ ಎಂದು ಆಶಿಸುವೆ.

–ಡಾ. ಬಸವರಾಜ ಬಲ್ಲೂರ

(ಮಾರ್ಚ್, 2014)

ಮಾತೃ ವಾತ್ಸಲ್ಯದ ದಿಟ್ಟ ಹೋರಾಟಗಾರ್ತಿ ಪೊನ್ನಮ್ಮಾಳ್



1976ನೇ ಇಸವಿಯಲ್ಲಿ 49ನೇ ಕನ್ನಡ ಸಾಹಿತ್ಯ ಸಮ್ಮೇಳನ ಶಿವಮೊಗ್ಗದಲ್ಲಿ ನಡೆಯಿತು. ಮುಕ್ತಾಯ ಸಮಾರಂಭ ಮುಗಿಸಿ ಡಿ. ದೇವರಾಜ ಅರಸು ಅವರು ಬಿಗಿ ಭದ್ರತೆಯಲ್ಲಿ ಹಿಂದಿರುಗುತ್ತಿದ್ದರು. ಆಗ ತುರ್ತು ಪರಿಸ್ಥಿತಿಯ ಕರಾಳ ದಿನಗಳು. ಇದನ್ನು ಪ್ರತಿಭಟಿಸ ಬೇಕೆಂದಿದ್ದವರು ಹಿಂದೆಗೆದಿದ್ದರು, ಆದರೆ ಪೊನ್ನಮಾಳ್ ತಮ್ಮ ಭುಜಕ್ಕೆ ಕಪ್ಪು ಬಟ್ಟೆ ಕಟ್ಟಿಕೊಂಡು 'ಧಿಕ್ಕಾರ'ದ ಕೂಗು ಹಾಕಿದರು, ಸಮೀಪದಲ್ಲಿದ್ದ ಸಚಿವ ಬದರಿನಾರಾಯಣ್‌ಗೆ "ಈ ತುರ್ತು ಪರಿಸ್ಥಿತಿಯ ಆಟ ಬಹಳ ದಿನ ನಡೆಯೊಲ್ಲ. ನೀವುಗಳು ಜೆ.ಪಿ.ಗೆ ಕೊಡುವ ತೊಂದರೆ, ಮುಂದೆ ಇಂದಿರಾ ಗಾಂಧಿಗೆ ತಿರುಗುತ್ತೆ. ಹುಷಾರ್!" ಎಂದರು. ಸುತ್ತಲಿದ್ದ ಜನ ಪೊನ್ನಮ್ಮಾಳ್‌ಗೆ ಏನು ಗತಿ ಕಾದಿದೆಯೋ ಎಂದು ಹೆದರಿದರು. ಆದರೆ ಆಕೆ ಜನ ತೆರಳುವವರೆಗೆ ಕಲ್ಲಿನಂತೆ ಅಲ್ಲೆ ನಿಂತಿದ್ದರು.

ಗೋಕಾಕ್ ಚಳವಳಿಯ ಸಂದರ್ಭದಲ್ಲಿ ಪೊನ್ನಮ್ಮಾಳ್ ಒಂದು ಭಾಷಣದಲ್ಲಿ 'ಡಾ॥ ರಾಜಕುಮಾರ್‌ದು ಬಿರುಗಾಳಿ, ತಾತ್ಕಾಲಿಕ. ಅದು ತಣ್ಣಗಾದ ಮೇಲೆ ಖಾಸಗಿಯವರ ವಿಷಗಾಳಿ ಬೇಗ ತಣ್ಣಗಾಗುವುದಿಲ್ಲ. ಅವರ ವಿರುದ್ಧ ಮತ್ತೆ ಚಳುವಳಿ ಮಾಡಬೇಕಾಗುತ್ತದೆ' ಎಂದು ಎಚ್ಚರಿಸಿದ್ದರು. ಅವರೊಂದು ಖಾಸಗಿ ಶಿಕ್ಷಣ ಸಂಸ್ಥೆಯ ನಿರ್ವಾಹಕ ಮಂಡಲಿಯಲ್ಲಿದ್ದರೂ "ಮೆಟ್ರಿಕ್, ಪಿ.ಯು.ಸಿ.ವರೆಗೆ ಶಿಕ್ಷಣ ವ್ಯವಸ್ಥೆ ರಾಷ್ಟ್ರೀಕರಣವಾಗಬೇಕು ಈ ಖಾಸಗಿಯವರಿಗೆ ರಾಷ್ಟ್ರವೂ ಇಲ್ಲ, ಶಿಕ್ಷಣವೂ ಇಲ್ಲ, ಕೇವಲ ಪ್ರದರ್ಶನ" ಎನ್ನುತ್ತಿದ್ದರು,

ಪೊನ್ನಮ್ಮಾಳ್‌ರ ಸ್ವಭಾವವೇ ನೇರ, ನಿಷ್ಠುರ. ತಮ್ಮ ಪರಿಸ್ಥಿತಿ ಏನಾಗುವುದೋ ಎಂಬ ಅಳುಕು ಅವರಿಗೆ ಇರಲಿಲ್ಲ, ರಾಜಕೀಯದ ವಿಚಾರಗಳು, ಜಾತಿ–ಮತಗಳ ಭೇದ–ಭಾವಗಳು, ಚಳುವಳಿಗಳು– ಅಲ್ಲೆಲ್ಲ ತಮ್ಮ ಅಭಿಪ್ರಾಯಗಳನ್ನು ವಾಸ್ತವಿಕವಾಗಿ ತೂಗಿ ನೋಡಿ ಹೇಳುತ್ತಿದ್ದರು. ಮುಖ ನೋಡಿ ಮಣೆ ಹಾಕುವರಾಗಿರಲಿಲ್ಲ. ಆಗಾಗ್ಗೆ ಸ್ವಲ್ಪ ಇಂಗ್ಲಿಷ್ ಬೆರೆಸಿ ಮಾತಾಡುತ್ತಿದ್ದರು– "Doctor (ಎಂದರೆ ಲೋಹಿಯಾ) and Gandhi have influenced me a lot. They made me what I am" ಎಂದು ಹೇಳುತ್ತಿದ್ದರು.

ತುಮಕೂರು ಜಿಲ್ಲೆ ಮಧುಗಿರಿಯಲ್ಲಿ ಹುಟ್ಟಿದ (1923) ಅವರು ತಂದೆಯ ಕಾಲದಿಂದಲೇ ಶಿವಮೊಗ್ಗದಲ್ಲಿ ವಾಸವಾಗಿದ್ದರು. ತಂದೆ– ಟಿ.ಸಿ.ಎಸ್.ಮಣಿಯಂ ತಾಯಿ – ಸ್ವರ್ಣಮ್ಮಾಳ್. ಮಣಿಯಂ ಖಾದಿ ಪ್ರಚಾರಕರು, ವ್ಯಾಪಾರಿಗಳು. ಹಳ್ಳಿಗಳಿಗೆ ಖಾದಿ ಪ್ರಚಾರ–ವ್ಯಾಪಾರಕ್ಕೆ ಹೋಗುವಾಗ ಮಗಳನ್ನು ಕರೆದುಕೊಂಡು ಹೋಗುತ್ತಿದ್ದರು,

1928ರಲ್ಲಿ ಗಾಂಧಿಯವರು ಶಿವಮೊಗ್ಗಕ್ಕೆ ಬಂದಾಗ ಅವರ ತೊಡೆಯ ಮೇಲೆ ಆಟವಾಡಿದ ಪೊನ್ನಮ್ಮಾಳ್, ಅವರಿಂದ ಚರಕವನ್ನು (ಈಗ ಆ ಚರಕ ಧರ್ಮಸ್ಥಳದ ವಸ್ತು ಸಂಗ್ರಹಾಲಯದಲ್ಲಿದೆ) ಪಡೆದು ಕಲಿತರು. ನಂತರ ಕಾಲಕ್ರಮೇಣ. ಶಿವಮೊಗ್ಗದ ಆ ಕಾಲದ ಸ್ವಾತಂತ್ರ್ಯ ಹೋರಾಟಗಾರರ ಒಡನಾಟ ಅವರ ಮೇಲೆ ಪ್ರಭಾವ ಬೀರಿದವು. ಹೆಣ್ಣು ಮಕ್ಕಳು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವುದು ಸುಲಭವಾಗಿರಲಿಲ್ಲ. ಅವರನ್ನು ಅನಂತರಾಮ ಅಯ್ಯಂಗಾರ್ ಎನ್ನುವವರ ಪತ್ನಿ "ಏನೇ ನಿಮ್ಮ ಅಪ್ಪ ಅಮ್ಮ ನಿನ್ನನ್ನು ಬಸವೀಗೆ ಬಿಡ್ತಾರೇನು?" ಎಂದು ಕೇಳಿದ್ದರು. ಹಿಂದಿ ಭಾಷೆ ಕಲಿಯುವ ನೆಪದಲ್ಲಿ ಕ್ರಮೇಣ ಅನೇಕ ಮಹಿಳೆಯರು ಚಳುವಳಿಗೆ ಬಂದರು. ಬಸವಾನಿ ರಾಮಶರ್ಮರ ಪತ್ನಿ ಸಾವಿತ್ರಮ್ಮ, ರತ್ನಮ್ಮ ಮಾಧವರಾವ್, ಎಸ್.ಆರ್ ಲಕ್ಷ್ಮೀದೇವಮ್ಮ, ಈಸೂರಿನ ಗೋವಿಂದಮ್ಮ ಮುಂತಾದವರು ಪೊನ್ನಮ್ಮಾಳ್ ಅವರೊಂದಿಗೆ ಮಲೆನಾಡಿನ ಭಾಗದ ಸ್ವಾತಂತ್ರ್ಯ ಹೋರಾಟವನ್ನು ತೀವ್ರಗೊಳಿಸಿದರು.

1942ರ ಚಳುವಳಿಯಲ್ಲಿ ವಿದ್ಯಾರ್ಥಿಗಳ ಪಾತ್ರ ಮರೆಯಲಾಗದಂತಹುದು. ಆಗ ಬೆಂಗಳೂರಿನಲ್ಲಿ ಬಿ.ಎಸ್ಸಿ. ಓದುತ್ತಿದ್ದ ಪೊನ್ನಮ್ಮಾಳ್ ಗೆಳತಿಯರೊಂದಿಗೆ ಚಳುವಳಿಗೆ ಧುಮುಕಿದರು, ಗಾಂಧೀಜಿ ಬಂಧನವಾದ ಕೂಡಲೇ ಚಳುವಳಿ ಮತ್ತಷ್ಟು ಬಿರುಸಾಯಿತು. ಪೊಲೀಸರ ಕಣ್ಣು ತಪ್ಪಿಸಿಕೊಂಡು ಜೈಲಿನಲ್ಲಿದ್ದ ಚಳುವಳಿಗಾರರಿಗೆ ಸಾರ್ವಜನಿಕರಿಂದ ಹಣ ಸಂಗ್ರಹಿಸುತ್ತಿದ್ದರು – ಪೊನ್ನಮ್ಮಾಳ್. ಅವರ ಗೆಳತಿಯರು ಶ್ರೀರಂಗಪಟ್ಟಣದ ಜೈಲಿನಲ್ಲಿದ್ದರು. ಮತ್ತೆ ಶಿವಮೊಗ್ಗದಲ್ಲಿ ರತ್ನಮ್ಮ ಮಾಧವರಾವ್ ಜೊತೆ ಹೋರಾಟ ಪ್ರಾರಂಭಿಸಿದರು. ತಾಲ್ಲುಕು ಕಛೇರಿ ಮೇಲೆ ಕಾಂಗ್ರೆಸ್ ಧ್ವಜ ಏರಿಸಲು ಎಂ.ಆರ್.ಲಕ್ಷ್ಮಮ್ಮ ಮುಂತಾದ ಮಹಿಳೆಯರು ಪ್ರಯತ್ನಿಸುತ್ತಿದ್ದಾಗ ಪೊನ್ನಮ್ಮಾಳ್ ಸೇರಿದಂತೆ ಎಲ್ಲರನ್ನೂ ಬಂಧಿಸಲಾಯಿತು. ಮೆಗ್ಗಾನ್ ಆಸ್ಪತ್ರೆಯ ಒಂದು ಭಾಗವನ್ನು ಜೈಲ್ ಎಂದು ಮಾಡಿ, ಅಲ್ಲಿ ಇವರನ್ನೆಲ್ಲಾ ಇರಿಸಲಾಯಿತು. ತಮ್ಮ ಎಳೆಯ ಮಗುವನ್ನು ಮನೆಯಲ್ಲಿ ಬಿಟ್ಟು ಬಂದು ಜೈಲು ಸೇರಿದ್ದರು– ರತ್ನಮ್ಮ ಮಾಧವರಾವ್. ಆದರೆ ಆರೈಕೆಯಿಲ್ಲದೆ ಆ ಮಗು ತೀರಿಹೋಯಿತು. ಮಗುವನ್ನು ಕಳೆದುಕೊಂಡ ತಾಯಿ ಮತ್ತು ಈ ಗೆಳತಿಯರೆಲ್ಲ ಜೈಲು ಕಂಬಿಗಳ ಹಿಂದೆ ಕಂಬನಿಗರೆಯುತ್ತಿದ್ದರು.

ಬಿಡುಗಡೆಯ ನಂತರ ವಿದೇಶಿ ವಸ್ತುಗಳ ಬಹಿಷ್ಕಾರ, ಈಚಲು ಮರ ಕಡಿತ, ದೀಪಾವಳಿಯಲ್ಲಿ ಪಟಾಕಿ ಸಿಡಿಸುವುದರ ನಿಷೇಧ, ಖಾದಿ ಮಾರಾಟ, ವಿದ್ಯಾರ್ಥಿ ಸಂಘಟನೆ ಮುಂತಾದವುಗಳನ್ನು ನಿರಂತರವಾಗಿ ಮಾಡುತ್ತಿದ್ದರು. ಕಾಗೋಡು ಚಳುವಳಿಯಲ್ಲಿ ಭಾಗವಹಿಸಿದ್ದ ಪೊನ್ನಮ್ಮಾಳ್‌ಗೆ ಖಾದ್ರಿ ಶಾಮಣ್ಣ, ಗೋಪಾಲಗೌಡ, ಗರುಡ ಶರ್ಮ, ಎಸ್.ವೆಂಕಟರಾಮ್, ಸಿ.ಜಿ.ಕೆ. ರೆಡ್ಡಿ , ವೈ. ಆರ್. ಪರಮೇಶ್ವರಪ್ಪ ಮುಂತಾದವರ ಸಹವಾಸ ಸಮಾಜವಾದಿ ವಿಚಾರಗಳನ್ನು ಗಟ್ಟಿಗೊಳಿಸಿತು.

ತತ್ವ–ಸಿದ್ಧಾಂತಗಳೆಲ್ಲಾ ಅನುಷ್ಠಾನ ಆಚರಣೆಗಳಿಂದಲೇ ಗಟ್ಟಿಯಾಗುವುದು ಮತ್ತು ಅವುಗಳ ನೈಜತೆಯ ಅರಿವಾಗುವುದು ಎಂದು ಅವರು ನಂಬಿದ್ದರು.

ಆದ್ದರಿಂದಲೇ ಅವರು ಯಾವುದೇ ಜನಪರವಾದ ಚಳುವಳಿಗೆ ಪ್ರಾಮಾಣಿಕವಾಗಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಸ್ವಾತಂತ್ರ್ಯದ ನಂತರ ಅವರಿಗೆ ದೊರೆತ ಅನೇಕ ಅವಕಾಶಗಳಲ್ಲಿ ಈ ಬದ್ಧತೆಯಿಂದಲೇ ಕಾರ್ಯ ನಿರ್ವಹಿಸಿದರು.

ಅವರು ತಾಲ್ಲೂಕು ಬೋರ್ಡ್ ಸದಸ್ಯರಾಗಿದ್ದಾಗ (1970) ಹಳ್ಳಿಗಳಲ್ಲಿ ಸುತ್ತಾಡಿ 35 ಹಳ್ಳಿಗಳಿಗೂ ಹೆಚ್ಚು ಮಹಿಳಾ ಮಂಡಳಿ ಸ್ಥಾಪಿಸಿದರು. ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ ಮುಖ್ಯ ಎಂದು ನಂಬಿದ್ದ ಅವರು ಹೊಲಿಗೆ ತರಬೇತಿಯಂತಹ ಸ್ವ-ಉದ್ಯೋಗದ ದಾರಿಯನ್ನು ನಿರ್ಮಿಸಿದರು. ಅನೇಕ ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಿದರು. ಮಕ್ಕಳ ವಿದ್ಯಾಸಂಸ್ಥೆಯ ಮೂಲಕ ಶಿಕ್ಷಕಿಯರ ತರಬೇತಿ ಕಾಲೇಜು, ಪ್ರೈಮರಿ ಶಾಲೆಗಳನ್ನು ಡಾ॥ ಕೃಷ್ಣಮೂರ್ತಿ ಮುಂತಾದವರೊಂದಿಗೆ ಸ್ಥಾಪಿಸಿದರು ಮತ್ತು ಅದರೊಂದಿಗೆ ನಿರ್ವಹಣೆಯನ್ನು ದಕ್ಷತೆಯಿಂದ ಮಾಡಿದರು. ವಿದ್ಯಾರ್ಥಿ ವೇತನ ಸಮಿತಿ, ಬಾಲಭವನ, ಮಕ್ಕಳ ಪುಸ್ತಕ ಭಂಡಾರ ಸ್ಥಾಪನೆ, ಕೇಂದ್ರೀಯ ಪುಸ್ತಕ ಭಂಡಾರ ಸಮಿತಿ ಇಲ್ಲೆಲ್ಲ ನಿಷ್ಠೆಯಿಂದ ಸೇವೆ ಸಲ್ಲಿಸಿದರು. ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಯಲ್ಲಿ ಮಕ್ಕಳ ಚಿಕಿತ್ಸಾ ವಿಭಾಗವನ್ನು ಪ್ರಾರಂಭಿಸಲು ಕಾರಣಕರ್ತರಾದರು. ಅನೇಕ ಪ್ರಾಕೃತಿಕ ವಿಕೋಪಗಳ ಸಂದರ್ಭಗಳಲ್ಲಿ ಬಟ್ಟೆ ಆಹಾರ ಔಷಧಿಗಳನ್ನು ಸಂಗ್ರಹಿಸಿ ನಿರಾಶ್ರಿತರಿಗೆ ಕಳುಹಿಸಿತ್ತಿದ್ದರು. ಯಾವುದೇ ಸಂಸ್ಥೆಯ ನಿರ್ವಹಣೆಯಿರಲಿ ಅವರು ಹಣ-ದುಡಿಮೆಯಿಲ್ಲದ 'ಹೆಸರು' ಇವುಗಳನ್ನು ಯಾವಾಗಲೂ ಅಪೇಕ್ಷಿಸಿದವರಲ್ಲ. ಇದಕ್ಕಾಗಿ ಯಾವ 'ರಾಜಕೀಯ'ವನ್ನು ಮಾಡಿದವರಲ್ಲ.

ಅವಿವಾಹಿತರಾಗಿದ್ದ ಪೊನ್ನಮ್ಮಾಳ್ ಅವರ ಮಹಿಳಾ ಪರವಾದ ಕಾಳಜಿಗಳು ವೃಥಾ ಪುರುಷರನ್ನು ಟೀಕಿಸುವ ರೀತಿಯದಲ್ಲ. ಸಾಮರ್ಥ್ಯ, ಸಮಾನತೆ, ಸ್ವಾತಂತ್ರ್ಯಗಳ ಬದುಕು ಮಹಿಳೆಯದಾಗಬೇಕು. ಎನ್ನುತ್ತಿದ್ದರು. ಅವರು ಹಿಂದಿನ ಸೋಷಿಯಲಿಸ್ಟ್ ಪಕ್ಷ, ನಂತರದ ಜನತಾ ಪಕ್ಷದಲ್ಲಿದ್ದಾಗ ಮಹಿಳಾ ಸಂಘಟನೆಗಾಗಿ ಅವಿಶ್ರಾಂತರಾಗಿ ದುಡಿದರು. ಹಿಂದಿನಿಂದಲೂ "ರಾಜಕೀಯ ಪಕ್ಷದಿಂದ ಹಿಡಿದು ಉಳಿದೆಲ್ಲ ಕ್ಷೇತ್ರಗಳಲ್ಲೂ ಮಹಿಳೆಯರಿಗೆ ಕಡ್ಡಾಯ ಮೀಸಲಾತಿ ಅನಿವಾರ್ಯ. ಈ ದೇಶದಲ್ಲಿ ಹೆಚ್ಚು ಶೋಷಿತರೆಂದರೆ ಮಹಿಳೆಯರೆ" ಎಂದು ಪ್ರತಿಪಾದಿಸುತ್ತಿದ್ದರು.

ಅವರು ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಪ್ರತಿಭಟಿಸುತ್ತಿದ್ದರು. 1994ರಲ್ಲಿ ತೀವ್ರಗೊಂಡಿದ್ದ 'ತುಂಗಾ ಮೂಲ ಉಳಿಸಿ' ಚಳುವಳಿಯ ಸಂದರ್ಭದಲ್ಲಿ ಅವರಿಗೆ 70 ವರ್ಷ ವಯಸ್ಸು, ಆರೋಗ್ಯವನ್ನು ಲೆಕ್ಕಿಸದೇ ಅರು ಈ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. "ಸರ್ಕಾರ, ಈ ಚಳುವಳಿಗಾರರ ಮೇಲೆ ದೌರ್ಜನ್ಯ ಎಸಗಿದರೆ ನಾನು ಮೊದಲು ಗುಂಡಿಗೆ ಬಲಿಯಾಗುತ್ತೇನೆ" ಎನ್ನುತ್ತಿದ್ದರು. ಇದೇ ಕಾಲದಲ್ಲಿ ಮಹಿಳಾ ಜಾಗೃತಿ, ಮಹಿಳಾ ವಿಮೋಚನೆ ಸಂಘಟನೆಗಳಿಗಾಗಿ ಶ್ರಮಿಸಿದರು. ಈ ಸಂಘಟನೆಗಳು 'ನಕ್ಸಲೈಟ್ ಪರ' ಎಂದು ಪೊಲೀಸರು ಕಿರುಕುಳ ಪ್ರಾರಂಭಿಸಿದರು. ಪೊನ್ನಮ್ಮಾಳ್‌ರು ಧೈರ್ಯವಾಗಿ, ಹೋರಾಟಗಾರ್ತಿ ಪಾರ್ವತಿಯ ಹತ್ಯೆಯನ್ನು ನಿಷ್ಠುರವಾಗಿ ಖಂಡಿಸಿದರು. 'ಪಾರ್ವತಿ ತುಂಬ ಒಳ್ಳೆಯ ಹುಡುಗಿ. ಅಂಥವಳು ನಕ್ಸಲೈಟ್ ಆಗಿದ್ದ ಮೇಲೆ ನಕ್ಸಲೈಟರು ಒಳ್ಳೆಯವರೆ ಇರಬೇಕು'. ಎನ್ನುತ್ತಿದ್ದರು.

ಅವರ ಬದುಕಿನ ಕೊನೆಯ ದಿನಗಳಲ್ಲಿ ಜಾಗತೀಕರಣದ ಆಕ್ರಮಣದ ವಿವಿಧ ವಿಕಾರಗಳ ಬಗ್ಗೆ ತುಂಬ ನೊಂದುಕೊಳ್ಳುತ್ತಿದ್ದರು. ಅದರಲ್ಲೂ ಮುಖ್ಯವಾಗಿ ಬಡವರು ಮತ್ತು ಕನ್ನಡ ಭಾಷೆಯ ಅವನತಿ. 'ಬಡವರನ್ನು ರಾಜಕಾರಣದ ಸುಳಿಗೆ ಎಳೆದುಕೊಳ್ಳುವುದನ್ನು ನಿಲ್ಲಿಸುವವರೆಗೆ ಅವರ ಉದ್ಧಾರ ಹೇಗೆ ಸಾಧ್ಯ?' 'ಇಂಗ್ಲಿಷ್ ಎಷ್ಟು ಬೇಕೊ ಅಷ್ಟೆ. ನಮ್ಮ ರಕ್ತದಲ್ಲಿ ಗುಲಾಮಗಿರಿ ಸೇರಿರುವಾಗ ಕನ್ನಡ ಅದೇನು ಮಾಡುತ್ತೆ...... ಪಾಪ? ಅನಾಥವಾಗಿ ಎಲ್ಲೊ ಬಿದ್ದಿರುತ್ತೆ' ಹೀಗೆ ಕೆಲವೊಮ್ಮೆ ಸಿಟ್ಟಿನಿಂದ, ನೋವಿನಿಂದ ಹೇಳುತ್ತಿದ್ದರು.

ಅವರು ಬದುಕಿನುದ್ದಕ್ಕೂ, ಸಮಕಾಲೀನರು, ತರುಣ-ತರುಣಿಯರೊಂದಿಗೆ ಪ್ರೀತಿಯಿಂದ ಬೆರೆಯುತ್ತಿದ್ದರು. ಯಾವಾಗಲು ಶುದ್ಧ ಖಾದಿಯುಡುಗೆಯಲ್ಲಿರುತ್ತಿದ್ದ ಅವರನ್ನು ಕೆಲವರು ಪೊನ್ನವ್ವ, ಕಿರಿಯರು ಪೊನ್ನಜ್ಜಿ ಎಂದು ಕರೆಯುತ್ತಿದ್ದರು. 2008 ರಲ್ಲಿ ನಮ್ಮಿಂದ ಮರೆಯಾದ ಮಾತೃ ವಾತ್ಸಲ್ಯದ ಪೊನ್ನವ್ವ ಅನೇಕ ಹೋರಾಟಗಾರರಿಗೆ ಮ್ಯಾಕ್ಸಿಂಗಾರ್ಕಿಯ ಕಾದಂಬರಿಯ ತಾಯಿಯಂತೆ ಕಾಣುತ್ತಿದ್ದರು.

–ಎಂ.ಬಿ.ನಟರಾಜ್

(ನವೆಂಬರ್, 2013)

ತ್ಯಾಗಜೀವಿ ಗೇರುಗಲ್ಲು ಕರಿಬಸಪ್ಪಗೌಡರು



ಕಳೆದ ಶತಮಾನದ ಎಪ್ಪತ್ತು ಎಂಭತ್ತರ ದಶಕಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ವಿಜೃಂಭಿಸಿದ ಸಮಾಜವಾದ ತನ್ನ ಅಂಕುರ ಅಸ್ತಿತ್ವ ಯಶಸ್ಸುಗಳಿಗಾಗಿ ಹಲವು ಶ್ರೀಮಂತ ಕುಟುಂಬಗಳನ್ನು ಬಲಿತೆಗೆದುಕೊಂಡಿದೆ. ಹಲವು ತ್ಯಾಗಜೀವಿಗಳ ದುರ್ದಸೆಗೆ ಕಾರಣವಾಗಿದೆ. ಹಾಗೆ ತಮ್ಮ ಬದುಕು ಮತ್ತು ಸಂಪತ್ತುಗಳನ್ನು ಕಡೆಗಣಿಸಿ ಶಾಂತವೇರಿ ಗೋಪಾಲಗೌಡರೊಂದಿಗೆ ಸೇರಿ ಸಮಾಜವಾದ ಮತ್ತು ಪಕ್ಷವನ್ನು ತೀರ್ಥಹಳ್ಳಿ ಪ್ರದೇಶದಲ್ಲಿ ಬಿತ್ತಿ ಬೆಳೆಸಿದ ತೆರೆಮರೆಯ ವ್ಯಕ್ತಿಗಳಲ್ಲಿ ಗೇರುಗಲ್ಲು ಕರಿಬಸಪ್ಪನವರು ಮುಖ್ಯರಾದವರು. ಅವರ ಮನೆತನದವರ ಇಂದಿನ ದಾರುಣ ಸ್ಥಿತಿಗೆ ಕೌಟುಂಬಿಕ ಕಲಹ ವ್ಯಕ್ತಿಗತ ದೌರ್ಬಲ್ಯಗಳು ಕಾರಣವಾಗಿದ್ದು, ಸಮಾಜವಾದಿ ಚಳುವಳಿಯೇ ಅದಕ್ಕೆ ಹೊಣೆ ಎನ್ನಲಾಗದಿದ್ದರೂ ಪಕ್ಷದ ಉನ್ನತಿಯೊಂದಿಗೇ ಅವರ ಸಂಸಾರ ಅವನತಿಯತ್ತ ಸಾಗಿತ್ತು ಎಂಬುದು ಸತ್ಯಸಂಗತಿ.

ತೀರ್ಥಹಳ್ಳಿ ತಾಲ್ಲೂಕಿನ ಬಸವಾನಿಗೆ ಸಮೀಪದಲ್ಲಿರುವ ಗೇರುಗಲ್ಲು ಎಂಬಲ್ಲಿಗೆ ಈಗ ಹೋಗಿ ನೋಡುವವರಿಗೆ ಒಂದು ಉದ್ದನೆ ಹೆಂಚಿನ ಮಾಡಿರುವ ಜಾಗವನ್ನು ಇದು ಕರಿಬಸಪ್ಪನವರ ಮನೆ ಎಂದು ತೋರಿಸುತ್ತಾರೆ. ಮಾಡಿನ ಒಂದು ಭಾಗದಲ್ಲಿ ಕರಿಬಸಪ್ಪನವರ ತಮ್ಮನ ಮಗ, ಸೊಸೆ ಸಂಸಾರ ಹೂಡಿಕೊಂಡಿದ್ದಾರೆ. ತಮ್ಮ ಭಾಗಕ್ಕೆ ಉಳಿದಿರುವ ಅತ್ಯಲ್ಪ ಜಮೀನಿನಲ್ಲಿ ಜೀವನ ನಿರ್ವಹಣೆ ಸಾಗದೆ ಇತರರ ಕೆಲಸಕ್ಕೆ ಕೂಲಿಗೆ ಹೋಗುತ್ತಾರೆ. ಮನೆ ಮಡದಿ ಹತ್ತಿರದ ಶಾಲೆಯ ಬಿಸಿಯೂಟ ತಯಾರಿಕೆಯ ಸಹಾಯಕಳಾಗಿ ದುಡಿಯುತ್ತಾರೆ. ಮಾಡಿನ ಇನ್ನೊಂದು ಭಾಗ ಶಾಲೆಯಾಗಿತ್ತಂತೆ. ಸರಕಾರಿ ಶಾಲೆಗೆ ಕಟ್ಟಡವಾಗುವವರೆಗೆ ಕರಿಬಸಪ್ಪ ತಮ್ಮ ಮನೆಯನ್ನೇ ಶಾಲೆಗಾಗಿ ಕೊಟ್ಟಿದ್ದರಂತೆ. ಮನೆಯ ಸುತ್ತ ಎರಡೆಕರೆಯಷ್ಟು ಜಾಗದಲ್ಲಿ ಕಲ್ಲು ಮಣ್ಣಿನ ಪೌಳಿ ಇದ್ದು ಹಿಂಭಾಗದಲ್ಲಿ ಅರ್ಧಗೋಡೆಗಳು, ನೆಲಗಟ್ಟು ಬಾವಿ ಮುಂತಾದ ಅವಶೇಷಗಳಿವೆ. ಒಂದು ಕಾಲಕ್ಕೆ ಇದೊಂದು ಅರಮನೆಯಂಥ ಮನೆ. ಮನೆಯೇನು ಮಠ, ಶ್ರೀಮಂತಿಕೆ ವೈಭವದಿಂದ ಮೆರೆದ ಮಹಲು.

ನೂರಾರು ಎಕರೆ ಜಮೀನು ಈ ಮನೆಯ ವಹಿವಾಟಿಗೆ ಸೇರಿತ್ತು. ಗೇರುಗಲ್ಲು, ಹುಲಿಗಾರು, ವಾಟಗೋಡು, ಬಸವಾನಿ, ಹಳುವಾನಿ, ಹಿಲಿಕೆರೆ, ಕಡಿದಾಳು ಹೀಗೆ ಆ ಸುತ್ತಲ ಊರುಗಳ ಸಾಗುವಳಿ ಜಮೀನೆಲ್ಲ ಕರಿಬಸಪ್ಪನವರ ಕುಟುಂಬದ ಹಿಡುವಳಿಯೇ ಆಗಿತ್ತು. ತೀರ್ಥಹಳ್ಳಿ ಶಿವಮೊಗ್ಗಗಳಲ್ಲಿ ನಿವೇಶನ ಮನೆ ಮುಂತಾಗಿ ಆಸ್ತಿ ಇತ್ತು. ಹಿಲಿಕೆರೆಯಲ್ಲಿ ಇವರದೇ ಧರ್ಮಛತ್ರವಿದ್ದು ನಿತ್ಯ ನೂರಾರು ಜನರಿಗೆ ಆಶ್ರಯನೀಡಿ ಅನ್ನ ಸಂತರ್ಪಣೆ ನಡೆಸುತ್ತಿತ್ತು. ಮೇಳಿಗೆ ವೀರಭದ್ರ ದೇವಸ್ಥಾನ ಈ ಮನೆಯ ಸುಪರ್ದಿನಲ್ಲಿತ್ತು. ಈಗಲೂ ಇದೆ. ಗೇರುಗಲ್ಲು ಮನೆಯಲ್ಲಿ ವಾರ್ಷಿಕ

ನಡೆಯುತ್ತಿದ್ದ ಗಣಪತಿ ಹಬ್ಬದ ವಿಜೃಂಭಣೆಯನ್ನು ಹಿರಿಯರು ನೆನಪಿಸಿಕೊಳ್ಳುತ್ತಾರೆ.

ಇಂಥ ಮನೆಯ ಅವಸಾನದ ಕಥೆ ಒಂದು ಮಹಾ ಕಾದಂಬರಿಗೆ ವಸ್ತುವಾಗಬಲ್ಲಂಥದು. ಕರಿಬಸಪ್ಪನವರ ಕುಟುಂಬದವರು ಮೂಲತಃ ಚನ್ನಗಿರಿ ತಾಲ್ಲೂಕಿನ ಗೊಪ್ಪೇನಹಳ್ಳಿ (ಹೊದಿಗೆರೆ)ಯವರು. ಗೇರುಗಲ್ಲಿನ ಸಿದ್ಧಲಿಂಗಸ್ವಾಮಿ ಗದ್ದುಗೆಯ ಪೂಜಾರಿಗಳನ್ನಾಗಿ ಇವರನ್ನು ಇಲ್ಲಿಗೆ ಕರೆತಂದರು ಎನ್ನುತ್ತಾರೆ. ಬಯಲು ಸೀಮೆಯ ಕಡೆಯಿಂದ ಎತ್ತಿನ ಗಾಡಿಗಳಲ್ಲಿ ದಿನಸಿಗಳನ್ನು ತಂದು ಮಲೆನಾಡಿನ ಈ ಭಾಗದಲ್ಲಿ ಮಾರಾಟ ಮಾಡಲು ಬರುತ್ತಿದ್ದ ಹೇರಾಟದ ಶೆಟ್ಟರು ಇಲ್ಲೇ ನೆಲಸಿದರೆನ್ನುತ್ತಾರೆ. ಪ್ರತಿ ವರ್ಷ ಬರುತ್ತಿದ್ದವರು ಇಲ್ಲಿನವರ ವಿಶ್ವಾಸಗಳಿಸಿ ಮದುವೆ ಮುಂಜಿ ಇತ್ಯಾದಿಗಳಿಗೆ ಸಾಲಕೊಟ್ಟು ಬಡ್ಡಿ ವಸೂಲಿ ಮಾಡುವುದು. ಹಣದ ಬದಲಿಗೆ ಜಮೀನು ಬರೆಸಿಕೊಳ್ಳುವುದು ಮುಂತಾದ ವ್ಯವಹಾರ ನಡೆಸಿ ಹಣವಂತರಾಗಿ ಇಲ್ಲಿ ಮನೆ ಮಠಕಟ್ಟಿ ಸ್ಥಾಪಿತರಾದರು ಎನ್ನುತ್ತಾರೆ. ಒಟ್ಟಿನಲ್ಲಿ ವಲಸೆ ಬಂದ ವೀರಶೈವ ಮನೆತನ ಇಲ್ಲಿ ಒಡೆಯರಾಗಿ ಆಳ್ವಿಕೆ ನಡೆಸಿತು. ಕರಿಬಸಪ್ಪನವರ ಅಜ್ಜ ಕರಿಬಸಪ್ಪ, ತಂದೆ ದೊಡ್ಡಬಸಪ್ಪ, ಅಣ್ಣ ರುದ್ರಯ್ಯ ಸಾಕಷ್ಟು ದರ್ಪ ಕ್ರೌರ್ಯಗಳಿಂದ ಮೆರೆದವರು. ಹೆಚ್ಚು ಅಳತೆಯ ಗೇಣಿ ಭತ್ತ, ಕಡಕೊಟ್ಟ ಹುಲಿ ಬತ್ತ ವಸೂಲಿ ಮಾಡಿ ಸಾಲು ಪಣತಗಳಲ್ಲಿ ತುಂಬುತ್ತಿದ್ದವರು. ಆದರೆ ಕಾಲಕ್ರಮೇಣ ಸಹೋದರರೊಳಗಿನ ವೈಷಮ್ಯದ ಕಾರಣಕ್ಕೆ ದುರಂತಗಳ ಸರಮಾಲೆಯೇ ಸಂಸಾರವನ್ನು ಸುತ್ತಿಕೊಂಡಿತು. ಅದೊಂದು ದಾರುಣ ಕತೆ.

ಸ್ವತಃ ಕರಿಬಸಪ್ಪನವರು ತುಸು ಬೇಜವಾಬ್ದಾರಿಯ ಮನುಷ್ಯ ಎನ್ನುತ್ತಾರೆ ಅಥವಾ ಅವರ ಅತಿ ಉದಾರ ನಡೆಯನ್ನೇ ಜನ ಹಾಗೆ ಗುರುತಿಸಿದರೊ ಹೇಳಲಾಗದು. ಅಣ್ಣತಮ್ಮಂದಿರು ಆಸ್ತಿ ಹಂಚಿಕೊಂಡ ಮೇಲೂ ಹೇರಳವಾಗಿ ತಮ್ಮ ಭಾಗಕ್ಕೆ ಬಂದಿದ್ದ ಜಮೀನು ಮನೆಯ ಬಗ್ಗೆ ಕರಿಬಸಪ್ಪನವರು ತಲೆ ಕೆಡೆಸಿಕೊಂಡವರಲ್ಲ. ಗೇಣೀದಾರರ ಮೇಲೆ ಯಾವ ಹಿಡಿತವನ್ನೂ ಇಡಲಿಲ್ಲ. ಕಟ್ಟುನಿಟ್ಟಾಗಿ ಗೇಣಿ ವಸೂಲಿ ಮಾಡಲಿಲ್ಲ. ಜಗಳವಾಡಿ ಯಾರನ್ನೂ ಕೋರ್ಟು ಕಚೇರಿಗೆಳೆಯಲಿಲ್ಲ. ಇವರ ಪ್ರೀತಿ ಮಾನವೀಯತೆಗಳು ಪ್ರಯೋಜನಕ್ಕೆ ಬರಲಿಲ್ಲ. ಭೂಸುಧಾರಣೆಯ ಕಾನೂನಿನಂತೆ ಇದ್ದ ಜಮೀನನ್ನೆಲ್ಲ ಒಕ್ಕಲುಗಳಿಗೇ ಬಿಟ್ಟುಕೊಟ್ಟು ಬರಿಗೈಯಾದರು. ಅನುಕಂಪ ತೋರಿ ಭೂನ್ಯಾಯಮಂಡಳಿಯವರೇ ಉಳಿಸಿಕೊಟ್ಟ ನಾಲ್ಕೆಕರೆ ಜಮೀನನ್ನು ತಿರುಗಿ ಗೇಣಿದಾರರಿಗೇ ಕೊಟ್ಟುಬಿಟ್ಟರು. ಶಿಥಿಲವಾಗಿದ್ದ ದೊಡ್ಡ ಮನೆಯ ಮರಮುಟ್ಟುಗಳನ್ನು ಕೇಳಿದವರಿಗೆ ಕೊಟ್ಟರು ಅಥವಾ ಬೇಕಾದವರು ಹೊತ್ತೊಯ್ದರು. ಕರಿಬಸಪ್ಪ ಕೈಲಿದ್ದುದನ್ನು ಅಸಹಾಯಕರಿಗೆ ಕೊಡುತ್ತಾ ತಾವು ಶ್ರಮದ ದುಡಿಮೆಗೆ ತೊಡಗದೆ ಬಸವಾನಿ, ತೀರ್ಥಹಳ್ಳಿಯ ಅಂಗಡಿ ಮುಂಗಟ್ಟುಗಳಲ್ಲಿ ಕುಳಿತು ಕಾಲ ಕಳೆದರು. ಇಸ್ಪೀಟಾಟದ ಹವ್ಯಾಸವೂ ಅಷ್ಟಿಷ್ಟು ಅಂಟಿಕೊಂಡಿತ್ತು. ಒಟ್ಟಾರೆ ಮನೆಯ ಸ್ಥಿತಿವಂತಿಕೆ ಕರಗಿಹೋಗಿ ದುರವಸ್ಥೆಗೆ ತಲುಪಿತು. ನಿರ್ಲಕ್ಷ್ಯದಿಂದಾಗಿ ದೇಹಸ್ಥಿತಿಯೂ ಕೆಟ್ಟಿತು. ಕೊನೆಗಾಲದಲ್ಲಿ ಶಿವಮೊಗ್ಗೆಯ ಬಂಧುಗಳ ಮನೆಯಲ್ಲಿದ್ದು ತೀವ್ರ ಅನಾರೋಗ್ಯಕ್ಕೊಳಗಾಗಿ 1987ರಲ್ಲಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಸೇರಿಸಲ್ಪಟ್ಟು ಅಲ್ಲಿಯೇ ತೀರಿಕೊಂಡರು.

ಕಟ್ಟುಮಸ್ತಾದ ದೇಹ, ಬೋಳುತಲೆ, ವರಚ ಕಣ್ಣು, ನೋಡಲು ಸ್ಫುರದ್ರೂಪಿಯಲ್ಲ. ಅರ್ಧತೋಳಿನ ಖಾಕಿ ಅಂಗಿ, ಅಡ್ಡಪಂಚೆ ಬಗಲಲ್ಲೊಂದು ಕೆಂಪು ಚೀಲ. ಬಾಯಲ್ಲಿ ಸದಾ ಎಲೆಯಡಿಕೆ, ಮೃದುಮಾತು. ಬಹುತೇಕ ಗೋಪಾಲಗೌಡರ ಗುರು ಸದಾಶಿವರಾಯರಂತೆಯೇ ಕರಿಬಸಪ್ಪಗೌಡರ ಸ್ವರೂಪ, ನಡೆನುಡಿ. ಬಗಲ ಚೀಲದಲ್ಲಿ ಪುಸ್ತಕಗಳೂ ಇರುತ್ತಿದ್ದವು. ಕರಿಬಸಪ್ಪನವರಿಗೆ ಓದುವ ಹವ್ಯಾಸವಿತ್ತು. ಗೌಡರು ಹುಟ್ಟಿದ್ದು ಬಹುಶಃ 1927 ರಲ್ಲಿ. ಹತ್ತು ಹನ್ನೆರಡು ವರ್ಷದ ಹುಡುಗನಿದ್ದಾಗಲೇ ಭಾರತ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಹಾಗಾಗಿ ವಿದ್ಯಾಭ್ಯಾಸ ಶಾಲಾ ಹಂತಕ್ಕೇ ನಿಂತುಹೋಯಿತು. 1939ರಿಂದ 1947ರವರೆಗೂ ಚಳವಳಿಯ ಭೂಗತ ಚಟುವಟಿಕೆಗಳಲ್ಲಿ ಮಗ್ನರಾಗಿದ್ದರು. 1942ರ 'ಕ್ವಿಟ್ ಇಂಡಿಯಾ' ಮತ್ತು 1947ರ 'ಮೈಸೂರು ಚಲೋ' ಚಳವಳಿಗಳಲ್ಲಿ ತೀವ್ರವಾಗಿ ತೊಡಗಿಕೊಂಡು ಸೆರೆಸಿಕ್ಕು ಶಿವಮೊಗ್ಗ, ಸಾಗರ, ಬೆಂಗಳೂರು ಜೈಲುಗಳಲ್ಲಿ ಶಿಕ್ಷೆ ಅನುಭವಿಸಿದರು. ಸ್ವಾತಂತ್ರ್ಯಾನಂತರ ರಾಷ್ಟ್ರಾಧ್ಯಕ್ಷರಿಂದ ಹೋರಾಟಗಾರರ ತಾಮ್ರಪತ್ರ ಗೌರವ ಪಡೆದಿದ್ದರು.

ಕರಿಬಸಪ್ಪನವರು ಸಮಾಜವಾದಿಯಾಗಿ ಬಹುದೊಡ್ಡ ನಾಯಕರಾಗಿ ಪ್ರಸಿದ್ಧರಾದವರಲ್ಲ. ತತ್ವ ಸಿದ್ಧಾಂತಗಳಿಗೆ ತಮ್ಮನ್ನು ತೆತ್ತುಕೊಂಡು ಮರೆಯಲ್ಲೇ ಇದ್ದು ಚಳವಳಿಯನ್ನು ಬೆಳೆಸಿದವರು. ನಾಯಕರಾದ ಜೆ.ಹೆಚ್. ಪಟೇಲ್, ವೈ. ಆರ್. ಪರಮೇಶ್ವರಪ್ಪ ಶಂಕರನಾರಾಯಣ ಭಟ್ಟ ಮುಂತಾದವರೊಂದಿಗೆ ನಿಕಟ ಸಂಪರ್ಕ ಸ್ನೇಹ ಹೊಂದಿದ್ದು ಮಹತ್ವದ ಘಟ್ಟಗಳಲ್ಲಿ ಅವರೊಂದಿಗೆ ಚರ್ಚೆಗಿಳಿದು ತೀರ್ಮಾನಗಳಿಗೆ ಬರಲು ಸಹಕರಿಸುತ್ತಿದ್ದರು. ಸಮಾಜವಾದಿ ಚಳುವಳಿಯ ನಕ್ಷತ್ರ ನೇತಾರ ಗೋಪಾಲಗೌಡರಿಗಂತೂ ಇವರೊಬ್ಬ ಆಶ್ರಯದಾತರೆ ಆಗಿದ್ದರು. ಗೌಡರಿಗೆ ವರ್ಷಕ್ಕೆ ಒಂದು ಜೊತೆ ಬಟ್ಟೆ, ಒಂದು ದಿನಚರಿ ಪುಸ್ತಕವನ್ನು ಕೊಡಿಸುತ್ತಿದ್ದುದಲ್ಲದೆ ಅವರ ಖರ್ಚುಗಳನ್ನು ಇವರೇ ನಿರ್ವಹಿಸುತ್ತಿದ್ದರು. 1960ನೇ ಸಾಲಿನ ಡೈರಿಯ ಪ್ರಾರಂಭದಲ್ಲಿ ಗೌಡರು ಶಿವಮೊಗ್ಗದಲ್ಲಿ ಕರಿಬಸಪ್ಪಗೌಡರು ಆ ಡೈರಿಯನ್ನು ತಮಗೆ ಕೊಡಿಸಿದ್ದನ್ನು ದಿನಾಂಕ ಸಮೇತ ಉಲ್ಲೇಖಿಸಿದ್ದಾರೆ. ಗೌಡರೊಂದಿಗೆ ಸ್ವಾತಂತ್ರ್ಯ ಹೋರಾಟ, ಕಾಗೋಡು ಸತ್ಯಾಗ್ರಹ, ರೈತ ಚಳವಳಿಗಳಲ್ಲಿ ಸಹಭಾಗಿಯಾಗಿದ್ದರು. ಮುಂಚೂಣಿಯಲ್ಲಿ ನಿಂತು ಭಾಷಣ ಮಾಡಿ ಜನರನ್ನು ಸೆಳೆಯುತ್ತಿದ್ದವರಲ್ಲ. ಕಾಣದ ಕೈಯಾಗಿ ಕರಪತ್ರ ಮುದ್ರಿಸಿ ಹಂಚುತ್ತಿದ್ದರು.


ಸಾಮಾನ್ಯರಲ್ಲಿ ಸಾಮಾನ್ಯರಾಗಿದ್ದ, ಸರಳಜೀವಿ ಕರಿಬಸಪ್ಪನವರಿಗೆ ನಾಯಕರಾಗಿ ಮೆರೆಯಬೇಕು, ಅಧಿಕಾರ ಅನುಭವಿಸಬೇಕೆಂಬ ಆಕಾಂಕ್ಷೆಗಳೇ ಇರಲಿಲ್ಲ. ಒಮ್ಮೆ ಗೋಪಾಲಗೌಡರ ಒತ್ತಾಯಕ್ಕೆ ಮಣಿದು ತೀರ್ಥಹಳ್ಳಿ ತಾಲ್ಲೂಕು ಬೋರ್ಡ್ ಚುನಾವಣೆಗೆ ಮುತ್ತೂರು ಹೋಬಳಿ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಗೆಲ್ಲಲಿಲ್ಲ. ಗೆಲ್ಲಬೇಕೆಂಬ ಹಂಬಲವಿದ್ದರಷ್ಟೆ ಗೆಲ್ಲುವುದು. ತಾವಾಗಿ ಹೋಗಿ ಯಾರಲ್ಲೂ ಅವರು ಮತ ಯಾಚಿಸಲಿಲ್ಲ. ಇಷ್ಟಕ್ಕೂ ಅವರು ಸ್ಪರ್ಧಿಸಿದ್ದೇ ಕಾಂಗ್ರೆಸ್ ಪ್ರಭಾವ ವಲಯದಲ್ಲಿ. ಕಡಿದಾಳ್ ಮಂಜಪ್ಪ, ಬಸವಾನಿ ರಾಮಶರ್ಮರಂಥ ಕಾಂಗ್ರೆಸ್ ನಾಯಕರ ಮಗ್ಗುಲಲ್ಲೇ ಸೋಷಲಿಷ್ಟ್ ಆಲದ

ಮರದ ಬಿಳಲು ಬಿಡಿಸಿದ, ಬಹುಸಂಖ್ಯಾತರಾಗಿದ್ದ ಒಕ್ಕಲಿಗರು, ಬ್ರಾಹ್ಮಣರ ನಡುವೆ ಲಿಂಗಾಯಿತರಾಗಿದ್ದುಕೊಂಡು ಜನಪ್ರಿಯತೆ ಗಳಿಸಿದ ಹೆಚ್ಚುಗಾರಿಕೆ ಕರಿಬಸಪ್ಪನವರದು. ಆದರೂ ಜನಸೇವಕನಾಗಿರಲು ಬಯಸಿದರೇ ಹೊರತು ಗ್ರಾಮ ಪಂಚಾಯ್ತಿಯಲ್ಲಿ ಒಬ್ಬ ಸದಸ್ಯನಾಗುವುದಕ್ಕೂ ಅವರು ಸಿದ್ಧರಿರಲಿಲ್ಲ.

ನಾಯಕನಾಗಿಯಲ್ಲದಿದ್ದರೂ ಜನಾನುರಾಗಿಯಾಗಿ ಮಲೆನಾಡಿಗರ ಮನದಲ್ಲಿ ಅವರು ನೆಲೆಸಿದ್ದಾರೆ. ಅವರ ಕುರುಹಾಗಿ ಉಳಿದಿರುವ ಗೇರುಗಲ್ಲು ಮನೆ-ಮಠಗಳ ಅವಶೇಷಗಳು ಕರಿಬಸಪ್ಪನವರ ನೆನಪನ್ನು ಕೆದಕಿ, ಅವರು ಅಳಿದು ಇಪ್ಪತ್ತೈದು ವರ್ಷಗಳ ನಂತರವೂ ಜನಮನವನ್ನು ಆರ್ದ್ರಗೊಳಿಸುತ್ತಿವೆ.

–ಡಾ. ಜೆ.ಕೆ. ರಮೇಶ್

(ಸೆಪ್ಟಂಬರ್, 2013)



ಸಮಾಜವಾದದ ನಂದಾ ದೀಪ ಬಿ.ವಿ. ಮೂರ್ತಿ



ಸಮಾಜವಾದಿಗಳಿಗೀಗ ಹೋರಾಟದ ಕಾಲ ಮುಗಿದಿದೆ. ಅವರೀಗ ಸಮಾಜವಾದದ ದೀಪ ಆರಿಹೋಗದಂತೆ ಕಾಪಾಡಿ ಕೊಳ್ಳಬೇಕಾಗಿದೆ. ಅದಕ್ಕಾಗಿ ಮತ್ತೆ ಸಮಾಜವಾದಿ ವಿಚಾರಗಳನ್ನು ಬಿತ್ತಿ, ಬೆಳೆಯಬೇಕಾಗಿದೆ. ಅದರ ತತ್ವ ಸಿದ್ಧಾಂತಗಳನ್ನು ಚೆನ್ನಾಗಿ ಅರಿತು ದೃಢವಾಗಿ ನಂಬಿ ನಡೆಯುವ ನಿಸ್ವಾರ್ಥಿಗಳಾದ ನಾಲ್ಕಾರು ಜನ ಗುಂಪು ಕಟ್ಟಿಕೊಂಡು ಗ್ರಾಮ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಸಾಮಾನ್ಯ ಜನರಿಗೆ ಶಾಲಾ ಮಕ್ಕಳಿಗೆ ಬಿಡುವಿನ ಕಾಲದಲ್ಲಿ ಖಾಸಗಿಯಾಗಿ ತಿಳಿಸಿ ಹೇಳಬೇಕು. ಆ ಮೂಲಕ ಮತ್ತೆ ಆಂದೋಲನ ಕಟ್ಟಬೇಕು. ಸಮಾಜವಾದಕ್ಕೆ ಇನ್ನೂ ಭವಿಷ್ಯವಿದೆ. ಸಮಾಜವಾದಿಗಳು ಈಗ ಸುಮ್ಮನೆ ಕುಳಿತರೆ ದ್ರೋಹ ಬಗೆದಂತೆ ಎಂದೆಲ್ಲ ಹಂಬಲಿಸುವ ಹಲುಬುವ ಹಿರಿಯರೊಬ್ಬರು ತೀರ್ಥಹಳ್ಳಿಯಲ್ಲಿ ಈಗಲೂ ಕಾಣ ಸಿಗುತ್ತಾರೆ. ಅವರೇ 85ರ ಇಳಿ ಹರಯದ (ಹುಟ್ಟಿದ್ದು 1929ರಲ್ಲಿ) ಬಿ.ವಿ.ಮೂರ್ತಿಯವರು.

ಮೇಗರವಳ್ಳಿ ಬಿ.ವಿ.ಮೂರ್ತಿಗಳ ಊರು. ಇವರ ಹಿರಿಯರ ಮನೆ ಹತ್ತಿರದ ಭೀಮನಕಟ್ಟೆಯಲ್ಲಿತ್ತು. ಅಲ್ಲಿನ ವೆಂಕಟಸುಬ್ಬ ಐತಾಳ್, ನಾಗವೇಣಮ್ಮ ಇವರ ಏಳು ಮಂದಿ ಮಕ್ಕಳಲ್ಲಿ ಮೂರ್ತಿಯವರೇ ಹಿರಿಯರು. ಸಂಸಾರ ಚಳುವಳಿಗಳಿಗೆ ಅಡ್ಡಿಯಾಗುತ್ತದೆಂಬುದೂ ಒಂದು ಕಾರಣವಾಗಿ ತಾವು ಮದುವೆಯನ್ನೇ ಮಾಡಿಕೊಳ್ಳದೇ ಅವಿವಾಹಿತೆಯಾದ ಸಹೋದರಿಯೊಂದಿಗೆ ವಾಸ ಮಾಡುತ್ತಿದ್ದಾರೆ. ಮೂರ್ತಿ ತಕ್ಕ ಮಟ್ಟಿಗೆ ಸ್ಥಿತಿವಂತರೇ ಆಗಿದ್ದವರು. ಅವರಿಗೆ ಒಂದು ನೂರು ಖಂಡುಗ ಭತ್ತ ಗೇಣಿ ಬರುವಷ್ಟು ತರಿ ಜಮೀನಿತ್ತು. ಎರಡು ಎಕರೆ ಭಾಗಾಯ್ತು ಇತ್ತು. ತಂದೆಯವರ ಕಾಲಾನಂತರ ಯಜಮಾನರಾದ ಇವರು ಎಂದೂ ಗೇಣಿ ವಸೂಲಿಗೆ ಹೋಗಲಿಲ್ಲ. ಭೂ ಸುಧಾರಣೆ ಕಾಯ್ದೆಯಂತೆ ತಕರಾರಿಲ್ಲದೆ ಎಲ್ಲ ಭೂಮಿ ಉಳುವವರಿಗೇ ಕೊಟ್ಟು ಬಿಟ್ಟರು. ಪ್ರತಿಯಾಗಿ ಬಂದ ಪರಿಹಾರದ ಹಣ ಪಡೆಯಲಿಲ್ಲ. ಹಾಗಾಗಿ ಈಗ ಅವರು ಎಲ್ಲರಂತೆ ಸಾಮಾನ್ಯರು, ಅತ್ಯಂತ ಸರಳರು.

ಮನೆಯಲ್ಲಿ ಅವರು ನಿಲ್ಲುವುದು ಕಡಿಮೆ. ಬಿಳಿಯ ಅಡ್ಡಪಂಚೆ, ಬಿಳಿಯ ಜುಬ್ಬಾ, ವಾಸ್‌ಕೋಟು ತೊಟ್ಟು, ಕನ್ನಡಕ ಧರಿಸಿ, ಚಪ್ಪಲಿ ಮೆಟ್ಟಿ ಕೈಲೊಂದು ಛತ್ರಿಯನ್ನೋ, ಪುಸ್ತಕವನ್ನೋ ಹಿಡಿದು ತೀರ್ಥಹಳ್ಳಿ, ಶಿವಮೊಗ್ಗ ಹೀಗೆ ಸಂಚರಿಸುತ್ತಿರುತ್ತಾರೆ. ಗಾಂಧಿ ಪ್ರಭಾವದಿಂದ ಖಾದಿಧಾರಿಯಾದ ಮೂರ್ತಿ ತಮ್ಮ ಬಟ್ಟೆಗಳನ್ನು ಈಗಲೂ ತಾವೇ ತೊಳೆದುಕೊಳ್ಳುತ್ತಾರೆ. ಗಾಂಧೀಜಿಯವರ ಇನ್ನೊಂದು ಮಂತ್ರ ಹರಿಜನೋದ್ಧಾರವನ್ನು ಬರಿದೆ ಪಠಿಸದೆ ಅನುಸರಿಸಿ ತೋರಿದರು. ಸಂಪ್ರದಾಯಸ್ಥ ಬ್ರಾಹ್ಮಣರ ಕುಟುಂಬದ ಅವರ ಮನೆಗೆ ಐವತ್ತರ

ದಶಕದಲ್ಲೆ ಹರಿಜನರಿಗೆ ಪ್ರವೇಶವಿತ್ತೆಂಬುದನ್ನು ಇನ್ನೊಬ್ಬ ಹಿರಿಯ ಸಮಾಜವಾದಿ ಕಡಿದಾಳು ಶಾಮಣ್ಣ ತಮ್ಮ ಶಾಲಾ ದಿನಗಳ ನೆನಪಾಗಿ ಉಲ್ಲೇಖಿಸಿದ್ದಾರೆ. ('ಕಾಡ ತೊರೆಯ ಜಾಡು', ಪುಟ 63) ಬಿ.ವಿ.ಮೂರ್ತಿ ಸೋಷಿಯಲಿಷ್ಟರಾದ್ದರಿಂದ ಅವರ ಮನೆಯಲ್ಲಿ ಜ್ಞಾತಿಭೇದದ ವಾತಾವರಣ ಇರಲಿಲ್ಲವೆಂದು ಆಗ ಜನ ಮಾತನಾಡಿಕೊಳ್ಳುತ್ತಿದ್ದರಂತೆ. ತಂದೆ ಪುರೋಹಿತಶಾಹಿ ಮನೋಭಾವದವರಾಗಿದ್ದು, ಅವರಿಗೆ ಮಗನನ್ನು ಕಂಡರೆ ಆಗುತ್ತಿರಲಿಲ್ಲ. ಇವರು ಬ್ರಾಹ್ಮಣ್ಯದ ಲಾಂಛನಗಳಾದ ಯಜ್ಞ ಯಾಗಾದಿಗಳನ್ನು ತೀವ್ರವಾಗಿ ವಿರೋಧಿಸುತ್ತಿದ್ದರು. ಒಮ್ಮೆ ಶಿರನಾಳಿ ಸಾಹುಕಾರರ ಮನೆಯಲ್ಲಿ ಒಂದು ಯಜ್ಞ ನಡೆಯಿತು. ಜಿಲ್ಲಾಧಿಕಾರಿಗಳೇ ಮೊದಲಾದ ಅಧಿಕಾರಿಗಳು ಅದರ ಪರವಾಗಿದ್ದರು. ಆಗ ಮೂರ್ತಿಗಳು ಭೂದಾನ ಚಳುವಳಿಯ ನಾಯಕರಾಗಿದ್ದ ಎಣ್ಣೇಕೊಪ್ಪ ಮಲ್ಲಿಕಾರ್ಜುನಪ್ಪ ಗೌಡರ ಸಹಕಾರ ಪಡೆದು ಅದನ್ನು ಪ್ರತಿಭಟಿಸಿದರಂತೆ. ತಮ್ಮ ಸಾಧನೆಗಳಿಗಾಗಿ ಬ್ರಾಹ್ಮಣ ಸಂಘದವರು ಸನ್ಮಾನಿಸಲು ಬಂದಾಗ ಒಪ್ಪಿಕೊಳ್ಳಲಿಲ್ಲ. 1970ರ ತಾಲ್ಲೂಕು ಬೋರ್ಡ್ ಚುನಾವಣೆಯಲ್ಲಿ ಮೇಗರವಳ್ಳಿ ಕ್ಷೇತ್ರದಿಂದ ಸ್ಪರ್ಧಿಸಬೇಕೆಂದು ಒತ್ತಡವಿತ್ತು. ಆದರೆ ಬ್ರಾಹ್ಮಣ ಮತಗಳೇ ಅಲ್ಲಿ ನಿರ್ಣಾಯಕವಾಗಿದ್ದು ಜಾತಿ ಮತಗಳಿಂದ ಗೆಲ್ಲುವುದು ಸರಿಯಲ್ಲವೆಂದು ತಿರಸ್ಕರಿಸಿದರು. ಇದರಿಂದಾಗಿ ಇನ್ನೊಬ್ಬ ಬ್ರಾಹ್ಮಣರಾದ ಸಮಾಜವಾದಿ ಜಿ. ಸದಾಶಿವರಾಯರು ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗುವ ಅವಕಾಶದಿಂದ ವಂಚಿತರಾಗಬೇಕಾಯಿತು. ಗಾಂಧಿ ತತ್ವಗಳೊಂದಿಗೆ ಸಮಾಜವಾದಿ ತತ್ವಗಳನ್ನು ಸಮ್ಮಿಳಿತಗೊಳಿಸಿ ನಿಷ್ಠುರವಾಗಿ ಅನುಸರಿಸಿ ಮಾದರಿಯಾದವರು ಮೂರ್ತಿಗಳು.

ಮೂರ್ತಿಯವರು ಸ್ವಾತಂತ್ರ್ಯ ಹೋರಾಟಗಾರರು. ಇವರು ಹದಿಮೂರು ವರ್ಷದ ಬಾಲಕನಾಗಿದ್ದಾಗಲೇ ಚಳುವಳಿಗೆ ಧುಮುಕಿದರು. ಸೆರೆ ಸಿಕ್ಕಾಗ ಇವರನ್ನು ಎಂಟು ದಿನ ಜೈಲಲ್ಲಿಟ್ಟುಕೊಂಡು ಹುಡುಗರು ಎಂದು ಹೊರಗೆ ಬಿಟ್ಟರಂತೆ. ಚಳುವಳಿಯ ಹುಚ್ಚಿನಲ್ಲಿ ಓದು ಎಸ್.ಎಸ್.ಎಲ್.ಸಿ.ಗೇ ನಿಂತು ಹೋಯಿತು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ (1942) ಗೆಳೆಯ ಎನ್.ಕಿಟ್ಟಪ್ಪಗೌಡರೊಂದಿಗೆ ವಿಧ್ವಂಸಕ ಕೃತ್ಯಗಳಲ್ಲಿ ಭಾಗಿಯಾಗಿ ಸೆರೆಸಿಕ್ಕು ಜೈಲುಶಿಕ್ಷೆ ಅನುಭವಿಸಿದರು. ಲೋಹಿಯಾರವರ ನೇತೃತ್ವದ ಕಾನೂನು ಭಂಗ ಚಳುವಳಿಯಲ್ಲಿ ಭಾಗಿಗಳಾಗಿದ್ದ ಮೇಗರವಳ್ಳಿಯ ಒಂದು ಗುಂಪು ಹೊಸನಗರದಲ್ಲಿ ಬಂಧನಕ್ಕೊಳಗಾಯಿತು. ಅದರ ಸದಸ್ಯರಾಗಿದ್ದ ಮೂರ್ತಿಗಳು 2 ತಿಂಗಳು ಸೆರೆವಾಸದಲ್ಲಿದ್ದರು.

1951ರ ಕಾಗೋಡು ಸತ್ಯಾಗ್ರಹದಲ್ಲಿ ಸಕ್ರಿಯರಾಗಿ ಭಾಗಿಯಾಗಿದ್ದ ಮೂರ್ತಿಯವರ ಅಲ್ಲಿನ ಕೆಲವು ಅನುಭವಗಳು ಆಗಿನ ಹೋರಾಟದ ಸ್ವರೂಪ ಮತ್ತು ಹೋರಾಟಗಾರರ ನಿಷ್ಠೆಗಳನ್ನು ಬಿಂಬಿಸುತ್ತವೆ. ಕಾಗೋಡಿನಲ್ಲಿ ಪೋಲೀಸರು ನಿತ್ಯ ರೈತರನ್ನು ಥಳಿಸುವುದು, ಚಳುವಳಿಗಾರರನ್ನು ಜೈಲಿಗೆ ಕಳಿಸುವುದು ನಡೆದೇ ಇತ್ತು. ಒಂದು ದಿನ ಎಲ್ಲಿಂದಲೋ ಹಿಂಸಾವಾದಿ ಕಮ್ಯೂನಿಸ್ಟರ ಗುಂಪೊಂದು ಪ್ರತ್ಯಕ್ಷವಾಗಿ ನೀವು ಹೀಗೆ ಸತ್ಯಾಗ್ರಹ ಮಾಡುತ್ತಿದ್ದರೆ ಯಾವ ಪ್ರಯೋಜನವೂ ಇಲ್ಲ. ನಾಲ್ಕು ಜನರ ತಲೆ ತೆಗೆದರೆ ತನ್ನಂತೆ ದಾರಿಗೆ ಬರುತ್ತಾರೆ. ಬನ್ನಿ ನಮ್ಮೊಂದಿಗೆ ಎಂದರಂತೆ.

ಕೆಲವು ಯುವಕರು ಇದಕ್ಕೆ ಸಿದ್ಧರೂ ಆದರಂತೆ. ಆಗ ಅಲ್ಲಿದ್ದ ಗೋಪಾಲಗೌಡರು ನೀವು ನಾಲ್ಕು ಜನರ ತಲೆ ತೆಗೆದರೆ ಅವರು ಸಾವಿರಾರು ಜನರ ತಲೆ ಹಾರಿಸುತ್ತಾರೆ. ಇದು ಸರಿಯಲ್ಲ. ನಾವು ಅಹಿಂಸಾ ಮಾರ್ಗದಲ್ಲಿಯೇ ಹೋರಾಡಬೇಕು ಎಂದು ಸಮಜಾಯಿಷಿ ನೀಡಿದರಂತೆ. ಅಂದು ಗೌಡರು ಅಲ್ಲಿಲ್ಲದಿದ್ದರೆ ಅಲ್ಲಿ ರಕ್ತದ ಕೋಡಿ ಹರಿಯುತ್ತಿತ್ತು ಎಂದು ಮೂರ್ತಿ ನೆನಪಿಸಿಕೊಳ್ಳುತ್ತಾರೆ.

ಕರ್ನಾಟಕ ವಿದ್ಯುಚ್ಛಕ್ತಿ ಇಲಾಖೆಯ ಕಾರ್ಮಿಕರ ಚಳುವಳಿ, ಜಾರ್ಜ್ ಫರ್ನಾಂಡಿಸ್ ನೇತೃತ್ವದ ರೈಲ್ವೆ ನೌಕರರ ಹೋರಾಟ ಇವುಗಳಿಗೆ ಮೂರ್ತಿಗಳು ಪ್ರೋತ್ಸಾಹ ನೀಡಿದ್ದರು. ಹೀಗೆ ಸದಾ ಒಂದಿಲ್ಲೊಂದು ಆಂದೋಲನದೊಂದಿಗೆ ಅವರ ಸಂಬಂಧ ಇರುತ್ತಿತ್ತು. ಈ ಯಾವ ಹೋರಾಟಗಳಿಂದಲೂ ಅವರು ಸ್ವಂತಕ್ಕೆ ಪ್ರತಿಫಲ ಬಯಸಲಿಲ್ಲ. ಅಷ್ಟೇಕೆ, ಕಡಿದಾಳು ಮಂಜಪ್ಪನವರು 5 ಎಕರೆ ಜಮೀನಿಗೆ ಅರ್ಜಿ ಹಾಕಿ ಎಂದಾಗ, ಬದರೀನಾರಾಯಣರು ಉದಾರತೆ ತೋರಿದಾಗ ಯಾವುದನ್ನೂ ಅವರು ಒಪ್ಪಲಿಲ್ಲ. ಸ್ವಾತಂತ್ರ್ಯ ಯೋಧರಿಗೆ ಕೊಡಮಾಡುವ ಪಿಂಚಣಿಯನ್ನೂ ನಿರಾಕರಿಸಿದ ನಿಸ್ಪೃಹ ದೇಶಭಕ್ತಿ ಅವರದ್ದು.

ಶಾಂತವೇರಿ ಗೋಪಾಲಗೌಡರ ಅತ್ಯಂತ ಆಪ್ತರಲ್ಲಿ ಮೂರ್ತಿಯವರೂ ಒಬ್ಬರು. ಚುನಾವಣೆಗಳಲ್ಲಿ ಅವರ ಪರ ಪ್ರಚಾರಕ್ಕೆ ಜೊತೆಯಲ್ಲಿ ಓಡಾಡಿದವರು. ಅಲ್ಲಲ್ಲಿ ಪ್ರಚಾರ ಸಭೆಗಳನ್ನು ವ್ಯವಸ್ಥೆಗೊಳಿಸುವುದು, ಪಕ್ಷದ ಸಭೆಗಳನ್ನು ಏರ್ಪಡಿಸುವುದು, ಅದಕ್ಕಾಗಿ ಹಣ ಸಂಗ್ರಹ, ಖರ್ಚಿನ ಲೆಕ್ಕಾಚಾರ ಒಪ್ಪಿಸುವುದು ಇವೆಲ್ಲವನ್ನೂ ಅವರು ನಿಭಾಯಿಸುತ್ತಿದ್ದರು. ಬೆಂಗಳೂರಿಗೆ ಆಗಾಗ ಹೋಗಿ ಗೌಡರ ಕೆಲಸಗಳಿಗೆ ಸಹಕಾರ ನೀಡುತ್ತಿದ್ದರು. ಗೌಡರು ಸೋತಾಗ ನೊಂದರು, ಗೆದ್ದಾಗ ಸಂಭ್ರಮಿಸಿದರು. ಇಂಥ ಹಲವು ಸಂದರ್ಭಗಳು ಗೋಪಾಲಗೌಡರ ದಿನಚರಿಯಲ್ಲಿ ದಾಖಲಾಗಿವೆ. ಹೀಗೆ ಅವರೊಬ್ಬ ತತ್ವನಿಷ್ಠ ಆದರ್ಶ ಸಮಾಜವಾದಿ. ಸದ್ದಿಲ್ಲದೆ ಸಮಾಜವಾದವನ್ನೇ ಬದುಕುತ್ತಿರುವವರು. ಕಿರಿಯರನ್ನು ಕಂಡಾಗ ಭುಜಮುಟ್ಟಿ, ಬೆನ್ನು ತಟ್ಟಿ ಪ್ರೋತ್ಸಾಹಿಸುವ ವಿಶಾಲ ಮನಸ್ಸಿನ ವಾಮನಮೂರ್ತಿ.


ಮೂರ್ತಿಯವರು ಖ್ಯಾತರಾಗಿರುವುದು ಪತ್ರಕರ್ತರೆಂದು. ಓದನ್ನು ಅರ್ಧಕ್ಕೆ ಬಿಟ್ಟ ಮೂರ್ತಿ ಜೀವನೋಪಾಯಕ್ಕೆ ಆಯ್ದುಕೊಂಡ ದಾರಿ ಪತ್ರಿಕೆ ಹಂಚುವುದು. 'ತಾಯಿನಾಡು', 'ಜನಪ್ರಗತಿ', 'ಪ್ರಜಾವಾಣಿ' ಮುಂತಾದ ಪತ್ರಿಕೆಗಳ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ವಿತರಕರಾಗಿ ಮನೆ ಮನೆಗೆ ಅವುಗಳನ್ನು ತಲುಪಿಸಿ ಜನರಲ್ಲಿ ಓದುವ ಹವ್ಯಾಸ ಬೆಳೆಸಿ, ಸಾಮಾಜಿಕ ಜಾಗೃತಿಗೆ ಕಾರಣರಾದರು. ಜೊತೆಗೆ 'ಪ್ರಜಾವಾಣಿ'ಯ ವರದಿಗಾರರಾಗಿ 'ಮಲೆನಾಡು ವಾರ್ತಾ ಪತ್ರ' ಬರೆಯುತ್ತಿದ್ದರು.

ಪತ್ರಿಕೆಗಳ ಸಂಗ್ರಹಣೆ ಇವರ ಮುಖ್ಯ ಹವ್ಯಾಸ. ಜಗತ್ತಿನ ಹಲವು ದೇಶಗಳ ಹಲವು ಭಾಷೆಗಳ ವಿವಿಧ ವಿನ್ಯಾಸದ ಪತ್ರಿಕೆಗಳಲ್ಲದೇ ಕನ್ನಡದವೇ ಸುಮಾರು 200 ಪತ್ರಿಕೆಗಳ ಪ್ರತಿಗಳನ್ನು ಸಂಗ್ರಹಿಸಿದ್ದಾರೆ. ಈ ಅಪೂರ್ವ ಸಂಗ್ರಹ ಪತ್ರಿಕೋದ್ಯಮದ ಚರಿತ್ರೆಯನ್ನಷ್ಟೇ ಹೇಳದೆ ಮಾನವ ಸಂಸ್ಕೃತಿಯ ವಿಕಾಸ, ರಾಜಕೀಯದ ಏಳುಬೀಳುಗಳನ್ನೆಲ್ಲ ಹುದುಗಿಸಿಟ್ಟುಕೊಂಡಿರುವ ಜ್ಞಾನನಿಧಿಯಾಗಿದೆ.


ಮಲೆನಾಡಿನ ವಾತಾವರಣದಲ್ಲಿ ಈ ಸಂಗ್ರಹವನ್ನು ಸಂರಕ್ಷಿಸುವುದು ಕಷ್ಟವಾದ್ದರಿಂದ ಈ ಜವಾಬ್ದಾರಿಯನ್ನು ಹೊರಲು ಸಿದ್ಧರಾಗಿ ಮುಂದೆ ಬಂದ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರ ಸುಪರ್ದಿಗೆ ಪತ್ರಿಕೆ ಸಂಗ್ರಹವನ್ನು ಕೊಟ್ಟಿದ್ದಾರೆ. ಅನೇಕ ಸಮ್ಮೇಳನ, ಸಭೆ, ಜಾತ್ರೆ ಮುಂತಾದೆಡೆ ಸಾರ್ವಜನಿಕರಿಗೆ ಇದನ್ನು ಪ್ರದರ್ಶಿಸಿದ್ದಾರೆ. ಈ ಕ್ಷೇತ್ರದ ಇವರ ಸಾಧನೆ ಸೇವೆ ವಿಶಿಷ್ಟವಾದವು. ಇದನ್ನು ಗುರುತಿಸಿ ಗೌರವಿಸಿ ರಾಜ್ಯ ಪತ್ರಿಕಾ ಅಕಾಡೆಮಿ ಇವರಿಗೆ ಪ್ರಶಸ್ತಿ ನೀಡಿದೆ. ಇದರೊಂದಿಗೆ ಬಂದ 10 ಸಾವಿರ ರೂಪಾಯಿಗಳನ್ನು ತಮ್ಮ ಸಂಗ್ರಹದ ಸುರಕ್ಷೆಯ ವ್ಯವಸ್ಥೆಗಾಗಿ ಧರ್ಮಸ್ಥಳಕ್ಕೆ ಕೊಟ್ಟಿದ್ದಾರೆ.

–ಡಾ. ಜೆ.ಕೆ. ರಮೇಶ್

(ಸೆಪ್ಟಂಬರ್, 2014)



ಸಲೂನ್‌ನಲ್ಲಿ ಸಮಾಜವಾದ ಬೋಧಿಸಿದ ರಾಚಪ್ಪ ಹಡಪದ



ಅನ್ಯಾಯದ ವಿರುದ್ಧ ಸಿಡಿದೇಳುವ ಸ್ವಭಾವ, ಅಗತ್ಯ ಬಿದ್ದ ಕಡೆ ಕಟು ಮಾತುಗಳನ್ನು ಬೀಸಾಡುವ ಪ್ರವೃತ್ತಿ, ನ್ಯಾಯದ ಪರ ಹೋರಾಟ ಇದ್ದಲ್ಲಿ ತಡ ಮಾಡದೇ ಹೊರಟು ಬಿಡುವ ಜಾಯಮಾನದ ಈ ವ್ಯಕ್ತಿಯೇ ಹಡಪದ ರಾಚಪ್ಪ. ಸಾಂಸ್ಕೃತಿಕ ನಗರ ಧಾರವಾಡದ ಮಣ್ಣಿನಲ್ಲಿ ಮೂಡಿ ಬಂದಿರುವ ಈ ಬಂಡಾಯದ ಗಂಡಿನ ಒಡಲಲ್ಲಿ ಅಗತ್ಯ ಬಿದ್ದಾಗ ಬೆಂಕಿಯ ಉಂಡಿಗಳು ಪುಟಿಯುತ್ತವೆ. ಆದರೆ ಸರಿ ಕಂಡು ಬಂದೆಡೆ ಸರಳ ನೇರ ನುಡಿ. ತಾನೇ ಬಡವ, ಬಡವರ ಕಂಡರೆ ಮನ ಮಿಡಿಯುವ ಕರಳು.

ಕೇವಲ ಎರಡನೇ ತರಗತಿವರೆಗೆ ಓದಿದ್ದರೂ, ಲೋಹಿಯಾ ಸಿದ್ಧಾಂತ ಮತ್ತು ಗಾಂಧಿ ತತ್ವಗಳು ಇವರ ಬಾಳಿನ ಉಸಿರು. ಈ ನಡುವೆ ಜಯಪ್ರಕಾಶ ನಾರಾಯಣರ ಸಂಪೂರ್ಣ ಕ್ರಾಂತಿಯ ಹಿಲಾಲು ಹಿಡಿಯುವ ಹಂಬಲ. ಬಾಲ್ಯದಿಂದಲೂ ಸುಸಂಸ್ಕೃತ ಚಿಂತಕರ ಪರಿಸರ, ಸ್ವಾತಂತ್ರ್ಯ ಆಂದೋಲನದ ಪರಿಸರದಲ್ಲಿ ಬೆಳೆದು ಬಂದುದರ ಪರಿಣಾಮವಿದು. ಧಾರವಾಡ ಸೀಮೆಯ ಸಮಾಜವಾದಿ ಧುರೀಣರಾದ ನೀಲಗಂಗಯ್ಯಾ ಪೂಜಾರ, ಗಂಗಾಧರ ಟಿ. ಪದಕಿ, ರಾಚಪ್ಪಣ್ಣಾ ಬೆಟಸೂರ ಅವರ ಮಾರ್ಗದರ್ಶನದಲ್ಲಿ ಅವರ ಆಂದೋಲನದೊಂದಿಗೆ ಬೆಳೆದು ಬಂದವರು ಇವರು.

ವೃತ್ತಿಯಿಂದ ಇವರು ಕ್ಷೌರಿಕರು. ಸಲೂನ್‌ನ ಹೆಸರು "ಸಮತಾ ಹೇರ್ ಕಟಿಂಗ್ ಸಲೂನ್'! ಸಾಹಿತಿ, ಕಲಾವಿದರು, ಬುದ್ಧಿಜೀವಿಗಳ ಊರಾದ ಧಾರವಾಡದಲ್ಲಿಯ ಈ ಸಲೂನ್‌ಗೆ ಭೆಟ್ಟಿ ಕೊಡದ ಮಹನೀಯರಿಲ್ಲ. ಅಂತೆಯೇ ಸಾಮಾನ್ಯರು ಸಹ ಕಟಿಂಗ್‌ಗೆ ಬರುತ್ತಿದ್ದರು. ಈ ಹಡಪದ ರಾಚಪ್ಪ ಅವರು ಕೂದಲು ಕತ್ತರಿಸುತ್ತಿದ್ದರಾದರೂ ಅವರ ತಲೆಗಳೊಳಕ್ಕೆ ಅಸಮಾನತೆಯ ವಿರುದ್ಧದ ವಿಚಾರಗಳ ಬೀಜ ಬಿತ್ತಿ, ಸಮಾನತೆಯ ಕಿಚ್ಚು ತುಂಬಿ ಕಳಿಸುತ್ತಿದ್ದರು. ಈ ಸಲೂನ್‌ನಲ್ಲಿ ಚಿತ್ರತಾರೆಯರ ಫೋಟೊಗಳಿರುತ್ತಿರಲಿಲ್ಲ. ಬದಲಾಗಿ ಲೋಹಿಯಾ, ಜೆಪಿ, ಮಹಾತ್ಮಾ ಗಾಂಧಿ, ಭಗತ್‌ಸಿಂಗ್‌ರ ಭಾವಚಿತ್ರಗಳ ಅನಾವರಣ ಇರುತ್ತಿತ್ತು. ಈ ಸಲೂನ್ ಮೊದಲು ಎಲಿ ಪೇಟೆ (ಈಗಿನ ಸಿಬಿಟಿ)ಯಲ್ಲಿದ್ದದ್ದು ನಂತರ ಮೇವಿನ ಪೇಟೆಗೆ ಸ್ಥಳಾಂತರಿಸಲ್ಪಟ್ಟಿತ್ತು. ಇಂಥ ಜನನಿಬಿಡ ಗಿಜಿ ಗಿಜಿ ಎನ್ನುವ ವಾಣಿಜ್ಯ ಸ್ಥಳಗಳಲ್ಲಿ ಜನಪರ ಆದರ್ಶಗಳನ್ನು ಉಚಿತವಾಗಿ ಮಾರಾಟ ಮಾಡಿದ ಹೆಗ್ಗಳಿಕೆಯ ರಾಚಪ್ಪಗೆ ಈಗ 78 ವರ್ಷ. ಈ ಇಳಿ ವಯಸ್ಸಿನಲ್ಲಿ ಸಲೂನ್‌ಗೆ ಹೋಗುತ್ತಿಲ್ಲವಾದರೂ, ವಿಮೋಚನೆಗಾಗಿ ನಡೆಸುವ ಹೋರಾಟ ಮಾತ್ರ ನಿಲ್ಲಿಸಿಲ್ಲ.

ಎಲ್ಲಿ ಜನಪರ ಚಳುವಳಿ, ಮೆರವಣಿಗೆ, ಧರಣಿ ಇರುತ್ತವೆಯೋ ಅಲ್ಲಿ ಇಂದಿಗೂ ಹಾಜರ್. ತಮ್ಮಂದಿರು ಮತ್ತು ಅವರ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ತಮ್ಮ ಜೀವನ ಮುಡಿಪಿಟ್ಟು ಅವಿವಾಹಿತರಾಗಿಯೇ ಉಳಿದಿರುವ ರಾಚಪ್ಪ ಇಂದಿಗೂ ತಾವೇ ಅಡುಗೆ ಮಾಡಿಕೊಂಡು ಊಟ ಮಾಡುವ ಸ್ವಾವಲಂಬಿಗಳು.

ಕಿತ್ತೂರು ನಾಡಿನ ಬೈಲಹೊಂಗಲ ತಾಲೂಕಿನ ಹೊಳೆಹೊಸೂರು ಗ್ರಾಮದಲ್ಲಿ 1937ರ ಜುಲೈ 18ರಂದು ಜನಿಸಿದ ಇವರು ಮೊದಲಿನಿಂದಲೂ ಖಾದಿಧಾರಿಗಳು. ಬದಲಾವಣೆಗೆ ಸ್ಪಂದಿಸುವ ಸಮಾನ ಚಿಂತಕರು ಯಾರೇ ಇರಲಿ, ಯಾವುದೇ ಪಕ್ಷದವರಿರಲಿ, ಎಲ್ಲರ ವಿಚಾರಗಳಿಗೆ ಮಾನ್ಯತೆ ನೀಡುತ್ತಾ ಗೆಳೆತನದ ತೆಕ್ಕೆಗೆ ಬೀಳುವ ಇವರ ಬದುಕಿನ ದಾರಿ ಅತ್ಯಂತ ರೋಚಕವಾದುದು. ಇವರು 15 ವರ್ಷದವರಿರುವಾಗಲೇ ಹೊಳೆಹೊಸೂರು ಬಿಟ್ಟು ನವಲಗುಂದ ತಾಲೂಕಿನ ತಿರ್ಲಾಪುರ ಗ್ರಾಮದ ಸಂಬಂಧಿಗಳ ಆಶ್ರಯ ಪಡೆದರು. ಕಡು ಬಡತನವೇ ಮತ್ತೊಬ್ಬರ ಆಶ್ರಯ ಪಡೆಯಲು ಕಾರಣವಾಗಿತ್ತು. ಅವರೊಟ್ಟಿಗೆ ಕ್ಷೌರಿಕ ವೃತ್ತಿ ಆರಂಭಿಸಿದರು. ಆಗ ಆ ಭಾಗದ ಸಮಾಜವಾದಿ ನಾಯಕರಾಗಿದ್ದ ಮೊರಬದ ರಾಚಪ್ಪಣ್ಣ ಬೆಟಸೂರರ ಸಂಪರ್ಕಕ್ಕೆ ಈ ರಾಚಪ್ಪ ಬಂದದ್ದೇ ಕ್ರಾಂತಿಕಾರಿ ಬದುಕಿನ ಪುಟಗಳು ತೆರೆದವು.

'ಫಟಫಟಿ' (ಮೋಟರ್ ಬೈಸಿಕಲ್) ಮೇಲೆ ಭುರ್ರೆಂದು ಹಳ್ಳಿ ಹಳ್ಳಿ ಸಂಚರಿಸುತ್ತಿದ್ದ ಬೆಟಸೂರ ರಾಚಪ್ಪ ರೈತರ, ಕೃಷಿ ಕಾರ್ಮಿಕರ ಸಮಸ್ಯೆ, ಕುಂದುಕೊರತೆಗಳಿಗೆ ಸ್ಪಂದಿಸುತ್ತಿದ್ದರು. ಸಮಾಜವಾದಿ ತತ್ವಗಳನ್ನು ಬಲವಾಗಿ ನಂಬಿದ್ದ ಅವರು ಲೋಹಿಯಾ ಅವರ ಪಕ್ಕಾ ಅಭಿಮಾನಿ. ಹಡಪದರ ಮಾತುಗಳಲ್ಲೇ ಹೇಳುವುದಾದರೆ ಬೆಟಸೂರ ಲೋಹಿಯಾ ಮೈಮೇಲೆ ಬಂದವರಂತೆ ಆಡುತ್ತಿದ್ದರು! ಇದು ಅವರ ಬದುಕಿನ ಜೀವನಾಡಿಯಾಗಿತ್ತು. 1953ರಲ್ಲಿ ರೋಣ ತಾಲೂಕಿನ ಅಬ್ಬಿಗೇರಿಗೆ ರಾಮಮನೋಹರ ಲೋಹಿಯಾ ಬರುವವರಿದ್ದರು. ಅಲ್ಲಿಯ ಸಮಾಜವಾದಿ ಹೋರಾಟಗಾರ ವಿರೂಪಾಕ್ಷಪ್ಪ ಈ ಭೆಟ್ಟಿ ಹಾಗೂ ಸಭೆ ಏರ್ಪಡಿಸಿದ್ದರು. ಬೆಟಸೂರ ರಾಚಪ್ಪ ಅಲ್ಲಿಗೆ ಹೊರಟು ನಿಂತರು. ತಾವು ಎಲ್ಲಿಗೆ ಹೋದರೂ ಹಡಪದ ರಾಚಪ್ಪನನ್ನು ಕರೆದುಕೊಂಡು ಹೋಗುತ್ತಿದ್ದ ಬೆಟಸೂರ ತಮ್ಮ ಫಟಫಟಿಯ ಮೇಲೆ ಅವರನ್ನು ಅಲ್ಲಿಗೂ ಕರೆದುಕೊಂಡು ಹೋದರು. ಅದು ಲೋಹಿಯಾ ಅವರನ್ನು ಕಣ್ಣಾರೆ ಕಂಡ ಮೊದಲ ದಿನವಾಯಿತು.

ಅಂದಿನ ಸಭೆಯಲ್ಲಿ ನೀಲಗಂಗಯ್ಯಾ ಪೂಜಾರ ಮುಂತಾದವರನ್ನು ನೋಡುವ ಅವಕಾಶ ಹಡಪದಗೆ ಲಭಿಸಿದ್ದೇ ಕಾರಣವಾಗಿ, ನಂತರದಲ್ಲೇ ಧಾರವಾಡದಿಂದ 12 ಕಿ. ಮೀ. ದೂರದಲ್ಲಿರುವ ತಾಲೂಕಿನ ಹೆಬ್ಬಳ್ಳಿಯ ಜಾಗೀರದಾರ ಎಂಬ ಭೂಮಾಲೀಕರ ಒಡೆತನದಲ್ಲಿ ಸುಮಾರು 12ಸಾವಿರ ಎಕರೆ ಭೂಮಿಯನ್ನು ಗೇಣಿದಾರರಿಗೆ ಕೊಡಿಸಲು ನಡೆದ ಭೂಹೋರಾಟದಲ್ಲಿ ಹಡಪದರು ಭಾಗವಹಿಸುವಂತಾಯಿತು. ತಿರ್ಲಾಪುರದ ಒಡ್ಡರ ಜನಾಂಗದ ಹಿರಿಯ ಗೋವಿಂದಪ್ಪ ಮಾಳಗಿಮನಿ, ಧಾರವಾಡದ ಜಿ. ಟಿ. ಪದಕಿ, ಪೂಜಾರ ವಕೀಲ ಮುಂತಾದವರ ಸಾರಥ್ಯದಲ್ಲಿ ಈ ಹೋರಾಟ ನಿರಂತರ ಸುಮಾರು

2–3 ವರ್ಷ ನಡೆಯಿತು. ಈ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದ 19 ವರ್ಷದ ತರುಣ ಹಡಪದ 3–4 ಬಾರಿ ಬಂಧನಕ್ಕೊಳಗಾದರು.

ನೀಲಗಂಗಯ್ಯಾ ಪೂಜಾರರ ನೇತೃತ್ವದಲ್ಲಿ ಈ ಹೋರಾಟಕ್ಕೆ ಜಯ ಲಭಿಸಿ ಕಾರ್ಯಕರ್ತರಲ್ಲಿ ಹೊಸ ಹುರುಪು ಮೂಡಿಸಿತು. ಪದಕಿ ಹಾಗೂ ಪೂಜಾರ ವಕೀಲರ ಸಲಹೆಯಂತೆ ಹಡಪದ ಧಾರವಾಡಕ್ಕೆ ಬಂದು ಸಲೂನ್ ಒಂದರಲ್ಲಿ ಕೆಲಸಕ್ಕೆ ನಿಂತರು. ಶಾಂತವೇರಿ ಗೋಪಾಲಗೌಡರ ಸಂಪರ್ಕ ಬಂದಾಗ ಅವರ ಮೆಚ್ಚುಗೆಗೂ ಪಾತ್ರರಾದ ಹಡಪದ ಸಕ್ರಿಯವಾಗಿ ಹೋರಾಟದಲ್ಲಿ ಪಾಲ್ಗೊಂಡರು. ಬೆಂಗಳೂರು, ಮೈಸೂರು, ಶಿವಮೊಗ್ಗೆಯ ಸಮಾಜವಾದಿ ಧುರೀಣರ ಹಾಗೂ ಕಾರ್ಯಕರ್ತರ ನಿಕಟ ಸಂಪರ್ಕ ಹೊಂದಿದ್ದ ಹಡಪದ ಅವರನ್ನು ಶಾಸಕ ಗೋಪಾಲಗೌಡರು ಅಗತ್ಯ ಬಿದ್ದಾಗ ಟೆಲಿಗ್ರಾಮ್ ಕೊಟ್ಟು ಬೆಂಗಳೂರಿಗೆ ಕರೆಸಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿಯೇ ಪ್ರೊ. ನಂಜುಂಡಸ್ವಾಮಿ, ಜೆ. ಎಚ್. ಪಟೇಲ, ಬಂಗಾರಪ್ಪ ಮುಂತಾದ ಮಹನೀಯರ ಸಂಪರ್ಕ ಸಾಧ್ಯವಾಯಿತು.

ಇದೆಲ್ಲದರ ಪರಿಣಾಮವಾಗಿ ಹಡಪದ ರಾಚಪ್ಪ ಅವರನ್ನು ಸಮಾಜವಾದಿ ಯುವಜನಸಭಾದ ಉತ್ತರ ಕರ್ನಾಟಕದ ಸಂಚಾಲಕರನ್ನಾಗಿ ನೇಮಿಸಲಾಯಿತು. ಎಸ್.ಎಸ್. ಕುಮಟಾ, ಜೆ. ಎಚ್. ಪಟೇಲ, ಪ್ರಭಾಕರ ಕಾಳೆ ಮುಂತಾದವರು ನಡೆಸುತ್ತಿದ್ದ ಅಧ್ಯಯನ ಶಿಬಿರದಲ್ಲಿ ರಾಚಪ್ಪ ಸಕ್ರಿಯವಾಗಿ ಪಾಲ್ಗೊಂಡು ಆಸಕ್ತಿಯಿಂದ ಆಲಿಸುತ್ತಿದ್ದರು. ಅಲ್ಲಿಯೇ ಪಿ. ಲಂಕೇಶ, ಪೂಚಂತೇ, ರವಿವರ್ಮ ಕುಮಾರ, ಪ್ರೊ. ರಾಮದಾಸ್ ಮುಂತಾದವರ ಸಂಪರ್ಕ ರಾಚಪ್ಪನಿಗೆ ದೊರೆಯಿತು. ಹಡಪದ ಅವರು ತತ್ವ, ಸಿದ್ಧಾಂತಗಳನ್ನು ತಿಳಿದುಕೊಳ್ಳುತ್ತಿದ್ದರಾದರೂ ಅವರದು 'ಆ್ಯಕ್ಶನ್ ಓರಿಯೆಂಟೆಡ್'ನತ್ತ ತುಡಿಯುವ ಮನಸ್ಸಾಗಿತ್ತು. 'ಥಿಯರಿ'ಗಿಂತ 'ಪ್ರಾಕ್ಟಿಕಲ್'ಗೆ ಅವರು ಕೂಡಲೇ ಸ್ಪಂದಿಸುತ್ತಿದ್ದರು.

1975ರ ತುರ್ತು ಪರಿಸ್ಥಿತಿಯ ಕರಾಳ ದಿನಗಳಲ್ಲಿ ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ದೇಶದಾದ್ಯಂತ ಇಂದಿರಾ ವಿರುದ್ಧ ನಡೆದ ತೀವ್ರ ಚಳುವಳಿಗೆ ಧಾರವಾಡದ ಬುದ್ಧಿಜೀವಿಗಳು, ಸಾಹಿತಿ, ಕಲಾವಿದರು ಸಹ ಸಹಜವಾಗಿ ಸ್ಪಂದಿಸಿದರು. ನವನಿರ್ಮಾಣ ಕ್ರಾಂತಿ ಆಂದೋಲನದ ಸಂದರ್ಭದಲ್ಲಿ ಜಾರ್ಜ್ ಫರ್ನಾಂಡೀಸ್‌ರು ಕನ್ನಡ, ಹಿಂದಿ, ಇಂಗ್ಲೀಷ್, ತಮಿಳು, ತೆಲಗು, ಉರ್ದು ಸೇರಿದಂತೆ ವಿವಿಧ ಭಾಷೆಗಳಲ್ಲಿ ಕರಪತ್ರ ಮುದ್ರಿಸಿ ಹಡಪದ ರಾಚಪ್ಪನ ಸಲೂನ್‌ಗೆ ಮುಟ್ಟಿಸುತ್ತಿದ್ದರು. ಅವುಗಳನ್ನು ಯುವಜನರು, ವಿದ್ಯಾರ್ಥಿಗಳು ಮಧ್ಯರಾತ್ರಿ ಎರಡನೇ ಸಿನೇಮಾ ಬಿಟ್ಟು ಜನ ಹೊರಬರುತ್ತಿದ್ದಂತೇ ಅವರೊಂದಿಗೆ ಸೇರಿಕೊಂಡು ಆ ಕರಪತ್ರಗಳನ್ನು ಅಂಗಡಿ ಮುಂಗಟ್ಟುಗಳಲ್ಲಿ ಎಸೆದು ಹೋಗುತ್ತಿದ್ದರು.

ಈ ಕರಪತ್ರಗಳು ಹಡಪದ ಸಲೂನ್‌ದಿಂದಲೇ ವಿತರಣೆಯಾಗುತ್ತವೆ ಎಂಬುದನ್ನು ಪತ್ತೆ ಮಾಡಿದ ಪೊಲೀಸ್‌ರು ಅವರಿಗೆ ಕಿರುಕುಳ ಕೊಡಲಾರಂಭಿಸಿದರು. ಆಗ ಮುರಕಟ್ಟಿಗುಡ್ಡದಲ್ಲಿ ಭೂಗತರಾಗಿದ್ದುಕೊಂಡೇ ಹಡಪದರು ಸಲೂನ್‌ದಿಂದ ಕರಪತ್ರ ಹಂಚಿಕೆಯ ಮೇಲ್ವಿಚಾರಣೆ ನಡೆಸಿದ್ದರು. ಆಗ ಧಾರವಾಡ ಜಿಲ್ಲಾಧಿಕಾರಿಯಾಗಿದ್ದ ಕೆ. ವಿ. ಇರ್ನಿರಾಯ ಎನ್ನುವವರು

ಈ ಎಲ್ಲ ಚಟುವಟಿಕೆಗಳ ಮೇಲೆ ನಿಗಾ ಇಡುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು. ಅಲಮೇಲಕರ ಎಂಬ ಪೊಲೀಸ್ ಅಧಿಕಾರಿ ಮಧ್ಯವರ್ತಿಗಳ ಮೂಲಕ ಹಡಪದರನ್ನು ಠಾಣೆಗೆ ಕರೆಸಿಕೊಂಡು ರಾತ್ರೋ ರಾತ್ರಿ ಮ್ಯಾಜಿಸ್ಟ್ರೇಟ್‌ರ ಎದುರು ಹಾಜರುಪಡಿಸಿ ಧಾರವಾಡ ಜೇಲ್‌ಗೆ ಕಳಿಸಿದರು. 15 ದಿನಗಳ ನಂತರ ಅವರನ್ನು ಬೆಳಗಾವಿ ಹಿಂಡಲಗಾ ಜೇಲ್‌ಗೆ ವರ್ಗಾಯಿಸಲಾಯಿತು. ಧಾರವಾಡದಲ್ಲಿ 15 ದಿನ, ಬೆಳಗಾವಿ ಹಿಂಡಲಗಾದಲ್ಲಿ ಎರಡೂವರೆ ತಿಂಗಳು ಹೀಗೆ ಒಟ್ಟು ಮೂರು ತಿಂಗಳು ಸೆರೆಮನೆ ವಾಸ ಅನುಭವಿಸಿ ಹಡಪದ ಬಿಡುಗಡೆಗೊಂಡರು.

ತುರ್ತು ಪರಿಸ್ಥಿತಿ ನಂತರ 1977ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನೂತನ ಜನತಾ ಪಕ್ಷದಲ್ಲಿ ಸಮಾಜವಾದಿ ಪಕ್ಷ ಕರಗಿ ಹೋಗಿ ಆ ಜನತಾ ಪಕ್ಷದ ಸರ್ಕಾರವೂ ಬಿದ್ದು ಹೋಗಿ ಸಮಾಜವಾದಿಗಳು ಅತಂತ್ರರಾದಾಗ ಕೆಲ ಸಮಾಜವಾದಿ ಕಾರ್ಯಕರ್ತರು ಕಿಶನ್ ಪಾಟ್ನಾಯಕ್ ನೇತೃತ್ವದಲ್ಲಿ ಬೆಂಗಳೂರಿನಲ್ಲಿ 1980ರಲ್ಲಿ ಎರಡು ದಿನಗಳ ಸಭೆ ನಡೆಸಿದರು. 'ಸಮತಾ ಪಕ್ಷ' ಎಂಬ ನೂತನ ರಾಜಕೀಯ ಪಕ್ಷ ಸ್ಥಾಪಿಸಬೇಕೆಂಬ ಪ್ರಸ್ತಾವನೆ ಮೂಡಿ ಬಂತು. ಕೆಲವರು ವಿರೋಧವನ್ನೂ ವ್ಯಕ್ತಪಡಿಸಿದರು. ಅವರಲ್ಲಿ ಹಡಪದರು ಪ್ರಮುಖರು. ಶಹರ ಪ್ರದೇಶ ಹೊರತುಪಡಿಸಿ ಗ್ರಾಮೀಣ ಪ್ರದೇಶದ ರೈತ ಹಾಗೂ ಕೃಷಿ ಕಾರ್ಮಿಕರ ಪರ ಹೋರಾಡುವ ಸಂಘಟನೆ ಆರಂಭಿಸಬೇಕೆಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ತೇಜಸ್ವಿ, ರಾಮದಾಸ, ಲಂಕೇಶ ಅವರ ಅಭಿಪ್ರಾಯವೂ ಅದೇ ಆಗಿತ್ತು. ಸಭೆ ಯಾವುದೇ ಗಟ್ಟಿ ನಿರ್ಧಾರಗಳನ್ನು ಕೈಕೊಳ್ಳದೇ ಸಮಾರೋಪಗೊಂಡಿತು.

ಮುಂದೆ ಬೆಳಗಾವಿಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು ರೈತರ ಸಾಲ ವಸೂಲಿಗಾಗಿ ಜಪ್ತಿ ಮಾಡಿದ್ದರ ವಿರುದ್ಧ ಧರಣಿ ಆರಂಭವಾಯಿತು. ಕುಂದರನಾಡ ಪಾಟೀಲ, ಹಡಪದ, ಸುರೇಶಬಾಬು ಗಜಪತಿ ಮುಂತಾವರ ನೇತೃತ್ವದಲ್ಲಿ ನಡೆದ ಈ ಹೋರಾಟದ ಕಾಲಕ್ಕೆ ಹಲಿಗೆ ಬಾರಿಸುತ್ತಾ ಹೋಗಿ ರೈತರಿಂದ ಜಪ್ತಿ ಮಾಡಿದ ವಸ್ತುಗಳನ್ನು ಸಹಕಾರ ಇಲಾಖೆಯಿಂದ ವಾಪಸ್ ಕೊಡಿಸಲಾರಂಭಿಸಿದರು. ಈ ಸಂದರ್ಭದಲ್ಲಿ ಬಾಬಾಗೌಡ ಪಾಟೀಲ, ರುದ್ರಪ್ಪ ಮೊಖಾಸಿ ಮುಂತಾದವರು ಬೆಂಬಲದ ನೆಪದಲ್ಲಿ ಬಂದು ಇವರು ಜಪ್ತಿ ಮಾಡಿದ್ದನ್ನು ಏನು ಮಾಡುತ್ತಾರೆ ಎಂಬುದನ್ನು ಪರೀಕ್ಷೆ ಮಾಡುತ್ತಿದ್ದರು ಎನ್ನುವದು ಹಡಪದರ ಅನುಮಾನ!

ಮುಂದೆ ಅವೈಜ್ಞಾನಿಕವಾಗಿ ಕರ ವಸೂಲು ಮಾಡುವದರ ವಿರುದ್ಧ ನವಲಗುಂದ, ನರಗುಂದ ರೈತರಿಂದ ಆರಂಭವಾದ ಹೋರಾಟ ಗೋಳಿಬಾರ್ ನಂತರ ಬೇರೆ ನಾಯಕರು ಚಳುವಳಿಯನ್ನೇ ಹೈಜಾಕ್ ಮಾಡಿದರು. ಸ್ಥಳಕ್ಕೆ ಭೆಟ್ಟಿ ನೀಡಲು ಬಂದ ರಾಜ್ಯದ ವಿವಿಧ ಭಾಗದ ರೈತ ಧುರೀಣರು ಹುಬ್ಬಳ್ಳಿಯ ವುಡ್‌ಲ್ಯಾಂಡ್ಸ್ ಹೊಟೇಲ್‌ದಲ್ಲಿ ಸಭೆ ಸೇರಿದರು. ಆಗ ರಾಜ್ಯ ರೈತ ಸಂಘ ಅಸ್ತಿತ್ವಕ್ಕೆ ಬಂತು. ಮುಂದೆ ಪ್ರೊ. ನಂಜುಂಡಸ್ವಾಮಿ ಅವರ ನೇತೃತ್ವದಲ್ಲಿ ಆಶಾದಾಯಕವಾಗಿ ಆರಂಭವಾದರೂ ಅದು ಹೋಳು ಹೋಳಾಗಿಹೋಯಿತು. ಗೋವೆ ವಿಮೋಚನೆ ಆಂದೋಲನದಲ್ಲಿ ಕೂಡಾ ರಾಚಪ್ಪ ಮುಖ್ಯ ಪಾತ್ರ ವಹಿಸಿದ್ದರು. ಹೀಗೆ ಕರ್ನಾಟಕದ ಸಮಾಜವಾದಿ ಆಂದೋಲನದಲ್ಲಿ ಅಷ್ಟೊಂದು ಶಿಕ್ಷಣ ಪಡೆಯದ,

ಅದೂ ವೃತ್ತಿಯಿಂದ ಕ್ಷೌರಿಕನಾದ ದಲಿತ ಹಡಪದ ರಾಚಪ್ಪ ಮಿಂಚಿದ್ದಾರೆ.

ರಾಚಪ್ಪ ಹಡಪದರ ಬದುಕು ವಿವಿಧ ಕಾಲಘಟ್ಟಗಳಲ್ಲಿ ಅವರ ಕಾಮ್ರೇಡರುಗಳಲ್ಲಿ ಎಷ್ಟು ಕುತೂಹಲ, ಮೆಚ್ಚುಗೆ, ಅಭಿಮಾನಗಳನ್ನು ಹುಟ್ಟಿಸಿತ್ತೆಂದರೆ, ಇವರನ್ನು ನೋಡಲೆಂದೇ ಪೂರ್ಣಚಂದ್ರ ತೇಜಸ್ವಿ ತಮ್ಮ ಗೆಳೆಯ ರಾಮದಾಸ್‌ರೊಂದಿಗೆ ಮೂಡಿಗೆರೆಯಿಂದ ಸ್ಕೂಟರ್‌ನಲ್ಲಿ ಬಂದು ಮಾತಾಡಿಸಿ ಹೋದರಂತೆ. ಇನ್ನೊಮ್ಮೆ ಕಿಶನ್ ಪಟ್ನಾಯಕ್ ಅವರ ಪತ್ನಿ ಕಿತ್ತೂರು ಕೋಟೆ ನೋಡಲು ಪ್ರೊ. ನಂಜುಂಡಸ್ವಾಮಿ ಹಾಗೂ ಅವರ ಪತ್ನಿಯೊಂದಿಗೆ ಬಂದಾಗ ಹಡಪದರ ಊರು ಹೊಳೆಹೊಸೂರಿಗೆ ಬಂದು ಅವರ ತಾಯಿಯಯನ್ನು ಕಂಡು ಹೋಗಿದ್ದರು. ಇನ್ನೂ ವಿಶೇಷ ಎಂದರೆ ಕೇಂದ್ರ ಸರಕಾರದ ಔದ್ಯೋಗಿಕ ಮಂತ್ರಿಯಾಗಿದ್ದಾಗ ಜಾರ್ಜ್ ಫರ್ನಾಂಡಿಸ್ ಬೆಳಗಾವಿಯಿಂದ ಹುಬ್ಬಳ್ಳಿಗೆ ಹೋಗುತ್ತಿದ್ದಾಗ ಹೊಳೆಹೊಸೂರಿಗೆ ಹೋಗಿ ರಾಚಪ್ಪನ ತಾಯಿ ಕೊಟ್ಟ ಒಂದು ಕಪ್ಪು ಹಾಲು ಕುಡಿದು ಹೋಗಿದ್ದರು.

ಜೀವನದುದ್ದಕ್ಕೂ ಹಿರಿಯ ಸಾಹಿತಿ ಶಂ. ಭಾ. ಜೋಶಿಯವರಿಂದ ಹಿಡಿದು, ರಮ್‌ಜಾನ್ ದರ್ಗಾರವರೆಗೆ ಹಿರಿ-ಕಿರಿಯ ಸಾಹಿತಿಗಳ ಸಂಪರ್ಕದಲ್ಲಿ ವೈಚಾರಿಕತೆ ಕಂಡುಕೊಂಡ ರಾಚಪ್ಪ ತೀವ್ರ ತೊಂದರೆಗೆ ಒಳಗಾದಾಗ ಅವರ ಎಲ್ಲ ಆತ್ಮೀಯರನ್ನು ಒಂದುಗೂಡಿಸಿ ಸಹಾಯ ಕಲ್ಪಿಸಿ ವಾಸಕ್ಕೊಂದು ನೆರಳು ಕಲ್ಪಿಸಿದವರು ಭಾರತ ಏಕತಾ ಆಂದೋಲನದ ಮಹಾದೇವ ಹೊರಟ್ಟಿ. ಇದಕ್ಕೆ ರಾಜ್ಯದ ಮೂಲೆ ಮೂಲೆಯಿಂದ ರಾಚಪ್ಪನಿಗೆ ಸಹಾಯ ಒದಗಿ ಬಂತು.

ಕನ್ನಡದ ನೆಲದಲ್ಲಿ ಸಮಾಜವಾದಿ ಬೇರುಗಳು ಇನ್ನೂ ಇವೆ. ಇವು ಪಳೆಯುಳಿಕೆಗಳಲ್ಲ. ಇಂದಿಗೂ ಈ ಸಿದ್ಧಾಂತಗಳು, ಆದರ್ಶಗಳು ಪ್ರಸ್ತುತ ಎಂದು ಮತ್ತೆ ಮತ್ತೆ ಜ್ಞಾಪಿಸುತ್ತಿವೆ. ಹಡಪದ ರಾಚಪ್ಪನಂಥ ವ್ಯಕ್ತಿತ್ವಗಳ ಬದುಕನ್ನು ಮೆಲಕು ಹಾಕುವದೇ ಇದಕ್ಕೆ ಸಾಕ್ಷಿ. ಜನಸಮುದಾಯದ ಸಮಾನತೆಗೆ ಅಗತ್ಯವಾದ ಸಮಾಜವಾದ ಮತ್ತೆ ಚಾಲ್ತಿಗೆ ಬರುತ್ತದೆ, ಬರಲೇಬೇಕು ಎಂಬ ವಿಚಾರಧಾರೆಗೆ ಇಂಥ ವ್ಯಕ್ತಿತ್ವಗಳ ಹೋರಾಟದ ಅನುಭವವೇ ಸಾಕು.

-ಗಣೇಶ ಜೋಶಿ

(ಫೆಬ್ರುವರಿ, 2015)

ಸರಳ ಸಭ್ಯ ಸಮಾಜವಾದಿ ಮೂಡುಬಾಗಿಲು ರಾಮಪ್ಪ



ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಿಂದ ಮೊದಲ ಬಾರಿಗೆ 1957ರಲ್ಲಿ ಶಾಂತವೇರಿ ಗೋಪಾಲಗೌಡರು ಚುನಾವಣೆಗೆ ನಿಂತಾಗ ಅವರ ಪರಿಚಯವೇ ಇಲ್ಲದ ಹುಡುಗನೊಬ್ಬ ತನ್ನದೇ ಸೈಕಲ್‌ನಲ್ಲಿ ಓಡಾಡಿ ಮೇಗರವಳ್ಳಿ ಸೀಮೆಯಲ್ಲಿ ಸೋಷಲಿಸ್ಟ್ ಪಕ್ಷದ ಪರ ನಿರಂತರ ಪ್ರಚಾರ ನಡೆಸುತ್ತಿದ್ದ. ಅದೇ ಸಂದರ್ಭದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಬದರಿನಾರಾಯಣ ಅವರನ್ನು ಗೆಲ್ಲಿಸಲೇಬೇಕೆಂದು ಕಡಿದಾಳು ಮಂಜಪ್ಪನವರು ಹತ್ತಿರದ ಸಂಬಂಧಿ ನ್ಯಾಯಮೂರ್ತಿ ಎನ್.ಡಿ. ವೆಂಕಟೇಶ್‌ರೊಂದಿಗೆ (ಆಗ ವಕೀಲರು) ಬಿರುಸಿನ ಪ್ರಚಾರ ನಡೆಸುತ್ತಿದ್ದರು. ಅವರು ಕಾರಿನಲ್ಲಿ ಹೋದಲ್ಲೆಲ್ಲ ಈ ಹುಡುಗನೂ ಎದುರಾಗುತ್ತಿದ್ದ. ಕೆಂದಾಳಬೈಲು, ನಾಲೂರು, ಮೇಗರವಳ್ಳಿ, ಕಮ್ಮರಡಿ ಇಲ್ಲೆಲ್ಲ ಕಾಣಿಸಿದಾಗ ಈತನ ಬಗ್ಗೆ ಕುತೂಹಲ ತಾಳಿದ ಎನ್.ಡಿ. ವೆಂಕಟೇಶ್ 'ಯಾಕೆ ನೀನು ಗೋಪಾಲನ ಪರವಾಗಿ ಪ್ರಚಾರ ಮಾಡುತ್ತೀ?' ಎಂದು ಕೇಳಿದರು. ಅದಕ್ಕೆ ಪ್ರತಿಯಾಗಿ 'ಗೋಪಾಲಗೌಡರು ಏನು ಅಪರಾಧ ಮಾಡಿದ್ದಾರೆ ಹೇಳಿ!' ಎಂದು ಹುಡುಗ ಪ್ರಶ್ನೆ ಮಾಡಿದ. ರಾತ್ರಿ ಕಾಂಗ್ರೆಸ್ ಪ್ರಚಾರ ತಂಡ ಉಳಿದುಕೊಂಡಿದ್ದ ಮೇಗರವಳ್ಳಿ ಬೊಮ್ಮಯ್ಯ ಹೆಗ್ಗಡೆಯವರ ಮನೆಗೆ ಊಟಕ್ಕೆ ಈತನನ್ನೂ ಒತ್ತಾಯಿಸಿ ಕರೆದರು. ಸಂಕೋಚದಿಂದ ಈತ ಹೋದಾಗ ಸಂತೋಷದಿಂದ ಮಾತನಾಡಿ 'ಗೋಪಾಲನ ಪುಣ್ಯ ಕಣಯ್ಯ ನಿನ್ನಂಥ ಕಾರ್ಯಕರ್ತರಿದ್ದಾರೆ. ಗೋಪಾಲ ಗೆಲ್ಲಬೇಕು. ನೀನು ಪ್ರಚಾರ ಮಾಡು.' ಎಂದರಂತೆ!

ಆಗಷ್ಟೆ ಎಸ್.ಎಸ್.ಎಲ್.ಸಿ. ಮುಗಿಸಿದ್ದ ಆ ಹರೆಯದ ಹುಡುಗನೇ ಈಗ ಎಂಭತ್ತಮೂರು ವರ್ಷದ ವಯೋವೃದ್ಧರಾಗಿರುವ ಎಂ.ವಿ. ರಾಮಪ್ಪ. ತೀರ್ಥಹಳ್ಳಿ ಪ್ರೌಢಶಾಲೆಯಲ್ಲಿ ಓದುತ್ತಿರುವಾಗಲೇ ಇವರಿಗಿಂತ ತುಸುವೇ ಹಿರಿಯ ವಿದ್ಯಾರ್ಥಿಯಾಗಿದ್ದ ಗೋಪಾಲಗೌಡರ ಸಾರ್ವಜನಿಕ ಭಾಷಣಗಳು, ಖಾಸಗಿ ಚರ್ಚೆಗಳಿಂದ ಪ್ರಭಾವಿತನಾಗಿದ್ದ ಯುವಕ. ಸಾವಿರಾರು ಜನ ಗೌಡರ ಭಾಷಣಕ್ಕೆ ಆಗಲೇ ನೆರೆಯುತ್ತಿದ್ದುದು ನೋಡಿ ಬೆರಗಾಗಿದ್ದ ರಾಮಪ್ಪ, ತಾನೂ ಒಳ್ಳೆಯ ಮಾತುಗಾರನಾಗಿ ಅವರ ಪರ ಪ್ರಚಾರದಲ್ಲಿ ತೊಡಗಿಕೊಂಡರು. ಸಮಾಜವಾದಿ ತತ್ವ ನಿಷ್ಠೆ ಮತ್ತು ಗೌಡರ ಪರವಾದ ವ್ಯಕ್ತಿ ನಿಷ್ಠೆಗಳನ್ನು ಬೆಳೆಸಿಕೊಂಡರು. ಜೀವಮಾನವೆಲ್ಲ ಸಮಾಜವಾದಿ ಕಾರ್ಯಕರ್ತನಾಗಿ ಗೌಡರ ಅನುಯಾಯಿಯಾಗಿ ಉಳಿದುಕೊಂಡಿದ್ದಾರೆ. ಗೌಡರ ನಂತರ ಕೋಣಂದೂರು ಲಿಂಗಪ್ಪನವರು 1972 ರಲ್ಲಿ ಚುನಾವಣಾ ಅಭ್ಯರ್ಥಿಯಾದಾಗಲೂ ಅವರ ಪರವಾಗಿ ಮುಖ್ಯ ಪ್ರಚಾರಕರಾಗಿ ದುಡಿದರು.

ರಾಮಪ್ಪನವರು ಓದಿದ್ದು ಸ್ವಲ್ಪವೇ. ತಂದೆ ತಾಯಿ ಚಿಕ್ಕಂದಿನಲ್ಲೇ ತೀರಿಕೊಂಡಿದ್ದರಿಂದ ಸೋದರತ್ತೆಯ ಆಶ್ರಯದಲ್ಲಿ ಬೆಳೆಯಬೇಕಾಗಿ ಬಂತು. ಹುಡುಗ ಬುದ್ಧಿವಂತನಾಗಿದ್ದ. ಒಮ್ಮೆ ನಾಲೂರಿನಲ್ಲಿ ರಸ್ತೆಯಲ್ಲಿ ಹೋಗುತ್ತಿದ್ದ ಈತನನ್ನು ಮನೆಯಲ್ಲಿ ಕುಳಿತಿದ್ದ ಚಿನ್ನಪ್ಪಗೌಡರು ಕರೆದು ವಿಚಾರಿಸಿ ತಾನು ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವುದಾಗಿ ಹೇಳಿದರು. (ಮಲೆನಾಡು ಭಾಗದ ಹಲವರ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದ ಮಹನೀಯರು ಈ ಚಿನ್ನಪ್ಪಗೌಡರು. ಪ್ರಸಿದ್ಧ ಸಾಹಿತಿ ಹಾ.ಮಾ. ನಾಯಕರಿಗೂ ಸಹಾಯ ಮಾಡಿದ್ದ ಬಂಧು). ಆದರೆ ಮನೆಯಲ್ಲಿ ಒಪ್ಪಿಗೆ ದೊರೆಯಲಿಲ್ಲವಾದ್ದರಿಂದ ರಾಮಪ್ಪನ ಓದು ಅಲ್ಲಿಗೇ ಮುಕ್ತಾಯವಾಯಿತು. ಆದರೆ ಅವರ ರಾಜಕೀಯ ಸಿದ್ಧಾಂತಗಳ ಪರಿಜ್ಞಾನ ವಿಶೇಷವಾದದ್ದು. ಈಗಲೂ ಅವರೊಂದಿಗೆ ಮಾತಿಗಳಿದರೆ ಅವರ ಸೊಗಸಾದ ಮಾತುಗಾರಿಕೆ ಅರಿವಿಗೆ ಬರುತ್ತದೆ.

ರಾಮಪ್ಪನವರ ಇಂಥ ವ್ಯಕ್ತಿತ್ವಕ್ಕೆ ಮಹತ್ವಪೂರ್ಣ ಕುಟುಂಬದ ಹಿನ್ನೆಲೆ ಇದೆ. ತಂದೆ ವೆಂಕಪ್ಪಗೌಡರು ಪ್ರಮುಖ ದೇಶಭಕ್ತರಾಗಿದ್ದ ಗಾಂಧಿ ಅನುಯಾಯಿ. 1927ರ ಬೆಳಗಾಂ ಕಾಂಗ್ರೆಸ್ ಅಧಿವೇಶನಕ್ಕೆ ಹೋಗಿದ್ದರು. ಚಿಕ್ಕಪ್ಪ ಗಿರಿಯಪ್ಪಗೌಡರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ, ಒಂದು ವರ್ಷ ಎಂಟು ತಿಂಗಳು ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಸೆರೆವಾಸ ಅನುಭವಿಸಿದ್ದರು. ಸಹಜವಾಗಿ ಕಾಂಗ್ರೆಸ್ಸಿಗರೇ ಆಗಿದ್ದ ರಾಮಪ್ಪಗೌಡರು ಗೋಪಾಲಗೌಡರ ವರ್ಚಸ್ವೀ ವ್ಯಕ್ತಿತ್ವದಿಂದ ಸೆಳೆಯಲ್ಪಟ್ಟು ಸೋಷಲಿಸ್ಟರಾದರು. ಗೋಪಾಲಗೌಡರು ಚುನಾವಣಾ ಪ್ರಚಾರ ಸಂದರ್ಭದಲ್ಲಿ ಈ ಭಾಗಕ್ಕೆ ಬಂದರೆ ಮೂಡುಬಾಗಿಲು ರಾಮಪ್ಪನ ಮನೆಯಲ್ಲೇ ಮೊಕ್ಕಾಂ ಹಾಕುತ್ತಿದ್ದರು. ರಾಮಪ್ಪ ಓಟು ಕೊಡಿಸುತ್ತಿದ್ದುದಷ್ಟೇ ಅಲ್ಲ, ಪಕ್ಷಕ್ಕಾಗಿ ಧನಸಂಗ್ರಹಣೆಯನ್ನೂ ಮಾಡಿಕೊಡುತ್ತಿದ್ದರು.

ಮೂಡುಬಾಗಿಲು ರಾಮಪ್ಪ ರೈತ ಚಳುವಳಿಯ ಅಂಗವಾದ ನರಗುಂದ ನವಲಗುಂದ ಘಟನಾವಳಿಗಳ ಪ್ರತಿಭಟನೆಯಲ್ಲಿ ಭಾಗಿಯಾಗಿ ತೀರ್ಥಹಳ್ಳಿ ತಾಲ್ಲೂಕು ಕಛೇರಿ ಎದುರು ಸತ್ಯಾಗ್ರಹ ಮಾಡಿ ಬಂಧನಕ್ಕೊಳಗಾಗಿದ್ದರು. ಗೋಪಾಲಗೌಡರ ನೇತೃತ್ವದಲ್ಲಿ ನಡೆದ ಭೂ ಆಕ್ರಮಣ ಚಳುವಳಿಯಲ್ಲಿ ಭಾಗವಹಿಸಿ ರಾಜ್ಯಾದ್ಯಂತ ಭೂಮಿ ಇಲ್ಲದವರು ಭೂಮಿ ಆಕ್ರಮಿಸಲು ಪ್ರಚೋದಿಸಿದರು.


1961ರ ತೀರ್ಥಹಳ್ಳಿ ತಾಲ್ಲೂಕು ಬೋರ್ಡ್ ಚುನಾವಣೆಯಲ್ಲಿ ರಾಮಪ್ಪ ಸ್ಪರ್ಧಿಸಿ ಕಾಸರವಳ್ಳಿ ಗಣೇಶ್‌ರಾವ್ ಅವರ ಎದುರು ಜಯಗಳಿಸಿದರು. ಪ್ರಭಾವಿ ಶ್ರೀಮಂತ ಬ್ರಾಹ್ಮಣರೊಬ್ಬರು ಸ್ಪರ್ಧಿಸಿದ್ದಾಗ್ಯೂ ಬ್ರಾಹ್ಮಣರೇ ರಾಮಪ್ಪನವರಿಗೆ ಹೆಚ್ಚಾಗಿ ಮತ ನೀಡಿದರು. ಇದಕ್ಕೆ ಕಾರಣ ತೀರ್ಥಮುತ್ತೂರು ಮಠ ಮತ್ತು ಅದರ ಸ್ವಾಮಿಗಳು ಎಂದು ರಾಮಪ್ಪ ಹೇಳುತ್ತಾರೆ. ಆ ಕಾಲಕ್ಕೆ ಮಠ ಸಮಾಜವಾದ ಚಳುವಳಿಯ ಕೇಂದ್ರ ಸ್ಥಳವಾಗಿತ್ತು. ಗೋಪಾಲಗೌಡರು ಮಠಕ್ಕೆ ಬಂದರೆ ರೇಷ್ಮೆ ವಸ್ತ್ರ ಹಾಸಿ ಅದರ ಮೇಲೆ ಕೂರಿಸಿ ಸ್ವಾಮಿಗಳು ಮಾತನಾಡಿಸುತ್ತಿದ್ದರಂತೆ. ಬ್ರಾಹ್ಮಣರು ಅದರಲ್ಲೂ ಪಂಚ ಗ್ರಾಮ ಸಮುದಾಯದವರು ತನು-ಮನ-ಧನಗಳಿಂದ ಸಮಾಜವಾದಿ ಪಕ್ಷವನ್ನು ಬೆಂಬಲಿಸಿದರು. ಆ ಅವಧಿಯ ತಾಲ್ಲೂಕು ಬೋರ್ಡ್ ಸದಸ್ಯರೆಲ್ಲ ಘನತೆವೆತ್ತವರೇ

ಆಗಿದ್ದು, ಪ್ರತಿಯೊಬ್ಬರೂ ತಾಲ್ಲೂಕಿನ ಅಭಿವೃದ್ಧಿ ಮಾಡಿದರು. ನಂತರದಲ್ಲಿ ರಾಮಪ್ಪ ಹೊನ್ನೇತಾಳು ಮಂಡಲ್ ಪಂಚಾಯ್ತಿಗೆ ಉಪಾಧ್ಯಕ್ಷರಾಗಿ ಗ್ರಾಮದ ಏಳ್ಗೆಗೆ ಶ್ರಮಿಸಿದರು. ಈಗಲೂ ಈ ಗ್ರಾಮದಲ್ಲಿ ಗೌರವಾನ್ವಿತ ವ್ಯಕ್ತಿಯಾಗಿದ್ದಾರೆ.

ಗಂಡುಮಕ್ಕಳಿಲ್ಲದ ರಾಮಪ್ಪನವರು ಮನೋವಿಕಲ ಕಿರಿಯ ಮಗಳು ಮತ್ತು ಮಡದಿಯೊಂದಿಗೆ ಮೂಡುಬಾಗಿಲಿನಲ್ಲಿ ವಾಸಿಸುತ್ತಿದ್ದಾರೆ. ಅವರ ಮನೆ ಎದುರಿಗೆ ಪಶ್ಚಿಮ ಘಟ್ಟಗಳ ಶ್ರೇಣಿಯಲ್ಲಿ ಅತ್ಯಂತ ಎತ್ತರದ ಶಿಖರವಾಗಿರುವ ಕುಂದಾದ್ರಿ ಬೆಟ್ಟ ದುತ್ತೆಂದು ಚಾಚಿಕೊಂಡಂತಿದೆ. ಪೂರ್ವದಿಕ್ಕಿನಿಂದ ಬೆಟ್ಟಕ್ಕೆ ಹೋಗುವ ಹಾದಿ ಇಲ್ಲಿಂದ ತೊಡಗುತ್ತದಂತೆ. ಆದ್ದರಿಂದಾಗಿಯೇ ಮೂಡುಬಾಗಿಲೆಂಬ ಹೆಸರು ಊರಿಗೆ ಬಂದಿದ್ದೀತು. ಕುವೆಂಪು ಕೃತಿಗಳನ್ನು ಓದಿಕೊಂಡಿರುವ ರಾಮಪ್ಪನವರು ಸುಂದರ ಪರಿಸರದಲ್ಲಿ ಪ್ರಕೃತಿಯನ್ನು ಆರಾಧಿಸುತ್ತಾ, ಇಳಿ ವಯಸ್ಸಿನಲ್ಲಿ ಗದ್ದೆ ತೋಟಗಳಲ್ಲಿ ಸ್ವತಃ ದುಡಿಯುತ್ತಾ, ಸಭ್ಯ, ಸರಳ, ಸುಸಂಸ್ಕೃತ ಜೀವನ ನಡೆಸಿದ್ದಾರೆ.

–ಡಾ. ಜೆ. ಕೆ. ರಮೇಶ್

(ಜೂನ್, 2014)



ಸರ್ವೋದಯಿ ಸಮಾಜವಾದಿ ಎನ್. ಈಶ್ವರ್



ಎನ್. ಈಶ್ವರ್ ನಿಜ ಅರ್ಥದಲ್ಲಿ ಹುಟ್ಟು ಸಮಾಜವಾದಿ. ಯಾಕೆಂದರೆ ಶಿಕ್ಷಣ, ಓದು ಇವೆಲ್ಲಕ್ಕಿಂತ ಅವರ ವ್ಯಕ್ತಿತ್ವದಲ್ಲೇ ಜಾತಿ-ಅಂತಸ್ತುಗಳನ್ನು ಮೀರಿದ ಮಾನವ ಸಮಾನತೆಯ ತುಡಿತ ಕ್ರಿಯಾಶೀಲವಾಗಿತ್ತು. ಜೊತೆಗೆ ನಿರ್ಭೀತಿ ಅವರ ಸ್ವಭಾವವಾಗಿತ್ತು. ತಂದೆ, ಇ. ಪಿ. ನಂಜಪ್ಪ, ದೊಡ್ಡಪ್ಪ ಶಂಕರಪ್ಪ, ತಾತ ಪುಟ್ಟಮಲ್ಲಯ್ಯ ಇವರೆಲ್ಲ ಕುಟುಂಬದ ವ್ಯಾಪಾರ-ವಹಿವಾಟುಗಳಲ್ಲಿ ಮತ್ತು ಅಂದಿನ ಮೈಸೂರಿನ ಸಾಮಾಜಿಕ, ರಾಜಕೀಯ ವಲಯಗಳಲ್ಲಿ ಒಳ್ಳೆಯ ಹೆಸರು ಗಳಿಸಿದ್ದರು. ತಾತ 1917ರ ಹೊತ್ತಿಗೇ ಅಂದಿನ ಮೈಸೂರು ರಾಜ್ಯದ ಕೈಮಗ್ಗದ ಸಹಕಾರ ಸಂಘ ಸ್ಥಾಪಿಸಿ ಅದರ ಅಧ್ಯಕ್ಷರಾಗಿದ್ದರು. ತಂದೆ 1940ರ ದಶಕದಲ್ಲಿ ಮೈಸೂರು ಪುರಸಭೆಯ ಉಪಾಧ್ಯಕ್ಷರಾಗಿದ್ದರು. ದೊಡ್ಡಪ್ಪ 1952ರ ಮೊದಲ ಚುನಾವಣೆಯಲ್ಲಿ ಎಂ. ಎಸ್. ಗುರುಪಾದ ಸ್ವಾಮಿಯವರ ವಿರುದ್ಧ ಗೆದ್ದು ಆಗಿನ ಮೈಸೂರು ಲೋಕಸಭಾ ಸದಸ್ಯರಾಗಿದ್ದರು. ಈ ಎಲ್ಲಾ ಹಿನ್ನೆಲೆಯು ಎನ್. ಈಶ್ವರ್‌ರಲ್ಲಿ ಅಹಂಕಾರಕ್ಕೆ ಬದಲಾಗಿ ಶೋಷಣೆಗಳ ವಿರುದ್ಧ ಪ್ರತಿಭಟಿಸುವ ವ್ಯಕ್ತಿತ್ವ ರೂಪಿಸಿತ್ತು. ಜಾತಿಯೊಳಗಿದ್ದೂ ಜಾತ್ಯತೀತವಾಗಿದ್ದರು. ನಾಯಕನಾಗುವ ಅವಕಾಶಗಳಿದ್ದರೂ ಅವರಲ್ಲಿನ ಹಿಂಜರಿಕೆಯ ಗುಣ ಅವರನ್ನು ಕಾರ್ಯಕರ್ತನನ್ನಾಗಿ ಬಾಳಿಸಿತು. ಅವರು ಸಮೂಹದಲ್ಲಿ ಒಬ್ಬರಾಗಿದ್ದುದೇ ಹೆಚ್ಚು.

ಓದು ಈಶ್ವರ್‌ಗೆ ಒಂದು ಸಹಜ ಗುಣವಾಗಿತ್ತು. ಅವರು ಜನಸಮೂಹಕ್ಕೆ ಅನುಕೂಲವಾಗುವಂತಹ ಕಡಿಮೆ ವೆಚ್ಚದ ತಾಂತ್ರಿಕತೆಗಳ ಬಗೆಗೆ ಯೋಚಿಸುತ್ತಿದ್ದರು. 1965ರಲ್ಲೇ ಇಂಗ್ಲೆಂಡಿಗೆ ಹೋಗಿ ಜವಳಿ ಉದ್ಯಮದ ಉತ್ಪಾದನೆ, ಯಾಂತ್ರಿಕತೆ ಮಾರುಕಟ್ಟೆಗಳ ಬಗೆಗೆ ತಿಳಿದುಬಂದಿದ್ದರು. ಕುಟುಂಬದೊಳಗಿನ ಬದಲಾವಣೆಗಳು ಅವರನ್ನು ಜವಳಿ ಉದ್ಯಮದಲ್ಲಿ ಮುಂದುವರಿಯಲು ಬಿಡಲಿಲ್ಲ. ಈ ಹಂತದಲ್ಲಿ ಸಹಜವಾಗಿಯೇ ಸರ್ವೋದಯ ಮತ್ತು ಸಮಾಜವಾದಿ ಚಳುವಳಿಗಳು ಅವರನ್ನು ಸೆಳೆದವು. ಲೋಹಿಯಾರ ಒಡನಾಡಿಯಾಗಿದ್ದ ಈಶ್ವರ್‌ಗೆ ಗೋಪಾಲಗೌಡರ ಬಗೆಗೆ ತುಂಬು ಅಭಿಮಾನ. 1965ರ ನಂತರ ಮೈಸೂರು ಕೇಂದ್ರವಾಗಿ ಇದೇ ಕರ್ನಾಟಕಕ್ಕೆ ದಿಕ್ಸೂಚಿಯಾದ ಎಲ್ಲ ಚಳವಳಿ, ಹೋರಾಟಗಳಲ್ಲಿ ಎನ್. ಈಶ್ವರ್ ಭಾಗವಹಿಸಿದ್ದರು. ಅವರು ಈ ಎಲ್ಲ ಚಳವಳಿಗಳು ರೈತರ, ಜನಸಾಮಾನ್ಯರ ಬದುಕಿಗೆ ನೆಮ್ಮದಿಯ ನಾಳೆಗಳನ್ನು ತರಬಹುದೆಂಬ ನಂಬಿಕೆಯಲ್ಲಿದ್ದರು. ಆಳುವ ಸರ್ಕಾರದ ನೀತಿಯಿಂದ ಬೆಲೆ ಏರಿಕೆ, ರೈತರ ಬದುಕಿನ ಬದಲಾಗದ ಕಷ್ಟನಷ್ಟ, ಇವುಗಳ ನಡುವೆ ಶೋಷಣೆಯೇ ಮೂಲವಾದ ವ್ಯಾಪಾರಿಗಳು, ಇವರ ಬಗೆಗೆ ಆಕ್ರೋಶದಿಂದ ಮಾತಾಡುತ್ತಿದ್ದರು. ಈ ಅನ್ಯಾಯಗಳ ವಿರುದ್ಧ ಯುವ

ಸಮೂಹವನ್ನು ನಿರಂತರವಾಗಿ ಎಚ್ಚರಿಸುವ, ಅರಿವು ಕೊಡುವ ಕಾರ್ಯಕ್ರಮಗಳು ಆಗುವ ಕಡೆ ಸದಾ ಹಾಜರಿರುತ್ತಿದ್ದ ಅವರು ತಾವು ಬದುಕಿರುವವರೆಗೂ ಮೈಸೂರಿನ ಸಾಮಾಜಿಕ ಪ್ರಜ್ಞೆಯ ಕ್ರಿಯಾಶೀಲ ಚೇತನವಾಗಿದ್ದರು.

ಈಶ್ವರ್ ತುರ್ತುಪರಿಸ್ಥಿತಿ ಮತ್ತು ಅಖಿಲ ಭಾರತ ರೈಲ್ವೆ ಮುಷ್ಕರದ ಸಂದರ್ಭಗಳಲ್ಲಿ ಸೆರೆಮನೆವಾಸ ಅನುಭವಿಸಿದ್ದರು. ಸರ್ವೋದಯ ಚಳುವಳಿಯ ಭಾಗವಾಗಿ ಗುಜರಾತ್ ರಾಜ್ಯದಲ್ಲಿ ನಡೆದ ಪಾದಯಾತ್ರೆಯಲ್ಲಿ ಭಾಗವಹಿಸಿ, ಮಹಾರಾಷ್ಟ್ರದ ವಾರ್ಧಾ ಸೇವಾಗ್ರಾಮಕ್ಕೂ ಹೋಗಿ ಕೆಲವು ದಿನವಿದ್ದರು.

ಸಮಾಜವಾದಿ ಪಕ್ಷದಲ್ಲಿ ಗುರುತಿಸಿಕೊಂಡಿದ್ದ ಈಶ್ವರ್, ಕೆಲಕಾಲ ಪಕ್ಷದ ಮೈಸೂರು ನಗರ ಘಟಕದ ಅಧ್ಯಕ್ಷರಾಗಿಯೂ ಇದ್ದರು. 1977ರಲ್ಲಿ ಜೆ.ಪಿ. ಚಳವಳಿಯ ಕಾಲದಲ್ಲಿ 'ಜನತಾ' ಪಕ್ಷದ ಮೈಸೂರು ನಗರದ ಉಪಾಧ್ಯಕ್ಷರಾಗಿದ್ದರು. ಆನಂತರ ಮೈಸೂರಿನ ಗೆಳೆಯರೊಂದಿಗೆ, 'ಪಕ್ಷಾಂತರ ವಿರೋಧಿ ಸಂಘ'ವನ್ನು ಕಟ್ಟಿದರು. ದಿವಂಗತ ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪರ 'ಕ್ರಾಂತಿರಂಗ ಪಕ್ಷ'ವನ್ನು ಸಂಘಟಿಸಿಲು ಮೈಸೂರಿನ ಟೌನ್‌ಹಾಲ್‌ನಲ್ಲಿ ಸಭೆ ಕರೆದಾಗ ಅದರ ಅಧ್ಯಕ್ಷತೆ ವಹಿಸಿದ್ದರು. ಅದು ಮುಂದೆ ತಳೆದ ರೂಪಗಳಿಂದ ಬೇಸತ್ತು ಅದರಿಂದ ದೂರ ಸರಿದರು. 1983ರಲ್ಲಿ ಮೈಸೂರಿನ ಚಾಮರಾಜ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದರು. ಸಂಬಳ ಹೆಚ್ಚು ಮಾಡಬೇಕೆಂದು ಮುಷ್ಕರ ಹೂಡುವ ಸರ್ಕಾರಿ ನೌಕರರ ಧೋರಣೆಯನ್ನು ಸಕಾರಣವಾಗಿ ಜನಸಾಮಾನ್ಯರ ಬದುಕಿನೊಡನೆ ಹೋಲಿಸಿ ಉಗ್ರವಾಗಿ ಖಂಡಿಸುತ್ತಿದ್ದರು. ಸಾರ್ವಜನಿಕ ರಂಗದ ಸಾರಿಗೆ, ಉದ್ಯಮಗಳು ಭ್ರಷ್ಟತೆಯ ಕಾರಣದಿಂದ ಯಶಸ್ವಿಯಾಗದಿರುವುದು ಈಶ್ವರ್‌ರಲ್ಲಿ ಅಸಹನೆ, ಕ್ರೋಧಗಳನ್ನು ಹುಟ್ಟಿಸುತ್ತಿತ್ತು.

ಆಯಾ ಪ್ರಾದೇಶಿಕ ಬದುಕಿನ ವಿವರಗಳ ಅರಿವಿಲ್ಲದ ಸರ್ಕಾರದ ಅಧಿಕಾರಿಗಳ, ಅದರಲ್ಲೂ ಐ.ಎ.ಎಸ್. ಅಧಿಕಾರಿಗಳ ದರ್ಪವನ್ನು ಮತ್ತು ಅಂತಹ ಅಧಿಕಾರಿಗಳ ಕೈಗೊಂಬೆಗಳಾಗಿರುವ ನಮ್ಮ ಮಂತ್ರಿಗಳ ತಿಳುವಳಿಕೆ, ಸೋಮಾರಿತನಗಳನ್ನು ಈಶ್ವರ್ ಖಂಡಿಸುತ್ತಿದ್ದರು. ಬಜೆಟ್ ಮಂಡನೆ ಸಂದರ್ಭಗಳಲ್ಲಿ ರೂಪಾಯಿ ಬೊಕ್ಕಸಕ್ಕೆ ಬರುವುದನ್ನು, ಖರ್ಚಾಗುವ ರೀತಿಯನ್ನು ಕೂಲಂಕುಶವಾಗಿ ಗಮನಿಸಿ ಸಮಾಜವಾದಿ ಗೆಳೆಯರೊಂದಿಗೆ ಚರ್ಚಿಸುತ್ತಿದ್ದರು. ಈಶ್ವರ್ ಯಾವುದೇ ವಸ್ತು, ಉತ್ಪನ್ನಗಳ ಬೆಲೆಗಳನ್ನು, ಉತ್ಪಾದನಾ ವೆಚ್ಚ, ರೂಪಾಂತರ, ಮೌಲ್ಯವರ್ಧನೆ ಇವುಗಳನ್ನು ಲೆಕ್ಕ ಹಾಕಿ ಬೆಲೆ ಹೆಚ್ಚಾಗಲು ವ್ಯಾಪಾರಿಗಳು-ರಾಜಕಾರಣಿಗಳ ಅನೈತಿಕ ಸಂಬಂಧ ಹೇಗೆ ಕಾರಣವೆಂದು ವಿವರಿಸುತ್ತಿದ್ದರು. ರಾಜಕೀಯ ಇಂಗ್ಲೆಂಡಿನಲ್ಲಿ ಸೋಲು-ಗೆಲುವಿನ ಆಟದಂತಿದ್ದರೆ, ನಮ್ಮಲ್ಲಿ ಅಳಿವು-ಉಳಿವಿನ ಪ್ರಶ್ನೆಯಂತೆ ಆಗಿರುವುದನ್ನು ಬಹಳ ವಿಷಾದದಿಂದ ಹೇಳುತ್ತಿದ್ದರು ಈಶ್ವರ್.

ಬದುಕಿನಲ್ಲಿ ಲೆಕ್ಕಾಚಾರಕ್ಕೆ ಈಶ್ವರ್ ಮಹತ್ವ ಕೊಡುತ್ತಿದ್ದರು. ಆದರೆ ಜಿಪುಣತನವನ್ನು ಅಮಾನವೀಯ ನಡತೆಯೆಂದು ಖಂಡಿಸುತ್ತಿದ್ದರು. ಬ್ಲೀಚ್ ಮಾಡದ ಬಟ್ಟೆಯಲ್ಲಿ ಹೊಲಿಸಿದ, ನೀಲಿ ಹಾಕಿದ ಜುಬ್ಬಾ ಮತ್ತು ಅಂತಹುದೇ ಬಟ್ಟೆಯ ಪಂಚೆ ಇವು ಈಶ್ವರ್‌ರ ಉಡುಪು. ಮಸಕಾಯಿ ಸಾರು, ಗಸಗಸೆ


ಪಾಯಸ, ಮನೆಯಲ್ಲಿ ಮಾತ್ರ ಮಾಡಿದ ಕಾಫಿ ಇವು ಈಶ್ವರ್‌ಗೆ ಇಷ್ಟದ ಊಟ-ತಿಂಡಿ-ಪಾನೀಯಗಳು. ಪಾಲಿಶ್ ಮಾಡದಿರುವ ಅಕ್ಕಿಯನ್ನು ಬಳಸುವಂತೆ ಹೇಳುತ್ತಿದ್ದ ಈಶ್ವರ್ ಸ್ವಮೂತ್ರ ಪಾನ ಚಿಕಿತ್ಸೆಯನ್ನು ಆರೋಗ್ಯದ ದೃಷ್ಟಿಯಿಂದ ಆಗಾಗ ಆಚರಿಸುತ್ತಿದ್ದರು. ಈಶ್ವರ್‌ಗೆ ಬಹುದೊಡ್ಡ ಕನಸಿದ್ದುದು 'ಹಣರಹಿತ ಅರ್ಥ ವ್ಯವಸ್ಥೆ'ಯನ್ನು, ಅಂದರೆ ವಸ್ತು-ವಿನಿಮಯ ಪದ್ಧತಿಯನ್ನು-ನನಸು ಮಾಡುದ ಬಗೆಗೆ.

ಮೈಸೂರು ನಗರದ ಮಾಲಿನ್ಯಕ್ಕೆ ಬೆದರಿ, ಬೇಸರಪಟ್ಟುಕೊಂಡು ಶ್ರೀರಂಗಪಟ್ಟಣದ ಮಹದೇವಪುರದಲ್ಲಿ ಅವರು ಸಾಯುವ ಮುನ್ನ ಮೂರು ವರ್ಷ ವಾಸವಾಗಿದ್ದರು. ಕೆ.ಎಸ್. ನರಸಿಂಹಸ್ವಾಮಿ ಅವರ ಮೈಸೂರು ಮಲ್ಲಿಗೆಯ ಕವನಗಳನ್ನು ಹೋಲುವ ಕೆಲವು ರಚನೆಗಳನ್ನು ಈಶ್ವರ್ ಬರೆಯುತ್ತಿದ್ದರು. 1999ರಲ್ಲಿ ಅವರು ಕೊನೆಯುಸಿರೆಳೆದರು. ಸದಾ ನಡೆದುಕೊಂಡೇ ಸಂಚರಿಸುತ್ತಿದ್ದ ಈಶ್ವರ್ ಕೊಂಚ ಆರೋಗ್ಯದ ಬಗೆಗೆ ಕಾಳಜಿವಹಿಸಿದ್ದರೆ ಕನಿಷ್ಟ ಇನ್ನೂ ಹತ್ತುವರ್ಷ ಬದುಕುತ್ತಿದ್ದರು.

-ಉಗ್ರನರಸಿಂಹೇಗೌಡ

(ಜೂನ್, 2013)

ಹೋರಾಟವನ್ನೇ ಬದುಕಾಗಿಸಿಕೊಂಡ ವೀರಣ್ಣ ತಿಮ್ಮಾಜಿ



ದಿ. ವೀರಣ್ಣ ತಿಮ್ಮಾಜಿಯವರನ್ನು ಬಹುಶಃ ನಾನು ಮೊದಲ ಬಾರಿಗೆ ಕಂಡದ್ದು 1978ರಲ್ಲಿ ಎಂದು ಕಾಣುತ್ತದೆ. ಹೈದರಾಬಾದ್‌ನ ಲೋಹಿಯಾ ವಿಚಾರ್ ಮಂಚ್‌ನ ಸಮಾವೇಶದಲ್ಲಿ. ಜವಾರಿ ವ್ಯಕ್ತಿತ್ವದ ತಿಮ್ಮಾಜಿ ಮೊದಲ ನೋಟದಲ್ಲೇ ಅಂದು ನನ್ನನ್ನು ಸೆಳೆದಿದ್ದರು. ಅವರ ಧ್ವನಿಪೂರ್ಣ ಶೀರ್ಷಿಕೆಯ ಕಿರುಪುಸ್ತಕ 'ಕೊನೆಯ ಹೋರಾಟ'ವನ್ನು ನಾನು ಓದಿದ್ದೆ. ಅದನ್ನು ಸಾರಾಂಶೀಕರಿಸಿ ನಾನು ಸಂಪಾದಿಸಿರುವ 'ಲೋಹಿಯಾ: ವ್ಯಕ್ತಿ–ವಿಚಾರ ವಿಮರ್ಶೆ' ಸಂಪುಟದ ಮೊದಲ ಆವೃತ್ತಿಯಲ್ಲೇ(1977) ಪ್ರಕಟಿಸಿದ್ದೆ. ಲೋಹಿಯಾ ಮರಣಶಯ್ಯೆಯಲ್ಲಿದ್ದಾಗ ಅವರ ಹಲವು ಅಭಿಮಾನಿಗಳಂತೆ ತಿಮ್ಮಾಜಿಯೂ ದೆಹಲಿಗೆ ಧಾವಿಸಿ ಅವರು ಕೊನೆಯುಸಿರೆಳೆಯುವವರೆಗೂ ಅಲ್ಲೇ ವಾಸ್ತವ್ಯ ಹೂಡಿ ಅವರ ಆರೋಗ್ಯದ ಬಗ್ಗೆ ಪ್ರತಿ ಕ್ಷಣ ನಿಗಾ ಇಟ್ಟಿದ್ದಾಗ ಕಂಡ ದೃಶ್ಯಗಳು ಮತ್ತು ತಮ್ಮ ಎದೆಯಾಳಗಳಿಂದ ಉಕ್ಕಿ ಬಂದ ಭಾವನೆಗಳ ಜೀವಂತ ನಿರೂಪಣೆಯನ್ನೊಳಗೊಂಡ ಈ ಕಿರುಪುಸ್ತಕ, ಲೋಹಿಯಾ–ತಿಮ್ಮಾಜಿ ಎಂಬ 'ಎತ್ತಣ ಮಾಮರ, ಎತ್ತಣ ಕೋಗಿಲೆ!' ಎಂಬಂತಹ ವಿಚಿತ್ರ ಗುರು–ಶಿಷ್ಯ ಸಂಬಂಧವನ್ನು ಓದಿದವರ ಕಣ್ಣು ಒದ್ದೆಯಾಗುವಷ್ಟು ಆರ್ದ್ರವಾಗಿ ಮತ್ತು ಆರ್ತವಾಗಿ ಚಿತ್ರಿಸುತ್ತದೆ.

ರಾಜ್ಯದಲ್ಲಿ ಸಮಾಜವಾದಿ ಆಂದೋಲನ ಅವನತಿಗೊಳ್ಳಲು ಮುಖ್ಯ ಕಾರಣ, ದೊಡ್ಡ ನಾಯಕರ ವಿಜೃಂಭಣೆಯಲ್ಲಿ ತಿಮ್ಮಾಜಿಯವರಂತಹ ನೆಲಮೂಲ ಹೋರಾಟಗರರಿಗೆ ಮಾನ್ಯತೆ ಸಿಗದೇ ಹೋದುದೇ ಎಂದು ಹಲವು ಬಾರಿ ನನಗನ್ನಿಸಿದೆ. ಇವರ ಬಗ್ಗೆ ಒಂದು ಪುಟ ಬರೆಸಲು ಅವರ ಕಾರ್ಯಕ್ಷೇತ್ರವಾಗಿದ್ದ ಗುಲ್ಬರ್ಗ ಮತ್ತು ಸುತ್ತಮುತ್ತಲಿನ ಹಲವು ಮಾಜಿ ಸಮಾಜವಾದಿಗಳನ್ನೂ, ಚಿಂತಕರನ್ನೂ ವಿಚಾರಿಸಿ ನೋಡಿದೆ. ಯಾರಿಗೂ ಬಿಡುವಿಲ್ಲ ಅಥವಾ ಯಾರೂ ತಯಾರಿಲ್ಲ. ಕೊನೆಗೆ ಅವರ ಛಾಯಾಚಿತ್ರಕ್ಕಾಗಿ ಪರಿ ಪರಿಯ ಪ್ರಯತ್ನಪಟ್ಟೆ. ಅವರ ಬಗ್ಗೆ ವಿಚಾರ ಗೋಷ್ಠಿ ಮಾಡಿದೆವೆಂದು ಹೇಳಿಕೊಂಡವರ ಹಿಂದೆ ಬಿದ್ದೆ. ಇಲ್ಲವೆಂದರು. ಕೊನೆಗೆ ನೆನಪಾಯಿತು, 1990ರಲ್ಲಿ ನಾವು ಕೆಲವು ಗೆಳೆಯರು ಹಾಸನದಲ್ಲಿ ಆಯೋಜಿಸಿದ್ದ ಸಮಾಜವಾದಿ ಅಧ್ಯಯನ ಶಿಬಿರಕ್ಕೆ ಅವರು ಬಂದಿದ್ದರೆಂದು. ನನ್ನ ಮನೆಯಲ್ಲಿದ್ದ ಎಲ್ಲ ಚಿತ್ರ ಸಂಪುಟಗಳನ್ನು ಜಾಲಾಡಿದಾಗ ಸಿಕ್ಕಿದ ಒಂದು ಗುಂಪು ಚಿತ್ರದಲ್ಲಿನ ತಿಮ್ಮಾಜಿಯವರ ಮುಖ ಭಾಗವನ್ನು ಕತ್ತರಿಸಿ ಇಲ್ಲಿ ಮುದ್ರಿಸಲಾಗಿದೆ. ತಿಮ್ಮಾಜಿಯವರನ್ನು ಕುರಿತ ಈ ಕೆಳಗಿನ ಬರಹ ರಂಗಕರ್ಮಿ ಮತ್ತು ಅಂಕಣಕಾರ ಗೆಳೆಯ ಮಲ್ಲಿಕಾರ್ಜುನ ಕಡಕೋಳ ಅವರ 'ಫಲ್ಗುಣಿಯಲಿ ಕೇಳಿ ಬಂದ ರುದ್ರವೀಣೆ' ಎಂಬ ಅಂಕಣ ಬರಹಗಳ ಸಂಗ್ರಹದಿಂದ ಆಯ್ದದ್ದು. ಈ ಬರಹ ಸುಮಾರು ಒಂದೂವರೆ ದಶಕದಷ್ಟು

ಹಿಂದಿನದು;ಆದರೂ ಇನ್ನೂ ಜೀವಂತವಾಗಿದೆ, ತಿಮ್ಮಾಜಿಯವರ ನೆನಪಿನಂತೆಯೇ.

–ಡಿಎಸ್ಸೆನ್

ಉಸಿರಾಡಲು ಇಂಬು ಸಿಗದ ಇಕ್ಕಟ್ಟು ಗಲ್ಲಿಗಳು, ನಿಜಾಮನ ಪಳೆಯುಳಿಕೆಯಂತಿರುವ ದೈತ್ಯಾಕಾರದ ಹಾಳು ಕಮಾನು ಗೋಡೆಗಳು. ಎಡವಿ ಬಿದ್ದರೆ ಖ್ವಾಜಾ ಬಂದೇ ನವಾಜ ದರ್ಗಾ. ನಮಾಜು ಮುಗಿಸಿಕೊಂಡು ಹಿಂಡು ಹಿಂಡಾಗಿ ಬರುತ್ತಿರುವ ಮುಸ್ಲಿಂ ಬಂಧುಗಳು. ಹಾಗೇ ಸಾಗಿದೆವು. ಅಪ್ಪಿತಪ್ಪಿಯೂ ಕನ್ನಡ ಮಾತನಾಡದ 'ಲಾಖೋಂಮೆ ಏಕ್' ಎನ್ನುವಂತೆ 'ಕನ್‌ನಡ' ಮಾತಿನ ಸ್ವರ ಕೇಳಿದರೆ ಅದೇ ಸೋಜಿಗ. ತಾಜುಬಾ! ಅಂಕುಡೊಂಕಾದ ಏಳೆಂಟು ತಿರುವು ದಾಟಿದೆವು. ಅದು ಕಲಬುರ್ಗಿ ಶಹರವೆಂಬ ಶರೀರದ ಮುಖ್ಯ ಅಂಗ 'ಖುರ್ದ್ ರೋಜ಼ಾ'. ಅಲ್ಲಿರುವುದೇ ವೀರಣ್ಣ ತಿಮ್ಮಾಜಿಯವರ ಪುಟ್ಟ ಮನೆ. ಅದು ಮನೆ ಅಲ್ಲ. ಸಮಾಜವಾದಿ ಆಂದೋಲನದ ಸ್ಮಾರಕ. ಡಾ. ರಾಮಮನೋಹರ ಲೋಹಿಯಾ ಒಂದಲ್ಲ ಹತ್ತಾರು ಬಾರಿ ವಸ್ತಿ ಮಾಡಿದ ಮನೆ ಅದು. ಶಾಂತವೇರಿ ವಾರಗಟ್ಲೇ ವಾಸ್ತವ್ಯ ಹೂಡಿದ ಮನೆ ಅದು.

ಮೇಲೆತ್ತರ ನಿಲುವಿನ ಔಡಲ ಗಿಡದಂತಹ ಶರೀರ. ಅದಕ್ಕೊಂದು ಶುಭ್ರ ಬಿಳುಪಿನ ಧೋತರ, ಬಕ್ಕಣವಿರುವ ಒಳಾಂಗಿ ತೊಟ್ಟ ಸರ್ವಸಾಧಾರಣ ಹಿರಿ ಗಡಿಯೊಬ್ಬ ಪರಿಚಿತನಂತೆ 'ನಮಸ್ಕಾರ ಬರ್‍ರಿ ಬರ್‍ರೀ' ಅಂತ ನಮ್ಮನ್ನು ಬರಮಾಡಿಕೊಂಡ. ನೆಲಗೋಡೆ ಸಮೇತ ಶಾಬಾದಿಯ ಸೇದಿಕಲ್ಲು ತುರುಕಿದ ವಾರೀ ಚಪ್ಪರದ ಪುರಾತನ ಜಮಾನಾದ ಮನೆಯೊಂದರೊಳಗೆ ಕರಕೊಂಡು ಹೋಗಿ ತಾವೇ ಚಾಪೆ ಹಾಕಿ ಆ ಮುದುಕ ನಮ್ಮನ್ನು ಕೂಡಿಸಿದರು. ವೀರಣ್ಣ ತಿಮ್ಮಾಜಿಯವರು ಎಲ್ಲಿ? ನಾನು ಕೇಳಿದೆ. 'ನಾನೇ' ಅಂದಿತು ಹಿರಿಯ ಚೇತನ! ಹೌದು, ಇವರೇ ತಿಮ್ಮಾಜಿ ಎಂದು ಗೆಳೆಯ ಬಸವರಾಜ ಸಗರ ಸಾಕ್ಷಿ ನುಡಿದರು. ಒಂದು ಘಳಿಗೆ ತೋಚದೇ ಬವಳಿ ಬಂದವನಂತೆ ಕುಂತೆ.

ಪಾಕಿಸ್ತಾನದಂತೆ ಭಾಸವಾಗಿರುವ ವಾತಾವರಣದ ನಡುವೆ ಇದ್ದೀರಲ್ಲ, ನಿಮಗೇನೂ ಅನಿಸಿಲ್ಲವೇ? ನನ್ನ ಮೊದಲ ಪ್ರಶ್ನೆ ಹೊರಡುತ್ತಿದ್ದಂತೆ ತಿಮ್ಮಾಜಿ ಹೃದಯಪೂರ್ವಕ ನಕ್ಕು, 'ಇದೇ ಮನೆಯಲ್ಲಿ ನಾನು ಹುಟ್ಟಿ ಬೆಳೆದು ಎಂಭತ್ತೇಳು ವರ್ಷ(ಹುಟ್ಟಿದ್ದು: 23.10.1910)ಗಳಾದವು. ಅದಕ್ಕೂ ಮುಂಚೆ ನನ್ನಪ್ಪ, ತಾತ, ಮುತ್ತಾತರು ಇಲ್ಲೇ ಹುಟ್ಟಿ ಬಾಳಿದರು. ನಾನಿಲ್ಲಿ ತಿಮ್ಮಾಜಿ ನಾನಾ, ಬಡೇ ಬಯ್ಯಾ, ಮಾಮು ಆಗಿ ಎಲ್ಲರ ಹೃದಯ ಗೆದ್ದಿದ್ದೇನೆ. ಅವರೂ ನನ್ನ ಹೃದಯ ಗೆದ್ದಿದ್ದಾರೆ. ನಮಗೆಂದೂ ಜಾತಿ ಮತ ಕಾಡಿಲ್ಲ. ಅಪ್ಪಟ ಲೋಹಿಯಾವಾದಿಯಾಗಿ ಬಾಳಿರುವ, ಡಾ. ರಾಮಮನೋಹರ ಲೋಹಿಯಾ ಹಾಗೂ ಶಾಂತವೇರಿಯವರ ಒಡನಾಡಿ, ಹಿರಿಯ ಸಮಾಜವಾದಿ ವೀರಣ್ಣ ತಿಮ್ಮಾಜಿ ಇರುವುದನ್ನೇ ಹೇಳಿದರು. ಹೇಳಿದಂತೆಯೇ ಇರುವವರು.

ಎಂಬತ್ತೇಳು ಸಂವತ್ಸರಗಳಿಂದ ಅಸಮಾನತೆಯ, ಶೋಷಣೆ ವಿರುದ್ಧವೇ ಹೋರಾಡುತ್ತಾ ಬಂದಿರುವ ಈ ಮುಪ್ಪಿನ ಕೂಗಿಗೆ ಮುಪ್ಪಿಲ್ಲ. ಪ್ರತಿಭಟನೆಯ

ಕಿಚ್ಚು ತಪ್ಪಿಲ್ಲ. ಅಂದು ಬ್ರಿಟಿಷರು ಮತ್ತು ನಿಝಾಮನ ವಿರುದ್ಧ ಇಂದು ನವ ವಸಾಹತುಶಾಹಿಗಳಾದ ನಮ್ಮವರ ವಿರುದ್ಧ ಅವರ ಚಳುವಳಿ. ಅಂದು ಯುವಕ ತಿಮ್ಮಾಜಿ ಧನಶೆಟ್ಟಿ ಕಾಕ, ಬನ್ಸಿಲಾಲ ಸಾರಡಾ, ಜಗನ್ನಥ ಸಿಂಧೆ, ಖುರ್ಬಾನ ಹುಸೇನ ಮೊದಲಾದ ಹಿರಿಯ ಸ್ವಾತಂತ್ರ್ಯ ಸೇನಾನಿಗಳೊಂದಿಗೆ ಸೊಲ್ಲಾಪುರದಲ್ಲಿ ಭೂಗತರಾಗಿದ್ದರು. ಆ ಹಿರಿಯ ಸೇನಾನಿಗಳು ಮೂರಾಣೆ ಗಾಂಧಿ ಟೊಪ್ಪಿಗೆ ಹಾಕಿಕೊಂಡು ಸೇಂದಿ ಬನ ಕಡಿದದ್ದಕ್ಕೆ ಫಾಂಸಿಗೆ ಬಲಿಯಾದರು.

ಈ ಹಿರಿಯರ ಗಲ್ಲು ಶಿಕ್ಷೆ ಪರಿಣಾಮ ಯುವಕ ತಿಮ್ಮಾಜಿಯ ಕರುಳು ಕಲಕಿತು. ನೆತ್ತರು ಕುದಿಯಿತು. ದೇಶದಲ್ಲಿನ ವಿದ್ಯಮಾನ ಅರಿಯಲು ಓದು ಬರಹ ಕಲಿಯತೊಡಗಿದರು. ಓದಿದ್ದು ಕೇವಲ ಎರಡನೇ ಈಯತ್ತೆ... ಬಹು ವರ್ಷಗಳ ತರುವಾಯ ಭಿನ್ನ ಈಯತ್ತೆ ಕನ್ನಡ ಕಲಿತರು. ಓಂಕಾರ ಶರದ ಅವರು ಹಿಂದಿಯಲ್ಲಿ ಪ್ರಕಟಿಸಿರುವ ಲೋಹಿಯಾ ಜೀವನ ಚರಿತ್ರೆಯನ್ನು ತಿಮ್ಮಾಜಿ ತಮ್ಮದೇ ಆದ ಸಮರ್ಥ ಕನ್ನಡದಲ್ಲಿ ಅರ್ಧ ಸಾವಿರ ಪುಟದಷ್ಟು ಸಿದ್ಧಗೊಳಿಸಿದ್ದಾರೆ. ಪ್ರಕಾಶಕರಿಗಾಗಿ ಈ ಜೀವ ಚಾತಕ ಪಕ್ಷಿಯಂತೆ ಕಾಯುತ್ತಿದೆ.

ಸೊಲ್ಲಾಪುರದಿಂದ ಮರಳಿ ಬರುವಷ್ಟರಲ್ಲಿ ಇತ್ತ ಕಲಬುರ್ಗಿಯ ಮನೆಯನ್ನು ಪಠಾಣರು ಕಬ್ಜಾ ಮಾಡಿಕೊಂಡಿದ್ದರು. ಒಂದು ಪುಟ್ಟ ಸೈಕಲ್ ಅಂಗಡಿ, ಪಾನ್ ಬೀಡಾ ಅಂಗಡಿ ಇಟ್ಟು ಹೊಸ ಜಿಂದಗಾನ ಶುರು ಮಾಡಿದರು. ಆರ್ಯ ಸಮಾಜದ ಸಂಪರ್ಕ, ಬಡಿಗೆ ತಲವಾರ ಹತ್ಯಾರ ಹಿಡಿದು ಹೋರಾಟ ಮಾಡುವ ಸ್ಥಿತಿ. 1942ರ ಚಳುವಳಿಯಲ್ಲಿ ಬಾಂಬ್ ತಯಾರಿಸುವ ಕೆಲಸಕ್ಕೂ ಕೈಹಾಕಬೇಕಾಯ್ತು. ತದ ನಂತರ ಲೋಹಿಯಾ ಸಾಂಗತ್ಯ. 1954ರ ಸುಮಾರಿಗೆ ಪ್ರಜಾ ಸಮಾಜವಾದಿ ಪಕ್ಷದಿಂದ ಸಿಡಿದು ಬಂದ ಲೋಹಿಯಾ ನೇತೃತ್ವದಲ್ಲಿ ಹೈದ್ರಾಬಾದ್‌ನಲ್ಲಿ ಸಮಾಜವಾದಿ ಪಕ್ಷದ ಸ್ಥಾಪನಾ ಸಮ್ಮೇಳನದಲ್ಲಿ ಸಕ್ರಿಯ ಭಾಗಿ. ಆ ನಂತರ ಮದ್ರಾಸ್ ನಲ್ಲಿ ಒಂದು ತಿಂಗಳ ಕಾಲ ಡಾ. ಲೋಹಿಯಾರ ಜೊತೆ ಅಧ್ಯಯನ ಶಿಬಿರ.

ನಂತರ ಕರ್ನಾಟಕದ ತುಂಬೆಲ್ಲ ಓಡಾಟ. ಲೋಹಿಯಾ ಭಾಷಣವನ್ನು ಕನ್ನಡಕ್ಕೆ ಭಾಷಾಂತರಿಸುವ ಅವಕಾಶ ಹತ್ತಾರು ಕಡೆ. ಜೊತೆಗೆ ಗುಲಬರ್ಗಾ ಜಿಲ್ಲಾ ಸೋಷಲಿಸ್ಟ್ ಪಾರ್ಟಿ ಪೂರ್ಣ ಹೊಣೆ. ಅಂದು ವೀರೇಂದ್ರ ಪಾಟೀಲ್ ವಿರುದ್ಧ ಸ್ಪರ್ಧೆ. ಆಗ ಇವರನ್ನು ಲೋಹಿಯಾ 'ಹಿಮ್ಮತ್ ವಾಲಾ ತಿಮ್ಮಾಜಿ' ಎಂದು ಕರೆದರು. ಲೋಹಿಯಾ ಸಂಪಾದಿಸುತ್ತಿದ್ದ 'ಚೌಕಾಂಬಾ' ಪತ್ರಿಕೆಯ 150 ಪ್ರತಿಗಳನ್ನು ಅಂದು ತಿಮ್ಮಾಜಿ ಕಲಬುರ್ಗಿಯಲ್ಲಿ ಮಾರಾಟ ಮಾಡುತ್ತಿದ್ದರು. ಅವರು ಅದೇ ಪತ್ರಿಕೆಯ ಬಾತ್ಮೀದಾರ ಕೂಡ. ಮಿಲಾಪ್, ನವಯುಗ, ಲೋಕಸತ್ತಾ, ಪ್ರಭಾತ್ ಮುಂತಾದ ಹಿಂದಿ, ಮರಾಠಿ ಪತ್ರಿಕೆಗಳಿಗೆ ಸುದ್ದಿ ಬರೆದು ತಿಂಗಳಿಗೆ 50 ರೂಪಾಯಿ ಸಂಪಾದನೆ ಮಾಡುತ್ತಿದ್ದ ಅವರು. ಅಖಿಲ ಭಾರತ ಸೋಷಲಿಸ್ಟ್ ಪಕ್ಷದ ವರ್ಕಿಂಗ್ ಕಮಿಟಿ ಸದಸ್ಯರೂ ಆಗಿದ್ದರು.

ಮೂರು ಬಾರಿ ಎಂ.ಪಿ. ಮತ್ತು ಆರು ಬಾರಿ ಎಂ.ಎಲ್.ಎ. ಚುನಾವಣೆಗೆ ನಿಂತು ಸೋತರು. ಊರೂರು ತಿರುಗಿ ಜನರ ಬಿಡುವಿನ ವೇಳೆಯಲ್ಲಿ ಸಮಾಜವಾದಿ

ಚಳುವಳಿ ಕುರಿತು ತಿಳಿ ಹೇಳುವುದು. ಆ ಊರಲ್ಲಿ ಯಾರಾದರೂ ಕರೆದರೆ ಅವರ ಮನೆಯಲ್ಲಿ ಉಂಡು ದೇವಸ್ಥಾನದ ಕಟ್ಟೆಯ ಮೇಲೆ ಮಲಗಿ ಮುಂದಿನ ಊರಿಗೆ ಕಾಲ್ನಡಿಗೆ ಪಯಣ. ಇದು ಅವರ ಚುನಾವಣಾ ಪ್ರಚಾರ ವೈಖರಿ. ಹೇಳಿ ಹೇಗೆ ಗೆದ್ದಾರು ಇವರು? ನೊಂದವರ, ದುಃಖಿತರ ಕಥೆ ಹೇಳುವ ಇವರ ಆದರ್ಶಗಳಿಗೆ ಕಿಮ್ಮತ್ತು ಬಂದೀತು ಹೇಗೆ?

ರಾಮಜನ್ಮಭೂಮಿ ಉಪದ್ವಾಪಗಳ ಬಗ್ಗೆ ಜಾಡಿಸಿ ಸುದೀರ್ಘ ಲೇಖನಗಳನ್ನು ಅನೇಕ ಪತ್ರಿಕೆಗಳಲ್ಲಿ ಬರೆದಿದ್ದಾರೆ. ಬುದ್ಧ, ಬಸವ, ಅಂಬೇಡ್ಕರ್ ಬಗ್ಗೆ ಪ್ರೀತಿ ಉಕ್ಕಿಸುವ ಅನೇಕ ಬರಹ ಪ್ರಕಟಿಸಿದ್ದಾರೆ. ಹೀಗೆ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳಿಗೆ ಲೆಕ್ಕವಿಲ್ಲ. 'ಶೋಷಿತರ ಕೂಗು' ಎಂಬ ಕನ್ನಡ ವಾರಪತ್ರಿಕೆ ಮೂರು ವರ್ಷ ನಡೆಸಿದರು. ಇವರ ಪಾನ್ ಬೀಡಾ ಅಂಗಡಿ ಮುಂದೆ ನಿಂತು ರಾಜಕರಣ ಕಲಿತ ಬಚ್ಚಾಗಳು ಮಂತ್ರಿ, ಮುಖ್ಯಮಂತ್ರಿಗಳಾದರು. ಆ ಬಗ್ಗೆ ಅವರಲ್ಲಿ ವ್ಯಾಕುಲವಿಲ್ಲ. ಜನ ಕೆಟ್ಟಿದ್ದಾರೆ. ರಾಜಕಾರಣಿಗಳನ್ನು ಬೈಯುವುದರಲ್ಲಿ ಅರ್ಥವಿಲ್ಲ. ನಾನು ಕೀರ್ತಿಗಾಗಿ, ಅಧಿಕಾರಕ್ಕಾಗಿ ಹೋರಾಡಲಿಲ್ಲ. ಚಳುವಳಿಗಾಗಿ ಇಬ್ಬರು ಮಕ್ಕಳನ್ನು ಕಳೆದುಕೊಂಡೆ. ಬದುಕುಳಿದವರನ್ನು ತಿಂಗಳಿಗೊಂದು ಕುಸ್ತಿ ಆಡಿ ಏಳೆಂಟು ರೂಪಾಯಿ ಕಮಾಯಿಸಿ ಸಾಕಿದೆ. ಈ ಜಮನಾ ತುಫಾನದಂತೆ ಓಡುತ್ತಿದೆ. ಪ್ರವಾಹದಂತೆ ಹರಿಯುತ್ತಿದೆ. ಇದನ್ನು ತಡೆಯಲು ದಡಕತ್ ಇದ್ದರೆ ಮಾತ್ರ ಇದುರು ಈಸಬೇಕು. ಅದು ಹಿಮಾಲಯಕ್ಕೆ ಅಪ್ಪಳಿಸುತ್ತದೆ. ಎಲ್ಲವನ್ನೂ ಚೂರು ಚೂರಾಗಿ ಚೆಲ್ಲುತ್ತದೆ. ಅಂತಹ ಚೂರುಗಳಿಂದ ಪುನಃ ದೇಶ ಕಟ್ಟಬೇಕಿದೆ. ಅದು ನನ್ನ ಕೊನೆಯ ಕನಸು ಅನ್ನುತ್ತಾರೆ ತಿಮ್ಮಾಜಿ.


14 ಜನ ಮರಿಮಕ್ಕಳು, 11 ಜನ ಮೊಮ್ಮಕ್ಕಳು. ಈ ಅಜ್ಜನನ್ನು ಮರಿಮೊಮ್ಮಗಳು ಬಂದು, 'ಮುತ್ತ್ಯಾ ಐದು ರೂಪಾಯಿ ಕೊಡು' ಎಂದು ಕೇಳಿದಳು. ತಿಮ್ಮಾಜಿ ಒಳಾಂಗಿ ಕಿಸೆಯಿಂದ ಕಮಟು ವಾಸನೆ ಸೂಸುವ ತೇಪೆಯಾದ ನೋಟು ಕೊಟ್ಟರು. ಪ್ರಾಯಶಃ ಅದೇ ಹಣದಿಂದ ನಮಗೆ ಚಹ ತಯಾರಾಗಿ ಬಂತೆಂದು ಕಾಣುತ್ತದೆ. ಎಂಭತ್ತೇಳರ ಮುಪ್ಪಿನಲ್ಲೂ ಈ ಜೀವ ಚಾಳೀಸು ಇಲ್ಲದೇ ಓದಬಲ್ಲದು. ನಲವತ್ತು ವರ್ಷಗಳ ಹಿಂದೆಯೇ ಶ್ರೀನಿವಾಸ ಸರಡಗಿಯಲ್ಲಿ ತಮ್ಮ ನೂರೈವತ್ತು ಎಕರೆ ಜಮೀನನ್ನು ಭೂರಹಿತರಿಗೆ ಹಂಚಿದ್ದು, ಕಾರ್ಹುಣ್ಣಿಮೆ ಆಚರಿಸಿದ್ದು, ಅಸ್ಪೃಶ್ಯರೊಂದಿಗೆ ಒಂದೇ ಗಂಗಾಳದಲ್ಲಿ ಉಂಡದ್ದು, ಹದಿಮೂರು ಬಾರಿ ಸೆರೆಮನೆ ಸೇರಿದ್ದು, ಹೀಗೆ ಒಂದೇ, ಎರಡೇ... ಹತ್ತು ಅನುಭವಗಳನ್ನು ತುಂಬಿಕೊಂಡಿರುವ ಹಿರಿಯ ಜೀವಕ್ಕೆ ಮೊನ್ನೆ ರಾಜ್ಯೋತ್ಸವ ಪ್ರಶಸ್ತಿ ಸಿಕ್ಕಿದೆ. ಸಮಾಜವಾದಿಗಳೆಲ್ಲ ಸ್ವ-ಮಜಾವಾದಿಗಳಾಗಿರುವಾಗ ವೀರಣ್ಣ ತಿಮ್ಮಾಜಿಯವರಂಥ ಅಪ್ಪಟ ಸಮಾಜವಾದಿಯೋರ್ವರನ್ನು ಜೀವಂತವಾಗಿ ನೋಡಲು ಸಿಗುತ್ತದೆಂಬುದೇ ಸಮಾಧಾನ. ಮೈಸೂರು-ಬೆಂಗಳೂರು ಕಡೆ ಈ ಜೀವ ಹುಟ್ಟಿದ್ದರೆ ಆ ಕಥೆ ಬೇರೆಯೇ ಆಗ್ತಿತ್ತು.

ತಿಮ್ಮಾಜಿಯವರೊಂದಿಗೆ ಮೂರು ತಾಸು ಕಳೆದು ಹೊರ ಬಂದಾಗ ಅವರು ನಮ್ಮನ್ನು ಹೊಸ್ತಿಲೀಚೆ ರಸ್ತೆವರೆಗೂ ಕಳಿಸಲು ಬಂದು 'ಹೋಗಿ ಬರ್ರಿ' ಎಂದು


ಕೈಮುಗಿದರು. 'ಲೋಗ್ ಮೇರೆ ಬಾತ್ ಸುನೇಂಗೆ. ಶಾಯದ್ ಮೈ ಮರ್‌ನೇ ಕೇ ಬಾದ್... ಲೇಕಿನ್ ಕಿಸಿ ದಿನ್ ಸುನೇಂಗೆ ಜರೂರ್!' ರಾಮಮನೋಹರ ಲೋಹಿಯಾ ಅವರ ಈ ಮಾತುಗಳು ನನ್ನ ಮೆದುಳಿನಲ್ಲಿ ಮತ್ತೆ ಮತ್ತೆ ಕೇಳಿ ಬಂದವು. ನನಗೆ ಗೊತ್ತಿಲ್ಲದೇ ನನ್ನ ಕಣ್ಣು ಮಂಜು ಮಂಜಾದವು.

–ಮಲ್ಲಿಕಾರ್ಜುನ ಕಡಕೋಳ

(ಡಿಸೆಂಬರ್, 2012)



ನೇರ, ನಿಷ್ಠುರ ವ್ಯಕ್ತಿತ್ವದ ಜಿ.ಆರ್.ಜಿ. ನಗರ್



ಶಿವಮೊಗ್ಗ ಜಿಲ್ಲೆಯ ಸಾಗರ ಪ್ರಾಂತ್ಯದಲ್ಲಿ ಸಮಾಜವಾದಿ ಚಳುವಳಿ ಉತ್ತುಂಗದಲ್ಲಿದ್ದಾಗ ಸಮಾಜವಾದಿ ಸಿದ್ಧಾಂತವನ್ನು ಜ್ವರ ಏರಿಸಿಕೊಂಡವರಂತೆ ಕೆಲಸ ಮಾಡಿದ ಹಲವು ಹಿರಿಯ ಚೇತನಗಳು ಈಗ ನಮ್ಮ ನಡುವೆ ಇಲ್ಲ. ತಮ್ಮ ಜೀವನದ ಕೊನೆಯವರೆಗೂ ಸಾರ್ವಜನಿಕ ಹೋರಾಟವನ್ನೆ ಬದುಕಿನ ಉಸಿರು ಎನ್ನುವಂತೆ ಇದ್ದ ಚೇತನಗಳ ಪೈಕಿ ಸಾಗರದ ಜಿ.ಆರ್.ಜಿ.ನಗರ್ ಕೂಡ ಒಬ್ಬರು.

ಜಿ.ಆರ್.ಜಿ. ನಗರ್ ಅವರ ಹೆಸರು ಗುರುರಾಜಣ್ಣ. ಅವರ ಕುಟುಂಬ ಮೂಲತಃ ಹೊಸನಗರ ಸಮೀಪದ ನಗರಕ್ಕೆ ಸೇರಿದ್ದವರಾಗಿದ್ದರಿಂದ ಹೆಸರಿನ ಜೊತೆಗೆ ನಗರ್ ಕೂಡಿಕೊಂಡಿದೆ. ಸಂಪ್ರದಾಯಸ್ಥ ಮಾಧ್ವ ಜಮೀನುದಾರಿ ಕುಟುಂಬದ ನಗರ್ ಸಮಾಜವಾದಿ ಚಿಂತನೆಯ ಆಕರ್ಷಣೆಗೆ ಒಳಗಾದದ್ದು ವಿಶೇಷ ಸಂಗತಿ. ಸ್ವಾತಂತ್ರ್ಯ ಚಳುವಳಿ ಸಂದರ್ಭದಲ್ಲೆ ನಗರ್ ಸಾರ್ವಜನಿಕ ಬದುಕಿಗೆ ಧುಮುಕಿದವರು. ಆಗ ಸಾಗರದಲ್ಲಿ ಸೇವಾದಳದ ಶಿಕ್ಷಕರಾಗಿದ್ದ ಅವರು ಎಚ್.ಎಲ್.ವೀರಭದ್ರಪ್ಪಗೌಡರು, ಮರೂರು ರುದ್ರಪ್ಪ ಗೌಡರು, ಕಾನ್ಲೆ ಸಣ್ಣಯ್ಯ, ಕಾನುಗೋಡು ಹರಿಯಪ್ಪ ಮೊದಲಾದ ಸತ್ಯಾಗ್ರಹಿಗಳೊಂದಿಗೆ ಸಂಪರ್ಕ ಹೊಂದಿದ್ದು ಅವರಿಗೆ ನೆರವಾಗುವ ಕೆಲಸ ಮಾಡುತ್ತಿದ್ದರು.

ಸ್ವಾತಂತ್ರ್ಯ ಚಳುವಳಿ ಕಾಲಕ್ಕೆ ಸಾಗರ ತಾಲ್ಲೂಕಿನ ಸೈದೂರು ಗ್ರಾಮದಲ್ಲಿ ಗುರುರಾಜರ ಕಾಲಿಗೆ ಗುಂಡೇಟು ಬಿದ್ದಿತ್ತು. ಇದ್ಯಾವುದಕ್ಕೂ ಜಗ್ಗದ ಅವರು ಮತ್ತೆ ಉತ್ಸಾಹದಿಂದ ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಚಳುವಳಿಯ ಮೆರವಣಿಗೆ, ಪ್ರಭಾತ್‌ಪೇರಿ, ಕರಪತ್ರ ಮುದ್ರಣ ಸೇರಿದಂತೆ ಹಲವು ಚಟುವಟಿಕೆಗಳಲ್ಲಿ ನಗರ್ ಸಕ್ರಿಯವಾಗಿದ್ದರು.

ದೇಶಕ್ಕೆ ಸ್ವಾತಂತ್ರ್ಯ ದೊರಕುತ್ತಿದ್ದಂತೆ ನಗರ್ ಕಾಂಗ್ರೆಸ್ ಪಕ್ಷದ ಹುದ್ದೆಯನ್ನು ತ್ಯಜಿಸಿ ಸಮಾಜವಾದಿ ಚಿಂತಕರೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲು ಆರಂಭಿಸಿದರು. 1951ರಲ್ಲಿ ಸಾಗರ ತಾಲ್ಲೂಕಿನಲ್ಲಿ ಕಾಗೋಡು ಸತ್ಯಾಗ್ರಹ ಆರಂಭವಾದಾಗ ಅದರ ರೂಪುರೇಷಗಳನ್ನು ಸಿದ್ಧಪಡಿಸಿದ ತಂಡದಲ್ಲಿ ನಗರ್ ಕೂಡ ಇದ್ದರು. ಅಪಾರ ಸಿಟ್ಟು ಸೆಡವಿನ ನಗರ್ ಅಧಿಕಾರಿಗಳೊಂದಿಗೆ ಹಲವು ಸಂದರ್ಭಗಳಲ್ಲಿ ನೇರವಾಗಿ ಜಟಾಪಟಿಗೆ ಇಳಿಯುತ್ತಿದ್ದರು. ಅಪ್ಪಟ ಪ್ರಜಾಪ್ರಭುತ್ವವಾದಿಯಾಗಿದ್ದರೂ ಅಧಿಕಾರಿಗಳು ಉದ್ಧಟತನ ತೋರಿದರೆ ಮತ್ತು ಚಳುವಳಿಯ ಕೆಲಸ ಆಗಬೇಕು ಅಂತಾದರೆ ಅನ್ಯಮಾರ್ಗಕ್ಕೂ ಇಳಿಯಲು ಹಿಂಜರಿಯದ ವ್ಯಕ್ತಿತ್ವ ಅವರದ್ದಾಗಿತ್ತು. ಕಾಗೋಡು ಚಳುವಳಿ ಸಂದರ್ಭದಲ್ಲಿ

ಚಳುವಳಿಗಾರರಿಗೆ ಕಿರುಕುಳ ನೀಡಿದ ಪೊಲೀಸ್ ಅಧಿಕಾರಿಗಳಿಗೆ ನಗರ್ ತಮ್ಮದೆ ಆದ ಶೈಲಿಯ ಮೂಲಕ ಬುದ್ಧಿ ಕಲಿಸಿದ ಬಗ್ಗೆ ಈ ಭಾಗದಲ್ಲಿ ಹಲವು ರೋಚಕ ಕಥೆಗಳಿವೆ.

ಕಾಗೋಡು ಸತ್ಯಾಗ್ರಹಕ್ಕೆ ಬೆಂಬಲ ವ್ಯಕ್ತಪಡಿಸಲು ಡಾ. ರಾಮಮನೋಹರ ಲೋಹಿಯಾ ಅವರು ಸಾಗರಕ್ಕೆ ಆಗಮಿಸಿ, ಅಲ್ಲಿನ ರೈಲ್ವೆ ನಿಲ್ದಾಣದಲ್ಲಿ ಅವರನ್ನು ಬಂಧಿಸಿದ್ದಾಗ ಅವರ ಜೊತೆ ಬಂಧನಕ್ಕೆ ಒಳಗಾದ ವ್ಯಕ್ತಿಗಳ ಪೈಕಿ ನಗರ್ ಕೂಡ ಒಬ್ಬರು. ಕಾಗೋಡು ಗ್ರಾಮದಲ್ಲಿ ಮೊದಲ ಬಾರಿಗೆ 'ಉಳುವವನೆ ಹೊಲದೊಡೆಯ' ಎಂಬ ಘೋಷಣೆಯೊಂದಿಗೆ ಭೂಮಾಲೀಕರ ಜಮೀನಿಗೆ 'ಅತಿಕ್ರಮ ಪ್ರವೇಶ' ಮಾಡಿ ಬೇಲಿಯನ್ನು ಕಿತ್ತು ಬಂಧನಕ್ಕೊಳಗಾದವರಲ್ಲಿಯೂ ನಗರ್ ಸೇರಿದ್ದರು.

ಕಾಗೋಡು ಚಳುವಳಿಯ ನಂತರವೂ ಸಾಗರದಲ್ಲಿ ನಡೆದ ಹಲವು ಜನಪರ ಚಳುವಳಿಗಳಲ್ಲಿ ನಗರ್ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಹಲವು ಸಮಾಜವಾದಿಗಳಂತೆ ತಮ್ಮ ವೈಯಕ್ತಿಕ ಬದುಕನ್ನು ಕಡೆಗಣಿಸಿ ಸಮಾಜದ ಹಿತವೇ ಮುಖ್ಯ ಎನ್ನುವಂತೆ ನಗರ್ ಕೂಡ ಬದುಕಿದ್ದರು. ಚಳುವಳಿಯ ಸೆಳೆತದ ಕಾರಣಕ್ಕೆ ಲೋಕೋಪಯೋಗಿ ಇಲಾಖೆಯ ಕೆಲಸಕ್ಕೆ ತಿಲಾಂಜಲಿ ಇಟ್ಟವರು ನಗರ್.

ಸಾಗರದಲ್ಲಿ ನಡೆದ ಲೆವಿ ಚಳುವಳಿ, ಇತ್ತೀಚಿನ ದಂಡಾವತಿ ಅಣೆಕಟ್ಟು ವಿರೋಧಿ ಹೋರಾಟ, ಶಿಕಾರಿಪುರ ತಾಲ್ಲೂಕು ಈಸೂರಿನ ಭೂ ಹೋರಾಟ ಸೇರಿದಂತೆ ಹತ್ತು ಹಲವು ಚಳುವಳಿಗಳಲ್ಲಿ ನಗರ್ ಪಾಲ್ಗೊಳ್ಳುವಿಕೆ ಇತ್ತು. ಅಂತರಜಾತಿ ವಿವಾಹವಾಗುವುದರ ಜೊತೆಗೆ ಅವರು ಹರಿಜನರ ದೇವಸ್ಥಾನ ಪ್ರವೇಶ, ವೇಶ್ಯೆಯರ ಮದುವೆ ಮೊದಲಾದ ಚಟುವಟಿಕೆಗಳನ್ನು ತಮ್ಮ ಗೆಳೆಯರ ಗುಂಪಿನೊಂದಿಗೆ ನಡೆಸಿದ್ದರು. ನಗರ್‌ರ ಒಳಗೊಬ್ಬ ಅದ್ಭುತ ಸಂಘಟನಕಾರ ಇದ್ದ. ಚಳುವಳಿಗೆ ಸಂಬಂಧಪಟ್ಟಂತೆ ಯಾವುದೆ ಕೆಲಸವನ್ನು ಹಿಡಿದರೆ ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು. ಸದಾ ವ್ಯವಸ್ಥೆಯ ವಿರುದ್ಧ ತಮ್ಮ ಆಕ್ರೋಶವನ್ನು ಯಾವುದೆ ಮುಲಾಜಿಲ್ಲದೆ ವ್ಯಕ್ತಪಡಿಸುವ ಕಾರಣಕ್ಕೆ ಹಲವರ ನಿಷ್ಠೂರ ಕಟ್ಟಿಕೊಂಡಿದ್ದರು

ಸಮಾಜವಾದಿಗಳಿಗೂ ಕಲೆ, ಸಾಹಿತ್ಯ ಸಂಸ್ಕೃತಿಗೂ ಅವಿನಾವಭಾವ ಸಂಬಂಧ ಅದಕ್ಕೆ ತಕ್ಕಂತೆ ನಗರ್ ಕೂಡ ಬಹುಮುಖಿ ಸಾಂಸ್ಕೃತಿಕ ವ್ಯಕ್ತಿತ್ವ ಹೊಂದಿದ್ದವರು. ಸಾಗರದಲ್ಲಿ ಗುರುರಾಜ ಮಿತ್ರಮಂಡಳಿ ಎಂಬ ರಂಗತಂಡವನ್ನು ಅವರು ಸ್ಥಾಪಿಸಿದ್ದರು. ಇದಕ್ಕೂ ಮುನ್ನ ಕಮಲ ಕಲಾಸಂಘ ಎಂಬ ಸಾಂಸ್ಕೃತಿಕ ಸಂಘಟನೆ ಜೊತೆ ಗುರುತಿಸಿಕೊಂಡಿದ್ದರು. ಹಲವು ಕಂಪನಿ ನಾಟಕಗಳನ್ನು ಸಾಗರಕ್ಕೆ ಕರೆಸಿ ತಿಂಗಳುಗಟ್ಟಲೆ ಅವರಿಗೆ ಆಶ್ರಯ ನೀಡುತ್ತಿದ್ದರು. ಆಗಿನ ಕಂಪನಿ ನಾಟಕ ತಂಡಗಳು ರಾಜ್ಯದ ವಿವಿಧೆಡೆ ಪ್ರದರ್ಶನ ನೀಡಿ ನಷ್ಟ ಅನುಭವಿಸಿ ಕಷ್ಟದಲ್ಲಿದ್ದರೆ ಸಾಗರಕ್ಕೆ ಬಂದರೆ ಜೀವನಕ್ಕೆ ತೊಂದರೆ ಇಲ್ಲ ಎಂಬ ಭಾವನೆಯಿಂದ ಇಲ್ಲಿಗೆ ಬಂದು ಮೊಕ್ಕಾಂ ಹೂಡುತ್ತಿದ್ದವಂತೆ. ಈ ವಿದ್ಯಮಾನದ ಹಿಂದೆ ಇದ್ದ ವ್ಯಕ್ತಿಗಳ ಪೈಕಿ ನಗರ್ ಪ್ರಮುಖರು.

ಸಮಾಜವಾದಿಗಳ ಪಾಲಿಗೆ 'ಶಾಪ'ದ ರೂಪದಲ್ಲಿ ಇದ್ದ ವೈಯಕ್ತಿಕ ಬದುಕಿನ

ಅಶಿಸ್ತು ನಗರ್ ಅವರಲ್ಲೂ ಇತ್ತು. ಈ ಕಾರಣಕ್ಕೆ ಅವರ ಕುಟುಂಬ ಆರ್ಥಿಕವಾಗಿ ತೀವ್ರ ಸಂಕಷ್ಟ ಎದುರಿಸಬೇಕಾಯಿತು. ಹಲವು ವರ್ಷ 'ಸಾಗರ ಸುದ್ದಿ' ಎಂಬ ಪತ್ರಿಕೆ ನಡೆಸಿದರೂ ಆರ್ಥಿಕವಾಗಿ ಅದು ನಗರ್‌ಗೆ ಆಸರೆಯಾಗಲಿಲ್ಲ. ನಗರ್ ಅವರ ಪತ್ನಿ ಪ್ರೇಮ ರಂಗ ಕಲಾವಿದೆ. ಚಳುವಳಿಕಾರರ ಪತ್ನಿ ಅನುಭವಿಸುವ ಎಲ್ಲಾ ಪಡಿಪಾಟಲುಗಳನ್ನು ಪ್ರೀತಿಯಿಂದಲೆ ಸಹಿಸಿಕೊಂಡ ಸಹನಾಜೀವಿ. ಆದರೆ ಅವರ ಮಕ್ಕಳು ಅಪ್ಪನ ಚಳುವಳಿಯ 'ವ್ಯಾಮೋಹ'ವನ್ನು ಒಪ್ಪಿಕೊಂಡವರಲ್ಲ.

ಆರ್ಥಿಕ ಸಂಕಷ್ಟ ಎಷ್ಟೇ ಇದ್ದರೂ ಯಾರ ಎದುರೂ ಸಹಾಯಕ್ಕಾಗಿ ಕೈಚಾಚಿದವರಲ್ಲ. ತಮ್ಮ ಕೊನೆಗಾಲದಲ್ಲಿ ಹೆಚ್ಚೆಂದರೆ ತೀರ ಆಪ್ತರಿಂದ ಒಂದು ಸಿಗರೇಟು, ದಿನಪತ್ರಿಕೆ ಕೇಳಿ ಪಡೆಯುತ್ತಿದ್ದರು. ರಂಗಭೂಮಿಯಲ್ಲಿನ ಕೆಲಸಕ್ಕಾಗಿ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನಗರ್ ಅವರಿಗೆ ದೊರಕಿದೆ. ಹಾಗೆಂದು ಪ್ರಶಸ್ತಿ, ಸನ್ಮಾನಗಳನ್ನು ಅವರು ಹುಡುಕಿಕೊಂಡು ಹೋದವರಲ್ಲ.

ಕಳೆದ ವರ್ಷ ಕಣ್ಣಿನ ಶಸ್ತ್ರ ಚಿಕಿತ್ಸೆಗೆಂದು ಉತ್ಸಾಹದಿಂದಲೆ ಬೆಂಗಳೂರುನ ಆಸ್ಪತ್ರೆಗೆ ಹೋಗಿದ್ದ ಅವರು ಸಾಗರಕ್ಕೆ ಬಂದದ್ದು ಶವವಾಗಿ. ಸಾರ್ವಜನಕ ವಿಚಾರಗಳ ಬಗ್ಗೆ ಧ್ವನಿ ಎತ್ತಲು ಯಾವತ್ತೂ ಇಲ್ಲದ ಹಿಂಜರಿಕೆ ಕಾಣುತ್ತಿರುವ ಇಂದಿನ ದಿನಗಳಲ್ಲಿ ನಗರ್ ಅವರಂತಹ ವ್ಯಕ್ತಿಗಳ ಗೈರು ಹಾಜರಿ ಸಾಗರದ ಸುತ್ತಮುತ್ತ ಎದ್ದು ಕಾಣುತ್ತದೆ.

–ಎಂ.ರಾಘವೇಂದ್ರ

(ಫೆಬ್ರುವರಿ, 2013)

'ಜನ ಸೇವಕ' ದಿನಕರ ದೇಸಾಯಿ



ಕನ್ನಡದಲ್ಲಿ ಚುಟುಕಗಳ ಪಿತಾಮಹರೆಂದು ಹೆಸರಾದ ದಿನಕರ ದೇಸಾಯಿಯವರು ಓರ್ವ ಅಗ್ರ ಸಮಾಜವಾದಿ ನಾಯಕರೂ ಆಗಿದ್ದರೆಂಬುದು ಬಹಳ ಜನಕ್ಕೆ ಗೊತ್ತಿಲ್ಲ. ಬಹುಶಃ ಇದಕ್ಕೆ ಕಾರಣಗಳು ಮೂರು. ಒಂದು: ಅವರು ಸಮಾಜವಾದಿ ಚಟುವಟಿಕೆಗಳನ್ನು ನಡೆಸಲಾರಂಭಿಸಿದ್ದ ಈಗ ಉತ್ತರ ಕನ್ನಡ ಜಿಲ್ಲೆಯೆಂದು ಕರೆಯಲ್ಪಡುವ ಪ್ರದೇಶ ಆಗ ಮುಂಬೈ ಪ್ರಾಂತ್ಯಕ್ಕೆ ಸೇರಿದ್ದುದು. ಎರಡು: ಅವರು ಸಮಾಜವಾದಿ ಪಕ್ಷದೊಂದಿಗೆ ಅಧಿಕೃತವಾಗಿ ಗುರುತಿಸಿಕೊಂಡಿರಲಿಲ್ಲವೆಂಬುದು. ಮೂರು: ಅವರ ಕಾರ್ಯ–ಕೇಂದ್ರ ಮುಂಬೈ ಆಗಿದ್ದುದು. ಅದೇನೇ ಇದ್ದರೂ ಅವರು ಮುಂಬೈನಲ್ಲಿ ಸಂಘಟಿಸಿದ ಬಂದರು ಕಾರ್ಮಿಕ ಹೋರಾಟ ಮತ್ತು ಉತ್ತರ ಕನ್ನಡದಲ್ಲಿ ಸಂಘಟಿಸಿದ ರೈತ ಹೋರಾಟ ಹಾಗೂ ಅದರ ಭಾಗವಾಗಿ ರೂಪಿಸಿದ ಶಿಕ್ಷಣ ಆಂದೋಲನ ದಿನಕರ ದೇಸಾಯಿಯವರನ್ನು ಭಾರತದ ಸಮಾಜವಾದಿ ಆಂದೋಲನದ ಇತಿಹಾಸದಲ್ಲಿ ಅಮರರನ್ನಾಗಿಸಿದೆ.

ಉತ್ತರ ಕನ್ನಡ ಜಿಲ್ಲೆಯ ಅಂಕೋಲ ಬಳಿಯ ಅಲಗೇರಿಯಲ್ಲಿ ರೈತ ಅನುಕೂಲಸ್ಥ ರೈತ ಕುಟುಂಬವೊಂದರಲ್ಲಿ 1909ರಲ್ಲಿ ಜನಿಸಿದ ದಿನಕರರು ಸ್ನಾತಕೋತ್ತರ ಶಿಕ್ಷಣಕ್ಕಾಗಿ ಮುಂಬೈಗೆ ಹೋದವರು ಅಲ್ಲಿ ಶಿಕ್ಷಣ ಮುಗಿದೊಡನೆ ಉದ್ಯೋಗವನ್ನರಸದೆ 'ಗಾಂಧಿಜಿಯವರ ರಾಜಕೀಯ ಗುರು ಎಂದೇ ಪ್ರಸಿದ್ಧರಾದ ಗೋಪಾಲಕೃಷ್ಣ ಗೋಖಲೆಯವರು ಸ್ಥಾಪಸಿದ್ದ' 'ಸರ್ವೆಂಟ್ಸ್ ಆಫ್ ಇಂಡಿಯಾ' ಸಂಸ್ಥೆಯ ಧ್ಯೇಯೋದ್ದೇಶಗಳಿಂದ ಆಕರ್ಷಿತರಾಗಿ ಅದರ ಆಜೀವ ಸದಸ್ಯತ್ವ ಪಡೆದು ಅಲ್ಲಿಯೇ ಸಾರ್ವಜನಿಕ ಸೇವೆಯಲ್ಲಿ ತೊಡಗಿಕೊಂಡರು. ಸಂಸ್ಥೆಯ ಸದಸ್ಯರು ಯಾವುದೇ. ರಾಜಕೀಯ ಪಕ್ಷದೊಡನೆ ಗುರುತಿಸಿಕೊಳ್ಳಬಾರದೆಂಬ ನಿಬಂಧನೆಯಿಂದಾಗಿಯೇ ದೇಸಾಯಿಯವರು ಸಮಾಜವಾದಿ ಪಕ್ಷದದೊಡನೆ ಅಧಿಕೃತ ಸಂಬಂಧ ಹೊಂದಲಿಲ್ಲ.

ದಿನಕರರು ಮೊದಲು ಆರಂಭಿಸಿದ್ದು ಕಡಲ ಕಾರ್ಮಿಕರ ಹೋರಾಟವನ್ನು. ಆವರೆಗೆ ಸಂಘಟನೆಯನ್ನೇ ಕಾಣದಿದ್ದ ಮುಂಬೈ ಬಂದರಿನ ಕೆಲಸಗಾರರ ಸಂಘವನ್ನು 1936ರಲ್ಲಿ ಸ್ಥಾಪಿಸಿದ ಅವರು, ದಟ್ಟ ದರಿದ್ರ ಸ್ಥಿತಿಯಲ್ಲಿದ್ದ ಅವರಿಗೆ ಕನಿಷ್ಠ ಕಾರ್ಮಿಕ ಹಕ್ಕು ಮತ್ತು ಸೌಲಭ್ಯಗಳನ್ನು ಕಲ್ಪಿಸಿಕೊಡಲು 40 ದಿನಗಳ ಮುಷ್ಕರ ನಡೆಸಿ ಅದರಲ್ಲಿ ಯಶಸ್ವಿಯೂ ಆದರು. ಕಾರ್ಮಿಕ ಪ್ರತಿನಿಧಿಯಾಗಿ ದೇಶ ವಿದೇಶ ಸಂಚರಿಸಿ ಕಾರ್ಮಿಕ ಹಕ್ಕುಗಳ ಬಗ್ಗೆ, ವಿಶೇಷವಾಗಿ ಕಡಲ ಕಾರ್ಮಿಕರ ಹಕ್ಕು ಬಾಧ್ಯತೆಗಳ ಬಗ್ಗೆ ಜಾಗೃತಿ ಮೂಡಿಸಿದರು. ಈ ಕೆಲಸ ಅವರನ್ನು ಹಲವು

ವರ್ಷಗಳ ಕಾಲ ಮುಂಬೈ ನಗರಪಾಲಿಕೆಯ ಸದಸ್ಯರಾಗಿ ಮತ್ತು ಮುಂಬೈ ಬಂದರು ಧರ್ಮ ದರ್ಶಿಯಾಗಿ ಕೆಲಸ ಮಾಡಲೂ ಸಹಾಯ ಮಾಡಿತು.

ದಿನಕರರು ಮುಂಬೈನಲ್ಲಿ ನೆಲೆಸಿ ತಮ್ಮ ಊರನ್ನು ಮರೆಯಲಿಲ್ಲ. ತಮ್ಮ ಬಾಲ್ಯದಲ್ಲಿ ಕಣ್ಣಾರೆ ಕಂಡಿದ್ದ ಬಡ ರೈತರ ಕಷ್ಟ-ಸಂಕಷ್ಟಗಳನ್ನು ನೆನೆದು ಅವರು ಮುಂಬೈನ ಕಾರ್ಮಿಕ ಹೋರಾಟದ ಜೊತೆ ಜೊತೆಗೇ 1936ರಲ್ಲೇ ಅಂಕೋಲೆಯ ಸುತ್ತಮುತ್ತ ಗೇಣಿದಾರ ರೈತರ ಸಂಘಟನೆ ಆರಂಭಿಸಿದರು. ಉತ್ತರ ಕನ್ನಡ ಜಿಲ್ಲೆಯಾದ್ಯಂತ ರೈತಕೂಟಗಳನ್ನು ಸ್ಥಾಪಿಸಿ ಸಭೆಗಳನ್ನು ನಡೆಸಿ ಭೂಮಾಲಿಕರ ದಬ್ಬಾಳಿಕೆಯ ವಿರುದ್ಧ ರೈತರಲ್ಲಿ ಜಾಗೃತಿ ಮೂಡಿಸಿದರು. ಗೇಣಿದಾರರನ್ನು ಜೀತದಾಳುಗಳನ್ನಾಗಿ ಪರಿವರ್ತಿಸಿದ್ದ ಸ್ಥಳೀಯ ಗೇಣಿ ಸಂಪ್ರದಾಯಗಳು ಮತ್ತು ಕಾನೂನುಗಳನ್ನು ಗೇಣಿದಾರರ ಪರವಾಗಿ ಬದಲಾಯಿಸುವಂತೆ ಆಗಿನ ಮುಂಬೈ ಸರ್ಕಾರದ ಮೇಲೆ ಒತ್ತಡ ಹೇರಿದರು.

ಮೇಲ್ಜಾತಿಗಳಿಗೆ ಸೇರಿದ್ದ ಭೂಮಾಲಿಕರು ಇದರಿಂದ ಬೆದರಿದರು. ದಿನಕರರನ್ನು ಸ್ಥಳೀಯ ನುಡಿಗಟ್ಟಿನಲ್ಲಿ 'ಹಾವಳಿ ಮಂಜ'(ಅಂದರೆ ಪುಂಡ ಗಂಡುಬೆಕ್ಕು) ಎಂದು ಶಪಿಸುತ್ತಿದ್ದ ಭೂಮಾಲಿಕರು ಅನಗತ್ಯ ಗಲಭೆ-ಗೊಂದಲಗಳ ನೆಪವೊಡ್ಡಿ ಸ್ಥಳೀಯ ಆಡಳಿತದ ಮೇಲೆ ಪ್ರಭಾವ ಬೀರಿ ಅವರನ್ನು ಐದು ವರ್ಷಗಳ ಕಾಲ ಜಿಲ್ಲೆಯಿಂದ ಗಡಿಪಾರು ಮಾಡಿಸುವಲ್ಲಿ ಯಶಸ್ವಿಯಾದರು. ಆದರೆ ದಿನಕರರ ಮುಂಬೈನಲ್ಲಿನ ಪ್ರಭಾವದಿಂದಾಗಿ ರಾಜ್ಯ ಸರ್ಕಾರ ಗೇಣಿ ಕಾನೂನುಗಳನ್ನು ಸಡಲಿಸಿತು. ರೈತರು ಸ್ವಲ್ಪ ನಿಸೂರಾಗಿ ಉಸಿರಾಡುವಂತಾಗಿ ದಿನಕರರು ಉತ್ತರ ಕನ್ನಡ ಜಿಲ್ಲೆ ಮನೆ ಮಾತಾದರು. ಆದರೆ ಈ ಆಂದೋಲನ ಇಲ್ಲಿಗೇ ನಿಲ್ಲದೆ ಸತತವಾಗಿ 35 ವರ್ಷಗಳ ಕಾಲ ಕಾವು ಕಳೆದುಕೊಳ್ಳದೆ ನಡೆದು ದೇವರಾಜ ಅರಸರ ಭೂಸುಧಾರಣೆ ಕಾಯ್ದೆ ಜಾರಿಯಾದಾಗಲೇ ತನ್ನ ತಾರ್ಕಿಕ ಅಂತ್ಯ ಕಂಡುಕೊಂಡದ್ದು. ಪಕ್ಕದ ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ಸುಪ್ರಸಿದ್ಧ ಕಾಗೋಡು ಭೂ ಸತ್ಯಾಗ್ರಹದ ರೂವಾರಿ ಗಣಪತಿಯಪ್ಪ ಮೂಲತಃ ಉತ್ತರ ಕನ್ನಡದ ಸಿದ್ಧಾಪುರದವರಾಗಿದ್ದು, ಅಲ್ಲಿನ ದಿನಕರ ದೇಸಾಯಿಯವರು ಸಂಘಟಿಸಿದ್ದ ರೈತಹೋರಾಟದ ಸ್ಫೂರ್ತಿಯಿಂದಲೇ ಸಾಗರಕ್ಕೆ ಬಂದು ಕಾಗೋಡಿನ ಗೇಣಿದಾರರನ್ನು ಜಾಗೃತಗೊಳಿಸಿದ್ದು.

ದೇಸಾಯಿಯವರು ತಮ್ಮೆಲ್ಲ ಸಾರ್ವಜನಿಕ ಭಾಷಣಗಳಲ್ಲಿ ಪದೇ ಪದೇ ಸಮಾಜವಾದಿ ತತ್ವಗಳ ಉಲ್ಲೇಖ ಮಾಡುತ್ತಿದ್ದರಾದರೂ, ಸಮಾಜವಾದಿ ಪಕ್ಷದ ಜಗಳ-ಒಳಜಗಳಗಳ ರಾಜಕಾರಣದತ್ತ ಒಮ್ಮೆಯೂ ಸುಳಿಯಲಿಲ್ಲ. ಇದರಿಂದಾಗಿ ಅವರು ಏಕಾಂಗಿಯಾಗಿ ಜಿಲ್ಲೆಯಲ್ಲಿ ಸಮಾಜವಾದಿ ತತ್ವಗಳನ್ನು ಜನರ ಮನದಲ್ಲಿ ನೆಲೆಯೂರಿಸುವ ಕಾಯಕದತ್ತ ಮನಸ್ಸು ಕೊಟ್ಟರು. ಹೋರಾಟದಷ್ಟೇ ಹುರುಪಿನಿಂದ ರಚನಾತ್ಮಕ ಚಟುವಟಿಕೆಗಳತ್ತಲೂ ತೊಡಗಿಕೊಂಡರು. ತಮ್ಮ ರೈತ ಸಂಘಟನೆಯ ಗೆಳೆಯ ಶೇಷಗಿರಿ ಪಿಕಳೆಯವರನ್ನು ಅವರು ಕೆಲಸ ಮಾಡುತ್ತಿದ್ದ ಶಾಲೆ ಅವರ ಚಳುವಳಿಯ ಕಾರಣದಿಂದಾಗಿ ಸೇವೆಯಿಂದ ಹೊರಹಾಕಿದಾಗ ದಿನಕರರು ರೈತರ ದೇಣಿಗೆ ಮತ್ತು ಶ್ರಮದಾನದ ಮೂಲಕ ಬೊಬ್ರುವಾಡ ಎಂಬ ಹಳ್ಳಿಯಲ್ಲಿ ಕಟ್ಟಡವೊಂದನ್ನು ನಿರ್ಮಿಸಿ ಅಲ್ಲಿ ಶಾಲೆಯೊಂದನ್ನು ಆರಂಭಿಸಿ ಪಿಕಳೆಯವರಿಗೆ

ಜೀವನೋಪಾಯ ಕಲ್ಪಿಸಿಕೊಟ್ಟರು. ಇದೇ ನೆಪವಾಗಿ ಅವರು ರೈತ ಮಕ್ಕಳ ಶಿಕ್ಷಣಕ್ಕಾಗಿ 'ಕೆನರಾ ವೆಲ್‌ಫೇರ್ ಟ್ರಸ್ಟ್'ನ್ನು ಸ್ಥಾಪಿಸಿ ಅದರಡಿಯಲ್ಲಿ ಜಿಲ್ಲೆಯಾದ್ಯಂತ ಪ್ರಾಥಮಿಕ ಶಾಲೆಗಳಿಂದ ಹಿಡಿದು ವಿವಿಧ ಪದವಿ ಕಾಲೇಜುಗಳವರೆಗೆ ಮುವ್ವತ್ತಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದರು


ಸ್ವತಃ ಸಾಹಿತಿಗಳಾಗಿದ್ದ ದಿನಕರರು ಜಿಲ್ಲೆಯ ಸಾಹಿತ್ಯ ಪೋಷಣೆಗಾಗಿ 'ಜನತಾ ಪ್ರಕಾಶನ' ಆರಂಭಿಸಿ ಅನೇಕ ಯುವಸಾಹಿತಿಗಳನ್ನು ಪ್ರೋತ್ಸಾಹಿಸಿದರು. 'ಜನಸೇವಕ' ಎಂಬ ಪತ್ರಿಕೆಯನ್ನು ಆರಂಭಿಸಿ ಅದರ ಮೂಲಕ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಶಿಕ್ಷಣದ ಪ್ರಯೋಗ ನಡೆಸಿದರು. ತಮ್ಮ ಮದುವೆಯನ್ನು ಹದಿಮೂರು ರೂಪಾಯಿಗಳ ಖರ್ಚಿನಲ್ಲಿ ಮಾಡಿಕೊಂಡಿದ್ದ ಸಮಾಜವಾದಿ ದಿನಕರರು ತಮ್ಮ ಮಕ್ಕಳನ್ನೂ ಸಮಾಜವಾದಿ ಸಂಸ್ಕೃತಿಯಲ್ಲಿ ಬೆಳೆಸಿ ಅವರೆಲ್ಲರೂ ಜಾತಿಮೀರಿ ಮದುವೆಯಾಗಲು ಅನುವು ಮಾಡಿಕೊಟ್ಟರು.

ಇಂತಹ ತನ್ನ ಪ್ರಬುದ್ಧ ಮತ್ತು ನಿಸ್ವಾರ್ಥಿ 'ಸೇವಕ'ನನ್ನು ಉತ್ತರ ಕನ್ನಡದ ಜನತೆ ಒಮ್ಮೆ–1967ರಲ್ಲಿ–ಲೋಕಸಭೆಗೆ ಆರಿಸಿ ಕಳಿಸಿತು. ರೈತ ಹೋರಾಟ ಕಾಲದಿಂದಲೂ ಸಮಾಜವಾದಿ ಪಕ್ಷದಿಂದ ಬೇಷರತ್ ಬೆಂಬಲ ಪಡೆದು ಚುನಾವಣಾ ರಾಜಕಾರಣದಲ್ಲಿ ತೊಡಗಿಕೊಂಡಿದ್ದ ದಿನಕರರು ಆ ಚುನಾವಣೆಯಲ್ಲಿ ಜಿಲ್ಲೆಯಾದ್ಯಂತ ತಮ್ಮ ಪ್ರತಿನಿಧಿಗಳನ್ನು ಗೆಲ್ಲಿಸುವ ಮೂಲಕ ಕಾಂಗ್ರೆಸ್ಸನ್ನು ಧೂಳೀಪಟ ಮಾಡಿದ್ದರು. ಸಕ್ಕರೆ ಕಾಯಿಲೆಯಿಂದ ಬಳಲುತ್ತಿದ್ದ ಈ ಜನಸೇವಕ 1982ರ ನವೆಂಬರ್ ಆರರಂದು ಹೃದಯಾಘಾತದಿಂದ ನಿಧನ ಹೊಂದಿದರು. ಅಲ್ಲಿಗೆ ಉತ್ತರ ಕನ್ನಡದ ಸಾರ್ವಜನಿಕ ಬದುಕಿನಲ್ಲಿ ಒಂದು ಉಜ್ವಲ ಅಧ್ಯಾಯ ಮುಗಿದಂತಾಯಿತು.

–ಡಿಎಸ್ಸೆನ್ (ಸಾಧಾರ)

(ಜನವರಿ, 2013)

ಚಿರ ಯುವಸಮಾಜವಾದಿ ಬಂದಗದ್ದೆ ರಮೇಶ್



ಅರವತ್ತು-ಎಪ್ಪತ್ತರ ದಶಕಗಳಲ್ಲಿ ಸಮಾಜವಾದಿ ವಲಯದಲ್ಲಿ ಮತ್ತು ಎಂಭತ್ತು-ತೊಂಭತ್ತರ ದಶಕಗಳಲ್ಲಿ ಜನತಾ ಪಕ್ಷದ ವಲಯಗಳಲ್ಲಿ ವ್ಯಾಪಕವಾಗಿ ಕೇಳಿ ಬರುತ್ತಿದ್ದ ಪ್ರೀತಿಪೂರ್ವಕ ಹೆಸರು. ನೇರ ನಡೆ ನುಡಿ, ಶ್ರಮ ಮತ್ತು ಶ್ರದ್ಧಾಪೂರ್ವಕವಾದ ಸಂಘಟನಾ ಚಾತುರ್ಯ, ಹಠ ಮತ್ತು ಮುಂಗೋಪಗಳಿದ್ದರೂ ಸ್ನೇಹಶೀಲತೆಗಳ ಪ್ರತೀಕ ವಾಗಿದ್ದುಕೊಂಡು; ಇಂದು ನಮ್ಮ ಮಧ್ಯೆ ಹಿರಿಯ ಸಮಾಜವಾದಿ ನಾಯಕನಾಗಿ ಇರಬೇಕಾಗಿದ್ದ ಈ ಜೀವ ತೊಂಭತ್ತರ ದಶಕದಲ್ಲಿ ರಸ್ತೆ ಅಪಘಾತವೊಂದರಲ್ಲಿ ಇದ್ದಕ್ಕಿದ್ದಂತೆ ತೀರಿಹೋದಾಗ ಅವರ ಅಪಾರವಾದ ಗೆಳೆಯರ ಬಳಗ ಶೋಕದಲ್ಲಿ ಮುಳುಗಿ ಹೋದದ್ದು ಆಶ್ಚರ್ಯದ ಸಂಗತಿಯೇನಲ್ಲ. ಆಗ ಅವರಿಗೆ 62 ವರ್ಷಗಳಾಗಿದ್ದರೂ, ಅವರನ್ನು ಅವರ ಗೆಳೆಯರು ಗುರುತಿಸುತ್ತಿದ್ದುದು ಯುವ ಸಮಾಜವಾದಿಯೆಂದೇ! ಅಷ್ಟು ಉತ್ಸಾಹ, ಲವಲವಿಕೆಯ ಜೀವ ಅವರದ್ದು.

ಬಂದಗದ್ದೆ ಎಂದೇ ತಮ್ಮ ಸಮಾಜವಾದಿ ಗೆಳೆಯರ ನಡುವೆ ಹೆಸರುವಾಸಿಯಾಗಿದ್ದ ರಮೇಶ್, ಗೋಪಾಲಗೌಡರು ತಮ್ಮ ಕೊನೆಯ ದಿನಗಳಲ್ಲಿ ಹಾಸಿಗೆ ಹಿಡಿದಿದ್ದ ಹಲವು ದಿನಗಳ ಕಾಲ ಅವರ ವೈಯುಕ್ತಿಕ ದಾದಿಯಂತೆ ಆರೈಕೆ ಮಾಡಿದವರು. 70ರ ದಶಕದಲ್ಲಿ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಮೀಸಾದಡಿ ಬಂಧಿತರಾಗಿದ್ದಾಗ ಅಸ್ವಸ್ಥರಾಗಿದ್ದ ತಮ್ಮ ಸಹ ಬಂದಿ ಜೆ.ಎಚ್ ಪಟೇಲರನ್ನು ಮತ್ತೆ ವೈಯುಕ್ತಿಕ ದಾದಿಯಾಗಿ ಆರೈಕೆ ಮಾಡಿದವರು. ಆ ಮಟ್ಟಕ್ಕೆ ಸಮಾಜವಾದಿ ಚಳುವಳಿಯೊಂದಿಗೆ ರಕ್ತ ಮಾಂಸವಾಗಿ ಬೆರತವರು. ಸಾಗರ ತಾಲ್ಲೂಕಿನ ಬಂದಗದ್ದೆಯ ಸಣ್ಣ ರೈತ-ಪುರೋಹಿತ ಕುಟುಂಬವೊಂದರಲ್ಲಿ 'ಭಾರತ ಬಿಟ್ಟು ತೊಲಗಿ' ಚಳುವಳಿ ಆರಂಭವಾದ 1942ರಲ್ಲಿ ಜನಿಸಿದ ರಮೇಶ್, ತಮ್ಮ ಅಜ್ಜಿ ಸರಸ್ವತಮ್ಮ ಮತ್ತು ತಂದೆ ಮಹಾಬಲ ಭಟ್ಟರ ಉದಾರವಾದಿ ಜೀವನಕ್ರಮಗಳಿಂದ ಬಾಲ್ಯದಿಂದಲೇ ಪ್ರಭಾವಿತರಾಗಿದ್ದವರು. ಅಜ್ಜಿ ಹರಿಜನ-ಗಿರಿಜನರೆನ್ನದೆ ಸಕಲ ಜಾತಿಗಳ ಮನೆಗೂ ಹೋಗಿ ಹೆರಿಗೆ ಮಾಡಿಸಿ ಬರುತ್ತಿದ್ದವರಾದರೆ, ತಂದೆ ಸಹಕಾರಿ ಕ್ಷೇತ್ರದಲ್ಲಿದ್ದ ಕಾಂಗ್ರೆಸ್ಸಿಗರಾಗಿದ್ದರೂ ಲೋಹಿಯಾ ಪ್ರಭಾವಕ್ಕೊಳಗಾಗಿ ಸಮಾಜವಾದಿ ಆಶಯಗಳಿಗೆ ಸ್ಪಂದಿಸುತ್ತಾ ಸಮಾಜದ ಸಕಲ ವರ್ಗಗಳೊಂದಿಗೂ ಸಂಪರ್ಕವಿಟ್ಟುಕೊಂಡವರು. ಹಾಗಾಗಿ ಮೈಸೂರಿನ ಬನುಮಯ್ಯ ಮತ್ತು ಬೆಂಗಳೂರಿನ ಆರ್.ಸಿ. ಕಾಲೇಜುಗಳಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ವಿದ್ಯಾರ್ಥಿ ಸಂಘಟನೆಯಲ್ಲಿ ತೊಡಗಿಕೊಂಡು ಸಮಾಜವಾದಿ ಸಿದ್ಧಾಂತಗಳಿಗೆ ತಮ್ಮನ್ನು ತೆತ್ತುಕೊಂಡಿದ್ದ ರಮೇಶ್ 1967ರಲ್ಲಿ ಲೋಹಿಯಾ ನೇತೃತ್ವದ ಸಂಯುಕ್ತ

ಸಮಾಜವಾದಿ ಪಕ್ಷದ ಸದಸ್ಯತ್ವ ಪಡೆದುಕೊಂಡರು.

1970ರಲ್ಲಿ ಒಂದು ಸಣ್ಣ ಕೌಟುಂಬಿಕ ಕಾರಣದಿಂದಾಗಿ ತಂದೆಯವರ ಮೇಲೆ ಮುನಿಸಿಕೊಂಡು ಬರಿಗೈಯಲ್ಲಿ ತಮ್ಮ ಊರಿನ ದಲಿತರೊಬ್ಬರ ಹೆಗಲ ಮೇಲೇ ಕೈ ಹಾಕಿಕೊಂಡು ಊರು ಬಿಟ್ಟ ರಮೇಶ್ ಎಂತಹ ಹಠವಾದಿಯೆಂದರೆ ಮತ್ತೆ ಊರಿಗೆ ಹಿಂದಿರುಗಿದ್ದು ತಮ್ಮ ತಂದೆ ತೀರಿಕೊಂಡ 1985ರಲ್ಲೇ! ಆ ಹೊತ್ತಿಗೆ ಅವರು ಸಮಾಜವಾದಿ ಯುವಜನ ಸಭಾದ ಪ್ರಮುಖ ಕಾರ್ಯಕರ್ತರಾಗಿ ಬೆಳೆದು ಅದರ ಸಹ ಕಾರ್ಯದರ್ಶಿಯಾಗಿ ಬೆಂಗಳೂರಿನ ಸಮಾಜವಾದಿ ಪಕ್ಷದ ಕಾರ್ಯಾಲಯವನ್ನೇ ತಮ್ಮ ಮನೆ-ಮಠ ಎಲ್ಲ ಮಾಡಿಕೊಂಡಿದ್ದರು. ಎಷ್ಟೋ ದಿನ ಅವರು ಅಲ್ಲಿ 'ಪ್ರಜಾವಾಣಿ' ಪತ್ರಿಕೆಯನ್ನು ಹಾಸಿಕೊಂಡು, 'ಕನ್ನಡ ಪ್ರಭ' ಪತ್ರಿಕೆಯನ್ನು ಹೊದ್ದುಕೊಂಡು ಬರಿಹೊಟ್ಟೆಯಲ್ಲಿ ಮಲಗಿದ್ದುಂಟು. ಅಷ್ಟರಮಟ್ಟಿಗೆ ಅವರು ತಮ್ಮ ಬದುಕನ್ನು ಸಮಾಜವಾದಿ ಚಳುವಳಿಗೆ ತೆತ್ತುಕೊಂಡಿದ್ದರು. ಗೋಪಾಲಗೌಡರ ನಿಧನಾನಂತರ, ಕರ್ನಾಟಕದ ಸಮಾಜವಾದಿಗಳ ಧೀಮಂತ ನಾಯಕರಲ್ಲೊಬ್ಬರಾಗಿದ್ದ ಎಸ್. ವೆಂಕಟರಾಂ ಅವರ ಬಲಗೈ ಬಂಟನಾಗಿದ್ದ ರಮೇಶ್ ಪಕ್ಷದ ಕಛೇರಿಯ ಕೆಲಸಗಳನ್ನು ಶ್ರದ್ಧೆ ಮತ್ತು ದಕ್ಷತೆಗಳಿಂದ ನಿರ್ವಹಿಸುತ್ತಾ, ಎಲ್ಲ ಹಿರಿ-ಕಿರಿಯ ಸಮಾಜವಾದಿಗಳ ಆಪ್ತ ಒಡನಾಡಿಯಾಗಿದ್ದರು. ಸ್ವಲ್ಪಕಾಲ ಅವರು ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರ ಸಂಪಾದಕತ್ವದ 'ಮಾನವ' ಸಮಾಜವಾದಿ ಪತ್ರಿಕೆಯ ಸಂಪಾದಕ ಮಂಡಳಿಯ ಸದಸ್ಯರೂ ಆಗಿದ್ದರು.

ಕಾಗೋಡು ತಿಮ್ಮಪ್ಪನವರನ್ನು ತಮ್ಮ ಮೊದಲ ನಾಯಕರೆಂದು ಗುರುತಿಸಿಕೊಂಡಿದ್ದ ರಮೇಶ್, ಸಾಗರದ ಬಿ.ಎಸ್. ಚಂದ್ರಶೇಖರ್, ಎಸ್. ಎಸ್. ಕುಮುಟಾ, ಜಿ.ಆರ್..ಜಿ.ನಗರ್, ಬೇದೂರು ಶಾಮಭಟ್ಟರು, ಹಂದಿಗೋಡು ವೆಂಕಟಗಿರಿಭಟ್ಟರು, ಮನೆಘಟ್ಟದ ಎಂ.ಸಿ. ಚೌಡಪ್ಪ, ಯಳಗಳಲೆ ಹುಚ್ಚಪ್ಪ, ಪ್ರಭಾಕರ ಕಾಳೆ, ಗುರುಮೂರ್ತಿ ಮರಾಠೆ ಮುಂತಾದ ಸಮಾಜವಾದಿ ಕಾರ್ಯಕರ್ತರ ಹೋರಾಟಗಳಿಂದಲೂ ಮತ್ತು ಇದೇ ಸೀಮೆಯ ಕೆ.ವಿ. ಸುಬ್ಬಣ್ಣ ಮತ್ತು ಯು.ಆರ್. ಅನಂತಮೂರ್ತಿಯವರಿಂದಲೂ ಬೌದ್ಧಿಕವಾಗಿ ಪ್ರಭಾವಿತರಾಗಿದ್ದರು. 1972ರಲ್ಲಿ ಕುಪ್ಪಗಡ್ಡೆ ಮರಿಯಪ್ಪನವರ ನೇತೃತ್ವದಲ್ಲಿ ನಡೆದ ಮಂಗಾಪುರ ಭೂಚಳುವಳಿ ಮತ್ತು 1973ರಲ್ಲಿ ನಡೆದ ಸಂಡೂರು ಭೂ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ರಮೇಶ್, ಈಸೂರಿನ ಬಳಿಯ ದುಗ್ಗಾ ಭೂ-ಚಳುವಳಿಯ ಸಂಬಂಧವಾಗಿ 12 ದಿನಗಳ ಸೆರೆಮನೆವಾಸ ಅನುಭವಿಸಬೇಕಾಯಿತು.

1974ರಲ್ಲಿ ಆರಂಭವಾದ ಜೆಪಿಯವರ ಸಂಪೂರ್ಣ ಕ್ರಾಂತಿ ಚಳುವಳಿ ರಮೇಶರ ರಾಜಕೀಯ ಜೀವನದ ಒಂದು ಮಹತ್ವಪೂರ್ಣ ತಿರುವು. ಈ ಸಂಬಂಧ ರಾಜ್ಯದಲ್ಲಿ ರಚಿತವಾದ ನವ ನಿರ್ಮಾಣ ವೇದಿಕೆಯ ಸಂಚಾಲಕರಲ್ಲೊಬ್ಬರಾದ ಇವರು ಈ ಕಾರಣದಿಂದಾಗಿ ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಬಂಧಿತರಾಗಿ 2 ವರ್ಷ ರಾಷ್ಟ್ರ ಹಿರಿಯ ನಾಯಕರಾದ ಎಲ್.ಕೆ.ಅಡ್ವಾನಿ, ಮಧು ದಂಡವತೆ ಮುಂತಾದವರೊಂದಿಗೆ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಇರಬೇಕಾಯಿತು. ಈ ಸಮಯದಲ್ಲಿ ನಡೆದ ಓದು ಮತ್ತು ಚರ್ಚೆಗಳು ಅವರ ರಾಜಕೀಯ ವ್ಯಕ್ತಿತ್ವಕ್ಕೆ

ಹೊಸ ಆಯಾಮವೊಂದನ್ನು ನೀಡಿತೆಂದೇ ಹೇಳಬೇಕು.


ತುರ್ತು ಪರಿಸ್ಥಿತಿಯ ನಂತರ ಇತರ ಕಾಂಗ್ರೆಸ್ಸೇತರ ಪಕ್ಷಗಳೊಂದಿಗೆ ಸಮಾಜವಾದಿ ಪಕ್ಷ ಲೀನವಾಗಿ ರಚಿತವಾದ ಜನತಾ ಪಕ್ಷದೊಂದಿಗೆ ಗುರುತಿಸಿಕೊಂಡ ರಮೇಶ್ ಅದರ ಯುವ ಘಟಕದ ಅಧ್ಯಕ್ಷರಾಗಿ, ನಂತರ ಪಕ್ಷದ ಉಪಾಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ, ತದನಂತರ ಸಣ್ಣ ಕೈಗಾರಿಕಾ ನಿಗಮದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ಒಮ್ಮೆ ನೈರುತ್ಯ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಸ್ಪರ್ಧಿಸಿ ಸೋತರು. ನಂತರ ಜೀವನೋಪಾಯಕ್ಕಾಗಿ ತಾವೇ ಒಂದು ಸಣ್ಣ ಕೈಗಾರಿಕೆ ಸ್ಥಾಪಿಸಿ ಕೈಸುಟ್ಟುಕೊಂಡರು. ಜನತಾ ಪಕ್ಷ ಒಡೆದಾಗ ರಾಮಕೃಷ್ಣ ಹೆಗಡೆಯವರೊಂದಿಗೆ ಗುರುತಿಸಿಕೊಂಡ ರಮೇಶ್, ಅವರು ಸ್ಥಾಪಿಸಿದ 'ನವನಿರ್ಮಾಣ ವೇದಿಕೆ'ಯ ಸಂಘಟನಾ ಕಾರ್ಯದಲ್ಲಿ ತೊಡಗಿದ್ದಾಗಲೇ ರಸ್ತೆ ಅಪಘಾತಕ್ಕೀಡಾಗಿ ಕೊನೆಯುಸಿರೆಳೆದರು.

ಬದುಕಿನಲ್ಲಿ ಸೋಲು-ಗೆಲುವು, ನೋವು-ನಲಿವುಗಳೆರಡನ್ನೂ ಕಂಡಿದ್ದ ರಮೇಶರ ನೆನಪು ಮಾತ್ರ ಅವರ ಒಡನಾಡಿಗಳ ಪಾಲಿಗೆ ಸದಾ ಸ್ಫೂರ್ತಿಯ ಚಿಲುಮೆಯೇ ಆಗಿ ಕ್ರಿಯಾಶೀಲವಾಗಿದೆ.

-ರಾಮಮನೋಹರ, ಕೆಳದಿ

(ಜುಲೈ, 2013)

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಒಂದು ನೆನಪು



ನಂಜುಂಡಸ್ವಾಮಿಯವರನ್ನು ಮೊದಲು ಭೇಟಿಯಾದದ್ದು ನಾನು 1977ರಲ್ಲಿ, ಲಂಕೇಶರ ಮನೆಯಲ್ಲಿ. ಆಗ ನಾನು ದೆಹಲಿಯಲ್ಲಿ ಕೆಲಸ ಮಾಡುತ್ತಿದ್ದು, ತುರ್ತು ಪರಿಸ್ಥಿತಿ ಸಮಯದಲ್ಲಿ ಮೈಸೂರಿನಿಂದ ರಾಜಶೇಖರ ಕೋಟಿಯವರು ಹೊರತರುತ್ತಿದ್ದ 'ಆಂದೋಲನ' ವಾರಪತ್ರಿಕೆಗೆ ಲೇಖನ–ಪತ್ರಗಳನ್ನು ಬರೆಯುತ್ತಿದ್ದೆ. ಅವುಗಳಲ್ಲಿ ಗಾಂಧೀ ಕುರಿತ ಒಂದು ಪತ್ರ ಲಂಕೇಶರಿಗೆ ಇಷ್ಟವಾಗಿ ಅವರು ನನ್ನನ್ನು ಕಾಣಲು ಬಯಸಿದ್ದಾರೆಂದು ಗೆಳೆಯರೊಬ್ಬರು(ಬಹುಶಃ ನೆಲಮನೆ ದೇವೇಗೌಡರು) ತಿಳಿಸಿದ್ದರಿಂದಾಗ ನಾನು ಲಂಕೇಶರ ಮನೆಗೆ ಹೋಗಿದ್ದೆ. ಅಲ್ಲಿ ಲಂಕೇಶ್ ಇಬ್ಬರು ವ್ಯಕ್ತಿಗಳ ಜೊತೆ ಕೂತು ಮಾತನಾಡುತ್ತಿದ್ದರು. ಅವರಲ್ಲಿ ಒಬ್ಬರನ್ನು ಲಂಕೇಶ್ ಎಂ.ಡಿ. ನಂಜುಂಡಸ್ವಾಮಿ ಎಂದು ಪರಿಚಯಿಸಿದಾಗ(ಇನ್ನೊಬ್ಬರು ಖ್ಯಾತ ಪೆರಿಯಾರ್‌ವಾದಿ ಪ್ರೊ. ಧರ್ಮಲಿಂಗಂ) ನಾನು ದಂಗಾಗಿ ಹೋದೆ. ನಾನು ದಂಗಾಗಲು ಇದ್ದ ಕಾರಣ ಕೇಳಿ ಲಂಕೇಶರು ತಮ್ಮ ಕಿಕ್ಕೀಕೀ ಶೈಲಿಯಲ್ಲಿ ಬಿದ್ದು ಬಿದ್ದು ನಗಲಾರಂಭಿಸಿದರು.

ಆ ನನ್ನ ಕಾರಣ ಹೀಗಿತ್ತು: ಹಿಂದಿನ ವಾರ ತಾನೇ ನಂಜುಂಡಸ್ವಾಮಿಯವರು 'ಆಂದೋಲನ'ದಲ್ಲಿ ಖಾದಿ ವಸ್ತ್ರ ಧಾರಣೆಯನ್ನು ರಾಷ್ಟ್ರಾದ್ಯಂತ ಕಡ್ಡಾಯ ಮಾಡಬೇಕೆಂದು ಲೇಖನ ಬರೆದಿದ್ದರು. ಇಲ್ಲಿ ನೋಡಿದರೆ ಅವರನ್ನು ಕುರಿತ ನನ್ನ ಕಲ್ಪನೆಯೇ ತಲೆಕೆಳಗಾಗುವಂತೆ ತ್ರೀ ಪೀಸ್ ಸೂಟ್‌ಧಾರಿಯಾಗಿ ಬೋ ಟೈ ಕಟ್ಟಿ ಠಾಕೂಠೀಕಾಗಿ ಕೂತಿದ್ದಾರೆ! ಲಂಕೇಶರ ಅಸ್ಖಲಿತ ನಗುವಿನಿಂದ ಅಪ್ರತಿಭರಾದ ನಂಜುಂಡಸ್ವಾಮಿಯವರು 'ಅದು ಸರ್ಕಾರಕ್ಕೆ ನನ್ನ ಸಲಹೆ. ಅದನ್ನು ಸರ್ಕಾರ ಮಾನ್ಯ ಮಾಡಿದ ಮರುದಿನವೇ ನಾನು ಸಂಪೂರ್ಣ ಖಾದಿಧಾರಿಯಾಗುವೆ. ಸಂದೇಹ ಬೇಡ' ಎಂದು ನನಗೆ ತಮ್ಮ ನಿಲುವನ್ನು ವಿವರಿಸಿದರು. ಅದು ಅವರ–ನನ್ನ ಮೊದಲ ಭೇಟಿಯಾದುದರಿಂದ ಆ ಮಾತು ಅಲ್ಲಿಗೇ ನಿಂತಿತು. ಆದರೆ ಮುಂದೆ ಹಲವು ಏರಿಳಿತಗಳನ್ನು ಕಂಡ ನನ್ನ ಮತ್ತು ನಂಜುಂಡಸ್ವಾಮಿಯವರ ಸ್ನೇಹ ಅಲ್ಲಿ ಆಗ ಸ್ಥಾಪಿತವಾಯಿತು.

ಎಂಡಿಎನ್ ಯುವಜನರನ್ನು ಸೆಳೆಯುವುದರಲ್ಲಿ ನಿಸ್ಸೀಮರಾಗಿದ್ದರು. ಅವರು ಆಗಲೇ ಕರ್ನಾಟಕದ ಯುವಜನರ ಪಾಲಿಗೆ ಸೂಜಿಗಲ್ಲಾಗಿದ್ದರು. ಮೈಸೂರಿನ ಪ್ರತಿಷ್ಠಿತ ವಕೀಲರೂ, ಜಮೀನ್ದಾರರೂ ಮತ್ತು ಮೈಸೂರು ಸಂಸ್ಥಾನದ ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರೂ ಆಗಿದ್ದ ಮಹಂತದೇವರು ಅವರ ಮಗನಾಗಿದ್ದ ಎಂ..ಡಿ. ನಂಜುಂಡಸ್ವಾಮಿ ಅರವತ್ತರ ದಶಕದ ಆರಂಭದ ವರ್ಷಗಳಲ್ಲಿ ಜರ್ಮನಿಯಲ್ಲಿ ಉನ್ನತ ಕಾನೂನು ಶಿಕ್ಷಣವನ್ನು ಪೂರ್ತಿಯೋ ಅರ್ಧವೋ

ಮುಗಿಸಿ ಅಲ್ಲಿನ ಸಮಾಜವಾದಿ ಚಳುವಳಿಯಿಂದ ಪ್ರಭಾವಿತರಾಗಿ ಮೈಸೂರಿಗೆ ಬಂದು ಯುವ ಸಮಾಜವಾದಿಗಳ ಮಧ್ಯೆ ತಮ್ಮ ಕಾನೂನು ತಿಳುವಳಿಕೆ ಮತ್ತು ಕ್ರಿಯಾಶೀಲತೆಗಳ ಮೂಲಕ ಎಲ್ಲರ ಗಮನ ಸೆಳೆದಿದ್ದರು. ಲಂಕೇಶ್, ತೇಜಸ್ವಿ, ಚಂಪಾ, ಮಹಾದೇವ, ಶ್ರೀಕೃಷ್ಣ ಆಲನಹಳ್ಳಿ, ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ ಇತ್ಯಾದಿ ಆ ಕಾಲದ ಘಟಾನುಘಟಿ ಲೇಖಕರಲ್ಲದೆ, ಪ. ಮಲ್ಲೇಶ್, ಕೆ. ರಾಮದಾಸ್, ಬಿ.ಎನ್. ಶ್ರೀರಾಂ ಮುಂತಾದ ಚಳುವಳಿಕಾರರೂ ಅವರ ಗರಡಿ ಸೇರಿದ್ದರು. ಅವರು ಅಧಿಕೃತ ಸಮಾಜವಾದಿ ಪಕ್ಷದ ಹಿರಿಯರ ಜಡತೆಯ ವಿರುದ್ಧ ಸಮಾಜವಾದಿ ಯುವಜನ ಸಭಾ ಮೂಲಕ ಬಂಡಾಯ ಸಾರಿದ್ದರು. ಸಮಾಜವಾದಿಗಳಿಗೆ ಸಿದ್ಧಾಂತವೇ ನಾಯಕ; ಯಾವುದೇ ವ್ಯಕ್ತಿಯಲ್ಲ ಎಂದು ಸಾರಿ ಗೋಪಾಲಗೌಡರನ್ನೂ ರೇಗಿಸಿದ್ದರು. ಅವರು ತೇಜಸ್ವಿಯವರೊಡಗೂಡಿ ಸಿದ್ಧಪಡಿಸಿದ್ದ 'ಲೋಹಿಯಾ ಕೆಂಪು ಪುಸ್ತಕ' ಯುವಜನರಲ್ಲಿ ಹೊಸ ವಿಚಾರ ತರಂಗಗಳನ್ನೇ ಎಬ್ಬಿಸಿತ್ತು.

ತಮ್ಮ ಈ ಪಟಾಲಂ ಕಟ್ಟಿಕೊಂಡು ನಂಜುಂಡಸ್ವಾಮಿಯವರು ಮೈಸೂರಿನಲ್ಲಿ ಬ್ರಿಟಿಷ್ ಆಳ್ವಿಕೆಯ ಪಳೆಯುಳಿಕೆಗಳಂತಿದ್ದ ಬ್ರಿಟಿಷ್ ಅಧಿಕಾರಿಗಳ ಪ್ರತಿಮೆಗಳನ್ನು ಉರುಳಿಸುವುದು, ಪ್ರತಿಷ್ಠಿತ ಹೋಟೆಲುಗಳಿಗೆ ಹೋಗಿ ಬೇಕಾದ್ದನ್ನು ತಿಂದು ಸಾಮಾನ್ಯ ಹೋಟೆಲಿನ ಬೆಲೆಯಷ್ಟನ್ನೇ ನೀಡುವ ಹಠ ಮಾಡಿ ಅವುಗಳ ಪ್ರತಿಷ್ಠೆಯನ್ನು ಧಿಕ್ಕರಿಸುವುದು ಬೆಂಗಳೂರಿನಲ್ಲಿ ಮೊದಲ ವೀರಶೈವ ಸಮ್ಮೇಳನ ನಡೆದಾಗ ಅದರ ವಿರುದ್ಧ ಪ್ರತಿಭಟನೆ ನಡೆಸುವುದು(ಈ ಪಟಾಲಂನಲ್ಲಿ ಜಿಎಸ್ಸೆಸ್, ಚಿದಾನಂದಮೂರ್ತಿ ಮುಂತಾದವರೂ ಸೇರಿದ್ದರು) ಪ್ರಧಾನಿ ಇಂದಿರಾ ಗಾಂಧಿ ಬೆಂಗಳೂರಿಗೆ ಬಂದಾಗ ಅವರ ಭದ್ರತೆಯನ್ನೂ ಭೇಧಿಸಿ ಅವರ ಆಡಳಿತ ನೀತಿ ವಿರುದ್ಧ ಯುವಜನರಿಂದ ಘೋಷಣೆ ಕೂಗಿಸುವುದು, ಘಟಿಕೋತ್ಸವದಲ್ಲಿ ಪಾಶ್ಚಿಮಾತ್ಯ ದಿರಿಸುಗಳ ವಿರುದ್ಧ ಪ್ರತಿಭಟಿಸುವುದು, ಕ್ಷಾಮ ಪರಿಹಾರ ಕಾರ್ಯಕ್ರಮಗಳು ಸರಿಯಾಗಿ ನಡೆಯುತ್ತಿಲ್ಲವೆಂದು ವಿಧಾನಸಭೆಯಲ್ಲಿ ಕರಪತ್ರ ತೂರುವುದು, ಕ್ಷಾಮ ಪರಿಹಾರ ನಿಧಿ ಕೂಡಿಸಲು ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿ ಬೂಟ್ ಪಾಲಿಷ್ ಮಾಡಿ ಹಣ ಸಂಗ್ರಹಿಸುವುದು, ಕೊನೆಗೆ ನವ ನಿರ್ಮಾಣ ಕ್ರಾಂತಿ ಸಮಿತಿಯ ಮೂಲಕ ತಮ್ಮ ಪಟಾಲಮ್ಮನ್ನು ಜೆಪಿ ಚಳುವಳಿಯಲ್ಲಿ ತೊಡಗಿಸಿದ್ದು ಇತ್ಯಾದಿ ಚಟುವಟಿಕೆಗಳ ಮೂಲಕ ವಿದ್ಯಾರ್ಥಿ ದೆಸೆಯಲ್ಲೇ ನನ್ನ ಕುತೂಹಲಕ್ಕೆ ಕಾರಣರಾಗಿದ್ದರು. ಇದಲ್ಲದೆ ಬೂಸಾ ಚಳುವಳಿ, ಜಾತಿ ವಿನಾಶ ಸಮ್ಮೇಳನ ಮತ್ತು ನವ್ಯ ಸಾಹಿತ್ಯ ಚಳುವಳಿಯು ವೈದಿಕ ರಾಜಕಾರಣದ ಮುಖವಾಣಿ ಎಂದು ವಿಶ್ಲೇಷಿಸಿ ಅದರ ವಿರುದ್ಧ ದೊಡ್ಡ ಬಂಡಾಯವನ್ನೇ ಸಾರಿದ ಅಖಿಲ ಕರ್ನಾಟಕ ಲೇಖಕರ ಮತ್ತು ಕಲಾವಿದರ ಒಕ್ಕೂಟದ ಮೊದಲ ಸಮ್ಮೇಳನದ ರೂವಾರಿ ಆಗಿದ್ದರ್ದೆಂಬ ಸಂಗತಿ ಮತ್ತು ಸ್ವತಃ ಅವರು ಮೇಲ್ಜಾತಿಗೆ ಸೇರಿದ್ದರೂ, ಹಾವನೂರರ ಮಿತ್ರರಾಗಿ ಅವರ ಆಯೋಗದ ವರದಿಯ ಹಿಂದಿನ ಸ್ಫೂರ್ತಿಯಾಗಿದ್ದುದರ ಮೂಲಕ ಸಾಮಾಜಿಕ ನ್ಯಾಯ ಕುರಿತು ಅವರು ತೋರಿದ್ದ ಕಾಳಜಿ ಅವರದು ಬರಿ ತಂಟೆಕೋರ ವ್ಯಕ್ತಿತ್ವವಲ್ಲ, ಅವರ ಕಾರ್ಯಕ್ರಮಗಳ ಹಿಂದೆ

ಒಂದು ಗಾಢವಾದ ತತ್ವಚಿಂತನೆಯೂ ಇದೆ ಎಂಬ ಅರಿವಾಗಿ ಅವರ ಬಗ್ಗೆ ಗೌರವವೂ ಮೂಡಿತ್ತು.

ನನ್ನ ವಿದ್ಯಾರ್ಥಿ ದೆಸೆಯಲ್ಲಿ ಮನೆಯವರ ದಿಗ್ಬಂಧನಗಳಿಂದಾಗಿ ಈ ಚಟುವಟಿಕೆಗಳ ಮೂಕ ಪ್ರೇಕ್ಷಕ ಮಾತ್ರನಾಗಿದ್ದ ನಾನು ಈಗ ಈ ಎಲ್ಲ ದಿಗ್ಬಂಧನಗಳಿಂದ ಮುಕ್ತನಾಗಿದ್ದುದರಿಂದ ಬಹು ಬೇಗನೆ ಅವರ ಅನುಯಾಯಿಯಾದೆ. ಅಷ್ಟೇಕೆ, ಅವರ ಆಪ್ತ ಬಳಗಕ್ಕೂ ಸೇರಿದವನಾದೆ. ನಾನು ಬೆಂಗಳೂರಿಗೆ ಬಂದಾಗಲೆಲ್ಲ ಅವರು ಊಟ-ತಿಂಡಿ-ಬೀರ್‌ಗಳೊಡನೆ ಆತ್ಮೀಯತೆಯಿಂದ ನನ್ನನ್ನು ಉಪಚರಿಸುತ್ತಿದ್ದರು. ಒಮ್ಮೆ ಹೈದರಾಬಾದ್‌ನಲ್ಲಿ ಪ್ರೊ॥ ಕೇಶವರಾವ್ ಜಾಧವ್ ಅವರು ಆಯೋಜಿಸಿದ್ದ 'ಲೋಹಿಯಾ ವಿಚಾರ ಮಂಚ್'ನ ಸಮವೇಶದಲ್ಲಿ ಒಟ್ಟಿಗೆ ಎರಡು ಮೂರು ದಿನ ಇದ್ದಾಗ(ಅಲ್ಲಿಗೆ ಕಿಷನ್ ಪಟ್ನಾಯಕ್, ರವಿವರ್ಮ ಕುಮಾರ್, ಕೆ.ಟಿ.ಶಿವಪ್ರಸಾದ್ ಕೂಡ ಬಂದಿದ್ದರು) ಅವರು ನನ್ನನ್ನು ಲೋಹಿಯಾರ ಪೋಷಕರಲ್ಲೊಬ್ಬರಾಗಿದ್ದ ಬದ್ರಿ ವಿಶಾಲ್ ಪಿಟ್ಟಿ ಅವರ ಅಂಗಡಿಗೆ ಕರೆದುಕೊಂಡು ಹೋಗಿ ಹಳೆಯ 'ಮ್ಯಾನ್‌ಕೈಂಡ್' ಸಂಪುಟಗಳನ್ನು ನನಗೆ ಕೊಡಿಸಿದರು. ಅವು ಮತ್ತು ಅದಕ್ಕಿಂತ ಹೆಚ್ಚಾಗಿ ಅವರು ಮುಂದೊಂದು ದಿನ ತಮ್ಮ ಹಸ್ತಾಕ್ಷರಗಳೊಂದಿಗೆ ನೀಡಿದ 'ಲೋಹಿಯಾ ಅಂಡ್ ಅಮೆರಿಕಾ ಮೀಟ್' ಪುಸ್ತಕ ಅವರ ನೆನಪಿನಲ್ಲಿ ಭದ್ರವಾಗಿ ನನ್ನ ಬಳಿ ಇದೆ.

ಈ ಸಂಬಂಧ ಇದ್ದಕ್ಕಿದ್ದಂತೆ ಕಡಿದುಹೋದದ್ದು 1977ರ ಜೆಪಿಯವರ ಜನತಾ ಪಕ್ಷದ ಪ್ರಯೋಗ ವಿಫಲವಾಗಿ ಕಿಷನ್ ಪಟ್ನಾಯಕ್‌ರ ಮುಂದಾಳತ್ವದಲ್ಲಿ 1980ರಲ್ಲಿ ಹೊಸದೊಂದು ಸಮಾಜವಾದಿ ಪಕ್ಷ ಕಟ್ಟಲು ಬೆಂಗಳೂರಿನಲ್ಲಿ ನಾವೆಲ್ಲ ಸೇರಿ ಸಂಘಟಿಸಿದ್ದ ಸಮತಾ ಸಮ್ಮೇಳನದ ಸಂದರ್ಭದಲ್ಲಿ. ಸಮ್ಮೇಳನದ ಕೊನೆಯಲ್ಲಿ ಹೊಸ ಪಕ್ಷದ ಸಂಘಟನೆಗಾಗಿ ರಾಜ್ಯ ಸಂಚಾಲಕರನ್ನು ನೇಮಿಸುವ ವಿಷಯ ಬಂದಾಗ ನಾನು ನನ್ನೆಲ್ಲ ಯುವ ಗೆಳೆಯರೊಂದಿಗೆ ಸಮಾಲೋಚಿಸಿ ರವಿವರ್ಮ ಕುಮಾರ್‌ರ ಹೆಸರನ್ನು ಸೂಚಿಸಿದೆ. ಇದು ನನ್ನ ನಿರೀಕ್ಷೆಗೆ ವಿರುದ್ಧವಾಗಿ ಎಂಡಿಎನ್‌ರನ್ನು ಎಷ್ಟು ಸಿಟ್ಟಿಗೆಬ್ಬಿಸಿತೆಂದರೆ, ಸಮ್ಮೇಳನನ ಮುಕ್ತಾಯ ಕಂಡು ನಾನು ಅಲ್ಲಿಂದ ಹೊರಡುವ ಮುನ್ನ ಅವರಿಗೆ ವಿದಾಯ ಹೇಳಲು ಹೋದರೆ ಅವರು ನನ್ನನ್ನು ದೂರ ತಳ್ಳಿ, 'ನನ್ನ ನಿಮ್ಮ ಸಂಬಂಧ ಇಲ್ಲಿಗೆ ಮುಗಿಯಿತು' ಎಂದು ಘೋಷಿಸಿಬಿಟ್ಟರು. ಆಘಾತಗೊಂಡು ಪೆಚ್ಚಾದ ನಾನು ಮತ್ತೆ ಅವರ ಸುದ್ದಿಗೆ ಹೋಗಲಿಲ್ಲ. ಅವರೂ ನಂತರ ಸಮಾಜವಾದಿ ಚಳುವಳಿಯ ಸುದ್ದಿಯನ್ನು ಬಿಟ್ಟು ರೈತ ಚಳುವಳಿಯ ಕಡೆ ಗಮನ ಹರಿಸಿದರು. ಅದನ್ನೇ ಸಮಾಜವಾದಿ ಚಳುವಳಿಯಾಗಿ ಬೆಳೆಸುವುದಾಗಿ ಹೇಳಿಕೊಂಡು ನನ್ನ ಕೆಲ ಯುವ ಸಮಾಜವಾದಿ ಗೆಳೆಯರನ್ನೂ ಅತ್ತ ಕಡೆ ಸೆಳೆದುಕೊಂಡರು.

ನಂಜುಂಡಸ್ವಾಮಿ ಯುವಜನರನ್ನು ಆಕರ್ಷಿಸಿ ಪ್ರೀತಿಯಿಂದ ಬೆಳೆಸುವರು ಎಂಬ ಪ್ರತೀತಿ ಇದ್ದಂತೆಯೇ ಅವರು ತಮ್ಮನ್ನು ಪ್ರಶ್ನಿಸುವ, ಮೀರಿ ಬೆಳೆಯುವ ಸೂಚನೆ ತೋರಿದವರನ್ನು ಅಷ್ಟೇ ಕಠೋರವಾಗಿ ಹತ್ತಿಕ್ಕುವರೆಂಬ ಪ್ರತೀತಿಯೂ ಇತ್ತು.. ಆದರೆ ನನ್ನನ್ನು ಹಾಗೆ ಹತ್ತಿಕ್ಕಲು ಅವರಿಗೆ ಅವಕಾಶವೇ ಕೊಡದಂತೆ

ನಾನು ಅವರಿಂದ ದೂರ ಸರಿದೆ. ಅವರ ಈ ಪ್ರವೃತ್ತಿಯನ್ನು ನಾನು ಅವರು ನಡೆಸಿದ್ದ ಸಮಾಜವಾದಿ ಅಧ್ಯಯನ ಶಿಬಿರಗಳಲ್ಲೂ ನೋಡಿದ್ದೆ. ಪ್ರಶ್ನೆ ಕೇಳಿದವರಿಗೆ ಅಸಂಬದ್ಧ ಮರುಪ್ರಶ್ನೆ ಹಾಕಿ ಅವರು ಉತ್ತರಿಸಲಾಗದೆ ತಡವರಿಸುವಂತೆ ಮಾಡಿ ಕೂರಿಸುತ್ತಿದ್ದರು. ಹೊಸಬರನೇಕರು ಇವರ ಸಹವಾಸವೇ ಬೇಡವೆಂದು ಚಳುವಳಿಯನ್ನೇ ಬಿಟ್ಟುಹೋಗುತ್ತಿದ್ದರು. ಇದು ರೈತ ಅಧ್ಯಯನ ಶಿಬಿರಗಳಲ್ಲಿಯೂ ಮುಂದುವರೆಯಿತೆಂದೂ ಕೇಳಿರುವೆ.

ಆದರೆ ಅಲ್ಲಿ ಪ್ರತಿಭಟಿಸುವವರು ಕಡಿಮೆ ಇದ್ದರು. ರೈತರು ತೀರಾ ಸಂಕಷ್ಟದಲ್ಲಿದ್ದುದರಿಂದ ಮತ್ತು ಎಂಡಿಎನ್ ತಮ್ಮ ಸಮಾಜವಾದಿ ಸಾಹಸ ಅಪೂರ್ಣವಾದುದರ ಅತೃಪ್ತಿಯಿಂದಲೋ ಅರ್ಪಣಾ ಮನೋಭಾವದಿಂದ ಸಂಘಟನೆಗಾಗಿ ದುಡಿಯತೊಡಗಿದ್ದರಿಂದ ರೈತರು ಅವರ ವ್ಯಕ್ತಿತ್ವದಲ್ಲಿಯೇ ಅಡಕವಾಗಿದ್ದ ಕಠೋರತೆಯನ್ನು ಸಹಿಸಿದರು. ನಾನೊಮ್ಮೆ ಅವರ ರೈತ ಅಧ್ಯಯನ ಶಿಬಿರಕ್ಕೆ 'ಲಂಕೇಶ್ ಪತ್ರಿಕೆ'ಯ ಪರವಾಗಿ ವರದಿ ಮಾಡಲು ಹೋಗಿ ಅವರ ಕಠೋರತೆ ಇನ್ನೂ ತೀವ್ರವಾಗಿರುವುದನ್ನು ಖಚಿತಪಡಿಸಿಕೊಂಡು ಬಂದಿದ್ದೆ. ಅಂದು ಸುಂದರೇಶರು ಮಧ್ಯೆ ಪ್ರವೇಶಿಸದಿದ್ದಲ್ಲಿ ನಂಜುಂಡಸ್ವಾಮಿಯವರ ಪ್ರಚೋದನೆಯಿಂದ ರೈತರು ನನ್ನ ಮೇಲೆ ದೈಹಿಕ ದಾಳಿಯನ್ನೇ ನಡೆಸುತ್ತಿದ್ದರೇನೋ! ಅವರ ಅರ್ಧ ಕೋಪ ನನ್ನ ಮೇಲಿದ್ದರೆ ಇನ್ನರ್ಧ ಕೋಪ ಲಂಕೇಶರ ಮೇಲೆ ಇತ್ತು! ಪತ್ರಿಕೆ ರೈತ ಚಳುವಳಿಯ ಬಗ್ಗೆ ಸಲ್ಲದ ಅಪಪ್ರಚಾರ ಮಾಡುತ್ತಿದೆಯೆಂಬುದು ಅವರ ಈ ಕ್ರೋಧಕ್ಕೆ ಕಾರಣವಾಗಿತ್ತು.ಇದಕ್ಕೆ ಪ್ರತಿಯಾಗಿ ರೈತಸಂಘದಿಂದಲೇ 'ನಮ್ಮ ನಾಡು' ಎಂಬ ಪತ್ರಿಕೆ ಆರಂಭಿಸಿದ ಅವರು ಅದರ ಹಣದ ಲೆಕ್ಕದ ಗೋಜಲಿನಲ್ಲಿ ಸಿಕ್ಕಿಹಾಕಿಕೊಂಡು ಅದನ್ನು ನಿಲ್ಲಿಸಬೇಕಾಯಿತು

ಆದರೆ ಆಶ್ಚರ್ಯವೆಂದರೆ ಇದೆಲ್ಲ ಆದ ನಂತರ ಒಮ್ಮೆ 1981ರಲ್ಲಿ ಅವರು ಸುಂದರೇಶರೊಂದಿಗೆ ಯಾವುದೋ ಮಾತುಕತೆಗೆಂದು ದೆಹಲಿಗೆ ಬಂದಾಗ ನನಗೆ ಕರೆ ಕಳಿಸಿದರು! ನಾನೂ ಲಂಕೇಶರೊಂದಿಗೆ ಬಾಳಲಾರದವನಾಗಿ ದೆಹಲಿ ಆಕಾಶವಾಣಿ ಹುದ್ದೆಗೆ ವಾಪಸಾಗಿದ್ದ ಕಾರಣದಿಂದಲೋ ಏನೋ ನನ್ನ ಮೇಲಿನ ಸಿಟ್ಟು ಇಳಿದಿತ್ತು. ಕರ್ನಾಟಕ ಭವನದಲ್ಲಿ ಅವರ ಸುಖ ವಾಸ. ದಿನವೂ ಕೋಳಿಯ ಊಟ! ಸವಿ ಮಾತುಕತೆ, ಶತ್ರುಗಳ ಮೇಲೆ ಕಟು ವ್ಯಂಗ್ಯ ಬಾಣಗಳ ಪ್ರಯೋಗ! ಮತ್ತೆ ನನಗೆ ಅವರ ಆ ಹಳೆಯ ಉಪಚಾರದ ದಿನಗಳು ನೆನಪಿಗೆ ಬಂದವು. ಆದರೆ ಅದೇ ಒಂದು ದಿನ ದುದ್ದದಲ್ಲಿ ರೈತರ ಪ್ರತಿಭಟನೆಯ ಮೇಲೆ ಗುಂಡೂರಾಯರ ಸರ್ಕಾರ ಗೋಲೀಬಾರ್ ಮಾಡಿ ಇಬ್ಬರೋ ಮೂವ್ವರೋ ರೈತರನ್ನು ಕೊಂದಿತ್ತು. ಆ ಸುದ್ದಿಯನ್ನು ನಾನೇ ಅಂದು ಮಧ್ಯಾಹ್ನದ ವಾರ್ತೆಗಳಲ್ಲಿ ಬಿತ್ತರಿಸಿ ಬಂದು ಇವರಿಗೂ ಹೇಳಿದೆ. ಸುಂದರೇಶ್ ಗೊಳೋ ಎಂದು ಅಳಲು ಶುರು ಮಾಡಿದರೆ ಎಂಡಿಎನ್ ತಲೆ ತಗ್ಗಿಸಿ ಯೋಚನಾಮಗ್ನರಾಗಿದ್ದರು. ಇದ್ದಕ್ಕಿದ್ದಂತೆ ಯಾರೊಂದಿಗೋ ಮಾತನಾಡಿ ಬಟ್ಟಬರೆ ಕಟ್ಟಿಕೊಂಡು ಬೆಂಗಳೂರ ಕಡೆ ಹೊರಟೇಬಿಟ್ಟರು.

ಇದಾದ ನಂತರದಲ್ಲೇ ನಾನು ಕರ್ನಾಟಕಕ್ಕೆ ಬಂದೆ. ಕಾರ್ಯ ಹುದ್ದೆ

ಭದ್ರಾವತಿಯಲ್ಲಿದ್ದುದರಿಂದ ರೈತ ಸಂಘದ ಕ್ರಿಯಾಕೇಂದ್ರಕ್ಕೆ ಹತ್ತಿರವಾಗಿ ಅದನ್ನು ಆಸಕ್ತಿ-ಕುತೂಹಲಗಳಿಂದ ಗಮನಿಸುತ್ತಿದ್ದೆ. ಸಂಘಟನೆ ಬೆಳೆಯುತ್ತಿದ್ದಂತೆ, ಅದು ಸರ್ಕಾರಕ್ಕೆ ಸವಾಲು ಹಾಕುವ ತಾಕತ್ತು ಗಳಿಸಿಕೊಳ್ಳುತ್ತಿದ್ದಂತೆ, ಎಂಡಿಎನ್ ಅವರಲ್ಲಿದ್ದ ಮಾನವತೆಯ ತೇವಾಂಶ ಒಣಗಿ ಹೋಗತೊಡಗಿತ್ತು. ಆಗಲೇ ರೈತ ಸಂಘದಲ್ಲಿ ಒಡಕುಗಳು ಕಾಣತೊಡಗಿ, ಅದು ತೋರಿಕೆಗಾಗಿಯಾದರೂ ಇದ್ದ ತನ್ನ ಸಮಾಜವಾದಿ ದೃಷ್ಟಿ ಕೇಂದ್ರವನ್ನು ಕಳೆದುಕೊಂಡು ನಂಜುಂಡಸ್ವಾಮಿಯವರ ವೈಯುಕ್ತಿಕ ಸಂಘಟನೆಯಾಗತೊಡಗಿತ್ತು. ನಂಜುಂಡಸ್ವಾಮಿಯವರಿಗೆ ರೈತಸಂಘವನ್ನು ಒಂದು ಸಮಾಜವಾದಿ ಸಂಘಟನೆಯಾಗಿ, ಸಮಾನತೆಗೆ ತುಡಿವ ಜಾತ್ಯತೀತ ಕಾರ್ಯಪಡೆಯನ್ನಾಗಿ ರೂಪಿಸುವ ಉದ್ದೇಶವಿದ್ದಿರಬಹುದು. ಆದರೆ ರೈತ ಸಂಘದ ನಾಯಕರಾದ ಮೇಲೆ ಅವರು ತಮ್ಮ ಆಧುನಿಕ ಉಡುಪು ಬದಲಿಸಿ ಹೊರನೋಟಕ್ಕೆ ದೇಸಿಯಾದರಾದರೂ, ಒಳಗೆ ಎಲ್ಲ ದೃಷ್ಟಿಗಳಿಂದಲೂ ಆಧುನಿಕರಾಗಿದ್ದ ಕಾರಣ ಅವರು ರೈತ ಸಮುದಾಯವನ್ನು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳುವಲ್ಲಿ ಸೋತರೆಂದೇ ಹೇಳಬೇಕು.

ನಿಜ ಅವರ ನೇತೃತ್ವದಲ್ಲಿ ರಾಜ್ಯ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕಂಡರಿಯದಂತಹ ಲೋಕಶಕ್ತಿಯ ಪ್ರದರ್ಶನ, ಸರ್ಕಾರಕ್ಕೆ ಸವಾಲು, ಪ್ರತಿಭಟನೆ, ಪ್ರತಿ-ಕಾರ್ಯಕ್ರಮಗಳನ್ನು ಕಂಡಿತು. ಕರ್ನಾಟಕದಲ್ಲಿ ಸಮಾಜವಾದಿ ಕ್ರಾಂತಿಯಗುವ ಕಾಲ ದೂರವಿಲ್ಲ ಎನ್ನಿಸಿಯೂ ಬಿಟ್ಟಿತ್ತು. ಹಾಗಾಗಿಯೇ ನಾವು ಕೆಲವು ಗೆಳೆಯರು ದಲಿತ ಚಳುವಳಿ ಮತ್ತು ರೈತ ಚಳುವಳಿಯ ನಾಯಕರನ್ನು ಒಟ್ಟುಗೂಡಿಸಿ ಒಂದು ಐಕ್ಯ ರಾಜಕೀಯ ಶಕ್ತಿಯ ಉದಯದ ಪ್ರಯತ್ನ ಮಾಡಿದೆವು. ಆದರೆ ಎಂಡಿಎನ್ ಆ ಹೊತ್ತಿಗೆ ಯಾರನ್ನೂ ನಂಬದ ಅತಂತ್ರ ಸ್ಥಿತಿ ತಲುಪಿದ್ದರು. ಅವರು ವಿಶ್ವ ರೈತನಾಯಕರಾಗುವ ಹವಣಿಕೆಯಲ್ಲಿದ್ದರು. ಇದರ ಅಂತಿಮ ಪರಿಣಾಮವಾಗಿಯೇ ರೈತ ಸಂಘ ಒಡೆಯಿತು. ಅವರ ಅನುಯಾಯಿಗಳನೇಕರು ಭ್ರಮನಿರಸನ ಹೊಂದಿದ್ದರು ಅಥವಾ ದೂರ ಸರಿದಿದ್ದರು. ನಂಜುಂಡ ಸ್ವಾಮಿ ಒಂಟಿಯಾಗಿದ್ದರು.

ಆ ನಂತರದ ಸ್ವಲ್ಪ ಕಾಲದಲ್ಲೇ-1989ರಲ್ಲಿ-ನಾನು ಅವರನ್ನು ನಾನಿದ್ದ ಬೆಂಗಳೂರು ಆಕಾಶವಾಣಿಗಾಗಿ ಸಂವಿಧಾನ ಕುರಿತ ಭಾಷಣ ಮಾಲಿಕೆಗಾಗಿ ಆಹ್ವಾನಿಸಿದೆ. ಅವರು ಬಂದರು. ಆದರೆ ಸುಸ್ತಾಗಿದ್ದರು. ಮತ್ತೆ ಅದೇ ಪ್ರೀತಿಯಿಂದ ಮಾತಾಡಿದರು. ಪಕ್ಕದ ಪರಾಗ್ ಹೋಟೆಲ್ಲಿಗೆ ಕರೆದುಕೊಂಡು ಹೋಗಿ ನೆನಪಿಟ್ಟು ನನಗಿಷ್ಟವಾದ ರವೆ ಇಡ್ಲಿ ಕೊಡಿಸಿದರು. ನಮ್ಮ ನಿಲಯ ನಿರ್ದೇಶಕರನ್ನು ಭೇಟಿಯಾಗಿ ನನ್ನ ಬಗ್ಗೆ ನಾಲ್ಕು ಒಳ್ಳೆಯ ಮಾತನಾಡಿದರು. ಲಂಕೇಶರನ್ನು ಶಪಿಸಿದರು. ಪತ್ನಿ ಸಮೇತ ಮನೆಗೆ ಬರುವಂತೆ ಆಹ್ವಾನಿಸಿದರು. ಅದೇ ನನ್ನ ಅವರ ಕೊನೆಯ ಭೇಟಿ.

ನಂತರ ಅವರನ್ನು ನೋಡಿದ್ದು ಶವವಾಗಿ, 2004ರಲ್ಲಿ. ಅಂತಿಮ ಯಾತ್ರೆಯ ಭಾಗವಾಗಿ ಅದು ಮೈಸೂರಿಗೆ ಬಂದಾಗ. ನಾನೂ ನನ್ನ ಪತ್ನಿ ರಾಜಶೇಖರ ಕೋಟಿಯವರ ಜೊತೆ ಹೋಗಿ ಚಾಮರಾಜನಗರ ಸಮೀಪದಲ್ಲಿನ ಭವಿಷ್ಯದ ಅಂತಾರಾಷ್ಟ್ರೀಯ ಕೃಷಿ ಕ್ಷೇತ್ರವೆಂದು ಹೇಳಲಾದ 'ಅಮೃತಭೂಮಿ'ಯಲ್ಲಿ ನಡೆದ ಅಂತಿಮ ಸಂಸ್ಕಾರದಲ್ಲಿ ಭಾಗವಹಿಸಿ ಬಂದೆವು.


ಮತ್ತೆ ಮೊನ್ನೆ ತಾನೇ ನಾವು ಕೆಲವು ಗೆಳೆಯರು ನಮ್ಮ ಕುಟುಂಬಗಳೊಂದಿಗೆ ಚಾಮರಾಜನಗರದ ಕಡೆ ಹೋಗಿದ್ದಾಗ ನೆನಪಿಟ್ಟು ಅಮೃತಭೂಮಿಗೆ ಹೋಗಿ ಅವರ ಸಮಾಧಿಗೆ ಗೌರವ ಸಲ್ಲಿಸಿ ಬಂದೆವು. ಒಂದು ಕ್ಷಣ ತೀವ್ರ ಬೇಸರವೂ ಅನಿಸಿತು. ಯಾವಾಗಲೂ ಜನಮಧ್ಯವಿದ್ದ ಎಂಡಿಎನ್ ಇಲ್ಲೇಕೆ ಜನಸಂಪರ್ಕವೇ ಇಲ್ಲದ ದೂರದ ಈ ವಿಶಾಲ ಬಿಸಿಲು ಬಯಲಲ್ಲಿ ತಲೆ ಮೇಲೆ ಸೂರಿಲ್ಲದೆ ಒಂಟಿಯಾಗಿ ಅನಾಥರಂತೆ ಮಲಗಿದ್ದಾರೆ ಎಂದು. ವಿಶ್ವ ರೈತ ನಾಯಕರಾಗುವ ಹಂಬಲವೇ ಅವರನ್ನು ದಾರಿ ತಪ್ಪಿಸಿತೇ? ಗೊತ್ತಿದ್ದವರು ಹೇಳಬೇಕು.

–ಡಿ.ಎಸ್.ನಾಗಭೂಷಣ

(ಮೇ, 2013)



ವಿಶಿಷ್ಟ ಪ್ರತಿಭೆಯ ಪೂರ್ಣಚಂದ್ರ ತೇಜಸ್ವಿ



ಕರ್ನಾಟಕದಲ್ಲಿ ಸಮಾಜವಾದಿ ಚಳುವಳಿಯನ್ನು ಆರಂಭದಲ್ಲಿ ಕಟ್ಟಿದವರು ಗೋಪಾಲಗೌಡರಾದಿಯಾಗಿ ರಾಜಕೀಯ ಕಾರ್ಯಕರ್ತರೇ ಆದರೂ, ಅದನ್ನು ತಾತ್ವಿಕವಾಗಿ ಪೋಷಿಸಿ ಬಲಪಡಿಸಿದವರಲ್ಲಿ ಅನೇಕ ಬುದ್ಧಿಜೀವಿ-ಲೇಖಕರ ಪಾತ್ರವೂ ಬಹು ಮಹತ್ವದ್ದು. ಅಂಥಹಹವರಲ್ಲಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಪ್ರಮುಖರು. ಕುವೆಂಪು ಅವರ ಮಗನಾಗಿದ್ದ ತೇಜಸ್ವಿಯವರು ಶಿವಮೊಗ್ಗಕ್ಕೆ ಇಂಟರ್‌ಮೀಡಿಯೇಟ್ ಓದುವುದಕ್ಕೆ ಬಂದಾಗಲೇ ಸಮಾಜವಾದಿ ಚಳುವಳಿಯು ಕಾಗೋಡು ಸತ್ಯಾಗ್ರಹದ ರೂಪದಲ್ಲಿ ಸುಂಟರಗಾಳಿಯಂತೆ ಶಿವಮೊಗ್ಗ ಜಿಲ್ಲೆಯಲ್ಲಿ ಬೀಸುತ್ತಿದ್ದಾಗ ಸಹ್ಯಾದ್ರಿ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದ ತೇಜಸ್ವಿಯವರೂ ಸಹಪಾಠಿಗಳಾಗಿದ್ದ ನಾನು ಸ್ವಾಮಿರಾವ್, ಕೋಣಂದೂರು ಲಿಂಗಪ್ಪನವರಂತೆ ಸಮಾಜವಾದಿ ಚಳುವಳಿಯ ಸುಳಿಗೆ ಸಿಕ್ಕಿಹಾಕಿಕೊಳ್ಳದೆ ಇರಲು ಸಾಧ್ಯವಿರಲಿಲ್ಲ. ಲೋಹಿಯಾ ಆಗ ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸಲು ಬಂದು ಆರೆಸ್ಟಾಗಿ ದೊಡ್ಡ ಸಂಚಲನವನ್ನೇ ಉಂಟು ಮಾಡಿದ್ದರು, ಗೋಪಾಲಗೌಡರು ಆಗ ಎಲ್ಲರ ಕಣ್ಮಣಿ!

ಇಂಟರ್‌ಮೀಡಿಯೆಟ್ ಮುಗಿಸಿ ಸಹ್ಯಾದ್ರಿ ಕಾಲೇಜಿಂದ ಮೈಸೂರು ಮಹಾರಾಜಾಸ್ ಕಾಲೇಜಿಗೆ ಸೇರಿದ ಮೇಲೆ ಮೈಸೂರಿನ ಹಿರಿಯ ಲಾಯರ್ ಟಿ.ಎನ್. ನಾಗರಾಜ್‌ರವರು ಹಿರಿಯ ಸಮಾಜವಾದಿಗಳಾಗಿದ್ದವರು ಸಮಾಜವಾದಿ ಯುವಜನ ಸಭಾಗೆ ಸೇರಿದ್ದ ನಮಗೆಲ್ಲ ಏನಾದರೊಂದು ಕಾರ್ಯಕ್ರಮ ರೂಪಿಸುತ್ತಿದ್ದರು. ಮೊದಲು ಕನ್ನಡದ ಕೆಲಸ ಎಂದ್ರೆ ಪ್ರತಿಯೊಂದು ಅಂಗಡಿ, ಹೋಟೆಲ್, ಸರ್ಕಾರಿ ಕಛೇರಿ ನಾಮಫಲಕಗಳು ಕನ್ನಡದಲ್ಲೇ ಇರಬೇಕು. ಇಲ್ಲ ಎಂದ್ರೆ ಕಪ್ಪು ಬಣ್ಣ - ಬ್ರಷ್ ಲಿಂಗಪ್ಪನವರ ಕೈಗೆ ಕೆಲಸ ಕೊಡ್ತು ಎಂತಲೇ ತೀರ್ಮಾನ. ಆದ್ರೆ ಮೊದಲು ಅಂತಹವರಿಗೆ ಪೋಸ್ಟ್‌ಕಾರ್ಡ್ ಮೂಲಕ ಎಚ್ಚರಿಕೆಯ ಪತ್ರ ರವಾನೆಯಾಗುತ್ತಿತ್ತು. ಇಡೀ ಮೈಸೂರು ನಗರಕ್ಕೆ ಪತ್ರ ಬರೆಯುವುದೆಂದ್ರೆ ಎಷ್ಟು ಪತ್ರ ಬರೆಯಬೇಕು ಊಹಿಸಿ. ಹತ್ತಿರದಲ್ಲಿ ಸಿಕ್ಕುತ್ತಿದ್ದವರು, ನಾನು, ತೇಜಸ್ವಿ, ಬಂದಗದ್ದೆ ರಮೇಶ, ಸಾಗರದ ಪ್ರಭಾಕರ ಮುಂತಾದವರು. ಮಹಾರಾಜ ಕಾಲೇಜಿನ ಹಿಂಭಾಗದ ಓರಿಯಂಟಲ್ ಲೈಬ್ರರಿ ಜಗುಲಿಯ ಮೇಲೆ ಕುಳಿತು ನಡು ರಾತ್ರಿವರೆಗೆ ಕೈಯಿಂದ ಪತ್ರ ಬರೆದು ಟಪಾಲಿಗೆ ಹಾಕುವುದು. ತಪ್ಪನ್ನು ತಿದ್ದಿಕೊಳ್ಳದ ಬೋರ್ಡಿಗೆ ಕರಿಬಣ್ಣ ಬಳಿಯುವುದು ವಗೈರೆ, ವಗೈರೆ.

ದಸರಾ ಬಂತೆಂದರೆ ಆನೆ ಮೇಲಿನ ಅಂಬಾರಿಯಲ್ಲಿ ಮಹಾರಾಜರು ಕೂರಬಾರದು. ಕಪ್ಪು ಬಾವುಟದ ಪ್ರದರ್ಶನ ಸಮಾಜವಾದಿಗಳಿಂದ ನಡೆಸುವುದು ಲಿಂಗಪ್ಪನವರ ಜವಾಬ್ದಾರಿಯಾದ್ದರಿಂದ ಅವರಿಗೆ ಸಿಗುವ ಹತ್ತಿರದ

ಕಾರ್ಯಕರ್ತರೆಂದರೆ ನಾನು ಮತ್ತು ತೇಜಸ್ವಿಯವರೊಂದೊಡಗೂಡಿದ ಯುವಕರ ದಂಡು. ಈ ಗಲಾಟೆಯಲ್ಲಿ ಪೋಲೀಸಿನವರು ನಮ್ಮ ಅಂಡು ಪುಡಿಮಾಡಿದ್ದರು. ತೇಜಸ್ವಿ ಲಾಠಿ ಏಟಿನ ರುಚಿ ಕಂಡಿದ್ದರು. ಇವೆಲ್ಲ ಬಹಿರಂಗ ಚಟುವಟಿಕೆಗಳ ಮಧ್ಯೆ ಕಾಫಿ ಹೌಸ್ ಮೈಸೂರು ಇಲ್ಲಿ ನಡೆಯುತ್ತಿದ್ದ ಸಾಹಿತ್ಯ, ಸಮಾಜವಾದಿ ಸಿದ್ಧಾಂತ ಕುರಿತ ಚರ್ಚೆಗಳಲ್ಲಿ ತೇಜಸ್ವಿ ಗಂಭೀರವಾಗಿ ಭಾಗವಹಿಸುತ್ತಿದ್ದರು. ಜರ್ಮನಿಯಿಂದ ಆಗತಾನೆ ಮೈಸೂರಿಗೆ ಬಂದಿದ್ದ ಎಂ.ಡಿ. ನಂಜುಂಡಸ್ವಾಮಿ ಸಮಾಜವಾದಿ ಯುವಜನ ಸಭಾದ ಕಾರ್ಯಕ್ರಮಗಳ ನೇತೃತ್ವ ವಹಿಸಿ ಲೋಹಿಯಾರ ಚಿಂತನೆಗಳ ಅಭ್ಯಾಸ ಆರಂಭಿಸಿದರು. ಇದರ ಫಲವಾಗಿ ರಾಜ್ಯದ ಸಮಾಜವಾದಿ ರಾಜಕಾರಣದ ಚರ್ಚೆ ಮತ್ತು ಚಟುವಟಿಕೆಗಳಲ್ಲಿ ಸಕ್ರಿಯ ಪಾತ್ರ ವಹಿಸಲಾರಂಭಿಸಿದ ತೇಜಸ್ವಿ ಸಮಾಜವಾದಿ ಯುವಜನ ಸಭಾದ ಅಧ್ಯಯನ ಶಿಬಿರಗಳಲ್ಲಿ ಹೊಸ ಹೊಸ ಕಾರ್ಯಕ್ರಮಗಳ ಚರ್ಚೆಗೆ ದಾರಿ ಮಾಡಿಕೊಡುತ್ತಿದ್ದರು. ಒಬ್ಬರಿಗೆ ಒಂದೇ ಉದ್ಯೋಗ, ಬ್ರಾಹ್ಮಣ ಸಮಾಜವಾದಿಗಳ ಜನಿವಾರ ತ್ಯಾಗ, ವರದಕ್ಷಿಣೆ ನಿಷೇಧ, ಸರಳ ವಿವಾಹ ಇತ್ಯಾದಿಗಳು ಯುವಜನಾ ಸಭಾದ ಕಾರ್ಯಕ್ರಮಗಳಾದವು. ಸ್ವತಃ ತೇಜಸ್ವಿ ಅನ್ಯ ಜಾತಿಗೆ ಸೇರಿದ ರಾಜೇಶ್ವರಿಯವರನ್ನು ಪ್ರೇಮಿಸಿ ಮದುವೆಯಾದರು. ತಂದೆ ಕುವೆಂಪು ಇವರ ವಿವಾಹವನ್ನು ತಾವೇ ರೂಪಿಸಿದ ಮಂತ್ರ ಮಾಂಗಲ್ಯ ವಿಧಾನದಲ್ಲಿ ನೆರವೇರಿಸಿದರು. ಇದೆಲ್ಲದರ ಪರಿಣಾಮವಾಗಿ ಗೋಪಾಲಗೌಡರ ನಿಧನಾನಂತರ ತೀರ್ಥಹಳ್ಳಿ ಕ್ಷೇತ್ರದಿಂದ ತೇಜಸ್ವಿಯವರನ್ನೇ ಅಭ್ಯರ್ಥಿಯನ್ನಾಗಿ ನಿಲ್ಲಿಸಬೇಕೆಂಬ ಪ್ರಸ್ತಾಪ ಬಂದಿತಾದರೂ, ಸಂಕೋಚದ ತೇಜಸ್ವಿ ಅದನ್ನು ಬಿಲ್ ಕುಲ್ ನಿರಾಕರಿಸಿ ಕೋಣಂದೂರು ಲಿಂಗಪ್ಪನವರನ್ನು ಗೆಲ್ಲಿಸಲು ಶ್ರಮ ವಹಿಸಿದರು.

ಈ ಮಧ್ಯೆ ಲೋಹಿಯಾ ಮೈಸೂರಿಗೊಮ್ಮೆ ಬಂದಾಗ ಕುವೆಂಪು ಅವರ ಮನೆಗೂ ಬಂದು ಹೋದದ್ದೇ ನೆಪವಾಗಿ ತೇಜಸ್ವಿ ಇನ್ನಷ್ಟು ಉತ್ಸಾಹದಲ್ಲಿ ಸಮಾಜವಾದಿ ಚಟುವಟಿಕೆಗಳಲ್ಲಿ ತೊಡಗಿಕೊಂಡರು. ನಂಜುಂಡಸ್ವಾಮಿಯವರ ಜೊತೆಗೂಡಿ ಲೋಹಿಯಾ ಚಿಂತನೆಗಳನ್ನು ಸಂಗ್ರಹಿಸಿ ಕೆಂಪು ಪುಸ್ತಕವನ್ನು ಪ್ರಕಟಿಸಿದರು. ಆಗ ಟಿ. ಎನ್. ನಾಗರಾಜ್ ಸಂಪಾದಿಸುತ್ತಿದ್ದ ಸಮಾಜವಾದಿ ಪತ್ರಿಕೆ 'ಮಾನವ'ಕ್ಕಾಗಿ ಲೋಹಿಯಾರ ಕೆಲವು ಮುಖ್ಯ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿದರು. ಸಮಕಾಲೀನ ವಿಷಯಗಳ ಬಗ್ಗೆ ಕರಪತ್ರಗಳನ್ನು ಹೊರಡಿಸಿದರು. ಇದೆಲ್ಲ ಕೆಲಸಗಳಿಗೆ ಕಳಶವಿಟ್ಟಂತೆ, ಮೈಸೂರಿನಲ್ಲಿ 1971ರಲ್ಲಿ ಐತಿಹಾಸಿಕ ಜಾತಿ ವಿನಾಶ ಸಮ್ಮೇಳನ ನಡೆಯಲು ತೇಜಸ್ವಿಯವರೇ ಸ್ಫೂರ್ತಿ. ಅದಕ್ಕಿಂತ ಹೆಚ್ಚಾಗಿ ತಾವು ಆವರೆಗೆ ಸಾಹಿತಿಯಾಗಿಯೂ ಹೆಸರು ಮಾಡಿದ್ದ ನವ್ಯ ಸಾಹಿತ್ಯದ ಹಿಂದಿನ ಸಾಂಸ್ಕೃತಿಕ ರಾಜಕಾರಣವನ್ನು ಗುರುತಿಸಿ, 1973ರಲ್ಲಿ ಅದರ ವಿರುದ್ಧ ಒಂದು ತಾತ್ವಿಕ ಬಂಡಾಯವಾಗಿ 'ಅಖಿಲ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ'ದ ಸಮಾವೇಶವನ್ನು ಸಂಘಟಿಸಲು ಶ್ರಮಿಸಿದರು. ಕುವೆಂಪು ಅವರು ಇದನ್ನು ಉದ್ಘಾಟಿಸಿದರು. ಇದರ ಫಲವಾಗಿ ಕನ್ನಡ ಸಾಹಿತ್ಯದ ದಿಕ್ಕೇ ಬದಲಾಯಿತೆಂಬುದು ಸಾಹಿತ್ಯಾಸಕ್ತರೆಲ್ಲರಿಗೆ ತಿಳಿದ ವಿಷಯವೇ ಆಗಿದೆ.

ತುರ್ತು ಪರಿಸ್ಥಿತಿ ನಂತರ ಸಮಾಜವಾದಿ ಪಕ್ಷ ಜನತಾ ಪಕ್ಷದಲ್ಲಿ

ವಿಲೀನಗೊಂಡು, ಆನಂತರದಲ್ಲಿ ಸಮಾಜವಾದಿಗಳು ಚಿಂದಿಚಿತ್ರಾನ್ನವಾದ ನಂತರ ತೇಜಸ್ವಿ ಸಮಜವಾದಿ ರಾಜಕರಣದಲ್ಲಿ ಆಸಕ್ತಿ ಕಳೆದುಕೊಂಡರು. ಬರವಣಿಗೆಯ ಕಡೆ ಹೆಚ್ಚು ಗಮನ ನೀಡಿದರು. ಲಂಕೇಶ್ ಪತ್ರಿಕೆಯಲ್ಲಿ ನಿರಂತರವಾಗಿ ಬರೆಯುವ ಮೂಲಕ ಮತ್ತು ತಮ್ಮದೇ ಸಾಹಿತ್ಯ ಕೃತಿಗಳ ಮೂಲಕ ಸಮಾಜವಾದಿ ತತ್ವಗಳ ಶಿಕ್ಷಣ ನೀಡುತ್ತಿದ್ದರು. 'ಪ್ರಗತಿರಂಗ'ದ ಮೂಲಕ ಲಂಕೇಶರ ಜೊತೆಯಲ್ಲಿ ಅರ್ಧ ಮನಸ್ಸಿನಿಂದಲೇ ರಾಜಕೀಯದಲ್ಲಿ ಆಸಕ್ತಿ ತಾಳಿದರಾದರೂ ಆ ಪ್ರಯೋಗ ವಿಫಲವಾಗುವುದರೊಂದಿಗೆ ಅವರ ಸಮಾಜವಾದಿ ರಾಜಕಾರಣದ ಕಾಲವೂ ಕೊನೆಗೊಂಡಿತು. ಆದರೆ ಲೋಹಿಯಾರಿಂದ ಪ್ರಭಾವಿತರಾದ ಎಲ್ಲ ಪ್ರತಿಭಾವಂತರಂತೆ ಪೂರ್ಣಚಂದ್ರ ತೇಜಸ್ವಿಯವರು ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ತಮ್ಮ ಕುತೂಹಲ ತೋರುತ್ತಾ ತಮ್ಮ ಬದುಕನ್ನು ಸಂಪನ್ನಗೊಳಿಸಿಕೊಂಡೇ ಆರು ವರ್ಷಗಳ ಹಿಂದೆ ನಮ್ಮನ್ನಗಲಿ ಹೋದರು. ಆದರೆ ಅವರ ನೆನಪು ಕನ್ನಡಿಗರೆಲ್ಲರ ಮನಸ್ಸಿನಲ್ಲಿ ಎಂದಿಗೂ ಚಿರಸ್ಥಾಯಿಯೇ.

–ಕಡಿದಾಳು ಶಾಮಣ್ಣ

(ಏಪ್ರಿಲ್, 2013)

ಜನ ನಾಯಕ ಪೈಲ್ವಾನ್ ಭರಮಪ್ಪ



1964ರ ಶಿವಮೊಗ್ಗ ಪುರಸಭಾ ಚುನಾವಣೆಗಳು. ವಿವಿಧ ರಾಜಕೀಯ ಪಕ್ಷಗಳು ತಮ್ಮ ಪರವಾಗಿ ನಿಂತ ಅಭ್ಯರ್ಥಿಗಳಿಗೆ, ಅವರ ಮೂಲಕ ಮತದಾರರಿಗೆ ಯಾವ ಯಾವ ವಿಧಾನಗಳಲ್ಲಿ ವಿಷಗಾಳಿ ತುಂಬಬೇಕೋ ಅದನ್ನೆಲ್ಲ ತುಂಬುತ್ತ ಚುನಾವಣೆಯ ಕಾವು, ಭರಾಟೆಯನ್ನು ಏರಿಸುತ್ತಿದ್ದವು. ಕಾಂಗ್ರೆಸ್, ಮೊಳಕೆ ಬಿಡುತ್ತಿದ್ದ ಜನಸಂಘಗಳೊಂದಿಗೆ ಸಮಾಜವಾದಿಗಳು ಹೋರಾಡಬೇಕಾಗಿತ್ತು. ಅದಲ್ಲದೆ ಯಾರು ಗೆದ್ದರೂ ಅವರ ಗೆಲುವಿಗೂ ಸೋಲಿಗೂ ಅಂತಹ ವ್ಯತ್ಯಾಸವೇನೂ ಇರುತ್ತಿರಲಿಲ್ಲ. ಅಂತಹ ಜಡವಾಗಿದ್ದ ಅಭಿವೃದ್ಧಿ-ಆಡಳಿತದ ಕಾಲವದು! ಅಧಿಕೃತ ಬಡಾವಣೆಗಳಲ್ಲೂ ಸರಿಯಾದ ರಸ್ತೆ, ಚರಂಡಿ, ನೀರು ವ್ಯವಸ್ಥೆಗಳಿರಲಿಲ್ಲ. ಹಿಂದುಳಿದವರು, ವಿವಿಧ ಕಸುಬಿನ ಶ್ರಮ-ಜೀವಿಗಳು, ಕೊಳಚೆ ಪ್ರದೇಶದವರು ವಾಸಿಸುತ್ತಿದ್ದ ಈಗಿನ ಭರಮಪ್ಪನಗರ, ಎಂ.ಕೆ.ಕೆ. ರಸ್ತೆ ಮುಂತಾದ ಹಳೆಯ ಶಿವಮೊಗ್ಗದ ನಿವಾಸಿಗಳ ಪಾಡು ಅಲೆಮಾರಿಗಳಿಗೂ ಬೇಡವಾದಂತಿತ್ತು. ಇಂತಹ ಜನರ ನಡುವೆ ಹುಟ್ಟಿ ಬೆಳೆದು, ಅವರ ಸಾಮುದಾಯಿಕ ನಾಯಕನಾಗಿ, 'ನಮ್ಮ ಭರಮಣ್ಣ' ಎಂದು ಪ್ರೀತಿಯಿಂದ ಕರೆಸಿಕೊಂಡವರು ಎಸ್.ಎಸ್. ಭರಮಪ್ಪ.

ಆ ಚುನಾವಣೆಯಲ್ಲಿ ತಾವು ನಿಲ್ಲಿಸುತ್ತಿರುವ ಈ ಹೊಸ ಯುವಕ, ಯಾರಿಗೂ ಸೋಲದ ಪೈಲ್ವಾನ್ ಭರಮಣ್ಣ ಗೆದ್ದೇ ಗೆಲ್ಲುತ್ತಾನೆಂದು ಜನರು ಯಾರ ಪ್ರೇರಣೆಯೂ ಇಲ್ಲದೆ ಅತ್ಯುತ್ಸಾಹದ ಪ್ರಚಾರ ಮಾಡಿದರು. ಭರಮಣ್ಣ ಭಾರಿ ಬಹುಮತದಿಂದ ವಿಜೇತರಾದುದಲ್ಲದೆ, ಮುಂದಿನ ಎಷ್ಟೋ ವರ್ಷ ಪುರಸಭಾ ಸದಸ್ಯರಾಗಿ ಗೆಲ್ಲುತ್ತ ಬಂದರು. ತನ್ನನ್ನು ಆರಿಸಿ ಕಳುಹಿಸಿದ ಜನರ ಪ್ರೀತಿ-ವಿಶ್ವಾಸಗಳನ್ನು ಅವರು ಎಂದೂ ಮರೆಯಲಿಲ್ಲ. ಅದರ ಪರಿಣಾಮವಾಗಿ ಆ ಬಡಾವಣೆಯಲ್ಲಿ ಬದಲಾವಣೆಗಳು ಕಾಣ ತೊಡಗಿದವು. ಯಾವುದೇ ಸಿದ್ಧಾಂತದ ಗೊಡವೆಯಿಲ್ಲದೆ ಕೇವಲ ಜನಪರ ಕಾಳಜಿಯಿಂದ ಸ್ಥಳೀಯ ರಾಜಕಾರಣ ಪ್ರವೇಶಿಸಿದ ಭರಮಪ್ಪ, ತನ್ನ ಜನಪ್ರೀತಿ ಮತ್ತು ಪ್ರಾಮಾಣಿಕತೆಗಳಿಂದಾಗಿ ಸಹಜವಾಗಿಯೇ ಆಗಿನ ಸಮಾಜವಾದಿ ನಾಯಕರಾದ ಗೋಪಾಲಗೌಡ, ವೈ.ಆರ್. ಪರಮೇಶ್ವರಪ್ಪ (ಅಣ್ಣಯ್ಯ), ಎ.ವಿ. ಶ್ರೀನಿವಾಸ್ ಮುಂತಾದವರ ಸಂಪರ್ಕ ದೊರೆತ ನಂತರ ಸಮಾಜವಾದಿ ಪಕ್ಷ ಮತ್ತು ರಾಜಕಾರಣಗಳೊಂದಿಗೆ ಗುರುತಿಸಿಕೊಂಡರು. ಅಷ್ಟೇನೂ ವಿದ್ಯಾವಂತರಲ್ಲದ ಭರಮಪ್ಪ ವಿದ್ಯಾವಂತರೆನಿಸಿಕೊಂಡವರೊಡನೆ ಮಾತಾಡುವಾಗ "ಲೋಹಿಯಾವಾದ, ಸಮಾಜವಾದ ಎಲ್ಲ ನೀವೇ ಓದಿಕೊಳ್ಳಿ. ನಾನು ಎಲ್.ಎಸ್. ಫೇಲಾದವನು ನಮ್ಮದೇನಿದ್ದರೂ ಜನರ ಕೆಲಸ, ರಾಜಕಾರಣಡ

ಕುಸ್ತಿ!" ಎನ್ನುತ್ತಿದ್ದರು. ಆದರೆ ಸಮಾಜವಾದದ ತಿರುಳನ್ನು ಅವರಿಗಿಂತ ಹೆಚ್ಚು ತಿಳಿದವರು ಮತ್ತೊಬ್ಬರಿರಲಿಲ್ಲ.

1950–60ರ ದಶಕದಲ್ಲಿ ಭರಮಣ್ಣ ಗಿರಿಜಾ ಮೀಸೆಯ ಕಟ್ಟುಮಸ್ತಾದ ಕುಸ್ತಿಮಲ್ಲ ಎಂದೇ ಹೆಸರುವಾಸಿ. ಅಪ್ಪ ಸಾಹುಕಾರ ಸಿದ್ಧಪ್ಪ "ನಮ್ಮ ಕುರುಬ ಜನಾಂಗದಲ್ಲೇ ನನ್ನ ಮಗ ಬಲವಾದ ಪೈಲ್ವಾನ್ ಆಗಬೇಕು" ಎಂದು ಮಗನನ್ನು ಕಟ್ಟುಮಸ್ತಾಗಿ ಬೆಳೆಸಿದ್ದರು. ಒಮ್ಮೆ ಆಯನೂರಿನ ಮಾರಿ ಜಾತ್ರೆಯ ಕುಸ್ತಿ ಪಂದ್ಯಗಳಲ್ಲಿ ಪಂಜಾಬ್‌ನ ಒಬ್ಬ ಪೈಲ್ವಾನ್ ಎಲ್ಲರನ್ನು ಮಣ್ಣು ಮುಕ್ಕಿಸಿ ಭಯಂಕರ ಮೆರೆಯುತ್ತಿದ್ದ. ಅವನನ್ನು ಹದ್ದುಬಸ್ತಿಗೆ ತರಲು ಎಸ್.ಎಲ್. ಲಕ್ಷ್ಮೀನಾರಾಯಣ ಸಿಂಗ್, ಪುಟ್ಟಪ್ಪ ಮೊದಲಾದ ಗೆಳೆಯರು ಹುರಿದುಂಬಿಸಿದ್ದೆ ಸಾಕಾಯಿತು. ಈ ಗಿಡ್ಡ ಪೈಲ್ವಾನ್ ಸರ್ದಾರ್‌ಜಿಯ ಮೇಲೆ ಬಿದ್ದಿದ್ದೆ ತಡ, ಒಂದೇ ಕ್ಷಣದಲ್ಲಿ ಅವನು ಚಿತ್ತಾಗಿ ಕೆಳಗೆ ಬಿದ್ದಿದ್ದ!

ಅಣ್ಣಯ್ಯ ಅವರ ಬಗ್ಗೆ ಭರಮಪ್ಪನವರಿಗೆ ಅಪಾರವಾದ ಪ್ರೀತಿ, ಗೌರವ ಅಣ್ಣಯ್ಯ ತತ್ವ ಸಿದ್ಧಾಂತಗಳ ಬದ್ಧತೆಯೊಂದಿಗೆ ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿ ಚಳವಳಿಯನ್ನು ಕಟ್ಟಿದ ಪ್ರಮುಖರಲ್ಲೊಬ್ಬರು. ಇಂಥವರು ಶಾಸನ ಸಭೆಯಲ್ಲಿ ಇರಲೇಬೇಕೆಂಬುದು ಭರಮಣ್ಣನ ಹಠ. ಅದಕ್ಕೆ ಬೆಂಬಲವಾಗಿ ನಿಂತವರು ಗೋಪಾಲಗೌಡರು, ಜೆ.ಎಚ್. ಪಟೇಲರು, ಎಂ.ಸಿ. ಮಹೇಶ್ವರಪ್ಪನವರು, ಅಪಾರ ಅಭಿಮಾನಿಗಳು. ಆ ವೇಳೆಗಾಗಲೇ ಭರಮಪ್ಪ ಪುರಸಭಾ ಸದಸ್ಯರಲ್ಲದೆ ಸಿಟಿ ಕೋ ಆಪರೇಟಿವ್ ಬ್ಯಾಂಕ್, ಹೌಸ್ ಬಿಲ್ಡಿಂಗ್ ಸೊಸೈಟಿ ಮುಂತಾದುವುಗಳಲ್ಲಿ ನಿರ್ದೇಶಕರಾಗಿದ್ದು, ಸ್ಥಳೀಯ ಸಂಸ್ಥೆಗಳ ನಿಕಟ ಸಂಬಂಧ ಹೊಂದಿದ್ದರು. ಜನ, ಧನ, ಹೊಂದಿಸಿಕೊಂಡು, ವೈ.ಆರ್.ಪಿ ಪರವಾಗಿ ವಿಧಾನ ಪರಿಷತ್ ಚುನಾವಣಾ ಪ್ರಚಾರಕ್ಕೆ ಇಳಿದೇ ಬಿಟ್ಟರು. ಇದು ತನ್ನ ಸ್ವಂತ ಹೋರಾಟವೆಂದೇ ಭಾವಿಸಿದ ಭರಮಣ್ಣನದು ಹಗಲು, ರಾತ್ರಿ ಪ್ರಚಾರ, ಸಂಚಾರ. ವೈ.ಆರ್.ಪಿ ಗೆಲುವು ಭ್ರಮೆ ಮಾತ್ರ ಎನ್ನುತ್ತಿದ್ದವರು ಅವರು ವಿಜಯಿಯಾದಾಗ ಭರಮಣ್ಣನ ಶಕ್ತಿಯ ಬಗೆಗೆ ಗರಬಡಿದಂತಾದರು.

ಜೆ.ಎಚ್. ಪಟೇಲರು ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದ ಸಂದರ್ಭಗಳಲ್ಲಿ ಅವರ ಚುನಾವಣಾ ವೆಚ್ಚಕ್ಕಾಗಿ ತನ್ನ ನಿವೇಶನಗಳನ್ನೆ ಭರಮಪ್ಪ ಮಾರಾಟ ಮಾಡಿದ್ದರು. ಅವರಿಗೆ ಸಮಾಜವಾದಿ ಪಕ್ಷವೆಂದರೆ ತಮ್ಮ ಕುಟುಂಬವೇ ಆಗಿತ್ತು. ಈ ವಿಷಯವನ್ನು ಅವರು ಪಟೇಲರಿಗೂ ಹೇಳಿಕೊಂಡವರಲ್ಲ. ತಮ್ಮ ಪಕ್ಷ, ಹಿರಿಯ ಗೆಳೆಯನ ಯಶಸ್ಸು, ತಾನು ನಂಬಿದ ಸಿದ್ಧಾಂತದ ಬಗ್ಗೆ ನಿಷ್ಠೆ–ಕಳಕಳಿಯನ್ನು ಮೈಗೂಡಿಸಿಕೊಂಡವರು. ಲೋಕಸಭಾ ಕ್ಷೇತ್ರದ ಪ್ರತಿಯೊಂದು ಮುಖ್ಯ ಗ್ರಾಮದಲ್ಲೂ ಪ್ರಚಾರ ಸಭೆ ಏರ್ಪಾಡು ಮಾಡುತ್ತಿದ್ದುದು, ಕಾಂಗ್ರೆಸ್‌ಗೆ ವಿರೋಧಿಯಾದ ಪ್ರಬಲ ಅಲೆಯನ್ನು ಎಬ್ಬಿಸಿದುದು, ಭರಮಪ್ಪನವರ ನಿಸ್ವಾರ್ಥ ದುಡಿಮೆಯ ಫಲ. ಇಲ್ಲೆಲ್ಲೂ ಮತಕ್ಕಾಗಿ ಹಣ ಅಥವಾ ಹೆಂಡ ಹಂಚಬೇಕೆಂಬ ಭಾವನೆ ಅವರ ಬಳಿ ಸುಳಿಯಲಿಲ್ಲ. ಪಟೇಲರದ್ದು ಅಭೂತಪೂರ್ವ ಗೆಲುವು. ಗೆದ್ದ ನಂತರ ಅವರಿಗೆ ಭರಮಪ್ಪನವರ ತೆರೆಮರೆಯ ತ್ಯಾಗ ಹೇಗೋ ತಿಳಿಯಿತು.

ಹಣವನ್ನು ಹಿಂದಿರುಗಿಸಲು ಪಟೇಲರ ಬಳಿಯೂ ಹಣದ ಕ್ಷಾಮ. ಪಟೇಲರು ಕಣ್ತುಂಬಿಕೊಂಡು 'ಭರಮಣ್ಣ ನೀನು ಎಂಥ ತಮ್ಮನೊ!' ಎಂದು ಭಾವಾವೇಶದಿಂದ ಕಣ್ಣೀರಿಟ್ಟರು!

1978ರ ಸಾರ್ವತ್ರಿಕ ಚುನಾವಣೆಗಳು. ತುರ್ತು ಪರಿಸ್ಥಿತಿಯ ನಂತರದ ಈ ಚುನಾವಣೆಗಳಲ್ಲಿ ಕಾಂಗ್ರೆಸ್ ಜನತಾಪಕ್ಷಗಳ ಜಿದ್ದಾಜಿದ್ದಿ ಸ್ಪರ್ಧೆ. ನಿಜವಾದ ಜನ ನಾಯಕರಾಗಿದ್ದ ಭರಮಪ್ಪನವರಿಗೆ ವಿಧಾನಸಭೆಗೆ ಜನತಾಪಕ್ಷದ ಅಭ್ಯರ್ಥಿಯಾಗಲು ಎಲ್ಲ ಅರ್ಹತೆಗಳೂ ಇದ್ದವು. ಅವರಿಗಿಂತ ಹೆಚ್ಚು ಸೂಕ್ತ ವ್ಯಕ್ತಿಯೂ ಇರಲಿಲ್ಲ. ಅಪಾರವಾದ ಜನ ಬೆಂಬಲ, ಅದರಲ್ಲೂ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಎಂದಿನಂತೆ ಇವರೊಂದಿಗೆ ಇದ್ದರು. 'ನಮ್ಮ ಭರಮಣ್ಣ' ಎನ್ನುವ ಮಾತು ಹೊಸ ಶಕ್ತಿಯಾಗಿ ಎಲ್ಲ ಕಡೆ ಚುನಾವಣಾ ಕಾವು ಏರಿಸಿತ್ತು. ಆದರೆ ಅದೇ ಪಕ್ಷದ ಮತ್ತೊಬ್ಬ ಅಭ್ಯರ್ಥಿ–ಡಿ.ಎಚ್.ಶಂಕರಮೂರ್ತಿ ತಮ್ಮ ತಲೆಯ ಮೇಲೆ ಕಾಲಿಟ್ಟು ಮುಂದಾಗಿ ಟಿಕೆಟ್ ಪಡೆಯುತ್ತಾರೆಂದು ಮುಗ್ಧ ಭರಮಪ್ಪನಿಗೆ ತಿಳಿಯಲೇ ಇಲ್ಲ! ರೊಚ್ಚಿಗೆದ್ದ ಭರಮಣ್ಣನಿಗೆ ಬೇರೆ ದಾರಿಯೇ ಇರಲಿಲ್ಲ. ಬಂಡಾಯ ಅಭ್ಯರ್ಥಿಯಾಗಿ ಸೆಡ್ಡು ಹೊಡೆಯಲೇಬೇಕಾಯಿತು. ಆದರೆ ಈ ಚುನಾವಣೆಯಲ್ಲಿ ಮತಗಳು ಒಡೆದು ಎರಗಿದ ಸೋಲು ಅವರ ಮನಸ್ಸನ್ನು ತೀವ್ರವಾಗಿ ಘಾಸಿಗೊಳಿಸಿತು. ತನ್ನ ಪಕ್ಷ ಮತ್ತು ಜನಕ್ಕಾಗಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದು, ಹಗಲು ರಾತ್ರಿ ದುಡಿದದ್ದು ಯಾವುದಕ್ಕೂ ಬೆಲೆಯಿಲ್ಲದಂತಾಯಿತು. ಅವರ ಸಮಾಜವಾದಿ ಕನಸುಗಳೆಲ್ಲ ಒಡೆದು ಹೋದವು. ಕೊನೆಗೆ ಆರೋಗ್ಯ ತೀರ ಹದಗೆಟ್ಟಿತು. ಆತನದೇನು ಅಂತಹ ಸಾಯುವ ವಯಸ್ಸಲ್ಲ. 1979ರಲ್ಲಿ ಕಣ್ಮುಚ್ಚಿದರು.

ಭರಮಪ್ಪನ ಅಂತಿಮ ಯಾತ್ರೆಯಲ್ಲಿ ಸೇರಿದ ಜನಸಾಗರ ಬಹುಶಃ ಶಿವಮೊಗ್ಗದ ಇತಿಹಾಸದಲ್ಲಿ ಅದೇ ಮೊದಲು, ಅದೇ ಕೊನೆ. 'ಶರಣನ ಗುಟ್ಟನ್ನು ಅವನ ಮರಣದಲ್ಲಿ ನೋಡು' ಎನ್ನುವಂತೆ ಜನಸೇವೆಗೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡಿದ್ದ ಭರಮಣ್ಣ ಅಚ್ಚಳಿಯದ ನೆನಪನ್ನು ಶಿವಮೊಗ್ಗದ ಜನತೆಯ ಮನದಲ್ಲಿ ಬಿಟ್ಟು ಹೋದರು.

–ಎಂ.ಬಿ. ನಟರಾಜ್

(ಜನವರಿ, 2012)

ನೇರ–ನಿಷ್ಠುರ ವ್ಯಕ್ತಿತ್ವದ ಟಿ. ಎನ್. ನಾಗರಾಜ್



ಮೈಸೂರಿನಲ್ಲಿ ಸಮಾಜವಾದಿ ಚಳುವಳಿಯ ದಿನಗಳಲ್ಲಿ ಅದರ ನಾಯಕತ್ವದ ಪರಮಾಗ್ರ ಪಂಕ್ತಿಯಲ್ಲಿ ಕೇಳಿಬರುತ್ತಿದ್ದ ಹೆಸರು ಟಿ.ಎನ್.ನಾಗರಾಜ್ ಅವರದ್ದು. ಮುಂದೊಂದು ದಿನ ಇಲ್ಲಿ ಸಮಾಜವಾದದ ನೆಲೆಗಟ್ಟು ಬಲಗೊಳ್ಳಲು ಕಾರಣವಾದವರಲ್ಲಿ ಟಿ.ಎನ್.ಎನ್. ಎಂದೇ ಜನಪ್ರಿಯರಾಗಿದ್ದ ಇವರ ಪಾತ್ರ ಪ್ರಮುಖವೆಂದೇ ಹೇಳಬೇಕು. 'ಒಟ್ಟಿನಲ್ಲಿ ಕ್ರಾಂತಿಯಾಗಬೇಕು, ಅಷ್ಟೇ' ಎಂಬ ಹಂಬಲದಲ್ಲಿ ಚಡಿಪಡಿಸುತ್ತಿದ್ದ ಮೈಸೂರಿನ ಅನೇಕ ಯುವ ಸಮಾಜವಾದಿಗಳಿಗೆ ಟಿಎನ್‌ಎನ್ ಅಕ್ಷರಶಃ ಅನ್ನ–ನೆಲೆ–ನೀರು ನೀಡಿ ಸಲುಹಿದ್ದರೆಂದರೆ ಅದು ಅತಿಶಯೋಕ್ತಿಯಾಗಲಾರದು.

ನಮ್ಮ ಮನೆ 'ಚಾರ್ವಾಕ'ದ ಕಾರ್ ಶೆಡ್‌ನಲ್ಲಿ ನಡೆಯುತ್ತಿದ್ದ ಸಭೆಗಳಿಗೆ ಟಿಎನ್‌ಎನ್ ತಮ್ಮ ಹಿರಿಯ ಮಗಳು ಸುಮನಾ ಜತೆ ಆಗಮಿಸುತ್ತಿದ್ದರು. ಎತ್ತರದ ನಿಲುವು, ಸಮಾಧಾನದ ನಡಿಗೆ, ಹಿತಮಿತವಾದ ಮಾತು. ಅವರು ಹಾಜರಿರುತ್ತಿದ್ದ ಸಭೆಗಳು ಸಮಾಜವಾದಿಗಳಿಗೆ ವಿಶಿಷ್ಟವಾದ ಕೋಲಾಹಲವಿಲ್ಲದೆ ಗಂಭೀರವಾಗಿರುತ್ತಿದ್ದವು. ಟಿಎನ್‌ಎನ್ ಅವರನ್ನು ನನ್ನಪ್ಪ ರಾಮದಾಸ್ ಸದಾಕಾಲ ತನ್ನ ಸೈದ್ಧಾಂತಿಕ, ವೈಚಾರಿಕ ನಿಲುವುಗಳ ಬುನಾದಿರೂಪವೆಂಬಂತೆ ನಡೆಸಿಕೊಳ್ಳುತ್ತಿದ್ದುದನ್ನು ನಾನು ಗಮನಿಸುತ್ತಿದ್ದೆ. 1989ರ ಡಿಸೆಂಬರ್ 3ರಂದು ಅವರು ತೀರಿಕೊಂಡಾಗ ನನಗೆ 11ವರ್ಷ. ಅಪ್ಪ ಅನಾಥರಾದಂತೆ ದುಃಖಿಸಿದ್ದರು. ಅವರಂತೆ ಬಹಳಷ್ಟು ಮಂದಿಯೂ ಕೂಡ. ಅಂದು ಮೈಸೂರು ಅಕ್ಷರಶಃ ಒಬ್ಬ ಅಪ್ಪಟ ಸಮಾಜವಾದಿಯನ್ನು ಕಳೆದುಕೊಂಡಿತ್ತು.

ನಂಜನಗೂಡಿನ ತುಂಬುನೇರಳೆಯ ಗ್ರಾಮೀಣ ಪರಿಸರದಿಂದ ಮೈಸೂರಿಗೆ ಬಂದ ಟಿಎನ್‌ಎನ್, ಎಳವೆಯಲ್ಲಿ ಎಲ್ಲರಂತೆ ಶ್ರೀಸಾಮಾನ್ಯ. ಪ್ರೌಢಶಾಲಾ ದಿನಗಳಲ್ಲಿ ತಾವು ಓದಲು ಇದ್ದ ಕೊಠಡಿಯಲ್ಲಿ ಅವರಿಗೆ ಜತೆಗಾರರಾಗಿ ಅನೇಕಾನೇಕ ಜಾತಿಯ ವಿದ್ಯಾರ್ಥಿಗಳಿದ್ದರು. ಪ್ರೌಢಶಾಲೆಯಿಂದ ಹೊರ ಬರುವಷ್ಟರಲ್ಲಿ ಆ ಕೊಠಡಿಯಿಂದ ಒಬ್ಬ ಜಾತ್ಯತೀತ ಸಮಾಜವಾದಿ ರೂಪುಗೊಂಡಿದ್ದ. ಸ್ವತಂತ್ರ ಪೂರ್ವ ಭಾರತದಲ್ಲಿ ಹೀಗೆ ರೂಪುಗೊಂಡ ಯುವಕ ಟಿಎನ್‌ಎನ್ ಸಹಜವಾಗಿಯೇ ಸ್ವತಂತ್ರ ಸಂಗ್ರಾಮದಲ್ಲಿ ಭಾಗವಹಿಸಿ ಜೈಲು ಕಂಡರು. ಅದೇ ವೇಳೆ ಕಾಂಗ್ರೆಸ್‌ನ 'ಜನವಿರೋಧಿ' ನಿಲುವುಗಳಿಗೆ ಧಿಕ್ಕಾರ ಕೂಗಿ ತನ್ನೊಳಗಿನ ಜನಪರತೆಯನ್ನು ಗಟ್ಟಿಗೊಳಿಸಿಕೊಂಡಿದ್ದರು.

ವೃತ್ತಿಯಿಂದ ವಕೀಲರಾದರೂ ಹಣದ ದಾರಿ ಹಿಡಿಯದೆ ಸದಾ ಸಮಾಜಮುಖಿಯಾಗಿ ಚಿಂತಿಸುತ್ತಿದ್ದರು. ಅದರಂತೆಯೇ ಕೊನೆಯವರೆಗೂ

ಬದುಕಿದ್ದರು ಕೂಡ. ಹಾಗಾಗಿಯೇ ಅವರಿಗೆ ದೇಶ ಕಂಡ ಅಪರೂಪದ ಸಮಾಜವಾದಿ ಚಿಂತಕ ಹಾಗೂ ಹೋರಾಟಗಾರ ಡಾ. ರಾಮಮನೋಹರ ಲೋಹಿಯಾರ ಅನನ್ಯ ಒಡನಾಟ ಲಭಿಸಿತ್ತು ಮತ್ತು ಅದರಿಂದಾಗಿ ಅವರ ವ್ಯಕ್ತಿತ್ವಕ್ಕೆ ಒಂದು ಹೊಸ ಹೊಳಪು ಲಭ್ಯವಾಗಿತ್ತು. ಸರಳ–ಸಜ್ಜನನಿಕೆಯ ಮೂರ್ತರೂಪವಾಗಿದ್ದ ಲೋಹಿಯಾ ಮೈಸೂರಿಗೆ ಬಂದಾಗಲೆಲ್ಲ ಉಳಿಯುತ್ತಿದ್ದುದು ಟಿಎನ್‌ಎನ್ ಅವರ ಮೈಸೂರಿನ ಲಕ್ಷ್ಮೀಪುರಂನ ಮನೆಯಲ್ಲಿ. ಒಮ್ಮೆ ಹೀಗೆ ಲೋಹಿಯಾ ಮೈಸೂರಿಗೆ ಬಂದಾಗ ಟಿ.ಎನ್.ಎನ್. ಯಾವುದೋ ಕೆಲಸದ ಮೇಲೆ ಊರಿನಿಂದ ನಾಪತ್ತೆಯಾಗಿ ಮನೆಯವರಿಗೆ ಮುಜುಗರ ಉಂಟು ಮಾಡಿದ್ದರಂತೆ. ಆಗ, ಯಾವ ಕೆಲಸ ಎಂದು ತಿಳಿದ ಲೋಹಿಯಾರೇ ಸಾರ್ವಜನಿಕ ಕೆಲಸಗಳಿದ್ದಾಗ ಯಾರೇ ಬರುತ್ತಾರೆಂದರೂ ಕಾಯಬಾರದೆಂಬ ತಮ್ಮ ಮಾತಿನಂತೆಯೇ ಅವರು ನಡೆದುಕೊಂಡಿದ್ದಾರೆಂದು ಹೇಳಿ ತಾವೇ ಮನೆಯವರನ್ನು ಸಮಧಾನಪಡಿಸಿ ಅಲ್ಲಿ ಉಳಿದರಂತೆ. ಸ್ವಂತವೆನ್ನುವ ಆದಾಯವಿಲ್ಲದಿದ್ದ ಲೋಹಿಯಾ ಮೈಸೂರಿಗೆ ಬಂದಾಗಲೆಲ್ಲ ಅವರಿಗೆ ಟಿಎನ್‌ಎನ್ ಹೊಸ ಬಟ್ಟೆಗಳನ್ನು ಹೊಲಿಸಿಕೊಡುತ್ತಿದ್ದುದನ್ನು ಅವರ ಮಗಳು ಸುಮನಾ ಅಭಿಮಾನದಿಂದ ನೆನಪಿಸಿಕೊಳ್ಳುತ್ತಾರೆ.

ಟಿಎನ್‌ಎನ್‌ರ ಕೊನೆಯ ಮಗಳು ಕಪ್ಪಾಗಿ ಹುಟ್ಟಿದ್ದಕ್ಕೆ ಅವರ ತಾಯಿ ಕಣ್ಣೀರುಗರೆದಿದ್ದರಂತೆ! ಆಗ ಲೋಹಿಯಾ ಅವರನ್ನು ಸಮಾಧಾನ ಪಡಿಸಿ 'ಈಗ ಬಿಳಿಯರು ಅಧಿಕಾರದಲ್ಲಿರುವುದರಿಂದ ಬಿಳಿ ಬಣ್ಣ ಸುಂದರವಾಗಿ ಕಾಣುತ್ತದಷ್ಟೆ. ಕರಿಯರು ಅಧಿಕಾರಕ್ಕೆ ಬಂದರೆ ಕರಿ ಸುಂದರವಾಗುತ್ತದೆ' ಎಂದಿದ್ದರಂತೆ. ಈ ಹಿನ್ನೆಲೆಯಲ್ಲಿ ಲೋಹಿಯಾ ಅವರು 'Power decides the colours' ಎಂಬ ವಿಷಯವಾಗಿ ಟಿಎನ್‌ಎನ್‌ರಿಗೆ ಒಂದು ಸುದೀರ್ಘ ಪತ್ರವನ್ನೂ ಬರೆದಿದ್ದರು. ಹೀಗೆ ಟಿಎನ್‌ಎನ್ ಲೋಹಿಯಾ ಮತ್ತು ಮೈಸೂರಿನ ಒಡನಾಟದ ಸಾಕ್ಷಿಯಾಗಿಯೂ ಇಂದು ಬಹಳ ಜನಕ್ಕೆ ನೆನಪಾಗುತ್ತಾರೆ.

'ಪ್ರಜಾಪ್ರಭುತ್ವ ಎನ್ನುವುದು ಹೊರಗಿನಂತೆ ಮನೆಯ ಒಳಗೂ ಬೇಕು' ಎಂದು ಪ್ರತಿಪಾದಿಸುತ್ತಿದ್ದ ಟಿಎನ್‌ಎನ್ ತನ್ನ ಮನೆಯ ಎಲ್ಲ ಸದಸ್ಯರಿಗೂ ಮುಕ್ತ ಸ್ವಾತಂತ್ರ್ಯದ ಸಿಹಿಯನ್ನು ಸವಿಯಲು ಅವಕಾಶ ಕಲ್ಪಿಸಿದ್ದರು. ಅವರ ಮಕ್ಕಳಲ್ಲಿ ಇಬ್ಬರು ವಿಧವಾ ವಿವಾಹವಾಗಿ, ಇನ್ನೊಬ್ಬರು ಅಂತರ್ಜಾತೀಯ ಮದುವೆಯಾಗಿರುವುದೇ ಇದಕ್ಕೆ ಸಾಕ್ಷಿ.

ಮೈಸೂರಿನಲ್ಲಿ ಅವರ ಕಾಲದಲ್ಲಿ ನಡೆದ ಹೆಚ್ಚೂ ಕಡಿಮೆ ಎಲ್ಲ ಹೋರಾಟಗಳಲ್ಲಿಯೂ ನಾಗರಾಜ್ ಭಾಗಿಯಾಗಿದ್ದರು. ಕಾಗೋಡು ಸತ್ಯಾಗ್ರಹ, ಸಮಾಜವಾದಿ ಯುವಜನ ಸಭಾ, ಜಾತಿವಿನಾಶ ಸಮ್ಮೇಳನ, ಗೋಕಾಕ್ ಚಳವಳಿ, ಹೀಗೆ ಒಂದರ ಹಿಂದೊಂದು ಹೋರಾಟ, ಸಂಘಟನೆಗಳಲ್ಲಿ ಆಪ್ತ ಸ್ನೇಹಿತರಾದ ಶ್ರೀಕಂಠಶರ್ಮ, ಪ. ಮಲ್ಲೇಶ್ ಮತ್ತಿತರರ ಜತೆ ಟಿಎನ್‌ಎನ್ ಸದಾ ಒತ್ತಾಸೆಯಾಗಿ ನಿಲ್ಲುತ್ತಿದ್ದರು. ಯು.ಆರ್. ಅನಂತಮೂರ್ತಿ, ನಂಜುಂಡಸ್ವಾಮಿ, ಕೆ. ರಾಮದಾಸ್, ಬಿ.ಎನ್ ಶ್ರೀರಾಮ್, ದೇವನೂರು ಮಹಾದೇವ... ಹೀಗೆ ಅಂದಿನ ಬಿಸಿರಕ್ತದ ತರುಣರೆಲ್ಲ ಟಿಎನ್‌ಎನ್‌ರ ಸಮಾಜವಾದಿ ಅಂಗಳದಲ್ಲಿ ಅರಳಿದ


ಹೂವುಗಳೇ! ಈ ಎಲ್ಲರ ಪಾಲಿಗೆ ಟಿಎನ್ಎನ್ friend, philosopher & guide ಆಗಿದ್ದವರು. ಈ ಗುಂಪಿನ ಗೆಳೆಯರು ಹೀಗೆ ವಿವಿಧ ಹೋರಾಟಗಳಲ್ಲಿ ಪೊಲೀಸರ ಆತಿಥ್ಯಕ್ಕೊಳಗಾದಾಗಲೆಲ್ಲ ಟಿಎನ್ಎನ್ ತಮ್ಮ ವಕೀಲ ವೃತ್ತಿಗೆ ಆ ಕ್ಷಣ ಚಾಲನೆ ನೀಡಿ, ತಮ್ಮ ಸ್ವಂತ ಖರ್ಚಿನಲ್ಲಿ ಹಲವು ಹತ್ತಾರು ಸಾಕ್ಷ್ಯಗಳನ್ನು ಮುತುವರ್ಜಿಯಿಂದ ನ್ಯಾಯಾಲಯಗಳಲ್ಲಿ ಮಂಡಿಸಿ, ಅವರೆಲ್ಲ ಸುಗಮವಾಗಿ ಹೊರಬರುವಂತೆ ನೋಡಿಕೊಳ್ಳುತ್ತಿದ್ದರು. ಆದರೆ ಜೆ.ಪಿ. ಚಳುವಳಿಯ ಸಂದರ್ಭದಲ್ಲಿ ಸ್ವತಃ ಟಿಎನ್ಎನ್‌ರೇ ಬಂಧನಕ್ಕೊಳಗಾಗಿದ್ದು ಆಶ್ಚರ್ಯದ ಸಂಗತಿಯೇನಲ್ಲ. ಈ ಸಂಬಂಧ ದಾಖಲಿಸಲೇಬೇಕಾದ ಇನ್ನೊಂದು ಸಂಗತಿ ಎಂದರೆ, ಅವರು ತಮ್ಮ ವೃತ್ತಿ ಜೀವನದಲ್ಲಿ ಎಂದೂ ಯಾವುದೇ ಕಂಪನಿ ಅಥವಾ ಕಾರ್ಖಾನೆ ಮಾಲೀಕರ ಪರ ವಕಾಲತ್ತು ಒಪ್ಪಿಕೊಳ್ಳಲಿಲ್ಲ. ವಕಾಲತ್ತು ಏನಿದ್ದರೂ ರೈತ ಅಥವಾ ಕಾರ್ಮಿಕರ ಪರ ಮಾತ್ರ. ಈ ಎಲ್ಲದರ ನಡುವೆ ಸಮಾಜವಾದಿ ಯುವಜನಾ ಸಭಾ ಪ್ರಕಟಿಸುತ್ತಿದ್ದ 'ಮಾನವ' ಸಂಪಾದಕತ್ವದ ಜವಾಬ್ದಾರಿಯನ್ನೂ ಖಾದ್ರಿ ಶಾಮಣ್ಣ ಮತ್ತಿತರರೊಡನೆ ಟಿಎನ್ಎನ್ ವಹಿಸಿಕೊಂಡದ್ದು ಅವರ ಕ್ರಿಯಾಶೀಲತೆಯ ವಿಸ್ತಾರವನ್ನು ತೋರಿಸುತ್ತದೆ.

ಎಂದೂ ವ್ಯವಸ್ಥೆಯೊಡನೆ ರಾಜಿಯಾಗದೆ, ಹುಡುಕಿಕೊಂಡು ಬಂದ ಅಧಿಕಾರದ ಸ್ಥಾನಮಾನಗಳಿಂದ ಮನಃಪೂರ್ವಕವಾಗಿ ದೂರ ಉಳಿದು, ತಮ್ಮ ನೇರ-ನಿಷ್ಠುರ ವ್ಯಕ್ತಿತ್ವವನ್ನು ಕೊನೆಯವರೆಗೂ ಜೀವಂತವಾಗಿ ಕಾಯ್ದುಕೊಂಡಿದ್ದವರು ಟಿಎನ್ಎನ್. ಸಾಮಾಜಿಕ ಚಟುವಟಿಕೆಗಳನ್ನು, ಜವಾಬ್ದಾರಿಗಳನ್ನು ತನ್ನ ಕರ್ತವ್ಯವೆಂಬಂತೆ ಪರಿಪಾಲಿಸುವ ವ್ಯಕ್ತಿಗಳು ಅಪವಾದವಾಗಿಯೇ ಕಾಣುವ ಇಂದಿನ ದಿನಗಳಲ್ಲಿ ನಮ್ಮಂಥ ಯುವಜನರಿಗೆ ಹೀಗೊಬ್ಬ friend, philosopher & guide ನಮಗೂ ಇರಬಾರದಿತ್ತೇ ಎಂದೆನಿಸದಿರದು. ನಿರೀಕ್ಷೆ, ಹುಡುಕಾಟಗಳು ಅರ್ಥವಿಲ್ಲವಾದಾಗ ನಮ್ಮ ಆತ್ಮಸಾಕ್ಷಿಯನ್ನು ಗುರುವಾಗಿಸಿಕೊಂಡು ನಮ್ಮೊಳಗನ್ನು ಗಟ್ಟಿಗೊಳಿಸಿಕೊಂಡರೆ ಈ ಹಿರಿಯ ಚೇತನಗಳ ಅರ್ಥಪೂರ್ಣ ಬದುಕಿಗೆ ಹಣತೆ ಹಚ್ಚಿದಂತಾಗಬಹುದು.

–ಎನ್ ಆರ್. ಸ್ನೇಹ

(ಜುಲೈ, 2012)

ವ್ಯರ್ಥ ಹೋರಾಟಗಳ ನಾಯಕ ಬಂಗಾರಪ್ಪ



ಸಾರೆಕೊಪ್ಪ ಬಂಗಾರಪ್ಪ ಇನ್ನಿಲ್ಲವೆಂದರೆ ನಂಬುವುದು ಕಷ್ಟ. ಅವರು ರಾಜ್ಯ ರಾಜಕಾರಣದ ಶಾಶ್ವತ ಪಾತ್ರಧಾರಿ ಎಂಬಂತೆ ತಮ್ಮ ಬದುಕಿನ ಕೊನೇ ದಿನಗಳವರೆಗೂ ಚಿರಯೌವ್ವನದ ಮುದ್ರೆ ಹೊತ್ತೇ ಸಾರ್ವಜನಿಕ ದರ್ಶನ ಮತ್ತು ಹೇಳಿಕೆ ನೀಡುತ್ತಿದ್ದ ಸೊಗಸುಗಾರ ಮತ್ತು ಸರದಾರರಾಗಿದ್ದರು. ಸಮೂಹ ಮಾಧ್ಯಮಗಳು ಅವರ ನಿಧನದ ಸಂದರ್ಭದಲ್ಲಿ ಅವರ ಬಗ್ಗೆ ಬಳಸಿದ 'ವರ್ಣರಂಜಿತ ವ್ಯಕ್ತಿತ್ವ' ಎಂಬುದು ಬಹಳ ಬಾರಿ ಆಗುವಂತೆ ಸವಕಲು ಪ್ರಯೋಗವಾಗದೆ, ಅದರಲ್ಲಿ ಅವರ ಈ ಸೊಗಸುಗಾರಿಕೆ ಮತ್ತು ಸರದಾರಿಕೆ ಎರಡೂ ಸೇರಿ ಅಕ್ಷರಶಃ ನಿಜವಾಗಿತ್ತು. ಅವರು ಕುಗ್ರಾಮವೊಂದರ ಬಡಗೇಣಿದಾರನ ಮಗನಾಗಿ ಸಮಾಜವಾದಿ ಚಳುವಳಿಯ ಹಿನ್ನೆಲೆಯಿಂದ ಬೆಳೆದವರು ಎಂಬುದು ಅವರ ರಾಜಕೀಯ ಜೀವನದ ಈ 'ವರ್ಣರಂಜಕತೆ'ಗೊಂದು ಕುತೂಹಲಕಾರಿ ಆಯಾಮವನ್ನು ಒದಗಿಸುತ್ತದೆ. ಹಾಗೇ ಅವರನ್ನು ಸಮಾಜವಾದಿ ಚಳುವಳಿ ರಾಜ್ಯದಲ್ಲಿ ಕಂಡ ದುರಂತಮಯ ಸ್ಥಿತ್ಯಂತರಗಳಿಗೆ ಒಂದು ರೂಪಕವನ್ನಾಗಿಯೂ ಪ್ರಸ್ತುತಪಡಿಸುತ್ತದೆ.

ಬಂಗಾರಪ್ಪ ತಮ್ಮ ರಾಜಕೀಯ ಜೀವನದ ಕೊನೆಯ ದಿನಗಳಲ್ಲಿ ಅದರ ತಾರ್ಕಿಕ ಅಂತ್ಯವೆಂಬಂತೆ ಕಂಡ ಎರಡು ಭಾರಿ ಸೋಲುಗಳ ಹೊರತಾಗಿ ಎಂದೂ ಜನಮನ್ನಣೆಯಿಂದ ವಂಚಿತರಾದವರಲ್ಲ. ಬೇರುಮಟ್ಟದ ಜನಸಂಪರ್ಕ ಪಡೆದಿದ್ದ ಅವರು ತಮ್ಮದೇ ವಿಶಿಷ್ಟ ವೈಯುಕ್ತಿಕ ಶೈಲಿಯಲ್ಲಿ ಆ ಜನಸಂಪರ್ಕವನ್ನು ಭದ್ರ ಮತದಾರ ಕೋಟೆಯನ್ನಾಗಿ ಪರಿವರ್ತಿಸಿಕೊಂಡಿದ್ದರು. ಅದೇನೂ ಅಭಿವೃದ್ಧಿ ಆಧಾರಿತ–ಅವರ ಶಾಸಕತ್ವದ ಅವಧಿಯಲ್ಲಿ ಅವರ ಕ್ಷೇತ್ರ ಸೊರಬ ಹಾಳುಕೊಂಪ್ಪೆಯಾಗಿಯೇ ಉಳಿದಿತ್ತು–ಅಥವಾ ಕೇವಲ ಜಾತಿ ಆಧಾರಿತ ಕೋಟೆಯಾಗಿರಲಿಲ್ಲ. ಅದು ಅವರ ರಾಜಕೀಯ ಸಂಘಟನಾ ಚಾತುರ್ಯದ ಮತ್ತು ವೈಯುಕ್ತಿಕ ಮಟ್ಟದಲ್ಲಿನ ಅವರ ಸ್ನೇಹಶೀಲತೆಯ ಪರಿಣಾಮ ಮಾತ್ರವಾಗಿತ್ತು. ಹಾಗಾಗಿಯೇ ಅವರು ತಮ್ಮ ರಾಜಕೀಯ ಜೀವನದಲ್ಲಿ ತೊಟ್ಟ ಹಲವು ವೇಷಗಳನ್ನು ಮತ್ತು ಅದರ ಭಾಗವಾಗಿ ಹಾಕಿದ ಹಲವಾರು ತಿಪ್ಪರ ಲಾಗಗಳನ್ನು ಜನ ಸಹಾನುಭೂತಿಯಿಂದಲೇ ನೋಡಿ ಅವರನ್ನು ಪಕ್ಷನಿಷ್ಠೆ ಮೀರಿ ತಮ್ಮ ನಾಯಕನನ್ನಾಗಿ ಒಪ್ಪಿಕೊಂಡಿದ್ದರು. ಇದು ಭಾರತದ ಸಂಸದೀಯ ರಾಜಕಾರಣದ ಕುತೂಹಲಕಾರಿ ವಿಶಿಷ್ಟತೆ ಹೇಗೋ, ದೊಡ್ಡ ದೌರ್ಬಲ್ಯವೂ ಹೌದು. ಇದು ಬಂಗಾರಪ್ಪನವರ ಈ ವರ್ಣರಂಜಿತ ರಾಜಕೀಯ ಜೀವನದ ಆತ್ಯಂತಿಕ ದುರಂತವನ್ನು ಗಮನಿಸಿದರೆ ಗೊತ್ತಾದೀತು. ಸಮಾಜವಾದಿಯಾಗಿ

ಆರಂಭವಾದ ಅವರ ರಾಜಕೀಯ ಜೀವನವನ್ನು ಹತ್ತಿರದಿಂದ ಗಮನಿಸುತ್ತಾ ಬಂದವರ ಮನಸ್ಸನ್ನು ಬಂಗಾರಪ್ಪ ಬರೀ ಇಷ್ಟಕ್ಕಾಗಿ ಇಷೆಲ್ಲ ಮಾಡಬೇಕಾಯಿತೇ ಎಂಬ ಪ್ರಶ್ನೆ ಹುಟ್ಟು ಹಾಕುವ ಒಂದು ವಿಚಿತ್ರ ವಿಷಾದ ಮುತ್ತುತ್ತದೆ.

ಬಂಗಾರಪ್ಪ ತಮ್ಮ 45 ವರ್ಷಗಳ ಸಂಸದೀಯ ರಾಜಕಾರಣದಲ್ಲಿ ಅಧಿಕಾರ ಅನುಭವಿಸಿದ್ದು ಸುಮಾರು ನಾಲ್ಕೂವರೆ ವರ್ಷಗಳ ಕಾಲ ಮಾತ್ರ. ಇದನ್ನು ಕೆಲವರು ಅವರು ಎಂದೂ ಅಧಿಕಾರಕ್ಕಾಗಿ ರಾಜಕಾರಣ ಮಾಡಲಿಲ್ಲ ಎಂಬುದಕ್ಕೆ ಸಾಕ್ಷಿ ಎಂದು ವ್ಯಾಖ್ಯಾನಿಸುತ್ತಾರೆ. ಆದರೆ ಅವರು ಈ ಅಧಿಕಾರಾವಧಿಯ ಹೊರತಾಗಿ ಮಿಕ್ಕ ಅವಧಿಯಲ್ಲಿ ಮಾಡಿದ ರಾಜಕಾರಣದ ವೈಖರಿಯನ್ನು ವಿವರವಾಗಿ ನೋಡಿದರೆ, ಇದೊಂದು ತಪ್ಪು ವ್ಯಾಖ್ಯಾನ ಎಂಬುದು ಗೊತ್ತಾಗುತ್ತದೆ. ಶಾಸನಸಭಾ ಸದಸ್ಯತ್ವದ ಎರಡನೇ ಅವಧಿಯ ಆರಂಭದಲ್ಲೇ-ತಮ್ಮ ನಾಯಕ ಗೋಪಾಲಗೌಡರು ಮರೆಯಾಗುತ್ತಿದ್ದಂತೆ-ತಮಗೆ ರಾಜಕೀಯ ಪ್ರವೇಶ ನೀಡಿದ ಸಮಾಜವಾದಿ ಪಕ್ಷವನ್ನು ವೈಯುಕ್ತಿಕ ಹಿರಿಮೆಯನ್ನು ಮುಂದೊಡ್ಡಿ ತೊರೆದ ಬಂಗಾರಪ್ಪ ಆನಂತರ ಕಟ್ಟಿದ, ವಿಸರ್ಜಿಸಿದ, ಸೇರಿದ, ಬಿಟ್ಟ ಪಕ್ಷಗಳಿಗೆ ಲೆಕ್ಕವೇ ಇಲ್ಲ. ಮೊದಲ ಪಕ್ಷಾಂತರದಿಂದ ಹಿಡಿದು ಕೊನೆಯ ಪಕ್ಷಾಂತರದವರೆಗೂ-ಸುಮಾರು ಹನ್ನೆರಡಕ್ಕೂ ಹೆಚ್ಚು ಬಾರಿ-ಅವರು ಇದನ್ನೆಲ್ಲ ಮಾಡಿದ್ದು ಸ್ವಯಂ ಪ್ರಾಮುಖ್ಯತೆಯ ವ್ಯಸನದಲ್ಲಿಯೇ. ತಮ್ಮನ್ನು ಗುರುತಿಸಿ ಅಧಿಕಾರ ನೀಡಿದ ದೇವರಾಜ ಅರಸರನ್ನು ನಡುನೀರಿನಲ್ಲಿ ಕೈಬಿಟ್ಟು ತಾವೊಮ್ಮೆ ಹೀನಾಮಾನ ದೂಷಿಸಿದ್ದ ಇಂದಿರಾ ಗಾಂಧಿ ಬಣ ಸೇರಿಕೊಂಡದ್ದು ಮತ್ತು ತಮಗೆ ಮಂತ್ರಿಗಿರಿ, ಮುಖ್ಯಮಂತ್ರಿಗಿರಿ, ಪಕ್ಷದ ಅಧ್ಯಕ್ಷ ಸ್ಥಾನ ಮತ್ತು ವಿರೋಧ ಪಕ್ಷದ ನಾಯಕನ ಸ್ಥಾನ ಹೀಗೆ ಎಲ್ಲವನ್ನೂ ನೀಡಿದ ಕಾಂಗ್ರೆಸ್ ಪಕ್ಷವನ್ನು ವೈಯುಕ್ತಿಕ ಹತಾಶೆಯಲ್ಲಿ ನಿರ್ನಾಮ ಮಾಡುವ ಪಣ ತೊಟ್ಟು ಬಿಜೆಪಿ ಸೇರಿದ್ದು ಅವರ ರಾಜಕೀಯ ಜೀವನದ ಪಾತಾಳ ಬಿಂದುಗಳು.

ಅಧಿಕಾರದಲ್ಲಿದ್ದಾಗ ಒಳ್ಳೆಯ ಮತ್ತು ಜನಪರ ಆಡಳಿತಗಾರರೆನಿಸಿಕೊಂಡಿದ್ದರೂ, ಪಕ್ಷವೊಂದರ ಶಿಸ್ತಿಗೆ ಬದ್ಧರಾಗದ ಅವರ ವೈಯುಕ್ತಿಕ ಶೈಲಿಯ ರಾಜಕಾರಣ ಅವರನ್ನು ಹೆಚ್ಚೆಚ್ಚು ಹಠಮಾರಿ, ಠೇಂಕಾರದ ಮತ್ತು ಸೇಡಿನ ರಾಜಕಾರಣಿಯನ್ನಾಗಿ ಮಾಡುತ್ತಾ ಹೋಯಿತು. ಇದು ಕೊನೆಯಲ್ಲಿ ಅವರನ್ನು ಸಂಪೂರ್ಣವಾಗಿ ದಾರಿ ತಪ್ಪಿಸಿ ಒಂದಾದರಮೇಲೊಂದರಂತೆ ಎರಡು ಭಾರಿ ಸೋಲುಗಳಿಗೆ-ಅದರಲ್ಲೂ ಒಂದು, ಬಚ್ಚಾ ರಾಜಕಾರಣಿಯೊಬ್ಬರ ಎದುರು-ಅವರನ್ನು ತುತ್ತಾಗಿಸುವಂತೆ ಮಾಡಿತು. ಜನರ ಸಹನೆಯ ಕಟ್ಟೆ ಒಡೆದಿತ್ತು. ಅದನ್ನು ಅವರು ಅರಿಯುವ ಹೊತ್ತಿಗೆ ಎಲ್ಲಕ್ಕೂ ತಡವಾಗಿತ್ತು. ಅಲ್ಲಿಂದಾಚೆಗೆ ಅವರು ಚೇತರಿಸಿಕೊಳ್ಳಲೇ ಆಗಲಿಲ್ಲ. ಇದೆಲ್ಲದರ ಸಂಚಿತ ಪರಿಣಾಮವಾಗಿ ಅವರ ಕುಟುಂಬ ರಾಜಕಾರಣವೂ ಬಿರುಗಾಳಿಗೆ ಸಿಕ್ಕ ಹಡಗಿನಂತಾಗಿ, ಅವರು ಕೊನೆಯಲ್ಲಿ ಇನ್ನೊಬ್ಬರ-ಹಿಂದೊಮ್ಮೆ ತಮ್ಮ ರಾಜಕೀಯ ಶತ್ರುವೆನಿಸಿದ್ದ-ಕುಟುಂಬ ರಾಜಕಾರಣದ ಏಳಿಗೆಗೆ ಬದ್ಧತೆಯನ್ನು ಘೋಷಿಸುವ ಸ್ಥಿತಿ ತಲುಪುವಂತಾಯಿತು!

ಬಂಗಾರಪ್ಪನವರ ಈ ದಿಕ್ಕು ತಪ್ಪಿದ ವೈಯುಕ್ತಿಕ ನೆಲೆಯ ರಾಜಕಾರಣ ಹೆಚ್ಚು ದುರಂತಮಯ ಎನ್ನಿಸುವುದು ಅವರು ಗೋಪಾಲಗೌಡರ ಸ್ಫೂರ್ತಿಯಲ್ಲಿ

ಸಮಾಜವಾದಿಯಾಗಿ ತಮ್ಮ ರಾಜಕಾರಣವನ್ನು ಅರಂಭಿಸಿದವರು ಎಂಬ ಸಂಗತಿಯ ಹಿನ್ನೆಲೆಯಲ್ಲಿ. ಪ್ರಭುತ್ವದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಸಮುದಾಯದಿಂದ ಮತ್ತು ಸಮಾಜವಾದಿ ಆಂದೋಲನದ ಹೊಸ ಹುರುಪಿನ ಅಲೆಯ ಮೇಲೆ ಜನ ನಾಯಕರಾಗಿ ತೇಲಿಬಂದ ಬಂಗಾರಪ್ಪ ಮತ್ತು ಅವರ ಗೆಳೆಯರು ಪ್ರಭುತ್ವದ ಮೊದಲ ಹಂತಹ ಅಧಿಕಾರದ ರುಚಿಗೇ ಬಲಿಯಾದವರಂತೆ, ಸಮಾಜವಾದವನ್ನೇ, ಅದರ ರಾಜಕೀಯ ಸಮಗ್ರತೆಯನ್ನೇ ಮರೆತು ತಮ್ಮ ವೈಯುಕ್ತಿಕ ರಾಜಕೀಯ ಉಳಿವನ್ನೇ, ಉನ್ನತಿಯನ್ನೇ ಮುಖ್ಯ ಮಾಡಿಕೊಂಡರಲ್ಲಾ. ಏಕೆ? ಅಂತಿಮವಾಗಿ ಗೆಲ್ಲಬೇಕಾದ್ದು, ಅಧಿಕಾರ ನಡೆಸಬೇಕಾದ್ದು ಸಮಾಜವಾದವೇ ಹೊರತು, ವೈಯುಕಿಕವಾಗಿ ತಾವಲ್ಲ ಎಂಬ ಸಮಾಜವಾದಿ ರಾಜಕಾರಣದ ಪ್ರಾಥಮಿಕ ಪಾಠಕ್ಕೇ ಇವರು ಮತ್ತು ಇವರ ಗೆಳೆಯರು ಎರವಾಗುತ್ತಾ ಹೋದರಲ್ಲಾ ಏಕೆ? ಇದನ್ನೆಲ್ಲ ವೈಯುಕ್ತಿಕ ದೌರ್ಬಲ್ಯಗಳೆಂದು ಸುಲಭವಾಗಿ ತಳ್ಳಿಹಾಕುವುದು ಬೇಜವಾಬ್ದಾರಿ ರಾಜಕೀಯ ವಿಶ್ಲೇಷಣೆಯಾದೀತು. ಸಮಾಜವಾದಿ ರಾಜಕಾರಣವನ್ನು ಹೊಸ ಕಾಲದ ಸವಾಲುಗಳ ಎದುರಿಗೆ ಪುನರ್‌ಪ್ರಸ್ತುತಪಡಿಸಬೇಕಾದ ಈ ಹೊತ್ತಿನಲ್ಲಿ ಬಂಗಾರಪ್ಪನವರ ರಾಜಕಾರಣ ಎತ್ತುವ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಅನಿವಾರ್ಯವಾಗಿದೆ.

ಬಂಗಾರಪ್ಪ ಹಾಗೂ ಅವರ ಹಾಗೆ ಶೋಷಿತ, ಕೆಳ ಎಂದು ಹೇಳಲಾಗುವ ಜಾತಿಗಳಿಂದ ಬಂದ ನಾಯಕರ ರಾಜಕಾರಣ ನೋಡಿದಾಗ, ಜಾತಿ ವ್ಯವಸ್ಥೆ ಮತ್ತು ಜಾತಿ ವಿನಾಶ ಕುರಿತ ನಮ್ಮ ಸಮಾಜವಾದಿ ನಿಲುವು–ನೀತಿಗಳಲ್ಲಿ ತೀವ್ರ ಬದಲಾವಣೆಯ ಅಗತ್ಯ ನಮಗೆ ಕಾಣದಿರದು. ಕೆಳ ಜಾತಿಗಳ ನಾಯಕರು ಪ್ರಭುತ್ವದಲ್ಲಿ ಒಂದಿಷ್ಟು ಜಾಗ ಸಿಕ್ಕೊಡನೆ ಮಧ್ಯಮ ಜಾತಿಗಳ ಎಲ್ಲ 'ಗೌಡಿಕೆ' ಲಕ್ಷಣಗಳನ್ನು ಪಡೆದುಕೊಂಡುಬಿಡುವುದನ್ನು ನಾವು ಇಂದು ರಾಷ್ಟ್ರವ್ಯಾಪಿ ವಿದ್ಯಮಾನವಾಗಿ ನೋಡುತ್ತಿದ್ದೇವೆ. ಈ ದೃಷ್ಟಿಯಿಂದ ನಮ್ಮ ಜಾತಿ ವ್ಯವಸ್ಥೆಯಲ್ಲಿ ಇರುವುದು ನಿಜವಾಗಿ ಮೂರೇ ಶ್ರೇಣಿಗಳೆಂದು ಗೊತ್ತಾಗುತ್ತದೆ; ಒಂದು ಅಸ್ಪೃಶ್ಯ, ಎರಡು ಮಧ್ಯಮ ಮತ್ತು ಮೂರು ಮೇಲು ಜಾತಿ. ಮಿಕ್ಕವೆಲ್ಲ ಸಂಚಾರಿ ಶ್ರೇಣಿಗಳು. ಲೋಹಿಯಾ, ಕೆಳಜಾತಿಗಳು ಒಂದಿಷ್ಟು 'ಚೇತನ' ಪಡೆದೊಡನೆ ಮೇಲ್ಜಾತಿಗಳನ್ನು ಅನುಕರಿಸುವ ಅಪಾಯದ ಬಗ್ಗೆ ಎಚ್ಚರಿಸಿದ್ದರು. ಆದರೆ ಅವು ಹೀಗೆ ಮಧ್ಯಮ ಜಾತಿಗಳನ್ನು ಅನುಕರಿಸುವುದಿರಲಿ, ಅದೇ ಆಗಿಬಿಡುವ ಈ ಅಪಾಯ ಸಮಾಜವಾದ ಪ್ರತಿಪಾದಿಸಿದ ಜಾತಿವಿನಾಶ ರಾಜಕಾರಣದ ಕಲ್ಪನೆಯನ್ನೇ ಬುಡಮೇಲುಗೊಳಿಸುವಂತಿದೆ. ಹಿರಿಯ ರಾಜಕೀಯ ಚಿಂತಕ ಮತ್ತು ನಮ್ಮ ತಲೆಮಾರಿನ ಸಮಾಜವಾದಿ ಗುರು ಕಿಷನ್ ಪಟ್ನಾಯಕ್ ಪ್ರಕಾರ, ಬಿಜೆಪಿಯವರಂತೆ ಸಮಾಜವಾದಿಗಳು ಅಧಿಕಾರಕ್ಕಾಗಿ ಕಾಯದೆ ಹುಡುಕಿಕೊಂಡು ಹೋದರು;ಆ ಅವಸರದ ಹಾದಿಯಲ್ಲಿ ಸಮಾಜವಾದವನ್ನೇ ಕಳೆದುಕೊಂಡರು. ಇದರ ಮೂಲ ಕಾರಣವನ್ನು ಬಂಗಾರಪ್ಪ ಮತ್ತವರ ತಲೆಮಾರಿನವರು ಪ್ರತಿನಿಧಿಸುವ ಶೂದ್ರ ರಾಜಕಾರಣದ ಮೂಲಕ ಬುಡಮೇಲುಗೊಂಡ ಸಮಾಜವಾದಿ ಜಾತಿನೀತಿಯಲ್ಲಿ ಗುರುತಿಸಬಹುದೇ? ಚರ್ಚೆಗೆ ಅವಕಾಶವಿದೆ.

.ಎಸ್.ನಾಗಭೂಷಣ

(ಫೆಬ್ರುವರಿ, 2012)

ಎಲ್ಲರ ಪ್ರೀತಿಯ ಅಣ್ಣಯ್ಯ, ವೈ.ಆರ್. ಪರಮೇಶ್ವರಪ್ಪ



ಶಿವಮೊಗ್ಗದಲ್ಲಿ ಒಬ್ಬ ಬಡ ಕ್ರಿಶ್ಚಿಯನ್ ತನ್ನ ಸಣ್ಣ ಜಾಗವನ್ನು ಯಾರೋ ಒತ್ತುವರಿ ಮಾಡಿ ಕೊಂಡಿದ್ದಾರೆ ಎಂದು ದೂರಿ ನ್ಯಾಯಾಲಯಕ್ಕೆ ಮೊರೆ ಹೋದ. ಅದಕ್ಕಾಗಿ ಒಂದು ಅಫಿಡವಿಟ್ ಸಲ್ಲಿಸಲೂ ಅವನಲ್ಲಿ ಹಣವಿಲ್ಲ. ಅಚಾನಕ್ಕಾಗಿ ಸಿಕ್ಕ ವಕೀಲ ವೈ.ಆರ್. ಪರಮೇಶ್ವರಪ್ಪ ಅವರ ಮುಂದೆ ತನ್ನ ಗೋಳನ್ನು ಹೇಳಿಕೊಂಡ. ಈ ವಕೀಲನ ಕಿಸೆಯಲ್ಲೂ ಹಣವಿಲ್ಲ! ಎರಡು ರೂಪಾಯಿಗಾಗಿ ಕೈ ಒಡ್ಡಿದ್ದು ಮತ್ತೊಬ್ಬ ವಕೀಲ ಶಂಕರನಾರಾಯಣ ಭಟ್ಟರ ಬಳಿ. ಅವರು ಕೊಟ್ಟ ಎರಡು ರೂಪಾಯಿಯಿಂದ ಪರಮೇಶ್ವರಪ್ಪ ಅಫಿಡವಿಟ್ ಸಲ್ಲಿಸಿದರು. ಆ ಬಡಪಾಯಿಯ ಕೇಸನ್ನು ಮುಂದುವರೆಸಿ ಗೆದ್ದುಕೊಟ್ಟರು.

ಅಣ್ಣಯ್ಯ ಎಂದೇ ಇಂದೂ ಶಿವಮೊಗ್ಗದ ಜನ ಆರ್ದ್ರವಾಗಿ ನೆನೆಪಿಸಿಕೊಳ್ಳುವ ವೈ.ಆರ್. ಪರಮೇಶ್ವರಪ್ಪನವರ ದುಡಿಮೆಯ ಜೀವನ ಈ ರೀತಿಯ ವಕೀಲಿ ವೃತ್ತಿಯಿಂದ ಆರಂಭವಾಯಿತು. ಅವರು ತಮ್ಮ ವೃತ್ತಿ ಜೀವನದ ಉದ್ದಕ್ಕೂ ಹೀಗೆಯೇ ನಡೆದುಕೊಂಡರು. ಅವರ ಸ್ವಭಾವದಲ್ಲೇ ದೀನದಲಿತರ ಪರವಾಗಿದ್ದ ಸಮಾಜವಾದಿ ಸಿದ್ಧಾಂತ ಅಂತರ್ಗತವಾಗಿತ್ತು. ಅವರ ಮುಖ್ಯ ಕಾಳಜಿ ಪೂರ್ಣಕಾಲದ ರಾಜಕಾರಣವಾಗಿರಲಿಲ್ಲ. ಅದು ಶೋಷಿತರ ಬಿಡುಗಡೆಯ ಸಹಜವಾದ ಮತ್ತು ನಿಸ್ವಾರ್ಥವಾದ ಕಳಕಳಿಯಾಗಿತ್ತು.

ಅಣ್ಣಯ್ಯನ ಮೂಲ ಗ್ರಾಮ ಬುಕ್ಕಾಂಬುದಿ ಬಳಿಯ ಯಳ್ಳಂಬಳ್ಳವಾದರೂ 1930ರ ದಶಕದಲ್ಲೆ ಶಿವಮೊಗ್ಗ ಸೇರಿದರು. ಮೊದಲಿನಿಂದಲೂ ಆರ್ಥಿಕವಾಗಿ ಹೇಳಿಕೊಳ್ಳುವಂತಹ ಅನುಕೂಲವಂತರಲ್ಲ. ಕಷ್ಟಪಟ್ಟು ಎಲ್.ಎಲ್.ಬಿ ಪೂರೈಸಿ ವಕೀಲಿ ವೃತ್ತಿ ಹಿಡಿದರೂ ಆರ್ಥಿಕ ಸುಭದ್ರತೆಗಾಗಿ ಎಂದೂ ಹಾತೊರೆದವರಲ್ಲ. ಬಡವರು ತರುತ್ತಿದ್ದ ವ್ಯಾಜ್ಯಗಳ ದಿನದಂದು ಮಾತ್ರ ಕೋರ್ಟ್‌ಗೆ ಹೋಗುತ್ತಿದ್ದರು.

ಬೆಂಗಳೂರಿನಲ್ಲಿ ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡ ವೈ.ಆರ್. ಪರಮೇಶ್ವರಪ್ಪ 1942–47ರ ಹೋರಾಟಗಳಲ್ಲಿ ಭಾಗವಹಿಸಿ ಜೈಲು ವಾಸ ಅನುಭವಿಸಿದರು. ವಿದ್ಯಾರ್ಥಿ ಕಾಂಗ್ರೆಸ್ ನಾಯಕರಾಗಿ ಎಲ್ಲರಿಂದ ಅಣ್ಣಯ್ಯ ಎಂದು ಕರೆಸಿಕೊಂಡ ಆತ್ಮೀಯ. 1948ರಲ್ಲಿ ಕಾಂಗ್ರೆಸ್ ಪಕ್ಷದಿಂದ ಸಮಾಜವಾದಿಗಳು ಹೊರಬಂದು ಸಮಾಜವಾದಿ ಪಕ್ಷ ರಚಿಸಿಕೊಂಡಾಗಲೂ ಪಕ್ಷದೊಂದಿಗೆ ಗುರುತಿಸಿಕೊಂಡ ಅಣ್ಣಯ್ಯ ಪಕ್ಷವು ಕರ್ನಾಟಕದಲ್ಲಿ ಮುಖ್ಯವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ನೆಲೆಯೂರಲು ಕಾರಣಕರ್ತರಾದರು.

ಸಮಾಜವಾದಿ ಸಂಘಟನೆಯನ್ನು ಬಲಗೊಳಿಸಲು 1945ರಿಂದಲೇ ಅಣ್ಣಯ್ಯ

ಅಣಿಯಾಗುತ್ತಿದ್ದರು. ಈತನ ಹೋರಾಟ ಮನೋಭಾವವನ್ನು ಅರಿತಿದ್ದ ಖಾದ್ರಿ ಶಾಮಣ್ಣ ಒಮ್ಮೆ ಶಿವಮೊಗ್ಗಕ್ಕೆ ಬಂದಾಗ ಒಕ್ಕಲಿಗರ ವಿದ್ಯಾರ್ಥಿ ನಿಲಯದಲ್ಲಿದ್ದ ಗೋಪಾಲಗೌಡರನ್ನು ಇವರಿಗೆ ಪರಿಚಯಿಸಿದರು. ಅಂದಿನಿಂದ ಇವರಿಬ್ಬರ ಗೆಳೆತನ ದಿನದಿಂದ ದಿನಕ್ಕೆ ಗಾಢವಾಯಿತು. ಇನ್ನೋರ್ವ ಸಮಾಜವಾದಿ ಹೋರಾಟಗಾರ ಎಸ್.ಎಸ್.ಕುಮಟ ಹೇಳುತ್ತಿದ್ದರಂತೆ, ಅಣ್ಣಯ್ಯನ ಸಮಾಜವಾದಿ ಬತ್ತಳಿಕೆಯಲ್ಲಿ ಅನೇಕ ಅಸ್ತ್ರಗಳಲ್ಲಿ ಪ್ರಬಲ ಅಸ್ತ್ರ ಗೋಪಾಲ ಗೌಡರು.

1948ರಲ್ಲಿ ತೀರ್ಥಹಳ್ಳಿಯಲ್ಲಿ 'ಹಿಂದ್ ಕಿಸಾನ್ ಪಂಚಾಯತ್' ರೈತರ ಬೃಹತ್ ಸಮ್ಮೇಳನವನ್ನು ಸಂಘಟಿಸಿದರು. ಆ ಸಂದರ್ಭದಲ್ಲಿ ಅಣ್ಣಯ್ಯನ ಪಾತ್ರ ಸಮ್ಮೇಳನದ ಯಶಸ್ಸಿಗೆ ಕಾರಣವಾಯಿತು. ಅಲ್ಲಿಂದ ಪ್ರಾರಂಭವಾದ ಅನೇಕ ರೈತ ಸಭೆಗಳು, ಸಮಾಲೋಚನೆಗಳಲ್ಲಿ ಇವರಿಬ್ಬರು ಒಟ್ಟಾಗಿ ಭಾಗವಹಿಸಿದರು. 1951ರಲ್ಲಿ ಪ್ರಾರಂಭವಾದ ಕಾಗೋಡು ಚಳವಳಿಯಲ್ಲಿ ಸಮಾಜವಾದಿಗಳದೇ ನೇತೃತ್ವ ಅಣ್ಣಯ್ಯ, ಸೀತಾರಾಮ, ಅಯ್ಯಂಗಾರ್ ಸಾಗರ ತಾಲ್ಲೂಕಿನ ಹಳ್ಳಿ ಹಳ್ಳಿಗಳಿಗೆ ಸಂಚರಿಸಿದರು. ಆ ಕಾಲದ ಮುಖ್ಯ ವಾಹನವೆಂದರೆ ಸೈಕಲ್, ಕೆಲವೊಮ್ಮೆ ಕಾಲು ನಡಿಗೆ. ಇವರಿಬ್ಬರ ಪ್ರಯತ್ನದ ಫಲವಾಗಿ ಚಳವಳಿ ಸ್ಫೋಟಕ ಘಟ್ಟ ಮುಟ್ಟಿತು. ಅಗತ್ಯವಾಗಿ ಬೇಕಾಗಿದ್ದ ಹಣ, ಪ್ರಚಾರ ವ್ಯವಸ್ಥೆ, ಜನ ಬೆಂಬಲಗಳಿಗಾಗಿ ಅಣ್ಣಯ್ಯ ಶಿವಮೊಗ್ಗ ಸಾಗರ ತೀರ್ಥಹಳ್ಳಿ ಭಾಗಗಳಲ್ಲಿ ರಾತ್ರಿ ಹಗಲೆನ್ನದೆ ದುಡಿದರು.

ಅಣ್ಣಯನವರಿಗೆ ರಾಜಕೀಯದಲ್ಲಿ ಸ್ಥಾನ ಮಾನದ ಆಸೆ ಇರಲಿಲ್ಲ. ಆದರೂ ಗೋಪಾಲಗೌಡರು ಮತ್ತು ಇನ್ನಿತರ ಗೆಳೆಯರ ಒತ್ತಾಯದ ಮೇರೆಗೆ 1957ರ ವಿಧಾನ ಸಭೆ ಚುನಾವಣೆಗೆ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದರು. ಆದರೆ ಸೋತರು. ಪುನಃ 1962 ಮತ್ತು 1967ರಲ್ಲಿ ಅಣ್ಣಯ್ಯನ ಸೋಲು. ಹೀಗೆ ಸೋಲಿನ ಸರಮಾಲೆ ಅವರ ಕೊರಳಿಗೆ ಬಿದ್ದರೂ ಧೃತಿಗೆಡದ ಅವರು, ಈ ಮಧ್ಯೆ 1963ರ ಶಿವಮೊಗ್ಗ ಪುರಸಭಾ ಚುನಾವಣೆಯಲ್ಲಿ ಇನ್ನೋರ್ವ ಸಮಾಜವಾದಿ ಹೋರಾಟಗಾರ ಎಸ್.ಎಸ್. ಭರ್ಮಪ್ಪನವರೊಡನೆ ಪ್ರಚಂಡ ಬಹುಮತಗಳಿಂದ ಗೆದ್ದರು. ಆಗ ಪುರಸಭೆಯಲ್ಲಿ ಕಾಂಗ್ರೆಸ್ ಬಹುಸಂಖ್ಯಾತ ಪಕ್ಷವಾಗಿದ್ದರೂ ಭರಮಪ್ಪ ಮುಂತಾದವರ ಸಂಧಾನ, ಚತುರತೆಗಳು ಕಾಂಗ್ರೆಸ್ ಸದಸ್ಯರು ಸಹ ಅಣ್ಣಯ್ಯರಿಗೆ ಬೆಂಬಲ ನೀಡುವಂತೆ ಮಾಡಿದವು. ಅದಲ್ಲದೆ ಅಣ್ಣಯ್ಯ ಅವರಲ್ಲಿದ್ದ ಸರಳತೆ, ಮೃದು ಸ್ವಭಾವಗಳು ಎಲ್ಲರನ್ನು ಸೆಳೆಯುತ್ತಿದ್ದವು. ಎರಡೂವರೆ ವರ್ಷಗಳು ಅವರು ಅಧ್ಯಕ್ಷರು. ಶಿವಮೊಗ್ಗ ಪುರಸಭೆಯ ಆಡಳಿತವನ್ನು ಚುರುಕುಗೊಳಿಸಿ ಅದನ್ನು ಒಂದು ವ್ಯವಸ್ಥಿತ ರೂಪಕ್ಕೆ ತಂದುದು, ಪ್ರತಿದಿನ ಸೈಕಲ್ ಸವಾರಿ ಮಾಡಿಕೊಂಡೇ ಬಡಾವಣೆಗಳ ಸಮಸ್ಯೆಗಳನ್ನು ನಿವಾರಿಸಲು ಹೋಗುತ್ತಿದ್ದುದು, ಪುರಸಭೆ ಆದಾಯವನ್ನು ಹೆಚ್ಚಿಸಿದುದು, ಊರಿನ ಶುಚಿತ್ವಕ್ಕೆ ಪ್ರಾಮುಖ್ಯ ನೀಡಿದುದು–ಈ ಸಾಧನೆಗಳು ಇಂದಿಗೂ ನಗರದ ಹಿರಿಯ ನಾಗರೀಕರಲ್ಲಿ ಅಣ್ಣಯ್ಯ ಅವರ ನೆನಪನ್ನು ಉಳಿಸಿವೆ.

1968ರಲ್ಲಿ ವಿಧಾನ ಪರಿಷತ್ ಚುನಾವಣೆಗೆ ಸ್ಪರ್ಧಿಸಿದ ಅಣ್ಣಯ್ಯ. ಕಾಂಗ್ರೆಸ್‌ನ ಪ್ರಬಲ ಸ್ಪರ್ಧೆಯ ಎದುರೂ ವಿಜೇತರಾದುದು ಅವರ ಜನಪ್ರಿಯ ವ್ಯಕ್ತಿತ್ವಕ್ಕೆ

ಹಿಡಿದ ಕೈಗನ್ನಡಿ. ಈ ಅವಧಿಯಲ್ಲಿ (1969-70) ನಡೆದ ಹೆಗಲತ್ತಿ ಕುಡುಗಲು ಮನೆ ಗೋಲಿಬಾರ್ ಪ್ರಕರಣದಲ್ಲಿ ಅಣ್ಣಯ್ಯ ತೆಗೆದುಕೊಂಡ ಸಂಯಮದ ತೀರ್ಮಾನಗಳು ಮುಂದೆ ಆಗಬಹುದಿದ್ದ ಅನೇಕ ಅನಾಹುತಗಳನ್ನು ತಪ್ಪಿಸಿದವು. ಗಾಜನೂರು- ಸಕ್ರೆಬೈಲ್ ಪ್ರದೇಶದಲ್ಲಿ ಹೆಗಲತ್ತಿ ಕುಡುಗಲು ಮನೆ. ಅಲ್ಲಿನ ಅರಣ್ಯ ಪ್ರದೇಶವನ್ನು ಕೇರಳದ ಕೆಲವರು ಆಕ್ರಮಿಸಿಕೊಂಡರು. ಸರ್ಕಾರ ಪೋಲೀಸ್ ಬಳಸಿ ಇವರನ್ನು ಒಕ್ಕಲೆಬ್ಬಿಸಲು ಪ್ರಾರಂಭಿಸಿತು. ಈ ವಲಸಿಗರ ಪರ-ವಿರೋಧ ಮುಷ್ಕರ ದೊಡ್ಡದಾಗಿ ವ್ಯಾಪಿಸಿತು. ಪೊಲೀಸ್ ಸ್ಟೇಷನ್‌ಗೆ ನುಗ್ಗಿದ ಜನ ಕೈಗೆ ಸಿಕ್ಕ ಬಂದೂಕನ್ನು ಎತ್ತಿಕೊಂಡರು. ಪರಿಸ್ಥಿತಿ ಕೈ ಮೀರಿತೆಂದು ಪೋಲೀಸರು ಗೋಲಿಬಾರ್ ಮಾಡಿದರು. ಒಬ್ಬ ಅಮಾಯಕ ಸಕ್ಕರೆ ಕಾರ್ಖಾನೆ ಕಾರ್ಮಿಕ ಇದಕ್ಕೆ ಬಲಿಯಾದ. ಇದರಿಂದ ಕೆರಳಿದ ಜನ ಸಮೂಹದಲ್ಲಿ ಮುನ್ನುಗ್ಗಿದ ಅಣ್ಣಯ್ಯ, ಜಿಲ್ಲಾಧಿಕಾರಿ ವಾಲಿ ಮತ್ತು ಎಸ್.ಪಿ. ಯಾಗಿದ್ದ ನಾಯರ್ ಅವರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡು ಪರಿಸ್ಥಿತಿಯನ್ನು ತಹಬಂದಿಗೆ ತರುವಲ್ಲಿ ಯಶಸ್ವಿಯಾದರು. ವಿಧಾನ ಪರಿಷತ್‌ನಲ್ಲಿ ಈ ಪ್ರಕರಣ ವಿವರವಾಗಿ ಪ್ರಸ್ತಾಪವಾಯಿತು. ಈ ಬಗ್ಗೆ ರಹಮತ್ ಉಲ್ಲಾ ತನಿಖಾ ಆಯೋಗವನ್ನು ನೇಮಿಸಲಾಯಿತು. ಕೇರಳದ ಮುಖ್ಯಮಂತ್ರಿಯೊಂದಿಗೆ ಸಮಾಲೋಚಿಸಿ ವಲಸಿಗರಿಗೆ ಪುನರ್ವಸತಿ ಕಲ್ಪಿಸುವಂತೆ ಮಾಡಲಾಯಿತು.

ಅಣ್ಣಯ್ಯ 1968ರಿಂದ 74ರವರೆಗೆ ವಿಧಾನ ಪರಿಷತ್ ಸದಸ್ಯರಾಗಿದ್ದ ಅವಧಿಯಲ್ಲಿ ಅವರು ನಗರ-ಗ್ರಾಮೀಣವೆನ್ನದೆ ಎಲ್ಲ ಜನರ ಸಮಸ್ಯೆಗಳ ಬಗ್ಗೆ ಎಷ್ಟು ಕೂಲಂಕುಶವಾಗಿ ಅಧ್ಯಯನ ಮಾಡಿ ವಿಷಯ ಮಂಡಿಸಿ ಸರ್ಕಾರದ ಪರಿಣಾಮಕಾರಿ ಗಮನ ಸೆಳೆಯುತ್ತಿದ್ದರೆಂದರೆ ಅವರ ಅವಧಿ ಮುಗಿದ ದಿನ ಮುಖ್ಯಮಂತ್ರಿ ದೇವರಾಜ ಅರಸು ಅವರು ಅಣ್ಣಯ್ಯರ ಕೈ ಕುಲುಕುತ್ತ "ಭೇಷ್ ಭೇಷ್ ಅಣ್ಣಯ್ಯ... ನಿಮ್ಮದು ಸಾರ್ಥಕವಾದ ಅವಧಿ. ನೀವು ವಿಧಾನಸೌಧದ ಅಡಿಗಲ್ಲನ್ನು ಅಲ್ಲಾಡಿಸಿದಿರಿ" ಎಂದರು.

ರಾಜಕಾರಣವನ್ನು ಎಂದೂ ಒಂದು ವೃತ್ತಿ ಅಥವಾ ಹವ್ಯಾಸವೆಂದೂ ಪರಿಗಣಿಸದ ಅಣ್ಣಯ್ಯ ಸಮಾಜಕ್ಕೆ ತಮ್ಮನ್ನು ಎಷ್ಟು ಪೂರ್ಣವಾಗಿ ಅರ್ಪಿಸಿಕೊಂಡಿದ್ದರೆಂದರೆ, ತಮ್ಮ ವೈಯಕ್ತಿಕ [illegible] ಅಥವಾ ಕುಟುಂಬದ ಸುರಕ್ಷತೆಯ ಬಗ್ಗೆ ಯೋಚನೆ ಮಾಡಿದವರೇ ಲ್ಲ. ಮನೆಯಲ್ಲಿ ಊಟಕ್ಕೆ ಅಕ್ಕಿಯೂ ಇಲ್ಲದ ದಿನಗಳು ಅನೇಕ. ಅಂತಹ ದಿನಗಳಂದೇ ಪರೀಕ್ಷಿಸಲು ಬರುತ್ತಿದ್ದ ಸೀತಾರಾಮ ಅಯ್ಯಂಗಾರರರೊ, ಭರ್ಮಪ್ಪನೊ ಅಕ್ಕಿ ಕಳುಹಿಸುತ್ತಿದ್ದರು. ಗಾಂಧಿ ಬಜಾರ್‌ನ ಕೊನೆಯಲ್ಲಿದ್ದ ಅವರು ಮನೆಯೂ ಸ್ವಂತದ್ದಲ್ಲ, ಅಳಿಯನದು. ತನಗಾಗಿ ಒಂದು ನಿವೇಶನ ಅಥವಾ ಮನೆಯನ್ನೂ ಮಾಡಿಕೊಳ್ಳಲಿಲ್ಲ. ಜೆ.ಎಚ್. ಪಟೇಲರ ಒತ್ತಾಯದ ಮೇರೆಗೆ ಹೌಸಿಂಗ್ ಬೋರ್ಡ್ ಮನೆಯೊಂದು ಮಂಜೂರಾಯಿತು. ಸಾಲದ ಕಂತುಗಳನ್ನು ಕಟ್ಟಲಾಗದೆ ಮನೆ ಹರಾಜಿಗೆ ಬಂದಿತ್ತು. ಪುನಃ ಪಟೇಲರ ಸಹಕಾರದಿಂದಲೇ ದೊರೆತ ಆ ಮನೆಯಲ್ಲಿ ಈಗ ಅಣ್ಣಯ್ಯನವರ ಪತ್ನಿ ರತ್ನಮ್ಮ ವಾಸವಾಗಿದ್ದಾರೆ. ಒಬ್ಬ ಮಗ, ಮಗಳು ಸ್ವಂತ ಶಕ್ತಿಯಿಂದ ಶಿಕ್ಷಣ ಪೂರೈಸಿಕೊಂಡು

ಉದ್ಯೋಗಗಳಲ್ಲಿದ್ದಾರೆ.

ಜೆ.ಎಚ್. ಪಟೇಲರು ಬರೆದ ಬಹುಶಃ ಒಂದೇ ಲೇಖನವೆಂದರೆ "ಅಣ್ಣಯ್ಯ ಹಾಗೂ ನಮ್ಮ ಪಕ್ಷ". ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಪಟೇಲರು ಗುಲ್ಬರ್ಗ ಜೈಲಿನಲ್ಲಿದ್ದರು. ಅಣ್ಣಯ್ಯನ ನಿಧನದ ಸುದ್ದಿಯನ್ನು ಕೇಳಿದಾಗ ಬರೆದ ಪತ್ರ ರೂಪದ ಈ ಲೇಖನದ ಕೆಲವು ಸಾಲುಗಳು:

ಮತ್ತೊಮ್ಮೆ ಸಂಧಿಸಲಾಗದಂತೆ ನಿರಂತರ ಅಗಲಿಸುವುದೇ ಸಾವಿನ ಕ್ರೂರ ಗುಣ... ಅಣ್ಣಯ್ಯ 25 ವರ್ಷಗಳ ಒಡನಾಡಿ... ಶಿವಮೊಗ್ಗಕ್ಕೆ ಹೋದಾಗ ಆತನಿಲ್ಲದ ಸ್ಥಿತಿಯೇ ದಿಗ್ಭ್ರಮೆಗೊಳಿಸುತ್ತದೆ... ಒಮ್ಮೊಮ್ಮೆ ಶಿವಶರಣರಲ್ಲಿ ಒಬ್ಬನಾದ ಒಡ್ಡ ಸಿದ್ದರಾಮನಿಗೆ (ಅಣ್ಣಯ್ಯನನ್ನು) ಹೋಲಿಸುತ್ತಿದ್ದೆ... ಕಾಗೋಡು ಚಳವಳಿಯ ಬೆನ್ನೆಲುಬು ಅಣ್ಣಯ್ಯ... ಲಿಂಗಾಯಿತರಲ್ಲಿ ಬರೀ ಜಗಳ ತಿಕ್ಕಾಟ ಕಂಡರೆ ಇವನಿಗೆ ತಿರಸ್ಕಾರ, ಇವನು ಸದಾ ಸಮಾಜವಾದಿಯಾಗಿಯೇ ಉಳಿದ... ಕೊನೆಯವರೆಗೂ ಭ್ರಷ್ಟನಾಗದೆ ಸಿದ್ಧಾಂತಕ್ಕೆ ಅಂಟಿಕೊಂಡ. ಗೋಪಾಲಗೌಡ, ಅಣ್ಣಯ್ಯ ಸುತ್ತಮುತ್ತಲಿನ ಕತ್ತಲಿನಲ್ಲಿ ಬೆಳಕು ಬೀರಿದ ಮೇಣದ ಬತ್ತಿಗಳು, ತಮ್ಮನ್ನು ತಾವು ಸುಟ್ಟು ಕೊಂಡ, ಬೇರೆಯವರಿಗೆ ಇಂತಹ ಜೀವಿಗಳು ಕಾಣುವುದೆಂತು?

ಅಣ್ಣಯ್ಯನದು ಒಂದು ಸಾರ್ಥಕ ಬದುಕು, ಬೇರೆಯವರಿಗೆ ಒಂದು ನಿರಂತರ ಆದರ್ಶ.

–ಎಂ.ಬಿ. ನಟರಾಜ್

(ಮೇ, 2012)

ಸರಳ ಮನಸ್ಸಿನ ಶಂಕರನಾರಾಯಣ ಭಟ್ಟರು



ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಹೇರಲು ಮುಂದೆ ಕಾರಣವಾದ ಬಿಹಾರದ ಆಂದೋಲನ ರಾಷ್ಟ್ರವ್ಯಾಪಿ ಹರಡುತ್ತಿತ್ತು. ಜೆ.ಪಿ. ಅವರ ಹೋರಾಟ, ಪ್ರಭಾವಗಳು ಎಲ್ಲೆಡೆ ಪ್ರಬಲವಾಗಿ ವ್ಯಾಪಿಸುತ್ತಿದ್ದ ದಿನಗಳವು. ಇಂತಹ ಒಂದು ದಿನ, ಶಿವಮೊಗ್ಗದ ಬೃಂದಾವನ್ ವಸತಿ ಗೃಹದಲ್ಲಿ ಜೆ.ಎಚ್. ಪಟೇಲರು–ಆಗ ತಾನೇ ಬಿಹಾರ ಪ್ರವಾಸ ಮುಗಿಸಿಕೊಂಡು ಬಂದಿದ್ದವರು–ತಂಗಿದ್ದಾರೆ ಎಂದು ತಿಳಿಯಿತು. ನಮ್ಮ ಕಾಲೇಜಿನ ಒಂದು ಕಾರ್ಯಕ್ರಮಕ್ಕೆ ಬಂದಿದ್ದ ಪಿ. ಲಂಕೇಶ್ ಮತ್ತು ಆಲನಹಳ್ಳಿ ಕೃಷ್ಣ ನನ್ನನ್ನು ಕರೆದುಕೊಂಡು ಆ ವಸತಿಗೃಹಕ್ಕೆ ಹೊರಟರು.

ರಾತ್ರಿ ಸುಮಾರು ಒಂಬತ್ತು ಗಂಟೆ. ಪಟೇಲರು ನಮ್ಮನ್ನು ಪ್ರೀತಿಯಿಂದ ಆಹ್ವಾನಿಸಿದ್ದರು. ಬಿಹಾರದ ಚಳವಳಿಯನ್ನು ಪ್ರತ್ಯಕ್ಷವಾಗಿ ನೋಡಿಕೊಂಡು ಬಂದಿದ್ದ ಅವರು ಅನೇಕ ಘಟನೆಗಳನ್ನು ಬಿಡಿಸಿ ಹೇಳುತ್ತಿದ್ದರು. ಆಗ ಅವರ ಏಕಮಾತ್ರ ಶ್ರೋತೃ ಕೆ.ಶಂಕರನಾರಾಯಣ ಭಟ್ಟರು. ಮಧ್ಯೆ ಮಧ್ಯೆ ತಮ್ಮ ಪ್ರಶ್ನೆ–ಉಪಪ್ರಶ್ನೆ, ಪರ–ವಿರೋಧದ ಮಾತುಗಳಿಂದ, ಪಟೇಲರಿಂದ ಕೋಪಕ್ಕೂ, ತಮಾಷೆಗೂ ಒಳಗಾಗುತ್ತಿದ್ದರು. "ನೋಡಯ್ಯ ಭಟ್ಟ, ಜೆ.ಪಿ. ಚಳವಳಿಯ ಶಕ್ತಿಯನ್ನು ತಡೆಯಲು ಈಗ ಜಗತ್ತಿನ ಯಾವ ಶಕ್ತಿಗೂ ಇಲ್ಲ. ಸುಮ್ಮನೆ ಯಾಕೆ ನಿನ್ನ ಪಾಟಿ ಸವಾಲು?" ಎಂದರು. ಭಟ್ಟರು ದೀರ್ಘವಾಗಿ ಸಿಗರೇಟಿನ ಒಂದು ದಮ್ಮು ಎಳೆದು "ಜಯಣ್ಣ, ನಾನು ಹಾಗೆ ಕೇಳದಿದ್ದರೆ ನೀನು ಸುಲಭವಾಗಿ ಬಾಯಿ ಬಿಡುವವನಲ್ಲ. ಪ್ರಜಾಪ್ರಭುತ್ವ ಗಟ್ಟಿಯಾಗೋದು ಪ್ರಶ್ನೆ ಮಾಡೋದರಿಂದ" ಎಂದು ನಕ್ಕರು. ಪಟೇಲರು ಸಹ ನಗುತ್ತ "ಭಟ್ಟ...ಭಟ್ಟ...That is ಶಂಕರನಾರಾಯಣಭಟ್ಟ" ಎಂದರು.

ಶಿವಮೊಗ್ಗದಲ್ಲಿದ್ದ ಪ್ರಗತಿ ಪ್ರೆಸ್ ಮಾಲೀಕ ನಾರಾಯಣರಾಯರು ಒಮ್ಮೆ "ಶಂಕರನಾರಾಯಣ ಭಟ್ಟ ಒಬ್ಬ ಪುರಾತನ ಸಮಾಜವಾದಿ" ಎಂದಿದ್ದರು. ಅವರ ಅಭಿಪ್ರಾಯದಲ್ಲಿ ಭಟ್ಟರು ಅವರಿವರ ಪ್ರಭಾವದಿಂದ ರೂಢಿಸಿಕೊಂಡ ಸಮಾಜವಾದಿಯಾಗಿರಲಿಲ್ಲ. ಎಂದಿನಿಂದಲೂ ಅವರ ಸ್ವಭಾವದಲ್ಲಿ ಬೆಳೆದು ಬಂದ ಸ್ವಾಭಾವಿಕ ಗುಣವೇ ಹಾಗಿತ್ತು. 1932ರಲ್ಲಿ ತೀರ್ಥಹಳ್ಳಿ ತಾಲ್ಲೂಕು ಕರಿಮನೆಯಲ್ಲಿ ಹುಟ್ಟಿದ ಭಟ್ಟರು, ಎರಡೂ ಜಾಗತಿಕ ಯುದ್ಧಗಳ ಪರಿಣಾಮಗಳನ್ನು ಅನುಭವಿಸಿದವರು. ಅವರು ಆಗರ್ಭ ಶ್ರೀಮಂತ ಮನೆತನದಲ್ಲಿ ಹುಟ್ಟಿದರೂ ಮಲೆನಾಡಿನ ಜನರ ಕಷ್ಟ ಪರಂಪರೆಗಳನ್ನು ನೋಡುತ್ತಲೇ ಬೆಳೆದುಬಂದವರು.

1951ರಲ್ಲಿ ಪ್ರಾರಂಭವಾದ ಕಾಗೋಡು ಚಳವಳಿಯ ಒಡಲಿಂದ ಬೆಳೆದು ಬಂದ ಪ್ರಬಲ ಸಿದ್ಧಾಂತವೆಂದರೆ 'ಉಳುವವನೆ ನೆಲದೊಡೆಯ' ಎಂಬ ಹಸಿವಿನ ಮೊರೆ. ಇದು ತರುಣ ಶಂಕರನಾರಾಯಣ ಭಟ್ಟರ ಮನಸ್ಸಿನ ಮೇಲೆ ಗಾಢ ಪರಿಣಾಮ

ಬೀರಿತು. ಕಾಗೋಡು ಚಳವಳಿಯ ಸಂದರ್ಭದಲ್ಲಿ ತರುಣ ಶಂಕರನಾರಾಯಣ ಭಟ್ಟರದು ಉತ್ಸಾಹದ ಓಡಾಟ. ಗೋಪಾಲ ಗೌಡರಿಗೆ, ಇನ್ನಿತರ ಸಮಾಜವಾದಿ ಗೆಳೆಯರಿಗೆ ಇವರು ಬಲಗೈ ಬಂಟ. ಎಲ್ಲರೊಂದಿಗೆ ಬೆರೆತು ತಮಾಷೆಯಾಗಿ ಮಾತನಾಡುತ್ತ ಉತ್ಸಾಹ ತುಂಬುತ್ತಿದ್ದರು. 'ರೈತರಿಗೆ ಹೊಲ ಸಿಗಲಿಲ್ಲ, ಅವರ ನೇಗಿಲಿಗೆ ಹಲ್ಲು ಬರಲಿಲ್ಲ' ಎನ್ನುತ್ತಿದ್ದರಂತೆ. ಹಲ್ಲು ಎಂದರೆ ನೇಗಿಲಿನ ಕುಳ. ತಮ್ಮ ಕುಟುಂಬಕ್ಕೆ ತಲೆಮಾರಿನಿಂದ ಬಂದಿದ್ದ ನೂರಾರು ಎಕರೆ ತೋಟ-ಗದ್ದೆಗಳನ್ನು ಸ್ವ-ಇಚ್ಛೆಯಿಂದ ಸಹಜ ನಡವಳಿಕೆ ಎಂಬಂತೆ ಗೇಣಿದಾರರಿಗೆ ಬಿಟ್ಟುಕೊಟ್ಟವರಲ್ಲಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಭಟ್ಟರು ಮೊದಲಿಗರು. ಹೆಚ್ಚು ವಿದ್ಯಾಭ್ಯಾಸ ಮಾಡದ, ಕೃಷಿಯನ್ನೇ ನಂಬಿದ ಅವರ ಸಹೋದರ ಸುಬ್ರಾಯಭಟ್ಟರಿಗೆ ದೊರೆತಿದ್ದು ಕೇವಲ ಎರಡೂವರೆ ಎಕರೆ ಜಾಗ. ಈ ಘಟನೆಯನ್ನು ಅವರು ಎಂದೂ ಯಾರಿಗೂ ಹೆಚ್ಚುಗಾರಿಕೆಯಿಂದ ಹೇಳಿಕೊಳ್ಳಲಿಲ್ಲ, ಯಾರಾದರೂ ಈ ಮಾತನ್ನು ತೆಗೆದರೆ, ಅವರು ಅದನ್ನು ತಮ್ಮ ಸಿಗರೇಟಿನ ಹೊಗೆಯಲ್ಲಿ ತೇಲಿಸಿ ಬಿಡುತ್ತಿದ್ದರು, ಧನ್ಯತೆಯ ಭಾವದಿಂದ.

ಭಟ್ಟರು ಶಿವಮೊಗ್ಗದಲ್ಲಿ ಇಂಟರ್‌ಮೀಡಿಯಟ್, ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ., ಅನಂತರ ಬೆಳಗಾವಿಯಲ್ಲಿ ಎಲ್‌ಎಲ್.ಬಿ. ಪದವಿಗಳನ್ನು ಪಡೆದರು, ಕಾನೂನು ವಿದ್ಯಾಭ್ಯಾಸದ ಸಂದರ್ಭದಲ್ಲಿ ಜೆ.ಎಚ್. ಪಟೇಲರು ಅವರ ಸಹಪಾಠಿಗಳು. ಎಲ್.ಎಲ್.ಬಿ ಮುಗಿಸಿದ ನಂತರ ಇಬ್ಬರೂ ಸೇರಿ ವಕೀಲರ ಕಛೇರಿಯನ್ನು ದುರ್ಗಿಗುಡಿ ಬಡಾವಣೆಯಲ್ಲಿ ತೆರೆದಿದ್ದರು. ಕೆಲಕಾಲ ಭಟ್ಟರು ಅಪ್ಪು ಪೈ (ಡಾ॥ ಕೆ.ಎ. ಅಶೋಕ ಪೈ ಅವರ ತಂದೆ) ಅವರ ಜೂನಿಯರ್ ಆಗಿ ಕಾರ್ಯ ನಿರ್ವಹಿಸಿದರು. ಯಾರಾದರು ಕಕ್ಷಿದಾರರು ಪಟೇಲರನ್ನು ಕೇಳಿಕೊಂಡು ಬರುತ್ತಿದ್ದರು. ಆದರೆ ಪಟೇಲರದು ರಾಜಕೀಯ ಓಡಾಟ, ಅವರು ಕಾಣಸಿಗುತ್ತಿರಲಿಲ್ಲ. ಭಟ್ಟರು "ಪಟೇಲರು ದರ್ಜಿಯ ಹತ್ತಿರ ಹೋಗಿದ್ದಾರೆ- ಕರಿಕೋಟು ಹೊಲಿಸಲಿಕ್ಕೆ. ಕೋರ್ಟ್‌ನಲ್ಲಿ ನಿಮ್ಮ ಪರ ವಾದ ಮಾಡಬೇಕಲ್ಲವೆ?" ಎಂದು ಬಂದವರನ್ನು ನಗಿಸಿ ಕಳುಹಿಸುತ್ತಿದ್ದರು.

ವಕೀಲಿ ವೃತ್ತಿಯನ್ನು ಅವರು ಎಂದೂ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಕಳೆದುಕೊಂಡ ಆಸ್ತಿ ಮತ್ತು ಮಿತವಾದ ದುಡಿಮೆಯಿಂದಾಗಿ ಅವರು ಅಂತಹ ಸುಖಜೀವಿಗಳಾಗಿರಲಿಲ್ಲ. ವಕೀಲ ಸ್ನೇಹಿತರ ಒತ್ತಾಯದಿಂದ ಅವರು ನೋಟರಿಯಾಗಿದ್ದರು. ಸರ್ಕಾರದ ನಿಯಮದ ಪ್ರಕಾರ ತೆಗೆದುಕೊಳ್ಳಬೇಕಾದ ಫೀಜನ್ನು ಬಿಟ್ಟು ಒಂದು ರೂಪಾಯಿಯನ್ನು ಅವರು ಹೆಚ್ಚು ತೆಗೆದುಕೊಂಡವರಲ್ಲ. ಬಡವರು, ವಿದ್ಯಾರ್ಥಿಗಳ ದಾಖಲಾತಿಗೆ ಉಚಿತವಾಗಿಯೇ ತಮ್ಮ ನೋಟರಿ ಮುದ್ರೆ ಹಾಕುತ್ತಿದ್ದರು. ಅದೊಂದು ಹಣ ದುಡಿಮೆಯ ವೃತ್ತಿಯೆಂದು ಅವರಿಗೆ ಅನ್ನಿಸಲೇ ಇಲ್ಲ. ಅವರ ಬದುಕಿನ ಕೊನೆಯವರೆಗೂ ನೋಟರಿಯಾಗಿಯೇ ಮುಂದುವರೆಯಲು ಅವರ ಮನೋಭಾವ ಹೇಗೆ ಕಾರಣವೋ ಹಾಗೆಯೇ ಅವರ ವಕೀಲ-ಮಿತ್ರರ ಒತ್ತಾಸೆಯೂ ಕಾರಣ ಎನ್ನುತ್ತಾರೆ ಅವರ ಆತ್ಮೀಯ ಗೆಳೆಯ ವಕೀಲ ಜಿ.ಎಸ್. ನಾಗರಾಜ್.

1968–72ವರೆಗೆ, ತೀರ್ಥಹಳ್ಳಿ ತಾಲ್ಲೂಕು ಅಭಿವೃದ್ಧಿ ಮಂಡಳಿ ಸದಸ್ಯರಾಗಿದ್ದ ಭಟ್ಟರು, ಇದೊಂದು 'ಸ್ಥಾನ'ವನ್ನು ಬಿಟ್ಟರೆ ಬೇರೆ ಯಾವ ರಾಜಕೀಯ ಸ್ಥಾನಮಾನವನ್ನು ಅಪೇಕ್ಷಿಸಲಿಲ್ಲ. 1972ರಲ್ಲಿ ಗೋಪಾಲಗೌಡರು ನಿಧನರಾದ ನಂತರ ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಿಂದ ಸಮಾಜವಾದಿ ಪಕ್ಷದಿಂದ ಸ್ಪರ್ಧಿಸಲು ಎಷ್ಟು ಒತ್ತಾಯಪಡಿಸಿದರೂ ಅವರು ಒಪ್ಪಲಿಲ್ಲ. ಆ ಸ್ಥಾನಕ್ಕೆ ಕೋಣಂದೂರು ಲಿಂಗಪ್ಪನವರು ನಿಲ್ಲಲು, ಗೆಲ್ಲಲು ಅವರು ಮುಖ್ಯ ಕಾರಣ. ಲಿಂಗಪ್ಪನವರು ಗೆಲ್ಲುವವರೆಗೂ ಅವರು ವಿಶ್ರಮಿಸಲಿಲ್ಲ. ಒಡನಾಡಿ ಸಮಾಜವಾದಿ ಗೆಳೆಯರ ಬದುಕಿನ ಏಳು–ಬೀಳುಗಳಲ್ಲಿ ಅವರು ಸಂಪೂರ್ಣವಾಗಿ ಒಂದಾಗುತ್ತಿದ್ದರು. ವೈ.ಆರ್.ಪರಮೇಶ್ವರಪ್ಪ, ಶಿವಮೊಗ್ಗ ಪುರಸಭಾ ಅಧ್ಯಕ್ಷತೆಗೆ, ಅನಂತರ ವಿಧಾನಪರಿಷತ್‌ಗೆ ಸ್ಪರ್ಧಿಸಿ ವಿಜೇತರಾಗಲು ಭಟ್ಟರು ಮತ್ತು ಎಸ್. ಎಸ್. ಭರ್ಮಪ್ಪ ಮುಖ್ಯ ಕಾರಣರು.

ತಮ್ಮ ಗೆಳೆಯರ ಮನಸ್ಸು, ಸ್ವಭಾವಗಳನ್ನು ಭಟ್ಟರು ಚೆನ್ನಾಗಿ ಅರಿತಿದ್ದರು. ಸಮಯೋಚಿತ ಸಲಹೆ, ಮಾರ್ಗದರ್ಶನಗಳಿಗೆ ಬರುತ್ತಿದ್ದ ಗೆಳೆಯರಿಗೆ ಖಚಿತವಾದ ಸಲಹೆ ನೀಡಿ, ಒಂದು ಜೋಕು ಹಾರಿಸಿ, ನಗಿಸಿ, ಬೆನ್ನುತಟ್ಟಿ ಕಳುಹಿಸುತ್ತಿದ್ದರು. ಬಂಗಾರಪ್ಪನವರಿಗೆ, ಕಾಗೋಡು ತಿಮ್ಮಪ್ಪನವರಿಗೆ ಭಟ್ಟರನ್ನು ಕಂಡರೆ ಅಪಾರ ಪ್ರೀತಿ, ಗೌರವ. ಸಮಾಜವಾದಿಗಳ ಜೊತೆಯಲ್ಲಿದ್ದ ಬಂಗಾರಪ್ಪನವರ ಮನಸ್ಸಿನ ಹೊಯ್ದಾಟ, ಅನುಮಾನಗಳನ್ನು ಗ್ರಹಿಸಿದ್ದ ಭಟ್ಟರು "ನೀವು ಕಾಂಗ್ರೆಸ್‌ಗೆ ಸೇರುವುದು ಒಳ್ಳೆಯದು. ನಿಮ್ಮ ದಾರಿ ಅದೇ ಅನಿಸುತ್ತೆ" ಎಂದಿದ್ದರು. ಅವರ ಗ್ರಹಿಕೆ ನಿಜವಾಯಿತು. ಬಂಗಾರಪ್ಪನವರಿಗೆ ಅಲ್ಲಿ ಸಾಕಷ್ಟು ಪ್ರಯೋಜನವೂ ಆಯಿತು. ರಾಜಕೀಯ ಅಥವಾ ಇನ್ನಿತರ ಅಧಿಕಾರಕ್ಕೆ ಅವರು ಎಂದೂ ಯಾರಿಗೂ ಕೈಚಾಚಿದವರಲ್ಲ. ಅವರು ಅಪೇಕ್ಷಿಸಿದ್ದರೆ ಅವು ಸುಲಭವಾಗಿ ಅವರಿಗೆ ದಕ್ಕುತ್ತಿದ್ದವು. ಯಾರ ಸ್ನೇಹ ಸಲುಗೆಯನ್ನೂ ಅವರು ತಮ್ಮ ಸ್ವಂತಕ್ಕೆ ಬಳಸಿಕೊಳ್ಳಲಿಲ್ಲ.

ಗೋಪಾಲಗೌಡರ ನಿಧನ, ಬಂಗಾರಪ್ಪ–ಕಾಗೋಡು ತಿಮ್ಮಪ್ಪನವರ ಕಾಂಗ್ರೆಸ್ ಸೇರ್ಪಡೆಗಳ ನಂತರ ಜೆ.ಎಚ್. ಪಟೇಲರು ಏಕಾಂಗಿಯಾದರು. ಆಗ ಅವರ ಕಷ್ಟ ಕಾಲದ ಗೆಳೆಯನೆಂದರೆ ಭಟ್ಟರು. ತುರ್ತು ಪರಿಸ್ಥಿತಿಯ ನಂತರ ಕಾಂಗ್ರೆಸ್ ವಿರೋಧಿ ಪಕ್ಷಗಳ ವಿಲೀನದ ಪ್ರಶ್ನೆಯೆದ್ದಿತು. ಜೆ.ಎಚ್. ಪಟೇಲ್, ವೆಂಕಟರಾಂ, ಖಾದ್ರಿ ಶಾಮಣ್ಣ, ಯು.ಆರ್. ಅನಂತಮೂರ್ತಿ ಮುಂತಾದವರು ವಿಲೀನದ ಪರವಾಗಿದ್ದರು. ಇವರೆಲ್ಲ ಭಟ್ಟರಿಗೆ ಆತ್ಮೀಯ ಮಿತ್ರರಾಗಿದ್ದರೂ ತಮ್ಮ ಖಚಿತ ಅಭಿಪ್ರಾಯವನ್ನು ನೇರವಾಗಿ ಎ.ವಿ. ಶ್ರೀನಿವಾಸ್ ಮುಂದೆ ಹೇಳುತ್ತಾರೆ– "ಮುಂದೆ ಆಗುವ ಅನಾಹುತವನ್ನು ತಪ್ಪಿಸುವುದು ಜಾಣತನ. ಆದರೆ ಈಗಲೇ ಅನಾಹುತವನ್ನು ಮಾಡಿಕೊಳ್ಳುವುದಕ್ಕೆ ಏನೆನ್ನಬೇಕು?" ಅವರು ಊಹಿಸಿದಂತೆಯೇ ಜನತಾ ಪಕ್ಷವೂ ಛಿದ್ರವಾಯಿತು, ಸಮಾಜವಾದಿ ಪಕ್ಷವೂ ಛಿದ್ರವಾಯಿತು. ಜನಸಂಘದಂತಹ ಪಕ್ಷಗಳೊಂದಿಗೆ ಮೈತ್ರಿಯ ಅಪಾಯವನ್ನು ಅವರು ಸದಾಕಾಲ ವಿರೋಧಿಸುತ್ತಿದ್ದರು. 1948ರಿಂದ ಅನೇಕ ಹೋರಾಟಗಳನ್ನು ಮಾಡಿಕೊಂಡು ಬಂದ ಸೋಷಿಯಲಿಸ್ಟ್ ಪಾರ್ಟಿಯ ವಿಸರ್ಜನೆ ಮತ್ತು ಸಮಾಜವಾದದ ನೆಪದಲ್ಲಾಗುತ್ತಿರುವ ಗೊಂದಲ–

ಭ್ರಷ್ಟತೆಗಳ ಬಗ್ಗೆ ಭಟ್ಟರು ನೊಂದುಕೊಳ್ಳುತ್ತಿದ್ದರು.


ಶಂಕರನಾರಾಯಣ ಭಟ್ಟರ ಅಳಿಯ ಶಿವಪ್ರಸಾದ್‌ರು ಹೇಳುತ್ತಾರೆ: "ಅವರು ವೈಯಕ್ತಿಕ ಜೀವನದಲ್ಲೂ ಜಾತ್ಯತೀತರು, ವಿಶಾಲ ಮನಸ್ಸು ಅವರದು. ತಮ್ಮ ನಾಸ್ತಿಕತೆಯನ್ನಾಗಲಿ, ಅಭಿಪ್ರಾಯವನ್ನಾಗಲಿ ಯಾರ ಮೇಲೂ ಹೇರಿದವರಲ್ಲ. ಬ್ರಾಹ್ಮಣ ಜಾತಿ ಸಂಘಟನೆಗಳ ಬಗ್ಗೆ-ಮೇಲ್ಜಾತಿಗಳಿಗೆ ಸಾಮಾಜಿಕ ಭದ್ರತೆ ಇದೆ, ಕೆಳಜಾತಿಗಳಿಗಿಲ್ಲ. ಆದ್ದರಿಂದ ಸರ್ಕಾರಗಳು ಮೇಲ್ಜಾತಿಗಳ ಮಠಮಾನ್ಯಗಳಿಗೆ ಬಗ್ಗಬಾರದು-ಎನ್ನುತ್ತಿದ್ದರು".

ಅವರ ವಾರಿಗೆಯ ಗೆಳೆಯರಾದ ಭರ್ಮಪ್ಪ, ವೈ.ಆರ್. ಪರಮೇಶ್ವರಪ್ಪ, ಎಂ.ಸಿ. ಮಹೇಶ್ವರಪ್ಪ ಮುಂತಾದವರು ಒಬ್ಬರಾದ ನಂತರ ಮತ್ತೊಬ್ಬರು ನಿಧನರಾದರು. ಉಳಿದ ಗೆಳೆಯರು ಪರ ಊರುಗಳಲ್ಲಿದ್ದವರು. ಅವರ ಆರೋಗ್ಯವೂ ದಿನ ದಿನಕ್ಕೆ ಹದಗೆಟ್ಟಿತು. 1996 ಮೇ 21ರಂದು, ಸಜ್ಜನ, ಪ್ರಾಮಾಣಿಕ, ಸರಳ, ಸ್ನೇಹಜೀವಿ ಶಂಕರನಾರಾಯಣ ಭಟ್ಟರ ಬದುಕು ಅಂತ್ಯವಾಯಿತು. ಬೆಳಗಾವಿಯ ಒಂದು ಉಪ ಚುನಾವಣೆಯ ಭರಾಟೆಯಲ್ಲಿದ್ದ ಜೆ.ಎಚ್. ಪಟೇಲರು ತಮ್ಮ ಮಿತ್ರನ ಸಾವನ್ನು ಕೇಳಿ ಕೂಡಲೇ ಧಾವಿಸಿ ಬಂದರು. ಭಟ್ಟರ ಶರೀರದ ಮುಂದೆ ಕೋಣಂದೂರು ಲಿಂಗಪ್ಪ ಬಿಕ್ಕಳಿಸಿ ಅಳುತ್ತಿದ್ದರು. ಪಟೇಲರು "ಲಿಂಗಪ್ಪ, ಶವವಾದರೂ, ಶಂಕರನಾರಾಯಣ ಭಟ್ಟ ನಗುತ್ತಿದ್ದಾನೆ. ನೀನು ಬದುಕಿರೋನು ಅಳುತ್ತಿದ್ದೀಯಲ್ಲೋ...?" ಎಂದು ಹೇಳುತ್ತ ತಮ್ಮ ಗೆಳೆಯನಿ ಂತಿಮ ಗೌರವ ಸಲ್ಲಿಸಿದರು.

–.ಎಂ.ಬಿ. ನಟರಾಜ್

(ಸೆಪ್ಟಂಬರ್, 2012)

ಮೊರಬದ ಮುತ್ತು ರಾಚಪ್ಪ ಬೆಟಸೂರ



ರಾಚಪ್ಪ ಬೆಟಸೂರು ಬಗ್ಗೆ ಬರೆಯುವ ಸಂಬಂಧವಾಗಿ ಅವರೂರಾದ ಮೊರಬಕ್ಕೆ ಹೋಗಿಬರೋಣವೆಂದು ಹೇಳಿದಾಗಿನಿಂದ ಹಿರಿಯರಾದ ಬಡೇಮಿಯಾ ಒಂದೇ ಸಮನೆ ದೂರವಾಣಿ ಮಾಡುತ್ತಿದ್ದರು. 63 ವರ್ಷ ವಯಸ್ಸಿನ ಬಡೇಮಿಯಾರಿಗೆ ತನ್ನ ಅಣ್ಣ ರಾಚಪ್ಪಣ್ಣ ಅಂದರೆ ಪಂಚ ಪ್ರಾಣ. ಒಬ್ಬ ಮುಸ್ಲೀಂ ಒಬ್ಬ ಲಿಂಗಾಯತನನ್ನು ಅಣ್ಣತಮ್ಮ ಎಂಬ ಭಾವುಕ ಶಬ್ದಗಳಲ್ಲಿ ಬಂಧಿಸಿದ್ದು ಹಳ್ಳಿಯ ಭ್ರಾತೃತ್ವದ ಬೇರಾಗಿದ್ದರೂ, ಅದಕ್ಕೆ ನೀರೆರೆದು ಪೋಷಿಸಿದ್ದು ಸಮಾಜವಾದಿ ಚಳುವಳಿ. ರಾಚಪ್ಪಣ್ಣ ಬಡೇಮಿಯಾರನ್ನು ಕೊನೆವರೆಗೂ ತಮ್ಮನಂತೆ ನೆಡೆಸಿಕೊಂಡು ಅವರು ಕಾರ್ಯದರ್ಶಿಯಾಗಿದ್ದ ವನಿತಾ ಸೇವಾ ಸಮಾಜದ ಪ್ರಾಥಮಿಕ ಶಾಲೆಯಲ್ಲಿ ನೌಕರಿ ಕೊಡಿಸಿ ಅವರ ಜೀವನೋಪಾಯಕ್ಕೆ ಕಾರಣರಾದರು.

ಮೋರಬ ಬಂದಿತು. ಒಂದು ಮಣ್ಣಿನ ಮನೆಯ ಮುಂದೆ ಬಂದು ನಿಂತಿದ್ದೆವು. ಅದೇ ರಾಚಪ್ಪ ಬೆಟಸೂರರ ಮನೆ. ಒಳಗಿನಿಂದ ಬಂದ ರಾಚಪ್ಪ ಅವರ ಮಕ್ಕಳಾದ ಹೊಳೆ ಬಸವ ಮತ್ತು ಸಂಗಪ್ಪ ಬಡೇಮಿಯಾರನ್ನು ನೋಡಿ ಸಂತೋಷಗೊಂಡು ನಮ್ಮನ್ನು ಒಳ ಕರದೊಯ್ದರು. ಕುಸಿದು ಬೀಳುವಂತಿದ್ದ ಆ ಮನೆ ನಿಜವಾದ ಸಮಾಜವಾದಿಗಳ ಇತಿಹಾಸವನ್ನು ಸಾರಿ ಸಾರಿ ಹೇಳುತ್ತಲಿದ್ದವು. ಮನೆಯ ಮುಂದೆ ಮುದುಕರು ಮಧ್ಯ ವಯಸ್ಕರು ರಾಚಪ್ಪಣ್ಣನ ಸಲುವಾಗಿ ಯಾರೋ ಬಂದಿದ್ದಾರೆಂದು ಇಣುಕಿ ನೋಡುತ್ತಿದ್ದರು. ಕರ್ಮಠ ಲಿಂಗಾಯತರ ಊರಿನಲ್ಲಿ ಒಂದು ಜಾತ್ಯಾತೀತ ವಲಯವನ್ನು ಸ್ಥಾಪಿಸಿದ ರಾಚಪ್ಪಣ್ಣನನ್ನು ನೆನೆದು ಕಣ್ಣು ತೇವಗೊಂಡವು.

ಕರ್ನಾಟಕದ ಸಮಾಜವಾದಿ ಚಳುವಳಿಯು ಮಾಡಿದ ಪರಿಣಾಮ ಬಡವರ ದೀನ ದಲಿತರ ಮನೆ ಮನಗಳಲ್ಲಿ ಭವಿಷ್ಯದ ಬಗ್ಗೆ ಭರವಸೆಗಳನ್ನು ಮೂಡಿಸಿದ್ದವು. ಆ ಹಿನ್ನಲೆಯಲ್ಲಿ ಕರ್ನಾಟಕದ ಸಮಾಜವಾದಿ ಚಳುವಳಿಯ ಮೂಸೆಯಿಂದ ಅನೇಕರು ಪುಟವಿಟ್ಟುಕೊಂಡು ಹೊರಬಂದರು. ಕೆಲವರು ಸಾಯುವವರಿಗೂ ಸಮಾಜವಾದಿಗಳಾಗಿಯೇ ಬದುಕಿದರು. ಕೆಲವರು ಸಮಾಜವಾದ ಸಿದ್ಧಾಂತವನ್ನು ವಯಕ್ತಿಕ ಪ್ರಗತಿಗಾಗಿ ಬಳಸಿಕೊಂಡರು. ಅಂತಹವರಲ್ಲಿ ಮೊದಲನೆ ವರ್ಗಕ್ಕೆ ಸೇರಿದವರು ರಾಚಪ್ಪ ಬೆಟಸೂರು.

ಇವರು ಓದಿದ್ದು ಏಳನೇ ತರಗತಿಯವರಿಗೆ. ನಂತರ ತಂದೆಯ ಸ್ಫೂರ್ತಿಯಲ್ಲಿ ಸ್ವಾತಂತ್ರ್ಯ ಹೋರಾಟದ ಬದುಕು. ಆದರೆ ಸ್ವಾತಂತ್ರ್ಯ ಹೋರಾಟಗಾರರಿಗೆ ಕೊಡುವ ಮಾಸಾಶನಗಳಿಂದ ರಾಚಪ್ಪಣ್ಣ ದೂರ ಉಳಿದ್ದಷ್ಟೇ ಅಲ್ಲ, ಅದನ್ನು ತೆಗೆದುಕೊಂಡವರ ವಿರುದ್ದ ಸಮರವನ್ನೇ ಸಾರಿದರು. ಮಾರ್ಕ್ಸ್, ಲೋಹಿಯಾ,

ನಿರಂಜನ, ಕುವೆಂಪು ಅವರನ್ನು ಓದುತ್ತಲೇ ಬೆಳೆದ ರಾಚಪ್ಪವನರ ಮೊದಲ ಗುರು ಅವರ ತಂದೆ ಗುರುಪಾದಪ್ಪನವರು. ಆಗಿನ ಕಾಲದಲ್ಲಿ ಹನ್ನೆರಡನೇ ಇಯತ್ತೆ ಓದಿದ್ದ ಇವರು ಪ್ರಖರ ಮಾರ್ಕ್ಸವಾದಿಗಳಾಗಿದ್ದರು. ಮುಂದೆ ಅಬ್ಬಿಗೇರಿ ವಿರುಪಾಕ್ಷಪ್ಪ ಅಂದಾನಪ್ಪ ದೊಡ್ಡಮೇಟಿ ಹಾಗು ಈ ಭಾಗದ ಸಮಾಜವಾದಿ ಶಾಸಕರಾಗಿದ್ದ ನೀಲಗಂಗಯ್ಯ ಪೂಜಾರ್ ಅವರಿಂದ ಸಮಾಜವಾದಿ ಕುಟುಂಬಕ್ಕೆ ಸೇರಿದ ರಾಚಪ್ಪ ಮೋರಬ್‌ನ್ನು ಒಂದು ಸಮಾಜವಾದಿ ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಿದರು. ಅಬ್ಬಿಗೇರಿ ವಿರುಪಾಕ್ಷಪ್ಪ ಅವರ ಜೊತೆ ಸೇರಿ ಲೋಹಿಯಾರನ್ನು ಎತ್ತಿನ ಬಂಡಿಯಲ್ಲಿ ಕೂಡ್ರಿಸಿಕೊಂಡು ಊರೂರು ತಿರುಗಿ ರೈತರು, ಬಡವರನ್ನು ಸಂಘಟಿಸಿದರು. ಅಷ್ಟೆ ಅಲ್ಲ, ಕಾಗೋಡು ಸತ್ಯಾಗ್ರಹದ ತದನಂತರದಲ್ಲೇ ಅದೇ ಮಾದರಿಯ ಒಂದು ಹೋರಾಟವನ್ನು ಹೆಬ್ಬಳ್ಳಿ ಗೇಣಿದಾರರ ಪರವಾಗಿ ಸಂಘಟಿಸಿದರು. ಇದರಿಂದ ಇವರ ಕುಟುಂಬಕ್ಕೆ ಜೋಳದ ಹಿಟ್ಟಿನಲ್ಲಿ ವಿಷಪ್ರಾಶನ ಮಾಡಲಾಯಿತು. ಆದರೆ ಅದರಿಂದ ಚೇತರಿಸಿಕೊಂಡ ರಾಚಪ್ಪಣ್ಣನ ಕುಟುಂಬ 3000 ಎಕರೆ ಭೂಮಿ ಬಡವರಿಗೆ ದಲಿತರಿಗೆ - ದಕ್ಕಿದ್ದನ್ನು ಕಂಡು ಕೃತಾರ್ಥ ಭಾವ ಅನುಭವಿಸಿತು. ಇದರ ಯಶಸ್ಸಿನ ಸ್ಫೂರ್ತಿಯಿಂದಾಗಿ ರಾಜ್ಯದಲ್ಲಿನ ಮುಂದಿನ ಬಹುತೇಕ ರೈತ ಚಳುವಳಿಯ ಯೋಜನೆ ಕಾರ್ಯಕ್ರಮ. ಅನುಷ್ಠಾನದ ರೂಪುರೇಷೆಗಳಿಗೆ ಮೋರಬ್ ಎಂಬ ನೆಲ ತಳಹದಿಯಾಯಿತು. ಇದರ ಫಲವಾಗಿ ಕೃಪಲಾನಿಯವರಂತಹ ಹಿರಿಯರಿಂದ ಹಿಡಿದು ಜಾರ್ಜ್ ಫರ್ನಾಂಡಿಸ್, ಗೋಪಾಲಗೌಡರಾದಿಯಾಗಿ ಇಲ್ಲಿಗೆ ಬಂದು ಹೋಗುವಂತೆ ಆಯಿತು.

ರಾಚಪ್ಪಣ್ಣನವರು 77–78–79 ಈ ಮೂರು ವರ್ಷ ರೈತ ಚಳುವಳಿಗೆ ಪೂರಕವಾಗಿ ನರಗುಂದ ನವಲಗುಂದದ ಭೂಮಿಯನ್ನು ಹದಗೊಳಿಸಿದರು. 1980ರ ನರಗುಂದ ರೈತ ಚಳುವಳಿಯ ಮುಂದಿನ ಎಲ್ಲ ಯೋಜನೆಯ ಬೀಜ ಮೊಳೆತದ್ದು ಮೋರಬ್‌ದಲ್ಲೆ. ನರಗುಂದ ರೈತ ಬಂಡಾಯದಲ್ಲಿ ಭೂಗತರಾಗಿದ್ದುಕೊಂಡೆ ಇದ್ದ ರಾಚಪ್ಪಣ್ಣ ಬಂಡಾಯದ ನಂತರದ ಕಾಲ ಘಟ್ಟದಲ್ಲಿ ಚಳುವಳಿಯಲ್ಲಿ ಸಕ್ರಿಯರಾದರು. 'ಬೆಂಡಿಕಾಯಿ ಬೆಳೆದ ನಿನಗೆ ತಿನ್ನಾಕಿಲ್ಲೊ! ಗೆಂಡೆ ಮೆಣಸಿನಕಾಯಿ ಬೆಳೆದ ಶೂರ, ನಿನ್ ಕಣ್ಣಾಗ ಬಿತ್ತೊ ಖಾರ!' ಎಂದು ಊರೂರು ತಿರುಗುತ್ತ ರೈತರನ್ನು ಎಚ್ಚರಿಸುವ ಕೆಲಸದಲ್ಲಿ ನಿರತರಾದರು.

ಇವರು ಮುಂದೆ ನೀಲಗಂಗಯ್ಯ, ರಾಚಪ್ಪ ಹಡಪದ, ಗಂಗಾದರ ಪದಕಿ, ನಾಗರಾಜ ಗುರಿಕಾರ ಮುಂತಾದ ಸಮಾಜವಾದಿ ಸಾಥಿಗಳೊಂದಿಗೆ ಸಂಘಟಿಸಿದ ನಿವೇಶನರಹಿತ ಬಡವರ ಹೋರಾಟದ ಪರಿಣಾಮವಾಗಿ ಹುಬ್ಬಳ್ಳಿ ಧಾರವಾಡದ ಮಧ್ಯ ರಾಮಮನೋಹರ ಲೋಹಿಯಾ ನಗರ ಹುಟ್ಟಿಕೊಂಡಿತು. ಆದರೆ ಈ ಎಲ್ಲ ಹೋರಾಟಗಳ ಪರಿಣಾಮವಾಗಿ ಆಗರ್ಭ ಶ್ರೀಮಂತಿಕೆಯ ಇವರ ಮನೆತನದಆರ್ಥಿಕ ಸೌಧ ಕುಸಿಯುತ್ತಲೆ ಇತ್ತು. ಸಮಾಜವಾದಿ ಚಳುವಳಿ ಮನೆಯಲ್ಲಿನ ಬಂಗಾರವನ್ನು, ಹೊಲವನ್ನು ನುಂಗಿ ಹಾಕಿತ್ತು. ಅವರಪ್ಪನ ಕಾಲದಲ್ಲಿದ್ದ ಸುಮಾರು ನೂರು ತೊಲೆ ಚಿನ್ನವೆಲ್ಲವನ್ನೂ ಅದು ಕರಗಿಸಿ ಹಾಕಿತ್ತು. ಮುಂದೆ ಇವರ ಪ್ರಸ್ತುತ ಆರ್ಥಿಕ ಪರಿಸ್ಥಿತಿ ಅರಿವಿದ್ದ ಹಳೆಯ ಸಮಾಜವಾದಿ


ಒಡನಾಡಿ ಬಂಗಾರಪ್ಪ ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಇವರನ್ನು ಬೆಂಗಳೂರಿಗೆ ಕರೆಯಿಸಿ ಯಾವದಾದರು ನಿಗಮ ಮಂಡಳಿಯಲ್ಲಿ ಅಧಿಕಾರ ಸ್ಥಾನ ಕೊಡಮಾಡಬೇಕೆಂದು ಎರಡು ದಿನ ಬೆಂಗಳೂರಲ್ಲೆ ಇರಲು ಕೇಳಿಕೊಂಡರು. ಆದರೆ 'ನಡೀಲೇ ಬಡೆಮಿಯಾ ಸಮಾಜವಾದದ ಕುಲ ಕೆಡಸಬೇಕಂತ ಮಾಡ್ಯಾರ' ಎಂದು ಸಿಟ್ಟಾದ ಬೆಟ್ಟೂರ ರಾತ್ರೋರಾತ್ರಿ ಬಸ್ ಹತ್ತಿ ಧಾರವಾಡ ತಲುಪಿದ್ದರು. ಹಡಪದ ರಾಚಪ್ಪಣ್ಣನ ಧಾರವಾಡದ ಸಮತಾ ಕಟಿಂಗ್ ಸಲೂನ್ ಮತ್ತು ಬೆಟ್ಟೂರ ರಾಚಪ್ಪಣ್ಣನ ಮೋರಬದ ಮನೆ ಆ ಕಾಲದ ಅನೇಕ ಹಿರಿ-ಕಿರಿಯ ಸಮಾಜವಾದಿಗಳಿಗೆ ಅನುಭವ ಮಂಟಪವೇ ಆಗಿದ್ದವು.

ಮಗ ಹೊಳೆಬಸಪ್ಪ ಗದ್ಗಿದಿತನಾದ. 'ಅಪ್ಪ ಸಾಯುವ ರಾತ್ರಿ ಒಂದು ಮಾತು ಹೇಳಿದ ಸರ್. ಸಮಾಜವಾದ ಅಂದ್ರೆ ತ್ಯಾಗ. ತ್ಯಾಗ ಅಂದ್ರ ಸಮಾಜವಾದ ಕಣಲೇ... ನಾನು ನಿಮಗ ಏನು ಮಾಡಲಿಲ್ಲ ಅಂತ ತಿಳ್ಕೊಬೇಡ್ರಲೇ... ನಾನು ಸಮಾಜವಾದಕ್ಕಾಗಿ ಇಲ್ಲಿಗೆ ಬಂದಿದ್ದೆ, ಈಗ ಸಮಾಜವಾದದ ಜೊತ್ಯಾಗೇ ನಿರ್ಗಮಿಸ್ತೀನಿ... ಅಂತ ಕಣ್ಣಿರು ಹಾಕಿ ಮಲಗಿಕೊಂಡರು. ಅಂದು ಜನವರಿ 1 1995. ಮುಂಜಾನೆ ಅವರ 60 ನೇ ಹುಟ್ಟು ಹಬ್ಬ ಮಾಡಬೇಕು ಅಂತ ಮಾಡಿದ್ವಿ ಸರ್ ಆದರೆ ಅಂದೆ ಶಾಶ್ವತವಾಗಿ ಕಣ್ಮುಚ್ಚಿದರು' ಎಂದು ಕಣ್ಣೀರು ಒರೆಸಿಕೊಂಡ.

-ಮಹಂತೇಶ್ ನವಲಕಲ್

(ಮಾರ್ಚ್, 2013)

ಎಂಭತ್ತು ತುಂಬಿದ ಕಾಗೋಡು ತಿಮ್ಮಪ್ಪ: ಒಂದು ಹಿನ್ನೋಟ



ಸಮಾಜವಾದಿ ಹಿನ್ನೆಲೆಯಿಂದ ರಾಜಕಾರಣಕ್ಕೆ ಪ್ರವೇಶಿಸಿದ ಕರ್ನಾಟಕದ ಅನೇಕ ರಾಜಕಾರಣಿಗಳ ಪೈಕಿ ಸಾಗರದ ಕಾಗೋಡು ತಿಮ್ಮಪ್ಪ ಪ್ರಮುಖರು. ರಾಜಕೀಯದಲ್ಲಿ ಹಲವು ರೀತಿಯ ಏಳುಬೀಳುಗಳನ್ನು ಕಂಡಿರುವ ಕಾಗೋಡರಿಗೆ ಈಗ 80 ವರ್ಷ ತುಂಬಿದೆ. ಸಾರ್ವಜನಿಕವಾಗಿ ಹುಟ್ಟುಹಬ್ಬ ಆಚರಿಸಿಕೊಳ್ಳುವ, ಫ್ಲೆಕ್ಸ್‌ಗಳಲ್ಲಿ ಕಾಣಿಸಿಕೊಳ್ಳುವ ಪ್ರವೃತ್ತಿಯನ್ನು ತಾವು ವೈಯುಕ್ತಿಕವಾಗಿ ಇಷ್ಟಪಡುವುದಿಲ್ಲ ಎಂದು ಕಾಗೋಡು ಹೇಳುತ್ತಿದ್ದರೂ ಕಳೆದ ಐದಾರು ವರ್ಷಗಳಿಂದ ಇವೆಲ್ಲಾ ನಡೆಯುತ್ತಲೇ ಇದೆ. ಮೊನ್ನೆ ಅವರ 80ನೇ ಹುಟ್ಟುಹಬ್ಬ ಆಚರಣೆ ಸಂದರ್ಭದಲ್ಲಿ ಹೋಮ ಹವನ ಕೂಡ ಏರ್ಪಾಟಾಗಿತ್ತು!

ಸಾಗರ ತಾಲ್ಲೂಕಿನ ಕಾಗೋಡು ಗ್ರಾಮದಲ್ಲಿ 50ರ ದಶಕದ ಆರಂಭದಲ್ಲಿ ನಡೆದ ಗೇಣಿ ಹಕ್ಕಿನ ಸತ್ಯಾಗ್ರಹವನ್ನು ಬಾಲಕನಾಗಿ ಕಣ್ಣಾರೆ ಕಂಡು, ಭೂಮಾಲಿಕರು ಗೇಣಿದಾರರನ್ನು ನಡೆಸಿಕೊಳ್ಳುತ್ತಿದ್ದ ರೀತಿ, ಸಾಮಾಜಿಕವಾಗಿ ಅವರನ್ನು ಕಡೆಗಣಿಸುತ್ತಿದ್ದ ಬಗೆ ಇವೆಲ್ಲಾ ರೋಷದ ರೂಪದಲ್ಲಿ ಮಡುಗಟ್ಟಿದ್ದೇ ತಿಮ್ಮಪ್ಪನವರ ಸಾರ್ವಜನಿಕ ಬದುಕಿಗೆ ಪ್ರೇರಣೆಯಾಯಿತು. ಭೂಮಾಲಿಕರೆದುರು ಕುರ್ಚಿಯಲ್ಲಿ ಕುಳಿತುಕೊಳ್ಳಲು ಅವಕಾಶ ಇಲ್ಲದ ಕಾಲಕ್ಕೆ ತಾನೇ ಸ್ವತಃ ಕುರ್ಚಿಯೊಂದನ್ನು ತಯಾರಿಸಿ ಗೌಡರ ಎದುರು ಕುಳಿತ ಕಣಸೆ ಜಟ್ಟಪ್ಪನಂತಹ ವ್ಯಕ್ತಿಗಳ ಸ್ವಾಭಿಮಾನದ ಕಥನ ಕಾಗೋಡು ಸತ್ಯಾಗ್ರಹದೊಂದಿಗೆ ಬೆಸೆದುಕೊಂಡಿದೆ.

ಗೇಣಿದಾರರ ಕುಟುಂಬದ ಹಿಂದುಳಿದ ವರ್ಗದ ಓರ್ವ ಯುವಕ ಪದವಿ ಮುಗಿಸಿ ಕಾನೂನು ಪದವಿಯನ್ನು ಪಡೆಯುವುದು ಆ ಕಾಲಕ್ಕೆ ಸುಲಭದ ಮಾತಾಗಿರಲಿಲ್ಲ. ಕಾಲೇಜು ದಿನಗಳಲ್ಲೇ ಲೋಹಿಯಾರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಕಾಗೋಡು ಸಮಾಜವಾದಿ ಯುವಜನ ಸಭಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು.

ಸಮಾಜವಾದಿ ಯುವಜನ ಸಭಾದ ಮೂಲಕ ಕಾಗೋಡು ಶಾಂತವೇರಿ ಗೋಪಾಲಗೌಡರಿಗೂ ಹತ್ತಿರವಾಗಿದ್ದರು. 1962 ಮತ್ತು 67ರಲ್ಲಿ ಸಾಗರ ವಿಧಾನಸಭಾ ಕ್ಷೇತ್ರಕ್ಕೆ ಕಾಗೋಡು ಸೋಷಲಿಸ್ಟ್ ಪಕ್ಷದ ಅಭ್ಯರ್ಥಿಯಾಗಬೇಕೆಂದು ಎಂದು ಒತ್ತಾಯಿಸಿ ನಿಲ್ಲಿಸಿದವರೆ ಗೋಪಾಲಗೌಡರು ಎನ್ನಲಾಗಿದೆ. ಆ ಎರಡೂ ಚುನಾವಣೆಗಳಲ್ಲಿ ಸೋಷಲಿಸ್ಟ್ ಪಕ್ಷ ಗೆಲ್ಲಲಿಲ್ಲ. 1972ರಲ್ಲಿ ನಡೆದ ಚುನಾವಣೆ ಕಾಗೋಡು ರಾಜಕೀಯ ಜೀವನಕ್ಕೆ ಮಹತ್ವದ ತಿರುವು ನೀಡಿತು.

ಒಂದು ಕುಟುಂಬದಂತಿದ್ದ ಸೋಷಲಿಸ್ಟ್ ಪಕ್ಷದ ಕಾರ್ಯಕರ್ತರು ಕಾಗೋಡರ ಚುನಾವಣೆಗಾಗಿ ರೈತರಿಂದ ಭತ್ತದ ಚೀಲಗಳ ರೂಪದಲ್ಲಿ ದೇಣಿಗೆ ಪಡೆದಿದ್ದರು. ಇದರ ಮಾರಾಟದಿಂದ ಬಂದ 12 ಸಾವಿರ ರೂ.ಗಳಿಂದ ಚುನಾವಣೆ ಖರ್ಚು ನಿಭಾಯಿಸಲಾಗಿತ್ತು. ಪರಿಣಾಮ ಕಾಗೋಡು ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದರು.

ಕಾಗೋಡು ಪ್ರಥಮ ಬಾರಿಗೆ ಶಾಸಕರಾದಾಗಲೇ ಸಮಾಜವಾದಿ ಪಕ್ಷದ ಸಂಡೂರು ಭೂಸತ್ಯಾಗ್ರಹ ಆರಂಭವಾಗಿ, ಆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ದೇವರಾಜು ಅರಸು ಭೂಸುಧಾರಣೆ ಕಾನೂನನ್ನು ಜಾರಿಗೊಳಿಸಲು ಮುಂದಾದರು. ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಹಿಂದುಳಿದವರ ಪರ ಶಾಸನ ಸಭೆಯಲ್ಲಿ ಮಾತನಾಡುತ್ತಿದ್ದ ಕಾಗೋಡರನ್ನು ಅರಸು ಕಾಯ್ದೆ ಜಾರಿಗಾಗಿ ರಚಿಸಲಾದ ಜಂಟಿ ಸಲಹಾ ಸಮಿತಿಗೆ ಸದಸ್ಯರನ್ನಾಗಿ ಮಾಡಿದರು. ಗೇಣಿ ರೈತರ ಹಿತಕ್ಕೆ ಧಕ್ಕೆ ಬಾರದಂತೆ ಕಾಗೋಡು ಅಂದು ನಿರ್ವಹಿಸಿದ ಪಾತ್ರ ಅವರ ಮುಂದಿನ ರಾಜಕೀಯ ಜೀವನಕ್ಕೆ ಸುಭದ್ರ ಅಡಿಪಾಯ ಹಾಕಿತು. ಭೂಸುಧಾರಣೆ ಕಾನೂನು ಜಾರಿಯಾದರೂ ಭೂಮಿಯ ಹಕ್ಕು ಪಡೆಯಲು ಅರ್ಜಿ ಹಾಕಬೇಕೆಂಬ ಅರಿವೂ ಇರದಿದ್ದ ಅವಿದ್ಯಾವಂತರಾಗಿದ್ದ ಗೇಣಿದಾರರ ಮನೆ ಬಾಗಿಲಿಗೆ ತೆರಳಿ ಅರ್ಜಿ ಪಡೆದು ಅದನ್ನು ಭೂನ್ಯಾಯ ಮಂಡಳಿಗೆ ತಲುಪಿಸುವ ಕೆಲಸವನ್ನು ಕಾಗೋಡು ಸಮಾಜವಾದಿ ಪಕ್ಷದ ವತಿಯಿಂದ ಮಾಡಿಸಿದರು.

1977ರಲ್ಲಿ ಜನತಾ ಪಕ್ಷ ಉದಯವಾಗಿ ಅದರೊಳಗೆ ಸೋಷಲಿಸ್ಟ್ ಪಕ್ಷ ವಿಲೀನವಾಗಬೇಕು ಎಂದು ಜಯಪ್ರಕಾಶ ನಾರಾಯಣರು ತೀರ್ಮಾನಿಸಿದಾಗ ಜನಸಂಘ ಇರುವ ಜನತಾ ಪಕ್ಷದಲ್ಲಿ ಸೋಷಲಿಸ್ಟ್ ಪಕ್ಷ ವೀಲಿನವಾಗುವುದು ಆತ್ಮಹತ್ಯಾಕಾರಕ ನಿರ್ಧಾರವಾಗುತ್ತದೆ ಎಂದು ಕಾಗೋಡು ಹೇಳಿದ್ದರಂತೆ. ಆದರೆ ಪಕ್ಷದ ವರಿಷ್ಠರ ನಿರ್ಧಾರಕ್ಕೆ ಅವರು ತಲೆಬಾಗಿ 1978ರಲ್ಲಿ ಜನತಾ ಪಕ್ಷದ ಅಭ್ಯರ್ಥಿಯಾಗಿ ಸಾಗರದಿಂದ ಸ್ಪರ್ಧಿಸಿ ಸೋಲು ಕಾಣಬೇಕಾಯಿತು. ಜನಸಂಘ ಜನತಾ ಪಕ್ಷದ ಜೊತೆ ಇದ್ದುದ್ದರಿಂದ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ನಮ್ಮನ್ನು ಬೆಂಬಲಿಸಲಿಲ್ಲ ಎಂದು ಕಾಗೋಡು ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

1978ರ ಚುನಾವಣೆಯ ಸೋಲಿನ ನಂತರವೂ ಕಾಗೋಡರ ಹೋರಾಟದ ಕಾವು ಕಡಿಮೆಯಾಗಲಿಲ್ಲ. ಮಾಜಿ ಗೇಣಿ ರೈತರ ಅಧಿಭೋಗದಾರಿಕೆ ಹಕ್ಕು ಪಡೆದ ಭೂಮಿಗೆ ಕಂತಿನ ಹಣ ಕಟ್ಟುವುದನ್ನು ಮನ್ನಾ ಮಾಡಬೇಕು ಎಂದು ಮತ್ತು ಭೂಹೀನ ಕೃಷಿ ಕಾರ್ಮಿಕರಿಗೆ ನೆಲ ಕಿಮ್ಮತ್ತು ರದ್ದು ಮಾಡಿ ಭೂಮಿ ನೀಡಬೇಕು ಎಂದು ಒತ್ತಾಯಿಸಿ ಚಳವಳಿ ಸಂಘಟಿಸಿದರು. ಸಾಗರ ತಾಲ್ಲೂಕಿನಲ್ಲಿ ಆಗ ಮೂರು ಸಾವಿರ ರೈತರು ಜೈಲು ಸೇರಿದ್ದರು. ಆದರೆ ಈ ಮಧ್ಯೆ ಸಾಮಾಜಿಕ ನ್ಯಾಯದ ಸಿದ್ಧಾಂತವನ್ನು ಜಾರಿಗೆ ತರಬೇಕಾದರೆ ತಾತ್ವಿಕವಾಗಿ ಗಟ್ಟಿ ಇದ್ದರೂ ರಾಜಕೀಯ ಬಲ ಇಲ್ಲದಿದ್ದರೆ ಸಣ್ಣ ಗುಂಪಿನಿಂದ ಯಾವ ಸಾಮಾಜಿಕ ಬದಲಾವಣೆಯನ್ನೂ ಮಾಡಲು ಸಾಧ್ಯವಿಲ್ಲ (ಇದನ್ನು ಕಾಗೋಡರೆ ಸಂದರ್ಶನವೊಂದರಲ್ಲಿ ಹೇಳಿದ್ದಾರೆ) ಎಂಬ ನಂಬಿಕೆಯಿಂದ ಕಾಗೋಡು ಕಾಂಗ್ರೆಸ್ ಸೇರಿದರು. ಆಗ

ಮುಖ್ಯಮಂತ್ರಿಯಾಗಿದ್ದ ಗುಂಡೂರಾಯರು ಕಾಗೋಡರನ್ನು ಎಂಎಲ್‌ಸಿ ಮಾಡಿ ಮಂತ್ರಿಗಿರಿ ನೀಡಿದರು.

ಕಾಂಗ್ರೆಸ್ ಎಂಬ ಸಮುದ್ರದಲ್ಲಿ ಕಾಗೋಡರು ತಮ್ಮತನವನ್ನು ನಿಧಾನವಾಗಿ ಕಳೆದುಕೊಳ್ಳಲು ಆರಂಭಿಸಿದ್ದು ಆಗಲೇ. ಕರ್ನಾಟಕ ಕಂಡ ಅತಿ ಭ್ರಷ್ಟ ಮುಖ್ಯಮಂತ್ರಿ ಎಂಬ ಕುಖ್ಯಾತಿಗೆ ಆಗ ಒಳಗಾಗಿದ್ದ ಗುಂಡೂರಾಯರನ್ನು ಸಮರ್ಥಿಸಿಕೊಳ್ಳುವ ಅನಿವಾರ್ಯತೆ ಕಾಗೋಡರಿಗೆ ಎದುರಾಗಿತ್ತು. ಸೋಷಲಿಸ್ಟ್ ಪಕ್ಷದಲ್ಲಿದ್ದಾಗ ಕಾಣುತ್ತಿದ್ದ ತಾತ್ವಿಕ ಸ್ಪಷ್ಟತೆ, ಸೈದ್ಧಾಂತಿಕ ನಿಲುವು, ನಿಷ್ಠುರತೆ ಇವೆಲ್ಲ ನಿಧಾನವಾಗಿ ಕರಗತೊಡಗಿತ್ತು. ಇದರ ಪರಿಣಾಮವಾಗಿ ಮತ್ತು 1983ರಿಂದ 89ರವರೆಗೆ ಕರ್ನಾಟಕದಲ್ಲಿ ಜನತಾ ಪರಿವಾರ ರಾಜಕೀಯ ಪ್ರಾಬಲ್ಯ ಗಳಿಸಿದ ಹಿನ್ನೆಲೆಯಲ್ಲಿ ಕಾಗೋಡು ನೇಪಥ್ಯಕ್ಕೆ ಸರಿದಿದ್ದರು. ನಂತರ 89ರಿಂದ 2004ರವರೆಗೆ ಸತತವಾಗಿ ಸಾಗರದಿಂದ ಶಾಸಕರಾಗಿ ಗೆದ್ದು ಬಂದ ಅವರು, ವಿವಿಧ ಖಾತೆಗಳನ್ನು ಮಂತ್ರಿಯಾಗಿ ನಿರ್ವಹಿಸಿದರು. ಸಾಗರ ಕ್ಷೇತ್ರದ ಅಭಿವೃದ್ಧಿಗಾಗಿ ಸಾಕಷ್ಟು ಕೆಲಸ ಮಾಡಿದರು. ಆದರೆ ಅಧಿಕಾರ ಸೃಷ್ಟಿಸುವ 'ವಿಸ್ಮೃತಿ'ಗೆ ಸಿಕ್ಕಿದ ಅವರು ಆನಂತರದ ಎರಡೂ ಚುನಾವಣೆಗಳಲ್ಲಿ ತಮ್ಮ ಸ್ವಂತ ಅಳಿಯ ಗೋಪಾಲಕೃಷ್ಣ ಬೇಳೂರು ಎದುರು ಸೋಲು ಕಂಡರು.

ಹೀಗೆ ಕಾಗೋಡು ತಮ್ಮ ಸುದೀರ್ಘ ರಾಜಕೀಯ ಜೀವನದಲ್ಲಿ ಸೋಲು ಗೆಲುವು ಎರಡನ್ನೂ ಕಂಡಿದ್ದಾರೆ. ಅಧಿಕಾರ ಇರಲಿ, ಇಲ್ಲದಿರಲಿ, ಊರಿನ ಕೆಲಸ ಮಾಡುವುದರಲ್ಲಿ ಕಾಗೋಡು ವಹಿಸುವ ಕಾಳಜಿ ಕುರಿತು ಅವರ ವಿರೋಧಿಗಳೂ ಮೆಚ್ಚುಗೆ ಸೂಚಿಸುತ್ತಾರೆ. ವೈಯುಕ್ತಿಕವಾಗಿ ಯಾರಿಗೂ ಸಹಾಯ ಮಾಡದ ಕಾಗೋಡು ಊರಿನ ಕೆಲಸ ಎಂದರೆ ಮುಗಿಬಿದ್ದು ಅದನ್ನು ಮುಗಿಸುವ ಮನೋಭಾವದವರು. ಅದೇನೇ ಇದ್ದರೂ ಕಾಗೋಡರ ರಾಜಕೀಯ ಜೀವನ ಕಳಂಕರಹಿತವಾದದ್ದೇನೂ ಅಲ್ಲ. ಗೃಹಮಂಡಳಿ ಅಧ್ಯಕ್ಷರಾಗಿದ್ದಾಗ ನಡೆದ ಹಗರಣ ಅವರ ರಾಜಕೀಯ ಜೀವನದ ಕಪ್ಪು ಚುಕ್ಕೆ. ಶಿವಮೊಗ್ಗದಲ್ಲಿ ಮೆಡಿಕಲ್ ಕಾಲೇಜು ಮಾಡಲು ಹೋಗಿ ಮಾರ್ವಾಡಿಯೊಬ್ಬನ ಕೈಗೆ ಸಿಲುಕಿ ಇಂದಿಗೂ ರಾಜ್ಯದ ಅನೇಕ ನ್ಯಾಯಾಲಯಗಳಲ್ಲಿ ಚೆಕ್‌ಬೌನ್ಸ್ ಕೇಸನ್ನು ಕಾಗೋಡು ಎದುರಿಸುತ್ತಿದ್ದಾರೆ. ವ್ಯಾವಹಾರಿಕವಾಗಿ ಕಾಗೋಡು ಬುದ್ಧಿವಂತರಲ್ಲದಿರುವುದು ಇದಕ್ಕೆ ಕಾರಣವಾಗಿದೆ.

ಬಡವರಿಗೆ ಭೂಮಿಯ ಹಕ್ಕು ಸಿಗಬೇಕು ಎಂಬ ಹೋರಾಟದ ಮೂಲಕವೆ ರಾಜಕೀಯಕ್ಕೆ ಬಂದ ಕಾಗೋಡು ಇಂದು ತಾವು ಪ್ರತಿನಿಧಿಸುತ್ತಿರುವ ಕಾಂಗ್ರೆಸ್ ಪಕ್ಷ ರೈತರ ಪಕ್ಕಾ ವಿರೋಧಿಯಾಗಿರುವ ಉದಾರೀಕರಣ ನೀತಿಯನ್ನು ಅನುಸರಿಸುತ್ತಿದ್ದರೂ ಅದರ ವಿರುದ್ಧ ಧ್ವನಿ ಎತ್ತುವ ಸ್ಥಿತಿಯಲ್ಲಿ ಇಲ್ಲ. ಕರ್ನಾಟಕದಲ್ಲಿ ಮಣ್ಣಿನ ಮಗ ಎಂದೇ ಹೆಸರು ಪಡೆದಿರುವ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಕೃಷಿಭೂಮಿ ಮಾರಾಟದ ಮೇಲಿನ ನಿರ್ಬಂಧವನ್ನು ತೆಗೆಯುವ ಕಾಯ್ದೆ ರೂಪಿಸುವಾಗ ಕಾಗೋಡರಂತಹ ನಾಯಕರಿಂದ ಅಂತಹ ಪ್ರಬಲವಾದ ವಿರೋಧ ಬರಲೇ ಇಲ್ಲ.

ಪಕ್ಷ ರಾಜಕಾರಣದ ಮಿತಿಯಲ್ಲಿ ಕಾಗೋಡು ಕಳೆದುಹೋದಂತೆ ಕಂಡರೂ

ಇಂದಿಗೂ ಸಮಾಜದ ದುರ್ಬಲ ವರ್ಗದವರ ಕುರಿತ ಅವರ ಕಾಳಜಿ ಪ್ರಶ್ನಾತೀತ. ಬಡವರಿಗೆ ನಿವೇಶನ, ಮನೆ, ರೇಷನ್‌ಕಾರ್ಡ್ ವಿತರಣೆ, ಉದ್ಯೋಗಖಾತ್ರಿ ಯೋಜನೆ ಅನುಷ್ಠಾನ, ಅರಣ್ಯ ಭೂಮಿ ಹಕ್ಕಿನ ಕಾಯ್ದೆ ಜಾರಿ ಇವೆ ಮೊದಲಾದ ವಿಷಯಗಳ ಕುರಿತು ಕಾಗೋಡು ಈಗಲೂ ಹೆಚ್ಚಿನ ಆಸಕ್ತಿ ವಹಿಸುತ್ತಾರೆ. ಆದರೆ ಸುದೀರ್ಘ ಕಾಲದಿಂದ ರಾಜಕಾರಣದಲ್ಲಿದ್ದರೂ ತಂತ್ರಗಾರಿಕೆಯಲ್ಲಿ ಕಾಗೋಡು ಪಳಗಿದವರಂತೆ ಕಾಣುವುದಿಲ್ಲ. ಹಳ್ಳಿಯ ಯಜಮಾನನ ಸಿಟ್ಟು, ಸೆಡವುಗಳ ಜೊತೆಗೆ ಮುಗ್ಧತೆಯೂ ಬೆಸೆದುಕೊಂಡಂತೆ ಕಾಣುವ ಕಾಗೋಡು ವರ್ಣರಂಜಿತ ರಾಜಕಾರಣಿಯೂ ಅಲ್ಲ. ಸದಾ ಮಾಧ್ಯಮಗಳಲ್ಲಿ ಸುದ್ದಿಯಲ್ಲಿರಬೇಕು ಎಂದು ಬಯಸಿದವರಲ್ಲ. ತೀರಾ ಮಹತ್ವಾಕಾಂಕ್ಷೆಯ ರಾಜಕಾರಣಿಯಂತೆಯೂ ಅವರು ಕಾಣುವುದಿಲ್ಲ.

ಪ್ರಸ್ತುತ ಸಂದರ್ಭದಲ್ಲಿ ಚುನಾವಣೆಗಳಲ್ಲಿ ಹರಿಯುತ್ತಿರುವ ಹಣದ ಹೊಳೆ ನೋಡಿ ಗಾಬರಿಯಾಗಿರುವ ರಾಜಕಾರಣಿಗಳ ಪೈಕಿ ಕಾಗೋಡು ಕೂಡ ಒಬ್ಬರು. ಈ ಹಿನ್ನೆಲೆಯಲ್ಲೆ ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಅವರು ಹೇಳಿದ್ದುಂಟು. ಆದರೆ ಸಾಗರ ಕಾಂಗ್ರೆಸ್‌ನಲ್ಲಿ ಪರ್ಯಾಯ ನಾಯಕತ್ವವೇ ಸೃಷ್ಟಿಯಾಗಿಲ್ಲ. ಅಥವಾ ಸೃಷ್ಟಿಸಲಾಗಿಲ್ಲ ಎಂದು ಹೇಳುವುದೇ ಸರಿಯೇನೋ! ಹೀಗಾಗಿ ಆರೋಗ್ಯ ಸದೃಢವಾಗಿದ್ದರೆ ಮತ್ತೆ ಅವರು ಚುನಾವಣೆಗೆ ನಿಂತರೂ ಆಶ್ಚರ್ಯವಿಲ್ಲ.

–ಎಂ.ರಾಘವೇಂದ್ರ
(ಅಕ್ಟೋಬರ್, 2011)

ನಿಷ್ಠುರ ಬದುಕಿನ ಪ್ರೀತಿಯ ನಾಯಕ ನೀಲಗಂಗಯ್ಯ ಪೂಜಾರ



ತಮ್ಮ ಬದುಕಿನುದ್ದಕ್ಕೂ ಸಮಾಜವಾದಿ ಹೋರಾಟದ ಗಾಳಿಯನ್ನೇ ಉಸಿರಾಗಿಸಿಕೊಂಡು ಬಂದಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ನೀಲಗಂಗಯ್ಯ ಪೂಜಾರ ಇತ್ತೀಚೆಗೆ ನಮ್ಮನ್ನು ಅಗಲಿ ಹೋಗಿ ಧಾರವಾಡ-ಹುಬ್ಬಳ್ಳಿ ಸೀಮೆಯ ಮಣ್ಣಿನ ಮಕ್ಕಳ ಹೋರಾಟದ ಕೆಚ್ಚಿಗೆ ಆಘಾತವನ್ನೇ ಉಂಟು ಮಾಡಿದ್ದಾರೆ ಎಂದರೆ ತಪ್ಪಾಗಲಾರದು. ಇಬ್ಬರು ಪುತ್ರರು, ಮೂರು ಜನ ಪುತ್ರಿಯರು, ಹಲವಾರು ಮೊಮ್ಮಕ್ಕಳುಗಳ ಜೊತೆಗೆ ದೊಡ್ಡ ಸಂಖ್ಯೆಯ ಅನುಯಾಯಿ-ಹೋರಾಟಗಾರರನ್ನೂ ಅಗಲಿ ಹೋಗಿರುವ ಪೂಜಾರರು ತಮ್ಮ ಬದುಕಿನುದ್ದಕ್ಕೂ ರಾಜಿ ರಹಿತ ಹೋರಾಟದ ಜೀವನ ನಡೆಸಿದವರು.

1926ರಲ್ಲಿ ಆಗಿನ ಅವಿಭಜಿತ ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನ ಹೊಸಹಳ್ಳಿ ಗ್ರಾಮದಲ್ಲಿ ಜನಿಸಿದ್ದ ನೀಲಗಂಗಯ್ಯ ತಮ್ಮ ಬಾಲ್ಯದ ದಿನಗಳಲಿ ಗಾಂಧಿವಾದದ ಪ್ರಭಾವದಿಂದ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ್ದರು. ನಂತರ ಸಮಾಜವಾದಿ ವಿಚಾರಧಾರೆಯಿಂದ ಆಕರ್ಷಿತರಾಗಿದ್ದ ಅವರು 'ಭಾರತ ಬಿಟ್ಟು ತೊಲಗಿ' ಚಳುವಳಿಯ ಸಂದರ್ಭದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದೊಡನೆ ಗುರುತಿಸಿಕೊಂಡಿದ್ದರು. ಆಗ ಕನ್ನಡದ ಮಣ್ಣಿನಲ್ಲಿ ಸಮಾಜವಾದಿ ವಿಚಾರಧಾರೆಯನ್ನು ಹರಡುವ ಕಾಯಕದಲ್ಲಿ ತೊಡಗಿದ್ದ ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ಸದಾಶಿವ ಕಾರಂತರೊಂದಿಗೆ ಸೇರಿ ಉತ್ತರ ಕರ್ನಾಟಕದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸಂಘಟನೆಯ ಕೆಲಸವನ್ನೂ ಮಾಡಿದರು. ನಂತರ ಅನೇಕ ರೀತಿಯ ಕಾರ್ಮಿಕ ಸಂಘಟನೆಯ ಕೆಲಸಗಳಲ್ಲಿ ತೊಡಗಿಕೊಂಡಿದ್ದ ಪೂಜಾರರು ಕೊನೆಗೆ ತಮ್ಮ ಸಮಾಜವಾದಿ ಹೋರಾಟದ ಅಡಿಗಲ್ಲನ್ನಾಗಿ ಮಾಡಿಕೊಂಡದ್ದು ಭೂಮಿಯ ಪ್ರಶ್ನೆಯನ್ನು. ಹಾಗೇ ಅವರು ರೈತ ನಾಯಕರಾಗಿಯೇ ಇಂದೂ ಜನಮನದ ಸ್ಮೃತಿಯಲ್ಲಿ ನೆಲೆಸಿದ್ದಾರೆ.

ನೀಲಗಂಗಯ್ಯ ಎಂದರೆ ಧಾರವಾಡ-ಹುಬ್ಬಳ್ಳಿ ಸೀಮೆಯಲ್ಲಿ ನೆನಪಾಗುವುದು ಹೆಬ್ಬಳ್ಳಿ ಭೂಹೋರಾಟ ಮತ್ತು ಹುಬ್ಬಳ್ಳಿ ನಿವೇಶನ ರಹಿತರ ಹೋರಾಟ. ಕಾಗೋಡು ಸತ್ಯಾಗ್ರಹದ ಮಹತ್ವದ; ಹಾಗೆ ನೋಡಿದರೆ ಇದಕ್ಕಿಂತ ಹೆಚ್ಚು ಫಲಪ್ರದವಾಗಿ ಕಾಣುವ ಹೆಬ್ಬಳ್ಳಿ ಭೂ ಹೋರಾಟವನ್ನು ರೂಪಿಸಿ ಯಶಸ್ವಿಯಾಗಿ ದಡ ಮುಟ್ಟಿಸಿದ ಕೀರ್ತಿ ಪೂಜಾರರದ್ದು. ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಆಗಿನ ಮುಂಬೈ ವಿಧಾನ ಸಭೆಗೆ ಪ್ರಜಾ ಸಮಜವಾದಿ ಪಕ್ಷದಿಂದ ಆಯ್ಕೆಯಾಗಿದ್ದ ಪೂಜಾರರು

ಅಲ್ಲಿನ ಭೂ ರಾಜಕಾರಣದ ಒಳಸುಳಿಗಳನ್ನು ಅರ್ಥ ಮಾಡಿಕೊಂಡು ಧಾರವಾಡ ಹೊರವಲಯದ ಹೆಬ್ಬಳ್ಳಿಯಲ್ಲಿದ್ದ ಜಹಗೀರುದಾರಿಯಿಂದ ಬಿಡುಗಡೆಯಾಗಿ ಸರ್ಕಾರದ ವಶದಲ್ಲಿದ್ದ 11 ಸಾವಿರ ಎಕರೆ ಜಮೀನನ್ನು ತಮ್ಮ ಸಹ ಸಮಾಜವಾದಿ ಸಹಚರರಾದ ಗಂಗಾಧರ ಪದಕಿ ಮತ್ತಿತರರ ಸಹಕಾರದೊಂದಿಗೆ ಒಂದು ದೊಡ್ಡ ಹೋರಾಟವನ್ನೇ ರೂಪಿಸಿದರು. ಮೆರವಣಿಗೆ, ಪಿಕೆಟಿಂಗ್, ಸತ್ಯಾಗ್ರಹಗಳಿಂದ ಒಡಗೂಡಿದ ಕೇವಲ ಹತ್ತು ದಿನಗಳ ಈ ಹೋರಾಟ ಸರ್ಕಾರ ಅಲ್ಲಿನ 320 ಜನ ಗೇಣಿದಾರರಿಗೆ ಮತ್ತು 112 ಜನ ಭೂರಹಿತ ಕೃಷಿ ಕಾರ್ಮಿಕರಿಗೆ ಭೂಮಿ ಹಂಚುವುದರಲ್ಲಿ ಕೊನೆಗೊಂಡಿತು. ಈ ಹೋರಾಟ ಇಷ್ಟು ಸುಗಮ ಮತ್ತು ಕ್ಷಿಪ್ರವಾಗಿ ಯಶಸ್ವಿಯಗಲು ಕಾರಣ, ಪೂಜಾರರ ಶಾಸಕತ್ವದ ಅನುಭವ, ವಕೀಲರಾಗಿ ಕಾನೂನುಗಳ ಬಗ್ಗೆ ಪಡೆದಿದ್ದ ತಿಳುವಳಿಕೆ, ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪ ಮತ್ತು ಜತ್ತಿಯವರೊಡನೆ ನಡೆಸಿದ ಸಂಧಾನದಲ್ಲಿ ತೋರಿದ ಕೌಶಲ್ಯ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಅವರ ನಿಸ್ವಾರ್ಥ ಜನಪ್ರೀತಿ ಎಂದೇ ಹೇಳಬೇಕು. ಈ ಹೋರಾಟದ ಯಶಸ್ಸನ್ನು ಪೂಜಾರರು ಸಮಾಜವಾದಿ ನಾಯಕ ಮಧುಲಿಮಯೆಯವರನ್ನು ಹೆಬ್ಬಳ್ಳಿಗೆ ಕರೆಸಿ ಹೋರಾಟಗಾರರೆಲ್ಲರಿಗೂ ಕರಿಗಡುಬಿನ ಊಟ ಹಾಕಿಸುವ ಮೂಲಕ ಆಚರಿಸಿದರು! ಪೂಜಾರ ಈ ಜನಪ್ರೀತಿ ಅವರ ರಾಜಕೀಯ ಬದುಕಿನ ಆರಂಭದಿಂದ ಕೊನೆಯವರೆಗೂ ಅದೇ ತೀವ್ರತೆಯಲ್ಲಿ ಉಳಿದಿತ್ತು. ಅದಕ್ಕೆ ಕಾರಣ ಅವರ ಸರಳ ಜೀವನ. ಹಾಗಾಗಿ ಬಡಜನರ ಕಷ್ಟಸುಖಗಳೊಂದಿಗೆ ಗುರುತಿಸಿಕೊಳ್ಳುವ ತಹತಹ. ಪ್ರೀತಿಯೊಂದಿಗೆ ಬಹು ನಿಷ್ಠೂರವಾದಿ ಆಗಿದ್ದ ನೀಲಗಂಗಯ್ಯ ಆ ಕಾರಣದಿಂದಲೇ ರಾಜ್ಯ ಮಟ್ಟದಲ್ಲಿ ದೊಡ್ಡ ನಾಯಕರಾಗಲು ಸಾಧ್ಯವಾಗಲಿಲ್ಲ ಎಂದು ಹೇಳಬಹುದು. ಗೋಪಾಲ ಗೌಡರ ಮದುವೆಗೆ ಕಾರಣರಾದ ಇವರು ಗೋಪಾಲ ಗೌಡ ಮತ್ತು ಅವರ ಸಹಚರರ ರಾಜಕಾರಣದ ಕೆಲವು ರೀತಿ ನೀತಿಗಳ ಬಗ್ಗೆ ಅಷ್ಟೇನೂ ಸಮಾಧಾನ ಹೊಂದಿರಲಿಲ್ಲ.


ಅವರು ಲೋಹಿಯಾ ಪ್ರತಿಪಾದಿಸಿದ ವಿಶಿಷ್ಟ ಸಮಾಜವಾದಿ ಸಿದ್ಧಾಂತವನ್ನು ವಿವರವಾಗಿ ಅಧ್ಯಯನ ಮಾಡಿದವರಾಗಿದ್ದರು ಮತ್ತು ಅದರ ಬಗ್ಗೆ ವಿದ್ವತ್ಪೂರ್ಣವಾಗಿ ಮಾತಾಡಬಲ್ಲವರೂ, ಬರೆಯಬಲ್ಲವರೂ ಆಗಿದ್ದರು. ಆದರೆ ಅದೇ ಸಮಯದಲ್ಲಿ ಸಮಾಜವಾದಿ ಪಕ್ಷ ಇದ್ದಷ್ಟೂ ದಿನವೂ ನೆಲ ಮಟ್ಟದ ಹೋರಾಟಗಾರರೂ ಆಗಿದ್ದರು. ಆನಂತರ ಜನತಾ ಪಕ್ಷ ಮತ್ತು ಜನತಾ ಪಕ್ಷ ವಿಘಟಿತವಾದ ನಂತರ ಲೋಕದಳದೊಂದಿಗೆ ಗುರುತಿಸಿಕೊಂಡಿದ್ದ ಪೂಜಾರರು ಹೊಸ ದಿನಗಳ ರಾಜಕಾರಣ ಒತ್ತಡಗಳನ್ನು ಸಹಿಸಲಾರದ 1978ರಲ್ಲಿ ಅಧಿಕಾರ ರಾಜಕರಣದಿಂದ ನಿವೃತ್ತಿ ಘೋಷಿಸಿದರು. ಆದರೆ ಹೋರಾಟದ ರಾಜಕಾರಣದಿಂದ ಎಂದೂ ನಿವೃತ್ತರಾಗದೆ, ಬದುಕಿನ ಕೊನೆಯವರೆಗೂ ದೀನ ದಲಿತರ, ಶೋಷಿತರ ದನಿಯಾಗಿ ಅನೇಕ ಹೋರಾಟಗಳನ್ನು ಮಾಡಿದರು. ಇವುಗಳಲ್ಲಿ ಮುಖ್ಯವಾದುವುಗಳೆಂದರೆ 1983ರಲ್ಲಿ, ಸರ್ಕಾರದ ತಪ್ಪು ನೀತಿಯಿಂದಾಗಿ ಅತಂತ್ರರಾಗಿ ಹೋಗಿದ್ದ ಟಿ.ಸಿ.ಎಚ್. ನಿರುದ್ಯೋಗಿಗಳ ಸಂಘ ಸ್ಥಾಪಿಸಿ ಗುಂಡೂರಾವ್ ಸರ್ಕಾರದ ವಿರುದ್ಧ 30 ದಿನಗಳ ಅಮರಣಾಂತ ಉಪವಾಸ ಕೈಗೊಂಡು ನೂರಾರು ಜನ ಯುವಜನರ ಪಾಲಿಗೆ

ಉದ್ಯೋಗಾವಕಾಶದ ದಾರಿ ತೆರೆದದ್ದು. ಆಗ ಇವರನ್ನು ಬೆಂಬಲಿಸಲು ಹಿರಿಯ ಸಮಾಜವಾದಿ ಹೋರಾಟಗಾರ ಜಾರ್ಜ್ ಫರ್ನಾಂಡೀಸ್ ಕೂಡ ಧಾರವಾಡಕ್ಕೆ ಧಾವಿಸಿದ್ದರು. ಪೂಜಾರರು ನೇತೃತ್ವ ವಹಿಸಿದ ಇದಕ್ಕಿಂತ ಮಹತ್ವದ ಇನ್ನೊಂದು ಹೋರಾಟವೆಂದರೆ, ನಗರ ಪ್ರದೇಶದ ನಿವೇಶನ ರಹಿತರ ಹೋರಾಟ. 1978ರ ನಂತರ ಆರಂಭಿಸಿ ಅವರ 85 ವರ್ಷ ವಯಸ್ಸಾಗಿದ್ದ ಕೊನೆ ದಿನಗಳವರೆಗೂ ಈ ಹೋರಾಟ ನಡೆಯುತ್ತಾ ಹುಬ್ಬಳ್ಳಿ-ಧಾರವಾಡ ಸೇರಿದಂತೆ ವಿವಿಧೆಡೆ ಸಾವಿರಾರು ಬಡಜನರಿಗೆ ನಿವೇಶನ ದೊರಕಿಸಿಕೊಟ್ಟು ಅವರ ಕುಟುಂಬಗಳಿಗೆ ಸೂರು ಒದಗುವಂತೆ ಮಾಡಿದರು. ಕೊಡಲಿ, ಜಾಗಟೆ, ಹಣೆ ಕಲ್ಲು, ಉಗುಳು ಹೀಗೆ ಹಲವಾರು ಸಂಕೇತಗಳನ್ನು ಬಳಸಿ ತಮ್ಮ ಹೋರಾಟವನ್ನು ರೂಪಿಸುತ್ತಿದ್ದ ಇವರು ಗಂಗಾಧರ ಪದಕಿ, ರಾಚಪ್ಪ ಹಡಪದ, ರಾಚಪ್ಪ ಬೆಟ್ಟೂರು ಅವರಂತಹ ಸಮಕಾಲೀನರ ಜೊತೆಗೆ ಕೆಲಸ ಮಾಡುತ್ತಲೇ ನಾಗರಾಜ ಗುರಿಕಾರ, ನೀಲಕಂಠ ಅಸೂಟಿಯವರಂತಹ ಶಿಷ್ಯರನ್ನು ತಯಾರು ಮಾಡಿದರು. ಇಂತಹ ಹೋರಾಟದ ಫಲವಾಗಿ ಎಲ್ಲ ನಾಗರೀಕ ಸೌಲಭ್ಯಗಳಿಂದ ಸುಸಜ್ಜಿತವಾಗಿ ಮೂಡಿದ ಒಂದು ವಸತಿ ಪ್ರದೇಶಕ್ಕೆ ಅವರು ಇಂತಹ ಹೋರಾಟಗಳಿಗೆ ತಮಗೆ ಸ್ಫೂರ್ತಿ ನೀಡಿದ ಡಾ. ರಾಮಮನೋಹರ ಲೋಹಿಯಾ ಹೆಸರಿಟ್ಟು ತಮ್ಮ ಸಮಾಜವಾದಿ ಬದ್ಧತೆಗೆ ಒಂದು ಸಾರ್ಥಕತೆ ಒದಗಿಸಿಕೊಂಡಿದ್ದಾರೆ. ಇಂದು ಈ ಡಾ. ಲೋಹಿಯಾ ನಗರ ಮತ್ತು ಆನಂದ ನಗರಗಳ ಜನರ ಮನಸ್ಸಿನಲ್ಲಿ ನೀಲಗಂಗಯ್ಯ ಪೂಜಾರರು ಅಮರರಾಗಿದ್ದಾರೆ.

–ನಾಗರಾಜ ಗುರಿಕಾರ

(ಅಕ್ಟೋಬರ್, 2012)

ಸಮಾಜವಾದದ ಕಡು ವ್ಯಾಮೋಹಿ ಎಸ್. ಎಸ್ ಕುಮಟಾ



ಸಮಾಜವಾದ ತಮ್ಮ ಜೀವನದ ಉಸಿರು ಎನ್ನುವಂತೆ ಬದುಕಿದ ಅನೇಕ ಮಂದಿ ಸಾಗರ ಪ್ರಾಂತ್ಯದಲ್ಲಿ ಇದ್ದರು. ಇಂತಹವ ಪೈಕಿ ಪ್ರಮುಖವಾದ ಹೆಸರು ಎಸ್.ಎಸ್.ಕುಮಟಾ ಅವರದ್ದು. ಕಾಗೋಡು ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಕುಮಟಾ ಕರ್ನಾಟಕದ ಪ್ರಭಾವಿ ರಾಜಕಾರಣಿಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರೂ ಅವರಿಂಡ ಏನನ್ನೂ ನಿರೀಕ್ಷಿಸದೆ ಜೀವನದ ಕೊನೆಯವರೆಗೂ ಸ್ವಾಭಿಮಾನಿಯಾಗಿ ಬದುಕಿದವರು.

ಸತ್ಯಣ್ಣ ಎಂದೇ ಚಿರಪರಿಚಿತರಾಗಿದ್ದ ಎಸ್.ಎಸ್.ಕುಮಟಾ ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕುಮಟಾದವರು. ಹಾಗಾಗಿ ಅವರ ಹೆಸರಿನೊಂದಿಗೆ ಕುಮಟಾ ಎನ್ನುವ ಹೆಸರು ಸೇರಿಕೊಂಡಿತ್ತು. ಅವರ ಕುಟುಂಬ ಚಿಕ್ಕವರಿರುವಾಗಲೇ ಸಾಗರಕ್ಕೆ ವಲಸೆ ಬಂದ ಕಾರಣ, ಕುಮಟಾ ಸಾಗರದವರೇ ಆದರು. ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಸಾಗರದಲ್ಲಿ ಪೂರೈಸಿದ ಕುಮಟಾ ಕಾಲೇಜು ಶಿಕ್ಷಣಕ್ಕಾಗಿ ಶಿವಮೊಗ್ಗಕ್ಕೆ ಹೋದಾಗ ಯು.ಆರ್.ಅನಂತಮೂರ್ತಿ, ಜೆ.ಹೆಚ್.ಪಟೇಲ್ ಸೇರಿದಂತೆ ಹಲವರ ಪರಿಚಯವಾಯಿತು. ಅದೇ ಹೊತ್ತಿಗೆ ಸಾಗರದಲ್ಲಿ ಕಾಗೋಡು ಚಳವಳಿ ಕಾವು ಏರತೊಡಗಿತ್ತು. ಕಾಲೇಜು ದಿನಗಳಲ್ಲಿ ವಿವಿಧ ರೀತಿಯ ಸತ್ಯಾಗ್ರಹಗಳಲ್ಲಿ ಪಾಲ್ಗೊಂಡು ಸಮಾಜದ ಶೋಷಿತ ವರ್ಗದವರ ಪರವಾಗಿ ಧ್ವನಿ ಎತ್ತುತ್ತಿದ್ದ ಕುಮಟಾ ಸಹಜವಾಗಿಯೇ ತಮ್ಮೂರಿನಲ್ಲಿ ಆರಂಭಗೊಂಡ ಕಾಗೋಡು ಸತ್ಯಾಗ್ರಹದ ಆಕರ್ಷಣೆಗೆ ಒಳಗಾದರು. ಸಾಮಾಜಿಕ ಹೋರಾಟವಾಗಿ ಅರಂಭವಾಗಿದ್ದ ಕಾಗೋಡು ಸತ್ಯಾಗ್ರಹಕ್ಕೆ ಸೈದ್ಧಾಂತಿಕ ನೆಲೆಗಟ್ಟು ಒದಗಿ ಬಂದದ್ದು ಸಮಾಜವಾದಿಗಳಿಂದಲೇ. ಅಂತಹ ಸಮಾಜವಾದಿಗಳ ಗುಂಪಿನಲ್ಲಿ ಕುಮಟಾ ಪ್ರಮುಖರಾಗಿದ್ದರು.

ಚಳವಳಿಯ ಸಂಘಟನೆ, ಕರಪತ್ರ ಮುದ್ರಣ, ಭಾಷಣಗಳ ತಯಾರಿ ಹೀಗೆ ಹಲವು ಕೆಲಸಗಳಲ್ಲಿ ಕುಮಟಾ ತಮ್ಮನ್ನು ತೊಡಗಿಸಿಕೊಂಡಿದ್ದರು. ಅತ್ಯುತ್ತಮ ವಾಗ್ಮಿಯಾಗಿದ್ದ ಕುಮಟಾ ಭಾಷಣಕ್ಕೆ ನಿಂತರೂ ಎಂದರೆ ಎಂತಹ ಜಟಿಲ ವಿಷಯವನ್ನು ಸರಳವಾಗಿ ಸಾಮಾನ್ಯ ರೈತರಿಗೂ ಅರ್ಥವಾಗುವಂತೆ ವಿವರಿಸುತ್ತಿದ್ದರು ಎಂಬುದನ್ನು ಚಳವಳಿಯನ್ನು ಹತ್ತಿರದಿಂದ ಕಂಡವರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಇದೇ ಹೊತ್ತಿಗೆ ವಿದ್ವಾಂಸರೇ ತುಂಬಿದ ಸಭೆಗಳಲ್ಲೂ

ವಿದ್ವತ್‌ಪೂರ್ಣ ಭಾಷಣ ಮಾಡುವ ಶಕ್ತಿಯೂ ಅವರಲ್ಲಿತ್ತು.


ಡಾ.ರಾಮಮನೋಹರ ಲೋಹಿಯಾ ಅವರು ಕಾಗೋಡು ಚಳವಳಿ ಸಂದರ್ಭದಲ್ಲಿ ಸಾಗರಕ್ಕೆ ಬಂದಿದ್ದಾಗ ಅವರ ಹಿಂದಿಯ ಭಾಷಣವನ್ನು ಕನ್ನಡಕ್ಕೆ ಅನುವಾದ ಮಾಡಿದ್ದು ಕುಮಟಾ ಅವರೇ. ಹಲವು ಸಭೆಗಳಲ್ಲಿ ಪ್ರಮುಖ ನಾಯಕರು ಬರುವ ಮುನ್ನ ಕುಮಟಾ ತಮ್ಮ ಭಾಷಣದ ಮೂಲಕ ಜನರನ್ನು ಹಿಡಿದಿಡುತ್ತಿದ್ದರು. ಅದು ಇಷ್ಟವಾಗಿ ರೈತರು ಕುಮಟಾ ಅವರ ಭಾಷಣ ಕೇಳಿ ಸ್ಫೂರ್ತಿಗೊಂಡು ಜೈಲು ಸೇರಿದ ಉದಾಹರಣೆಗಳಿವೆ ಎಂಬುದನ್ನು ಕಾಗೋಡು ಸತ್ಯಾಗ್ರಹದ ರೂವಾರಿ ಎಚ್.ಗಣಪತಿಯಪ್ಪ ಇಂದಿಗೂ ಸ್ಮರಿಸುತ್ತಾರೆ.

ತಮ್ಮ ವೈಯುಕ್ತಿಕ ಬದುಕು ಎಷ್ಟೇ ಕಷ್ಟದಲ್ಲಿದ್ದರೂ ಅದನ್ನು ಲೆಕ್ಕಿಸದೆ ಚಳವಳಿಯ ಬಗ್ಗೆ ಬದ್ಧತೆಯಿಂದ ಕೆಲಸ ಮಾಡಿದವರ ಸಾಲಿಗೆ ಕುಮಟಾ ಸೇರುತ್ತಾರೆ. ಕಾಗೋಡು ಚಳವಳಿ ತೀವ್ರಗೊಂಡ ಸಂದರ್ಭದಲ್ಲಿ ಒಮ್ಮೆ ರೈತರು ಕಟಾವು ಮಾಡಿದ ಬತ್ತವನ್ನು ಸಮಾಜವಾದಿ ಪಕ್ಷದ ಕಚೇರಿಗೆ ತಂದು ಸಂಗ್ರಹಿಸಲು ಮುಂದಾಗಿದ್ದರು. ಈ ವೇಳೆ ಪೊಲೀಸರ ಲಾಟಿ ಏಟು ತಿಂದು ಈ ಕೆಲಸ ಸುಗಮವಾಗುವಂತೆ ನೋಡಿಕೊಂಡವರು ಕುಮಟಾ. ಇದೇ ಸಮಯದಲ್ಲಿ ಕುಮಟಾ ಅವರ ಮನೆಯಲ್ಲಿ ಅನ್ನ ಬೇಯಿಸಲು ಸಹ ಅಕ್ಕಿಯ ಕೊರತೆ ಇತ್ತು ಎಂಬುದನ್ನು ಗಮನಿಸಿದವರಿದ್ದಾರೆ. ಹಾಗೆಂದು ತಮ್ಮ ಆರ್ಥಿಕ ಪರಿಸ್ಥಿತಿ ದುರ್ಬಲವಾಗಿದೆ, ಕುಟುಂಬ ಕಷ್ಟದಲ್ಲಿದೆ ಎಂಬುದನ್ನು ಯಾರ ಬಳಿಯೂ ಕುಮಟಾ ಹೇಳಿಕೊಂಡವರಲ್ಲ. ಬಡತನವನ್ನು ಗೇಲಿ ಮಾಡುತ್ತ ಅದನ್ನು ಒಂದು ಸವಾಲು ಎನ್ನುವಂತೆ ಬಾಳಿ ಬದುಕಿದ ಅಪರೂಪದ ವ್ಯಕ್ತಿ ಅವರು. ಪ್ರಬಲ ಜಾತಿಗೆ ಸೇರದ ಕಾರಣಕ್ಕೆ ರಾಜಕೀಯವಾಗಿ ಕುಮಟಾ ಅವರಿಗೆ ದೊರೆಯಬೇಕಾದ ಮಾನ್ಯತೆ ದೊರಕಲಿಲ್ಲ. ಸಮಾಜವಾದಿ ಪಕ್ಷದಿಂದ ಸಾಗರ ವಿಧಾನಸಭಾ ಕ್ಷೇತ್ರಕ್ಕೆ ಕಾಗೋಡು ತಿಮ್ಮಪ್ಪ ಅವರನ್ನು ಅಭ್ಯರ್ಥಿಯಾಗಿ ನಿಲ್ಲಿಸುವ ಸಂದರ್ಭದಲ್ಲಿ ಮೊದಲು ಪ್ರಸ್ತಾಪವಾದ ಹೆಸರು ಕುಮಟಾ ಅವರದ್ದೇ ಆಗಿತ್ತಂತೆ. ಆದರೆ ಅವರ ಜಾತಿಯ ಜನರು ಸಾಗರ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲ ಎನ್ನುವ ಕಾರಣಕ್ಕೆ ಆ ಹೆಸರು ಹಿಂದಕ್ಕೆ ಹೋಗಿತ್ತು. ಜಾತಿ ವ್ಯವಸ್ಥೆ ವಿರುದ್ಧ ನಿರಂತರವಾಗಿ ಹೋರಾಡಿದ ಅಪ್ಪಟ ಜಾತ್ಯಾತೀತ ವ್ಯಕ್ತಿಗೆ ಜಾತಿಯೇ ಮುಳುವಾದದ್ದು ವಿಪರ್ಯಾಸದ ಸಂಗತಿ. ಕುಮಟಾ ಅವರ ಹೋರಾಟ ಸಾಗರ ಅಥವಾ ಶಿವಮೊಗ್ಗ ಜಿಲ್ಲೆಗೆ ಸೀಮಿತವಾಗಿರಲಿಲ್ಲ. ರಾಜ್ಯದ ಎಲ್ಲೆ ಜನಪರ ಹೋರಾಟ ನಡೆದರೆ ಅಲ್ಲಿ ಅವರು ಹಾಜರಿರುತ್ತಿದ್ದರು. ಸಂಡೂರು ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮೂರು ತಿಂಗಳು ಜೈಲು ವಾಸ ಅನುಭವಿಸಿದವರು ಕುಮಟಾ. ಸಾಗರದ ಗಜಾನನ ಸಾರಿಗೆ ಸಂಸ್ಥೆ ಕಾರ್ಮಿಕರ ಹೋರಾಟ, ತಾಳಗುಪ್ಪದ ಪ್ಲೈವುಡ್ ಫ್ಯಾಕ್ಟರಿಯ ಕಾರ್ಮಿಕರ ಸಂಘಟನೆ, ಹಮಾಲರ ಸಂಘ ಸ್ಥಾಪನೆ ಹೀಗೆ ಹತ್ತು ಹಲವು ಹೋರಾಟಗಳಲ್ಲಿ ಕುಮಟಾ ತಮ್ಮನ್ನು ತೊಡಗಿಸಿಕೊಂಡವರು. ರಾಜಕಾರಣದ ಜೊತೆಗೆ ಕಲೆ, ಸಾಹಿತ್ಯ, ರಂಗಭೂಮಿ, ಸಿನೆಮಾ, ಕ್ರೀಡೆ, ಪತ್ರಿಕಾ ಬರವಣಿಗೆ ಹೀಗೆ ನಾನಾ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿದ್ದ ಕುಮಟಾ ಅವರದ್ದು ಅಪ್ಪಟ ಸಾಂಸ್ಕೃತಿಕ ವ್ಯಕ್ತಿತ್ವ. ಸಾಹಿತ್ಯದ ಗಂಭೀರ ಓದುಗರಾಗಿದ್ದ ಕುಮಟಾ

ಸಾಗರದಲ್ಲಿ ಕೆಲವು ಕಾಲ 'ದೊಂದಿ' ಎಂಬ ವಾರಪತ್ರಿಕೆಯನ್ನು ನಡೆಸಿದ್ದರು. ತಮ್ಮ ವೈಯುಕ್ತಿಕ ಬದುಕಿಗಿಂತ ಸಮಾಜವನ್ನು ಅತಿಯಾಗಿ ಪ್ರೀತಿಸಿದ ಕುಮಟಾ ಸ್ವಸ್ಥ ಸಮಾಜಕ್ಕೆ ಬೇಕಾದ ಮಾನಸಿಕ ಸ್ಥಿತಿ ಮತ್ತು ಮಾನವೀಯತೆಯ ಔದಾರ್ಯಗಳ ಪ್ರತಿರೂಪದಂತಿದ್ದರು. ಇಷ್ಟಾಗಿಯೂ ವೈಯುಕ್ತಿಕ ಬದುಕಿನಲ್ಲಿ ಶಿಸ್ತನ್ನು ಕಾಪಾಡಿಕೊಳ್ಳದೆ ಕೆಲವು ದೌರ್ಬಲ್ಯಗಳನ್ನು ರೂಢಿಸಿಕೊಂಡ ಕಾರಣ 1993ರಲ್ಲಿ ತೀವ್ರ ಹೃದಯಾಘಾತದಿಂದ ಅವರು ಸಾವನ್ನಪ್ಪಿದರು. ಆಗ ಅವರಿಗೆ 62 ವರ್ಷ ವಯಸ್ಸು. ಅಲ್ಲಿಗೆ ಸಮಾಜವಾದಿ ಚಳವಳಿಯ ಸಾಂಸ್ಕೃತಿಕ ಚೈತನ್ಯದ ವ್ಯಕ್ತಿತ್ವವೊಂದು ನಮ್ಮಿಂದ ಮರೆಯಾದಂತಾಯಿತು.

–ಎಂ.ರಾಘವೇಂದ್ರ


(ನವೆಂಬರ್, 2012)



ಅನುಬಂಧ



ಸಮಾಜವಾದಿ ಕಿಡಿ: ಕೋಣಂದೂರು ಲಿಂಗಪ್ಪ



ಸಮಾಜವಾದಿ ಚಳುವಳಿಯು ಆಧುನಿಕ ಕರ್ನಾಟಕದ ಇತಿಹಾಸದಲ್ಲಿನ ಒಂದು ಉಜ್ವಲ ಅಧ್ಯಾಯ. ಗಾಂಧಿ ಚಿಂತನೆಯನ್ನು ಬಿಟ್ಟರೆ, ಕನ್ನಡದ ಜನರ ಬೌದ್ಧಿಕ ದಿಗಂತಗಳನ್ನು ಅದು ಪ್ರಭಾವಿಸಿದಷ್ಟು, ವಿಸ್ತರಿಸಿದಷ್ಟು ಇನ್ನಾವ ಚಿಂತನೆಯೂ, ಚಳುವಳಿಯೂ ಪ್ರಭಾವಿಸಿರಲಾರದು, ವಿಸ್ತರಿಸಿರಲಾರದು. ಅದು ಸೃಷ್ಟಿಸಿದಷ್ಟು ಶ್ರೇಷ್ಠ ಮಟ್ಟದ ಲೇಖಕ-ಚಿಂತಕ-ಕಲಾವಿದರನ್ನು ಇನ್ನಾವ ಚಳುವಳಿಯೂ, ಚಿಂತನೆಯೂ ಸೃಷ್ಟಿಸಿರಲಾರದು. ಇದರ ಹಿಂದಿನ ಮೂಲ ಸ್ಫೂರ್ತಿ ಡಾ. ರಾಮಮನೋಹರ ಲೋಹಿಯಾ ಅವರ ಉಜ್ವಲ ವ್ಯಕ್ತಿತ್ವ-ಚಿಂತನೆಗಳಾದರೂ, ಕರ್ನಾಟಕದ ಸಮಾಜವಾದಿ ಗಗನ ಪ್ರದೇಶದ ಧ್ರುವತಾರೆ ಎಂದರೆ ಶಾಂತವೇರಿ ಗೋಪಾಲಗೌಡರೆಂದೇ ಹೇಳಬೇಕು. ಅವರ ಅಕ್ಕಪಕ್ಕದಲ್ಲಿ ಸಾರ್ವಜನಿಕ ನೆನಪಿನಂಗಳದಲ್ಲಿ ಹೊಳೆಯುವ ಇನ್ನೆರಡು ತಾರೆಗಳೆಂದರೆ ಕಾಗೋಡು ತಿಮ್ಮಪ್ಪ ಮತ್ತು ಕೋಣಂದೂರು ಲಿಂಗಪ್ಪ. ನಿಜ, ಸಮಾಜವಾದಿ ಚಳುವಳಿಯಲ್ಲಿ ಗೋಪಾಲಗೌಡರೊಂದಿಗೆ ಜಿ. ಸದಾಶಿವರಾಯರು, ಜೆ.ಎಚ್. ಪಟೇಲ್, ವೈ. ಆರ್. ಪರಮೇಶ್ವರಪ್ಪ(ಅಣ್ಣಯ್ಯ), ಎಸ್. ವೆಂಕಟರಾಂ, ವೀರಣ್ಣ ತಿಮ್ಮಾಜಿ, ಎಸ್. ಎಸ್. ಕುಮುಟಾ, ಶಂಕರನಾರಾಯಣ ಭಟ್ಟ, ನೀಲಗಂಗಯ್ಯ ಪೂಜಾರ, ಎಂ. ನಾಗಪ್ಪ, ಟಿ.ಎನ್. ನಾಗರಾಜ್ ಮುಂತಾದವರು ಹೊಳೆಯುವವರಾದರೂ, ಇವರೆಲ್ಲ ತಮ್ಮ ಹೊಳಪಿನ ಅರ್ಧ ಶಕ್ತಿಯನ್ನು ಹುಟ್ಟಿನ ಹಿನ್ನೆಲೆಯಿಂದಲೇ ಪಡೆದುಕೊಂಡು ಬಂದವರು. ಆದರೆ ತಿಮ್ಮಪ್ಪ ಮತ್ತು ಲಿಂಗಪ್ಪ ಹುಟ್ಟಿನಿಂದ ವಾರಸುದಾರಿಕೆಯಾಗಿ ಏನನ್ನೂ ಪಡೆಯದೇ ಬಂದವರು;ಹೋರಾಟದ ಕಿಚ್ಚಿನ ಹೊರತಾಗಿ.

ತಿಮ್ಮಪ್ಪ ಮತ್ತು ಲಿಂಗಪ್ಪನವರ ಸಾಲಿಗೆ ನಾನು ಬಂಗಾರಪ್ಪನವರನ್ನು ಸೇರಿಸಬಯಸುವುದಿಲ್ಲ. ಏಕೆಂದರೆ ಅವರು ಸಮಾಜವಾದಿ ಚಳುವಳಿಗೆ ಕೊಟ್ಟದ್ದಕ್ಕಿಂತ ಪಡೆದದ್ದೇ ಹೆಚ್ಚು. ಅವರು ಸಮಾಜವಾದಿ ಚಳುವಳಿಯಿಂದ, ಪಕ್ಷದಿಂದ ತಮ್ಮ ಸಾರ್ವಜನಿಕ ಜೀವನವನ್ನು ಆರಂಭಿಸಿದರಾದರೂ ಅವರು ಬಹುಬೇಗ ಪಥ ಬದಲಿಸಿ ಕಟ್ಟಿಕೊಂಡ ರಾಜಕೀಯ ಜೀವನ-ಆ ಜೀವನದುದ್ದಕ್ಕೂ ಅವರು ಎಗ್ಗಿಲ್ಲದೆ ಸಮಾಜವಾದಿ ಎಂಬ ಅಭಿದಾನವನ್ನು ಆಭರಣದಂತೆ ಧರಿಸಿಕೊಂಡು ಓಡಾಡಿದರಾದರೂ-ಅವರ ಮಾತೃ ಪಕ್ಷ ಅಥವಾ ಚಳುವಳಿಯ ಘನತೆ ಮತ್ತು ವಿಶ್ವಾಸಾರ್ಹತೆಗಳಿಗೆ ಆಘಾತವನ್ನೇ ಉಂಟು ಮಾಡಿದಂತಹದು. ಅದರ ವಿವರಗಳು ಇಲ್ಲಿ ಬೇಡ. ಆದರೆ ತಿಮ್ಮಪ್ಪ ಮತ್ತು ಲಿಂಗಪ್ಪ ಸಮಾಜವಾದಿ ಪಕ್ಷ ಮತ್ತು ಚಳುವಳಿ ಉಳಿದಿದ್ದಷ್ಟು ಕಾಲವೂ ಅದರಲ್ಲಿ ನಿಷ್ಠೆ ಹೊಂದಿದ್ದವರು;ಅದನ್ನು ಬೆಳೆಸಲು ತಮ್ಮ ಬದುಕನ್ನು ತೇದವರು. ಪಕ್ಷ ಮತ್ತು ಚಳುವಳಿ ಇಲ್ಲವಾದ ನಂತರದ ಅವರ

ಕಥೆಯೂ ಇಲ್ಲಿ ಬೇಡ. ಏಕೆಂದರೆ ಅದು ಇಲ್ಲಿ ಅಪ್ರಸ್ತುತ.

ಕೋಣಂದೂರು ಲಿಂಗಪ್ಪನವರ ಹೆಸರನ್ನು ನಾನು ಮೊದಲು ಕೇಳಿದ್ದು ಅವರು 1972ರ ವಿಧಾನಸಭಾ ಚುನಾವಣೆಗಳಲ್ಲಿ ಆಗ್ಗೆ ನಿಧನರಾಗಿದ್ದ ಗೋಪಾಲಗೌಡರ ಕ್ಷೇತ್ರ ತೀರ್ಥಹಳ್ಳಿಯಿಂದ ಗೋಪಾಲ ಗೌಡರ ಮಫ್ಲರ್ ತೋರಿಸುತ್ತಾ, ಕೇವಲ ಎಂಟು ಸಾವಿರದ ಎರಡು ನೂರು ರೂಪಾಯಿಗಳ ಖರ್ಚಿನಲ್ಲಿ ಗೆದ್ದುಬಂದು ದೊಡ್ಡ ಸುದ್ದಿ ಮಾಡಿದಾಗ. ಅದು ದೊಡ್ಡ ಸುದ್ದಿಯೇ. ಹಲವು ಕಾರಣಗಳಿಗಾಗಿ. ಅವರು ಗೆದ್ದದ್ದು ಶ್ರೀಮಂತ ಒಕ್ಕಲಿಗ ಸಮುದಾಯ ಪ್ರಬಲ ಸಂಖ್ಯೆಯಲ್ಲಿದ್ದ ಕ್ಷೇತ್ರವೊಂದರಿಂದ. ಅವರು ಒಂದು ಅತಿ ಅಲ್ಪಸಂಖ್ಯಾತವಾದ ಕೆಳಜಾತಿಗೆ ಸೇರಿದವರು. ಅದಕ್ಕೂ ಹೆಚ್ಚಾಗಿ ಅವರ ತಂದೆ ತೀರ್ಥಹಳ್ಳಿ ಬಸ್ ನಿಲ್ದಾಣದಲ್ಲಿ ಹಮಾಲಿಯಾಗಿದ್ದವರು. ಅವರು ಸೋಲಿಸಿದ್ದು ಪ್ರಬಲ ಒಕ್ಕಲಿಗ ಜಾತಿಗೆ ಸೇರಿದ್ದ ಶ್ರೀಮಂತ ಕಾಂಗ್ರೆಸ್ ಅಭ್ಯರ್ಥಿ ಶ್ರೀಮತಿ ಕೆ.ಟಿ. ದಾನಮ್ಮ ಮತ್ತು ಆ ಕ್ಷೇತ್ರದಲ್ಲಿ ಒಂದು ದೊಡ್ಡ ಕಾರ್ಮಿಕ ಪಡೆಯನ್ನೇ ಕಟ್ಟಿದ್ದ ಜನಪ್ರಿಯ ಕಮ್ಯೂನಿಸ್ಟ್ ನಾಯಕ ಅಪ್ಪಣ್ಣ ಹೆಗ್ಗಡೆಯವರನ್ನು. ಆಗ ಕ್ಷೇತ್ರಕ್ಕೆ ಸುಪ್ರಸಿದ್ಧ ಕಮ್ಯೂನಿಸ್ಟ್ ನಾಯಕರಾಗಿದ್ದ ನಂಬೂದ್ರಿಪಾದ್ ಮತ್ತು ಎ.ಕೆ. ಗೋಪಾಲನ್ ಕೂಡ ಬಂದು ಹೆಗ್ಗಡೆಯವರ ಪರ ಪ್ರಚಾರ ಮಾಡಿದ್ದರಂತೆ. ಕಮ್ಯೂನಿಸ್ಟ್ ಅಭ್ಯರ್ಥಿಯ ವಿಜಯ ಚುನಾವಣೆಗೆ ಮುನ್ನವೇ ತೀರ್ಮಾನವಾಗಿದ್ದ ವಿಷಯವೆಂಬಂತೆ ಅಲ್ಲಿ ಪರಿಸ್ಥಿತಿ ಕಾಣುತ್ತಿತ್ತು. ಆದರೆ ಲಿಂಗಪ್ಪ ತಮ್ಮ ಪಕ್ಷದ ನಾಯಕರ ಮತ್ತು ಬೆಂಬಲಿಗರ ನಿರೀಕ್ಷೆಯನ್ನೂ ಮೀರಿ ಗೆದ್ದರು. ಅವರ ಈ ವಿಜಯ ಗೋಪಾಲಗೌಡರು ಮಲೆನಾಡಿನಲ್ಲಿ, ಮುಖ್ಯವಾಗಿ ತೀರ್ಥಹಳ್ಳಿ ಕ್ಷೇತ್ರದಲ್ಲಿ ಕಟ್ಟಿದ್ದ ಸಮಾಜವಾದಿ ಮನಸ್ಸಿನ ಪ್ರತೀಕ ಹೇಗೋ, ಹಾಗೇ ಲಿಂಗಪ್ಪನವರು ಗೋಪಾಲಗೌಡರ ಬಗ್ಗೆ ಹೊಂದಿದ್ದ ತಾತ್ವಿಕ ಮತ್ತು ವೈಯುಕ್ತಿಕ ನಿಷ್ಠೆಯ ಪ್ರತೀಕವೂ ಆಗಿತ್ತು. ಹಾಗೆ ನೋಡಿದರೆ ಲಿಂಗಪ್ಪನವರ ಈ ಗೆಲುವಿಗೆ ನಿಜವಾದ ಕಾರಣ, ತೇಜಸ್ವಿ, ನಂಜುಂಡಸ್ವಾಮಿ, ಕಡಿದಾಳು ಶಾಮಣ್ಣ, ದಯಾನಂದ ಮತ್ತು ಸುಂದರೇಶ್‌ರನ್ನೊಳಗೊಂಡ ಗಡ್ಡಗಳ ಯುವಪಡೆಯ(ಸಮಾಜವಾದಿ ಯುವಜನಸಭಾ) ಪ್ರಚಾರ ವೈಖರಿಯೇ ಎಂದು ಅಂದು ಚುನಾವಣೆಯನ್ನು ಹತ್ತಿರದಿಂದ ಕಂಡವರು ಹೇಳುವ ಮಾತು. ಲೇಖಕ-ಚಿಂತಕ-ಹೋರಾಟಗಾರರನ್ನೊಳಗೊಂಡ ಈ ಗಡ್ಡದ ಯುವ ಪಡೆಯನ್ನು ನೋಡಿ ಜನ ರೋಮಾಂಚನಗೊಂಡಿದ್ದರಂತೆ. ಅದೇ ಸಮಾಜವಾದಿ ಚಳುವಳಿಯ ನಿಜವಾದ ಬೆಡಗು ಎಂದೂ ಹೇಳಬಹುದು. ಆ ಬೆಡಗಿನಲ್ಲಿಯೇ ಹುಟ್ಟಿ ಬೆಳೆದವರು ಲಿಂಗಪ್ಪನವರು.

ಈ ಲಿಂಗಪ್ಪ (ಮತ್ತು ಜೊತೆಯಾಗಿ ತಿಮ್ಮಪ್ಪ) ವಿಧಾನಸಭೆಯಲ್ಲಿ ಅಂದಿನ ಬಹು ಜನಪ್ರಿಯ ಮತ್ತು ಧೀಮಂತ ಮುಖ್ಯಮಂತ್ರಿ ದೇವರಾಜ ಅರಸರ ಆಡಳಿತದ ವಿರುದ್ಧ ಮಾಡುತ್ತಿದ್ದ ದಾಳಿ ಆಗ ದೊಡ್ಡ ಸುದ್ದಿ. ಇವರು, ರಾಜ್ಯಪಾಲರ ಭಾಷಣ ಇಂಗ್ಲಿಷ್‌ನಲ್ಲಿದೆಯೆಂದು ಅದರ ಪ್ರತಿಯನ್ನು ಹರಿದು ಹಾಕಿ ಕಾಲಿನಿಂದ ತುಳಿದ, ಬೇಕೇಂದೇ ತಮ್ಮ ಮಾತಿಗೆ ಅವಕಾಶ ನೀಡಲಿಲ್ಲವೆಂದು ತಮ್ಮ ಮುಂದಿನ ಧ್ವನಿವರ್ಧಕವನ್ನು ಕಿತ್ತು ಸಭಾಧ್ಯಕ್ಷರೆಡೆಗೆ ಎಸೆದ ಗೋಪಾಲಗೌಡರ ಸದನದೊಳಗಿನ

ಹೋರಾಟದ ವಾರಸುದಾರಿಕೆಯನ್ನು ಉಳಿಸಿಕೊಂಡು ಹೋಗುತ್ತಿದ್ದಾರೆಂಬುದು ಆಗಿನ ಜನಾಭಿಪ್ರಾಯವಾಗಿತ್ತು. ತಿಮ್ಮಪ್ಪನವರಲ್ಲಿ ಕಾಣದಿದ್ದ ಲಿಂಗಪ್ಪನವರ ಭಾಷಣಗಳ ವೈಶಿಷ್ಟ್ಯವೆಂದರೆ, ಅವರು ಗೋಪಾಲಗೌಡರಂತೆಯೇ-ಅಷ್ಟು ಆಳದಲ್ಲದಿದ್ದರೂ_ಓರ್ವ ಸಾಂಸ್ಕೃತಿಕ ಆಯಾಮದ ಭಾಷಣಕಾರರು. ಹಿರಿಯ ಕನ್ನಡ ಕವಿಗಳ ಮತ್ತು ಒಮ್ಮೊಮ್ಮೆ ತಾವೇ ರಚಿಸಿದ ಕವನಗಳ ಸಾಲುಗಳನ್ನು ಅಂದಿನ ಸಂದರ್ಭಕ್ಕೆ ತಕ್ಕಂತೆ ಆಯ್ದು ಪೋಣಿಸಿ ಮಾಡುತ್ತಿದ್ದ ಭಾಷಣಗಳು ಎಲ್ಲರ ಗಮನ ಸೆಳೆಯುತ್ತಿದ್ದುವಲ್ಲದೆ, ಸದನದ ಜಡ ಕಾರ್ಯಕಲಾಪಗಳಿಗೆ ಜೀವ ತುಂಬುತ್ತಿದ್ದವು. ಅವರು ತಮ್ಮ ಪಕ್ಷ ಸೊಂಡೂರಿನ ರಾಜಮನೆತನ ಅಕ್ರಮವಾಗಿ ವಶಪಡಿಸಿಕೊಂಡಿದ್ದ ಸಾವಿರಾರು ಎಕರೆ ಜಮೀನನ್ನು (ಆ ಮನೆತನದ ಅಂದಿನ ವಾರಸುದಾರ ಎಂ. ವೈ. ಘೋರ್ಪಡೆ ಆಗ ಸರ್ಕಾರದ ಸಚಿವರೂ ಹೌದು!) ಅದರಿಂದ ಬಿಡಿಸಿಕೊಂಡು ಗೇಣಿದಾರ ರೈತರಿಗೆ ಹಂಚಲು ಆಗ್ರಹಿಸಿ ನಡೆಸಿದ ಭೂ ಹೋರಾಟದ ಸಂದರ್ಭದಲ್ಲಿ ಲಿಂಗಪ್ಪನವರು ತಿಮ್ಮಪ್ಪನವರೊಂದಿಗೆ ಸದನದಲ್ಲಿ ನಡೆಸಿದ ಹೋರಾಟ ಮತ್ತು ಅದರ ಭಾಗವಾಗಿ ಮಾಡಿದ ಭಾಷಣಗಳು ಅವರ ಜನಪರ ಕಿಚ್ಚಿಗೆ ಮತ್ತು ವಾಗ್ವೈಖರಿಗೆ ಸಾಕ್ಷಿಯಂತೆ ಈಗಲೂ ವಿಧಾನಸಭಾ ಕಲಾಪಗಳ ದಾಖಲೆಗಳಲ್ಲಿ ಉಳಿದಿವೆ. ತಮ್ಮ ಪಕ್ಷದ ಪರವಾಗಿ ನಡೆಸಿದ್ದ ಅವರ ಈ ಹೋರಾಟ ಮುಂದೆ ದೇವರಾಜ ಅರಸರ ಸಹಕಾರ ಮತ್ತು ಸಹಾನುಭೂತಿಯಿಂದ ಯಶಸ್ವಿಯೂ ಆಯಿತೆಂಬುದನ್ನೂ ಇಲ್ಲಿ ದಾಖಲಿಸಬೇಕು.

ಲಿಂಗಪ್ಪನರ ಈ ಶಾಸಕ ಪ್ರತಿಭೆಗೆ ಒಂದು ಹಿನ್ನೆಲೆಯೂ ಇತ್ತು. ಗೋಪಾಲಗೌಡ-ಕಡಿದಾಳು ಮಂಜಪ್ಪನವರ ರಾಜಕಾರಣದ ಪ್ರಭಾವದಲ್ಲಿ ತೀರ್ಥಹಳ್ಳಿಯ ಶಾಲಾ ಬಾಲಕನಾಗಿ ಬೆಳೆದ ಲಿಂಗಪ್ಪ, ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿಗೆ ಸೇರುವ ಹೊತ್ತಿಗೆ ಸಾಹಿತ್ಯಪ್ರಿಯನಾಗಿ ತನ್ನ ಸಹಪಾಠಿಗಳಾಗಿದ್ದ ತೇಜಸ್ವಿ ಮತ್ತು ಶಾಮಣ್ಣ ಎಂಬ ಪ್ರಳಯಾಂತಕ ಜೋಡಿಯ ಸಹವಾಸದಲ್ಲಿ ಸಮಾಜವಾದಿ ಚಳುವಳಿಯ ಭಾಗವಾಗಿದ್ದ ಕನ್ನಡಪರ ಹೋರಾಟದಲ್ಲಿ ಸಕ್ರಿಯ ಆಸಕ್ತಿ ವಹಿಸಿ ಒಳ್ಳೆಯ ಭಾಷಣಕಾರನೂ ಆಗಿ ಪರಿವರ್ತಿತರಾಗಿದ್ದರು. ಆನಂತರ ಅವರು ಮುಂದಿನ ವಿದ್ಯಾಭ್ಯಾಸಕ್ಕೆಂದು ಮೈಸೂರಿಗೆ ಹೋಗಿ ಪೂರ್ಣ ಪ್ರಮಾಣದ ಕನ್ನಡ ಹೋರಾಟಗಾರರಾದರು. ಮತ್ತೆ ಅಲ್ಲಿ ಇದೇ ಪ್ರಳಯಾಂತಕ ಜೋಡಿ ಮತ್ತದರ ವಿಸ್ತರಣೆಯಂತಿದ್ದ ಅಲ್ಲಿನ ಸಮಾಜವಾದಿ ಯುವಜನಸಭಾದ ಗೆಳೆಯರೊಡಗೂಡಿ ತಮ್ಮ ವ್ಯಕ್ತಿತ್ವಕ್ಕೆ ಸಾಹಿತ್ಯ-ಸಂಸ್ಕೃತಿಗಳ ಆಯಾಮಗಳನ್ನೂ ಅಂತರ್ಗತಗೊಳಿಸಿಕೊಂಡರು. ಇದರ ಪರಿಣಾಮವಾಗಿ ಅವರ ಕನ್ನಡಪರ ಹೋರಾಟ ವಿಸ್ತೃತ ಸಮಾಜವಾದಿ ಆಯಾಮವನ್ನೂ ಪಡೆಯಿತೆಂದು ಕಾಣುತ್ತದೆ. ಸ್ವತಂತ್ರ ಗಣರಾಜ್ಯದಲ್ಲಿ ಮಹಾರಾಜರ ಅಂಬಾರಿ ಸವಾರಿ ಮತ್ತು ಮೆರವಣಿಗೆ ಅಸಭ್ಯ ಮತ್ತು ಸಂವಿಧಾನ ವಿರೋಧಿಯೆಂದು ಗೋಪಾಲಗೌಡರ ನೇತೃತ್ವದಲ್ಲಿ ನಡೆದ ಸಮಾಜವಾದಿ ಪ್ರತಿಭಟನೆಯಲ್ಲಿನ ಪ್ರಮುಖ ಸೇನಾನಿಗಳಲ್ಲೊಬ್ಬರು ಈ ಲಿಂಗಪ್ಪ. ನಂತರ ಅವರು ಗೋಪಾಲಗೌಡರ ಪಟ್ಟ ಶಿಷ್ಯರಾಗಿ, ಅವರ ನೆರವಿನಿಂದ ಬೆಂಗಳೂರಿನ ಕಾರ್ಪೋರೇಷನ್ ಪ್ರೌಢಶಾಲೆಯಲ್ಲಿ ಕನ್ನಡ ಮಾಸ್ತರರಾಗಿ ಕನ್ನಡ

ಹೋರಾಟವನ್ನು 'ಕನ್ನಡ ಸಮಾಜವಾದಿ ಯುವಜನಸಭಾ' ಎಂಬ ವೇದಿಕೆಯಡಿ ನಡೆಸಿ ಒಳ್ಳೆಯ ವಾಗ್ಮಿ ಮತ್ತು ಹೋರಾಟಗಾರರಾಗಿ ತಮ್ಮ ವ್ಯಕ್ತಿತ್ವವನ್ನು ಕಟ್ಟಿಕೊಂಡರು ಎಂದು ಕೇಳಿರುವೆ. ಗೋಪಾಲಗೌಡ, ಜಾರ್ಜ್ ಫರ್ನಾಂಡೀಸ್, ಜೆ.ಎಚ್. ಪಟೇಲ್ ಮುಂತಾದ ಸಮಾಜವಾದಿ ಅತಿಥಿಗಳಿಂದ ಉದ್ಘಾಟಿತವಾದ ಈ ವೇದಿಕೆ ಮುಂದೆ ಸಮಾಜವಾದಿ ಯುವಜನಸಭಾದಲ್ಲಿ ಲೀನಗೊಂಡು ನಡೆಸಿದ ಚಟುವಟಿಕೆಗಳು ಕರ್ನಾಟಕದ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಮಹತ್ವಪೂರ್ಣ ಅಧ್ಯಾಯಗಳನ್ನೇ ತೆರೆದವು. ಇದರ ಜೊತೆಯಲ್ಲೇ ಲಿಂಗಪ್ಪನವರು ಗೋಪಾಲ ಗೌಡರ ರಾಜಕೀಯ ಜೀವನ ಮಾತ್ರವಲ್ಲದೆ ಅವರ ವೈಯಕ್ತಿಕ ಜೀವನದ ಅವಿಭಾಜ್ಯ ಅಂಗವೇ ಆದರು. ಹಾಗಾಗಿ, ಗೋಪಾಲಗೌಡರ ತೀರ್ಥಹಳ್ಳಿ ಕ್ಷೇತ್ರಕ್ಕೆ ಅಂತಿಮವಾಗಿ ಲಿಂಗಪ್ಪನವರೇ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಆಯ್ಕೆಯಾದದ್ದು ಆಕಸ್ಮಿಕವೇ ಆದರೂ ನ್ಯಾಯಬದ್ಧವೇ ಆಗಿತ್ತು. ಗೋಪಾಲ ಗೌಡರ ಶಾಸಕರ ಭವನದ ನಿತ್ಯ ಅತಿಥಿಯಾಗಿ ಹಾಜರಾಗುತ್ತಿದ್ದ ಲಿಂಗಪ್ಪ ಅವರಿಂದ ಭವಿಷ್ಯದ ರಾಜಕೀಯ ಪಾಠಗಳನ್ನು ಕಲಿತಿದ್ದಲ್ಲದೆ, ಕಡಿದಾಳು ಮಂಜಪ್ಪನವರ ಮಧ್ಯಸ್ಥಿಕೆಯಲ್ಲಿ ಅವರ ಪ್ರತಿನಿಧಿಯಾಗಿ ಗೋಪಾಲಗೌಡರ ವಿವಾಹಕ್ಕೂ ಕಾರಣರಾದವರು! ಈ ವಿವಾಹ ಸಮಾರಂಭದ ಮುಖ್ಯ ಸಂಘಟಕರಲ್ಲಿ ಲಿಂಗಪ್ಪನವರೂ ಒಬ್ಬರು.

ಲಿಂಗಪ್ಪನವರು ವಿಧಾನ ಸಭೆಯಲ್ಲಿ ರೋಚಕ ಭಾಷಣಗಳನ್ನು ಮಾಡುತ್ತಿದ್ದಾಗ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದ ನಾನು, ಅ ಕಾಲೇಜಿನ ಆವರಣದಲ್ಲೇ ಸ್ಫೋಟಿಸುತ್ತಿದ್ದ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರ ನೇತೃತ್ವದ ಸಮಾಜವಾದಿ ಯುವಜನಸಭಾದ ರೋಚಕ ಕಾರ್ಯಕ್ರಮಗಳ ಸುದ್ದಿಗಳಿಂದ ನಿಧಾನವಾಗಿ ಸಮಾಜವಾದಿ ಚಿಂತನೆಯ ಕಡೆ ಆಕರ್ಷಿತನಾಗಿದ್ದೆ. ವಿಧಾನಸಭೆಯಲ್ಲಿ, ರಾಜ್ಯದ ಕ್ಷಾಮ ಪರಿಹಾರ ನಿಧಿಗಾಗಿ ಬೂಟ್ ಪಾಲೀಷ್ ಕಾರ್ಯಕ್ರಮ, ಕ್ಷಾಮ ಪರಿಹಾರ ಕಾರ್ಯಕ್ರಮಗಳು ಸರಿಯಾಗಿ ನಡೆಯುತ್ತಿಲ್ಲವೆಂದು ವಿಧಾನಸಭೆಯಲ್ಲಿ ರಕ್ಷಣಾ ಸಿಬ್ಬಂದಿಯನ್ನು ಯಾಮಾರಿಸಿ ಗ್ಯಾಲರಿಯಿಂದ ಕರಪತ್ರ ತೂರುವ ಮತ್ತು ಪ್ರಧಾನಿ ಇಂದಿರಾ ಗಾಂಧಿಯವರು ಬೆಂಗಳೂರಿಗೆ ಬಂದಾಗ ಅವರ ರಕ್ಷಣೆಯನ್ನು ಬೇಧಿಸಿ ಅವರಿಗೆ ಕಪ್ಪುಬಟ್ಟೆ ತೋರಿಸುವ ಕಾರ್ಯಕ್ರಮಗಳು ತಮ್ಮ ನಾಟಕೀಯತೆಯಿಂದಾಗಿ ಎಲ್ಲರಂತೆ ನನ್ನ ಗಮನವನ್ನೂ ಸೆಳೆದಿದ್ದವು. ನಂತರದ ಮೈಸೂರಿನಲ್ಲಿನ ಜಾತಿ ವಿನಾಶ ಸಮ್ಮೇಳನ, ಬೆಂಗಳೂರಿನಲ್ಲಿ ಜಿಎಸ್ಸೆಸ್, ಚಿದಾನಂದಮೂರ್ತಿ, ಲಂಕೇಶ್, ತೇಜಸ್ವಿ ಇತ್ಯಾದಿಯಾಗಿ ಭಾಗವಹಿಸಿದ್ದ ವೀರಶೈವ ಸಮ್ಮೇಳನದ ವಿರೋಧಿ ಪ್ರತಿಭಟನೆ, ಎಲ್ಲಕ್ಕಿಂತ ಮುಖ್ಯವಾಗಿ ನವ್ಯ ಸಾಹಿತ್ಯದ ಜಾತಿ ರಾಜಕಾರಣದ ವಿರುದ್ಧ ಮೈಸೂರಿನಲ್ಲಿ ಸಂಘಟಿಸಲ್ಪಟ್ಟ ಅಖಿಲ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟದ ಸಮ್ಮೇಳನ ಮತ್ತು ಇವೆಲ್ಲಕ್ಕೆ ಕಳಶವಿಟ್ಟಂತೆ ದಲಿತ ಮಂತ್ರಿ ಬಸವಲಿಂಗಪ್ಪನರ ಪರವಾಗಿ ನಡೆದ ಬೂಸಾ ಚಳುವಳಿಯಲ್ಲಿ ಸಮಾಜವಾದಿ ಯುವಜನ ಸಭಾದ ಪಾತ್ರ ಕಂಡ ನಾನು ಸಮಾಜವಾದಕ್ಕೆ ನನ್ನನ್ನು ತೆತ್ತುಕೊಂಡ ಕಾಲ ಅದು. ಆಗ ತಾನೇ ಪ್ರಕಟವಾಗಿ

ಕನ್ನಡ ಸಾರಸ್ವತ ಲೋಕದ ಗಮನ ಸೆಳೆದಿದ್ದ ಲೋಹಿಯಾರ 'ಇತಿಹಾಸ ಚಕ್ರ', 'ರಾಜಕೀಯದ ಮಧ್ಯೆ ಬಿಡುವು' ಪುಸ್ತಕಗಳನ್ನು ಓದತೊಡಗಿದ ಕಾಲವದು. ಆಗ ಮತ್ತೆ ಲಿಂಗಪ್ಪ ನನ್ನ ಮುಂದೆ ಪ್ರತ್ಯಕ್ಷರಾದರು. ಬೂಸಾ ಚಳುವಳಿಯಲ್ಲಿ ಬೆಂದು ದಲಿತರ ಪರ ಒಂದು ಉಜ್ವಲ ಕಿಡಿಯಾಗಿ ಹೊಮ್ಮಿದ್ದ ಸಿದ್ದಲಿಂಗಯ್ಯ ಆಗ ಹೊರತಂದಿದ್ದ ತಮ್ಮ ಮೊದಲ ಕವನ ಸಂಕಲನ 'ಹೊಲೆ ಮಾದಿಗರ ಹಾಡು'ವಿನ ಎರಡನೇ ಆವೃತ್ತಿಗೆ ಲಿಂಗಪ್ಪ ಪ್ರತಿಕ್ರಿಯೆಯಾಗಿ ಒಂದು ಪದ್ಯವನ್ನೇ ಬರೆದಿದ್ದರು. ಅದರಲ್ಲಿ ಅವರು ಕವಿಯನ್ನು 'ಏ ಸಿದ್ದಲಿಂಗು, ಕ್ರಾಂತಿ ಮಾಡಲು ಲೋಹಿಯಾ ಇರುವಾಗ ಅವರನ್ನು ಮರೆತು ನೀನೇಕೆ ಮಾರ್ಕ್ಸನ ಮೊರೆ ಹೊಕ್ಕಿರುವೆ?' ಎಂದು ಛೇಡಿಸಿದ್ದರು! ಸಮಾಜವಾದಿ ಯುವಜನಸಭಾದಲ್ಲಿ ಬೆಳೆದ ಸಿದ್ದಲಿಂಗಯ್ಯ ಆ ಹೊತ್ತಿಗೆ ಕಮ್ಯೂನಿಸ್ಟ್‌ರ ಪ್ರಭಾವಕ್ಕೆ ಸಿಕ್ಕಿದ್ದರು.

ನಂತರ ನನಗೆ ಲಿಂಗಪ್ಪ ಎದುರಾದದ್ದು, 1977ರಲ್ಲಿ ಎಂದು ಕಾಣುತ್ತದೆ. ಮುಖತಃ ಅಲ್ಲ. ಅವರ–ನನ್ನ ಮುಖತಃ ಭೇಟಿಯಾದದ್ದು ನಾನು ಕೆಲವು ವರ್ಷಗಳ ಹಿಂದೆ ಶಿವಮೊಗ್ಗಕ್ಕೆ ಬಂದು ನೆಲೆಸಿದ ಮೇಲೆ! ಅದಿರಲಿ, ನಾನು ಆಗ ದೆಹಲಿ ಆಕಾಶವಾಣಿಯಲ್ಲಿ ಕೆಲಸ ಮಾಡುತ್ತಿದ್ದೆ. ತುರ್ತು ಪರಿಸ್ಥಿತಿ ವಿರೋಧಿ ಆಂದೋಳನದಲ್ಲಿ ನನ್ನ ಮಿತಿಯಲ್ಲೇ ಹಲವು ನೆಲೆಗಳಲ್ಲಿ ಸಕ್ರಿಯನಾಗಿ ಪಾತ್ರ ವಹಿಸಿದ್ದೆ. ಆ ಹೊತ್ತಿಗೆ ಲೋಹಿಯಾ ಬಗ್ಗೆ ಒಂದಷ್ಟು ಲೇಖನಗಳನ್ನು ಪ್ರಕಟಿಸಿದ್ದೆ. ಮುಖ್ಯವಾಗಿ ಜೆಪಿಯವರ ಸೆರೆಮನೆ ದಿನಚರಿಯನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿ ಕರ್ನಾಟಕದ ಕೆಲವಾದರೂ ಸಮಾಜವಾದಿಗಳ ಗಮನ ಸೆಳೆದಿದ್ದೆ. ಅವರಲ್ಲಿ ಲಿಂಗಪ್ಪನವರೂ ಒಬ್ಬರೆಂದು ಕಾಣುತ್ತದೆ. ಶಾಸಕರಾಗಿ ಯಾವುದೋ ಅಧಿಕೃತ ಕೆಲಸದ ಮೇಲೆ ದೆಹಲಿಗೆ ಬಂದಿದ್ದ ಅವರು ಕರ್ನಾಟಕ ಭವನದಲ್ಲಿ ಭೇಟಿಯಾದ ನನ್ನ ದೆಹಲಿ ಮಿತ್ರರೊಬ್ಬರ ಮೂಲಕ ತಮ್ಮ ಶಾಸಕ ಲೆಟರ್ ಹೆಡ್‌ನಲ್ಲಿ ನನಗೊಂದು ಪ್ರೀತಿಪೂರ್ವಕ ಪತ್ರ ಬರೆದು ನನ್ನನ್ನು ಭೇಟಿಯಾಗುವ ಆಸಕ್ತಿ ತೋರಿದ್ದರು. ಆ ಪತ್ರ ನನ್ನನ್ನು ತಲುಪುವ ವೇಳೆಗೆ ಅವರು ದೆಹಲಿ ಬಿಟ್ಟಿದ್ದರೆಂದು ಕಾಣುತ್ತದೆ. ನಾನು ಅವರನ್ನು ಮುಖತಃ ಭೇಟಿಯಾಗಲಿಲ್ಲ. ಅನತಿ ಕಾಲದಲ್ಲೇ ಅವರು ಶಾಸಕ ಅವಧಿ ಮುಗಿಯಿತೆಂದು ಕಾಣುತ್ತದೆ. ಜೊತೆಗೇ ತುರ್ತು ಪರಿಸ್ಥಿತಿ ಮುಗಿದು ಜೆಪಿ ಮಾರ್ಗದರ್ಶನದಲ್ಲಿ ಎಲ್ಲ ವಿರೋಧ ಪಕ್ಷಗಳು ಸೇರಿ ರೂಪಿತವಾದ ಜನತಾ ಪಕ್ಷದಲ್ಲಿ ಲಿಂಗಪ್ಪನವರ ಸಮಾಜವಾದಿ ಪಕ್ಷವೂ ಲೀನವಾಗಿತ್ತು. ಲಿಂಗಪ್ಪ ಮತ್ತೆ ಶಾಸಕರಾಗಲಿಲ್ಲ. ದೆಹಲಿಗೂ ಬರಲಿಲ್ಲ. ನನ್ನ ಮತ್ತು ಅವರ ಮುಖತಃ ಭೇಟಿ ಸಾಧ್ಯವಾಗಲಿಲ್ಲ.

ನಂತರದ ದಿನಗಳ ಲಿಂಗಪ್ಪನವರ ರಾಜಕೀಯ ಜೀವನದ ಬಗ್ಗೆ ಅಲ್ಲಲ್ಲಿ ಕೇಳಿದ್ದೆ. ನಾನು ಕೇಳಿದಂತೆ ಸಮಾಜವಾದಿ ಪಕ್ಷವನ್ನು ಭಾರತೀಯ ಜನಸಂಘವಿರುವ ಜನತಾ ಪಕ್ಷದೊಳಕ್ಕೆ ಲೀನಗೊಳಿಸಲು ಕೊನೆಯ ಘಳಿಗೆಯವರೆಗೂ ಕಾಗೋಡು ತಿಮ್ಮಪ್ಪನವರು ಒಪ್ಪಿರಲಿಲ್ಲವಂತೆ. ಆಗ ಲಿಂಗಪ್ಪನವರ ನಿಲುವು ಏನಾಗಿತ್ತೋ ನನಗೆ ತಿಳಿಯದು. ಅದೇನೇ ಇರಲಿ, ಮುಂದೆ ಈ ಜನತಾ ಪಕ್ಷ ಹೋಳಾಗುತ್ತಾ, ಅವನತಿಗೊಳ್ಳುತ್ತಾ ಹೋದಂತೆ, ಲಿಂಗಪ್ಪನವರ ರಾಜಕೀಯ ಜೀವನವೂ

ಹೋಳಾಗುತ್ತಾ, ಮಸುಕುಗಾಗುತ್ತಾ ಹೋಯಿತೆಂದು ಕೇಳಿರುವೆ. ಅವರು ಮತ್ತೆ ಶಾಸಕರಾಗಲಿಲ್ಲ. ಸಮಾಜವಾದಿ ಪಕ್ಷ ಇಲ್ಲವಾದ ಮೇಲೆ ಮತ್ತು ಜನತಾ ಪಕ್ಷವೆಂಬುದೂ ಇಲ್ಲವಾದ ಮೇಲೆ ಅನೇಕ ಸಮಾಜವಾದಿಗಳಂತೆ ಲಿಂಗಪ್ಪನವರೂ ಇತರ ಪಕ್ಷಗಳ ಮನೆ ಜಗುಲಿಗಳ ಮೇಲೆ ಮಲಗಿ ವಿಶ್ರಮಿಸಿಕೊಂಡು ಮತ್ತಾವುದೋ ಪಕ್ಷ ಸೇರಿ ವಯಸ್ಕರ ಶಿಕ್ಷಣ ಸಮಿತಿಯ ಮುಖ್ಯಸ್ಥರೇನೋ ಆಗಿದ್ದರು ಎಂದು ಕೇಳಿದ ನೆನಪು. ಅದು ನಾನು ದೆಹಲಿ ಬಿಟ್ಟು ಕೆಲಸಕ್ಕಾಗಿ ಕರ್ನಾಟಕಕ್ಕೆ ಬಂದ ಕಾಲ. ಪರ್ಯಾಯ ಸಮಾಜವಾದಿ ಪಕ್ಷವನ್ನು ಕಟ್ಟಲು ಸಮತಾ ಸಮ್ಮೇಳನವನ್ನು ಸಂಘಟಿಸುವ, ಸಮಾಜವಾದಿ ಯುವಜನ ಸಭಾವನ್ನು ಪುನರುಜ್ಜೀವನಗೊಳಿಸುವ ಪ್ರಯತ್ನಗಳಲ್ಲಿ ತೊಡಗಿಕೊಂಡ ಮತ್ತು ಆನಂತರ ದಲಿತ ಮತ್ತು ರೈತ ಚಳುವಳಿಗಳೊಂದಿಗೆ ಗುರುತಿಸಿಕೊಂಡ ಕಾಲ.

ಲಿಂಗಪ್ಪ ಮತ್ತು ಇತರೆ 'ಆಧಿಕೃತ' ಸಮಾಜವಾದಿಗಳೆಂದರೆ ನಮಗೆ ಸಿಟ್ಟು ಬರುತ್ತಿದ್ದ ಕಾಲವದು. ಇತರ ಪಕ್ಷಗಳನ್ನು ಸೇರಿ ಅಧಿಕಾರ ಸ್ಥಾನಗಳನ್ನು ಪಡೆದಿದ್ದ ಅವರಲ್ಲಿ ಕೆಲವರ ವರ್ತನೆಯೂ ಆಗ ಹಾಗೇ ಇತ್ತು ಎನ್ನಿ. ಆದರೆ ಲಿಂಗಪ್ಪ ಎಂದೂ ಆಧಿಕಾರದ ಅಮಲಿನಲ್ಲಿ ಜನರೊಂದಿಗೆ, ಜನಪರ ಹೋರಾಟಗಾರರೊಂದಿಗೆ ದುರ್ವತಿಸಿದ ಸಂದರ್ಭವನ್ನು ನಾನು ಎಲ್ಲಿಯೂ ಕೇಳಿಲ್ಲ. ಇದಕ್ಕೆ ಮೊದಲ ಕಾರಣವೆಂದರೆ ದುರ್ವತನೆ ಮಾಡುವಂಥಹ ವ್ಯಕ್ತಿತ್ವ ಅವರದ್ದಲ್ಲವೆಂದು ಕಾಣುತ್ತದೆ. ಜೊತೆಗೆ ಅಮಲಿನ ಯಾವ ಅಧಿಕಾರವೂ ಅವರಿಗೆ ದೊರೆಯದ್ದೂ ಅದಕ್ಕೆ ಕಾರಣವಿರಬಹುದು. ಅಥವಾ ಲಿಂಗಪ್ಪನವರ ವ್ಯಕ್ತಿತ್ವಕ್ಕೆ ನ್ಯಾಯ ಒದಗಿಸಿ ಹೇಳುವುದಾದರೆ, ಅವರು ಅಂತಹ ಯಾವ ಅಮಲಿನ ಅಧಿಕಾರವನ್ನೂ ಹುಡುಕಿಕೊಂಡು ಹೋದುದದನ್ನು ನಾನು ಕೇಳಿಲ್ಲ. ಬದಲಿಗೆ ಅವರು ಆಯ್ದುಕೊಂಡದ್ದು ಬೇರೆ ಅಮಲನ್ನು. ಕರ್ನಾಟಕದ, ಮುಖ್ಯವಾಗಿ ಮಲೆನಾಡ ಮೂಲ ಸಮಾಜವಾದಿಗಳ ಒಂದು ದೊಡ್ಡ ದೌರ್ಬಲ್ಯವೇ ಆಗಿ ಹೋಗಿದೆ ಎಂದು ಹೇಳಲಾಗುವ;ಆದರೆ ಅನ್ಯರಾರಿಗೂ ತೊಂದರೆ ಕೊಡದ ಅಮಲನ್ನು...

ಈಗ ಅವರು ರಾಜಕಾರಣದೊಡನೆ ಈ ಎಲ್ಲ ಅಮಲುಗಳನ್ನೂ ತೊರೆದು ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ನಾನೂ ವಿಶ್ರಾಂತ ಜೀವನಕ್ಕಾಗಿ ಶಿವಮೊಗ್ಗಕ್ಕೆ ಬಂದ ಮೇಲೆ ಒಂದೆರಡು ಬಾರಿ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಅವರನ್ನು ಕಂಡಿದ್ದೇನೆ. ಅವರೀಗ ಹೆಚ್ಚು ಮಾತಾಡುವುದಿಲ್ಲ. ರಾಜಕಾರಣದ ಬಗೆಗಂತೂ ಬಿಲ್‌ಕುಲ್ ಇಲ್ಲ. ಇದಕ್ಕೆ ಸಮಾಜವಾದಿ ಚಳುವಳಿ ಇಲ್ಲವಾದ ನಂತರ ಅವರು ಅಸಹಾಯಕರಾಗಿ ಮಾಡಿಕೊಂಡ ಕೆಲವು ರಾಜಕೀಯ ರಾಜಿಗಳ ಬಗೆಗಿನ ಅಳುಕೇ ಕಾರಣವಿರಬಹುದೆಂದು ಅವರ ಆಪ್ತರಲ್ಲಿ ಕೆಲವರ ಅಭಿಪ್ರಾಯ. ತಮ್ಮ ಕುಟುಂಬ ಮತ್ತು ತಮ್ಮ ಅಡಿಕೆ ತೋಟ ಇವುಗಳೇ ಅವರ ಸದ್ಯದ ಕಾಳಜಿಗಳಿದ್ದಂತೆ ಕಾಣುತ್ತದೆ. ಅವರು ತಮ್ಮ ಪಾಡಿಗೆ ತಾವಿರಲು ನಿರ್ಧರಿಸಿದಂತಿದೆ. ಹೋರಾಟದ ಬದುಕು ಒಬ್ಬ ವ್ಯಕ್ತಿಯನ್ನು ಬದುಕಿನ ಕೊನೆಯ ದಿನಗಳ ಹೊತ್ತಿಗೆ ಹೀಗೆ–ತನ್ನೆಲ್ಲ ಅಳುಕುಗಳೊಂದಿಗೆ–ಮಾಗಿಸಬಲ್ಲುದಾದರೆ ಆ ಹೋರಾಟ ನಿಜವಾಗಿಯೂ

ಅರ್ಥಪೂರ್ಣವೆಂದೇ ನನ್ನ ಭಾವನೆ. ಆದರೆ ಅವರಲ್ಲಿ ನನ್ನ ಒಂದು ಕೋರಿಕೆಯೆಂದರೆ, ಅವರು ತಮ್ಮ ಬದುಕಿನ ಕಥೆಯನ್ನು ಬರೆಯಬೇಕೆಂಬುದು. ಹಮಾಲಿಯೊಬ್ಬನ ಮಗನಾಗಿ ಹುಟ್ಟಿ ಕರ್ನಾಟಕದ ಒಂದು ಮಹತ್ವಪೂರ್ಣ ಮತ್ತು ಬಹು ಆಯಾಮಗಳ ಚಳುವಳಿಯೊಂದರಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ತನ್ನ ಕಾಲದ ಅತ್ಯುತ್ತಮ ಮನಸ್ಸುಗಳೊಂದಿಗೆ ಒಡನಾಡಿ ರಾಜ್ಯದ ಜನತೆಯ ಅತ್ಯುನ್ನತ ಮಟ್ಟದ ಪ್ರತಿನಿಧಿಯಾಗಿ ಹೆಸರು ಮಾಡಿದ ಒಬ್ಬ ವ್ಯಕ್ತಿಯ ಕಥೆ ತನ್ನೆಲ್ಲ ಪ್ರಾಮಾಣಿಕತೆಯೊಂದಿಗೆ ಮೂಡುವುದಾದರೆ ರಾಜ್ಯದ ಜನತೆಗೆ ಅದೊಂದು ಅಮೂಲ್ಯ ಕೊಡುಗೆಯೇ ಆದೀತು. ಜೊತೆಗೆ, ಯಾವುದೇ ದಾಖಲೆಗಳನ್ನುಳಿಸದೆ ಅತ್ಯಂತ ಬೇಜವಾಬ್ದಾರಿತನದಿಂದ ನಡೆದು ತನ್ನ ಮಹತ್ವಕ್ಕೆ ಒಂದು ಮಟ್ಟದ ಕುಂದನ್ನೂ ಉಂಟುಮಾಡಿಕೊಂಡಿರುವ ಕರ್ನಾಟಕದ ಸಮಾಜವಾದಿ ಚಳುವಳಿ ಬಗ್ಗೆ ಮುಂದಿನ ತಲೆಮಾರುಗಳಿಗೆ ಒಂದಿಷ್ಟು ಅಧಿಕೃತ ಮಾಹಿತಿ/ದಾಖಲೆಗಳನ್ನಾದರೂ ದೊರಕಿಸಿಕೊಡುವ ಒಳ್ಳೆಯ ಕೆಲಸವನ್ನೂ ಮಾಡಿದಂತಾದೀತು. ಲಿಂಗಪ್ಪನವರು ಈ ದಿಕ್ಕಿನಲ್ಲಿ ಆದಷ್ಟು ಬೇಗ ಯೋಚಿಸುವಂತಾಗಲಿ.

(ತೀರ್ಥಹಳ್ಳಿ ಕ್ಷೇತ್ರದಲ್ಲಿ ಲಿಂಗಪ್ಪ ಸ್ಪರ್ಧಿಸಿದ್ದ ಚುನಾವಣೆ ಕುರಿತು ಮಾಹಿತಿ ನೀಡಿದವರು ಮಿತ್ರರಾದ ಕಡಿದಾಳು ಶಾಮಣ್ಣ ಮತ್ತು ದಿವಾಕರ ಹೆಗ್ಗಡೆಯವರು)

–ಡಿ.ಎಸ್. ನಾಗಭೂಷಣ

(ಕೃಪೆ: "ಕೌತುಕ" ಕೋಣಂದೂರು ಲಿಂಗಪ್ಪ ಅಭಿನಂದನಾ ಗ್ರಂಥ)

ಪ್ರೊ. ಎಲ್.ಡಿ.ಎನ್.: ಕೆಲವು ನೆನಪುಗಳು

ನಾನು 1959-60ರಲ್ಲಿ ಮೈಸೂರಿಗೆ ಬಂದಾಗ ಶ್ರೀ ಕೋಣಂದೂರು ಲಿಂಗಪ್ಪ, ಶ್ರೀ ಪೂರ್ಣಚಂದ್ರ ತೇಜಸ್ವಿ ಮತ್ತು ಕೆ. ಎಚ್ ಶ್ರೀನಿವಾಸ್ ಇವರುಗಳು ಕನ್ನಡಪರ ಧ್ವನಿ ಎತ್ತಲು ಒಂದು ಸಂಘಟನೆ ಬೇಕೆಂದು 'ಕನ್ನಡ ಸಮಾಜವಾದಿ ಯುವಜನ ಸಭಾ ಎಂಬ ಸಂಘಟನೆಯನ್ನು ಪ್ರಾರಂಭಿಸಿದರು. ಈ ಸಂಘಟನೆಯ ಮೂಲಕ ವಿಶ್ವವಿದ್ಯಾನಿಲಯದಲ್ಲಿ ಘಟಿಕೋತ್ಸವದ ಕಾರ್ಯಕ್ರಮವು ಕನ್ನಡದಲ್ಲೇ ನಡೆಯಬೇಕು, ಕುಲಪತಿಗಳಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಕನ್ನಡದಲ್ಲಿಯೇ ಮಾತಾಡಬೇಕು ಮುಂತಾದ ಕಾರ್ಯಕ್ರಮಗಳನ್ನು ನಡೆಸಿದರು. ಕೆಲವು ಕಾರ್ಯಕ್ರಮಗಳಾದ ಮೇಲೆ ನಮ್ಮ ಕನ್ನಡ ಪ್ರೀತಿ ಜಾಸ್ತಿಯಾಯಿತೆಂದು ಕೆ.ಎಚ್. ಶ್ರೀನಿವಾಸ್‌ರು ತಮ್ಮ ಇಂಗ್ಲಿಷ್ ಒಲವಿನಿಂದ ಈ ಸಂಘಟನೆಯಿಂದ ದೂರವಾದರು.

ಕೆಲವು ಕಾಲದ ನಂತರ ನಮ್ಮ ಕನ್ನಡ ಪರವಾದ ಕಾರ್ಯಕ್ರಮಗಳು ಸಮಾಜವಾದಿ ಪಕ್ಷದ ಕಾರ್ಯಕ್ರಮಗಳೊಡನೆ ಮಿಳಿತವಾಗತೊಡಗಿತು. ಆ ದಿನಗಳಲ್ಲಿ ಶಾಂತವೇರಿ ಗೋಪಾಲಗೌಡರು, ಕೋಣಂದೂರು ಲಿಂಗಪ್ಪ, ಶ್ರೀಕಂಠಶರ್ಮ, ಶಾಮಣ್ಣ ಇವರೆಲ್ಲಾ ದಸರಾ ಕಾರ್ಯಕ್ರಮಗಳ ಬಗ್ಗೆ, ಬೆಲೆ ಏರಿಕೆಯ ಬಗ್ಗೆ ಮತ್ತು ಸರ್ಕಾರದ ಜನ ವಿರೋಧಿ ನೀತಿಗಳ ಬಗ್ಗೆ ಆಗಾಗ್ಗೆ ಪ್ರತಿಭಟಿಸುತ್ತಿದ್ದರು. ಈ ಪ್ರತಿಭಟನೆಗಳಲ್ಲಿ ನಾವೂ ಭಾಗಿಗಳು. ಹಿರಿಯ ನಾಯಕರುಗಳನ್ನು ಪೋಲೀಸರು ಬಂಧಿಸಿದ ಮೇಲೆ ನಾವೆಲ್ಲ ವಾಪಸ್ ಆಗುತ್ತಿದ್ದೆವು.

ಈ ಕಾಲಘಟ್ಟದಲ್ಲಿ ಪಾರ್ಲಿಮೆಂಟಿನಲ್ಲಿ ಆಗುತ್ತಿದ್ದ ಗಂಭೀರ ಚರ್ಚೆಗಳಿಂದ ನಾವು ಆಕರ್ಷಿತರಾದೆವು. ಸೋಷಲಿಸ್ಟ್ ಪಕ್ಷದ ಮಧು ಲಿಮಯೆ, ಕರ್ಪೂರಿ ಠಾಕೂರ್, ಕಿಷನ್ ಪಟ್ನಾಯಕ್, ಸಿ.ಪಿ.ಎಂ ಪಕ್ಷದವರಾದ ಜ್ಯೋತಿರ್ಮಯಿ ಬಸು, ಸೋಮನಾಥ ಚಟರ್ಜಿ ಮುಂತಾದ ನಾಯಕರು ನಮ್ಮನ್ನು ತುಂಬಾ ಆಕರ್ಷಿಸಿದರು. ಒಂದು ರೀತಿ ನಾವು ಸಮಾಜವಾದಿ ಆಲೋಚನೆಗಳ ಕಡೆಗೆ ಸೆಳೆಯಲ್ಪಟ್ಟೆವು.

ಇದೇ ಸಂದರ್ಭದಲ್ಲಿ ಮೈಸೂರಿನ ಹಿರಿಯ ಲಾಯರ್ ಆಗಿದ್ದ ಟಿ.ಎನ್.ನಾಗರಾಜ್‌ರವರು ನಮ್ಮಂತಹ ಕೆಲವು ಯುವಕರನ್ನು ಸೇರಿಸಿಕೊಂಡು ಲೋಹಿಯಾರವರ ಬರಹಗಳ ಬಗ್ಗೆ ಸಣ್ಣ ಸಣ್ಣ ಅಧ್ಯಯನ ಶಿಬಿರಗಳನ್ನು ನಡೆಸತೊಡಗಿದರು. ಈ ಶಿಬಿರಗಳಲ್ಲಿ ಲೋಹಿಯಾರವರ ಭಾಷೆ, ಜಾತಿಪದ್ಧತಿ, ರಾಜಕೀಯದ ಮಧ್ಯೆ ಬಿಡುವು ಪುಸ್ತಕಗಳು ಮತ್ತು ಬಿಡಿ ಬಿಡಿ ಬರಹಗಳ ಬಗ್ಗೆ ಅಧ್ಯಯನ ಮತ್ತು ಚರ್ಚೆಗಳನ್ನು ನಡೆಸುತ್ತಿದ್ದರು.

ಈ ಶಿಬಿರ ಮತ್ತು ಚರ್ಚೆಗಳ ಫಲವಾಗಿ "ಸಮಾಜವಾದಿ ಯುವಜನ ಸಭಾ" ಎಂಬ ಸಂಘಟನೆಯನ್ನು ಪ್ರಾರ್ರಂಭಿಸುವ ವಿಚಾರವನ್ನು ಎಲ್ಲ ಯುವಕರ ಮುಂದಿಟ್ಟರು. ಇದರಿಂದ ನಾನು, ಕೆ. ರಾಮದಾಸ್, ರಾಮಚಂದ್ರದೇವ, ಸೂ. ರಮಾಕಾಂತ,

ದೇವನೂರು ಮಹಾದೇವ, ಬೆಸಗರಳ್ಳಿ ರಾಮಣ್ಣ, ಯು.ಆರ್.ಅನಂತಮೂರ್ತಿ, ಕೆ.ಜಿ.ಎಸ್.ಪ್ರಸನ್ನ, ಶಬ್ಬೀರ್ ಅಹಮದ್ ಮುಸ್ತಫಾ, ಎನ್.ಡಿ.ಸುಂದರೇಶ್, ಪೂರ್ಣಚಂದ್ರ ತೇಜಸ್ವಿ, ಪ. ಮಲ್ಲೇಶ್ ಎಲ್ಲಾ 'ಸಮಾಜವಾದಿ ಯುವಜನ ಸಭಾ'ದ ಸಕ್ರಿಯ ಸದಸ್ಯರಾದೆವು. ಇದೇ ಸಂದರ್ಭದಲ್ಲಿ ನಾವು ಮಹಾರಾಜ ಕಾಲೇಜಿನ ಕಾರ್ಯಕ್ರಮಗಳು, ಮಾನಸಗಂಗೋತ್ರಿಯ ಕಾರ್ಯಕ್ರಮಗಳು, ಆಗಾಗ್ಗೆ ರಾಜಕೀಯ ಪ್ರೇರಿತ ಮುಷ್ಕರಗಳಲ್ಲೆಲ್ಲ ಉತ್ಸಾಹದಿಂದ ಭಾಗವಹಿಸುತ್ತಿದ್ದೆವು.

ಆಗ ಟಿ.ಎನ್. ನಾಗರಾಜ್‌ರವರ ವಾಹನವನ್ನು ನಡೆಸುತ್ತಾ ಒಬ್ಬ ಸಣಕಲ ಗಡ್ಡಧಾರಿ ಬರತೊಡಗಿದರು. ಇವರ ವೇಷಭೂಷಣ, ಟೈ,ಸೂಟುಗಳನ್ನೆಲ್ಲಾ ನೋಡಿ ಯಾರೀ ವ್ಯಕ್ತಿ? ಎಲ್ಲಿಯೋ ದಾರಿ ತಪ್ಪಿ ಸಮಾಜವಾದಿಗಳ ಸಹವಾಸಕ್ಕೆ ಬಂದಂತಿದೆಯಲ್ಲಾ ಎಂದು ಯೋಚಿಸಲಾರಂಭಿಸಿದೆವು. ಇವರ ಕೈಯಲ್ಲಿನ ಸಿಗರೇಟು, ಬ್ರಿಟಿಷ್ ಉಚ್ಚಾರಣೆಯ ಇಂಗ್ಲಿಷನ್ನು ನೋಡಿ ನಮಗೆ ಅಚ್ಚರಿಯಾಗುತ್ತಿತ್ತು. ಆದರೆ ಟಿ.ಎನ್. ನಾಗರಾಜ್‌ರವರು ಈ ವ್ಯಕ್ತಿಯನ್ನು ತುಂಬಾ ಪ್ರೀತಿಯಿಂದ ಕಾಣುತ್ತಿದ್ದರು. ನಮಗೆಲ್ಲಾ ಇವರು ಎಂ.ಡಿ. ನಂಜುಂಡಸ್ವಾಮಿ ಎಂದೂ, ಮೈಸೂರಿನ ಹಿರಿಯ ನ್ಯಾಯವಾದಿ ಮಹಾಂತದೇವರು ಅವರ ಪುತ್ರನೆಂದೂ, ಈಗ ತಾನೆ ಜರ್ಮನಿಯಿಂದ ಹಿಂತಿರುಗಿದ್ದಾರೆಂದೂ, ಸಮಾಜವಾದಿ ಚಳವಳಿಯಲ್ಲಿ ತುಂಬಾ ಆಸಕ್ತಿ ಹೊಂದಿರುವರೆಂದೂ ನಮಗೆ ಪರಿಚಯಿಸಿದರು.

ಮುಂದೆ ನಮ್ಮ ಎಲ್ಲ ಕಾರ್ಯಕ್ರಮಗಳಲ್ಲಿ ಎಂ.ಡಿ. ನಂಜುಂಡಸ್ವಾಮಿಯವರು ನೆಚ್ಚಿನ ಎಂ.ಡಿ.ಎನ್ ಆದರು. ವೇಷ ಪೈಜಾಮ, ಜುಬ್ಬಾಕ್ಕೆ ಬದಲಾಯಿತು. ಸಿಗರೇಟು ಹಾಗೇ ಉಳಿಯಿತು. ಹೀಗಿರುವಾಗ ಗೆಳೆಯ ಪ. ಮಲ್ಲೇಶರು ಒಂದು ಪ್ರಿಂಟಿಂಗ್ ಪ್ರೆಸ್ಸನ್ನು ಪ್ರಾರಂಭಿಸಿದರು. ಹಣವೇ ಇಲ್ಲದ ಆ ಕಾಲದಲ್ಲಿ ಇವರು ನಮಗೆಲ್ಲಾ ಕಾಫಿ ತಿಂಡಿ ಕೊಡಿಸಿ ನಮ್ಮ ಹೋರಾಟಗಳಿಗೆ ಕರಪತ್ರಗಳನ್ನು ಪುಕ್ಕಟೆಯಾಗಿ ಮುದ್ರಿಸಿ ಕೊಡುತ್ತಿದ್ದರು ಮತ್ತು ನಮ್ಮ ಕಾರ್ಯಕ್ರಮಗಳ ಮುಂದಾಳತ್ವ ವಹಿಸುತ್ತಿದ್ದರು.

"ಕನ್ನಡ ಬಳಸಿ, ಇಂಗ್ಲಿಷ್ ಇಳಿಸಿ" ಎಂಬ ಬೃಹತ್ ಸಮ್ಮೇಳನವನ್ನು ಆಯೋಜಿಸಿ ಪ್ರಾಂತೀಯ ಭಾಷೆಗಳ ಬಗ್ಗೆ ಒಂದು ದೊಡ್ಡ ಆಂದೋಳನವನ್ನೇ 'ಸಮಾಜವಾದಿ ಯುವಜನ ಸಭಾ' ನಡೆಸಿತು. ಆಗೆಲ್ಲಾ ಮೈಸೂರಿನಲ್ಲಿ ನಾನು, ಪ. ಮಲ್ಲೇಶ್ , ಕೆ. ರಾಮದಾಸ್ ಎಲ್ಲ ಕಾರ್ಯಕ್ರಮಗಳನ್ನು ಯೋಜಿಸುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದೆವು. 1965 ರಲ್ಲಿ ಶಿವಮೊಗ್ಗದಲ್ಲಿ ಸಮಾಜವಾದಿ ಯುವಜನ ಸಭಾದ ಬೃಹತ್ ರಾಜ್ಯ ಸಮ್ಮೇಳನವನ್ನು ನಡೆಸಿದಾಗ ಅದನ್ನು ಉದ್ಘಾಟಿಸಿದವರು ಪೂರ್ಣಚಂದ್ರ ತೇಜಸ್ವಿ. ಆ ಸಮ್ಮೇಳನಕ್ಕೆ ಸಮಯಕ್ಕೆ ಸರಿಯಾಗಿ ಬರದ ಕೆಲವು ಹಿರಿಯ ಸಮಾಜವಾದಿ ಧುರೀಣರ ವಿರುದ್ಧ ನಾವು ಘೋಷಣೆಗಳನ್ನು ಕೂಗಿ ಧಿಕ್ಕಾರ ಸೂಚಿಸಿದೆವು. ಅಂದಿನಿಂದಲೇ ಹಿರಿಯ ಸಮಾಜವಾದಿಗಳು ಮತ್ತು ಕಿರಿಯ ಸಮಾಜವಾದಿಗಳು ಎಂಬ ಎರಡು ಗುಂಪುಗಳಾದವು. ಹಿರಿಯರ ನೇತೃತ್ವವನ್ನು ಜೆ.ಎಚ್. ಪಟೇಲರೂ, ಕಿರಿಯರ ನೇತೃತ್ವವನ್ನು ಎಂ.ಡಿ.ಎನ್‌ರೂ ವಹಿಸಿದ್ದರು. ನಾವೆಲ್ಲ ಎಂ.ಡಿ.ಎನ್. ಪರ ನಿಂತೆವು.

ಹೀಗೆ ಎಂ.ಡಿ.ಎನ್.ರ ಪ್ರವೇಶ ವಿವಾದಾತ್ಮಕವಾಗಿಯೇ ಪ್ರಾರಂಭವಾಯಿತು.

ಇಲ್ಲಿಂದಾಚೆಗೆ ಹಿರಿಯರಿಗೂ ಕಿರಿಯರಿಗೂ ಒಂದು ರೀತಿಯ ಮುಖ ಮುನಿಸು ಉಂಟಾಯಿತು. ಹಿರಿಯರ ಹೇಳಿಕೆಗಳನ್ನು ತಾತ್ವಿಕವಾಗಿ ಕಿರಿಯರು ವಿರೋಧಿಸುವುದೂ, ಈ ವಿರೋಧಕ್ಕೆ ಹಿರಿಯರು ಸಿಟ್ಟಾಗುವುದು ಮತ್ತು ಇವರಿಂದ ಶಾಂತವೇರಿ ಗೋಪಾಲಗೌಡರ ಕಿವಿ ಕಚ್ಚುವುದೂ ನಡೆಯುತ್ತಿತ್ತು. ಆದರೂ ಗೋಪಾಲಗೌಡರು ಕಿರಿಯರ ಅಗಮನ ಸಮಾಜವಾದಿ ಆಂದೋಲನಕ್ಕೆ "ಒಂದು ಹೊಸ ಗಾಳಿಯಂತೆ" ಎಂದು ನಮ್ಮನ್ನು ಬೆಂಬಲಿಸುತ್ತಿದ್ದರು. ಇದನ್ನು ಹಿರಿಯರು ಸಹಿಸುತ್ತಿರಲಿಲ್ಲ. ಗೌಡರ ಕಿವಿ ಕಚ್ಚಲು ಸಮಯಕ್ಕಾಗಿ ಕಾಯುತ್ತಲೇ ಇರುತ್ತಿದ್ದರು. ಮೈಸೂರಿನಲ್ಲಿ ಸಮಾಜವಾದಿ ಆಶಯದಂತೆ "ಜಾತಿ ವಿನಾಶ ಸಮ್ಮೇಳನ" ಎಂಬ ದೊಡ್ಡಕಾರ್ಯಕ್ರಮವನ್ನುನಡೆಸಿದಾಗ ಅದನ್ನುಕುವೆಂಪು ಉದ್ಘಾಟಿಸಿದರು. ಕೇಂದ್ರದಿಂದ ಕಿಷನ್ ಪಟ್ನಾಯಕ್‌ರು ಭಾಗವಹಿಸಿದ್ದರು. ಆಗ ಕಿರಿಯ ಗೆಳೆಯರಾದ ಕಾಳೇಗೌಡ ನಾಗವಾರ, ಶಿವರಾಮು ಕಾಡನಕುಪ್ಪೆ, ಶ್ರೀಕೃಷ್ಣ ಆಲನಹಳ್ಳಿ ಚಟುವಟಿಕೆಯಿಂದ ಓಡಾಡಿ ಬೆಂಬಲಿಸಿದರು ಮತ್ತು ಗಾಂಧಿ ವಿಚಾರ ಪರಿಷತ್‌ನ ಅನಂತರಂಗಾಚಾರ್ ಸಹ ನಮ್ಮೊಡನೆ ಸಹಕರಿಸಿದರು. ಇಲ್ಲಿ ರಾಜ್ಯದ ಹಿರಿಯ ಸಮಾಜವಾದಿಗಳಿಗೆ ಅವಕಾಶವೇ ಇರಲಿಲ್ಲ. ಇದಕ್ಕೆಲ್ಲಾ ಎಂ.ಡಿ.ಎನ್‌ರೇ ಕಾರಣವೆಂದು, ಅವರ ಮೇಲೆ ಸಿದ್ಧವಾಗತೊಡಗಿದ ಛಾರ್ಜ್‌ಶೀಟ್ ಉದ್ದವಾಗುತ್ತಲೇ ಹೋಯಿತು. ಈ ಸಮ್ಮೇಳನ ನಡೆದ ಒಂದೆರಡು ವರ್ಷಗಳಲ್ಲಿ 'ಕರ್ನಾಟಕದ ಬರಹಗಾರರ ಮತ್ತು ಕಲಾವಿದರ ಒಕ್ಕೂಟ' ಎನ್ನುವ ಸಾಂಸ್ಕೃತಿಕ ಕ್ರಾಂತಿಯನ್ನು ಘೋಷಿಸಿದೆವು. ಇದು ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದಲ್ಲಿ ಅಲ್ಲೋಲ ಕಲ್ಲೋಲವನ್ನು ಉಂಟುಮಾಡಿತು. ಹೀಗೆಯೇ ಕೋವೂರ್‌ರಿಂದ ಪ್ರಭಾವಿತರಾಗಿ ವಿಚಾರವಾದಿ ಒಕ್ಕೂಟವನ್ನು ಪ್ರಾರಂಭಿಸಿದೆವು. ಈ ಎಲ್ಲ ಕಾರ್ಯಕ್ರಮಗಳಲ್ಲಿ ಮೈಸೂರಿನ ಗೆಳೆಯರೇ ಮಂಚೂಣಿಯಲ್ಲಿದ್ದರೂ ಈ ಬಗ್ಗೆ ತಾತ್ವಿಕ ಬುನಾದಿ, ಪತ್ರಿಕಾಗೋಷ್ಠಿ, ಕರಪತ್ರ ಬರಹ, ಗೋಡೆ ಮೇಲಿನ ಬರಹ ಇವುಗಳೆಲ್ಲದರ ರೂವಾರಿ ಎಂ.ಡಿ.ಎನ್.ರೇ ಆಗಿರುತ್ತಿದ್ದರು. ಅಕ್ಷರಗಳನ್ನು ಕಲಾತ್ಮಕವಾಗಿ ಬರೆಯುತ್ತಾರೆಂದು ಗೋಡೆ ಬರಹ, ಭಿತ್ತಿಪತ್ರಗಳ ಮೇಲಿನ ಬರಹ ಇವುಗಳೆಲ್ಲದರ ಜವಾಬ್ದಾರಿಯನ್ನು ದೇವನೂರು ಮಹಾದೇವರಿಗೆ ವಹಿಸಲಾಗಿತ್ತು. 'ಸಮಾಜವಾದಿ ಯುವಜನ ಸಭಾ'ದ ಎಲ್ಲ ರೂಪಾಂತರಗಳ ಹೋರಾಟಕ್ಕೂ ನಾನೇ ಖಜಾಂಚಿ ಆಗಿರುತ್ತಿದ್ದೆ. ಕಾರ್ಯಕರ್ತರ ಕಾಫಿ, ತಿಂಡಿ, ಮುದ್ರಣ ಸಾಮಗ್ರಿಗಳ ಖರ್ಚುಗಳೆಲ್ಲವನ್ನು ಗೆಳೆಯ ಪ. ಮಲ್ಲೇಶರು ಭರಿಸುತ್ತಿದ್ದರು.

ಈ ರೀತಿ ನಡೆಯುತ್ತಿದ್ದ ನಮ್ಮ ಹೋರಾಟದ ರೂಪವನ್ನು ಬದಲಾಯಿಸಿ ಜೆ.ಪಿ. ಚಳವಳಿಯನ್ನು ಹೊಕ್ಕೆವು. ಎಂ.ಡಿ.ಎನ್, ತೇಜಸ್ವಿ, ಲಂಕೇಶ್, ಚಂಪಾ, ಸಿದ್ಧಲಿಂಗ ಪಟ್ಟಣಶೆಟ್ಟಿ ಇನ್ನೂ ಮುಂತಾದ ಗೆಳೆಯರು ಸೇರಿ 'ನವ ನಿರ್ಮಾಣ ಕ್ರಾಂತಿ' ಎನ್ನುವ ಹೋರಾಟವನ್ನು ಇಡೀ ಕರ್ನಾಟಕದಲ್ಲಿ ರೂಪಿಸಿದರು. ಆಗ ರಾಜಶೇಖರ ಕೋಟಿಯವರು ಧಾರವಾಡದಿಂದ ಬಂದು ನಮನ್ನು ಸೇರಿಕೊಂಡರು.ಈ ಸಂದರ್ಭದಲ್ಲಿ ಯುವಜನ ಸಭಾದ ಹೋರಾಟಗಳು ಎಂ.ಡಿ.ಎನ್.ರವರ ನೇತೃತ್ವದಲ್ಲಿ ಅನೇಕ ಜನಪ್ರಿಯ ಮತ್ತು ರೋಚಕ ರೂಪಗಳನ್ನು ಪಡೆಯಿತು. ಕೆಲವು ಮುಖ್ಯವಾದವು ಎಂದರೆ ಬೆಂಗಳೂರು

ಅಶೋಕ ಹೋಟೆಲ್‌ನಲ್ಲಿ ಯುವಜನ ಸಭಾ ಸದಸ್ಯರೆಲ್ಲಾ 'ಮಸಾಲದೋಸೆ'ಯನ್ನು ತಿಂದು, ಎಲ್ಲ ಕಡೆ ಕೊಡುವಂತೆ 75 ಪೈಸೆ ಮಾತ್ರ ಕೊಡುತ್ತೇವೆಂದು ಧಿಕ್ಕಾರ ಕೂಗಿದ್ದು-ಪ್ರಧಾನಿ ಇಂದಿರಾಗಾಂಧಿ ಬೆಂಗಳೂರಿಗೆ ಬಂದಾಗ ಯುವಜನ ಸಭಾ ಸದಸ್ಯರು ಇಂಟೆಲಿಜೆನ್ಸ್ ಆಫೀಸರ್‌ಗಳಂತೆ ಒಳಹೊಕ್ಕು ಇಂದಿರಾ ಗಾಂಧಿಯವರು ವಿಮಾನದಿಂದ ಇಳಿಯುತ್ತಿದ್ದಂತೆ ಧಿಕ್ಕಾರ ಕೂಗುತ್ತ ಅವರ ಕಡೆ ಕರಪತ್ರಗಳನ್ನು ತೂರಿದ್ದು-ಹೈಕೋರ್ಟ್ ನ್ಯಾಯಾಧೀಶರುಗಳು ಕೆಲವು ತೀರ್ಮಾನಗಳನ್ನು ನಿಷ್ಪಕ್ಷಪಾತವಾಗಿ ಕೊಡುತ್ತಿಲ್ಲವೆಂದು ಸಿಟ್ಟಿನಿಂದ ಸಮಾಜವಾದಿ ಯುವಜನ ಸಭಾ ಸದಸ್ಯರು ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲೂ ಸಹ ಕರಪತ್ರಗಳನ್ನು ತೂರಿದ್ದು. ಈ ಕೊನೆಯ ಘಟನೆ ಇಡೀ ಕರ್ನಾಟಕದ ನ್ಯಾಯವಾದಿಗಳ ವೃಂದಕ್ಕೆ ಸಿಡಿಲಿನಂತೆ ಎರಗಿತು. ಆಗ ಎಂಡಿಎನ್‌ರನ್ನು ನೋಡಿದ ಕೆಲವು ಲಾಯರ್‌ಗಳು ವೀರಾವೇಶದಿಂದ ಎಂ.ಡಿ.ಎನ್.ರ ಕಡೆಗೆ ನುಗ್ಗಿ ಬಂದು ಜೋರು ಧ್ವನಿಯಲ್ಲಿ The sanctity of the court is spoiled today. You are responsible. ಎಂದು ಕೂಗಿದರು. ಎಂ.ಡಿ.ಎನ್.ರು ತಮ್ಮ ಗಡ್ಡ ಕೆರೆಯುತ್ತ Yeah, yeah, cleansing has just begun ಎಂದು ಹೇಳುತ್ತಾ ನಿಧಾನವಾಗಿ ಹೊರನಡೆದರು.

ಕೆಲವು ವೇಳೆ ಬೇರೆಯವರ ನಡವಳಿಕೆಯಿಂದ ಸ್ವತಃ ಎಂ.ಡಿ.ಎನ್.ರವರಿಗೆ ನೋವಾಗುತ್ತಿತ್ತು. ಇಂಥ ಅನೇಕ ಘಟನೆಗಳಿವೆ. ಇವುಗಳಲ್ಲಿ ಒಂದು ಘಟನೆಯನ್ನು ಮಾತ್ರ ಹೇಳಲಿಚ್ಛಿಸುತ್ತೇನೆ. ಒಂದು ಶಿವರಾತ್ರಿಯ ದಿನ ಬೆಳಗ್ಗೆ ಯಾವುದೋ ಕಾರ್ಯಕ್ರಮವನ್ನು ಚರ್ಚಿಸಲು ಗೆಳೆಯ ರಾಮದಾಸ್ ಎಂ.ಡಿ.ಎನ್.ರ ಮನೆಗೆ ಹೋದರು. ರಾಮದಾಸ್‌ರವರನ್ನು ನೋಡಿ ಎಂ.ಡಿ.ಎನ್.ರು ಎದ್ದು ಒಳಗೆ ಹೋದರು. ಸ್ವಲ್ಪ ಹೊತ್ತಿನ ನಂತರ ಸರಸರನೆ ತಮ್ಮ ದಿರಿಸನ್ನು ಧರಿಸಿ ಗೆಳೆಯ ರಾಮದಾಸ್‌ರೊಡನೆ ಹೊರಹೊರಟರು. ಪ್ರತಿದಿನದ ರೂಢಿಯಂತೆ ಸರಸ್ವತಿಪುರಂನ 14ನೇ ಮೆಯಿನ್‌ನಲ್ಲಿದ್ದ ರಾಮದಾಸ್ ಮನೆಕಡೆ ಬರುತ್ತಿದ್ದರು. ನೋಡಲು ತುಂಬಾ ಸಿಟ್ಟು ಮತ್ತು ದುಗುಡದಿಂದಿರುವಂತೆ ಕಾಣುತ್ತಿದ್ದರು. ಎಂ.ಡಿ.ಎನ್. ಮತ್ತು ರಾಮದಾಸ್‌ರ ಮನೆಗಳ ನಡುವೆ ನನ್ನ ಮನೆ ಇತ್ತು. ಇಬ್ಬರೂ ನೇರ ನಮ್ಮ ಮನೆಗೆ ಬಂದು 'ಏನು ಮಾಡುತ್ತಿದ್ದೀರಿ ಪದ್ಮಾ?' ಎಂದು ಕೂಗಿದರು. ಇವರ ಧ್ವನಿ ಕೇಳಿಸಿಕೊಂಡು ನಾನು, ಪದ್ಮಾ ಹೊರಬಂದು ಮಾತನಾಡಿಸಿ, ಕೂರಲು ಹೇಳಿ ಇಬ್ಬರಿಗೂ ಕಾಫಿ ಕೊಟ್ಟೆವು. ಏನು ತಿಂಡಿ ಮಾಡುತ್ತಿರುವಿರಿ ಎನ್ನುತ್ತಾ, ಪದ್ಮಾ ರುಚಿಕರವಾಗಿ ಮಾಡುತ್ತಿದ್ದ ಅವರೆಕಾಳಿನ ರೊಟ್ಟಿಯನ್ನು ಅವರೇ ಕೇಳಿ ಪಡೆದು ಸವಿದರು. ಗೆಳೆಯರಿಬ್ಬರೂ ಚಾರ್‌ಮಿನಾರ್ ಸಿಗರೇಟನ್ನು ಹತ್ತಿಸಿ 14ನೇ ಮೆಯಿನ್ ಕಡೆ ಹೊರಟರು.

ಅವತ್ತೆಲ್ಲಾ ಎಂ.ಡಿ.ಎನ್. ತುಂಬಾ ಸಪ್ಪಗೇ ಇದ್ದರು. ಆ ಸಂಜೆ ನಮ್ಮ ಮಾಮೂಲಿನಂತೆ ಗಂಗೋತ್ರಿಯ ಕ್ಯಾಂಟೀನ್‌ನಲ್ಲಿ ಅವರನ್ನು ಭೇಟಿಯಾಗಲು ಹೋದೆ. ನಾನು ಅಲ್ಲಿಗೆ ಹೋದಾಗ ಅವರು ಏಕಾಂಗಿಯಾಗಿ ಕುಳಿತಿದ್ದರು. ಮಾಮೂಲಿ ಟೀ ಹೇಳಿದ ಮೇಲೆ ಮೆಲ್ಲಗೆ ಅವರ ಮೌನಕ್ಕೆ ಕಾರಣವೇನೆಂದು ಪ್ರಶ್ನಿಸಿದೆ. ಕೆಲವು ನಿಮಿಷಗಳು ಸುಮ್ಮನಿದ್ದು ನಿಧಾನವಾಗಿ ಹೇಳಿದರು. ಅಂದು

ಬೆಳಗ್ಗೆ ಅವರ ಮನೆಗೆ ರಾಮದಾಸ್ ಹೋದಾಗ ಎಂ.ಡಿ.ಎನ್.ರು ಒಳಗೆ ಹೋಗಿ ಕೆಲಸದಾಕೆಗೆ ರಾಮದಾಸ್‌ರವರಿಗೆ ಕಾಫಿ ಕೊಡಲು ಹೇಳಿದ್ದಾರೆ. ಆಗ ಆ ಮನೆಯ ಹಿರಿಯರೊಬ್ಬರು 'ಇಂದು ಶಿವರಾತ್ರಿ, ಅವನು ಕುಡಿದ ಲೋಟವನ್ನು ತೊಳೆಯಲು ಸಾಧ್ಯವಿಲ್ಲ'ವೆಂದು ಹೇಳಿದರಂತೆ. ಇದರಿಂದ ಆಘಾತಗೊಂಡ ಎಂ.ಡಿ.ಎನ್.ರವರು ಬೆಳಗ್ಗೆ ಮನೆ ಬಿಟ್ಟವರು ಮನೆಯ ಕಡೆ ಹೋಗಿರಲೇ ಇಲ್ಲ. ಆ ಸಂಜೆ ಅಲ್ಲಿಗೆ ಬಂದ ಪೋಲಂಕಿ, ನಾನು ಮತ್ತು ಎಂ.ಡಿ.ಎನ್. ಮೆಟ್ರೋಪೋಲ್ ಹೋಟೆಲ್‌ಗೆ ಹೋದೆವು. ಅಲ್ಲಿ ಸಾಹಿತ್ಯ, ರಾಜಕೀಯ ಇತ್ಯಾದಿ ವಿಷಯಗಳ ದೀರ್ಘ ಚರ್ಚೆಯ ನಂತರ ಮಧ್ಯರಾತ್ರಿ ಹೊತ್ತಿಗೆ ಎಂ.ಡಿ.ಎನ್.ರನ್ನು ಅವರ ಮನೆ ತಲುಪಿಸಿ ನಾನು ನನ್ನ ಮನೆಗೆ ಬಂದೆ. ಈ ಘಟನೆಯಿಂದ ಸಮಾಜವಾದದ ಆಚರಣೆ ಎಷ್ಟು ಕಷ್ಟ ಎಂಬುದು ಎಂ.ಡಿ.ಎನ್.ರಿಗೆ ಹೊಳೆದಿರಬೇಕು.

ಎಂ.ಡಿ.ಎನ್.ರವರು ಬೆಂಗಳೂರಿನ ಬಿ.ಎಂ.ಎಸ್. ಕಾಲೇಜಿನಲ್ಲಿ ಕೆಲಸಕ್ಕೆ ಸೇರಿದ ಮೇಲೆ ತಮ್ಮ ಕಾರ್ಯಕ್ಷೇತ್ರವನ್ನು ಬೆಂಗಳೂರಿಗೆ ವಿಸ್ತರಿಸಿಕೊಂಡರು. ಗಣೇಶ ಲಾಡ್ಜ್‌ನಲ್ಲಿ ವಾಸ, ರಾಮಕೃಷ್ಣ ಲಾಡ್ಜ್‌ನಲ್ಲಿ ಬೆಳಗಿನಿಂದ ಸಂಜೆವರೆಗೆ ಕಾಫಿ, ಟೀ, ತಿಂಡಿ, ಹರಟೆ, ವಿಚಾರ ಗೋಷ್ಠಿ, ಕರಪತ್ರ ತಯಾರಿ ಇತ್ಯಾದಿ ಕಾರ್ಯಗಳಲ್ಲೇ ಮಗ್ನರಾಗಿರುತ್ತಿದ್ದರು. ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳ ಗೆಳೆಯರೆಲ್ಲರೂ ಅವರನ್ನ ಭೇಟಿ ಮಾಡಲು ಅಲ್ಲಿಗೇ ಬರುತ್ತಿದ್ದರು. ಇಂಥ ಸಮಯದಲ್ಲೇ ರವಿವರ್ಮಕುಮಾರ್ ಹಾಗೂ ಎಸ್.ಆರ್.ನಾಯಕ್, ಕಲಾವಿದ ಕೆ.ಟಿ.ಶಿವಪ್ರಸಾದ್ ಇವರ ಸಂಪರ್ಕಕ್ಕೆ ಬಂದರು. ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಒಂದು ವರ್ಷ ತುಂಬಾ ಬರಗಾಲ. ಆ ಕಡೆಯ ಜನರಿಗಾಗಿ 'ಸಮಾಜವಾದಿ ಯುವಜನ ಸಭಾ' ಒಂದು ಪರಿಹಾರ ಕಾರ್ಯಕ್ರಮವನ್ನು ಹಾಕಿಕೊಂಡು, ಹಣ ಇತ್ಯಾದಿಗಳನ್ನು ಸಂಗ್ರಹಿಸಿ ಆಯಾ ಜಿಲ್ಲೆಗಳಲ್ಲಿ ಡೆಪ್ಯುಟಿ ಕಮೀಷನರ್ ಮತ್ತು ಕೆಲವು ಸಂಘ ಸಂಸ್ಥೆಗಳೊಡನೆ ಕೈ ಜೋಡಿಸಿ ಪರಿಹಾರವನ್ನು ಹಂಚುತ್ತಿದ್ದೆವು. ಇಂಥ ಒಂದು ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ದೊಡ್ಡ ಪ್ರಮಾಣದಲ್ಲಿ ಏರ್ಪಡಿಸಿದ್ದೆವು. ರಾಜ್ಯದ ಎಲ್ಲ ಗೆಳೆಯರು ಇದರಲ್ಲಿ ಭಾಗವಹಿಸಿದ್ದರು. ಈ ವಿಷಯವಾಗಿ ಒಂದು ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ, ಬೆಂಗಳೂರಿನ ಕೆಲವು ಕಡೆ ಹಣ ಸಂಗ್ರಹಿಸುವುದಾಗಿಯೂ, ಯುವಜನ ಸಭಾದ ಗೆಳೆಯರಲ್ಲದೆ ಆಸಕ್ತರೆಲ್ಲರೂ ಭಾಗವಹಿಸಬೇಕೆಂದು ಪ್ರಾರ್ಥಿಸಿದ್ದೆವು.

ಮರುದಿನ ಬೆಂಗಳೂರಿನ ಕೆಲವು ಕಡೆ ನಮ್ಮ ಕಾರ್ಯಕ್ರಮ ಸರಿಯಾಗಿ ಚಾಲೂ ಆಯಿತು. ನಾವೆಲ್ಲ ಕೆಂಪೇಗೌಡ ರಸ್ತೆಯ ಅಲಂಕಾರ್ ಟಾಕೀಸಿನ ಎದುರು ಹಣ ಸಂಗ್ರಹಿಸುತ್ತಿದ್ದೆವು. ಜನ ಜಾಸ್ತಿಯಾಗಿದ್ದರಿಂದ 'ಏನಿದು?' ಎಂದು ಕುತೂಹಲದಿಂದ ನೋಡುವವರ ಸಂಖ್ಯೆ ಜಾಸ್ತಿಯಾಗಿ ಸಂಚಾರಕ್ಕೆ ಸ್ವಲ್ಪ ತೊಂದರೆಯಾಗುತ್ತಿತ್ತು. ಅಲ್ಲಿದ್ದ ಏಳೆಂಟು ಜನ ಪೋಲೀಸರು ಸಂಚಾರವನ್ನು ನಿಯಂತ್ರಿಸಲು ಹೆಣಗುತ್ತಿದ್ದರು. ನಾನು, ತೇಜಸ್ವಿ, ರಾಮದಾಸ್, ಎಂ.ಡಿ.ಎನ್. ಇನ್ನೂ ಕೆಲವರು ಟಾಕೀಸಿನ ಎದುರು ಫುಟ್‌ಪಾತಿನಲ್ಲಿದ್ದ ಗುಪ್ತಾ ಮಾರ್ಕೆಟ್ ಬಳಿ ನಿಂತಿದ್ದೆವು. ಆಗ ಸಂಚಾರಕ್ಕೆ ತೊಂದರೆ ಆಗಿದ್ದನ್ನು ತಿಳಿದೋ ಏನೋ ಒಬ್ಬ ಪೋಲಿಸ್ ಆಫಿಸರ್ ಒಂದು ಬುಲೆಟ್ ಮೋಟಾರ್ ಸೈಕಲ್ ಮೇಲೆ ಅಲ್ಲಿಗೆ

ಡುಗ್ಗು...ಡುಗ್ಗು ಎನ್ನುತ್ತಾ ಬಂದರು. ಬಂದು ಅತ್ಯಂತ ದರ್ಪದಿಂದ ನಮ್ಮೆಲ್ಲರ ಕಡೆ ನೋಡುತ್ತಾ 'What is this? What is going on?' ಎಂದು ಜೋರಾಗಿ ಕೇಳಿದರು. ಪ್ರೊ.ಎಂ.ಡಿ.ಎನ್ ತಮ್ಮ ಗಡ್ಡವನ್ನು ನೀವಿಕೊಳ್ಳುತ್ತಾ 'Have you not read today's news papers first in the morning?' ಎಂದರು. ಆಗ ಆ ಪೋಲಿಸ್ ಆಫಿಸರ್ ಅವಾಕ್ಕಾದರು. ಮುಂದುವರಿದ ಎಂ.ಡಿ.ಎನ್.ರು 'Please go home and come back after reading the news papers' ಎಂದರು. ತಕ್ಷಣ ಆ ಪೋಲಿಸ್ ಆಫಿಸರ್ ತನ್ನ ಮೋಟಾರ್ ಸೈಕಲ್‌ನೊಡನೆ ಮಾಯವಾದನು.

ಪೂರ್ಣಚಂದ್ರ ತೇಜಸ್ವಿಯವರು ಮೂಡಿಗೆರೆಯಲ್ಲಿ ವ್ಯವಸಾಯವನ್ನು ಪ್ರಾರಂಭಿಸಿದಾಗ ಸಹಜವಾಗಿ ಕಾಫಿ ಬೋರ್ಡಿನ ವಿರುದ್ಧ ಸಿಡಿದೆದ್ದರು. ಕಾಫಿ ಬೋರ್ಡಿನ ಅನೇಕ ಕಾನೂನುಗಳ ವಿರುದ್ಧ ಹೋರಾಟವನ್ನು ಯುವಜನ ಸಭಾದ ಸಹಯೋಗದೊಂದಿಗೆ ರೂಪಿಸುತ್ತಿದ್ದರು. ಬ್ಯಾಂಕಿನವರ ಕಿರುಕುಳ, ಸಾಲ ಮಂಜೂರು ಮಾಡಲು ವಿವಿಧ ದಾಖಲೆಗಳನ್ನು ಕೇಳುತ್ತಿದ್ದುದು, ಒಂದನ್ನು ಕೊಟ್ಟರೆ ಇನ್ನೊಂದನ್ನು ತಾ ಎನ್ನುತ್ತಿದ್ದುದು ರೈತರಿಗೆ ವಿನಾಕಾರಣ ಕಿರುಕುಳ ಕೊಡುವ ಕಾರ್ಯಕ್ರಮದಂತೆ ಕಂಡಿತು. ಆಗೆಲ್ಲ ಬ್ಯಾಂಕ್‌ಗಳ ಮುಂದೆ ಎಂ.ಡಿ.ಎನ್.ರ ನೇತೃತ್ವದಲ್ಲಿ ಯುವಜನ ಸಭಾದವರು ಪ್ರತಿಭಟಿಸುತ್ತಿದ್ದರು. ಕೆಲವು ವೇಳೆ 107ನೇ ಸೆಕ್ಷನ್ ಪ್ರಕಾರ ಕೇಸುಗಳೂ ದಾಖಲಾದವು. ಆಗ ಇವುಗಳೆಲ್ಲದರ ವಿರುದ್ಧ ಹೋರಾಡಲು ಸಂಘಟನೆಯೊಂದಿರಬೇಕೆಂದು "ದಕ್ಷಿಣ ಭಾರತ ಸಣ್ಣ ಬೆಳೆಗಾರರ ಒಕ್ಕೂಟ" ಎಂಬ ಸಂಘಟನೆಯನ್ನು ತೇಜಸ್ವಿ ಹುಟ್ಟುಹಾಕಿದರು.

ಶಿವಮೊಗ್ಗದಲ್ಲಿ ಎನ್.ಡಿ.ಸುಂದರೇಶ್, ಕಡಿದಾಳ್ ಶಾಮಣ್ಣ, ಬಸವರಾಜಪ್ಪ ಇನ್ನೂ ಅನೇಕ ಸಮಾಜವಾದಿ ಗೆಳೆಯರು "ಕಬ್ಬು ಬೆಳೆಗಾರರ ಒಕ್ಕೂಟ" ಎಂಬ ಸಂಘಟನೆಯನ್ನು ಪ್ರಾರಂಭಿಸಿ ಇಡೀ ಜಿಲ್ಲೆಯಾದ್ಯಂತ ತೀವ್ರವಾದ ಹೋರಾಟವನ್ನು ನಡೆಸಿದರು. ಇವರ ಹೋರಾಟ, ಮುಷ್ಕರ, ರಸ್ತೆ ತಡೆ, ಕಾರ್ಖಾನೆಗೆ ಮುತ್ತಿಗೆ ಕಾರ್ಯಕ್ರಮಗಳು ಇಡೀ ರಾಜ್ಯದ ಗಮನ ಸೆಳೆದವು. ರೈತರ ಹೋರಾಟ ಇಷ್ಟೊಂದು ಗಂಭೀರ ಸ್ವರೂಪ ಪಡೆದಿದ್ದರೂ ಸರ್ಕಾರ 'ಕಮಕ್ ಕಿಮಕ್' ಅನ್ನದೆ ಒಳಗೊಳಗೆ ಕಾರ್ಖಾನೆಯ ಮಾಲೀಕನ ಪರವೇ ಇತ್ತು. ರೈತರ ಮುಷ್ಕರ ತೀವ್ರವಾದಷ್ಟೂ ಸರ್ಕಾರ ಮೌನಕ್ಕೆ ಶರಣಾಯಿತು.

ಇದೆಲ್ಲಾ ಕಾರಣಗಳಿಂದ ಮುಷ್ಕರವನ್ನು ತೀವ್ರಗೊಳಿಸಬೇಕೆಂದೂ, ಕಬ್ಬಿನ ಬೆಳಗಷ್ಟೇ ಅಲ್ಲದೆ ರೈತರ ಎಲ್ಲ ಬೆಳೆಗಳಿಗೂ ವೈಜ್ಞಾನಿಕವಾದ ದರ ನಿಗದಿಯಾಗಬೇಕೆಂದೂ, ಮಾಜಿ ಮಂತ್ರಿ ಹೆಚ್.ಎಸ್.ರುದ್ರಪ್ಪನವರ ನೇತೃತ್ವದಲ್ಲಿ ರೈತಸಂಘವನ್ನು ಸ್ಥಾಪಿಸಬೇಕೆಂದೂ ಎನ್.ಡಿ.ಸುಂದರೇಶ್ ಮತ್ತು ಗೆಳೆಯರು ನಿರ್ಧರಿಸಿದರು. ಆಗ ತೇಜಸ್ವಿಯವರೂ ಸಹ ದಕ್ಷಿಣ ಭಾರತ ಸಣ್ಣ ಬೆಳೆಗಾರರ ಒಕ್ಕೂಟವನ್ನು ರೈತಸಂಘದಲ್ಲಿ ಸೇರಿಸಿ ರೈತಸಂಘವನ್ನು ಬಲಪಡಿಸಬೇಕೆಂದು ದನಿಗೂಡಿಸಿದರು. ಈ ವಿಷಯದಲ್ಲಿ ರಾಜ್ಯಾದ್ಯಂತ ಪ್ರವಾಸ ಮಾಡಿ ವಿವಿಧ ಜಿಲ್ಲೆಗಳಲ್ಲಿ ರೈತರನ್ನು ಒಗ್ಗೂಡಿಸಿ ಶಿವಮೊಗ್ಗಾದಲ್ಲಿ ರೈತಸಂಘದ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಿದರು. ಆಗ ಪೂರ್ಣಚಂದ್ರ ತೇಜಸ್ವಿಯವರು 'ನಿಮ್ಮ ಹೋರಾಟಕ್ಕೆ

ಕಾನೂನಿನ ಬೆಂಬಲ, ತಾತ್ವಿಕ ರೂಪ, ಅಂಕಿ ಅಂಶಗಳಿಂದ ರೈತರ ಬವಣೆಯನ್ನು ವಿವರಿಸುವ ಕಾರ್ಯ, ಸರ್ಕಾರದೊಡನೆ ಮಾತುಕತೆಯಾಗಬೇಕಾದರೆ ಜಾಣ ನಿಲುವು, ಇನ್ನಿತರ ಸಹಾಯಗಳನ್ನು ಸಮರ್ಥವಾಗಿ ನಿರ್ವಹಿಸಲು ನಂಜುಂಡಸ್ವಾಮಿಯವರೇ ಸೂಕ್ತ ವ್ಯಕ್ತಿ. ಆದ್ದರಿಂದ ನೀವು ಎಂ.ಡಿ.ಎನ್.ರನ್ನು ರೈತಸಂಘದಲ್ಲಿ ಇಟ್ಟುಕೊಳ್ಳಿ' ಎಂದು ಎಲ್ಲ ನಾಯಕರುಗಳಿಗೂ ಸೂಚಿಸಿದರು. ಹೀಗೆ ರೈತಸಂಘಕ್ಕೆ ಎಂ.ಡಿ.ಎನ್.ರ 'ಎಂಟ್ರಿ' ಆಯಿತು.

ರೈತಸಂಘದ ಉದ್ಘಾಟನೆ ಆದ ಮೇಲೆ ಎಲ್ಲ ಜಿಲ್ಲೆಗಳಲ್ಲೂ ರೈತಸಂಘವನ್ನು ಸ್ಥಾಪಿಸಿದ ನಾಯಕರುಗಳೆಲ್ಲಾ ರಾಜ್ಯಾದ್ಯಂತ ಪ್ರವಾಸ ಮಾಡಿ ಬಹುಶಃ 1982ರ ಅಕ್ಟೋಬರ್ 2, ಗಾಂಧಿ ಜಯಂತಿಯಂದು ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿ ಬೃಹತ್ ರಾಜ್ಯ ಸಮ್ಮೇಳನವನ್ನು ಏರ್ಪಡಿಸಿದರು. ಅಲ್ಲಿಂದಲೇ ವಿಧಾನಸೌಧದ ಮೇಲೆ ರೈತರ ಬಾವುಟ ಹಾರಿಸುವುದಾಗಿ ಎಂ.ಡಿ.ಎನ್.ರವರು ಘೋಷಿಸಿದರು. ಈ ಸಭೆಯಲ್ಲಿ ಎನ್.ಡಿ. ಸುಂದರೇಶ್, ತೇಜಸ್ವಿ, ಬೇರೆ ಬೇರೆ ಜಿಲ್ಲೆಗಳ ಪ್ರಮುಖ ರೈತ ನಾಯಕರೆಲ್ಲರೂ ಮಾತನಾಡಿದರು. ಈ ಸಭೆಯಲ್ಲಿ ತೇಜಸ್ವಿ ಮಾಡಿದ ಭಾಷಣ ಎಂ.ಡಿ.ಎನ್.ರಿಗೆ ಇಷ್ಟವಾದಂತೆ ಕಾಣಲಿಲ್ಲ.


ಇಲ್ಲಿಯವರೆಗೆ ನಮಗೆ ಆತ್ಮೀಯರಾಗಿದ್ದ ಎಂ.ಡಿ.ಎನ್.ರ ಧೋರಣೆ ನಮ್ಮ ಬಗ್ಗೆ ಬದಲಾಯಿತು. ನಮ್ಮನ್ನು ಸಭೆ ಸಮಾರಂಭಗಳಲ್ಲಿ ಭೇಟಿಯಾದರೆ ಕಂಡರೂ ಕಾಣದಂತೆ ಇರುತ್ತಿದ್ದರು. ನಾವೇ ಹೋಗಿ ಮಾತನಾಡಿಸಿದರೆ ಬಹಳ ಹಿಂದಿನ ಮಿತ್ರರನ್ನು ಜ್ಞಾಪಿಸಿಕೊಂಡಂತೆ 'ಓಹೋ! ನೀವೋ! ಮೈಸೂರಿನಲ್ಲಿ ಕೆಲವು ಕ್ರಾಂತಿಕಾರಿಗಳಿದ್ದಾರೆಂದು ಕೇಳಿದ್ದೇನೆ, ಅದರಲ್ಲಿ ನೀವೂ ಒಬ್ಬರೋ?' ಎಂದು ವ್ಯಂಗ್ಯದಿಂದಲೋ, ಉದಾಸೀನದಿಂದಲೋ ಅಥವಾ ಠೇಂಕಾರದಿಂದಲೋ ಪ್ರತಿಕ್ರಿಯಿಸುತ್ತಿದ್ದರು. ಇದಾದ ಕೆಲವು ತಿಂಗಳುಗಳ ನಂತರ ಹಾಸನದ ಬಾಳ್ಳುಪೇಟೆಯಲ್ಲಿ ರೈತಸಂಘದ ಸಭೆಯನ್ನು ಉದ್ದೇಶಿಸಿ ತೇಜಸ್ವಿಯವರು ಮಾಡಿದ ಭಾಷಣ ಎಂ.ಡಿ.ಎನ್.ರಿಗೆ ಹಿಡಿಸಲಿಲ್ಲವೆಂದು ತಿಳಿದು ಬಂದಿತು. ಆಗ ಅವರು ಅಲ್ಲಿದ್ದ ಕಾರ್ಯಕರ್ತರಿಗೆ ಇನ್ನು ಮುಂದೆ ತೇಜಸ್ವಿಯವರನ್ನು ರೈತಸಂಘದ ಸಭೆಗಳಿಗೆ ಕರೆಯಕೂಡದೆಂದು ಫರ್ಮಾನು ಹೊರಡಿಸಿದರೆಂದು ತಿಳಿದು ಬಂದಿತು.

ರೈತಸಂಘ ಉದ್ಘಾಟನೆಯಾಗಿ ಅದರ ಚಟುವಟಿಕೆಗಳು ರಾಜ್ಯಾದ್ಯಂತ ಪ್ರಸರಿಸಿ, ಎಂ.ಡಿ.ಎನ್.ರವರು ಅದರ ಮುಖ್ಯ ನೇತಾರರಾಗಿ, ಪ್ರಜಾಪ್ರಭುತ್ವವಾದಿಯಾಗಿ ಉಳಿದರೆ? ಸ್ವತಃ ಅಂತರ್ಜಾತಿ ವಿವಾಹವಾಗಿ ಇವರ ಬಂಧು ವರ್ಗದಲ್ಲಿ ಒದಗಿ ಬಂದ ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹಿಸಿದರೇ? ಸರಳ ಮದುವೆಗಳನ್ನು ಆಂದೋಲನ ರೂಪದಂತೆ ತೀರ್ಥಹಳ್ಳಿ, ಶಿವಮೊಗ್ಗ, ಹಾಸನ, ಮಂಡ್ಯ ಜಿಲ್ಲೆಗಳಲ್ಲಿ ನೆರವೇರಿಸಿದ ರೈತಸಂಘವು ಸರಳವಾಗಿ ಉಳಿಯಿತೆ? ಇನ್ನೂ ಮುಂತಾದ ಪ್ರಶ್ನೆಗಳ ವಿಷಯವಾಗಿ ರೈತಸಂಘದಲ್ಲಿ ಎಂ.ಡಿ.ಎನ್.ರಿಗೆ ಹತ್ತಿರವಾಗಿದ್ದ ಮಿತ್ರರೂ, ಕಾರ್ಯಕರ್ತರೂ ಬೆಳಕು ಚೆಲ್ಲಬೇಕಾಗಿದೆ.

– ಬಿ.ಎನ್ ಶ್ರೀರಾಮ್

(ಆಗಸ್ಟ್, 2013)

ಕೆ. ರಾಮದಾಸ್‌ಗೊಂದು ಶ್ರದ್ಧಾಂಜಲಿ:
ಇನ್ನೆಲ್ಲಿ ಆ ತಾಪ... ಆ ಬೆಳಕು!



ಕರ್ನಾಟಕದ ಪ್ರತಿಭಟನೆಯ ಧ್ವನಿ ಉಡುಗಿ ಹೋಗಿದೆ. ಪ್ರೊ॥ ಕೆ ರಾಮದಾಸ್ ಇನ್ನಿಲ್ಲ. ಕಳೆದ 40 ವರ್ಷಗಳಿಂದ ಸತತವಾಗಿ ರಾಜ್ಯದಲ್ಲಿ ಎಲ್ಲ ರೀತಿಯ 'ಪ್ರಭುತ್ವ'ಗಳ ವಿರುದ್ಧ ಸಮರ ಸಾರಿದ್ದ ರಾಮದಾಸ್, ಅನ್ಯಾಯಗಳ ವಿರುದ್ಧ ಪ್ರತಿಭಟನೆಗಳನ್ನು ರೂಪಿಸಬೇಕಿದ್ದ ಸಂಘಟನೆಗಳು ಇತ್ತೀಚಿನ ವರ್ಷಗಳಲ್ಲಿ ಜಾಗತೀಕರಣದ ಒತ್ತಡಗಳಿಗೆ ಸಿಕ್ಕಿ ಉಸಿರು ಕಳೆದುಕೊಳ್ಳುತ್ತಿದ್ದಂತೆ, ಒಂಟಿದನಿಯಾಗಿಯೇ ತಮ್ಮ ಸಮರವನ್ನು ಮುಂದುವರೆಸಿದ್ದರು. ಆ ಸಮರವೂ ಈಗ ನಿಲುಗಡೆಗೆ ಬಂದಂತಾಗಿದೆ. ಸ್ವತಃ ತಮ್ಮ ಆರೋಗ್ಯದ ಬಗ್ಗೆ ಮೊದಲಿಂದಲೂ ಅಷ್ಟೇನೂ ಕಾಳಜಿಯನ್ನಿಟ್ಟುಕೊಳ್ಳದ, ಪೂರ್ತಾ ಅಶಾಂತಿಯ ಮತ್ತು ತಳಮಳದ ಬದುಕು ನಡೆಸಿದ ರಾಮದಾಸ್, ತಮ್ಮ ಆಪ್ತ ಗೆಳೆಯ ಲಂಕೇಶರ ನಿಧನಾನಂತರ ಸಾರ್ವಜನಿಕ ಬದುಕಿನಿಂದ ಅರ್ಧ ನಿವೃತ್ತರಾಗಿದ್ದರು. ನಂತರದ ದಿನಗಳಲ್ಲಿ, ಪತ್ನಿ ನಿರ್ಮಲಾ ಅವರ ದೀರ್ಘಕಾಲಿಕ ಅನಾರೋಗ್ಯ ಹಾಗೂ ಇತ್ತೀಚಿನ ತೇಜಸ್ವಿ ನಿಧನದಿಂದ ಜರ್ಝರಿತರಾಗಿದ್ದರು

ರಾಮದಾಸರನ್ನು ನಾನು ಮೊದಲು ನೋಡಿದ್ದು, 1977ರ ಚುನಾವಣೆಗಳ ನಂತ್ತರ ಜನತಾ ಸರ್ಕಾರ ಅಧಿಕಾರ ಸ್ವೀಕರಿಸಿ, ರಾಷ್ಟ್ರ ಸರ್ವಾಧಿಕಾರದ ಆತಂಕದಿಂದ ಬಿಡುಗಡೆಗೊಂಡು ನಿಟ್ಟುಸಿರು ಬಿಡುತ್ತಿದ್ದ ಹೊತ್ತಿನಲ್ಲಿ. ಬೆಂಗಳೂರಿನ ಗಾಂಧಿ ಭವನದಲ್ಲಿ ಸೇರಿದ್ದ ಕರ್ನಾಟಕದ ಪಕ್ಷಾತೀತ ಸಮಾಜವಾದಿಗಳ ಸಭೆಯಲ್ಲಿ ಪ್ರೊ॥ ನಂಜುಂಡ ಸ್ವಾಮಿಯವರ ವಿರುದ್ಧ ತಮ್ಮ ಕಂಚಿನ ಕಂಠದಲ್ಲಿ ವಾಕ್ಸಮರದಲ್ಲಿ ತೊಡಗಿದ್ದ ಅವರು, ಅಂದು ಒಬ್ಬ ನುರಿತ ಚರ್ಚಾಪಟುವಿನಂತಷ್ಟೇ ನನಗೆ ಗೋಚರಿಸಿದ್ದರು. ಅಲ್ಲೇ ನನಗೆ ಆಗ ಹಿರಿಯ ಸಮಾಜವಾದಿಗಳೆನಿಸಿದ್ದ ರಾಚಪ್ಪ ಬೆಟ್ಸೂರ್, ರಾಚಪ್ಪ ಹಡಪದ್, ಕಡಿದಾಳು ಶಾಮಣ್ಣ, ಕೆ.ಎಂ. ಶಂಕರಪ್ಪನವರಿಂದ ಓಡಿದು ಆಗ ತಾನೇ ಸಮಾಜವಾದಿ ಚಳುವಳಿಗೆ ಕಣ್ಣು ಬಿಡುತ್ತಿದ್ದ ರವಿವರ್ಮ ಕುಮಾರ್, ಮಂಜುನಾಥ ದತ್ತ, ವೆಂಕಟೇಶ ಮೂರ್ತಿ, ರಾಜೇಗೌಡ ಮುಂತಾದವರ ಪರಿಚಯವಾದದ್ದು. ಆಗ ಉದ್ಯೋಗ ನಿಮಿತ್ತ ದೆಹಲಿಯಲ್ಲಿ ವಾಸವಿದ್ದ ಕಾರಣದಿಂದಾಗಿ ಉತ್ತರ ಭಾರತದ ಮಣ್ಣಿನ ವಾಸನೆಯ ದಟ್ಟ ದರಿದ್ರಾವಸ್ಥೆಯ ಸಮಾಜವಾದಿಗಳನ್ನಷ್ಟೇ ಕಂಡಿದ್ದ ನನಗೆ, ಕರ್ನಾಟಕದ ಈ ಮಧ್ಯಮ ವರ್ಗದ ನಾಜೂಕಿನ ಸಮಾಜವಾದಿಗಳನ್ನು ಕಂಡು ಸ್ವಲ್ಪ ಆಶ್ಚರ್ಯವೂ, ಸ್ವಲ್ಪ ಕುತೂಹಲವೂ ಉಂಟಾಯಿತು. ಮುಂದೆ ನನಗೆ ರಾಮದಾಸ್ ಈ ಮಧ್ಯಮ

ವರ್ಗದ ಸಮಾಜವಾದಿಗಳ ವಿಶಿಷ್ಟ ಮಾದರಿಯಂತೆಯೇ ಕಾಣಲಾರಂಭಿಸಿದ್ದರೆ, ಅವರ ಈ ಮೊದಲ ದರ್ಶನ ಸಂದರ್ಭವೇ ಕಾರಣವಾಗಿರಬಹುದು.

ರಾಮದಾಸ್ ಅವರನ್ನು ನಾನು ಮೊದಲ ಬಾರಿಗೆ ಹತ್ತಿರದಿಂದ ಕಂಡದ್ದು, 1978ರಲ್ಲಿ ಹಾಸನದಲ್ಲಿ ಏರ್ಪಡಿಸಲಾಗಿದ್ದ 'ತರುಣ ಲೋಹಿಯಾವಾದಿಗಳ ಸಮ್ಮೇಳನ'ದಲ್ಲಿ. ಕಿಷನ್ ಪಟ್ನಾಯಕ್, ಪ್ರೊ॥ ನಂಜುಂಡಸ್ವಾಮಿ, ತೇಜಸ್ವಿಯವರು ಹಾಜರಿದ್ದ ಆ ಸಮ್ಮೇಳನದಲ್ಲಿ ಸಮಾಜವಾದಿ ತತ್ವವನ್ನು ಸಾರಸಂಗ್ರಹವಾಗಿ ಹೀರಿಕೊಂಡಂತೆ, ಕಟು ಬದ್ಧತೆಯಿಂದ ನಿಷ್ಠುರವಾಗಿ ಮಾತನಾಡಿ ನನ್ನ ಗಮನ ಸೆಳೆದವರೆಂದರೆ ಈ ಕೆ. ರಾಮದಾಸರೇ. ಅಲ್ಲದೆ, ಸಮಾಜವಾದಿ ಯುವಜನ ಸಭಾವನ್ನು ಪುನರುಜ್ಜೀವನಗೊಳಿಸಲು ಅಲ್ಲಿ ಸೇರಿದ್ದ ಪ್ರತಿಯೊಬ್ಬರೂ ಪ್ರತಿ ತಿಂಗಳು ತಮ್ಮ ಮಾಸಿಕ ಆದಾಯದ ಶೇ.5ರಷ್ಟನ್ನು ಅದರ ಹೊಸ ಸಂಚಾಲಕರಿಗೆ ಕಳಿಸಿಕೊಡಬೇಕೆಂಬ ತೀರ್ಮಾನಕ್ಕೆ ಬದ್ಧರಾದವರು ರಾಮದಾಸ್ ಮತ್ತು ನಾನು ಮಾತ್ರ ಆಗಿದ್ದೆವು! ಅಂದಿನಿಂದ ಆರಂಭವಾದ ನಮ್ಮ ಪರಸ್ಪರ ಗೌರವದ ಗೆಳೆತನ ಹಲವು ಬಾರಿ ವೈಯುಕ್ತಿಕ ಭಿನ್ನಾಭಿಪ್ರಾಯಗಳಿಂದುಂಟಾದ ಘರ್ಷಣೆಗಳ ಕಹಿಯ ಹೊರತಾಗಿಯೂ, ಅವರ ಸಾವಿನ ದಿನದವರೆಗೂ ನಿರಂತರವಾಗಿ ಮುಂದುವರಿದುಕೊಂಡು ಬರಲು ಸಾಧ್ಯವಾದದ್ದು, ಮತ್ತೆ ಅವರ ಆಳದ ಸಮಾಜವಾದಿ ಬದ್ಧತೆಯಿಂದಾಗಿ.

ರಾಷ್ಟ್ರ ಮಟ್ಟದಲ್ಲಿ ಡಾ॥ ರಾಮಮನೋಹರ ಲೋಹಿಯಾ ಹಾಗೂ ರಾಜ್ಯ ಮಟ್ಟದಲ್ಲಿ ಶಾಂತವೇರಿ ಗೋಪಾಲ ಗೌಡರ ನೇತೃತ್ವದಲ್ಲಿ ರೂಪುಗೊಂಡಿದ್ದ ಸಮಾಜವಾದಿ ಚಳುವಳಿಯಿಂದ ಪ್ರಭಾವಿತರಾಗಿದ್ದ ರಾಮದಾಸ್, ಈ ಇಬ್ಬರು ನಾಯಕರ ಅಕಾಲಿಕ ಮರಣದಿಂದಾಗಿ ಆ ಚಳುವಳಿ ದಿಕ್ಕು ತಪ್ಪಿದಾಗ, ರಾಜ್ಯ ಮಟ್ಟದಲ್ಲಿ ಪಕ್ಷಾತೀತ ಸಮಾಜವಾದಿ ಚಳುವಳಿಯನ್ನು ಸಂಘಟಿಸಿದವರಲ್ಲಿ ಪ್ರಮುಖರು. ಮುಖ್ಯವಾಗಿ, ಪ್ರೊ॥ ನಂಜುಂಡಸ್ವಾಮಿ, ಪೂರ್ಣಚಂದ್ರ ತೇಜಸ್ವಿ, ಪ.ಮಲ್ಲೇಶ್, ಕಡಿದಾಳು ಶಾಮಣ್ಣ ಹಾಗೂ ದೇವನೂರ ಮಹಾದೇವ ಅವರೊಂದಿಗೆ, ಹಿರಿಯ ಸಮಾಜವಾದಿ ಕಿಷನ್ ಪಟ್ನಾಯಕರ ಮಾರ್ಗದರ್ಶನದಲ್ಲಿ 'ಸಮಾಜವಾದಿ ಯುವಜನ ಸಭಾ'ವನ್ನು ರಾಜ್ಯಾದ್ಯಂತ ಪ್ರಭುತ್ವದ ಅನ್ಯಾಯಗಳ ವಿರುದ್ಧ ಧ್ವನಿಯೆತ್ತುವ ವೇದಿಕೆಯನ್ನಾಗಿ ರೂಪಿಸಿದ ಅವರು, ಅದರ ಪ್ರಮುಖ ವಕ್ತಾರರೂ ಆದರು.

ಎಪ್ಪತ್ತರ ದಶಕದಲ್ಲಿ ರಾಜ್ಯಾದ್ಯಂತ ಆರಂಭವಾದ ಜಾತಿ ವಿರೋಧಿ ಆಲೋಚನಾ ಲಹರಿಗೂ, ಅಂತರ್ಜಾತಿ ವಿವಾಹಗಳ ಚಳುವಳಿಗೂ ಪ್ರೇರಣೆ ನೀಡಿದ 'ಜಾತಿ ವಿನಾಶ ಸಮ್ಮೇಳನ', 'ನವ್ಯ'ದ ಹೆಸರಿನಲ್ಲಿ ಸಾಮಾಜಿಕವಾಗಿ ಸಂಕುಚಿತಗೊಳ್ಳುತ್ತಿದ್ದ ಕನ್ನಡ ಸಾಹಿತ್ಯಕ್ಕೆ ಹೊಸ ದಿಕ್ಕು ನೀಡಿದ 'ಅಖಿಲ ಕರ್ನಾಟಕ ಕಲಾವಿದರ ಹಾಗೂ ಬರಹಗಾರರ ಒಕ್ಕೂಟ', ನಂತರ ಜೆ.ಪಿ. ನೀಡಿದ 'ಸಂಪೂರ್ಣ ಕ್ರಾಂತಿ'ಯ ಕರೆಗೆ ಬೆಂಬಲವಾಗಿ ಕರ್ನಾಟಕದಲ್ಲಿ ಆರಂಭವಾದ 'ನವನಿರ್ಮಾಣ' ಚಳುವಳಿ; ಈ ಚಳುವಳಿ ಹಳಿ ತಪ್ಪಿದಾಗ ರೂಪುಗೊಂಡ ದಲಿತ ಹಾಗೂ ರೈತ ಚಳುವಳಿ; ತದನಂತರದ 'ಲಂಕೇಶ್ ಪತ್ರಿಕೆ'ಯ ಆರಂಭ, ಗೋಕಾಕ್ ಚಳುವಳಿ, 'ಪ್ರಗತಿರಂಗ'

ಹಾಗೂ ಅಂತರ್ಜಾತಿ ವಿವಾಹಗಳ ರಾಜ್ಯ ಮಟ್ಟದ ವೇದಿಕೆ 'ಮಾನವ ಮಂಟಪ'- ಹೀಗೆ ಕಳೆದ ನಲವತ್ತು ವರ್ಷಗಳಲ್ಲಿ ಕರ್ನಾಟಕ ಕಂಡ ಎಲ್ಲ ಸಾಮಾಜಿಕ-ಸಾಂಸ್ಕೃತಿಕ ವಿದ್ಯಮಾನ-ಚಳುವಳಿಗಳ ಮುಂಚೂಣಿಯಲ್ಲಿರುತ್ತಿದ್ದ ರಾಮದಾಸ್, ತಾವು ನೆಲೆಸಿದ್ದ ಮೈಸೂರಿನ ಸಾಮಾಜಿಕ ವಾತಾವರಣವನ್ನು ಹದಗೆಡಿಸುತ್ತಿದ್ದ ವಿಶ್ವವಿದ್ಯಾಲಯದ ರಾಜಕಾರಣ, ಮತೀಯವಾದಿಗಳ ಹುನ್ನಾರ, ಪ್ರತಿಷ್ಠಿತರ ದಬ್ಬಾಳಿಕೆಗಳ ವಿರುದ್ಧವೂ ಬೀದಿಗಿಳಿಯುತ್ತಿದ್ದ ಸ್ಥಳೀಯ ಹೋರಾಟಗಾರರೂ ಆಗಿದ್ದರು.

ಮಲೆನಾಡಿನ ಅಜ್ಞಾತ ಮೂಲೆಯೊಂದರ ಅಜ್ಞಾತ ಜಾತಿಗೆ ಸೇರಿದ್ದ ರಾಮದಾಸ್ ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡು, ನರ್ಸ್ ಉದ್ಯೋಗದಲ್ಲಿದ್ದ ತಾಯಿ ಮಂಜಮ್ಮನವರ ಹಠದಿಂದಾಗಿ ಬಡತನದ ಸಂಕಷ್ಟಗಳ ಮಧ್ಯೆಯೂ ಅಧ್ಯಯನಕ್ಕಾಗಿ ಮೈಸೂರಿನವರೆಗೆ ಬಂದವರು ಮತ್ತು ಅಲ್ಲೇ ಉದ್ಯೋಗ ಪಡೆದು ನೆಲೆಸಿದವರು. ತಮ್ಮ ಬಾಲ್ಯದಲ್ಲೇ ಲೋಹಿಯಾ ದರ್ಶನ ಮಾಡಿ, ಸಮಾಜವಾದಿ ಚಳುವಳಿಯ ಪ್ರಭಾವಕ್ಕೊಳಗಾಗಿದ್ದ ರಾಮದಾಸ್ ಅದು ಕಲಿಸಿಕೊಟ್ಟ ಸ್ವಾಭಿಮಾನ ಹಾಗೂ ದಿಟ್ಟತನಗಳ ಮೂಲಕ ಬದುಕು ಕಟ್ಟಿಕೊಂಡವರು. ನಮ್ಮ ಪ್ರಜಾಪ್ರಭುತ್ವದ ವೈಫಲ್ಯಗಳ ಬಗ್ಗೆ ಯಾರೇ ಏನೇ ಹೇಳಲಿ, ಅದು ರಾಮದಾಸರಂತಹ ಅಲಕ್ಷಿತ ಸಮುದಾಯಗಳ ಪ್ರತಿನಿಧಿಗಳಿಗೆ ಅವಕಾಶ ಹಾಗೂ ಆತ್ಮವಿಶ್ವಾಸಗಳ ಎದೆ ಹಾಲು ನೀಡಿ ಪೊರೆದ ಕೀರ್ತಿಗಂತೂ ಭಾಜನವಾಗಿದೆ. ಹಾಗಾಗಿಯೇ ರಾಮದಾಸರು ಪ್ರಜಾಪ್ರಭುತ್ವದ ಯಾವುದೇ ಮೌಲ್ಯಕ್ಕೆ ಧಕ್ಕೆ ಒದಗಿದರೂ, ಅದು ಸಾವು ಬದುಕುಗಳ ಪ್ರಶ್ನೆಯೆಂಬಷ್ಟು ತೀವ್ರವಾಗಿ ಪ್ರತಿಭಟನೆಗೆ ಸಜ್ಜಾಗುತ್ತಿದ್ದರು.

ಕುವೆಂಪುರಿಂದ ಹಿಡಿದು ದೇವನೂರು ಮಹದೇವ ಅವರವರೆಗೆ ನಮ್ಮ ಕಾಲದ ಅತ್ಯುತ್ತಮ ಮನಸ್ಸುಗಳೊಂದಿಗೆ ತಮ್ಮ ವಿಶಿಷ್ಟ ನಿಷ್ಠುರತೆಯೊಂದಿಗೆ ಸಂವಾದ ಮಾಡಿದ ರಾಮದಾಸ್, ಒಮ್ಮೊಮ್ಮೆ ತಮ್ಮ ವೈಚಾರಿಕ ಕಟಿ ಬದ್ಧತೆಗೆ ತಾವೇ ಮಾರು ಹೋಗಿ ಇತರ ಸಾಮಾನ್ಯರ ಮೇಲೆ ಅನಗತ್ಯವಾಗಿ ಹರಿಹಾಯುತ್ತಿದ್ದುದೂ ಉಂಟು! ಲಂಕೇಶರ ಪತ್ರಿಕೋದ್ಯಮದ ಆರಂಭದ ಅತ್ಯುತ್ತಮ ವರ್ಷಗಳಲ್ಲಿ ಅವರ ಆತ್ಮೀಯ ಸಖನಾದ ರಾಮದಾಸ್, ಆ ಪತ್ರಿಕೋದ್ಯಮದ ಅವನತಿಯ ಕೊನೆಯ ವರ್ಷಗಳಲ್ಲೂ ಬರಿ ಸಖನಾಗಿಯೇ ಮುಂದುವರಿದು ಆಶ್ಚರ್ಯ ಹುಟ್ಟಿಸಿದ್ದರು. ವೈಯುಕ್ತಿಕ ನೆಲೆಯಲ್ಲಿ ಇಂತಹ ವೈರುಧ್ಯಗಳಿಗೆ ಆಗಾಗ್ಗೆ ಬಲಿಯಾಗುತ್ತಿದ್ದ ಅವರು, ಅದರಿಂದಾಗಿಯೋ ಏನೋ ಸದಾ ಆಂತರಿಕವಾಗಿ ಅಶಾಂತರಾಗಿ ಚಡಪಡಿಕೆಯಲ್ಲಿರುತ್ತಿದ್ದರು. ವಿಚಾರವಾದ ಹಾಗೂ ಸಮಾಜವಾದಗಳ ಕಲಸುಮೇಲೋಗರದ ಚಡಪಡಿಕೆಯದು.

ಅನ್ಯಾಯದ ವಿರುದ್ಧ ಪ್ರತಿಭಟಿಸದವನು ಅನ್ಯಾಯದಲ್ಲಿ ಪಾಲುದಾರನೇ ಎಂಬ ಲೋಹಿಯಾ ಅವರ ಮಾತಿನಲ್ಲಿ ಅಚಲ ನಂಬಿಕೆಯಿಟ್ಟಿದ್ದ ರಾಮದಾಸ್, ತಮ್ಮ ಬದುಕಿನುದ್ದಕ್ಕೂ ತಮ್ಮ ಸುತ್ತಮುತ್ತ ಯಾವುದೇ ಅನ್ಯಾಯ ನಡೆಯಲಿ, ಅಲ್ಲಿ ಹಾಜರಿರುತ್ತಿದ್ದರು. ಕ್ರೋಧದ ಜೊತೆಗೆ ಕರುಣೆಯೂ ಕ್ರಿಯಾಶೀಲವಾಗಿದ್ದಾಗ ಮಾತ್ರ ಪ್ರತಿಭಟನೆ ರಚನಾತ್ಮಕವಾಗಿರಬಲ್ಲುದು ಎಂಬ ಲೋಹಿಯಾ ಅವರ

ಇನ್ನೊಂದು ಮಾತನ್ನು ಅವರು ಮರೆತಂತೇ ತೋರುತ್ತಿದ್ದುದರಿಂದಾಗಿ; ಹಲವು ಬಾರಿ ಅವರ ಪ್ರತಿಭಟನೆಯ ತೀವ್ರತೆ ಔಚಿತ್ಯ ಮೀರಿ ಪ್ರಕಟವಾಗುತ್ತಾ, ಅವರೊಡನಿರುತ್ತಿದ್ದ ಗೆಳೆಯರಿಗೆ ಮುಜುಗರವಾಗುತ್ತಿದ್ದುದೂ ಉಂಟು. ಇದನ್ನು ಕಂಡು ಬಹುಬೇಗ ಆಸ್ಫೋಟಗೊಳ್ಳುತ್ತಿದ್ದ ರಾಮದಾಸ್, ತಮ್ಮ ಆಪ್ತ ಗೆಳೆಯರ ಮೇಲೂ ಅನುಚಿತವಾದ ದಾಳಿ ಮಾಡಲು ಹಿಂಜರಿಯುತ್ತಿರಲಿಲ್ಲ. ಹೀಗಾಗಿ ಕ್ರಮೇಣ ಗೆಳೆಯರಿಂದ ದೂರವಾಗುತ್ತಾ ಹೋದ ಅವರು, ತಮ್ಮ ಬದುಕಿನ ಕೊನೆಯ ವರ್ಷಗಳಲ್ಲಿ ಒಂಟಿತನದ ಹತಾಶೆಯಲ್ಲಿ ದಿಕ್ಕೆಟ್ಟಂತಿದ್ದರು. ಆದರೆ ಇದೇ ಹೊತ್ತಿಗೆ, ಇದೆಲ್ಲದರ ಪರಿಣಾಮವೋ ಎಂಬಂತೆ ಕಾಣಿಸಿಕೊಂಡ ಪತ್ನಿ ನಿರ್ಮಲಾ ಅವರ ತೀವ್ರ ಅನಾರೋಗ್ಯ ಅವರಿಗೆ ಕೊನೆಗೂ ಸಹನೆ–ಸಂಯಮಗಳನ್ನು ಕಲಿಸತೊಡಗಿತ್ತು. ಗೆಳೆಯರು ಮತ್ತೆ ಕ್ರಮೇಣ ಬರಲಾರಂಭಿಸಿದ್ದರು. ತಮ್ಮ ಕೊನೆಯ ದಿನಗಳಲ್ಲಿ ಕ್ರೋಧದ ಕಹಿ ಕಳೆದುಕೊಂಡಂತೆ ಸದಾ ಪ್ರೀತಿ ಸೂಸುತ್ತಿದ್ದ ರಾಮದಾಸ್, ಬದುಕಿನ ಮೂಲಪಾಠ ಕಲಿತು ಲೋಕ ತ್ಯಜಿಸಿದ ಅದೃಷ್ಟವಂತ.

ರಾಮದಾಸರನ್ನು ಅವರ ಗೆಳೆಯರು ಸಮಾಜವಾದಿ, ವಿಚಾರವಾದಿ, ನಿಷ್ಠುರವಾದಿ, ಹಠವ್ಯಾದಿ, ಜಗಳಗಂಟ ಎಂದೆಲ್ಲ ಗುರುತಿಸಿದ್ದುಂಟು. ಆದರೆ ಇವೆಲ್ಲ ಸೇರಿದಂತೆ, ಅವರ ವ್ಯಕ್ತಿತ್ವಕ್ಕೊಪ್ಪುವ ಅಭಿದಾನವೆಂದರೆ, a permanent non-conformist(ನಿರಂತರ ಬಂಡುಕೋರ)– ಕೆಲವು ಬಾರಿ ಈ ಬಂಡುಕೋರತನ ನಿಷ್ಕಾರಣವೂ, ಉದ್ದೇಶರಹಿತವಾಗಿಯೂ ಇದ್ದಂತೆ ಕಾಣುತ್ತಿತ್ತಾದರೂ. ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿರುವ ಮತೀಯತೆ, ಜಾತೀಯತೆ, ಮೌಢ್ಯಾಚರಣೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಯುವಜನರ ನಿಷ್ಕ್ರಿಯತೆಗಳ ಬಗ್ಗೆ ಚಿಂತಿತರಾಗಿದ್ದ ರಾಮದಾಸ್, ಕಳೆದ ಶತಮಾನದಲ್ಲಿ ವಿದ್ಯೆ ಪಡೆದು ಆತ್ಮವಿಶ್ವಾಸ ಗಳಿಸಿಕೊಂಡ ಅನೇಕ ಅನಾಮಿಕ ಅಲ್ಪಸಂಖ್ಯಾತ ಜಾತಿಗಳ ಧೀರ, ಆದರೆ ಅಶಾಂತ ಪ್ರತಿನಿಧಿಯಾಗಿ; ಇದನ್ನೆಲ್ಲ ವಿಷಾದದಿಂದ ನೋಡುತ್ತಾ, ಸರಿಮಾಡಲಾಗದ ಸಂಕಟದಲ್ಲಿ ನಮ್ಮನ್ನಗಲಿ ಹೋಗಿದ್ದಾರೆ. ತಮ್ಮ ವಿದ್ಯಾ ಗುರು ಜಿ.ಎಸ್.ಎಸ್. ಅವರ ಅಭಿನಂದನ ಗ್ರಂಥಕ್ಕೆ ಬರೆದ ಲೇಖನವೊಂದರಲ್ಲಿ ಅವರು, ತಮ್ಮ ಗುರುಗಳು ಕತ್ತಲಲ್ಲಿ ದೀಪ ಹಿಡಿದು ಹೊರಟಿದ್ದರೆ, ತಾವು ಪಂಜು ಹಿಡಿದು ಹೊರಟಿರುವುದಾಗಿ ತಮ್ಮನ್ನು ತಾವೇ ವರ್ಣಿಸಿಕೊಂಡಿದ್ದರು. ರಾಮದಾಸ್‌ರಿಗೆ ಇದಕ್ಕಿಂತ ಸರಿಯಾದ ವರ್ಣನೆ ಮತ್ತೊಂದಿರಲಾರದು!

ಆ ಪಂಜು ಇಂದು ಆರಿ ಹೋಗಿದೆ. ಇನ್ನೆಲ್ಲಿ ಅಂಥ ಆ ತಾಪ, ಆ ಬೆಳಕು?

–ಡಿ.ಎಸ್. ನಾಗಭೂಷಣ

(ಜೂನ್ 29, 2007, 'ವಿಕ್ರಾಂತ ಕರ್ನಾಟಕ)

ಆ ಎಸ್.ವೈ.ಎಸ್. ದಿನಗಳು...

ಮೈಸೂರಿನ ಮಾನಸಗಂಗೋತ್ರಿ ಮೊದಲಿನಿಂದಲು ಒಂದು ಆಕರ್ಷಣೀಯ ಜ್ಞಾನ ಕೇಂದ್ರ. ಈ 'ಜ್ಞಾನ' ಎಂಬುದನ್ನು ಸ್ವಲ್ಪ ವಿಸ್ತಾರವಾದ ಅರ್ಥದಲ್ಲಿ ನೋಡಬೇಕಷ್ಟೆ. ಆ ಕಾಲದಲ್ಲಿ ಇಂತಹ 'ಜ್ಞಾನ'-ಕಮ್ಮಟಗಳು ಹಲವಾರು. ಅಂತಹುವುಗಳಲ್ಲೊಂದು ನಾನು ಭಾಗಿಯಾಗಿದ್ದ ಎಸ್.ವೈ.ಎಸ್. ಅಂದರೆ ಸಮಾಜವಾದಿ ಯುವಜನ ಸಭಾ. ಅದು ಆಗ ನೆಹ್ರೂ ವಿರುದ್ಧ ರಾಜಕಾರಣ ಮಾಡಿ ದೇಶದ ಜನರ ಗಮನ ಸೆಳೆದಿದ್ದ ಲೋಹಿಯಾ ಅವರ (ಸಂಯುಕ್ತ) ಸೋಷಲಿಸ್ಟ್ ಪಕ್ಷದ ಯುವಜನ ಶಾಖೆ.

1967-69ರ ವರ್ಷಗಳವು. ಆಗ ತಾನೇ ಜರ್ಮನಿಯಿಂದ ಉನ್ನತ ಕಾನೂನು ಶಿಕ್ಷಣ ಮುಗಿಸಿಕೊಂಡು ಬಂದರೆಂದು ಹೇಳಲಾಗುತ್ತಿದ್ದ ಪ್ರೊ॥ ಎಂ.ಡಿ. ನಂಜುಂಡಸ್ವಾಮಿ ಇದರ ಸೂತ್ರಧಾರರು. ಅವರು ಒಮ್ಮೊಮ್ಮೆ ಸ್ಕೂಟರ್, ಬಹಳ ಸಾರಿ ವಿಲೀಸ್ ಕಂಪೆನಿಯ ಜೀಪನ್ನು ಅವರೇ ಡ್ರೈವ್ ಮಾಡಿಕೊಂಡು ಬರುತ್ತಿದ್ದರು. ಮೊದಮೊದಲು ನಮಗೆ-ಕೆಲವು ಗೆಳೆಯರಿಗೆ ನಂಜುಂಡಸ್ವಾಮಿ ಪರಿಚಯವಿರಲಿಲ್ಲ. ಅವರು ಯಾಕಾಗಿ ಬರುತ್ತಾರೆಂದೂ ನಮಗೆ ತಿಳಿದಿರಲಿಲ್ಲ. ಅವರು ಬಂದ ಕೂಡಲೆ ನಮ್ಮ ಸಹಪಾಠಿ ಕೆ.ರಾಮದಾಸ್, ರಾಜ್ಯಶಾಸ್ತ್ರ ವಿದ್ಯಾರ್ಥಿ ಪಿ.ಪುಟ್ಟಯ್ಯ ಮತ್ತು ಒಂದಿಬ್ಬರು ವಿದ್ಯಾರ್ಥಿಗಳು ಮೋಹಿನಿಯ ಸೆಳೆತಕ್ಕೆ ಒಳಗಾದವರಂತೆ ಅವರೊಂದಿಗೆ ವ್ಯಾನಿನಲ್ಲಿ ಕುಳಿತು ಎಲ್ಲಿಗೋ ತೆರಳುತ್ತಿದ್ದರು. ನನ್ನ ಗೆಳೆಯ ರಾಮದೇವ ತುಂಗನೊಂದಿಗೆ 'ಇದೇನ್ರಿ ತುಂಗ? ದಿನನಿತ್ಯದ ರಹಸ್ಯ ಕಾರ್ಯಾಚರಣೆ?" ಎಂದು ತಮಾಷೆ ಮಾಡುತ್ತಿದ್ದೆ.

ಒಂದು ದಿನ ನಮ್ಮ ಅನುಮಾನವನ್ನು ಒಂದೇ ಬಾರಿಗೆ ಬಗೆಹರಿಸುವರಂತೆ ರಾಮದಾಸ್ "ಇವೊತ್ತು ಸಂಜೆ ನೀವಿಬ್ಬರೂ ರೆಡಿಯಾಗಿ. ಒಂದು ಜಾಗಕ್ಕೆ ಹೋಗೋಣ್ರಿ" ಎಂದರು. ನಾನು ನಗುತ್ತ "ಏನು ಸ್ಮಗ್ಲಿಂಗ್ ಜಾಗಕ್ಕ?" ಎಂದೆ. ಅವರು "ಹೌದ್ರೀ...ವಿಚಾರದ ಸ್ಮಗ್ಲಿಂಗ್" ಎಂದರು ವೀರಾವೇಶದಿಂದ. ಅದು 1967ರ ಸೆಪ್ಟೆಂಬರ್ ಎಂದು ನೆನಪು. ಮೈಸೂರಿನ ಪ್ರಸಿದ್ಧ ಸಮಾಜವಾದಿ ಮತ್ತು ವಕೀಲರಾಗಿದ್ದ ಟಿ.ಎನ್. ನಾಗರಾಜ್ ಅವರ ಮನೆಗೆ ಹೊಂದಿಕೊಂಡ ಒಂದು ಹಾಲ್‌ನಲ್ಲಿ ಅನೇಕ ವಿದ್ಯಾರ್ಥಿಗಳು ಸೇರಿದ್ದರು. ಹಾಲ್‌ನ ಮಧ್ಯಭಾಗದಲ್ಲಿ ಲೋಹಿಯಾ ಅವರ ಒಂದು ದೊಡ್ಡ ಚಿತ್ರ, ಮೇಲ್ಭಾಗದಲ್ಲಿ 'ಸಮಾಜವಾದಿ ಯುವಜನ ಸಭಾ' ಎಂಬ ಬ್ಯಾನರ್, ಆ ದಿನ ಯಾವ ಸಮಾರಂಭ ಅಥವಾ ಸಭೆ ಇರಲಿಲ್ಲ. ಅಲ್ಲೆ ಕುಳಿತಿದ್ದ ನಂಜುಂಡಸ್ವಾಮಿ ವಿದ್ಯಾರ್ಥಿಗಳನ್ನು ಪರಸ್ಪರ ಪರಿಚಯಿಸಿದರು.

ಇದಾದ ಕೆಲವು ದಿನಗಳ ನಂತರ ನಂಜುಂಡಸ್ವಾಮಿ "ಹೀಗೇ ಸುಮ್ಮನೆ ಯೋಚನೆ ಮಾಡುತ್ತ ಕೂತರೆ No Use. ನನ್ನದು ಕೆಲವು Plan ಇವೆ. ನೀವೆಲ್ಲ ಸೇರಬೇಕು" ಎಂದರು. ನಾನು ಅವರ ತ್ರೀ-ಪೀಸ್ ಸೂಟನ್ನು, ತೆಳುಗಡ್ಡ ಮತ್ತು

ಬೆರಳು ಸಂಧಿಯ ಪಾಸಿಂಗ್ ಶೋ ಸಿಗರೇಟನ್ನೆ ಗುಗ್ಗುವಿನಂತೆ ನೋಡುತ್ತಿದ್ದೆ. ಹೀಗಿರುವಾಗ, 1968ರ ಒಂದು ದಿನ ನಂಜುಂಡಸ್ವಾಮಿ ಅವರೇ ಡ್ರೈವ್ ಮಾಡುತ್ತಿದ್ದ ಕಾರು ಮಧ್ಯಾಹ್ನ ಗಂಗೋತ್ರಿ ಕ್ಯಾಂಟೀನ್ ಮುಂದೆ ನಿಂತಿತು. ಕಾರಿನಿಂದ ರಾಮದಾಸ್, ಪುಟ್ಟಯ್ಯ, ಪ.ಮಲ್ಲೇಶ್ ಅವರೊಂದಿಗೆ ನಂಜುಂಡಸ್ವಾಮಿ ಇಳಿದು ಬಂದರು. ರಾಮದಾಸ್ "ಏನ್ರಿ, ನಿಮಗೆಲ್ಲ ಎಷ್ಟು ಹುಡುಕೋದು? ಸಂಜೆ ಎಸ್‌ವೈಎಸ್ ಹತ್ತಿರ ಬನ್ನಿ, ತಪ್ಪಿಸಬೇಡಿ" ಎಂದು ಹೇಳಿ, ತುರ್ತು ಕೆಲಸ ಇರುವವರಂತೆ ಹೊರಟರು.

ಏನಿರಬಹುದು ಅಂತಹ ತುರ್ತು ಕೆಲಸ? ನಾನು ರಾಮದೇವ ತುಂಗ ಲೆಕ್ಕ ಹಾಕಿದೆವು, ಹೊಳೆಯಲಿಲ್ಲ. ಸಂಜೆ, ಎಸ್.ವೈ.ಎಸ್.ಗೆ ಹೋದಾಗ 15–20 ಯುವಕರು ಸೇರಿದ್ದರು. ಯಾವ ಪೀಠಿಕೆ ಪ್ರಸ್ತಾವನೆಯೂ ಇಲ್ಲದೆ ಟಿಎನ್‌ಎನ್. ಅವರು "ನೋಡಿ, ನೀವಿಷ್ಟು ಹುಡುಗರು ಬಂದದ್ದು ಸಂತೋಷವಾಯಿತು. ನಾವೀಗ ಮಾಡಬೇಕಾದ ಕೆಲಸ ಸ್ವಲ್ಪ ಕಷ್ಟದ್ದೆ. ಹುಷಾರಾಗಿ ಮಾಡಬೇಕು. ಅಷ್ಟೆ, ನೀವೆಲ್ಲ ಬರ್ತೀರ?" ಎಂದು ಕೇಳಿದರು. ಯಾರಿಗೇನೂ ಅರ್ಥವಾಗದೆ ಸುಮ್ಮನಿದ್ದರು. ಅವರೇ ಮತ್ತೆ ಹೇಳಿದರು: 'ಮೈಸೂರಿನಲ್ಲಿರುವ ಇಂಗ್ಲೀಷ್‌ನವರ ಪ್ರತಿಮೆಗಳು, ಅವರ ಹೆಸರಿನ ರಸ್ತೆ ಫಲಕಗಳನ್ನು ಕಿತ್ತು ಹಾಕುವುದು. ಇನ್ನೂ ಅವರ ಜಪ ಮಾಡ್ತಿರೋದು ದಾಸ್ಯದ ಸಂಕೇತ. ಈ ಕೆಲಸಕ್ಕೆ ರೆಡಿ ಇದೀರ?" ಇಂತಹ ಒಂದು ಕಾರ್ಯಕ್ರಮಕ್ಕಾಗಿ ಬಹಳ ದಿನಗಳಿಂದ ಕಾಯುತ್ತಿದ್ದವರಂತೆ ಆಗಲೇ ಕೆಲವರಿಗೆ ಆವೇಶ ಬಂದಂತಾಯಿತು. "ಯಾವಾಗ ಸಾರ್?" ಎಂದರು. ಮಾರನೆ ದಿನ ರಾತ್ರಿ, ಮೈಸೂರು ಜಿಲ್ಲಾಧಿಕಾರಿ ಕಛೇರಿ ಮುಂದಿದ್ದ ಡೇವಿಡ್ ಗಾರ್ಡನ್ ಎಂಬಾತನ ಪ್ರತಿಮೆಯನ್ನು ತೆಗೆಯುವುದೆಂದು ತೀರ್ಮಾನಿಸಿದರು. (ಡೇವಿಡ್ ಗಾರ್ಡನ್ 19ನೇ ಶತಮಾನದಲ್ಲಿ ಮೈಸೂರು ಜಿಲ್ಲಾ ಕಲೆಕ್ಟರ್ ಆಗಿದ್ದವನು)

ಆ ದಿನ ರಾತ್ರಿ ಸುಮಾರು 9 ಗಂಟೆ ವೇಳೆಗೆ ಮಹಾರಾಜ ಕಾಲೇಜು ಹಾಸ್ಟೆಲ್‌ನ ಎನ್.ಡಿ. ಪ್ರಭಾಕರನ ದೊಡ್ಡ ರೂಮಿನಲ್ಲಿ ಎಲ್ಲ ಸೇರಿದೆವು. ಹತ್ತು ಗಂಟೆಗೆ ಟಿಎನ್‌ಎನ್ ಕಳಿಸಿದ್ದ ಟ್ರ್ಯಾಕ್ಟರು ಬಂದಿತು. ತ್ಯಾಜವಳ್ಳಿ ಮಂಜುನಾಥ, ಪಡವಗೋಡು ವೆಂಕಟೇಶ, ರಮೇಶ, ಶಬೀರ್, ರಾಮದೇವ ತುಂಗ ಮತ್ತು ಅದೇ ಹಾಸ್ಟೆಲ್‌ನ ಹಲವು ಹುಡುಗರು–ಕೆಲವರು ಟ್ರ್ಯಾಕ್ಟರಿನಲ್ಲಿ, ಕೆಲವರು ನಡೆದೇ– ಜಿಲ್ಲಾಧಿಕಾರಿ ಕಛೇರಿ ಮುಂದೆ ಬಂದರು. 'ಗದ್ದಲ ಮಾಡಬಾರದು, ಯಾವುದೇ ಘೋಷಣೆ ಹಾಕಬಾರದು' ಎಂದು ನಂಜುಂಡಸ್ವಾಮಿ, ಮಲ್ಲೇಶ್ ತಾಕೀತು ಮಾಡಿದ್ದರು. ಆದರೆ ಟ್ರ್ಯಾಕ್ಟರಿನದೇ ದೊಡ್ಡ ಗಲಾಟೆ. ಅದು ಅಬ್ಬರಿಸುತ್ತಿತ್ತು. ತಂದಿದ್ದ ಬಲವಾದ ಹಗ್ಗವನ್ನು, ನಾ ಮುಂದು ತಾ ಮುಂದು ಎನ್ನುವಂತೆ, ಮಂಜು– ರಮೇಶ್ 2–3 ಜನ ಆ ಪ್ರತಿಮೆಯ ಕೊರಳಿಗೆ ಬಿಗಿದರು. ಅದರ ತುದಿಯನ್ನು ಟ್ರ್ಯಾಕ್ಟರಿನ ಹಿಂಭಾಗಕ್ಕೆ ಕಟ್ಟಿದರು. ದಡಾರನೆ ಟ್ರ್ಯಾಕ್ಟರನ್ನು ಓಡಿಸಿದ ಕೂಡಲೇ ಜಿಲ್ಲಾ ಕಲೆಕ್ಟರ್ ಸ್ವಲ್ಪ ನಡುಗಿದನೆ ಹೊರತು ತನ್ನ ಸ್ಥಾನ ಬಿಟ್ಟು ಕದಲಲಿಲ್ಲ. ಮತ್ತೆ ಮಾಡಿದ ಪ್ರಯತ್ನವನ್ನೂ ಅವನು ವಿಫಲಗೊಳಿಸಿದ. ನಂಜುಂಡಸ್ವಾಮಿ 'ಇಂಗ್ಲೀಷ್‌ನವರನ್ನು ಓಡಿಸೋದು ಬಹಳ ಕಷ್ಟ; ಬೇರೆ ಪ್ಲ್ಯಾನ್ ಮಾಡ್ಬೇಕು'

ಎಂದರು. ಈಗ ಪ್ರತಿಮೆಯ ಸುತ್ತ 3–4 ಸುತ್ತು ಹಗ್ಗ ಬಿಗಿದು ಟ್ರ್ಯಾಕ್ಟರಿಗೆ ಕಟ್ಟಿದ ಕೂಡಲೆ ಡ್ರೈವರ್ 'ಈ ಸಾರಿ ಅವರ ಕಥೆ ನೋಡಿ' ಎನ್ನುತ್ತ ಆಕ್ಸಿಲರೇಟರನ್ನು ಒತ್ತಿದ ಕೂಡಲೆ ಟ್ರ್ಯಾಕ್ಟರ್ ರೈಲ್ವೆ ಎಂಜನಿನಂತೆ ಅಬ್ಬರಿಸತೊಡಗಿತು. ಗಾಡಿ ಮುಂದೆ ಓಡದಂತೆ 'ಕಲೆಕ್ಟರ್' ಹರ್ಕ್ಯುಲಿಸ್‌ನಂತೆ ಹಗ್ಗವನ್ನು ಬಲವಾಗಿ ಹಿಡಿದಿಟ್ಟುಕೊಂಡ. ಡ್ರೈವರ್ ಮಾತ್ರ ಹಠ ಬಿಡಲಿಲ್ಲ, ಭಾರಿ ಎಳೆತ, ವಿಪರೀತ ಶಬ್ದಗಳೊಡನೆ ಇದ್ದಕ್ಕಿದ್ದಂತೆ ಸ್ವಾತಂತ್ರ್ಯ ಸಿಕ್ಕಂತೆ ಟ್ರ್ಯಾಕ್ಟರ್ ಮುಂದೆ ಓಡಿತು. ಎಲ್ಲರಿಗೂ ಕಲೆಕ್ಟರ್ ಉರುಳಿಬಿದ್ದ ಎಂದು ಖುಷಿಯಾಯಿತು. ಆದರೆ ಅವನು ಮಾತ್ರ ಅಲ್ಲೇ ಹಾಗೆಯೇ ನಿಂತಿದ್ದ. ಬದಲಾವಣೆ ಏನೆಂದರೆ, ತುಂಡಾಗಿದ್ದ ಹಗ್ಗದ ಉರುಲು ಅವನ ಕೊರಲಿನಲ್ಲಿ ನೇತಾಡುತ್ತಿತ್ತು. ಅಷ್ಟು ಹೊತ್ತಿಗೆ ಎಲ್ಲಿದ್ದರೋ ಪೋಲೀಸರು 3–4 ಮಂದಿ ಶೀಟಿ ಊದುತ್ತ ಓಡಿ ಬಂದರು. ಕ್ಷಣಮಾತ್ರದಲ್ಲಿ ನಾವೆಲ್ಲ ದಿಕ್ಕಾಪಾಲು!

ಈ ಘಟನೆ ಮಾರನೇ ದಿನ ಕೆಲವು ಪತ್ರಿಕೆಗಳಲ್ಲಿ ಸುದ್ದಿಯಾಯಿತು. ಆಗ ವಿಧಾನಸಭೆ ಅಧೀವೇಶನ ನಡೆಯುತ್ತಿತ್ತು. ಅಲ್ಲಿಯೂ ಇದು ಪ್ರಸ್ತಾಪವಾಯಿತು. ಆಗ ಗೃಹಮಂತ್ರಿ ಲಕ್ಕಪ್ಪನವರೆಂಬುದು ನೆನಪು. ಈ ವಿಗ್ರಹ ಭಂಜಕರು ಯಾರು? ಇವರ ಹಿನ್ನೆಲೆ ಏನು? ಇದು ಯಾವ ಸಂಘ–ಸಂಸ್ಥೆಯ ಕೈವಾಡ? ಎಂಬುದನ್ನು ಪತ್ತೆ ಮಾಡುತ್ತೇವೆ ಎಂದು ಅವರು ಹೇಳಿದರು ಅಷ್ಟೆ. ಇರುವ ಪ್ರತಿಮೆಯ ಬಗ್ಗೆ ಗಮನವೂ ಇಲ್ಲ, ತೆಗೆಯುವುದರ ಬಗ್ಗೆ ಉತ್ಸಾಹವೂ ಇಲ್ಲ, ಇನ್ನೇನು ಪತ್ತೆ ಮಾಡುವುದು? ತಳಮಟ್ಟದವರೆಗೂ ಬೇರು ಬಿಟ್ಟಿದ್ದ ಗಾರ್ಡನನ್ನು ಎಬ್ಬಿಸಲು ಆಗಲೇ ಇಲ್ಲ.

ಗಂಗೋತ್ರಿಯಲ್ಲಿ ತಮಿಳು ನಾಡಿನ ಅನೇಕ ವಿದ್ಯಾರ್ಥಿಗಳಿದ್ದರು. ಅವರದು ಬೇರೆ ಭಾಷೆಯನ್ನು ಕಲಿಯದ, ತಮಿಳನ್ನು ನಮಗೇ ಕಲಿಸುವ ಹಠ. ಬೇರೆ ಬೇರೆ ರಾಜ್ಯಗಳವರ ನಮಗೆ ಅರ್ಥವಾಗದ ಹಿಂದಿ. ಈ ಮಧ್ಯೆ ಗಂಗೋತ್ರಿ ಆವರಣದಲ್ಲಿ ತಲೆ ಎತ್ತುತ್ತಿದ್ದ ಹರಕು ಇಂಗ್ಲೀಷ್. ಇದಲ್ಲದೇ ಕನ್ನಡದವರಿಗೂ ಕನ್ನಡದ ಬಗ್ಗೆ ಕೀಳರಿಮೆ. ಹತ್ತಿರದಲ್ಲಿದ್ದ ರೀಜನಲ್ ಕಾಲೇಜು, ಮೆಡಿಕಲ್, ಇಂಜಿನಿಯರಿಂಗ್ ಕಾಲೇಜುಗಳು ಕನ್ನಡಕ್ಕು ತಮಗು ಸಂಬಂಧವೇ ಇಲ್ಲ ಎನ್ನುವಂತೆ ವರ್ತಿಸುತ್ತಿದ್ದವು. ಇಂತಹ ಉಸಿರು ಕಟ್ಟಿಸುವ ವಾತಾವರಣದಲ್ಲಿ ಎಸ್.ವೈ.ಎಸ್.ನ 'ಇಂಗ್ಲಿಷ್ ಹಠಾವೋ' ನೀತಿಗನುಗುಣವಾಗಿ 'ಇಂಗ್ಲಿಷ್ ಇಳಿಸಿ ಕನ್ನಡ ಬಳಸಿ ಚಳುವಳಿ ಹುಟ್ಟಿಕೊಂಡಿತು.

ಬಹುಶಃ 1968 ಡಿಸೆಂಬರ್ ತಿಂಗಳಿನ ಒಂದು ಸಂಜೆ, ಗಾಂಧಿ ಸರ್ಕಲ್‌ನಿಂದ ಹೊರಟ "ಇಂಗ್ಲೀಷ್ ಇಳಿಸಿ ಕನ್ನಡ ಬಳಸಿ" ಮೆರವಣಿಗೆ ಕೆಲವು ರಸ್ತೆಗಳಲ್ಲಿ ಸಂಚರಿಸಿ ಪುರಭವನದ ಬಳಿ ಸೇರುವಾಗ ಸಂಜೆ 6 ಗಂಟೆಯಾಗಿತ್ತು. ಎಸ್.ವಿ. ಪರಮೇಶ್ವರಭಟ್ಟ, ಕೆ.ವೆಂಕಟರಾಮಪ್ಪ, ಯು.ಆರ್. ಅನಂತಮೂರ್ತಿ ಮುಂತಾದವರು ಮೆರವಣಿಗೆಯ ಮುಂಭಾಗದಲ್ಲಿದ್ದರು. ನಾವು ಆ ಜಾಗಕ್ಕೆ ಸೇರುವ ಮುಂಚೆಯೇ ಅಲ್ಲಲ್ಲೆ ಚದುರಿದಂತಿದ್ದ ಈ ಚಳವಳಿಯ ವಿರೋಧಿಗಳು ಕಾಣಿಸಿದರು. ನಾವು ಅಲ್ಲಿಗೆ ತಲುಪಿದ ಕೂಡಲೆ ಅವರೆಲ್ಲ ಒಟ್ಟಾಗಿ ವಿರೋಧಿ ಘೋಷಣೆಗಳನ್ನು ಹಾಕುತ್ತ, ಮುಂದಿದ್ದ ಹಿರಿಯರನ್ನೆಲ್ಲ ತಳ್ಳುತ್ತ, ಎಲ್ಲರನ್ನು ಅಲ್ಲಿಂದ ಓಡಿಸಲು

ನುಗ್ಗಿದರು. ಯಾರ ಮಾತನ್ನು ಯಾರೂ ಕೇಳದ ಪರಿಸ್ಥಿತಿಯುಂಟಾಯಿತು. ಇಂತಹ ದೊಡ್ಡ ಗೊಂದಲದಲ್ಲಿ ಅನಂತಮೂರ್ತಿ ರಭಸವಾಗಿ ನುಗ್ಗುತ್ತ ಅಲ್ಲಿದ್ದ ಕಟ್ಟೆಯನ್ನು ವೇದಿಕೆಯನ್ನಾಗಿ ಮಾಡಿಕೊಂಡು ಕೂಗಾಡುತ್ತಿದ್ದವರನ್ನೆಲ್ಲ ಹತ್ತಿರಕ್ಕೆ ಕರೆದರು. "ನಾವು ನಮ್ಮ ಅಭಿಪ್ರಾಯವನ್ನು ಹೇಳುತ್ತೇವೆ ಅನಂತರ ನೀವು ನಿಮ್ಮ ವಿಷಯವನ್ನು ಹೇಳಿ" ಎಂದರು. ಆ ದಿನ ಅವರು ಮಾತನಾಡಿದುದು, ಸುಮಾರು ಒಂದು ಗಂಟೆಯ ಕಾಲ. ಕನ್ನಡ ವಿರೋಧಿಗಳಿಗೆ ವಿಚಾರಗಳನ್ನು ತಿಳಿಸುವುದು ಹಾಗಿರಲಿ, ಅವರ ಮನಸ್ಸನ್ನು ಗೆಲ್ಲುವಂತಾಯಿತು. ಅನಿರೀಕ್ಷಿತ ತಿರುವಿನಿಂದ ಸಭೆ ಶಾಂತವಾಗಿ ಮುಕ್ತಾಯವಾಯಿತು.

ಒಂದು ದಿನ, ಮೈಸೂರಿನಲ್ಲಿ ಪ್ರಸಿದ್ಧವಾಗಿದ್ದ, ಮಾಡರ್ನ್ ಹಿಂದೂ ಹೊಟೆಲ್ ಎಂದು ನೆನಪು– ಅಲ್ಲಿಗೆ ನಂಜುಂಡಸ್ವಾಮಿ ನಮ್ಮೆನ್ನೆಲ್ಲ ಕರೆದುಕೊಂಡು ಹೋದರು. ಎಲ್ಲರಿಗೂ ಯಾವುದೋ ಒಂದು ತಿಂಡಿ ತರಿಸಿದರು. ಕಾಫಿಯೂ ಬಂತು, ಜೊತೆಗೆ ಬಿಲ್ ಬಂತು. ನಂಜುಂಡಸ್ವಾಮಿ ತಗಾದೆ ಪ್ರಾರಂಭಿಸಿದರು. "ಸ್ವಾಮಿ, ನಿಮ್ಮ ತಿಂಡಿ–ಕಾಫಿ ದರ ನಾವು ಒಪ್ಪೋದಿಲ್ಲ. ಯಾವ ದರಕ್ಕೆ ಯಾವ ಕ್ವಾಲಿಟಿ–ಕ್ವಾಂಟಿಟಿ ಅನ್ನೊದಕ್ಕೆ ಏನಿದೆ ಆಧಾರ? ನೀವು ಕೊಟ್ಟಷ್ಟು ತಿಂಡಿಗೆ ನಾವು ಕೊಟ್ಟಷ್ಟು ದುಡ್ಡು ತಗೋಬೇಕು...ತಿಳೀತಾ?" ಎಂದರು. ಮಾತಿಗೆ ಮಾತು ಬೆಳೆಯಿತು. ಸಾಹುಕಾರ ಪೊಲೀಸರನ್ನು ಕರೆಸಿದ. ಒಬ್ಬ ಸಬ್‌ಇನ್ಸ್‌ಪೆಕ್ಟರ್, ಒಂದಿಬ್ಬರು ಪ್ಯಾದೆಗಳು ಬಂದರು. ಪರ–ವಿರೋಧಿಗಳಿಬ್ಬರೂ ತಮ್ಮ ವಾದಗಳನ್ನು ಇನ್ಸ್‌ಪೆಕ್ಟರ್ ಮುಂದೆ ಮಂಡಿಸಿದರು. ಅವರಲ್ಲಿ ಒಬ್ಬ ಪ್ಯಾದೆಗೆ ನಂಜುಂಡಸ್ವಾಮಿ ಪರಿಚಯವಿದ್ದಿರಬೇಕು, ಆತ ಇನ್ಸ್‌ಪೆಕ್ಟರ್ ಕಿವಿಯಲ್ಲಿ ಏನೋ ಹೇಳಿದ. ಕೂಡಲೇ ಇನ್ಸ್‌ಪೆಕ್ಟರ್ "ಸ್ವಾಮಿ ಸಾಹುಕಾರ್ರೆ, ಅವರು ಹೇಳೋದು ನಿಜವೆ, ಅವರೇನು ದುಡ್ಡು ಕೊಡಲ್ಲ ಅಂತ ಹೇಳ್ತಿಲ್ಲ. ಇಂಥದ್ರಲ್ಲಿ ನಾವು ಮಧ್ಯಪ್ರವೇಶ ಮಾಡೋ ಹಾಗಿಲ್ಲ. ನೀವು ನೀವೆ ಬಗೆಹರಿಸ್ಕೊಳ್ಳಿ" ಎಂದು ಹೇಳಿ ಅವರು ಹೊರಟೇಬಿಟ್ಟರು. ಸಾಹುಕಾರ ಕೈಮುಗಿಯುತ್ತ "ಸ್ವಾಮಿ, ನೀವು ಏನೂ ದುಡ್ಡು ಕೊಡೋದೆ ಬೇಡ, ಇನ್ನು ಮುಂದೆ ನಮ್ಮ ಹೊಟೇಲಿಗೆ ದಯವಿಟ್ಟು ಬರಬೇಡಿ" ಎಂದ. ನಂಜುಂಡಸ್ವಾಮಿ "ನೀವು ಹಾಗೆ ಹೇಳೋಹಾಗಿಲ್ಲ, ಇದು ಸಾರ್ವಜನಿಕ ಹೋಟೆಲ್. ಬರಬೇಡಿ ಅಂತ ನೀವು ಹೇಳಿದ್ರೆ ಜಿಲ್ಲಾಧಿಕಾರಿಗಳಿಗೆ ದೂರು ಕೊಡಬೇಕಾಗುತ್ತೆ" ಎಂದರು. ಆತ ಸುಮ್ಮನಾದ. ಎಲ್ಲರೂ ಹಿಂತಿರುವಾಗ ಪ್ರಭಾಕರ ಅಥವಾ ಮಂಜುನಾಥ" ಎಸ್.ವೈ.ಎಸ್. ಗೆ...ಜಿಂದಾಬಾದ್" ಎಂದು ಕೂಗು ಹಾಕಿದರು.

ಮತ್ತೊಂದು ಸ್ವಾರಸ್ಯದ ವಿಷಯವೆಂದರೆ, ಹುಡುಗರಲ್ಲಿ ಈ ರೀತಿವ್ಯಕ್ತಪಡಿಸುವ ಪ್ರವೃತ್ತಿ ಹೆಚ್ಚಾದಂತೆ, ನಂಜುಂಡಸ್ವಾಮಿ ಅವರಿಗೇ ಅದು ಕೆಲವೊಮ್ಮೆ ಕೈಕೊಡುತ್ತಿತ್ತು. ಇರ್ವಿನ್ ರಸ್ತೆ, ಹಾರ್ಡಿಂಜ್ ಸರ್ಕಲ್ ಹೆಸರು ಕೀಳಬೇಕು ಎಂದು ಅವರು ಹೇಳಿದಾಗ "ಸುಮ್ನಿರಿ ಸಾರ್, ಡೇವಿಡ್ ಗಾರ್ಡನ್‌ನ್ನೇ ತೊಲಗಿಸ್ಲಿಕ್ಕೆ ಆಗ್ಲಿಲ್ಲ. ಇದೆಲ್ಲ ಮಾಡೋಕೆ ಸಾಕಷ್ಟು ಸಿದ್ಧತೆ ಬೇಕು ಸಾರ್, ಮೊದಲು ನಾವಿಲ್ಲಿಗೆ ಮೈಸೂರಿಗೆ ಬಂದ ಕೆಲಸ (ವಿದ್ಯಾಭ್ಯಾಸ) ಪೂರೈಸ್ತಿವಿ" ಎಂದರು. ಚಿಕ್ಕಮಗಳೂರಿನ ಎಸ್‌ವೈಎಸ್ ಸಮಾವೇಶದಲ್ಲಿ ಒಬ್ಬ ಯುವಕ ಮಲೆನಾಡು ಹಳ್ಳಿಗಳ ವಿದ್ಯಾರ್ಥಿಗಳ ಸಮಸ್ಯೆಗಳನ್ನು

ಹೇಳುತ್ತಿದ್ದ. ನಂಜುಂಡಸ್ವಾಮಿ "ಏನು ಬಹಳ ಮಾತಾಡ್ತೀರಿ? ಇಲ್ಲಿ ನೀವೆಷ್ಟು ಹಳ್ಳಿ ನೋಡಿದಿರಿ?" ಎಂದು ಕೇಳಿದರು. ಆ ಯುವಕ "ಮೈಸೂರು ಕಡೆ ನೀವೆಷ್ಟು ಹಳ್ಳಿ ನೋಡಿದಿರಿ? ಅರಗನಹಳ್ಳಿ ಅಂತ ಇದೆ. ನೀವು ನೋಡಿದ್ದೀರ" ಎಂದು ತಿರುಗಿಬಿದ್ದ. ಶಿವಮೊಗ್ಗದ ಒಂದು ಎಸ್.ವೈ.ಎಸ್ ಸಭೆಯಲ್ಲಿ "ನಂಜುಂಡಸ್ವಾಮಿ ವಿದ್ಯಾರ್ಥಿ ಚಳವಳಿ ಸ್ಥಗಿತವಾಗಿದೆ. ಮೌಢ್ಯ, ಜಾತಿ ಸಮಸ್ಯೆ, ನಿರುದ್ಯೋಗ ಹೆಚ್ಚಾಗಿದೆ. ನೀವೆಲ್ಲ ಸುಮ್ಮನಿದೀರಿ. ನಾನು ಕರೆ ಕೊಡ್ತಿದೀನಿ, ನೀವೆಲ್ಲ ಚಳವಳಿ ಪ್ರಾರಂಭಿಸಿ" ಎಂದರು. ಓರ್ವ ವಿದ್ಯಾರ್ಥಿನಿ ಎಂದು ನಿಂತು 'ಕರೆ ಕೊಡೋಕೆ ನೀವ್ಯಾರು? ಈ ತರಹ ಕರೆ ಕೊಡೋರು ಬಹಳ ಮಂದಿ ಇದ್ದಾರೆ. 'ನೀವೇನು ಜೆ.ಪಿ.ನಾ? ಲೋಹಿಯಾನಾ?' ಎಂದರು ಆದರೆ ಇಂತಹ ವಿರೋಧಗಳಿಗೇನು ಅವರು 'ಶಾಕ್' ಆಗುತ್ತಿರಲಿಲ್ಲ. ನಿಧಾನವಾಗಿ ಅವರು ಅವುಗಳನ್ನು ಬಂದ ದಾರಿಗೇ ಹಿಂದಿರುಗಿಸುತ್ತಿದ್ದರು.

ದಿನದಿಂದ ದಿನಕ್ಕೆ ಅನೇಕ ಯುವಕರಿಗೆ ಎಸ್.ವೈ.ಎಸ್ ಒಂದು ಅಗತ್ಯವೆನಿಸುವ ಕೇಂದ್ರವಾಯಿತು. ಏನಿಲ್ಲವೆಂದರೂ ಅನೇಕ ಸ್ನೇಹಿತರು ಭೇಟಿಯಾಗಿ ಹರಟೆ ಹೊಡೆಯಲಿಕ್ಕಾದರೂ ಸೇರುತ್ತಿದ್ದರು. ಹಳ್ಳಿಯ ಕಡೆಗಳಿಂದ ಬಂದಿದ್ದ ಅನೇಕರು ಬುದ್ಧಿವಂತರು; ಆದರೆ ಅವರಲ್ಲಿ ಸಂಕೋಚ, ಹಿಂಜರಿತದ ಸ್ವಭಾವವಿದ್ದುದು ಕ್ರಮೇಣ ಪರೆ ಕಳಚಿದಂತಾದರು. ಎಸ್‌ವೈಎಸ್ ಬೀರಿದ ಮತ್ತೊಂದು ಪ್ರಭಾವವೆಂದರೆ, ಯುವಕರಲ್ಲಿ ನೈತಿಕ ಬಲವನ್ನು ತುಂಬಿದುದು. ಸ್ವಾರ್ಥಕ್ಕಾಗಲಿ, ತತ್ಕಾಲದ ಲಾಭಕ್ಕಾಗಲಿ ಹಾತೊರೆಯದ ಮನಸ್ಥಿತಿಯನ್ನು ಬೆಳೆಸಿತು. ತಾವು ವ್ಯಾಸಂಗ ಮಾಡುತ್ತಿದ್ದ ವಿಷಯಕ್ಕಿಂತ ಭಿನ್ನವಾದ ಅನೇಕ ವಿಷಯಗಳ ಬಗ್ಗೆ ಮನಸ್ಸು ತೆರೆಯುವಂತೆ ಮಾಡಿತ್ತು. ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಲ್ಲಿ ದೃಢತೆಯೂ ಸ್ಥೈರ್ಯವೂ ಕಂಡುಬಂದವು. ಇದೇ ಕಾರಣದಿಂದ ಗಂಗೋತ್ರಿಯಲ್ಲಿದ್ದ ಕೆಲವು ಸಂಕುಚಿತ ದೃಷ್ಟಿಯ ಪ್ರೊಫೆಸರ್‌ಗಳನ್ನು ಎದುರುಹಾಕಿಕೊಂಡರು. ಹಾಸ್ಟೆಲ್‌ಗಳಲ್ಲಿ ಭ್ರಷ್ಟಾಚಾರವೆಸಗುತ್ತಿದ್ದ ವಾರ್ಡನ್‌ಗಳು, ಪ್ರಿಫೆಕ್ಟರ್‌ಗಳು ಮೂಲೆ ಸೇರಿದರು. ಕನ್ನಡದ ಬಗ್ಗೆ ಮೂಗು ಮುರಿಯುತ್ತಿದ್ದ ಕುಲಪತಿ ಶ್ರೀಮಾಲಿ ಬದಲಾದರು. ಕಲಾ ವಿಭಾಗದಲ್ಲಿ ಕೆಲವು ಪ್ರಾಧ್ಯಾಪಕರು ಕನ್ನಡದಲ್ಲಿ ಪಾಠ ಮಾಡಲು ಪ್ರಯತ್ನಿಸತೊಡಗಿದರು.

ಎಸ್.ವೈ.ಎಸ್. ರಾಜ್ಯಾದಂತ ವ್ಯಾಪಿಸಲಿಲ್ಲ, ಪ್ರಬಲ ಶಕ್ತಿಯಾಗಿ ಬೆಳೆಯಲಿಲ್ಲ– ಬಿಹಾರ್‌ನಲ್ಲಿ ಬೆಳೆದಂತೆ, ಸಮಾಜವಾದಿ ದೃಷ್ಟಿಯುಳ್ಳ ಯುವಕರನ್ನು ಸ್ಥಳೀಯವಾಗಿ, ಸಾಂದರ್ಭಿಕವಾಗಿ ಒಟ್ಟುಗೂಡಿಸುವ ಕಾರ್ಯವನ್ನು ಮಾಡುತ್ತಿತ್ತು. ನಮ್ಮ ನಡುವೆ ಇರುವ ಜಾತಿ–ಮತ, ದಾರಿದ್ರ್ಯ, ಭ್ರಷ್ಟತೆ, ಸರ್ವಾಧಿಕಾರಿ ಧೋರಣೆಗಳಿಂದ ಮುಕ್ತವಾದ ಮನಸ್ಥಿತಿಗೆ ಸಜ್ಜುಗೊಳಿಸಲು ಎಸ್.ವೈ.ಎಸ್. ಒಂದು ಜೀವಂತ ವೇದಿಕೆಯಾಗಿತ್ತು. ಇದನ್ನು ಮರೆಯಲು ಸಾಧ್ಯವಿಲ್ಲ.

–ಎಂ.ಬಿ. ನಟರಾಜ್

(ಆಗಸ್ಟ್ 2012)

ನನ್ನ ಕಣ್ಣೆದುರೇ ಕಳೆದು ಹೋದ ಸಮಾಜವಾದಿ ಪಕ್ಷ...

ಎಪ್ಪತ್ತರ ದಶಕದಲ್ಲಿ ಸಮಾಜವಾದಿ ಯುವಜನ ಸಭಾದ ಸಕ್ರಿಯ ಕಾರ್ಯಕರ್ತರಾಗಿದ್ದ ದೇವನೂರ ಮಹಾದೇವ ಅವರ ಈ ಲೇಖನ ಲೋಹಿಯಾ ಪ್ರಭಾವ ಒಂದು ಸಂಘಟನೆಯ ನೆಲೆಯಲ್ಲಿ ಏಕೆ ಕ್ಷೀಣಿಸುತ್ತಾ ಹೋಯಿತು ಎಂಬುದರ ಸುಳಿವುಗಳನ್ನು ತನ್ನ ದಟ್ಟ ವಿಷಾದ ಮತ್ತು ಆತ್ಮಶೋಧನೆಗಳ ನೆಲೆಯಲ್ಲಿ ಮಂಡಿಸುತ್ತಾ ಹೋಗುವುದನ್ನು ಓದುಗರು ಗಮನಿಸಬಹುದು. ಕಳೆದ ಎಂಭತ್ತರ ದಶಕದಲ್ಲಿ ಸಮಾಜವಾದಿ ಚಳುವಳಿಯ ಎರಡು ಕ್ರಿಯಾಶೀಲ ಟಿಸಿಲುಗಳಂತಿದ್ದ ದಲಿತ ಮತ್ತು ರೈತ ಚಳುವಳಿಗಳನ್ನು ಒಂದು ಸಾಮಾನ್ಯ ವೇದಿಕೆಗೆ ತಂದು ಹೊಸ ಸಮಾಜವಾದಿ ರಾಜಕೀಯ ಶಕ್ತಿಯಾಗಿ ರೂಪಿಸಲು, ಅವರೂ ಸೇರಿದಂತೆ ಅಂದಿನ ಕೆಲವು ಕನಸುಗಾರರು ಪ್ರಯತ್ನವೊಂದನ್ನು ನಡೆಸಿದರು. ಅದಕ್ಕೆ ಪೂರಕವಾಗಿ ಮಹಾದೇವ ದಲಿತ ಸಂಘರ್ಷ ಸಮಿತಿಯ ಪತ್ರಿಕೆ 'ಪಂಚಮ'ದ 'ದ+ರೈ' ವಿಶೇಷಾಂಕಕ್ಕಾಗಿ ರೈತ ನಾಯಕ ಪ್ರೊ॥ ನಂಜುಂಡಸ್ವಾಮಿಯವರನ್ನು ಸಂದರ್ಶಿಸಿದ ಸಂದರ್ಭದಲ್ಲಿ ಅದಕ್ಕೆ ಪೀಠಿಕೆಯಾಗಿ ಬರೆದದ್ದು

–ಡಿಎಸ್ಸೆನ್

ನಾನು ನಂಜುಂಡಸ್ವಾಮಿಯವರನ್ನು ಸಂದರ್ಶನ ಮಾಡಲು ಬಯಸಿರಲಿಲ್ಲ. ಯಾಕೆಂದರೆ ಇಸವಿ 1968, ನಂಗಿನ್ನೂ ಮೀಸೆ ಬಂದಿರಲಿಲ್ಲ. ನಂಜನಗೂಡ ಕೋರ್ಟಲ್ಲಿ ಒಬ್ಬ ಲಾಯರು ಕನ್ನಡದಲ್ಲಿ ವಾದಿಸುತ್ತಿದ್ದರು. ಹೊರಗೊಬ್ಬ ಸೂಟುಬೂಟಿನ ಗಡ್ಡಧಾರಿ–ಬಹುಶಃ ಆ ಗಡ್ಡದ ಒಂದು ಕೂದಲೂ ಕೊಳೆ ಇಲ್ಲದಂತಹದು– ಹಣೆಗಂಟಿಕ್ಕಿ ಸಿಗರೇಟು ಸೇದುತ್ತಾ ನಿಂತಿತ್ತು. ದೇವರ ದಯದಿಂದ ಆಗ ನನ್ನ ಜೇಬಲ್ಲೊಂದು ಸಿಗರೇಟಿತ್ತು. ಆ ಹಣೆಗಂಟನ್ನು ಇನ್ನೂ ಹೆಚ್ಚಿಸಬೇಕೆಂದು ನಾನು ಆತನ ಬಳಿಗೆ ಹೋಗಿ ಸಿಗರೇಟು ಮುಂದೊಡ್ಡಿ ಬೆಂಕಿ ಕೇಳಿದೆ. ಆ ವ್ಯಕ್ತಿಯ ಮುಖದಲ್ಲಿ ಯಾವ ವಿಕಾರವೂ ಕಂಡುಬರದೆ ತಾನೆ ಬೆಂಕಿ ಕಡ್ಡಿ ಗೀರಿ ನನ್ನ ಸಿಗರೇಟಿಗೆ ಹಚ್ಚಿತು. ಆತನ ಮುಖದ ಹಣೆಗಂಟು ಮಾಯವಾಗಿ ಪ್ರಸನ್ನತೆ ಮೂಡಿತು! ಆತನ ಹಣೆಗಂಟು ನನ್ನ ಹಣೆಗೆ ಬರುವಂತಾಯ್ತು.

ಆರ್.ಎಸ್.ಎಸ್.ನಲ್ಲಿ ಇದ್ದ ನನ್ನನ್ನು, ನನ್ನ ನಿಜಗುರು ಸೂ. ರಮಕಾಂತ ಸಮಾಜವಾದಿ ಪಕ್ಷಕ್ಕೆ ತಂದ ಮೇಲೆ ತಿಳಿಯಿತು–ಕನ್ನಡದಲ್ಲಿ ವಾದಿಸುತ್ತಿದ್ದ ಲಾಯರು ಟಿ.ಎನ್. ನಾಗರಾಜ್‌ರವರು, ಆ ಗಡ್ಡದಾರಿಯು ಪ್ರೊ॥ ನಂಜುಂಡಸ್ವಾಮಿಯವರು. ಅಂದಿನಿಂದ ನಂಜುಂಡಸ್ವಾಮಿಯವರೊಡನೆ ಒಡನಾಡಿದ್ದೇನೆ. ಆಗಲೇ ಅಂದರೆ ಪಿ.ಯು.ಸಿ. ಫೇಲಾದ ನನ್ನನ್ನು ಆ ಚಿಕ್ಕ ಹುಡುಗನನ್ನು ತನ್ನ ಸಮಾನವಾಗಿ ಕಂಡ ದೊಡ್ಡ ಮನುಷ್ಯ ಆತ. ಆತ ಯಾಕೋ ನನ್ನೊಬ್ಬನ್ನು ಸ್ವಲ್ಪವಾದರೂ ಬಿಟ್ಟು

ಇತರರೊಡನೆ ಕಟುವಾಗಿ ನಡೆದುಕೊಂಡದ್ದನ್ನು ನಾನು ಬಲ್ಲೆ. ಆಗಲೂ ಎಷ್ಟೋ ಸಲ ನಾನು ಮಹಾ ದೊಡ್ಡವನಂತೆ ಆತನ ಸುಮ್ಮನಿರಿಸಿದ್ದೇನೆ. ಉದಾಹರಣೆಗೆ– 'ಅನಂತಮೂರ್ತಿಯಂಥವರು ಆರೆಸ್ಸೆಸ್‌ನಲ್ಲಿ ಇದ್ದಿದ್ದರೆ, ಆರೆಸ್ಸೆಸ್ ಕುಣಿದಾಡುತ್ತಿತ್ತು. ಆ ಹೆಸರು ಹೇಳಿ ಸಂಘಟನೆ ಮಾಡುತ್ತಿತ್ತು. ನಾವು ಯಾಕೆ ಹೀಗೆ?' ಹೀಗೆ ಅನಂತಮೂರ್ತಿಗೆ ಕೇಳುತ್ತಿದ್ದೆ–'ನೀವೇ ಬ್ರಾಹ್ಮಣರ ಬಗ್ಗೆ ಕಟುವಾಗಿ ಮಾತನಾಡಿ ಅದನ್ನು ನಂಜುಂಡಸ್ವಾಮಿಯವರು ಮಾತಾಡಿದರೆ ಅಸಹನೆಗೆ ಒಳಗಾಗುತ್ತೀರಿ. ಯಾಕೆ ಹೀಗೆ?'

ನಾನು ಅತ್ತೆನು

ನಂಜುಂಡಸ್ವಾಮಿಯವರ ಬಗ್ಗೆ ನಾನು ತಾಳಿಕೊಳ್ಳಲಾರದ್ದು ಒಂದು ಮಾತ್ರವೇ: ಊರು ಬಿಟ್ಟ ರಮೇಶ್ ಬಂದಗದ್ದೆ ಬಗ್ಗೆ 'ಹೊಟ್ಟೆಗೆ ಗತಿ ಇಲ್ಲದೆ ಓಡಾಡಿಕೊಂಡಿದ್ದಾನೆ' ಎಂದದ್ದು ನನ್ನ ಹೊಟ್ಟೆಯನ್ನು ಕಿವುಚುತ್ತಿದೆ. ನಮ್ಮಂಥ ಹೊಟ್ಟೆಗಿಲ್ಲದವರೇ ಸಮಾಜವಾದಿ ಪಕ್ಷವಾಗದಿದ್ದರೆ ಇನ್ನಾರು ಆಗಬೇಕು? ನಾನು ಅತ್ತೆ. ಕರ್ನಾಟಕದಲ್ಲಿ ಸಂಯುಕ್ತ ಸಮಾಜವಾದಿ ಪಕ್ಷವೂ ಎರಡಾಗಿ ಒಂದಾಗುವಾಗ ಸೂ. ರಮಾಕಾಂತರೇ ಅದನ್ನು ಕೆಡಿಸಿದರು. ನಾನು ಅತ್ತೆ. ಇದನ್ನು ನಂಜುಂಡಸ್ವಾಮಿ ಓದಿದರೆ, 'ನೀವು ಅಳುತ್ತಲೇ ಇರಬೇಕಾಗುತ್ತೆ ಗೊತ್ತೇನು?' ಅಂತಾರೆ. ಆದರೆ ಈ ಜಗದ ಮಾನವ ಕೋಟಿಯನ್ನು ಏಕಮಾನವರನ್ನಾಗಿ ಕನಸು ಕಾಣುವ ನಾವು, ಕೇವಲ ನಾವೇ ಮಾನವರಾಗದಿದ್ದರೆ ನಾವು ಮಾಡುವುದಾರೂ ಏನನ್ನು?

ಹೊಸತಾಗಿ ಹುಟ್ಟಲಾರೆವ?

ಈ ನಾಡ ಜೀವನಾಡಿ ಬಲ್ಲ ಜೆ.ಎಚ್. ಪಟೇಲರು ಅಧಿಕಾರ ಬಿಟ್ಟು ಬರಲಾರರೆ? ದೊಡ್ಡ ನಾಯಕನಾಗಬಹುದಾಗಿದ್ದ ಕಾಗೋಡು ತಿಮ್ಮಪ್ಪನವರು ತಾವು ಮಾಡಿಕೊಂಡ ಆಸ್ತಿ–ಹಣವನ್ನು ಸುಟ್ಟು ಬರಲಾರರೆ? 41 ವರ್ಷವಾಗಿದ್ದರೂ 14 ವರ್ಷದಂತಾಡುವ ಪ. ಮಲ್ಲೇಶರಿಗೆ ವಯಸ್ಸು ಆಗದೆ? ನಮ್ಮ ಶಂಕರಪ್ಪ

ಯಂಗ್ ಆಗಿ ಸಿನೆಮಾ ಮಾಡಲಾರನೆ? ಚಿಲುಮೆ ನೀರಂಥ ಸೃಷ್ಟಿಕರ್ತ ಲಂಕೇಶ್ ತಾನೊಂದು ನಕ್ಷತ್ರವೆಂದೂ ಉಳಿದುದು ಗ್ರಹವೆಂಬ ಭ್ರಮಾ ತ್ಯಜಿಸಿ ಕ್ಯಾತನ ಪಡ್ಡೆ ಗ್ರಹದಿಂದ ಹೊರಬರಲಾರರೇ? ಕೋಣಂದೂರು ಲಿಂಗಪ್ಪ ಮೊದಲಿನ ಪ್ರೀತಿಯ ಮುದ್ದೆಯಾಗಲಾರರೆ? ಚುನಾವಣಾ ಹಣ ಇಟ್ಟುಕೊಂಡಿರುವವರೆಂದು ಅಪವಾದಕ್ಕೆ ಒಳಗಾಗಿರುವ ತಂದೆಯಂಥ ಟಿ.ಎನ್. ನಾಗರಾಜರು ಆ ಅಪವಾದ ಕಳೆದುಕೊಳ್ಳಲಾರರೆ?

ಓ ಪ್ರಕೃತಿಯೇ ಓ ಕಾಲವೇ ಹೇಳು–ನಾವೇ ಹೊಸತಾಗಿ ಹುಟ್ಟಲಾರೆವ?

ತೇಜಸ್ವಿ ತಪ್ಪಸ್

ಆ ತೇಜಸ್ವಿ ಮಾತ್ರ ಇವ್ರ ಸಾವಾಸನೇ ಬ್ಯಾಡ ಮಾರಾಯ ಅಂತ ಒಂಟಿಯಾಗಿ ಚಿಂತಿಸುತ್ತ ಮೀನು ಹಿಡಿಯುತ್ತ ತಪಸ್ಸು ಮಾಡುತ್ತ ಸಿದ್ಧಿಗಾಗಿ ಆ ಸಿದ್ಧಿಯಾದ ಯೋಗ ನಿದ್ರಾವು ಸಿಗುತ್ತೋ ಅಥವಾ ಸಿಗುವುದಿಲ್ಲವೋ ಎಂಬಂಥ ಆತಂಕದಿಂದ ಕಾಯುತ್ತಿರುವರು. ಯಾವ ತೇಜಸ್ವಿಯು ಯವ ಯೋಗನಿದ್ರಾ ಸಿದ್ಧಿಗಾಗಿ

ತಪಸ್ಸಾಚರಣಾ ಮಾಡುತ್ತಿರುವರೋ ಆ ಯೋಗನಿದ್ದಾವು ನನ್ನಗಂದು ಅದಾವ ತಪಸ್ಸಿಲ್ಲದೆ ನನಗೆ ಹುಟ್ಟುಟ್ಟುತ್ತಲೇ ಸಿದ್ಧಿಸಿಬಿಟ್ಟು ನಾನೋ ನಿದ್ದೆಯಲ್ಲಿರುವೆ.

ದ+ರೈ ನಾಡ ಕಟ್ಟಬಲ್ಲವೇ?

ಇಷ್ಟೆಲ್ಲಾ ಇದ್ದೂ ಪ್ರೊ॥ ನಂಜುಂಡಸ್ವಾಮಿ ಮಾತುಗಳು ತಮ್ಮ ಕಟುತ್ವ ಕಳೆದುಕೊಂಡು ಹಣ್ಣಾಗಿರುವುದು, ಆಲೋಚನೆಯಲ್ಲಿ ತಾವು ಇರುವಂಥ ಸಂಘಟನೆಯೇ ಅಲ್ಲಾಡುವಂಥ ಎದೆಗಾರ ನುಡಿಗಳನ್ನು ಆಡಿರುವುದು ಅವರ ನುಡಿ ನಡೆಯಾಗುವುದಾರೆ ನಾವೆಲ್ಲ ನಮ್ಮದೆಲ್ಲವನ್ನೂ ಕಳೆದುಕೊಂಡು ಒಂದಾಗುವುದರ ಚಿಗುರು. ಆದರೆ ರೈತ ಸಂಘವು ಅಸ್ಪೃಶ್ಯ ಕೂಲಿ ನಾಯಕತ್ವ ಪಡೆಯದೆ, ಹಾಗೇ ದಲಿತ ಸಂಘವು ಜಲಗಾರ ನಾಯಕತ್ವ ಪಡೆಯದೆ ಅವು ಎಷ್ಟೇ ಬೊಬ್ಬೆ ಹಾಕಿದರೂ ಅಷ್ಟೋ ಇಷ್ಟೋ ದಕ್ಕಿಸಿಕೊಳ್ಳಬಹುದೇ ಹೊರತು, ಅಂದರೆ ಅರೆಹೊಟ್ಟೆಯ ರೈತ ಸಂಘ ಮುಕ್ಕಾಲು ಹೊಟ್ಟೆ ತುಂಬಿಸಿಕೊಳ್ಳಬಹುದೇ ಹೊರತು ಹಾಗೇ ಹೊಟ್ಟೆಗಿಲ್ಲದ ದಲಿತ ಸಂಘ ಕಾಲು ಹೊಟ್ಟೆ ತುಂಬಿಸಿಕೊಳ್ಳಬಹುದೇ ಹೊರತು ಈ ನಾಡ ಕಟ್ಟುವ ಸಂಘಟನೆಗಳಾಗವು.

ದ+ರೈ ನಾಡ ಕಟ್ಟಬಲ್ಲವೇ?

–ದೇವನೂರ ಮಹಾದೇವ



ತುಮಕೂರಿನ ನಮ್ಮ ಸಮಾಜವಾದಿ ಸಂಸಾರ!

ಈ ಬಾರಿ 'ನಮ್ಮ ಸಮಾಜವಾದಿಗಳು' ಶೀರ್ಷಿಕೆಯಡಿ ಯಾರೇ ಒಬ್ಬ ಸಮಾಜವಾದಿ ನಾಯಕ ಅಥವಾ ನಾಯಕಿಯನ್ನು ಪರಿಚಯಿಸುತ್ತಿಲ್ಲ. ಬದಲಿಗೆ ಒಂದು ಸಮಾಜವಾದಿ ಸಮೂಹವನ್ನು ಪರಿಚಯಿಸುತ್ತಿದ್ದೇವೆ.

ತುಮಕೂರು ಹಲವು ವರ್ಷಗಳಿಂದ ಯುವ ಸಮಾಜವಾದಿಗಳ ಕೇಂದ್ರವಾಗಿದೆ. ಸಮಾಜವಾದಿ ಯುವಜನ ಸಭಾದ ಹಲವು ಕಾರ್ಯಕರ್ತರ ಸ್ಫೂರ್ತಿಯಿಂದ ನಿರ್ಮಾಣಗೊಂಡ ಈ ಯುವ ಸಮಾಜವಾದಿಗಳ ಕೂಟ ತುಮಕೂರು ಸೀಮೆಯಲ್ಲಿ ರೈತ ಚಳುವಳಿ, ದಲಿತ ಚಳುವಳಿಗಳಲ್ಲದೆ, ಜಾತಿ ವಿನಾಶ, ಬೌದ್ಧ ವಿಚಾರ ಪ್ರಸಾರ ಇತ್ಯಾದಿ ಸಮಾಜವಾದಿ ಆಶಯಗಳ ಕಾರ್ಯಕ್ರಮಗಳ ಹಿಂದಿನ ಚೇತನವಾಗಿ ಕೆಲಸ ಮಾಡಿದೆ. ಜಾತಿ ಕಟ್ಟುಗಳಿಂದ ಮುಕ್ತವಾದ ಈ ಸಮೂಹ ಈಗ ಸಮಾಜವಾದಿ ಭಾವ-ಬಾಂಧವ್ಯದ ಮೇಲೇ ಒಂದು ಸಮುದಾಯ ಪ್ರಜ್ಞೆಯನ್ನು ರೂಪಿಸುವ ಕೆಲಸದಲ್ಲೂ ತೊಡಗಿದೆ. ಇತರೆಡೆಯ ಸಮಾಜವಾದಿಗಳಿಗೆ ಮಾದರಿ-ಸ್ಫೂರ್ತಿಯಾಗಬಹುದಾದ ಇಂತಹ ಪ್ರಯತ್ನದ ಒಂದು ಕಥೆಯನ್ನು ಈ ಗುಂಪಿನ ಪ್ರಮುಖ ಕಾರ್ಯಕರ್ತೆಯರಲ್ಲೊಬ್ಬರಾದ ಶ್ರೀಮತಿ ಮಲ್ಲಿಕಾ ಬಸವರಾಜು ಇಲ್ಲಿ ವಿವರವಾಗಿ ನಿರೂಪಿಸಿದ್ದಾರೆ.

–ಡಿಎಸ್ಸೆನ್

ಸಮಾಜವಾದದ ಅರ್ಥವನ್ನು ಸ್ವಾತಂತ್ರ್ಯ, ಸಮಪಾಲು-ಸಮಬಾಳು, ಸಮಾನತೆ, ಸಮಚಿತ್ತ, ಭಿನ್ನ ಭೇದವಿಲ್ಲದ, ತಾರತಮ್ಯವಿಲ್ಲದ ಸಾಮರಸ್ಯದ ಬದುಕು, ಸಾಮಾಜಿಕ ನ್ಯಾಯ, ಇರುವೆಯನ್ನೂ ನೋಯಿಸದ ಜೀವ ಕಾರುಣ್ಯ, ಹೀಗೆ ಬಿಡಿ, ಬಿಡಿಯಾಗಿ, ಹೇಳಬಹುದೇ? ಹೌದು ಎಂದಾದರೆ, ತುಮಕೂರಿನ ಸಮಾಜವಾದಿ ಪರಂಪರೆಗೆ, ಹಳೆಯ ಇತಿಹಾಸವಿದೆ. ಈ ಜಿಲ್ಲೆಯಲ್ಲಿರುವ ಸಿದ್ಧರಬೆಟ್ಟ, ಸಿದ್ಧರ ಪರಂಪರೆ, ಇದಕ್ಕೆ ಉತ್ತಮ ಉದಾಹರಣೆ. ಇದಷ್ಟೇ ಅಲ್ಲದೆ, ನಾನು ಚಿಕ್ಕವಳಿದ್ದಾಗ ನಮ್ಮ ಹಳ್ಳಿಗಳಲ್ಲಿ 'ಗುರುಭಕ್ತಿ' ತಗೊಂಡವರನ್ನು ನೋಡಿದ್ದೆ. ಯಾವುದೇ ಹಳ್ಳಿಯ, ಯಾವುದೇ ಜಾತಿಯ ಹೆಣ್ಣು ಗಂಡು ಭೇದ ಭಾವ ಇಲ್ಲದೇ ಗುರುವೊಬ್ಬರಿಂದ 'ದೀಕ್ಷೆ' ಪಡೆದು ಗುರುಭಕ್ತಿ ತಗೊಂಡವರ ಗುಂಪಿಗೆ ಸೇರ್ತಿದ್ದರು.

ಹೀಗೆ ಗುರುಭಕ್ತಿ ತಗೊಂಡವರು ಪ್ರತಿ ಅಮವಾಸೆ-ಹುಣ್ಣಿಮೆಗಳಲ್ಲಿ, ಯಾರಾದರೊಬ್ಬ ಭಕ್ತರ ಮನೆಯಲ್ಲಿ ಸೇರಿ (ಅದೇ ಊರಾಗಬಹುದು, ಅಕ್ಕ ಪಕ್ಕದ ಊರಾದರೂ ಆಗಬಹುದು) ಒಬ್ಬರ ಪಕ್ಕ ಒಬ್ಬರು ವರ್ತುಲಾಕಾರವಾಗಿ ಕೂತು, ತತ್ತ್ವಪದ ಹಾಡ್ತಾ ಇದ್ದದ್ದನ್ನು ನಾವು ಮಕ್ಕಳು ಕುತೂಹಲದಿಂದ ನೋಡ್ತಾ ಇದ್ವಿ, ರಾತ್ರಿ ಇಡೀ ಹಾಡುವರೆಂದು ಕೇಳಿದ್ವಿ, ಇಂತಹ ಸಭೆ, ಗೋಷ್ಠಿಗಳು ಸಾಮಾನ್ಯವಾಗಿ ರಾತ್ರಿ 7.00/8.00 ಗಂಟೆ ಮೇಲೆ ಶುರುವಾಗ್ತಾ ಇದ್ವು, ಅಲ್ಲಿಗೆ ಮಕ್ಕಳು ಹೋದ್ರೆ ಕೆಟ್ಟು ಹೋಗ್ತಾರೆ ಅಂತ ನಮ್ಮ ನಮ್ಮ ಮನೆಗಳಲ್ಲಿನ ಹಿರಿಯರು,

ನಮ್ಮನ್ನು ಅಲ್ಲಿಗೆ ಹೋಗಲು ಬಿಡ್ತಾ ಇರಲಿಲ್ಲ. ಆದ್ರೆ ನಾವು ಬಿಡಬೇಕಲ್ಲ. ಗೋಷ್ಠಿ ಶುರುವಾಗುವುದಕ್ಕೂ ಮೊದಲೇ, ಸಂಜೆಗೆ ಅಲ್ಲಿಗೆ ಹೋಗಿ ಆ ಏಕತಾರಿಯ ತಂತಿ ಮೀಟಿ, ಗದರಿಸಿಕೊಂಡು ಮನೆಗೆ ಓಡಿ ಬರ್ತಿದ್ದೆವು. ಊಟಮಾಡಿ ಬೆಚ್ಚಗೆ ಅಮ್ಮನನ್ನೂ, ಅಜ್ಜಿಯನ್ನೂ ಅವುಚಿ ಮಲಗಿದರೂ ರಾತ್ರಿಯ ತಂಪು ಹೊತ್ತಿನಲ್ಲಿ, ದೂರದ ಮನೆಯಲ್ಲಿ, ಕೆಲವೊಮ್ಮೆ ಸಮೀಪದ ಹಳ್ಳಿಗಳಲ್ಲಿ ಗುರುಭಕ್ತಿ ತಗೊಂಡವರು ಹಾಡ್ತಿದ್ದ ತತ್ತ್ವಪದಗಳನ್ನು ಕೇಳ್ತಾ, ಕೇಳ್ತಾ, ರಾತ್ರಿ ಇಡೀ ಅರೆ ನಿದ್ದೆ, ಅರೆ ಎಚ್ಚರ. ಜಿಲ್ಲೆಯ ಬಹುಪಾಲು ಹಳ್ಳಿಗಳಲ್ಲಿ ಈ 'ಗುರುಭಕ್ತಿ' ಪರಂಪರೆ ಈಗಲೂ ಇದೆ.

ನಮ್ಮ ಸಮಾಜವಾದಿ ಗುಂಪು ಹೊರತುಪಡಿಸಿಯೂ ಜಿಲ್ಲೆಯಲ್ಲಿ ಸಮಾಜವಾದಿ ಚಟುವಟಿಕೆಯ ನೆಲೆಗಳು ಹಲವಾರು ಇವೆ. ನಾನು ನಮ್ಮ ಒಡನಾಟದಲ್ಲಿರುವ ನಮ್ಮದೇ ಆದ ಆಪ್ತ ವಲಯದ ಬಗ್ಗೆ ಮಾತ್ರ ಇಲ್ಲಿ ಬರೆಯುತ್ತಿರುವೆ. ಮೊದಲು, 1979 ರಿಂದ ಈವರೆಗೆ ನಾವು ಹಾದು ಬಂದ ಸಂಘ ಸಂಸ್ಥೆಗಳ ಬಗ್ಗೆ ತಿಳಿಸಿ, ಅನಂತರ ನಮ್ಮ ಒಡನಾಟದ ದಿನಗಳನ್ನು ಪರಿಚಯಿಸುವೆ.

1982–83 ರಲ್ಲಿ ನಾನು ಪಿಯುಸಿಗೆ ಸೇರಲು ತುಮಕೂರಿಗೆ ಬಂದಾಗ 'ಸಮಾಜವಾದಿ ಅಧ್ಯಯನ ಕೇಂದ್ರ'ದ ಸಂಪರ್ಕಕ್ಕೆ ಬಂದೆ. ಈ ಸಮಾಜವಾದಿ ಅಧ್ಯಯನ ಕೇಂದ್ರವನ್ನು 1979ರ ಸುಮಾರಿನಲ್ಲಿರಬಹುದು, ನನ್ನ ಹಿರಿಯಣ್ಣ ಜಿ. ಶ್ರೀನಿವಾಸ್ ಕುಮಾರ್ ಮತ್ತು ಅವನ ಗೆಳೆಯರಾದ ಎನ್.ಜಿ. ರಾಮಚಂದ್ರ, ಯರಗುಂಟೆ ನಟರಾಜಪ್ಪ, ಈ ಮೂವರು, ಇವರ ಚರ್ಚೆಗಳಿಗೆ, ಚಟುವಟಿಕೆಗಳಿಗೆ ವೇದಿಕೆಯಾಗಿ ಪ್ರಾರಂಭಿಸಿದ್ದರು. ಹಾಸ್ಟೆಲ್ಲಿನಲ್ಲಿ ನಾನು ಮತ್ತು ಅರುಂಧತಿ ರೂಂ ಮೇಟ್ಸ್. ಅರುಂಧತಿ ಕ್ಲಾಸ್‌ಮೇಟ್ಸ್ ರಂಗಸ್ವಾಮಿ, ಬಸವರಾಜು, ವೈ.ಕೆ. ಬಾಲಕೃಷ್ಣ, ಮಾರುತಿ ಪ್ರಸಾದ್. ಎರಡನೇ ಪಿ.ಯು.ಸಿ.ಯಲ್ಲಿ ಇದ್ದ ಇವರು ಈ ಮೊದಲೇ 'ಸಮಾಜವಾದಿ ಅಧ್ಯಯನ ಕೇಂದ್ರ'ದ ಸಂಪರ್ಕದಲ್ಲಿದ್ದರು. ಈ ಸಮಾಜವಾದಿ ಅಧ್ಯಯನ ಕೇಂದ್ರದಲ್ಲಿ ಪುಟ್ಟದೊಂದು ಲೈಬ್ರರಿ ಇತ್ತು. ನಮಗೆ ಬೇಕಾದ ಪುಸ್ತಕ ಪಡೆದು ಓದುವ ಸ್ವಾತಂತ್ರ್ಯ ಅಲ್ಲಿ ನಮಗಿತ್ತು. ಸಾಕ್ಷಿ, ರುಜುವಾತು, ಪಂಚಮ, ಶೂದ್ರ, ಸಂಕ್ರಮಣ ಹೀಗೆ ಹಲವಾರು ಹೊಸ ಹಳೆಯ ನಿಯತಕಾಲಿಕಗಳ ಪರಿಚಯ ನಮಗಾಯ್ತು.

ಇಷ್ಟೊತ್ತಿಗೆ (1982ರ ಹೊತ್ತಿಗೆ) ಜಿ. ಶ್ರೀನಿವಾಸ್ ಕುಮಾರ್, ರಾಮಚಂದ್ರ ಮತ್ತು ನಟರಾಜಪ್ಪ ರೈತ ಚಳುವಳಿಯಲ್ಲಿ ತೊಡಗಿಸಿಕೊಂಡು ಹಳ್ಳಿ ಹಳ್ಳಿಗಳಲ್ಲಿ ಸಂಚರಿಸುತ್ತಿದ್ದರು. ಹೆಚ್.ಎಸ್. ಶ್ರೀನಿವಾಸನ್ ಲೈಬ್ರರಿ ಉಸ್ತುವಾರಿ ನೋಡುತ್ತಿದ್ದ ನೆನಪು. ಅವರೂ ನಮ್ಮ ಹಾಗೆ ವಿದ್ಯಾರ್ಥಿ. ಎಲ್ಲರಿಗೂ ಲಂಕೇಶ್ ಪತ್ರಿಕೆ ಓದುವ ಹುಚ್ಚು. ಒಂದೊಂದು ವಾರ ಒಬ್ಬೊಬ್ಬರು ಲಂಕೇಶ್ ಪತ್ರಿಕೆ ಕೊಂಡು ತರುವುದು, ಅದನ್ನು ಎಲ್ಲರೂ ಓದುವುದು ಹೀಗೆ ಪುಟ್ಟದೊಂದು ಗುಂಪು ಇತ್ತು. ಆನಂತರ, ರೈತ ವಿದ್ಯಾರ್ಥಿ ಒಕ್ಕೂಟ ಶುರುವಾಯ್ತು. ಕುಚ್ಚಂಗಿ ಪ್ರಸನ್ನ, ಕಲ್ಪನ, ಶ್ರೀದೇವಿ, ನಿರ್ಮಲ, ಲತ, ಲಕ್ಷ್ಮೀ, ಹೆಚ್.ವಿ. ವೆಂಕಟಾಚಲ ಬಂದ್ರು.

1990 ರಲ್ಲಿ ಹೆಚ್.ವಿ. ಮಂಜುನಾಥ್ ನೇತೃತ್ವದಲ್ಲಿ ಸಮತಾ ವಿದ್ಯಾರ್ಥಿ ಒಕ್ಕೂಟ ಆಯ್ತು. ಕಾಳಿದಾಸ ಕಾಲೇಜಿನಲ್ಲಿ ಎರಡು ದಿನಗಳ ಅಧ್ಯಯನ ಶಿಬಿರವನ್ನು

ಮೀಸಲಾತಿ, ಮಂಡಲ್ ವರದಿ ಬಗ್ಗೆ ಹಮ್ಮಿಕೊಳ್ಳಲಾಗಿತ್ತು. ಕಿಷನ್‌ಜೀ, ಪ್ರೊ॥ ರವಿವರ್ಮ ಕುಮಾರ್, ಅನುಸೂಯಮ್ಮ, ಡಿ.ಎಸ್. ನಾಗಭೂಷಣ ಬಂದಿದ್ರು, ಸವಿತಾರವರು ಸಹ ಬಂದ ನೆನಪು. ಮತ್ತೆ ಕೆಲವು ತಿಂಗಳುಗಳ ಅಂತರದಲ್ಲಿ ಅದೇ ಕಾಳಿದಾಸ ಕಾಲೇಜಿನಲ್ಲಿ ಮತ್ತೊಂದು ಅಧ್ಯಯನ ಶಿಬಿರ ನಡೆಯಿತು. ಸಿದ್ದರಾಮಯ್ಯ (ಆಗ ಚುನಾವಣೆಯಲ್ಲಿ ಸೋತಿದ್ರು), ಎ.ಕೆ. ಸುಬ್ಬಯ್ಯ, ರಾಮದಾಸ್, ಮಂಗಳೂರು ವಿಜಯ, ಬಂದಿದ್ರು, ಮೀಸಲಾತಿ/ಕೋಮುವಾದದ ಬಗ್ಗೆ ಚರ್ಚೆಗಳಾದವು. ಅದಾದ ಒಂದೆರಡು ವರ್ಷಗಳ ಅಂತರದಲ್ಲಿ ಗಂಗಸಂದ್ರದಲ್ಲಿ ಅಧ್ಯಯನ ಶಿಬಿರ ನಡೆಯಿತು. ಹೆಚ್. ವಿ. ಮಂಜುನಾಥ್ ಸಂಪಾದಕತ್ವದಲ್ಲಿ 'ಸ್ಫೂರ್ತಿ' ಎಂಬ ಕೈಬರಹದ ಪತ್ರಿಕೆ ಬರ್‍ತಾ ಇತ್ತು. ಹೆಚ್. ವಿ. ಮಂಜುನಾಥ್, ವಿಜಯ, ಚಿದಾನಂದ, ರವಿ, ಮನಮೋಹನ್, ಜಗದೀಶ್, ರಂಗಪ್ಪ, ಜಯಣ್ಣ, ಲೋಕೇಶ್, ಮಲ್ಲಿಕಾರ್ಜುನ್ ಹೊಸಪಾಳ್ಯ, ತಿಪ್ಪೇಸ್ವಾಮಿ, ಕೆಂಚಪ್ಪ, ಗೀತ, ಹೇಮಲತ, ವಿರುಪಾಕ್ಷ, ರಂಗಪ್ಪ, ರಮೇಶ ಇವರೆಲ್ಲಾ ಸೇರಿ ಗುಂಪು ಇನ್ನೂ ವಿಸ್ತಾರವಾಯ್ತು.

1988ರಿಂದ ಕೆ.ಎಂ. ಶಂಕರಪ್ಪನವರು ನಮ್ಮ ಗುಂಪಿಗೆ ಹತ್ತಿರವಾದ್ರು, ಬುದ್ಧನ ಬಗ್ಗೆ ತಿಳಿಸುತ್ತಿದ್ದರು. ಈ ಹಿನ್ನಲೆಯಲ್ಲಿ 1993ರಲ್ಲಿ 'ಬೋಧಿ ಮಂಡಲ' ರಚಿಸಿಕೊಂಡೆವು. ಇದನ್ನು ಸಿದ್ಧಾರ್ಥ ವಿದ್ಯಾಸಂಸ್ಥೆಯ ಹೆಚ್. ಎಂ. ಗಂಗಾಧರಯ್ಯನವರು ಉದ್ಘಾಟಿಸಿದ್ದರು. ಆನಂತರ 1994ರಲ್ಲಿ ಯುವ ಶಕ್ತಿಗಾಗಿ ಸಮತಾ ಸಂಘಟನೆ ಶುರುವ್ಹಾಯ್ತು. ಇದರ ಉದ್ಘಾಟನೆಯನ್ನು ಆಗಿನ ಹಣಕಾಸು ಮಂತ್ರಿ ಸಿದ್ದರಾಮಯ್ಯನವರು ಮಾಡಿದ್ದರು. ಇದರಡಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡೆವು. ಕಿಷನ್‌ಜೀಯವರನ್ನು ಕರೆಯಿಸಿ ಜಾಗತೀಕರಣದ ಪರಿಣಾಮಗಳ ಬಗ್ಗೆ ವಿಚಾರ ಸಂಕಿರಣ ನಡೆಸಿದ್ದು, ಉಲ್ಲೇಖಾರ್ಹವಾದ್ದು.

ಆಮೇಲೆ ಅಂತರ್ಜಾತಿ ವಿವಾಹವಾದವರ ಒಲವಿನ ವೇದಿಕೆ 'ಮಾನವ ಮಂಟಪ'ದ ಜಿಲ್ಲಾ ಶಾಖೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡೆವು. ತಾರಾ, ಕೆ.ಪಿ.ನಟರಾಜು ಹತ್ತಿರವಾದ್ರು, ಶೈಲಾ, ಎನ್.ಕೆ. ಹನುಮಂತಯ್ಯ ಪರಿಚಯವಾದ್ರು, ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮುಂದೆ ಅಂತರ್ಜಾತಿ ವಿವಾಹಿತರ ಮಕ್ಕಳಿಗೆ ಮೀಸಲಾತಿ ಕೋರಿ ನಮ್ಮ ಅಹವಾಲನ್ನು ಸಮರ್ಥವಾಗಿ ಮಂಡಿಸಿದೆವು.

ಸ್ವಲ್ಪ ದಿನಗಳ ಕಾಲ ಪ್ರಗತಿಪರ ಸಂಘಟನೆಗಳು ಚಳುವಳಿಗಳು ಸ್ಥಗಿತವಾದವೇನೂ ಎಂಬಂತಹ ಕಾಲ. ಸಮಾಜವಾದಿಗಳ ಹಣೆ ಬರಹ ಇಷ್ಟೆ ಎಂದುಕೊಳ್ಳುವ ಹೊತ್ತಿಗೆ, ಉದ್ಯೋಗದ ನಿಮಿತ್ತ ವರ್ಗವಾಗಿ ಚಾಮರಾಜನಗರಕ್ಕೆ ಹೋದ ಜಿ. ಶ್ರೀನಿವಾಸ್ ಕುಮಾರ್ ಅಲ್ಲೆ ಯುವಕರ ಪಡೆಯೊಂದನ್ನು ರೂಪಿಸಿದರು. ಕಿಷನ್‌ಜೀ, ಪ್ರೊ॥ ರವಿವರ್ಮ ಕುಮಾರ್ ಅಲ್ಲಿಗೆ ಹೋಗಿ ಬಂದರು.

ಹಲವಾರು ಮೀಟಿಂಗ್‌ಗಳು ನಡೆದು ನೆಲಸಿರಿ ಟ್ರಸ್ಟ್ (ರಿ) ಶುರುವಾಯ್ತು. ಅಪೂರ್ವ ಡಿ ಸಿಲ್ವ, ಮಹೇಶ ಹರವೆ, ರಾಜೇಶ್, ರವಿ, ಉಮೇಶ್, ಗುಂಪಿಗೆ ಪರಿಚಯವಾದ್ರು, ಬೆಳ್ಳಿ, ಅಖಿಲಾ ಗುಂಪಿಗೆ ಹತ್ತಿರವಾದ್ರು, ಗಂಗಾಧರ್

ಬೀಚನಹಳ್ಳಿ, ರಂಗಪ್ಪ, ನಾಗಾರ್ಜುನ ಸಾಗ್ಗೆರೆ, ತ್ರಿವೇಣಿ, ಶೋಭಾ, ಶಾಂತಮೂರ್ತಿ, ಕೆ.ಗೋವಿಂದಯ್ಯ ಗುಂಪಿನವರೇ ಆದರು. ಎರಡು ಬಾರಿ "ಮಕ್ಕಳ ಕುವೆಂಪು" ಎಂಬ ಕಾರ್ಯಕ್ರಮ ಹಮ್ಮಿಕೊಂಡು ಕುವೆಂಪುರವರ ಆಯ್ದ ಸಾಹಿತ್ಯವನ್ನು ಶಾಲಾ ಮಕ್ಕಳಿಗೆ ತಲುಪಿಸಿ, ಪ್ರತಿಕ್ರಿಯೆಗಳನ್ನು ಆಹ್ವಾನಿಸಿ, ಉತ್ತಮ ಸ್ಪಂದನಗಳನ್ನು ಗುರ್ತಿಸಿ ಬಹುಮಾನ ನೀಡಲಾಯ್ತು. ಕಾಲೇಜು ವಿದ್ಯಾರ್ಥಿಗಳಿಂದ ತೇಜಸ್ವಿ, ಲಂಕೇಶ್‌ರವರ ಆಯ್ದ ಬರಹಗಳ ಬಗ್ಗೆ ಲೇಖನಗಳನ್ನು ಆಹ್ವಾನಿಸಿ ಪ್ರಶಸ್ತಿ, ಬಹುಮಾನ ನೀಡಲಾಯ್ತು.

ಪ್ರೊ॥ ರವಿವರ್ಮ ಕುಮಾರ್‌ರವರು ಸ್ಥಾಪಕ ಟ್ರಸ್ಟಿಯಾಗಿರುವ ಸಮತಾ ವಿದ್ಯಾಲಯವು ಶಿರಾ ತಾ॥ ಗುಮ್ಮನಹಳ್ಳಿಯಲ್ಲಿ ದಿ: 9-5-2009 ರಂದು ಉದ್ಘಾಟನೆಯಾಗಿದ್ದು, ಅಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದೇವೆ.ಸಮತಾ ವಿದ್ಯಾಲಯದಲ್ಲಿ 2009ರಿಂದ ಈವರೆಗೆ, ಪ್ರತಿ ಬೇಸಿಗೆಯಲ್ಲಿ 10 ದಿನಗಳ ಕಾಲ 'ಕಲರವ ಚಿಣ್ಣರ ಮೇಳ' ಹೆಸರಿನಡಿ ಮೂರು ಬೇಸಿಗೆ ಶಿಬಿರ (Residential summer camp)ಗಳನ್ನು ನಡೆಸಿದ್ದು, 2011 ಆಗಸ್ಟ್ 15ರಂದು ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂರವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ್ದು, ವಿದ್ಯಾಲಯದ ಕಾರ್ಯಕ್ರಮಗಳಿಗೆ ಹೊಸ ಆಯಾಮವೊಂದನ್ನು ಸೃಷ್ಟಿಸಿದೆ. ರಾಜ್ಯ ಮತ್ತು ರಾಷ್ಟ್ರಮಟ್ಟದ ಸಮಾಜವಾದಿಗಳು, ಸಮಾಜವಾದಿ ಚಿಂತಕರು, ರೈತ ಚಳುವಳಿ, ದಲಿತ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು ಅಲ್ಲಿಗೆ ಭೇಟಿ ನೀಡುತ್ತಿದ್ದು, ನಮ್ಮ ಅರಿವು ವಿಸ್ತಾರವಾಗುತ್ತಿದೆ.

ಇದುವರೆಗೂ ನಾನು, ನಾವು ಸಾಗಿ ಬಂದ ಸಂಘಟನೆಗಳ ಬಗ್ಗೆ ತಿಳಿಸಿದೆ. ಈಗ ಈ ಹಾದಿಯಲ್ಲಿ ನಮ್ಮ ಒಡನಾಟ ಹೇಗಿತ್ತು, ಹೇಗಿದೆ ? ಎಂಬ ಬಗ್ಗೆ ತಿಳಿಸುವೆ. ನಾವುಗಳು ವಿದ್ಯಾರ್ಥಿಗಳಾಗಿದ್ದಾಗ 'ಸಮಾಜವಾದಿ ಅಧ್ಯಯನ ಕೇಂದ್ರ'ದ ಸಂಪರ್ಕಕ್ಕೆ ಬಂದಾಗ ರೈತ ಚಳುವಳಿ, ದಲಿತ ಚಳುವಳಿ ಸಕ್ರಿಯವಾಗಿದ್ದವು. 'ಲಂಕೇಶ ಪತ್ರಿಕೆ' ಬರ್ತಾ ಇತ್ತು. ಎಲ್ಲದರ ಬಗ್ಗೆ, ಎಲ್ಲರ ಬಗ್ಗೆ ಕುತೂಹಲ ನಮಗಿತ್ತು. ಈಗಿನ ಹಾಗೆ ಟಿ.ವಿ., ಕಂಪ್ಯೂಟರ್, ಮೊಬೈಲ್ ಇರಲ್ಲಿಲ್ಲ. ಜ್ಞಾನದ ಕಿಂಡಿಯಾಗಿ, ಪುಸ್ತಕಗಳು, ಚಳುವಳಿಗಳು, ಪ್ರಗತಿಪರ ಸಂಘಟನೆಗಳು ಹಮ್ಮಿಕೊಳ್ಳುತ್ತಿದ್ದ ಸಭೆಗಳು, ಚರ್ಚೆಗಳು, ಅಧ್ಯಯನ ಶಿಬಿರಗಳು, ವಿಚಾರ ಸಂಕಿರಣಗಳು ಇದ್ದವು. ಸಹಜವಾಗಿ ಹುಡುಗ - ಹುಡುಗಿಯರ ನಡುವೆ ಪ್ರೇಮ ಹುಟ್ಟುವಂತ ವಾತಾವರಣ ಇತ್ತು. ಜಾತಿ, ವರ್ಗ, ವರ್ಣ, ಹೀಗೆ ಎಲ್ಲ ತಾರತಮ್ಯಗಳ ವಿರುದ್ಧ ಹೋರಾಡುವ ಕೆಚ್ಚು ನಮ್ಮಲ್ಲಿತ್ತು. ನಾವು ನಮ್ಮ ಪುಟ್ಟ ಪುಟ್ಟ ಬೆರಳುಗಳಲ್ಲಿ ಸಾಧ್ಯವಾದಷ್ಟೂ ಗಾಂಧಿ, ಅಂಬೇಡ್ಕರ್, ಲೋಹಿಯಾರವರ ಚಿಂತನೆಗಳನ್ನು ಎಟುಕಿಸಿಕೊಂಡಿದ್ದೆವು.

ನಮ್ಮ ಸಮಾಜವಾದಿ ಚಟುವಟಿಕೆಗಳು ನಮ್ಮಲ್ಲಿ ಜವಾಬ್ದಾರಿ ಅರಿವು ಮೂಡಿಸಿದ್ದವು. ಹಾಗಾಗಿ, ನಾವುಗಳು ಮದುವೆಯಾಗುವ ತೀರ್ಮಾನ ತೆಗೆದುಕೊಳ್ಳುವಾಗ, 'ಜಾತಿ' ನಮಗೆ ಅಡ್ಡಗೋಡೆ ಎನಿಸಲಿಲ್ಲ. 1987 ರಿಂದ ಈವರೆವಿಗೂ, ನಮ್ಮ ಗುಂಪಿನಲ್ಲಿ ಹಲವು ಒಲವಿನ ವಿವಾಹಗಳಾಗಿವೆ. ಲತಾ-ಶ್ರೀನಿವಾಸ್‌ಕುಮಾರ್, ಕಲ್ಪನಾ-ಕುಚ್ಚಂಗಿಪ್ರಸನ್ನ, ಮಲ್ಲಿಕಾ-ಬಸವರಾಜು, ಲಕ್ಷ್ಮೀ-

ಮಾರುತಿಪ್ರಸಾದ್, ಸಹನಾ–ನಟರಾಜಪ್ಪ, ಶ್ರೀದೇವಿ–ರಾಮಚಂದ್ರ, ಅರುಂಧತಿ–ರಂಗಸ್ವಾಮಿ, ಪುಷ್ಪ–ವೆಂಕಟೇಶ್, ತಾರಾ–ನಟರಾಜ್, ಚೇತನಾ–ವೈ.ಕೆ.ಬಾಲಕೃಷ್ಣ, ನಿರ್ಮಲ–ಉಮಾಪತಿ, ವಿಜಯ–ಮಲ್ಲಿಕಾರ್ಜುನಹೊಸಪಾಳ್ಯ, ಕಸ್ತೂರಿ–ಜಗದೀಶ್, ಮಂಜುಳಾ–ಹೆಚ್.ವಿ.ಮಂಜುನಾಥ್, ತ್ರಿವೇಣಿ– ನಾಗಾರ್ಜುನ ಸಾಗ್ಗೆರೆ, ಶೋಭಾ–ಶಾಂತಮೂರ್ತಿ ಕರಿಯಮ್ಮ–ಹೆಚ್.ಟಿ.ರವಿಕುಮಾರ್, ವಿರೂಪಾಕ್ಷ ದಂಪತಿಗಳು ಇದ್ದು, ಇವೆಲ್ಲವೂ ಒಲವಿನ ವಿವಾಹಗಳೇ. ಇದರಲ್ಲಿ ಎರಡು ಜೋಡಿಗಳನ್ನು ಹೊರತು ಪಡಿಸಿ, ಇನ್ನೆಲ್ಲವೂ ಅಂತರ್ಜಾತಿ ವಿವಾಹಗಳೇ.

ಜಾತಿ ಒಳಗಿರಲಿ, ಜಾತಿ ಹೊರಗಿರಲಿ, ಒಲವಿನ ವಿವಾಹಗಳೆಂದರೆ, ಮನೆಯವರ ಬೆಂಬಲ ಅಷ್ಟಕಷ್ಟೆ. ಒಲವಿನ ವಿವಾಹಗಳಾದ ನಮ್ಮ ಬೆಂಬಲಕ್ಕೆ ಇದ್ದವರಲ್ಲಿ ರೈತ ಚಳುವಳಿಯಲ್ಲಿ ಇದ್ದವರೂ ಇದ್ದರು. ದಲಿತ ಚಳುವಳಿಯಲ್ಲಿ ಇದ್ದವರೂ ಇದ್ದರು. ಪ್ರಗತಿಪರ ಸಂಘಟನೆಗಳಲ್ಲಿ ಇದ್ದವರೂ ಇದ್ದರು. ಜಾತಿಗೆಟ್ಟ ನಮ್ಮ ಜೊತೆ ಪ್ರೀತಿಯಿಂದ ನಿಂತ ರಕ್ತ ಸಂಬಂಧಿಕರು ಕೆಲವರಿದ್ದರು.

1989ರಲ್ಲಿ ಕುವೆಂಪುರವರನ್ನು ನೋಡಲು ನಾವೆಲ್ಲ ಮೈಸೂರಿಗೆ ಹೋಗಿ ಬಂದೆವು. ಕುವೆಂಪುರವರನ್ನು ನೋಡಿದ್ದು, ಮಾತನಾಡಿಸಿದ್ದು, ನಮ್ಮ ಜೀವನದ ಧನ್ಯತೆಯ ಕ್ಷಣಗಳಲ್ಲೊಂದು. 1989ರಲ್ಲಿ ನಾನು ಬಸುರಿ. ನಮ್ಮ ವಿದ್ಯಾರ್ಥಿ ಒಕ್ಕೂಟದ ಹುಡುಗರೇ ಸೇರಿ ಸೀಮಂತ ಮಾಡಿಸಿದ್ರು. ಆಮೇಲೆ ಕಲ್ಪನ, ಅರುಂಧತಿ, ಪರ್ವಿನ್‌ರವರಿಗೂ ಸೀಮಂತ ಕಾರ್ಯಕ್ರಮ ಮಾಡಿದ್ದೆವು.

ಮೊದಲೇ ಹೇಳಿದ ಹಾಗೆ ಕೆ.ಎಂ. ಶಂಕರಪ್ಪನವರು ಬಂದಾಗಲೆಲ್ಲ ಬುದ್ಧನ ಬಗ್ಗೆ ತಿಳಿಸುತ್ತಿದ್ದರು. ಕೆ.ಬಿ.ರವರ ಮನೆಯಲ್ಲಿ ಪ್ರತಿ ವರ್ಷ ಆಚರಿಸುತ್ತಿದ್ದ (ಈಗಲೂ ಆಚರಿಸುತ್ತಿರುವ) ಬುದ್ಧ ಪೂರ್ಣಿಮೆಗೆ ಹೋಗ್ತಿದ್ದೆವು. ಅದುವರೆಗೂ, ನಾವು ಗಾಂಧಿ, ಅಂಬೇಡ್ಕರ್, ಲೋಹಿಯಾ ಬಗ್ಗೆ ತಿಳಿದುಕೊಳ್ಳುತ್ತಿದ್ದವರು ಈ ಸಾಲಿಗೆ ಬುದ್ಧನನ್ನು ಸೇರಿಸಿಕೊಂಡೆವು. ನಾವ್ಯಾರು ಅಧಿಕೃತವಾಗಿ ಬೌದ್ಧ ಧರ್ಮವನ್ನು ಸ್ವೀಕರಿಸಿಲ್ಲ. ಅದೊಂದು ಜೀವನ ವಿಧಾನ ಎಂದು ನಂಬಿರುವವರು. ಆದಾಗ್ಯೂ, ನಮ್ಮ ಮಕ್ಕಳಿಗೆ ಶಾಲೆಯಲ್ಲಿ ಜಾತಿ/ಧರ್ಮದ ಕಾಲಂ ಬರೆಸುವಾಗ ಕೆಲವರು "ಬೌದ್ಧರು" ಎಂದು ದಾಖಲಿಸಿದ್ದೇವೆ.

ಕೆಲವೊಮ್ಮೆ ಹುಣ್ಣಿಮೆಗಳಲ್ಲಿ ಮಕ್ಕಳು ಮರಿ ಸಮೇತ ಸಿದ್ಧರ ಬೆಟ್ಟಕ್ಕೆ ಹೋಗಿ ಟಿ.ಬಿ.ಯಲ್ಲಿ ಉಳಿಯುತ್ತಿದ್ದೆವು. ಊಟವಾದ ಮೇಲೆ, ಒಂದು ದೊಡ್ಡ ರೂಂನಲ್ಲಿ ಹೆಂಗಸರು, ಮಕ್ಕಳು (ಮಕ್ಕಳೆಲ್ಲಾ ಆಗ ಸಣ್ಣವು). ಹೊರಗಡೆ ವರಾಂಡದಲ್ಲಿ ಗಂಡಸರು ಸೇರಿದರೆ ಮುಗಿಯಿತು. ಮಾತು, ಮಾತು. ರಾತ್ರಿ ಇಡೀ ಮಾತು, ಚರ್ಚೆ, ಜಗಳ, ವಾದ ವಿವಾದ. ಬೆಳಿಗ್ಗೆ ಬೇಗನೆ ಸಿದ್ಧರ ಬೆಟ್ಟ ಹತ್ತಿ ಇಳಿದು ಮಧ್ಯಾಹ್ನದ ಹೊತ್ತಿಗೆ ತುಮಕೂರಿಗೆ ವಾಪಸ್ಸಾಗುತ್ತಿದ್ದೆವು. 2000ದ ಕೊನೆಯ ಹುಣ್ಣಿಮೆಯ ರಾತ್ರಿ ನಾವು ದೇವರಾಯನ ದುರ್ಗದ ತುದಿಯಲ್ಲಿರುವ ಟಿ.ಬಿ.ನಲ್ಲಿ ಉಳಿದಿದ್ದೆವು. ಒಂದು ವರ್ಷ ಕೆಮ್ಮಣ್ಣುಗುಂಡಿ, ಬಾಬಾ ಬುಡನ್‌ಗಿರಿ. ಇನ್ನೊಂದು ವರ್ಷ ಹೊನ್ನಾವರದಿಂದ ಕಾರವಾರದವರೆಗೆ, ಮತ್ತೊಂದು ಸಲ ಶ್ರವಣ ಬೆಳಗೊಳ, ಗೊರೂರು ಡ್ಯಾಂಗೆ ಪ್ರವಾಸ ಹೋಗಿ ಬಂದೆವು. ಒಂದಷ್ಟು ವರ್ಷ

ಪ್ರತಿ ಹುಣ್ಣಿಮೆಗಳಲ್ಲಿ ತುಮಕೂರಿನ ಎಂ.ಜಿ. ಸ್ಟೇಡಿಯಂನಲ್ಲಿ ಸಂಜೆ 6.30/7.00ಕ್ಕೆ ಹೋಗಿ, ನಮ್ಮ ನಮ್ಮ ಮನೆಗಳಿಂದ ತಗೊಂಡೋದ ತಿಂಡಿ ಹಂಚಿಕೊಂಡು ತಿಂದು ಗಂಭೀರ ಚರ್ಚೆಗಳನ್ನು ನಡೆಸುತ್ತಿದ್ದೆವು. ಕೆಲವೊಮ್ಮೆ ಹರಟೆ ಹೊಡೆದು ಬರುತ್ತಿದ್ದೆವು.

ಎಲ್ಲ ಸಭೆ ಸಮಾರಂಭಗಳಿಗೆ, ನಾವು ನಮ್ಮ ಸಣ್ಣ ಸಣ್ಣ ಮಕ್ಕಳನ್ನು ಎತ್ತಿಕೊಂಡು ಹೋಗುತ್ತಿದ್ದೆವು. ನಮ್ಮ ಗುಂಪಿನ ಎಲ್ಲರೂ, ವಿಶೇಷವಾಗಿ ವಿದ್ಯಾರ್ಥಿ ಒಕ್ಕೂಟದ ಹುಡುಗರು ನಮ್ಮ ಪುಟಾಣಿಗಳಿಗೆ ಅಪಾರವಾದ ಪ್ರೀತಿ ತೋರಿಸುತ್ತಿದ್ದರು. ಹಾಗಾಗಿ ನಮ್ಮ ಮಕ್ಕಳಿಗಾಗಲಿ, ನಮಗಾಗಲಿ ಒಂಟಿತನ, ಅನಾಥಪ್ರಜ್ಞೆ ಕಾಡಲಿಲ್ಲ. ಸಾಹಿತ್ಯ, ಚಳುವಳಿಗಳ ಬಗ್ಗೆ ನಾವು ನಡೆಸುತ್ತಿದ್ದ ಚರ್ಚೆಗಳಲ್ಲಿ ನಮ್ಮ ಮಕ್ಕಳು ಪಾಲ್ಗೊಳ್ಳುವುದರಿಂದ ಪ್ರಗತಿಪರ ಸಾಹಿತಿಗಳು, ಚಳುವಳಿಗಾರರು, ನಮ್ಮ ತರಹದ ಚಿಂತನೆಗಳಿರುವವರೆಲ್ಲರೂ ನಮ್ಮವರೇ. ತುಮಕೂರಿನ ಹೊರಗೆ ಇದ್ರೂ. ನೇರವಾಗಿ ನಮಗೆ ಗೊತ್ತಿರದೇ ಇದ್ರೂ, ಅವರೆಲ್ಲಾ ನಮ್ಮವರೇ ಎಂಬ broad vision ನಮ್ಮ ಮಕ್ಕಳಲ್ಲಿ ಬಂತು. ಹಾಗಾಗೆ ರಾವ ಎದಾಸ್, ತೇಜಸ್ವಿ, ಲಂಕೇಶ ಎಲ್ಲ ನಮ್ಮವರೇ; ನಮ್ಮ ಗುಂಪಿನವರೇ ಎಂದು ನಮಗನ್ನಿಸುವುದು.

ನಮಗೆ ಇಷ್ಟವಾದ ಸಾಹಿತ್ಯ, ಸಿನಿಮಾ, ಸಂಗೀತ, ಸಂಸ್ಕೃತಿ, ಕೃಷಿ ವಿಚಾರ, ಅಡುಗೆಯ ರೆಸಿಪಿಗಳು, ಕಷ್ಟ–ಸುಖ, ನೋವು–ನಲಿವು ಹೀಗೆ ಎಲ್ಲ ವಿಷಯಗಳನ್ನು ನಾವು ಗೆಳತಿಯರು ಹಂಚಿಕೊಳ್ತೀವಿ, ಹಗುರಾಗ್ತೀವಿ. ಈಗ ಎಲ್ಲರೂ ಬ್ಯುಸಿ, ಮಕ್ಕಳು ದೊಡ್ಡವರಾಗ್ತಾ ಇದ್ದಾವೆ. ಅವುಗಳ ರಜೆ, ಪರೀಕ್ಷೆಗಳ ವೇಳಾಪಟ್ಟಿ ಬೇರೆ ಬೇರೆ ಇರುತ್ತೆ. ಆದಾಗ್ಯೂ, ಎಲ್ಲರಿಗೂ ಅನುಕೂಲವಾಗುವಂತ ದಿನಗಳಲ್ಲಿ ಒಂದು ದಿನದ ಮಟ್ಟಿಗಾಗಲೀ, ಕೊನೇ ಪಕ್ಷ 'ಬುದ್ಧ ಪೂರ್ಣಿಮೆ'ಯಂದು ಒಂದು ಕಡೆ ಸೇರಿ ಮಾತಾಡ್ತೀವಿ, ಹರಟ್ತೀವಿ. ನಮ್ಮ ಗುಂಪಿನ ಒಡನಾಟದಿಂದ ನಮಗೆ ಸಿಗುವ ಜ್ಞಾನ, ನೈತಿಕ ಸ್ಥೈರ್ಯ, ಆತ್ಮವಿಶ್ವಾಸ ಅಪಾರ.

ನಮ್ಮ ಗುಂಪಿನಲ್ಲಿ ವೈದ್ಯರಿದ್ದಾರೆ, ವಕೀಲರಿದ್ದಾರೆ, ಅಧಿಕಾರಿಗಳಿದ್ದಾರೆ, ಶಿಕ್ಷಕರಿದ್ದಾರೆ, ಗುಮಾಸ್ತರು, ಗೃಹಿಣಿಯರು ಇದ್ದಾರೆ. ಸರ್ಕಾರಿ ನೌಕರಿಯಲ್ಲಿರುವವರು ಇದ್ದಾರೆ, ಸ್ವಂತ ಉದ್ಯೋಗದಲಿರುವವರು ಇದ್ದಾರೆ. ಎಲ್ಲರೂ ಅವರವರ ಕ್ಷೇತ್ರಗಳಲ್ಲಿ ದಕ್ಷತೆಯಿಂದ ಕಾರ್ಯ ನಿರ್ವಹಿಸುವವರೇ ಆಗಿದ್ದಾರೆ. ಮಕ್ಕಳು ಚೆನ್ನಾಗಿ ಓದ್ತಿದ್ದಾರೆ. ನಮ್ಮ ನಮ್ಮ ವಿದ್ಯೆ, ಉದ್ಯೋಗ, ಅಂತಸ್ತು ಯಾವುದೂ ನಮ್ಮ ನಡುವೆ ಗೋಡೆ ಎಬ್ಬಿಸಿಲ್ಲ. ನಾವು ನಂಬಿಕೊಂಡ ವಿಚಾರ, ಸಿದ್ದಾಂತ, ಮುಖ್ಯವಾಗಿ ಸ್ನೇಹ ನಮ್ಮೆಲ್ಲರನ್ನೂ ಒಟ್ಟುಗೂಡಿಸಿದೆ. ಈ ಕ್ಷಣ, ಈ ಲೇಖನ ಓದುತ್ತಿರುವ ನೀವು ಕೂಡಾ ನಮ್ಮ ಗುಂಪಿನವರೇ ಅನಿಸುತ್ತಿದೆ.

–ಜಿ. ಮಲ್ಲಿಕಾ ಬಸವರಾಜು


(ನವೆಂಬರ್, 2011)



ನಿಜ, ಈ ಸಮಾಜವಾದಿಗಳಲ್ಲಿ ಹಲವ
ಮುಖ್ಯವಾಗಿ ಎರಡನೇ ತಲೆಮಾರಿನವರು–ರಾಜಕೀ
ಭ್ರಷ್ಟತೆಯ ಸುಳಿಗೆ ಸಿಕ್ಕರು. ಅದಕ್ಕೆ ಮತ್ತೆ ಅ
ವೈಯಕ್ತಿಕ ದೌರ್ಬಲ್ಯಗಳಷ್ಟೇ ಸಮಾಜವಾದದ
ತಾತ್ವಿಕ ಸ್ಥೂಲತೆಯಿಂದ ಕಾಪಾಡಲಾಗದ ಅ
ಮೊದಲ ತಲೆಮಾರಿನವರ– ಮೇಲೆ ತಿಳಿಸಿದ ಕಾಂ
ಯಜಮಾನಿಕೆಯ ರಾಜಕೀಯ ಪ್ರಧಾನ ಧಾರ
ದಟ್ಟ ಪ್ರಭಾವದಿಂದಾಗಿಯೋ ಏನೋ– ರಾಜಕೀ
ಅಸಹಾಯಕತೆಯೂ ಕಾರಣವಾಗಿರಬಹುದು. ಇ
ರಿಂದಾಗಿ ಸಮಾಜವಾದ ಮತ್ತು ಸಮಾಜವಾದಿ ಎ
ಎರಡು ಶಬ್ದಗಳೂ ಜನತೆಯ ಮನಸ್ಸಿನಲ್ಲಿ ಅನುಮಾನಾ
ಶಬ್ದಗಳಾದವು. ಆದರೆ ಈ ಅನುಮಾನಾಸ್ಪದತೆಗೆ ಈ ಎರ
ಶಬ್ದಗಳಲ್ಲಿ ಕಾರಣವಿಲ್ಲ ಎಂಬುದನ್ನು ಶೃತಪಡಿ
ಒಂದು ಪ್ರಯತ್ನವಾಗಿ ಈ ಸಂಕಲನವನ್ನು ಸಂಪಾ
ನೀಡುವ ಪ್ರಯತ್ನ ಮಾಡಲಾಗಿದೆ. ಸಮಾಜವಾದ ಎ
ಸಮಾಜವಾದಿ ಎಂಬೀ ಶಬ್ದಗಳ ನಿಜವಾದ ಘನತೆ ಎ
ಗೌರವವಗಳನ್ನು ಎತ್ತಿಹಿಡಿಯುವ, ಅಗತ್ಯವಿದ್ದೆಡೆ ಅ
ವಿಮರ್ಶೆಗೆ ಈಡು ಮಾಡುವಂತಹ ಬರಹಗಳು ಇಲ್ಲಿ

– ಡಿ.ಎಸ್. ನಾಗಭೂ

"ಸಂಪಾದಕರ ಮಾತುಗಳಿ



ಸಮತ ಪ್ರಕಾಶನ, ಚಾಮರಾಜನಗರ

ಬೆಲೆ ₹ 150